ಸಹಸ್ರಾನೀಕಸ್ತತ್ಪುತ್ರಸ್ತತಶ್ಚೈವಾಶ್ವಮೇಧಜಃ ।
ಅಸೀಮಕೃಷ್ಣಸ್ತಸ್ಯಾಪಿ ನೇಮಿಚಕ್ರಸ್ತು ತತ್ಸುತಃ ॥೩೯॥

ಗಜಾಹ್ವಯೇ ಹೃತೇ ನದ್ಯಾ ಕೌಶಾಮ್ಬ್ಯಾಂ ಸಾಧು ವತ್ಸ್ಯತಿ ।
ಉಕ್ತಸ್ತತಶ್ಚಿತ್ರರಥಸ್ತಸ್ಮಾತ್ಕವಿರಥಃ ಸುತಃ ॥೪೦॥

ತಸ್ಮಾಚ್ಚ ವೃಷ್ಟಿಮಾಂಸ್ತಸ್ಯ ಸುಷೇಣೋಽಥ ಮಹೀಪತಿಃ ।
ಸುನೀಥಸ್ತಸ್ಯ ಭವಿತಾ ನೃಚಕ್ಷುರ್ಯತ್ಸುಖೀನಲಃ ॥೪೧॥

ಪರಿಪ್ಲವಃ ಸುತಸ್ತಸ್ಮಾನ್ಮೇಧಾವೀ ಸುನಯಾತ್ಮಜಃ ।
ನೃಪಞ್ಜಯಸ್ತತೋ ದೂರ್ವಸ್ತಿಮಿಸ್ತಸ್ಮಾಜ್ಜನಿಷ್ಯತಿ ॥೪೨॥

ತಿಮೇರ್ಬೃಹದ್ರಥಸ್ತಸ್ಮಾಚ್ಛತಾನೀಕಃ ಸುದಾಸಜಃ ।
ಶತಾನೀಕಾದ್ದುರ್ದಮನಸ್ತಸ್ಯಾಪತ್ಯಂ ವಹೀನರಃ ॥೪೩॥

ದಣ್ಡಪಾಣಿರ್ನಿಮಿಸ್ತಸ್ಯ ಕ್ಷೇಮಕೋ ಭವಿತಾ ನೃಪಃ ।
ಬ್ರಹ್ಮಕ್ಷತ್ರಸ್ಯ ವೈ ಪ್ರೋಕ್ತೋ ವಂಶೋ ದೇವರ್ಷಿಸತ್ಕೃತಃ ॥೪೪॥

ಕ್ಷೇಮಕಂ ಪ್ರಾಪ್ಯ ರಾಜಾನಂ ಸಂಸ್ಥಾಂ ಪ್ರಾಪ್ಸ್ಯತಿ ವೈ ಕಲೌ ।
ಅಥ ಮಾಗಧರಾಜಾನೋ ಭವಿತಾರೋ ವದಾಮಿ ತೇ ॥೪೫॥

ಭವಿತಾ ಸಹದೇವಸ್ಯ ಮಾರ್ಜಾರಿರ್ಯಚ್ಛ್ರುತಶ್ರವಾಃ ।
ತತೋಽಯುತಾಯುತಸ್ಯಾಪಿ ನಿರಮಿತ್ರೋಽಥ ತತ್ಸುತಃ ॥೪೬॥

ಸುನಕ್ಷತ್ರಃ ಸುನಕ್ಷತ್ರಾದ್ಬೃಹತ್ಸೇನೋಽಥ ಕರ್ಮಜಿತ್ ।
ತತಃ ಸೃತಞ್ಜಯಾದ್ವಿಪ್ರಃ ಶುಚಿಸ್ತಸ್ಯ ಭವಿಷ್ಯತಿ ॥೪೭॥

ಕ್ಷೇಮೋಽಥ ಸುವ್ರತಸ್ತಸ್ಮಾದ್ಧರ್ಮಸೂತ್ರಃ ಶಮಸ್ತತಃ ।
ದ್ಯುಮತ್ಸೇನೋಽಥ ಸುಮತಿಃ ಸುಬಲೋ ಜನಿತಾ ತತಃ ॥೪೮॥

ಸುನೀಥಃ ಸತ್ಯಜಿದಥ ವಿಶ್ವಜಿದ್ಯದ್ರಿಪುಞ್ಜಯಃ ।
ಬಾರ್ಹದ್ರಥಾಶ್ಚ ಭೂಪಾಲಾ ಭಾವ್ಯಾಃ ಸಾಹಸ್ರವತ್ಸರಮ್ ॥೪೯॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ನವಮಸ್ಕನ್ಧೇ ದ್ವಾವಿಂಶೋಽಧ್ಯಾಯಃ

ಅಥ ತ್ರಯೋವಿಂಶೋಽಧ್ಯಾಯಃ

ಶ್ರೀಶುಕ ಉವಾಚ :

ಅನೋಃ ಸಭಾನರಶ್ಚಕ್ಷುಃ ಪರೋಕ್ಷಶ್ಚ ತ್ರಯಃ ಸುತಾಃ ।
ಸಭಾನರಾತ್ಕಾಲನರಃ ಸೃಞ್ಜಯಸ್ತತ್ಸುತಸ್ತತಃ ॥೧॥

ಜನಮೇಜಯಸ್ತಸ್ಯ ಪುತ್ರೋ ಮಹಾಶೀಲೋ ಮಹಾಮನಾಃ ।
ಉಶೀನರಸ್ತಿತಿಕ್ಷುಶ್ಚ ಮಹಾಮನಸ ಆತ್ಮಜೌ ॥೨॥

ಶಿಬಿರ್ವನಃ ಶಮಿರ್ದಕ್ಷಶ್ಚತ್ವಾರೋಶೀನರಾತ್ಮಜಾಃ ।
ವೃಷಾದರ್ಭಃ ಸುವೀರಶ್ಚ ಮದ್ರಃ ಕೈಕೇಯ ಆತ್ಮಜಾಃ ॥೩॥

ಶಿಬೇಶ್ಚತ್ವಾರ ಏವಾಸಂಸ್ತಿತಿಕ್ಷೋಶ್ಚ ರುಷದ್ರಥಃ ।
ತತೋ ಹೇಮೋಽಥ ಸುತಪಾ ಬಲಿಃ ಸುತಪಸೋಽಭವತ್ ॥೪॥

ಅಙ್ಗವಙ್ಗಕಲಿಙ್ಗಾದ್ಯಾಃ ಸುಹ್ಮಪುಣ್ಡ್ರಾನ್ಧ್ರಸಂಜ್ಞಿತಾಃ ।
ಜಜ್ಞಿರೇ ದೀರ್ಘತಪಸೋ ಬಲೇಃ ಕ್ಷೇತ್ರೇ ಮಹೀಕ್ಷಿತಃ ॥೫॥

ಚಕ್ರುಃ ಸ್ವನಾಮ್ನಾ ವಿಷಯಾನ್ಷಡಿಮಾನ್ಪ್ರಾಚ್ಯಕಾಂಶ್ಚ ತೇ ।
ಖನಪಾನೋಽಙ್ಗತೋ ಜಜ್ಞೇ ತಸ್ಮಾದ್ದಿವಿರಥಸ್ತತಃ ॥೬॥

ಸುತೋ ಧರ್ಮರಥೋ ಯಸ್ಯ ಜಜ್ಞೇ ಚಿತ್ರರಥೋಽಪ್ರಜಾಃ ।
ರೋಮಪಾದ ಇತಿ ಖ್ಯಾತಸ್ತಸ್ಮೈ ದಶರಥಃ ಸಖಾ ॥೭॥

ಶಾನ್ತಾಂ ಸ್ವಕನ್ಯಾಂ ಪ್ರಾಯಚ್ಛದೃಷ್ಯಶೃಙ್ಗ ಉವಾಹ ತಾಮ್ ।
ದೇವೇಽವರ್ಷತಿ ಯಂ ರಾಮಾ ಆನಿನ್ಯುರ್ಹರಿಣೀಸುತಮ್ ॥೮॥

ನಾಟ್ಯಸಙ್ಗೀತವಾದಿತ್ರೈರ್ವಿಭ್ರಮಾಲಿಙ್ಗನಾರ್ಹಣೈಃ ।
ಸ ತು ರಾಜ್ಞೋಽನಪತ್ಯಸ್ಯ ನಿರೂಪ್ಯೇಷ್ಟಿಂ ಮರುತ್ವತಃ ॥೯॥

ಪ್ರಜಾಮದಾದ್ದಶರಥೋ ಯೇನ ಲೇಭೇಽಪ್ರಜಾಃ ಪ್ರಜಾಃ ।
ಚತುರಙ್ಗೋ ರೋಮಪಾದಾತ್ಪೃಥುಲಾಕ್ಷಸ್ತು ತತ್ಸುತಃ ॥೧೦॥

ಬೃಹದ್ರಥೋ ಬೃಹತ್ಕರ್ಮಾ ಬೃಹದ್ಭಾನುಶ್ಚ ತತ್ಸುತಾಃ ।
ಆದ್ಯಾದ್ಬೃಹನ್ಮನಾಸ್ತಸ್ಮಾಜ್ಜಯದ್ರಥ ಉದಾಹೃತಃ ॥೧೧॥

ವಿಜಯಸ್ತಸ್ಯ ಸಮ್ಭೂತ್ಯಾಂ ತತೋ ಧೃತಿರಜಾಯತ ।
ತತೋ ಧೃತವ್ರತಸ್ತಸ್ಯ ಸತ್ಕರ್ಮಾಧಿರಥಸ್ತತಃ ॥೧೨॥

ಯೋಽಸೌ ಗಙ್ಗಾತಟೇ ಕ್ರೀಡನ್ಮಞ್ಜೂಷಾನ್ತರ್ಗತಂ ಶಿಶುಮ್ ।
ಕುನ್ತ್ಯಾಪವಿದ್ಧಂ ಕಾನೀನಮನಪತ್ಯೋಽಕರೋತ್ಸುತಮ್ ॥೧೩॥

ವೃಷಸೇನಃ ಸುತಸ್ತಸ್ಯ ಕರ್ಣಸ್ಯ ಜಗತೀಪತೇಃ ।
ದ್ರುಹ್ಯೋಶ್ಚ ತನಯೋ ಬಭ್ರುಃ ಸೇತುಸ್ತಸ್ಯಾತ್ಮಜಸ್ತತಃ ॥೧೪॥

ಅರಬ್ಧಸ್ತಸ್ಯ ಗಾನ್ಧಾರಸ್ತಸ್ಯ ಧರ್ಮಸ್ತತೋ ಧೃತಃ ।
ಧೃತಸ್ಯ ದುರ್ಮನಾಸ್ತಸ್ಮಾತ್ಪ್ರಚೇತಾಃ ಪ್ರಾಚೇತಸಂ ಶತಮ್ ॥೧೫॥

ಮ್ಲೇಚ್ಛಾಧಿಪತಯೋಽಭೂವನ್ನುದೀಚೀಂ ದಿಶಮಾಶ್ರಿತಾಃ ।
ತುರ್ವಸೋಶ್ಚ ಸುತೋ ವಹ್ನಿರ್ವಹ್ನೇರ್ಭರ್ಗೋಽಥ ಭಾನುಮಾನ್ ॥

ತ್ರಿಭಾನುಸ್ತತ್ಸುತೋಽಸ್ಯಾಪಿ ಕರನ್ಧಮ ಉದಾರಧೀಃ ।
ಮರುತಸ್ತತ್ಸುತೋಽಪುತ್ರಃ ಪುತ್ರಂ ಪೌರವಮನ್ವಭೂತ್ ॥೧೭॥

ದುಷ್ಯನ್ತಃ ಸ ಪುನರ್ಭೇಜೇ ಸ್ವಂ ವಂಶಂ ರಾಜ್ಯಕಾಮುಕಃ ।
ಯಯಾತೇರ್ಜ್ಯೇಷ್ಠಪುತ್ರಸ್ಯ ಯದೋರ್ವಂಶಂ ನರರ್ಷಭ ॥೧೮॥

ವರ್ಣಯಾಮಿ ಮಹಾಪುಣ್ಯಂ ಸರ್ವಪಾಪಹರಂ ನೃಣಾಮ್ ।
ಯದೋರ್ವಂಶಂ ನರಃ ಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ ॥೧೯॥

ಯತ್ರಾವತೀರ್ಣೋ ಭಗವಾನ್ಪರಮಾತ್ಮಾ ನರಾಕೃತಿಃ ।
ಯದೋಃ ಸಹಸ್ರಜಿತ್ಕ್ರೋಷ್ಟಾ ನಲೋ ರಿಪುರಿತಿ ಶ್ರುತಾಃ ॥೨೦॥

ಚತ್ವಾರಃ ಸೂನವಸ್ತತ್ರ ಶತಜಿತ್ಪ್ರಥಮಾತ್ಮಜಃ ।
ಮಹಾಹಯೋ ವೇಣುಹಯೋ ಹೈಹಯಶ್ಚೇತಿ ತತ್ಸುತಾಃ ॥೨೧॥

ಧರ್ಮಸ್ತು ಹೈಹಯಸುತೋ ನೇತ್ರಃ ಕುನ್ತೇಃ ಪಿತಾ ತತಃ ।
ಸೋಹಞ್ಜಿರಭವತ್ಕುನ್ತೇರ್ಮಹಿಷ್ಮಾನ್ಭದ್ರಸೇನಕಃ ॥೨೨॥

ದುರ್ಮದೋ ಭದ್ರಸೇನಸ್ಯ ಧನಕಃ ಕೃತವೀರ್ಯಸೂಃ ।
ಕೃತಾಗ್ನಿಃ ಕೃತವರ್ಮಾ ಚ ಕೃತೌಜಾ ಧನಕಾತ್ಮಜಾಃ ॥೨೩॥

ಅರ್ಜುನಃ ಕೃತವೀರ್ಯಸ್ಯ ಸಪ್ತದ್ವೀಪೇಶ್ವರೋಽಭವತ್ ।
ದತ್ತಾತ್ರೇಯಾದ್ಧರೇರಂಶಾತ್ಪ್ರಾಪ್ತಯೋಗಮಹಾಗುಣಃ ॥೨೪॥

ನ ನೂನಂ ಕಾರ್ತವೀರ್ಯಸ್ಯ ಗತಿಂ ಯಾಸ್ಯನ್ತಿ ಪಾರ್ಥಿವಾಃ ।
ಯಜ್ಞದಾನತಪೋಯೋಗಶ್ರುತವೀರ್ಯಜಯಾದಿಭಿಃ ॥೨೫॥

ಪಞ್ಚಾಶೀತಿಸಹಸ್ರಾಣಿ ಹ್ಯವ್ಯಾಹತಬಲಃ ಸಮಾಃ ।
ಅನಷ್ಟವಿತ್ತಸ್ಮರಣೋ ಬುಭುಜೇಽಕ್ಷಯ್ಯಷಡ್ವಸು ॥೨೬॥

ತಸ್ಯ ಪುತ್ರಸಹಸ್ರೇಷು ಪಞ್ಚೈವೋರ್ವರಿತಾ ಮೃಧೇ ।
ಜಯಧ್ವಜಃ ಶೂರಸೇನೋ ವೃಷಭೋ ಮಧುರೂರ್ಜಿತಃ ॥೨೭॥

ಜಯಧ್ವಜಾತ್ತಾಲಜಙ್ಘಸ್ತಸ್ಯ ಪುತ್ರಶತಂ ತ್ವಭೂತ್ ।
ಕ್ಷತ್ರಂ ಯತ್ತಾಲಜಙ್ಘಾಖ್ಯಂ ಔರ್ವತೇಜೋಪಸಂಹೃತಮ್ ॥೨೮॥

ತೇಷಾಂ ಜ್ಯೇಷ್ಠೋ ವೀತಿಹೋತ್ರೋ
ವೃಷ್ಣಿಃ ಪುತ್ರೋ ಮಧೋಃ ಸ್ಮೃತಃ ।
ತಸ್ಯ ಪುತ್ರಶತಂ ತ್ವಾಸೀ-
ದ್ವೃಷ್ಣಿಜ್ಯೇಷ್ಠಂ ಯತಃಕುಲಮ್ ॥೨೯॥

ಮಾಧವಾ ವೃಷ್ಣಯೋ ರಾಜನ್ಯಾದವಾಶ್ಚೇತಿ ಸಂಜ್ಞಿತಾಃ ।
ಯದುಪುತ್ರಸ್ಯ ಚ ಕ್ರೋಷ್ಟೋಃ ಪುತ್ರೋ ವೃಜಿನವಾಂಸ್ತತಃ ॥೩೦॥

ಶ್ವಾಹಿಸ್ತತೋ ರುಶೇಕುರ್ವೈ ತಸ್ಯ ಚಿತ್ರರಥಸ್ತತಃ ।
ಶಶಬಿನ್ದುರ್ಮಹಾಯೋಗೀ ಮಹಾಭೋಜೋ ಮಹಾನಭೂತ್ ॥೩೧॥

ಚತುರ್ದಶಮಹಾರತ್ನಶ್ಚಕ್ರವರ್ತ್ಯಪರಾಜಿತಃ ।
ತಸ್ಯ ಪತ್ನೀಸಹಸ್ರಾಣಾಂ ದಶಾನಾಂ ಸುಮಹಾಯಶಾಃ ॥೩೨॥

ದಶಲಕ್ಷಸಹಸ್ರಾಣಿ ಪುತ್ರಾಣಾಂ ತಾಸ್ವಜೀಜನತ್ ।
ತೇಷಾಂ ತು ಷಟ್ಪ್ರಧಾನಾನಾಂ ಪೃಥುಶ್ರವಸ ಆತ್ಮಜಃ ॥೩೩॥

ಧರ್ಮೋ ನಾಮೋಶನಾ ತಸ್ಯ ಹಯಮೇಧಶತಸ್ಯ ಯಾಟ್ ।
ತತ್ಸುತೋ ರುಚಕಸ್ತಸ್ಯ ಪಞ್ಚಾಸನ್ನಾತ್ಮಜಾಃ ಶೃಣು ॥೩೪॥

ಪುರುಜಿದ್ರುಕ್ಮರುಕ್ಮೇಷು-
ಪೃಥುಜ್ಯಾಮಘಸಂಜ್ಞಿತಾಃ ।
ಜ್ಯಾಮಘಸ್ತ್ವಪ್ರಜೋಽಪ್ಯನ್ಯಾಂ
ಭಾರ್ಯಾಂ ಶೈಬ್ಯಾಪತಿರ್ಭಯಾತ್ ॥೩೫॥

ನಾವಿನ್ದಚ್ಛತ್ರುಭವನಾದ್ಭೋಜ್ಯಾಂ ಕನ್ಯಾಮಹಾರಷೀತ್ ।
ರಥಸ್ಥಾಂ ತಾಂ ನಿರೀಕ್ಷ್ಯಾಹ ಶೈಬ್ಯಾ ಪತಿಮಮರ್ಷಿತಾ ॥೩೬॥

ಕೇಯಂ ಕುಹಕ ಮತ್ಸ್ಥಾನಂ ರಥಮಾರೋಪಿತೇತಿ ವೈ ।
ಸ್ನುಷಾ ತವೇತ್ಯಭಿಹಿತೇ ಸ್ಮಯನ್ತೀ ಪತಿಮಬ್ರವೀತ್ ॥೩೭॥

ಅಹಂ ವನ್ಧ್ಯಾಽಸಪತ್ನೀ ಚ ಸ್ನುಷಾ ಮೇ ಯುಜ್ಯತೇ ಕಥಮ್ ।
ಜನಯಿಷ್ಯಸಿ ಯಂ ರಾಜ್ಞೀ ತಸ್ಯೇಯಮುಪಯುಜ್ಯತೇ ॥೩೮॥

ಅನ್ವಮೋದನ್ತ ತದ್ವಿಶ್ವೇದೇವಾಃ ಪಿತರ ಏವ ಚ ।
ಶೈಬ್ಯಾ ಗರ್ಭಮಧಾತ್ಕಾಲೇ ಕುಮಾರಂ ಸುಷುವೇ ಶುಭಮ್ ।
ಸ ವಿದರ್ಭ ಇತಿ ಪ್ರೋಕ್ತ ಉಪಯೇಮೇ ಸ್ನುಷಾಂ ಸತೀಮ್ ॥೩೯॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ನವಮಸ್ಕನ್ಧೇ ಯದುವಂಶಾನುವರ್ಣನೇ
ತ್ರಯೋವಿಂಶೋಽಧ್ಯಾಯಃ

ಅಥ ಚತುರ್ವಿಂಶೋಽಧ್ಯಾಯಃ

ಶ್ರೀಶುಕ ಉವಾಚ :

ತಸ್ಯಾಂ ವಿದರ್ಭೋಽಜನಯತ್ಪುತ್ರೌ ನಾಮ್ನಾ ಕುಶಕ್ರಥೌ ।
ತೃತೀಯಂ ರೋಮಪಾದಂ ಚ ವಿದರ್ಭಕುಲನನ್ದನಮ್ ॥೧॥

ರೋಮಪಾದಸುತೋ ಬಭ್ರುರ್ಬಭ್ರೋಃ ಕೃತಿರಜಾಯತ ।
ಉಶಿಕಸ್ತತ್ಸುತಸ್ತಸ್ಮಾಚ್ಚೇದಿಶ್ಚೈದ್ಯಾದಯೋ ನೃಪ ॥೨॥

ಕ್ರಥಸ್ಯ ಕುನ್ತಿಃ ಪುತ್ರೋಽಭೂದ್ಧೃಷ್ಟಿಸ್ತಸ್ಯಾಥ ನಿರ್ವೃತಿಃ ।
ತತೋ ದಶಾರ್ಹೋ ನಾಮ್ನಾಭೂತ್ತಸ್ಯ ವ್ಯೋಮಃ ಸುತಸ್ತತಃ ॥೩॥

ಜೀಮೂತೋ ವಿಕೃತಿಸ್ತಸ್ಯ ಯಸ್ಯ ಭೀಮರಥಃ ಸುತಃ ।
ತತೋ ನವರಥಃ ಪುತ್ರೋ ಜಾತೋ ದಶರಥಸ್ತತಃ ॥೪॥

ಕರಮ್ಭಿಃ ಶಕುನೇಃ ಪುತ್ರೋ ದೇವರಾತಸ್ತದಾತ್ಮಜಃ ।
ದೇವಕ್ಷತ್ರಸ್ತತಸ್ತಸ್ಯ ಮಧುಃ ಕುರುವಶಾದನುಃ ॥೫॥

ಪುರುಹೋತ್ರಸ್ತ್ವನೋಃ ಪುತ್ರಸ್ತಸ್ಯಾಯುಃ ಸಾತ್ವತಸ್ತತಃ ।
ಭಜಮಾನೋ ಭಜಿರ್ದಿವ್ಯೋ ವೃಷ್ಣಿರ್ದೇವಾವೃಧೋಽನ್ಧಕಃ ॥೬॥

ಸಾತ್ವತಸ್ಯ ಸುತಾಃ ಸಪ್ತ ಮಹಾಭೋಜಶ್ಚ ಮಾರಿಷ ।
ಭಜಮಾನಸ್ಯ ನಿಮ್ಲೋಚಿಃ ಕಿಙ್ಕಣೋ ಧೃಷ್ಟಿರೇವ ಚ ॥೭॥

ಏಕಸ್ಯಾತ್ಮಾತ್ಮಜಾಃ ಪತ್ನ್ಯಾಮನ್ಯಸ್ಯಾಂ ಚ ತ್ರಯಃ ಸುತಾಃ ।
ಶತಾಜಿಚ್ಚ ಸಹಸ್ರಾಜಿದಯುತಾಜಿದಿತಿ ಪ್ರಭೋ ॥೮॥

ಬಭ್ರುರ್ದೇವಾವೃಧಸುತಸ್ತಯೋಃ ಶ್ಲೋಕೌ ಪಠನ್ತ್ಯಮೂ ।
ಯಥೈವ ಶೃಣುಮೋ ದೂರಾತ್ಸಮ್ಪಶ್ಯಾಮಸ್ತಥಾನ್ತಿಕಾತ್ ॥೯॥

ಬಭ್ರುಃ ಶ್ರೇಷ್ಠೋ ಮನುಷ್ಯಾಣಾಂ ದೇವೈರ್ದೇವಾವೃಧಃ ಸಮಃ ।
ಪುರುಷಾಃ ಪಞ್ಚಷಷ್ಟಿಶ್ಚ ಷಟ್ಸಹಸ್ರಾಣಿ ಚಾಷ್ಟ ಚ ॥೧೦॥

ಯೇಽಮೃತತ್ವಮನುಪ್ರಾಪ್ತಾ ಬಭ್ರೋರ್ದೇವಾವೃಧಾದಪಿ ।
ಮಹಾಭೋಜೋಽಪಿ ಧರ್ಮಾತ್ಮಾ ಭೋಜಾ ಆಸಂಸ್ತದನ್ವಯೇ ॥೧೧॥

ವೃಷ್ಣೇಃ ಸುಮಿತ್ರಃ ಪುತ್ರೋಽಭೂದ್ಯುಧಾಜಿಚ್ಚ ಪರಂತಪ ।
ಶಿನಿಸ್ತಸ್ಯಾನಮಿತ್ರಶ್ಚ ನಿಮ್ನೋಽಭೂದನಮಿತ್ರತಃ ॥೧೨॥

ಸತ್ರಾಜಿತಃ ಪ್ರಸೇನಶ್ಚ ನಿಮ್ನಸ್ಯಾಪ್ಯಾಸತುಃ ಸುತೌ ।
ಅನಮಿತ್ರಸುತೋ ಯೋಽನ್ಯಃ ಶಿನಿಸ್ತಸ್ಯಾಥ ಸತ್ಯಕಃ ॥೧೩॥

ಯುಯುಧಾನಃ ಸಾತ್ಯಕಿರ್ವೈ ಜಯಸ್ತಸ್ಯ ಕುಣಿಸ್ತತಃ ।
ಯುಗನ್ಧರೋಽನಮಿತ್ರಸ್ಯ ವೃಷ್ಣಿಃ ಪುತ್ರೋಽಪರಸ್ತತಃ ॥೧೪॥

ಶ್ವಫಲ್ಕಶ್ಚಿತ್ರರಥಶ್ಚ ಗಾನ್ದಿನ್ಯಾಂ ಚ ಶ್ವಫಲ್ಕತಃ ।
ಅಕ್ರೂರಪ್ರಮುಖಾ ಆಸನ್ಪುತ್ರಾ ದ್ವಾದಶ ವಿಶ್ರುತಾಃ ॥೧೫॥

ಆಸಙ್ಗಃ ಸಾರಮೇಯಶ್ಚ ಮೃದುರೋ ಮೃದುವಿದ್ಗಿರಿಃ ।
ಧರ್ಮವೃದ್ಧಃ ಸುಕರ್ಮಾ ಚ ಕ್ಷೇತ್ರೋಪೇಕ್ಷೋಽರಿಮರ್ದನಃ ॥೧೬॥

ಶತ್ರುಘ್ನೋ ಗನ್ಧಮಾದಶ್ಚ ಪ್ರತಿಬಾಹುಶ್ಚ ದ್ವಾದಶ ।
ತೇಷಾಂ ಸ್ವಸಾ ಸುಚೇರಾಖ್ಯಾ ದ್ವಾವಕ್ರೂರಸುತಾವಪಿ ॥೧೭॥

ದೇವವಾನುಪದೇವಶ್ಚ ತಥಾ ಚಿತ್ರರಥಾತ್ಮಜಾಃ ।
ಪೃಥುರ್ವಿದೂರಥಾದ್ಯಾಶ್ಚ ಬಹವೋ ವೃಷ್ಣಿನನ್ದನಾಃ ॥೧೮॥

ಕುಕುರೋ ಭಜಮಾನಶ್ಚ ಶುಚಿಃ ಕಮ್ಬಲಬರ್ಹಿಷಃ ।
ಕುಕುರಸ್ಯ ಸುತೋ ವಹ್ನಿರ್ವಿಲೋಮಾ ತನಯಸ್ತತಃ ॥೧೯॥

ಕಪೋತರೋಮಾ ತಸ್ಯಾನುಃ ಸಖಾ ಯಸ್ಯ ಚ ತುಮ್ಬುರುಃ ।
ಅನ್ಧಕೋ ದುನ್ದುಭಿಸ್ತಸ್ಮಾದರಿದ್ಯೋತಃ ಪುನರ್ವಸುಃ ॥೨೦॥

ತಸ್ಯಾಹುಕಶ್ಚಾಹುಕೀ ಚ ಕನ್ಯಾ ಚೈವಾಹುಕಾತ್ಮಜೌ ।
ದೇವಕಶ್ಚೋಗ್ರಸೇನಶ್ಚ ಚತ್ವಾರೋ ದೇವಕಾತ್ಮಜಾಃ ॥೨೧॥

ದೇವವಾನುಪದೇವಶ್ಚ ಸುದೇವೋ ದೇವವರ್ಧನಃ ।
ತೇಷಾಂ ಸ್ವಸಾರಃ ಸಪ್ತಾಸನ್ಧೃತದೇವಾದಯೋ ನೃಪ ॥೨೨॥

ಶಾನ್ತಿದೇವೋಪದೇವಾ ಚ ಶ್ರೀದೇವಾ ದೇವರಕ್ಷಿತಾ ।
ಸಹದೇವಾ ದೇವಕೀ ಚ ವಸುದೇವ ಉವಾಹ ತಾಃ ॥೨೩॥

ಕಂಸಃ ಸುನಾಮಾ ನ್ಯಗ್ರೋಧಃ ಕಙ್ಕಃ ಶಙ್ಕುಃ ಸುಹೂಸ್ತಥಾ ।
ರಾಷ್ಟ್ರಪಾಲೋಽಥ ಸೃಷ್ಟಿಶ್ಚ ತುಷ್ಟಿಮಾನೌಗ್ರಸೇನಯಃ ॥೨೪॥

ಕಂಸಾ ಕಂಸವತೀ ಕಙ್ಕಾ ಶೂರಭೂ ರಾಷ್ಟ್ರಪಾಲಿಕಾ ।
ಉಗ್ರಸೇನದುಹಿತರೋ ವಸುದೇವಾನುಜಃಸ್ತ್ರಿಯಃ ॥೨೫॥

ಶೂರೋ ವಿದೂರಥಾದಾಸೀದ್ಭಜಮಾನಃ ಸುತಸ್ತತಃ ।
ಶಿನಿಸ್ತಸ್ಮಾತ್ಸ್ವಯಮ್ಭೋಜೋ ಹೃದೀಕಸ್ತತ್ಸುತೋ ಮತಃ ॥೨೬॥

ದೇವಬಾಹುಃ ಶತಧನುಃ ಕೃತವರ್ಮೇತಿ ತತ್ಸುತಾಃ ।
ದೇವಮೀಢಸ್ಯ ಶೂರಸ್ಯ ಮಾರಿಷಾ ನಾಮ ಪತ್ನ್ಯಭೂತ್ ॥೨೭॥

ತಸ್ಯಾಂ ಸ ಜನಯಾಮಾಸ ದಶ ಪುತ್ರಾನಕಲ್ಮಷಾನ್ ।
ವಸುದೇವಂ ದೇವಭಾಗಂ ದೇವಶ್ರವಸಮಾನಕಮ್ ॥೨೮॥

ಸೃಞ್ಜಯಂ ಶ್ಯಾಮಕಂ ಕಙ್ಕಂ ಶಮೀಕಂ ವತ್ಸಕಂ ವೃಕಮ್ ।
ದೇವದುನ್ದುಭಯೋ ನೇದುರಾನಕಾ ಯಸ್ಯ ಜನ್ಮನಿ ॥೨೯॥

ವಸುದೇವಂ ಹರೇಃ ಸ್ಥಾನಂ ವದನ್ತ್ಯಾನಕದುನ್ದುಭಿಮ್ ।
ಪೃಥಾ ಚ ಶ್ರುತದೇವಾ ಚ ಶ್ರುತಕೀರ್ತಿಃ ಶ್ರುತಶ್ರವಾಃ ॥೩೦॥

ರಾಜಾಧಿದೇವೀ ಚೈತೇಷಾಂ ಭಗಿನ್ಯಃ ಪಞ್ಚ ಕನ್ಯಕಾಃ ।
ಕುನ್ತೇಃ ಸಖ್ಯುಃ ಪಿತಾ ಶೂರೋ ಹ್ಯಪುತ್ರಸ್ಯ ಪೃಥಾಮದಾತ್ ॥೩೧॥

ಸಾಪ ದುರ್ವಾಸಸೋ ವಿದ್ಯಾಂ ದೇವಹೂತೀಂ ಪ್ರತೋಷಿತಾತ್ ।
ತಸ್ಯಾ ವೀರ್ಯಪರೀಕ್ಷಾರ್ಥಮಾಜುಹಾವ ರವಿಂ ಶುಚಿಮ್ ॥೩೨॥

ತದೈವೋಪಾಗತಂ ದೇವಂ ವೀಕ್ಷ್ಯ ವಿಸ್ಮಿತಮಾನಸಾ ।
ಪ್ರತ್ಯಯಾರ್ಥಂ ಪ್ರಯುಕ್ತಾ ಮೇ ಯಾಹಿ ದೇವ ಕ್ಷಮಸ್ವ ಮೇ ॥೩೩॥

ಅಮೋಘಂ ದರ್ಶನಂ ದೇವಿ ಆಧಿತ್ಸೇ ತ್ವಯಿ ಚಾತ್ಮಜಮ್ ।
ಯೋನಿರ್ಯಥಾ ನ ದುಷ್ಯೇತ ಕರ್ತಾಹಂ ತೇ ಸುಮಧ್ಯಮೇ ॥೩೪॥

ಇತಿ ತಸ್ಯಾಂ ಸ ಆಧಾಯ ಗರ್ಭಂ ಸೂರ್ಯೋ ದಿವಂ ಗತಃ ।
ಸದ್ಯಃ ಕುಮಾರಃ ಸಂಜಜ್ಞೇ ದ್ವಿತೀಯ ಇವ ಭಾಸ್ಕರಃ ॥೩೫॥

ತಂ ಸಾತ್ಯಜನ್ನದೀತೋಯೇ ಕೃಚ್ಛ್ರಾಲ್ಲೋಕಸ್ಯ ಬಿಭ್ಯತೀ ।
ಪ್ರಪಿತಾಮಹಸ್ತಾಮುವಾಹ ಪಾಣ್ಡುರ್ವೈ ಸತ್ಯವಿಕ್ರಮಃ ॥೩೬॥

ಶ್ರುತದೇವಾಂ ತು ಕಾರೂಷೋ ವೃದ್ಧಶರ್ಮಾ ಸಮಗ್ರಹೀತ್ ।
ಯಸ್ಯಾಮಭೂದ್ದನ್ತವಕ್ತ್ರ ಋಷಿಶಪ್ತೋ ದಿತೇಃ ಸುತಃ ॥೩೭॥

ಕೈಕೇಯೋ ಧೃಷ್ಟಕೇತುಶ್ಚ ಶ್ರುತಕೀರ್ತಿಮವಿನ್ದತ ।
ಸನ್ತರ್ದನಾದಯಸ್ತಸ್ಯ ಪಞ್ಚಾಸನ್ಕೈಕಯಾಃ ಸುತಾಃ ॥೩೮॥

ರಾಜಾಧಿದೇವ್ಯಾಮಾವನ್ತ್ಯೌ ಜಯಸೇನೋಽಜನಿಷ್ಟ ಹ ।
ದಮಘೋಷಶ್ಚೇದಿರಾಜಃ ಶ್ರುತಶ್ರವಸಮಗ್ರಹೀತ್ ॥೩೯॥

ಶಿಶುಪಾಲಃ ಸುತಸ್ತಸ್ಯಾಃ ಕಥಿತಸ್ತಸ್ಯ ಸಮ್ಭವಃ ।
ದೇವಭಾಗಸ್ಯ ಕಂಸಾಯಾಂ ಚಿತ್ರಕೇತುಬೃಹದ್ಬಲೌ ॥೪೦॥

ಕಂಸವತ್ಯಾಂ ದೇವಶ್ರವಸಃ ಸುವೀರ ಇಷುಮಾಂಸ್ತಥಾ ।
ಕಙ್ಕಾಯಾಮಾನಕಾಜ್ಜಾತಃ ಸತ್ಯಜಿತ್ಪುರುಜಿತ್ತಥಾ ॥೪೧॥

ಸೃಞ್ಜಯೋ ರಾಷ್ಟ್ರಪಾಲ್ಯಾಂ ಚ ವೃಷದುರ್ಮರ್ಷಣಾದಿಕಾನ್ ।
ಹರಿಕೇಶಹಿರಣ್ಯಾಕ್ಷೌ ಶೂರಭೂಮ್ಯಾಂ ಚ ಶ್ಯಾಮಕಃ ॥೪೨॥

ಮಿಶ್ರಕೇಶ್ಯಾಮಪ್ಸರಸಿ ವೃಕಾದೀನ್ವತ್ಸಕಸ್ತಥಾ ।
ತಕ್ಷಪುಷ್ಕರಶಾಲಾದೀನ್ದುರ್ವಾರ್ಕ್ಷ್ಯಾಂ ವೃಕ ಆದಧೇ ॥೪೩॥

ಸುಮಿತ್ರಾರ್ಜುನಪಾಲಾದೀನ್ ಶಮೀಕಾತ್ತು ಸುದಾಮಿನೀ ।
ಕಙ್ಕಶ್ಚ ಕರ್ಣಿಕಾಯಾಂ ವೈ ಋತಧಾಮಜಯಾವಪಿ ॥೪೪॥

ಪೌರವೀ ರೋಹಿಣೀ ಭದ್ರಾ ಮದಿರಾ ರೋಚನಾ ಇಲಾ ।
ದೇವಕೀಪ್ರಮುಖಾ ಆಸನ್ಪತ್ನ್ಯ ಆನಕದುನ್ದುಭೇಃ ॥೪೫॥

ಬಲಂ ಗದಂ ಸಾರಣಂ ಚ ದುರ್ಮದಂ ವಿಪುಲಂ ಧ್ರುವಮ್ ।
ವಸುದೇವಸ್ತು ರೋಹಿಣ್ಯಾಂ ಕೃತಾದೀನುದಪಾದಯತ್ ॥೪೬॥

ಸುಭದ್ರೋ ಭದ್ರವಾಹಶ್ಚ ದುರ್ಮದೋ ಭದ್ರ ಏವ ಚ ।
ಪೌರವ್ಯಾಸ್ತನಯಾ ಹ್ಯೇತೇ ಭೂತಾದ್ಯಾ ದ್ವಾದಶಾಭವನ್ ॥೪೭॥

ನನ್ದೋಪನನ್ದಕೃತಕಶೂರಾದ್ಯಾ ಮದಿರಾತ್ಮಜಾಃ ।
ಕೌಸಲ್ಯಾ ಕೇಶಿನಂ ತ್ವೇಕಮಾಸೂತ ಕುಲನನ್ದನಮ್ ॥೪೮॥

ರೋಚನಾಯಾಮತೋ ಜಾತಾ ಹಸ್ತಹೇಮಾಙ್ಗದಾದಯಃ ।
ಇಲಾಯಾಮುರುವಲ್ಕಾದೀನ್ಯದುಮುಖ್ಯಾನಜೀಜನತ್ ॥೪೯॥

ವಿಪೃಷ್ಠೋ ಧೃತದೇವಾಯಾಮೇಕ ಆನಕದುನ್ದುಭೇಃ ।
ಶಾನ್ತಿದೇವಾತ್ಮಜಾ ರಾಜನ್ ಶ್ರಮಪ್ರತಿಶ್ರುತಾದಯಃ ॥೫೦॥

ರಾಜಾನಃ ಕಲ್ಪವರ್ಷಾದ್ಯಾ ಉಪದೇವಾಸುತಾ ದಶ ।
ವಸುಹಂಸಸುವಂಶಾದ್ಯಾಃ ಶ್ರೀದೇವಾಯಾಸ್ತು ಷಟ್ಸುತಾಃ ॥೫೧॥

ದೇವರಕ್ಷಿತಯಾ ಲಬ್ಧಾ ನವ ಚಾತ್ರ ಗದಾದಯಃ ।
ವಸುದೇವಃ ಸುತಾನಷ್ಟಾವಾದಧೇ ಸಹದೇವಯಾ ॥೫೨॥

ಪುರುವಿಶ್ರುತಮುಖ್ಯಾಂಸ್ತು ಸಾಕ್ಷಾದ್ಧರ್ಮೋ ವಸೂನಿವ ।
ವಸುದೇವಸ್ತು ದೇವಕ್ಯಾಮಷ್ಟ ಪುತ್ರಾನಜೀಜನತ್ ॥೫೩॥

ಕೀರ್ತಿಮನ್ತಂ ಸುಷೇಣಂ ಚ ಭದ್ರಸೇನಮುದಾರಧೀಃ ।
ಋಜುಂ ಸಮ್ಮರ್ದನಂ ಭದ್ರಂ ಸಂಕರ್ಷಣಮಹೀಶ್ವರಮ್ ॥೫೪॥

ಅಷ್ಟಮಸ್ತು ತಯೋರಾಸೀತ್ಸ್ವಯಮೇವ ಹರಿಃ ಕಿಲ ।
ಸುಭದ್ರಾ ಚ ಮಹಾಭಾಗ ತವ ರಾಜನ್ಪಿತಾಮಹೀ ॥೫೫॥

ಯದಾ ಯದೇಹ ಧರ್ಮಸ್ಯ ಕ್ಷಯೋ ವೃದ್ಧಿಶ್ಚ ಪಾಪ್ಮನಃ ।
ತದಾ ತು ಭಗವಾನೀಶ ಆತ್ಮಾನಂ ಸೃಜತೇ ಹರಿಃ ॥೫೬॥

ನ ಹ್ಯಸ್ಯ ಜನ್ಮನೋ ಹೇತುಃ ಕರ್ಮಣೋ ವಾ ಮಹೀಪತೇ ।
ಆತ್ಮಮಾಯಾಂ ವಿನೇಶಸ್ಯ ಪರಸ್ಯ ದ್ರಷ್ಟುರಾತ್ಮನಃ ॥೫೭॥

ಯನ್ಮಾಯಾಚೇಷ್ಟಿತಂ ಪುಂಸಃ ಸ್ಥಿತ್ಯುತ್ಪತ್ತ್ಯಪ್ಯಯಾಯ ಹಿ ।
ಅನುಗ್ರಹಸ್ತನ್ನಿವೃತ್ತೇರಾತ್ಮಲಾಭಾಯ ಚೇಷ್ಯತೇ ॥೫೮॥

ಅಕ್ಷೌಹಿಣೀನಾಂ ಪತಿಭಿರಸುರೈರ್ನೃಪಲಾಞ್ಛನೈಃ ।
ಭುವ ಆಕ್ರಮ್ಯಮಾಣಾಯಾ ಅಭಾರಾಯ ಕೃತೋದ್ಯಮಃ ॥೫೯॥

ಕರ್ಮಾಣ್ಯಪರಿಮೇಯಾಣಿ ಮನಸಾಪಿ ಸುರೇಶ್ವರೈಃ ।
ಸಹಸಂಕರ್ಷಣಶ್ಚಕ್ರೇ ಭಗವಾನ್ಮಧುಸೂದನಃ ॥೬೦॥

ಕಲೌ ಜನಿಷ್ಯಮಾಣಾನಾಂ ದುಃಖಶೋಕತಮೋನುದಮ್ ।
ಅನುಗ್ರಹಾಯ ಭಕ್ತಾನಾಂ ಸುಪುಣ್ಯಂ ವ್ಯತನೋದ್ಯಶಃ ॥೬೧॥

ಯಸ್ಮಿನ್ಸತ್ಕರ್ಣಪೀಯೂಷೇ ಯಶಸ್ತೀರ್ಥವರೇ ಸಕೃತ್ ।
ಶ್ರೋತ್ರಾಞ್ಜಲಿರುಪಸ್ಪೃಶ್ಯ ಧುನುತೇ ಕರ್ಮವಾಸನಾಮ್ ॥೬೨॥

ಭೋಜವೃಷ್ಣ್ಯನ್ಧಕಮಧುಶೂರಸೇನದಶಾರ್ಹಕೈಃ ।
ಶ್ಲಾಘನೀಯೇಹಿತಃ ಶಶ್ವತ್ಕುರುಸೃಞ್ಜಯಪಾಣ್ಡುಭಿಃ ॥೬೩॥

ಸ್ನಿಗ್ಧಸ್ಮಿತೇಕ್ಷಿತೋದಾರೈರ್ವಾಕ್ಯೈರ್ವಿಕ್ರಮಲೀಲಯಾ ।
ನೃಲೋಕಂ ರಮಯಾಮಾಸ ಮೂರ್ತ್ಯಾ ಸರ್ವಾಙ್ಗರಮ್ಯಯಾ ॥೬೪॥

ಯಸ್ಯಾನನಂ ಮಕರಕುಣ್ಡಲಚಾರುಕರ್ಣ-
ಭ್ರಾಜತ್ಕಪೋಲಸುಭಗಂ ಸವಿಲಾಸಹಾಸಮ್ ।

ನಿತ್ಯೋತ್ಸವಂ ನ ತತೃಪುರ್ದೃಶಿಭಿಃ ಪಿಬನ್ತ್ಯೋ
ನಾರ್ಯೋ ನರಾಶ್ಚ ಮುದಿತಾಃ ಕುಪಿತಾ ನಿಮೇಶ್ಚ ॥೬೫॥

ಜಾತೋ ಗತಃ ಪಿತೃಗೃಹಾದ್ವ್ರಜಮೇಧಿತಾರ್ಥೋ
ಹತ್ವಾ ರಿಪೂನ್ಸುತಶತಾನಿ ಕೃತೋರುದಾರಃ ।
ಉತ್ಪಾದ್ಯ ತೇಷು ಪುರುಷಃ ಕ್ರತುಭಿಃ ಸಮೀಜೇ
ಆತ್ಮಾನಮಾತ್ಮನಿಗಮಂ ಪ್ರಥಯಞ್ಜನೇಷು ॥೬೬॥

ಪೃಥ್ವ್ಯಾಃ ಸ ವೈ ಗುರುಭರಂ ಕ್ಷಪಯನ್ಕುರೂಣಾ-
ಮನ್ತಃ ಸಮುತ್ಥಕಲಿನಾ ಯುಧಿ ಭೂಪಚಮ್ವಃ ।
ದೃಷ್ಟ್ವಾ ವಿಧೂಯ ವಿಜಯೇ ಜಯಮುದ್ವಿಘೋಷ್ಯ
ಪ್ರೋಚ್ಯೋದ್ಧವಾಯ ಚ ಪರಂ ಸಮಗಾತ್ಸ್ವಧಾಮ ॥೬೭॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ನವಮಸ್ಕನ್ಧೇ
ಶ್ರೀ ಸೂರ್ಯಸೋಮವಂಶಾನುಕೀರ್ತನೇ
ಯದುವಂಶಾನುಕೀರ್ತನಂ ನಾಮ ಚತುರ್ವಿಂಶೋಽಧ್ಯಾಯಃ

ಇತಿ ನವಮಸ್ಕನ್ಧಃ ಸಮಾಪ್ತಃ

ಹರಿಃ ಓಂ ತತ್ಸತ್

ದಶಮಸ್ಕನ್ಧೇ

ಅಥ ಪ್ರಥಮೋಽಧ್ಯಾಯಃ

ರಾಜೋವಾಚ :

ಕಥಿತೋ ವಂಶವಿಸ್ತಾರೋ ಭವತಾ ಸೋಮಸೂರ್ಯಯೋಃ ।
ರಾಜ್ಞಾಂ ಚೋಭಯವಂಶ್ಯಾನಾಂ ಚರಿತಂ ಪರಮಾದ್ಭುತಮ್ ॥೧॥

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ಶ್ರೀಮದ್ಭಾಗವತ – (ಐದನೆಯ ಸಂಪುಟ)

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ಅಷ್ಟಮಸ್ಕಂಧ ೧ನೆಯ ಅಧ್ಯಾಯ

ಮನ್ವಂತರಗಳ ವರ್ಣನೆ

ಪರೀಕ್ಷಿದ್ರಾಜನು ಶುಕಮುನಿಗಳನ್ನು ಹೀಗೆ ಪ್ರಶ್ನೆಮಾಡಿದನು :

ಸ್ವಾಯಮ್ಭುವಸ್ಯೇಹ ಗುರೋ ವಂಶೋಽಯಂ ವಿಸ್ತರಾಚ್ಛ್ರುತಃ ।
ಯತ್ರ ವಿಶ್ವಸೃಜಾಂ ಸರ್ಗೋ ಮನೂನನ್ಯಾನ್ವದಸ್ವ ನಃ ॥೧॥

“ಗುರುದೇವರೇ! ತಮ್ಮ ಈ ಕಥಾಕೀರ್ತನೆಯಲ್ಲಿ ಸ್ವಾಯಂಭುವ ಮನುವಿನ ವಂಶವನ್ನು ಕುರಿತು ವಿಸ್ತಾರವಾಗಿ ಕೇಳಿ ತಿಳಿದೆನು. ಮರೀಚಿಯೇ ಮುಂತಾದ ಪ್ರಜಾಪತಿಗಳು ಈತನ ಪುತ್ರಿಯರ ಮೂಲಕವೇ ತಮ್ಮ ವಂಶ ಪರಂಪರೆಯನ್ನು ಪಡೆದು ಮುಂದುವರಿಸಿದರೆಂಬುದು ತಿಳಿಯಿತು. ಈಗ ಇತರ ಮನುಗಳ ವಿಷಯವನ್ನು ವರ್ಣಿಸುವ ಕೃಪೆಮಾಡಿರಿ.*

ಬ್ರಾಹ್ಮಣೋತ್ತಮರೇ! ಮಹಾತ್ಮರಾದ ಜ್ಞಾನಿಗಳು ಯಾವ ಯಾವ

---

* ‘ಸ್ವಾಯಂಭುವಸ್ಯ ಚ ಗುರೋ’: ‘ಸ್ವಾಯಂಭುವಸ್ಯೇಹ ಗುರೋಃ’, ಸ್ವಾಯಂಭುವಸ್ಯ ಚ ಮನೋಃ ವಂಶಃ ಪರಮಸಮ್ಮತಃ–ಎಂಬ ಪಾಠಾಂತರಗಳೂ ಇಲ್ಲಿ ಉಂಟು. ಅರ್ಥದಲ್ಲಿ ಮಹಾವ್ಯತ್ಯಾಸವೇನೂ ಇಲ್ಲ. ಗುರುವಾದ ಸ್ವಾಯಂಭುವ ಮನುವಿನ ವಂಶ, ಸಜ್ಜನರಿಗೆ ಅತ್ಯಂತ ಸಮ್ಮತವಾದ ಸ್ವಾಯಂಭುವ ಮನುವಿನ ವಂಶ ಎಂದು ವಿಶೇಷಣಗಳಲ್ಲಿ ವಿಶೇಷವಿದೆ.

ಮನ್ವಂತರದಲ್ಲಿ ಮಹಾಮಹಿಮನಾದ ಶ್ರೀಹರಿಯ ಅವತಾರಗಳನ್ನೂ ಲೀಲೆಗಳನ್ನೂ ವರ್ಣನೆಮಾಡಿದ್ದಾರೆಯೋ ಅವೆಲ್ಲವನ್ನೂ ಕಥಾಶ್ರವಣ ಮಾಡುತ್ತಿರುವ ನಮಗೆ ತಿಳಿಸೋಣವಾಗಲಿ. ಜ್ಞಾನಿಸಾರ್ವಭೌಮರೇ! ವಿಶ್ವಭಾವನನಾದ ಶ್ರೀಭಗವಂತನು ಕಳೆದ ಮನ್ವಂತರಗಳಲ್ಲಿ ಯಾವ ಯಾವ ಲೀಲೆಗಳನ್ನು ಎಸಗಿದನು? ಈ ಮನ್ವಂತರದಲ್ಲಿ ಯಾವ ಯಾವ ಲೀಲೆಗಳನ್ನು ಮಾಡುತ್ತಿದ್ದಾನೆ? ಮುಂದೆ ಬರುವ ಮನ್ವಂತರಗಳಲ್ಲಿ ಆತನು ಎಸಗುವ ಲೀಲೆಗಳಾವುವು?–ಎಲ್ಲವನ್ನೂ ಈಗ ನನಗೆ ತಿಳಿಸಿರಿ.”

ಶ್ರೀಶುಕಮುನಿಗಳು ಆತನ ಪ್ರಾರ್ಥನೆಗೆ ಓಗೊಡುತ್ತಾ ಹೀಗೆಂದರು :

“ಮಹಾರಾಜ! ಈ ಕಲ್ಪದಲ್ಲಿ ಸ್ವಾಯಂಭುವಮನ್ವಂತರವೇ ಮುಂತಾದ ಆರು ಮನ್ವಂತರಗಳು ಕಳೆದುಹೋಗಿವೆ. ಅವುಗಳಲ್ಲಿ ದೇವತೆಗಳೇ ಮುಂತಾದವರ ಉತ್ಪತ್ತಿಯು ಆಗಿರುವ ಮೊದಲನೆಯ ಮನ್ವಂತರವನ್ನು ನಿನಗೆ ವರ್ಣಿಸಿಯಾಗಿದೆ. ಸ್ವಾಯಂಭುವಮನುವಿನ ಪುತ್ರಿಯರಾದ ಆಕೂತಿ ಮತ್ತು ದೇವಹೂತಿಯರಲ್ಲಿ ಶ್ರೀಭಗವಂತನು ಧರ್ಮವನ್ನೂ ಮತ್ತು ಜ್ಞಾನವನ್ನೂ ಉಪದೇಶ ಮಾಡುವುದಕ್ಕೋಸ್ಕರ ಪುತ್ರರೂಪದಲ್ಲಿ ಅವತಾರಮಾಡಿದನು. ಅವುಗಳಲ್ಲಿ ದೇವಹೂತಿಯಲ್ಲಿ ಜನಿಸಿ ಜ್ಞಾನೋಪದೇಶಮಾಡಿದ ಕಪಿಲಾವತಾರವನ್ನು (ಮೂರನೆಯ ಸ್ಕಂಧದಲ್ಲಿ) ವರ್ಣಿಸಿಯಾಗಿದೆ. ಈಗ ಶ್ರೀಭಗವಂತನು ಆಕೂತಿಯ ಗರ್ಭದಲ್ಲಿ ಯಜ್ಞಪುರುಷ–ಎಂಬ ಹೆಸರಿನಲ್ಲಿ ಅವತರಿಸಿ ಮಾಡಿದ ಲೀಲೆಗಳನ್ನು ವರ್ಣಿಸುತ್ತೇನೆ ; ಕೇಳು.

ಎಲೈ ರಾಜೇಂದ್ರನೇ! ಪ್ರಭುವಾದ ಸ್ವಾಯಂಭುವಮನುವು ಸಮಸ್ತಕಾಮನೆಗಳ ಮತ್ತು ಭೋಗಗಳ ವಿಷಯದಲ್ಲಿ ವಿರಕ್ತನಾಗಿ ತನ್ನ ಧರ್ಮಪತ್ನಿಯಾದ ಶತರೂಪಾದೇವಿಯೊಡನೆ ತಪಸ್ಸುಮಾಡಲು ಅರಣ್ಯಕ್ಕೆ ತೆರಳಿದನು. ಅಲ್ಲಿ ಆತನು ಸುನಂದಾನದಿಯ ತೀರದಲ್ಲಿ ಭೂಮಿಯ ಮೇಲೆ ಒಂಟಿಕಾಲಿನಲ್ಲಿ ನಿಂತುಕೊಂಡು ನೂರು ವರ್ಷಗಳಕಾಲ ತೀವ್ರವಾದ ತಪಸ್ಸನ್ನಾಚರಿಸಿದನು. ಆ ಸಮಯದಲ್ಲಿ ಆತನು ಪರಮಾತ್ಮನನ್ನು ಹೀಗೆ ಸ್ತುತಿಸಿದನು. (ಶ್ಲೋಕ 2-8)

ಸ್ವಾಯಂಭುವಮನುವು ಮಾಡಿದ ಪರಮಾತ್ಮಸ್ತುತಿ :

ಯೇನ ಚೇತಯತೇ ವಿಶ್ವಂ ವಿಶ್ವಂ ಚೇತಯತೇ ನ ಯಮ್ ।
ಯೋ ಜಾಗರ್ತಿ ಶಯಾನೇಽಸ್ಮಿನ್ನಾಯಂ ತಂ ವೇದ ವೇದ ಸಃ ॥೯॥

"ವಿಶ್ವಕ್ಕೆಲ್ಲಾ ಚೈತನ್ಯವನ್ನು ತುಂಬಿರುವ ಪರಮಚೈತನ್ಯಸ್ವರೂಪ ನಿವನು. ಆದರೆ ವಿಶ್ವವು ಇವನಿಗೆ ಚೈತನ್ಯವನ್ನು ನೀಡಲಾರದು. ಆ ವಿಶ್ವವೆಲ್ಲವೂ ನಿದ್ರಿಸುತ್ತಿರುವ ಪ್ರಳಯಕಾಲದಲ್ಲಿಯೂ ಎಚ್ಚರವಾಗಿರು ವವನು ಈತ. ವಿಶ್ವವು ಈತನನ್ನು ತಿಳಿಯಲಾರದು. ಆದರೆ ಅದನ್ನು ಪೂರ್ಣವಾಗಿ ತಿಳಿದಿರುವವನಿವನು.

ಆತ್ಮಾವಾಸ್ಯಮಿದಂ ವಿಶ್ವಂ ಯತ್ಕಿಂಚಿಜ್ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಞ್ಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್ ॥೧೦॥

ಈ ಇಡೀ ವಿಶ್ವದಲ್ಲಿಯೂ ಮತ್ತು ಅದರಲ್ಲಿರುವ ಎಲ್ಲ ಚರಾಚರ ಪ್ರಾಣಿಗಳಲ್ಲಿಯೂ ನಿವಾಸಮಾಡುತ್ತಾ ಅವುಗಳಿಗೆ ವಾಸಸ್ಥಾನವೂ ಆಗಿದ್ದಾನೆ. ಎಲ್ಲದರಲ್ಲೂ ಹಾಸುಹೊಕ್ಕಾಗಿ ಸೇರಿದ್ದಾನೆ. ಆದುದರಿಂದ ಈ ಜಗತ್ತಿನ ಯಾವುದರಲ್ಲೂ ಮೋಹವನ್ನಿಡದೆ ತ್ಯಾಗಮಾಡಿ ಭೋಗಿಸಬೇಕು. ಆಸೆಯನ್ನು ತೊರೆಯಬೇಕು. ಯಾರ ಹಣಕ್ಕೂ ಆಸೆಪಡಬಾರದು.*

---

* ಈ ಶ್ಲೋಕವು ಈಶಾವಾಸ್ಯೋಪನಿಷತ್ತಿನ ಮೊದಲನೆಯ ಋಕ್ಕಿನ ರೂಪದಲ್ಲಿ ಹೀಗೆಯೇ ಇದೆ. 'ಆತ್ಮಾ' ಎಂಬ ಪದದ ಬದಲಿಗೆ ಆ ಉಪನಿಷತ್ತಿನಲ್ಲಿ 'ಈಶಾ' ಎಂಬ ಪದವಿದೆ. ಅಷ್ಟೇ ವ್ಯತ್ಯಾಸ. ಆ ಋಕ್ಕಿಗೆ ಆಚಾರ್ಯರ ಭಾಷ್ಯಗಳ ಅಭಿಪ್ರಾಯದಂತೆ ಭಾವಾರ್ಥವನ್ನು ಹೀಗೆ ಗಮನಿಸಬಹುದು :

ಈಶ ಎಂದರೆ ಪರಮೇಶ್ವರ, ಪರಮಾತ್ಮ. ಎಲ್ಲರಿಗೂ ಪ್ರತ್ಯಗಾತ್ಮನಾಗಿರುವವನು. ಸಹಜವಾಗಿ ಸುಗಂಧಿಯಾದ ಶ್ರೀಗಂಧ, ಅಗರು ಮುಂತಾದುವುಗಳಲ್ಲಿ ನೀರು ಮುಂತಾದುವುಗಳ ಸಂಬಂಧದಿಂದ ದುರ್ವಾಸನೆ ಸೇರಿಕೊಂಡಿರುತ್ತವೆ. ಶ್ರೀಗಂಧ ಅಗರುಗಳನ್ನು ಚೆನ್ನಾಗಿ ತೇಯ್ದರೆ ಅದರಿಂದ ಅವುಗಳ ಸಹಜವಾದ ಸುಗಂಧವು ಹೊರಹೊಮ್ಮುತ್ತದೆ. ಉಪಾಧಿವಶದಿಂದ ಸೇರಿಕೊಂಡಿದ್ದ ದುರ್ಗಂಧವನ್ನು ಆ ಸಹಜವಾದ ಸುಗಂಧದಿಂದ ಆಚ್ಛಾದನೆ ಮಾಡುವಂತೆ ಮಿಥ್ಯಾರೂಪವಾಗಿರುವ ಈ ಜಗತ್ತಿನಲ್ಲಿ ಏನೇನಿದೆಯೋ ಅವೆಲ್ಲವನ್ನೂ ಪಾರಮಾರ್ಥಿಕಸತ್ಯವಾದ ಪರಮಾತ್ಮನಿಂದ ಆಚ್ಛಾದನೆ ಮಾಡಬೇಕು. ವಿಕಾರಹೊಂದುತ್ತಿರುವ ದ್ವೈತರೂಪವಾದ ಈ ಜಗತ್ತನ್ನು ಪ್ರತ್ಯಗಾತ್ಮನೂ ಸತ್ಯಸ್ವರೂಪನೂ ಆದ ಪರಮಾತ್ಮನಿಂದ ಆಚ್ಛಾದನೆ

ಯಂ ನ ಪಶ್ಯತಿ ಪಶ್ಯನ್ತಂ ಚಕ್ಷುರ್ಯಸ್ಯ ನ ರಿಷ್ಯತಿ ।
ತಂ ಭೂತನಿಲಯಂ ದೇವಂ ಸುಪರ್ಣಮುಪಧಾವತ ॥೧೧॥

ಎಲ್ಲವನ್ನೂ ಯಾವಾಗಲೂ ನೋಡುತ್ತಿರುವ ಸಾಕ್ಷಿಚೈತನ್ಯನು ಈತ. ಆದರೆ ಈತನನ್ನು ಅದಾವುದೂ ನೋಡಲಾರದು. ಎಂದೆಂದಿಗೂ ಕುಂಠಿತವಾಗದಿರುವ ದೃಷ್ಟಿಯುಳ್ಳವನಿವನು. ಹೀಗೆ ಎಲ್ಲ ಭೂತಗಳಿಗೂ ನಿವಾಸಸ್ಥಾನವಾಗಿ ಎಲ್ಲರ ಹೃದಯದಲ್ಲೂ ವಾಸಮಾಡುತ್ತಿರುವ ಸ್ವಯಂ ಪ್ರಕಾಶನಾದ ಈ ಸುಪರ್ಣನನ್ನು ಶರಣುಹೊಂದಿರಿ.

ನ ಯಸ್ಯಾದ್ಯನ್ತೌ ಮಧ್ಯಂ ಚ ಸ್ವಃ ಪರೋ ನಾನ್ತರಂ ಬಹಿಃ ।
ವಿಶ್ವಸ್ಯಾಮೂನಿ ಯದ್ಯಸ್ಮಾದ್ವಿಶ್ವಂ ಚ ತದೃತಂ ಮಹತ್ ॥೧೨॥

ಈತನಿಗೆ ಆದಿಯಿಲ್ಲ. ಅಂತ್ಯವಿಲ್ಲ. ಮಧ್ಯವೂ ಇಲ್ಲವು ; ಸ್ವಕೀಯ ವಾಗಲೀ, ಪರಕೀಯವಾಗಲೀ–ಯಾವುದೂ ಇಲ್ಲವು. ಹೊರಗಿನದಾಗಲೀ, ಒಳಗಿನದಾಗಲೀ ಯಾವುದೂ ಇಲ್ಲವು. ಆದರೆ ವಿಶ್ವದಲ್ಲಿ ಎಲ್ಲಕ್ಕೂ ಆದಿಯೂ ಅಂತವೂ ಮಧ್ಯವೂ ಆಗಿ ಸ್ವಕೀಯ, ಪರಕೀಯ, ಹೊರಗಿನದು ಮತ್ತು ಒಳಗಿನದು ಎಲ್ಲವೂ ಈತನೇ ಆಗಿದ್ದಾನೆ. ಎಲ್ಲಕ್ಕೂ ಕಾರಣವಾಗಿರುವ ಮಹಾಸತ್ಯಸ್ವರೂಪನು ಈತನೇ.

ಮಾಡಿ ತ್ಯಜಿಸಬೇಕು. ಹೀಗೆ ತ್ಯಾಗಮಾಡಿ ನಿನ್ನನ್ನು ರಕ್ಷಿಸಿಕೋ. (ಭುಂಜೀಥಾಃ = ಪಾಲಯೇಥಾಃ) ಹೀಗೆ ಇಚ್ಛೆಗಳನ್ನು ತ್ಯಾಗಮಾಡಿದ ನೀನು ಇತರರದ್ದು ಅಥವಾ ನಿನ್ನದು ಎಂದು ಭಾವಿಸಲ್ಪಟ್ಟಿರುವ ಯಾವ ಧನದಲ್ಲಿಯೂ ಆಸೆಪಡಬೇಡ. (ಅಥವಾ ಆಸೆಪಡಲೇಬೇಡ.) ಏಕೆಂದರೆ : ಹಣ ಎಂಬುದು ವಾಸ್ತವವಾಗಿ ಯಾರಿಗೂ ಸೇರಿದ್ದಲ್ಲ. ಅದರಲ್ಲಿ ಏಕೆ ಆಸೆಯನ್ನಿಟ್ಟುಕೊಳ್ಳಬೇಕು ? ಇದೆಲ್ಲವೂ ಆತ್ಮನೇ–ಎಂದು ಈಶ್ವರ ಭಾವನೆಯಿಂದ ಎಲ್ಲವನ್ನೂ ತ್ಯಜಿಸಬೇಕು. ಮಿಥ್ಯಾವಿಷಯವಾದ ಆಸೆಯನ್ನು ಇಟ್ಟುಕೊಳ್ಳಲೇಬಾರದು. 'ಕಸ್ಯ ಸ್ವಿದ್ಧನಂ ಕಸ್ಯಚಿತ್ ಪರಸ್ಯ ಸ್ವಸ್ಯ ವಾ ಧನಂ ಮಾ ಕಾಂಕ್ಷೀಃ ಅಥವಾ ಮಾ ಗೃಧಃ ಕಸ್ಮಾತ್? ಕಸ್ಯಸ್ವಿತ್ ಧನಂ?' ಯಥಾ ಚಂದನಾಗರ್ವಾದೇಃ ಉದಕಾದಿ ಸಂಬಂಧಜ ಕ್ಲೇದಾದಿಜಮೌಪಾಧಿಕಂ ದೌರ್ಗಂಧ್ಯಂ ತತ್ಸ್ವರೂಪ ನಿರ್ಘರ್ಷಣೇನ ಆಚ್ಛಾದ್ಯತೇ ಸ್ವೇನ ಪಾರಮಾರ್ಥಿಕೇನ ಗಂಧೇನ ತದ್ವದೇವ ಹಿ ಸ್ವಾತ್ಮನ್ಯಧ್ಯಸ್ತಂ ಸ್ವಾಭಾವಿಕಂ ದ್ವೈತರೂಪಂ ವಿಕಾರಜಾತಂ ಪರಮಾರ್ಥ ಸತ್ಯಾತ್ಮಭಾವನಯಾ ತ್ಯಕ್ತಂ ಸ್ಯಾತ್.

(ಶ್ರೀಶಂಕರ ಭಾಷ್ಯ)

ಜೀವಾತ್ಮನು ಸ್ವತಂತ್ರನು ಇತ್ಯಾದಿ ಭ್ರಮೆಯನ್ನು ಹೋಗಲಾಡಿಸಿ ಎಲ್ಲವೂ

ಸ ವಿಶ್ವಕಾಯಃ ಪುರುಹೂತ ಈಶಃ
ಸತ್ಯಃ ಸ್ವಯಂಜ್ಯೋತಿರಜಃ ಪುರಾಣಃ ।
ಧತ್ತೇऽಸ್ಯ ಜನ್ಮಾದ್ಯಜಯಾತ್ಮಶಕ್ತ್ಯಾ
ತಾಂ ವಿದ್ಯಯೋದಸ್ಯ ನಿರೀಹ ಆಸ್ತೇ ॥೧೩॥

ಹೀಗೆ ವಿಶ್ವಶರೀರಿಯಾಗಿರುವವನು ಈತ. ಅನಂತನಾಮಧೇಯಗಳುಳ್ಳವನು. ನಾನಾನಾಮಗಳಿಂದ ಮತ್ತೆ ಮತ್ತೆ ಕರೆಯಲ್ಪಡುತ್ತಿರುವವನು. ಸರ್ವೇಶ್ವರನು. ಸತ್ಯಸ್ವರೂಪಿ. ಸ್ವಯಂಪ್ರಕಾಶಕನು. ಜನ್ಮರಹಿತನಾಗಿರುವ ಪುರಾಣಪುರುಷನು. ತನ್ನ ಅನಾದಿಯಾದ ಆತ್ಮಶಕ್ತಿಯಿಂದ ಈ ಜಗತ್ತಿನ ಸೃಷ್ಟಿ ಮುಂತಾದುವುಗಳನ್ನೂ ಮಾಡುತ್ತಾ ತನ್ನ ಜ್ಞಾನಬಲದಿಂದ ಆ ಮಾಯಾಶಕ್ತಿಯನ್ನು ದೂರಸರಿಸಿ ಕರ್ಮರಹಿತನಾಗಿರುವ ನಿರ್ಲಿಪ್ತನು ಈತನು. (ಅಕರ್ಮಭಾವವನ್ನು ಪಡೆಯುವುದೇ ಎಲ್ಲರ ಗುರಿಯಾಗಿದೆ.)

ಅಥಾಗ್ರೇ ಋಷಯಃ ಕರ್ಮಾಣೀಹನ್ತೇऽಕರ್ಮಹೇತವೇ ।
ಈಹಮಾನೋ ಹಿ ಪುರುಷಃ ಪ್ರಾಯೋऽನೀಹಾಂ ಪ್ರಪದ್ಯತೇ ॥೧೪॥

ಆದುದರಿಂದ ಶ್ರೇಷ್ಠರಾದ ಋಷಿ-ಮುನಿಗಳು ಈ ಅಕರ್ಮಭಾವವನ್ನು (ಮೋಕ್ಷವನ್ನು) ಪಡೆಯುವುದಕ್ಕೋಸ್ಕರವೇ ಕರ್ಮಯೋಗ ರೂಪ

ಪರಮಾತ್ಮಾಧೀನ–ಎಂಬುದನ್ನು ತಿಳಿಸಿ ವೈರಾಗ್ಯವನ್ನು ಬೋಧಿಸುವ ಋಕ್ಕು ಇದು. ಈ ಜಗತ್ತಿನಲ್ಲಿ ಚಿದಚಿದಾತ್ಮಕವಾಗಿ ಏನೇನು ಇದೆಯೋ ಅದೆಲ್ಲದರಲ್ಲೂ ಸರ್ವೇಶ್ವರನಾದ ಪುರುಷೋತ್ತಮನು ವ್ಯಾಪಿಸಿದ್ದಾನೆ. ಅಥವಾ ಎಲ್ಲಕ್ಕೂ ಆಧಾರವಾಗಿರುವ ತನ್ನಲ್ಲಿಯೇ ಅವನು ಇದೆಲ್ಲವನ್ನೂ ನೆಲೆಗೊಳಿಸಿಕೊಳ್ಳಬೇಕಾಗಿದೆ. **'ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ । ಅತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ ॥'** ಭೋಗ ಮತ್ತು ಭೋಗ್ಯರೂಪವಾಗಿ ಈ ಲೋಕಗಳಲ್ಲಿ ಏನೇನಿದೆಯೋ ಅದೆಲ್ಲವೂ ಭಗವದಾತ್ಮಕವೇ. ಭಗವದಾತ್ಮಕವಲ್ಲದೇ ಇರುವುದು ಯಾವುದೂ ಇಲ್ಲವು. **'ಇಂದ್ರಿಯಾಣಿ ಮನೋಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ । ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞಮೇವ ಚ ॥'** ಈ ಜಗತ್ತಿನಲ್ಲಿ ಭೋಗ್ಯತಾಭ್ರಮೆಯನ್ನು ಬಿಟ್ಟು ಇದು ದೋಷದಿಂದ ತುಂಬಿದೆಯೆಂದು ತಿಳಿದು, ಇದರಲ್ಲಿ ನಿಷಿದ್ಧವಲ್ಲದೇ ಇರುವುದನ್ನು ಮಾತ್ರ ಸೇವಿಸಬೇಕು. ದೇಹಧಾರಣೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಸೇವಿಸಬೇಕು. ಅಥವಾ ಸರ್ವರಿಗೂ ಆವಾಸವೆಂದು ಪ್ರಕೃತದಲ್ಲಿ ಹೇಳಲ್ಪಟ್ಟಿರುವ ನಿರತಿಶಯಭೋಗ್ಯನಾದ ಆ ಪರಮಾತ್ಮನನ್ನು

ದಲ್ಲಿ ಕರ್ಮಗಳನ್ನು ಆಚರಿಸುತ್ತಾರೆ. ಕರ್ಮಮಾಡುವ ಯಾವ ಪುರುಷನೂ ಸಾಮಾನ್ಯವಾಗಿ ಕರ್ಮಗಳಲ್ಲಿಯೇ ಸಿಲುಕಿರಬೇಕೆಂದು ಆಶಿಸುವುದಿಲ್ಲ. ಕೊನೆಗೆ ಕರ್ಮಗಳಿಂದ ಬಿಡುಗಡೆಹೊಂದಿ ಅಕರ್ಮಸ್ಥಿತಿಯನ್ನು ಹೊಂದುವುದಕ್ಕೋಸ್ಕರವೇ ಪ್ರಯತ್ನಮಾಡುತ್ತಾನೆ.

ಈಹತೇ ಭಗವಾನೀಶೋ ನ ಹಿ ತತ್ರ ವಿಷಜ್ಜತೇ ।
ಆತ್ಮಲಾಭೇನ ಪೂರ್ಣಾರ್ಥೋ ನಾವಸೀದನ್ತಿ ಯೇಽನು ತಮ್ ॥೧೫॥

ಸರ್ವಶಕ್ತನಾದ ಭಗವಂತನೂ ಕೂಡ ಕರ್ಮಗಳನ್ನು ಆಚರಿಸುತ್ತಾನೆ. ಆದರೆ ಅವುಗಳಲ್ಲಿ ಅಂಟಿಕೊಳ್ಳುವುದಿಲ್ಲ. ಏಕೆಂದರೆ ಆತನು ಆತ್ಮಲಾಭದಿಂದ ಸಂಪೂರ್ಣಕಾಮನಾಗಿದ್ದಾನೆ. ಆ ಭಗವಂತನನ್ನೇ ಅನುಸರಿಸುತ್ತಾ ಯಾರು ಕರ್ಮಗಳನ್ನು ಆಚರಿಸುತ್ತಿದ್ದರೂ ಅವುಗಳಲ್ಲಿ ಅನಾಸಕ್ತರಾಗಿರುತ್ತಾರೆಯೋ ಅಂತಹ ಕರ್ಮಯೋಗಿಗಳಿಗೆ ಅಳಿವಿಲ್ಲ.

ತಮೀಹಮಾನಂ ನಿರಹಙ್ಕೃತಂ ಬುಧಂ
ನಿರಾಶಿಷಂ ಪೂರ್ಣಮನನ್ಯಚೋದಿತಮ್ ।
ನೄಞ್ಶಿಕ್ಷಯನ್ತಂ ನಿಜವರ್ತ್ಮಸಂಸ್ಥಿತಂ
ಪ್ರಭುಂ ಪ್ರಪದ್ಯೇಽಖಿಲಧರ್ಮಭಾವನಮ್ ॥೧೬॥

ಹೀಗೆ ಅಹಂಕಾರದ ಲವಲೇಶವೂ ಇಲ್ಲದೆ ಕರ್ಮಗಳನ್ನು ಆಚರಿಸು

ಮಾತ್ರ ಅನುಭವಿಸಬೇಕು. ಯಾವನಾದರೂ ಬಂಧುವಾಗಿರಲಿ ಅಥವಾ ಬಂಧುವಲ್ಲದವನಾಗಿರಲಿ ಯಾವನ ಹಣದ ವಿಷಯದಲ್ಲೂ ಆಸೆಪಡಬಾರದು. **'ಶತಮತಿರುಪಯಾತಿ ಯೋಽರ್ಥತೃಷ್ಣಾಂ ಪುರುಷಪಶುರ್ನ ಸ ವಾಸುದೇವಭಕ್ತಃ'** ಎಂಬಂತೆ ಹಣದ ಲೋಭವುಳ್ಳವನು ಪುರುಷಪಶುವೆನಿಸುತ್ತಾನೆ. ಆತನು ವಾಸುದೇವಭಕ್ತನೆನಿಸಲಾರನು. ಈ ವೈರಾಗ್ಯವು ಪರಮಾತ್ಮನನ್ನು ಬಿಟ್ಟು ಉಳಿದುವುಗಳ ವಿಷಯದಲ್ಲಿ ಮಾತ್ರ ಇರಬೇಕು. **'ಪರಮಾತ್ಮನಿ ಯೋ ರಕ್ತಃ ವಿರಕ್ತೋಽಪರಮಾತ್ಮನಿ'** (ವೇದಾಂತದೇಶಿಕರ ಭಾಷ್ಯ)

ಈ ಪ್ರಕೃತಿಯಲ್ಲಿ ಎಲ್ಲದರ ಪ್ರವೃತ್ತಿಯೂ ಪರಮಾತ್ಮನಿಗೆ ಅಧೀನವಾಗಿದೆ. ಎಲ್ಲವೂ ಆತನಿಗೆ ಸೇರಿದ್ದು. ಆತನು ಏನನ್ನು ಕೊಡುತ್ತಾನೆಯೋ ಅದನ್ನು ಮಾತ್ರವೇ ಭೋಗಿಸಿರಿ. ಆತನನ್ನು ಬಿಟ್ಟು ಬೇರೆ ಯಾರನ್ನೂ ಬೇಡಬಾರದು. **'ತದಧೀನ ಪ್ರವೃತ್ತಿತ್ವಾತ್ ತದೀಯಂ ಸರ್ವಮೇವ ತತ್ । ತದ್ದತ್ತೇನೈವ ಭುಂಜೀಥಾಃ ತತೋ ನಾನ್ಯಂ ಪ್ರಯಾಚಯೇತ್ ॥'** (ಮಧ್ವಭಾಷ್ಯ)

ತ್ತಾನೆ ಸರ್ವಜ್ಞನಾದ ಜ್ಞಾನಸ್ವರೂಪಿಯಾದ ಈಶ್ವರ. ಅವನಿಗೆ ಯಾವ ಆಶೆಯೂ ಇಲ್ಲವು. ಆತನು ಪರಿಪೂರ್ಣನು. ಬೇರಾವುದರಿಂದಲೂ ಪ್ರೇರಿತನಾಗದೆ ತನ್ನ ಇಚ್ಛೆಯಿಂದಲೇ ಕರ್ಮಗಳನ್ನು ಮಾಡುತ್ತಾನೆ. ತಾನು ಮಾಡಿದ ಧರ್ಮಮರ್ಯಾದೆಯಲ್ಲಿ ನೆಲೆಸಿ, ಅದನ್ನು ಮೀರದೇ ಕರ್ಮಗಳನ್ನಾಚರಿಸುತ್ತಾ ಮನುಷ್ಯರಿಗೆ ಶಿಕ್ಷಣವನ್ನು ನೀಡುತ್ತಿದ್ದಾನೆ. ಹೀಗೆ ಸರ್ವಧರ್ಮಗಳಿಗೂ ಪ್ರವರ್ತಕನಾಗಿ ಅವುಗಳಿಗೆ ಜೀವನಪ್ರದನಾಗಿರುವ ಪ್ರಭುವನ್ನು ಶರಣುಹೊಂದುತ್ತೇನೆ.”

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಎಲೈ ನೃಪತಿಯೇ! ಸ್ವಾಯಂಭುವಮನುವು ಈ ಮಂತ್ರೋಪನಿಷ ತ್ತನ್ನು ಹೇಳುತ್ತಾ ಸಮಾಧಿಯಲ್ಲಿ ಇದ್ದುದನ್ನು ಕಂಡು ಅಸುರರೂ ಮತ್ತು ರಾಕ್ಷಸರೂ ಹಸಿವಿನಿಂದ ಆತನನ್ನು ತಿಂದುಹಾಕಿಬಿಡಬೇಕೆಂದು ಆತನ ಬಳಿಗೆ ಓಡಿಬಂದರು. ಅವರ ಈ ನಿಶ್ಚಯವನ್ನು ತಿಳಿದ ಅಂತರ್ಯಾಮಿಯೂ ಸರ್ವವ್ಯಾಪಕನೂ ಆದ ಯಜ್ಞಪುರುಷನಾದ ಶ್ರೀಹರಿಯು ತನ್ನ ಪುತ್ರರಾದ ಯಾಮರೆಂಬ ದೇವತೆಗಳೊಡನೆ ಅಲ್ಲಿಗೆ ಬಂದು ಅವರನ್ನು ಸಂಹಾರಮಾಡಿ (ಇಂದ್ರಪದವಿಯಲ್ಲಿ ನೆಲೆಗೊಂಡು) ಸ್ವರ್ಗವನ್ನು ಆಳತೊಡಗಿದನು.

ಪರೀಕ್ಷಿತನೇ! ಸ್ವಾರೋಚಿಷ ಎನ್ನುವವನು ಎರಡನೆಯ ಮನುವು. ಆತನು ಅಗ್ನಿದೇವನ ಪುತ್ರನು. ದ್ಯುಮಾನ್, ಸುಷೇಣ ಮತ್ತು ರೋಚಿಷ್ಮಾನ್ ಮುಂತಾದವರು ಆತನ ಪುತ್ರರಾಗಿದ್ದರು. ಈ ಮನ್ವಂತರದಲ್ಲಿ ಇಂದ್ರನಿಗೆ ರೋಚನ ಎಂದು ಹೆಸರು ಮತ್ತು ತುಷಿತರೇ ಮುಂತಾದವರು ಮುಖ್ಯರಾದ ದೇವಗಣಗಳು. ಊರ್ಜ, ಸ್ತಂಭನೇ ಮುಂತಾದವರು ವೇದವಾದಿಗಳಾದ ಸಪ್ತರ್ಷಿಗಣಗಳಾಗಿದ್ದರು. ವೇದಶಿರಾಃ ಎಂಬ ಹೆಸರಿನ ಋಷಿಗೆ ತುಷಿತಾ ಎಂಬಾಕೆಯು ಪತ್ನಿಯಾಗಿದ್ದಳು. ಆಕೆಯ ಗರ್ಭದಲ್ಲಿ ಅವತಾರಮಾಡಿ ಶ್ರೀಭಗವಂತನು 'ವಿಭು' ಎಂಬ ನಾಮಧೇಯದಿಂದ ಪ್ರಸಿದ್ಧನಾದನು. ಈ ವಿಭುವು ಜೀವಮಾನಪೂರ್ತಿ ನೈಷ್ಠಿಕಬ್ರಹ್ಮಚಾರಿಯಾಗಿಯೇ ಬಾಳಿದನು. ಈತನ ಆಚರಣೆಯಿಂದಲೇ ಶಿಕ್ಷಣ ಪಡೆದು ಎಂಬತ್ತಾರು

ಸಾವಿರ ಮಂದಿ ವ್ರತನಿಷ್ಠರಾದ ಋಷಿಗಳೂ ಕುಮಾರಬ್ರಹ್ಮಚಾರಿಗಳಾಗಿ ಬ್ರಹ್ಮಚರ್ಯವ್ರತವನ್ನು ಪಾಲನೆಮಾಡಿದರು. (ಶ್ಲೋಕ 17-22)

ಉತ್ತಮ ಎನ್ನುವವನು ಮನುಗಳಲ್ಲಿ ಮೂರನೆಯವನು. ಈತನು ಪ್ರಿಯವ್ರತಮಹಾರಾಜನ ಪುತ್ರನು. ಪವನ, ಸೃಂಜಯ, ಯಜ್ಞಹೋತ್ರ ಮುಂತಾದವರು ಈತನಿಗೆ ಪುತ್ರರಾಗಿದ್ದರು. ಈ ಮನ್ವಂತರದಲ್ಲಿ ವಸಿಷ್ಠರ ಪ್ರಮದನೇ ಮುಂತಾದ ಏಳು ಮಂದಿ ಪುತ್ರರು ಸಪ್ತರ್ಷಿಗಳಾಗಿದ್ದರು. ಸತ್ಯ, ವೇದಶ್ರುತ ಮತ್ತು ಭದ್ರ–ಎಂಬುವರು ದೇವತೆಗಳ ಮುಖ್ಯವಾದ ಗಣಗಳಾದರು. ಇಂದ್ರನಿಗೆ ಸತ್ಯಜಿತ್ ಎಂಬ ಹೆಸರಿತ್ತು. ಆ ಸಮಯದಲ್ಲಿ ಧರ್ಮನ ಪತ್ನಿಯಾದ 'ಸೂನೃತಾ' ಎಂಬಾಕೆಯ ಗರ್ಭದಲ್ಲಿ ಶ್ರೀಭಗವಂತನು ಸತ್ಯಸೇನನೆಂಬ ಹೆಸರಿನಿಂದ ಅವತಾರಮಾಡಿದನು. ಆಗ ಆತನೊಡನೆ 'ಸತ್ಯವ್ರತ'ರೆಂಬ ಹೆಸರಿನ ದೇವತೆಗಳ ಗಣಗಳೂ ಇದ್ದುವು. ಈ ಸಮಯ ದಲ್ಲಿ ಶ್ರೀಭಗವಂತನು ಸತ್ಯಜಿತ್ ಎಂಬ ನಾಮಧೇಯವುಳ್ಳ ಇಂದ್ರನಿಗೆ ಗೆಳೆಯನಾಗಿದ್ದು ಅಸತ್ಯಪರಾಯಣರಾಗಿ ದುಷ್ಟವಾದ ಶೀಲಸ್ವಭಾವವುಳ್ಳವ ರಾಗಿ ದುಷ್ಟರಾಗಿದ್ದ ಯಕ್ಷರನ್ನೂ, ರಾಕ್ಷಸರನ್ನೂ ಮತ್ತು ಜೀವದ್ರೋಹಿ ಗಳಾದ ಭೂತಗಣಗಳನ್ನೂ ಸಂಹಾರಮಾಡಿದನು.

ತಾಮಸ ಎಂಬ ಹೆಸರಿನವನು ಮನುಗಳಲ್ಲಿ ನಾಲ್ಕನೆಯವನು. ಈತನು ಮೂರನೆಯ ಮನುವಾಗಿದ್ದ ಉತ್ತಮನ ಸ್ವಂತ ಸಹೋದರನು. ಈತನಿಗೆ ಪೃಥು, ಖ್ಯಾತಿ, ನರ ಮತ್ತು ಕೇತುವೇ ಮುಂತಾದ ಹತ್ತು ಮಂದಿ ಪುತ್ರರಿದ್ದರು. ಸತ್ಯಕ, ಹರಿ ಮತ್ತು ವೀರ ಎಂಬುವರು ದೇವತೆಗಳಲ್ಲಿ ಪ್ರಧಾನವಾದ ಗಣವಾಗಿದ್ದರು. ಇಂದ್ರನಿಗೆ ಆಗ 'ತ್ರಿಶಿಖ' ನೆಂಬ ಹೆಸರು. ಜ್ಯೋತಿರ್ಧಾಮನೇ ಮುಂತಾದ ಏಳು ಮಂದಿ ಈ ಮನ್ವಂತರದ ಸಪ್ತರ್ಷಿಗಳು. ಈ ತಾಮಸವೆಂಬ ಮನ್ವಂತರದಲ್ಲಿ ವಿಧೃತಿಗೆ ಪುತ್ರರಾದ ವೈಧೃತಿ ಮುಂತಾದ ಇತರ ದೇವತೆಗಳೂ ಪ್ರಕಟಗೊಂಡರು. ಇವರು ಸಮಯದ ಪ್ರಭಾವದಿಂದ ನಷ್ಟಪ್ರಾಯವಾಗಿಬಿಟ್ಟಿದ್ದ ವೇದಗಳನ್ನು ತಮ್ಮ ತೇಜಸ್ಸಿನಿಂದ ವಿಶೇಷವಾಗಿ ರಕ್ಷಣೆಮಾಡಿದರು. ಆದ್ದರಿಂದ ಇವರು 'ವೈಧೃತಿ' ಎನಿಸಿದರು. ಈ ಮನ್ವಂತರದಲ್ಲಿ ಹರಿಮೇಧಸನೆಂಬ ಋಷಿಯ ಪತ್ನಿ ಯಾಗಿದ್ದ ಹರಿಣಿಯ ಗರ್ಭದಲ್ಲಿ 'ಹರಿ' ಎಂಬ ರೂಪದಿಂದ ಶ್ರೀಭಗವಂತನು

ಅವತಾರಮಾಡಿದನು. ಈ ಅವತಾರದಲ್ಲಿಯೇ ಶ್ರೀಭಗವಂತನು ಗಜರಾಜನನ್ನು ಮೊಸಳೆಯ ಹಿಡಿತದಿಂದ ತಪ್ಪಿಸಿ ಕಾಪಾಡಿದನು." (ಶ್ಲೋಕ 23-29)

ಶ್ರೀಶುಕರ ಈ ಹೇಳಿಕೆಯನ್ನು ಕೇಳಿ ಪರೀಕ್ಷಿದ್ರಾಜನು–"ಎಲೈ ಮುನಿವರ್ಯರೇ! ಶ್ರೀಭಗವಂತನು ಗಜರಾಜನನ್ನು ಮೊಸಳೆಯ ಹಿಡಿತದಿಂದ ಹೇಗೆ ಸಂರಕ್ಷಿಸಿದನು?–ಎಂಬುದನ್ನು ಕೇಳಬಯಸುತ್ತೇನೆ. ಎಲ್ಲ ಕಥೆಗಳಲ್ಲಿಯೂ ಪರಮಪುಣ್ಯಮಯವೂ, ಅತ್ಯಂತ ಪ್ರಶಂಸನೀಯವೂ ಮಂಗಲಕರವೂ ಮತ್ತು ಶುಭವೂ ಆದ ಕಥೆ ಯಾವುದು?–ಎಂದರೆ ಮಹಾತ್ಮರು ಗಾನಮಾಡಿದ ಭಗವಂತನಾದ ಶ್ರೀಹರಿಯ ಪವಿತ್ರವಾದ ಯಶಸ್ಸು ಯಾವುದರಲ್ಲಿ ವರ್ಣಿಸಲ್ಪಟ್ಟಿರುತ್ತದೆಯೋ–ಅದೇ ಎಂದು ನಾನು ಹೇಳುತ್ತೇನೆ"–ಎಂದು ಅವರಲ್ಲಿ ಅರಿಕೆಮಾಡಿಕೊಂಡನು.

ಸೂತಪುರಾಣಿಕರು ಹೇಳುತ್ತಾರೆ :

ಎಲೈ ಮಹರ್ಷಿಗಳೇ! ಪರೀಕ್ಷಿದ್ರಾಜನು ಮರಣಪರ್ಯಂತ ಉಪವಾಸವ್ರತದಲ್ಲಿದ್ದು ಕಥಾಶ್ರವಣಮಾಡುವುದಕ್ಕಾಗಿಯೇ ಅಲ್ಲಿ ಕುಳಿತಿದ್ದನು. ಆತನು ಮೇಲೆ ಹೇಳಿದಂತೆ ಶ್ರೀಶುಕಬ್ರಹ್ಮರ್ಷಿಗಳನ್ನು ಕಥೆಯನ್ನು ಹೇಳಬೇಕೆಂದು ಪ್ರೇರಣೆಮಾಡಲು, ಅವರು ಆನಂದಪಟ್ಟು ಪರಮಪ್ರೇಮದಿಂದ ಪರೀಕ್ಷಿದ್ರಾಜನನ್ನು ಅಭಿನಂದನೆಮಾಡಿ ಮುನಿಗಳು ತುಂಬಿ ನೆರೆದಿದ್ದ ಆ ಸಭೆಯಲ್ಲಿ ಕಥೆಯನ್ನು ಹೀಗೆ ಮುಂದುವರಿಸಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೨ನೆಯ ಅಧ್ಯಾಯ

ಗಜೇಂದ್ರನು ಮೊಸಳೆಯ ಹಿಡಿತಕ್ಕೆ ಸಿಕ್ಕಿಹಾಕಿಕೊಳ್ಳುವುದು

ಪರೀಕ್ಷಿದ್ರಾಜನ ಪ್ರಾರ್ಥನೆಯಂತೆ ಆತನಿಗೆ ಗಜೇಂದ್ರಮೋಕ್ಷದ ಉಪಾಖ್ಯಾನವನ್ನು ಹೇಳತೊಡಗುತ್ತಾ ಶ್ರೀಶುಕಮಹಾಮುನಿಗಳು ಆತನಿಗೆ ಹೇಳಿದರು :

ಆಸೀದ್ಗಿರಿವರೋ ರಾಜಂಸ್ತ್ರಿಕೂಟ ಇತಿ ವಿಶ್ರುತಃ ।
ಕ್ಷೀರೋದೇನಾವೃತಃ ಶ್ರೀಮಾನ್ಯೋಜನಾಯುತಮುಚ್ಛ್ರಿತಃ ॥೧॥

“ಎಲೈ ರಾಜೇಂದ್ರನೇ! ಕ್ಷೀರಸಮುದ್ರದ ಒಂದು ದ್ವೀಪದಲ್ಲಿ ತ್ರಿಕೂಟವೆಂದು ಪ್ರಸಿದ್ಧವಾದ ಒಂದು ಸುಂದರವಾದ ಪರ್ವತಶ್ರೇಷ್ಠವು ಕಂಗೊಳಿಸುತ್ತಿತ್ತು. ಕಡಲಿನಿಂದ ಆವರಿಸಲ್ಪಟ್ಟಿದ್ದ ಆ ಗಿರಿರಾಜನ ಎತ್ತರ ಹತ್ತು ಸಾವಿರ ಯೋಜನಗಳು.

ಸಾಗರದಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ಹರಡಿದ್ದ ಅದರ ವಿಸ್ತಾರವೂ ಅಷ್ಟೇ ಆಗಿದ್ದಿತು. ಅದಕ್ಕೆ ಬೆಳ್ಳಿ, ಕಬ್ಬಿಣ ಮತ್ತು ಚಿನ್ನದ ಮೂರು ಶಿಖರಗಳಿದ್ದು ಅವುಗಳ ಕಾಂತಿಯು ಸಮುದ್ರವನ್ನೂ, ದಿಕ್ಕುಗಳನ್ನೂ, ಆಕಾಶವನ್ನೂ ಬೆಳಗಿಸುತ್ತಿತ್ತು. ಅದಕ್ಕೆ ಇವುಗಳಲ್ಲದೆ ಬಗೆ-ಬಗೆಯ ರತ್ನಗಳಿಂದ ಹೊಳೆ-ಹೊಳೆಯುತ್ತಿದ್ದ ಇನ್ನೂ ಅನೇಕ ಶಿಖರಗಳಿದ್ದು ಅವುಗಳ ಪ್ರಕಾಶವೂ ಎಲ್ಲ ದಿಕ್ಕುಗಳನ್ನೂ ತುಂಬಿಕೊಂಡಿದ್ದಿತು. ನಾನಾಜಾತಿಗಳಿಗೆ ಸೇರಿದ ಮರಗಳೂ, ಬಳ್ಳಿಗಳೂ ಮತ್ತು ಪೊದೆಗಳೂ ಅಲ್ಲಿ ಶೋಭಿಸುತ್ತಿದ್ದುವು. ಜಳಜಳನೆ ಹರಿಯುತ್ತಿದ್ದ ಗಿರಿನದಿಗಳ ಗಂಭೀರವಾದ ನಾದವು ಅಲ್ಲಿ ಕಿವಿಗಳಿಗೆ ಹಬ್ಬವನ್ನುಂಟುಮಾಡುತ್ತಿತ್ತು. ಕೆಳಭಾಗದಲ್ಲಿ ಸುತ್ತಲೂ ಅದನ್ನು ನೆನೆಸುತ್ತಿದ್ದ ಕ್ಷೀರಸಮುದ್ರದ ಅಲೆಗಳು ಆ ಪರ್ವತರಾಜನ ಪಾದಗಳನ್ನು ತೊಳೆಯುತ್ತಿವೆಯೋ ಎಂಬಂತೆ ಕಾಣಿಸುತ್ತಿದ್ದುವು. ಶ್ಯಾಮಲವಾದ ಇಂದ್ರ ನೀಲಮಣಿಗಳಿಂದಲೂ ಮತ್ತು ಪಚ್ಚೆಯ ಕಲ್ಲುಗಳಿಂದಲೂ ಅದರ ಭೂಮಿಗಳು ಥಳ-ಥಳಿಸುತ್ತಿದ್ದುವು. ಸಿದ್ಧರೂ, ಚಾರಣರೂ, ಗಂಧರ್ವರೂ, ವಿದ್ಯಾಧರರೂ, ನಾಗರೂ, ಕಿನ್ನರರೂ ಮತ್ತು ಅಪ್ಸರಸ್ತ್ರೀಯರೂ ಅದರ ಗುಹೆಗಳಲ್ಲಿ ವಿಹರಿಸುತ್ತಿದ್ದರು. ಅಲ್ಲಿನ ಸಂಗೀತಧ್ವನಿಯು ಗುಹೆಗಳೊಳಗೆ ಪ್ರತಿಧ್ವನಿಸುತ್ತಿದ್ದಾಗ ಅದನ್ನು ಕೇಳಿದ ಸಿಂಹಗಳು ಅದು ಬೇರೆ ಸಿಂಹದ ಗರ್ಜನೆಯೆಂದು ಭ್ರಮಿಸಿ ಅದನ್ನು ಸಹಿಸಲಾರದೆ ತಾವು ಪ್ರತಿಗರ್ಜನೆಯನ್ನು ಮಾಡುತ್ತಿದ್ದುವು. (ಶ್ಲೋಕ 2-9)

ಆ ಪರ್ವತದ ತಳಭಾಗದ ತಪ್ಪಲುಪ್ರದೇಶಗಳು ಬಗೆ-ಬಗೆಯ ಅರಣ್ಯ ಮೃಗಗಳ ಹಿಂಡುಗಳಿಂದ ಅಲಂಕೃತವಾಗಿದ್ದುವು. ನಾನಾವೃಕ್ಷಗಳಿಂದ ನಿಬಿಡವಾಗಿದ್ದ ದೇವತೆಗಳ ಉದ್ಯಾನವನಗಳಲ್ಲಿ ಹಕ್ಕಿಗಳು ಇಂಪಾಗಿ ಧ್ವನಿ ಮಾಡುತ್ತಿದ್ದುವು. ನಿರ್ಮಲವಾದ ತಿಳಿನೀರಿನಿಂದ ತುಂಬಿದ ಅನೇಕ ನದಿ ಗಳೂ ಮತ್ತು ಸರೋವರಗಳೂ ಅಲ್ಲಿ ಶೋಭಾಯಮಾನವಾಗಿದ್ದುವು. ಆ

ನದೀ-ಸರೋವರಗಳ ನೀರಿನಿಂದ ಮೇಲೆದ್ದ ಮರಗಳೂ ತೀರದ ಮರಗಳೂ ರತ್ನಮಯವಾಗಿದ್ದುವು. ಆ ನೀರಿನಲ್ಲಿ ದೇವತಾಸ್ತ್ರೀಯರು ಸ್ನಾನ ಮಾಡುತ್ತಿದ್ದುದರಿಂದ ಅದು ಸದಾ ಪರಿಮಳದಿಂದ ಘಮ-ಘಮಿಸುತ್ತಿತ್ತು. ಆ ಸುವಾಸನೆಯನ್ನು ಹೊತ್ತ ತಂಗಾಳಿಯು ಅಲ್ಲಿ ಮೆಲ್ಲನೆ ಬೀಸುತ್ತಿತ್ತು. ಆ ದಿವ್ಯಪರ್ವತದ ತಪ್ಪಲಿನಲ್ಲಿ ಮಹಾತ್ಮನಾದ ವರುಣಭಗವಂತನ ಸುಂದರ ವಾದ ಉದ್ಯಾನವನವು ಕಂಗೊಳಿಸುತ್ತಿತ್ತು. ಋತುಮಾನ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಆ ಉದ್ಯಾನವನದಲ್ಲಿ ದೇವತಾಸ್ತ್ರೀಯರು ಕ್ರೀಡಿಸುತ್ತಿದ್ದರು. ಅದರ ಎಲ್ಲ ಕಡೆಗಳಲ್ಲೂ ಸದಾ ಹೂವು-ಹಣ್ಣುಗಳಿಂದ ತುಂಬಿ ಕಳಕಳಿಸುತ್ತಿದ್ದ ದಿವ್ಯವೃಕ್ಷಗಳು ಶೋಭಿಸುತ್ತಿದ್ದುವು. ಮಂದಾರ, ಪಾರಿಜಾತ, ಪಾಟಲ, ಅಶೋಕ, ಸಂಪಿಗೆ, ಬಗೆ-ಬಗೆಯ ಹೂವುಗಳು, ಅಮಟೆ, ಮೊರಟೆ, ಹಲಸು, ಅಡಕೆ, ತೆಂಗು, ಖರ್ಜೂರ, ಮಾದಳ, ಹಿಪ್ಪೆ, ಸಾಲ, ತಾಳೆ, ಹೊಂಗೆ, ಹೊನ್ನೇಮರ, ಕೆಂಪುಮತ್ತಿಮರ, ಅತ್ತಿಮರ, ಜುಲ್ಲಿಮರ, ಆಲದಮರ, ಮುಳ್ಳುಮುತ್ತುಗ, ಶ್ರೀಗಂಧದ ಮರ, ಬೇವಿನಮರ, ಕೆಂಗಾಂಚಾಲ, ಸರಳ, ದೇವದಾರು, ದ್ರಾಕ್ಷಿ, ಕಬ್ಬು, ಬಾಳೆ, ನೇರಳೆ, ಎಲಚೀಮರ, ತಾರೆಯಮರ, ರುದ್ರಾಕ್ಷಿಮರ, ಅಳಲೆಯಮರ, ನೆಲ್ಲಿಮರ, ಬಿಲ್ವಪತ್ರೆಯಮರ, ಬೇಲದಮರ, ನಿಂಬೆಮರ, ಗೇರುಮರವೇ ಮುಂತಾದ ಮರಗಳು ಸುತ್ತಲೂ ಕಳಕಳಿಸುತ್ತಿದ್ದುವು. ಆ ಉದ್ಯಾನವನದಲ್ಲಿ ಒಂದು ಸುಂದರವಾದ ಮತ್ತು ವಿಸ್ತಾರವಾದ ಸರೋವರವು ಕಂಗೊಳಿಸುತ್ತಿತ್ತು. ಸರೋವರದಲ್ಲಿ ಚಿನ್ನದ ಬಣ್ಣದ ಕಮಲಗಳು ಅರಳಿ ಶೋಭಿಸುತ್ತಿದ್ದುವು.

(ಶ್ಲೋಕ 10-14)

ಹಾಗೆಯೇ ಬಿಳೀನೈದಿಲೆ, ಎಳೆಗೆಂಪಿನ ನೈದಿಲೆ, ಕೆಂಪುನೈದಿಲೆ, ಕನ್ನೈದಿಲೆ, ಶತಪತ್ರವೆಂಬ ತಾವರೆ ಎಂಬಿವೇ ಮುಂತಾದ ತಾವರೆಯ ಜಾತಿಯ ಪುಷ್ಪಗಳೂ ಕಾಂತಿಯಿಂದ ಮೆರೆಯುತ್ತಿದ್ದುವು. ಮತ್ತೇರಿದ ದುಂಬಿಗಳು ಝೇಂಕರಿಸುತ್ತಿದ್ದುವು. ಹಂಸ, ನೀರುಹಕ್ಕಿ, ಚಕ್ರವಾಕ, ತಾವರೆಹಕ್ಕಿ, ನೀರುಕೋಳಿ, ಕೋಯಷ್ಟಿ, ನೀರುಕಾಗೆ, ಮುಂತಾದುವುಗಳು ಇಂಪಾಗಿ ಕಲ-ಕಲಧ್ವನಿಮಾಡುತ್ತಿದ್ದುವು. ಮೀನು, ಆಮೆ ಮುಂತಾದ ಜಲಚರಪ್ರಾಣಿಗಳು ಓಡಾಡುವಾಗ ತಾವರೆ ಹೂಗಳು ಅಲುಗುತ್ತಾ ನೀರಿ

ನಲ್ಲಿ ಪರಾಗವನ್ನು ಚೆಲ್ಲುತ್ತಿದ್ದುವು. ಈಚಲಮರ, ಬೆತ್ತದಮರ, ಜೊಂಡು ಗಳು, ನೀರುಕಾರಂಜಿಮರ, ಹಬ್ಬೆಗಿಡ ಮುಂತಾದುವು ಅದರ ಸುತ್ತಲೂ ಕಂಗೊಳಿಸುತ್ತಿದ್ದುವು. ಆ ಉದ್ಯಾನವನವು ಮಾಘದಮೊಲ್ಲೆ, ಮುಳ್ಳು ಗೋರಂಟಿ, ಅಶೋಕವೃಕ್ಷ, ಬಾಗೆ, ಬೆಟ್ಟದಮಲ್ಲಿಗೆ, ಹಿಪ್ಪೆ, ಕುಬ್ಜಕ, ಸ್ವರ್ಣಯೂಥೀ, ನಾಗ, ಪುನ್ನಾಗ, ಜಾಜಿ, ಮಲ್ಲಿಗೆ, ಶತಪತ್ರಕಮಲ, ಮಾಧವೀ ಮತ್ತು ಜಾಲಕ ಎಂಬಿವೇ ಮುಂತಾದ, ಎಲ್ಲ ಋತುಗಳಲ್ಲಿಯೂ ಅರಳುವ ಹೂವುಗಳಿಂದ ತುಂಬಿದ ಸೊಂಪಾದ ಹೂಮರಗಳಿಂದ ಕಣ್ಮನ ಗಳಿಗೆ ಹಬ್ಬವನ್ನುಂಟುಮಾಡುತ್ತಿತ್ತು. (ಶ್ಲೋಕ 15-59)

ಆ ತ್ರಿಕೂಟಪರ್ವತದ ಘೋರಾರಣ್ಯದಲ್ಲಿ ಹಲವಾರು ಆನೆಗಳೊಡನೆ ಸಲಗವೊಂದು ವಾಸವಾಗಿದ್ದಿತು. ಅದು ದೊಡ್ಡ-ದೊಡ್ಡ ಶಕ್ತಿಶಾಲಿ ಆನೆಗಳಿಗೆಲ್ಲಾ ನಾಯಕನಾಗಿತ್ತು. ಒಂದು ದಿನ ಅದು ತನ್ನ ಸಂಗಾತಿಗಳಾದ ಹೆಣ್ಣಾನೆಗಳೊಡನೆ ಕೂಡಿಕೊಂಡು ಅರಣ್ಯದಲ್ಲಿದ್ದ ಮುಳ್ಳುಗಳಿಂದ ಕೂಡಿದ್ದ ಹೆಬ್ಬಿದಿರುಗಳನ್ನೂ, ಕಿರುಬಿದಿರುಗಳನ್ನೂ, ಬೆತ್ತಗಳಿಂದ ಕೂಡಿರುವ ದೊಡ್ಡ ದೊಡ್ಡ ಪೊದರುಗಳನ್ನೂ ಧ್ವಂಸಮಾಡುತ್ತಾ ಸಂಚರಿಸುತ್ತಿದ್ದಿತು.

ಸಿಂಹ-ಆನೆ-ಹುಲಿ, ವಿಷಜಂತುಗಳು, ಖಡ್ಗಮೃಗಗಳು, ದೊಡ್ಡ-ದೊಡ್ಡ ಸರ್ಪಗಳು (ಹೆಬ್ಬಾವುಗಳು), ಗೌರಮೃಗಗಳು, ಕೃಷ್ಣಸಾರಗಗಳು, ಶರಭಗಳು, ಚಮರೀಮೃಗಗಳು, ಇನ್ನೂ ಅನೇಕ ದುಷ್ಟಮೃಗಗಳು ಈ ಸಲಗದ ವಾಸನೆಯನ್ನು ಆಘ್ರಾಣಿಸಿದೊಡನೆಯೇ ಓಡಿಬಿಡುತ್ತಿದ್ದುವು. ತೋಳಗಳು, ಕಾಡುಹಂದಿಗಳು, ಕಾಡುಕೋಣಗಳು, ಕರಡಿಗಳು, ಮುಳ್ಳು ಹಂದಿಗಳು, ಗೋಪುಚ್ಛಗಳು, ನಾಯಿಗಳು, ಕೋತಿಗಳು, ಹುಲ್ಲೆಗಳು, ಮೊಲಗಳು ಇವೇ ಮೊದಲಾದ ದುರ್ಬಲಜಂತುಗಳು ಗಜರಾಜನ ಕೃಪೆಯಿಂದ ಅದರ ಸಂಚಾರವಿಲ್ಲದ ಕಡೆಯಲ್ಲಿ, ಮತ್ತಾವ ಘಾತುಕಪ್ರಾಣಿಗಳ ಕಾಟವೂ ಇಲ್ಲದೆ ನಿರ್ಭಯವಾಗಿ ಸಂಚರಿಸುತ್ತಿದ್ದುವು. (ಶ್ಲೋಕ 20-22)

ಬಿಸಿಲಿನ ಬೇಗೆಯಿಂದ ಪರಿತಪಿಸುತ್ತಿದ್ದ ಅಂತಹ ಗಜರಾಜನನ್ನು ಮದೋದಕವನ್ನು ಸುರಿಸುತ್ತಿದ್ದ ಗಂಡಾನೆಗಳೂ, ಹೆಣ್ಣಾನೆಗಳೂ, ಮರಿ ಯಾನೆಗಳೂ ಅನುಸರಿಸಿಹೋಗುತ್ತಿದ್ದುವು. ಮದೋದಕವನ್ನು ಪಾನ

ಮಾಡಲು ಝೇಂಕಾರಮಾಡಿಕೊಂಡು ಹಿಂಬಾಲಿಸುತ್ತಿದ್ದ ದುಂಬಿಗಳಿಂದ ಸೇವಿಸಲ್ಪಡುತ್ತಾ ಆ ಸಲಗವು ತನ್ನ ಭಾರವಾದ ನಡಿಗೆಗಳಿಂದ ಪರ್ವತವನ್ನೇ ನಡುಗಿಸುತ್ತಿದ್ದಿತು. ಕಮಲದ ಧೂಳಿಯಿಂದ ಸಮ್ಮಿಶ್ರವಾದ ಸರೋವರದ ನೀರಿನ ಮೇಲೆ ಬೀಸಿದ ಘಮ-ಘಮಿಸುತ್ತಿದ್ದ ತಂಗಾಳಿಯನ್ನು ಆ ಸಲಗವು ದೂರದಿಂದಲೇ ಆಘ್ರಾಣಿಸಿ ಮತ್ತೇರಿದ ಕಣ್ಣುಗಳನ್ನು ತಿರುಗಿಸುತ್ತಾ ಬಾಯಾರಿಕೆಯಿಂದ ಪೀಡಿಸಲ್ಪಡುತ್ತಿದ್ದ ತನ್ನ ಹಿಂಡಿನೊಡನೆ ಬಹುಬೇಗ ಆ ದಿವ್ಯಸರೋವರದ ಬಳಿಗೆ ಬಂದಿತು. ಆ ಸರೋವರದ ಜಲವು ನಿರ್ಮಲ ವಾಗಿದ್ದಿತು ಮತ್ತು ಅಮೃತದಂತೆ ಮಧುರವಾಗಿದ್ದಿತು. ಚಿನ್ನದ ಕಮಲಗಳ ಮತ್ತು ಕನ್ನೈದಿಲೆಯ ಪರಾಗದಿಂದ ಸುಗಂಧಿತವಾಗಿದ್ದಿತು. ಅಂತಹ ದಿವ್ಯ ಸರೋವರದಲ್ಲಿಳಿದು ನಾಯಕ ಸಲಗವು ತನ್ನ ಸೊಂಡಿಲಿನಿಂದ ನೀರನ್ನೆತ್ತಿ ಯಥೇಚ್ಛವಾಗಿ ಕುಡಿಯಿತು. ಬಳಿಕ ತನ್ನ ಆ ಸೊಂಡಿಲಿನಿಂದಲೇ ನೀರನ್ನೆತ್ತಿ ಯಥೇಚ್ಛವಾಗಿ ಮೈಮೇಲೆ ಸುರಿದುಕೊಂಡು ತನಗಾಗಿದ್ದ ದಣಿವನ್ನು ಹೋಗಲಾಡಿಸಿಕೊಂಡಿತು. ಅನಂತರ ದಯಾಳುವಾದ ಆ ಸಲಗವು ಗೃಹಸ್ಥ ಪುರುಷನಂತೆ ತನ್ನ ಸೊಂಡಿಲಿನಿಂದ ನೀರನ್ನೆತ್ತಿ ಇತರ ಎಲ್ಲ ಗಂಡಾನೆಗಳಿಗೂ, ಹೆಣ್ಣಾನೆಗಳಿಗೂ, ಮರಿಗಳಿಗೂ ನೀರುಕುಡಿಸಿತು. ಸೊಂಡಿಲಿನಿಂದ ಬೀಳು ತ್ತಿದ್ದ ನೀರಿನ ತುಂತುರುಗಳಿಂದ ಎಲ್ಲ ಆನೆಗಳಿಗೂ ಸ್ನಾನಮಾಡಿಸಿತು. ಆದರೆ ವಿವೇಕಶೂನ್ಯವಾಗಿದ್ದ ಆ ಸಲಗಕ್ಕೆ ದೈವಮಾಯೆಯಿಂದ ಮರುಕ್ಷಣದಲ್ಲಿಯೇ ಕಷ್ಟವು ಪ್ರಾಪ್ತವಾಗಲಿದೆಯೆಂಬ ವಿಷಯವು ಮಾತ್ರ ತಿಳಿಯಲಿಲ್ಲ.

ಪರೀಕ್ಷಿತ! ಗಜೇಂದ್ರನು ಹೀಗೆ ತನ್ನ ಅನುಯಾಯಿಗಳೊಡನೆ ಜಲಕ್ರೀಡೆಯಾಡುತ್ತಿರಲು ದೈವಪ್ರೇರಿತವಾದ, ಬಲಿಷ್ಠವಾದ ಮತ್ತು ಆನೆ ಗಳ ತುಳಿತದಿಂದ ಬಹಳವಾಗಿ ಕೋಪಗೊಂಡಿದ್ದ ಮೊಸಳೆಯೊಂದು ಗಜೇಂದ್ರನ ಕಾಲನ್ನು ಬಲವಾಗಿ ಹಿಡಿದುಬಿಟ್ಟಿತು. ದೈವೇಚ್ಛೆಯಂತೆ ಆಕಸ್ಮಿಕವಾಗಿ ವ್ಯಸನಕ್ಕೀಡಾದ ಬಲಿಷ್ಠನಾದ ಗಜೇಂದ್ರನು ತನ್ನ ಬಲ ಕ್ಕನುಗುಣವಾಗಿ ಬಲವನ್ನು ಪ್ರಯೋಗಿಸುತ್ತಾ ಆ ಮೊಸಳೆಯಿಂದ ಬಿಡಿಸಿಕೊಳ್ಳಲು ಬಹಳವಾಗಿ ಪ್ರಯತ್ನಿಸಿದನು. ಬಲಿಷ್ಠವಾದ ಮೊಸಳೆ ಯಿಂದ ಸೆಳೆಯಲ್ಪಡುತ್ತಿದ್ದು ಸಂಕಟಕ್ಕೊಳಗಾಗಿದ್ದ ಯೂಥಪತಿಯಾದ ಗಜೇಂದ್ರನನ್ನು ಕಂಡು ಹೆಣ್ಣಾನೆಗಳೂ ಮತ್ತು ಇತರ ಗಂಡಾನೆಗಳೂ

ದುರ್ಬಲವಾದ ಮನಸ್ಸಿನಿಂದ ಕೂಡಿ ಆರ್ತನಾದಮಾಡಿದುವು. ಬಲವಾಗಿದ್ದ ಇತರ ಆನೆಗಳಿಂದಲೂ ಗಜಪತಿಯನ್ನು ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಗಜೇಂದ್ರ-ನಕ್ರ (ಮೊಸಳೆ) ಗಳೆರಡೂ ತಮ್ಮ ತಮ್ಮ ಶಕ್ತಿಯನ್ನು ಸಂಪೂರ್ಣವಾಗಿ ಬಳಸಿ ಸೆಣೆಸಾಡುತ್ತಿದ್ದುವು. ಒಮ್ಮೆ ಗಜೇಂದ್ರನು ಮೊಸಳೆಯ ಸಮೇತನಾಗಿ ಕಾಲನ್ನು ಹೊರತರುತ್ತಿದ್ದನು. ಮರುಕ್ಷಣದಲ್ಲಿಯೇ ಮೊಸಳೆಯು ಗಜೇಂದ್ರನ ಕಾಲನ್ನು ದರ-ದರನೆ ಸರೋವರದೊಳಕ್ಕೆ ಸೆಳೆದುಕೊಂಡು ಹೋಗುತ್ತಿದ್ದಿತು. ಹೀಗೆಯೇ ಗಜೇಂದ್ರ-ನಕ್ರಗಳೆರಡೂ ಒಂದು ಸಾವಿರ ವರ್ಷಗಳವರೆಗೆ ಸೆಣೆಸಾಡುತ್ತಲೇ ಇದ್ದುವು. ಮಹಾಬಲಿಷ್ಠರಾಗಿದ್ದ ಗಜ-ನಕ್ರಗಳ ಇಷ್ಟೊಂದು ದೀರ್ಘವಾದ ಸೆಣೆಸಾಟವನ್ನು ನೋಡಿ ದೇವತೆಗಳಿಗೂ ಅಚ್ಚರಿಯಾಯಿತು. ಕ್ಷಣ-ಕ್ಷಣಕ್ಕೂ ಮೊಸಳೆಯು ಗಜೇಂದ್ರನ ಕಾಲು ಹಿಡಿದು ಸೆಳೆಯುತ್ತಿದ್ದುದರಿಂದ ಆನೆಯ ಶರೀರವು ಶಿಥಿಲವಾಯಿತು. ಮನೋಬಲವೂ ಇರಲಿಲ್ಲ. ಆ ಸಮಯದಲ್ಲಿ ಅದಕ್ಕೆ ಹೆಚ್ಚು ಬಲವೂ ಇರಲಿಲ್ಲ. ಉತ್ಸಾಹವೂ ಇರಲಿಲ್ಲ. ಸಾವಿರ ವರ್ಷಗಳ ಕಾದಾಟದಿಂದ ಆನೆಯ ಬಲವೆಲ್ಲವೂ ಉಡುಗಿಹೋಗಿದ್ದಿತು. ಇದಕ್ಕೆ ಪ್ರತಿಯಾಗಿ ನೀರಿನಲ್ಲಿದ್ದ ಮೊಸಳೆಯ ಶಕ್ತಿ ಮತ್ತು ಉತ್ಸಾಹಗಳು ಅಧಿಕಗೊಂಡುವು. ಮೊಸಳೆಯು ಗಜರಾಜನು ಬಳಲಿರುವುದನ್ನು ಮನಗಂಡು ಅತ್ಯಂತ ಉತ್ಸಾಹದಿಂದ ತನ್ನ ಶಕ್ತಿಯೆಲ್ಲವನ್ನೂ ಪ್ರಯೋಗಿಸಿ ಗಜೇಂದ್ರನನ್ನು ನೀರಿನೊಳಕ್ಕೆ ಸೆಳೆಯತೊಡಗಿತು. (ಶ್ಲೋಕ 23-30)

ದೇಹಾಭಿಮಾನಿಯಾಗಿದ್ದ ಮತ್ತು ತನ್ನ ಬಲದಲ್ಲಿಯೇ ಹೆಚ್ಚಿನ ವಿಶ್ವಾಸವನ್ನಿಟ್ಟಿದ್ದ ಗಜೇಂದ್ರನು ಆಕಸ್ಮಿಕವಾಗಿ ಪ್ರಾಣಸಂಕಟಕ್ಕೊಳಗಾದನು ಮತ್ತು ಆ ಪ್ರಾಣಸಂಕಟದಿಂದ ಬಿಡಿಸಿಕೊಳ್ಳಲು ಅಸಮರ್ಥನಾದನು. ಪ್ರಾಣಸಂಕಟದಿಂದ ಪಾರಾಗುವುದು ಹೇಗೆಂಬ ಬಗೆಗೆ ಗಜೇಂದ್ರನು ಬಹಳವಾಗಿ ಯೋಚಿಸಿದನು. ಕಡೆಗವನು ಈ ನಿರ್ಧಾರಕ್ಕೆ ಬಂದನು :

ನ ಮಾಮಿಮೇ ಜ್ಞಾತಯ ಆತುರಂ ಗಜಾಃ
ಕುತಃ ಕರಿಣ್ಯಃ ಪ್ರಭವನ್ತಿ ಮೋಚಿತುಮ್ ।
ಗ್ರಾಹೇಣ ಪಾಶೇನ ವಿಧಾತುರಾವೃತೋಽ-
ಪ್ಯಹಂ ಚ ತಂ ಯಾಮಿ ಪರಂ ಪರಾಯಣಮ್ ॥೩೨॥

"ಮೊಸಳೆಯ ರೂಪವಾಗಿರುವ ದೈವದ ಪಾಶದಿಂದ ನಾನು ಸುತ್ತುವರಿಯಲ್ಪಟ್ಟಿದ್ದೇನೆ. ಸಂಕಟಕ್ಕೊಳಗಾಗಿರುವ ನನ್ನನ್ನು ಅನುಯಾಯಿಗಳಾದ ಗಂಡಾನೆಗಳೂ ಬಿಡಿಸಿಕೊಳ್ಳಲು ಸಮರ್ಥವಾಗಲಿಲ್ಲ. ಹೀಗಿರುವಾಗ ಹೆಣ್ಣಾನೆಗಳ ಮತ್ತು ಮರಿಯಾನೆಗಳ ವಿಷಯವಾಗಿ ಹೇಳುವುದೇನಿದೆ? ಆದುದರಿಂದ ಈ ಸಮಯದಲ್ಲಿ ಸಕಲರಿಗೂ ಏಕಮಾತ್ರಪರಾಯಣನಾದ ಪರಾತ್ಪರನಾದ ದಯಾಮಯನಾದ ಭಗವಂತನನ್ನೇ ಶರಣುಹೊಂದುತ್ತೇನೆ.

ಯಃ ಕಶ್ಚನೇಶೋ ಬಲಿನೋಽನ್ತಕೋರಗಾ-
ತ್ಪ್ರಚಣ್ಡವೇಗಾದಭಿಧಾವತೋ ಭೃಶಮ್ ।
ಭೀತಂ ಪ್ರಪನ್ನಂ ಪರಿಪಾತಿ ಯದ್ಭಯಾ-
ನ್ಮೃತ್ಯುಃ ಪ್ರಧಾವತ್ಯರಣಂ ತಮೀಮಹಿ ॥೩೩॥

ಕಾಲ (ಮೃತ್ಯು) ನೆಂಬುವನು ಮಹಾಬಲಿಷ್ಠನು. ಸರ್ಪದಂತೆ ಅವನು ಪ್ರಚಂಡವೇಗದಿಂದ ಎಲ್ಲರನ್ನೂ ನುಂಗಿಹಾಕಲು ಓಡುತ್ತಿರುತ್ತಾನೆ. ಇಂತಹ ಕಾಲನಿಂದ ಭಯಗೊಂಡ ಯಾವನಾದರೂ ಭಗವಂತನಿಗೆ ಶರಣಾದಲ್ಲಿ ಪ್ರಪನ್ನನಾದ ಆ ಭಕ್ತನನ್ನು ನಿಶ್ಚಯವಾಗಿಯೂ ದಯಾಮಯನಾದ ಭಗವಂತನು ಮೃತ್ಯುವಿನಿಂದ ಮುಕ್ತಿಗೊಳಿಸುತ್ತಾನೆ. ಭಗವಂತನಿಗೆ ಹೆದರಿ ಮೃತ್ಯುವೇ ಓಡಿಹೋಗುತ್ತದೆ.* ಈ ಸಮಯದಲ್ಲಿ ಅನನ್ಯಗತಿಕನಾಗಿ ಅಂತಹ ದಯಾಮಯನಾದ ಪ್ರಭುವನ್ನೇ ಶರಣುಹೊಂದುತ್ತೇನೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೨ನೆಯ ಅಧ್ಯಾಯವು ಮುಗಿಯಿತು.

---

* ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ । ಭೀಷಾಸ್ಮಾದಗ್ನಿಶ್ಚೇನ್ದ್ರಶ್ಚ । ಮೃತ್ಯುರ್ಧಾವತಿ ಪಞ್ಚಮ ಇತಿ । (ತೈತ್ತರೀಯ ಉಪನಿಷತ್ತು) ವಾಯು, ಸೂರ್ಯ, ಅಗ್ನಿ, ಇಂದ್ರ, ಮೃತ್ಯು–ಇವರು ಕೂಡ ಪರಮಾತ್ಮನಿಗೆ ಹೆದರುವವರು.

ಗಜೇಂದ್ರನು ಮಾಡಿದ ಪರಮಾತ್ಮನ ಸ್ತೋತ್ರ : ಗಜೇಂದ್ರಮೋಕ್ಷ

ಶ್ರೀಶುಕರು ಹೇಳುತ್ತಾರೆ :

ಏವಂ ವ್ಯವಸಿತೋ ಬುದ್ಧ್ಯಾ ಸಮಾಧಾಯ ಮನೋ ಹೃದಿ ।
ಜಜಾಪ ಪರಮಂ ಜಾಪ್ಯಂ ಪ್ರಾಗ್ಜನ್ಮನ್ಯನುಶಿಕ್ಷಿತಮ್ ॥೧॥

"ಪರೀಕ್ಷಿತ! ಗಜೇಂದ್ರನು ಹೀಗೆ ದಯಾಮಯನಾದ ಭಗವಂತನನ್ನೇ ಶರಣುಹೊಂದಲು ಬುದ್ಧಿಯಿಂದ ನಿಶ್ಚಯಿಸಿ, ಮನಸ್ಸನ್ನು ಹೃದಯಗುಹೆಯಲ್ಲಿ ಲೀನಗೊಳಿಸಿ, ಹಿಂದಿನ ಜನ್ಮದಲ್ಲಿ ಇಂದ್ರದ್ಯುಮ್ನನಾಗಿದ್ದಾಗ ಉಪದಿಷ್ಟವಾಗಿದ್ದ ಶ್ರೇಷ್ಠವಾದ ಜಪದ ಮೂಲಕವಾಗಿ ಭಗವಂತನನ್ನು ಸ್ತುತಿಸಿದನು.

ಓಂ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।
ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥೨॥

"ದೃಶ್ಯವಾದ ಈ ದೇಹಾದಿ ಜಡಪ್ರಪಂಚವೆಲ್ಲವೂ ಯಾವ ಪರಮಾತ್ಮನ ಸಂಬಂಧದಿಂದ ಚೇತನವೆನಿಸುವುದೋ, ಯಾವನು ಜಗತ್ತಿಗೆ ಮೂಲಕಾರಣನಾಗಿರುವನೋ, ಯಾವನು ಪರಮಪುರುಷನ ರೂಪದಲ್ಲಿ ಎಲ್ಲರ ಹೃತ್ಕಮಲಗಳಲ್ಲಿಯೂ ವಿರಾಜಮಾನನಾಗಿರುವನೋ, ಯಾವನು ಸಮಸ್ತಜಗತ್ತಿಗೂ ಏಕಮಾತ್ರ ಸ್ವಾಮಿಯಾಗಿರುವನೋ–ಅಂತಹ ಓಂಕಾರ ಸ್ವರೂಪನಾದ ಭಗವಂತನಿಗೆ ನಾನು ನಮಸ್ಕರಿಸುತ್ತೇನೆ ; ಪ್ರೀತಿಯಿಂದ ಅವನ ಧ್ಯಾನವನ್ನು ಮಾಡುತ್ತೇನೆ.

ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।
ಯೋಽಸ್ಮಾತ್ಪರಸ್ಮಾಚ್ಚ ಪರಸ್ತಂ* ಪ್ರಪದ್ಯೇ ಸ್ವಯಮ್ಭುವಮ್ ॥೩॥

---

* ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ॥ ಓಂ ತತ್ ಸತ್ ಎಂಬ ಮೂರು ಪದಗಳೂ ಪರಬ್ರಹ್ಮನನ್ನು ನಿರ್ದೇಶಿಸತಕ್ಕುವು. ಕಾರಣಂ ತು ಧ್ಯೇಯಂ ಎಂಬ ಶ್ರುತ್ಯನುಸಾರವಾಗಿ ಇಲ್ಲಿ ಗಜರಾಜನು ಜಗತ್ಕಾರಣನಾಗಿಯೂ ಪ್ರಕೃತಿ-ಪುರುಷ

ಈ ಸಮಸ್ತ ಜಗತ್ತೂ ಯಾವನಲ್ಲಿರುವುದೋ, ಯಾವನಿಂದುಂಟಾಗಿರುವುದೋ, ಯಾವನಿಂದ ಮಾಡಲ್ಪಟ್ಟಿರುವುದೋ, ಯಾವನು ತಾನೇ ಜಗದ್ರೂಪನಾಗಿರುವನೋ, ಹೀಗಿದ್ದರೂ ಯಾವನು ಕಾರ್ಯರೂಪವಾದ ಜಗತ್ತಿಗಾಗಲೀ, ಕಾರಣರೂಪವಾದ ಪ್ರಕೃತಿಗಾಗಲೀ ಒಳಪಡದೆ ಬೇರೆಯಾಗಿಯೇ ಇರುವನೋ ಅಂತಹ ತಾನೇ ತಾನಾಗಿ ಹುಟ್ಟಿದ (ಸ್ವಯಂಭುವನಾದ) ಪರಮಾತ್ಮನನ್ನು ಮೊರೆಹೋಗುತ್ತೇನೆ.

ಯಃ ಸ್ವಾತ್ಮನೀದಂ ನಿಜಮಾಯಯಾರ್ಪಿತಂ
ಕ್ವಚಿದ್ವಿಭಾತಂ ಕ್ವ ಚ ತತ್ತಿರೋಹಿತಮ್ ।
ಅವಿದ್ಧದೃಕ್ಸಾಕ್ಷ್ಯುಭಯಂ ತದೀಕ್ಷತೇ
ಸ ಆತ್ಮಮೂಲೋಽವತು ಮಾಂ ಪರಾತ್ಪರಃ ॥೪॥

ಈ ಪ್ರಪಂಚವು ಅವನ ಮಾಯೆಯಿಂದ ಅವನಲ್ಲಿಯೇ ಇಡಲ್ಪಟ್ಟಿದೆ. ಆದರೆ ಕೆಲವು ವೇಳೆ (ಸೃಷ್ಟಿಯ ಕಾಲದಲ್ಲಿ) ಕಾಣಿಸಿಕೊಳ್ಳುತ್ತದೆ. ಕೆಲವು ವೇಳೆ (ಪ್ರಳಯಕಾಲದಲ್ಲಿ) ಅದೃಶ್ಯವಾಗುತ್ತದೆ. ಆದರೆ ಅವನ ದೃಷ್ಟಿಯು ಮಾತ್ರ ಲೋಪವಾಗುವುದಿಲ್ಲ. ಸಾಕ್ಷೀಭೂತನಾಗಿ ಪ್ರಪಂಚದ ಸೃಷ್ಟಿಯನ್ನೂ ಲಯವನ್ನೂ ನೋಡುತ್ತಲೇ ಇರುತ್ತಾನೆ. ಅಂತಹ ಆತ್ಮವೇ

ವಿಲಕ್ಷಣನಾಗಿಯೂ ಓಂಕಾರವಾಚ್ಯನಾಗಿಯೂ ಇರುವ ಪರಬ್ರಹ್ಮನನ್ನು ಸ್ತೋತ್ರ ಮಾಡುತ್ತಾನೆ. (ವೀರರಾಘವೀಯ)

ಅನನ್ಯಸಾಧ್ಯೇ ಸಾಭೀಷ್ಟೇ ಮಹಾವಿಶ್ವಾಸಪೂರ್ವಕಮ್ । ತದೇತೋಪಾಯತಾ ಯಾಂಚ ಪ್ರಪತ್ತಿಃ ಶರಣಾಗತಿಃ ॥ ಮತ್ತಾರಿಂದಲೂ ಸಾಧ್ಯವಿಲ್ಲದ ತನ್ನ ಇಷ್ಟಾರ್ಥ ವನ್ನು ಸಂಪಾದಿಸುವುದಕ್ಕಾಗಿ ಅತ್ಯಂತ ವಿಶ್ವಾಸದಿಂದ 'ನೀನೇ ಗತಿ'–ಎಂದು ಮೊರೆಹೋಗುವುದಕ್ಕೆ 'ಪ್ರಪತ್ತಿ'–ಎಂದು ಹೆಸರು. ಇಲ್ಲಿ ಗಜರಾಜನ ಶರಣಾಗತಿಯು ಮೋಕ್ಷಾರ್ಥವೇ ಹೊರತು ಪ್ರಾಣರಕ್ಷಣಾರ್ಥವಲ್ಲ. (ವೀರರಾಘವೀಯ)

ಈ ಪ್ರತ್ಯಕ್ಷ ಪ್ರಪಂಚಕ್ಕಿಂತಲೂ ಪರೋಕ್ಷವಾದ ಮುಕ್ತಪ್ರಪಂಚಕ್ಕಿಂತಲೂ ಸಹ ಉತ್ತಮನಾದುದರಿಂದ ಪರಮಾತ್ಮನೇ ಪ್ರಪಂಚವಲ್ಲ. ಪರಮಾತ್ಮನಿಂದ ಸತ್ತಾದಿಗಳನ್ನು ಪಡೆದ ಪ್ರಪಂಚವು ಹೀಗೆ ಉಪಚರಿಸಲ್ಪಡುವುದು. (ವಿಜಯಧ್ವಜೀಯ)

ಮೂಲವಾಗಿ ಉಳ್ಳ ಎಲ್ಲದರಲ್ಲಿಯೂ ಆತ್ಮಸ್ವರೂಪದಿಂದಿರುವ ಸ್ವಯಂ ಪ್ರಕಾಶನಾದ ಪರಾತ್ಪರನಾದ ಪರಮಾತ್ಮನು ನನ್ನನ್ನು ರಕ್ಷಿಸಲಿ.

ಕಾಲೇನ ಪಞ್ಚತ್ವಮಿತೇಷು ಕೃತ್ಸ್ನಶೋ
ಲೋಕೇಷು ಪಾಲೇಷು ಚ ಸರ್ವಹೇತುಷು ।
ತಮಸ್ತದಾಸೀದ್ಗಹನಂ ಗಭೀರಂ
ಯಸ್ತಸ್ಯ ಪಾರೇಽಭಿವಿರಾಜತೇ ವಿಭುಃ ॥೫॥

ಸ್ಥಿತಿರೂಪವಾದ ಎರಡು ಪರಾರ್ಧಗಳು ಕಳೆದೊಡನೆಯೇ ಸಮಸ್ತ ಜಗತ್ತುಗಳಿಗೂ ಕಾರಣಗಳಾದ ಪಂಚಭೂತಗಳು, ಅವುಗಳಿಂದ ಹುಟ್ಟಿದ ಲೋಕಗಳು ಮತ್ತು ಆ ಲೋಕಗಳನ್ನು ಪಾಲಿಸುತ್ತಿದ್ದ ಬ್ರಹ್ಮಾದಿಗಳು ಸಂಪೂರ್ಣವಾಗಿ ನಾಶಹೊಂದುವರು. ಗಹನವಾದ, ಗಂಭೀರವಾದ ಗಾಢಾಂಧಕಾರವು ಎಲ್ಲ ಕಡೆಗಳಲ್ಲಿಯೂ ಆವರಿಸಿಕೊಳ್ಳುವುದು. ಆ ಸಮಯ ದಲ್ಲಿ ಯಾವ ಪರಂಜ್ಯೋತಿ ಪರಮಾತ್ಮನು ಆ ಕತ್ತಲಿನ ಆಚೆ ಪ್ರಕಾಶಿಸು ವನೋ ಅಂತಹ ಆದಿತ್ಯವರ್ಣನಾದ ಪರಮಾತ್ಮನು ನನ್ನನ್ನು ರಕ್ಷಿಸಲಿ.*

ನ ಯಸ್ಯ ದೇವಾ ಋಷಯಃ ಪದಂ ವಿದು-
ರ್ಜನ್ತುಃ ಪುನಃ ಕೋಽರ್ಹತಿ ಗನ್ತುಮೀರಿತುಮ್ ।
ಯಥಾ ನಟಸ್ಯಾಕೃತಿಭಿರ್ವಿಚೇಷ್ಟತೋ
ದುರತ್ಯಯಾನುಕ್ರಮಣಃ ಸ ಮಾವತು ॥೬॥

---

* **ಆದಿತ್ಯವರ್ಣಂ ತಮಸಃ ಪರಸ್ತಾತ್ ।** ಸ್ವಪ್ರಕಾಶನಾದ ಪರಮಾತ್ಮನು ತಮಸ್ಸಿಗಿಂತ ದೂರದಲ್ಲಿರುವವನು. (ಭಾರತದೀಪಿಕಾ)

ನಾಸದಾಸೀನ್ನೋ ಸದಾಸೀತ್ತದಾನೀಮ್ । ತಮ ಆಸೀತ್ತಮಸಾ ಗೂಢಮಗ್ರೇ ಪ್ರಕೇತಮ್ । ಅಕ್ಷರಂ ತಮಸಿ ಲೀಯತೇ । ತಮಃ ಪರೇ ದೇವ ಏಕೀಭವತಿ । ಪ್ರಳಯಕಾಲದಲ್ಲಿ ಜೀವನು ಪ್ರಕೃತಿಯಲ್ಲಿಯೂ ಪ್ರಕೃತಿಯು ಪರಮಾತ್ಮನಲ್ಲಿಯೂ ಲೀನವಾಗುವುದರಿಂದ ಇಲ್ಲಿ ತಮಶ್ಶಬ್ದಕ್ಕೆ ಅತ್ಯಂತ ಸೂಕ್ಷ್ಮಾವಸ್ಥೆಯನ್ನು ಪಡೆದ ಅಚಿದ್ದ್ರವ್ಯ (ಪ್ರಕೃತಿ) ಎಂದು ಅರ್ಥ. ಈ ಪ್ರಕರಣದಲ್ಲಿ ಪಾರವೆಂದರೆ ಪಾಲನ ಅಥವಾ ನಿಯಮನವೆಂದರ್ಥವಾದುದರಿಂದ ಪರಮಾತ್ಮನು ಪ್ರಳಯಕಾಲದಲ್ಲಿ ಪ್ರಕೃತಿಯ ಕಾರ್ಯವಾದ ಜನನಸಾಮರ್ಥ್ಯವನ್ನು ಹೋಗಲಾಡಿಸುವನೆಂದು ಭಾವವು.

(ವೀರರಾಘವೀಯ)

ಯಾವನ ಸ್ಥಾನವನ್ನು ದೇವತೆಗಳಾಗಲೀ ಋಷಿಗಳಾಗಲೀ ತಿಳಿದಿಲ್ಲವೋ ಅಂತಹವನ ಸ್ಥಾನವನ್ನು ಸಾಮಾನ್ಯರಾದವರು ಹೊಂದಲು ಅಥವಾ ಅದು ಹೀಗಿದೆಯೆಂದು ಹೇಳಲು ಹೇಗೆತಾನೇ ಸಮರ್ಥರಾಗುತ್ತಾರೆ? ನಿಜರೂಪವನ್ನು ಮರೆಸಿ ನಾನಾವೇಷಗಳನ್ನು ಹಾಕಿಕೊಂಡು ಕುಣಿಯುವ ನಟನಂತೆ ತಿಳಿಯಲು ಅಸಾಧ್ಯವಾದ ನಡವಳಿಕೆಯಿಂದ ಕೂಡಿದವನಾಗಿ ನಾನಾಪ್ರಕಾರವಾದ ಅವತಾರಗಳನ್ನು ಹೊಂದುವ ಆ ಪರಮಾತ್ಮನು ನನ್ನನ್ನು ರಕ್ಷಿಸಲಿ.

ದಿದೃಕ್ಷವೋ ಯಸ್ಯ ಪದಂ ಸುಮಙ್ಗಲಂ
ವಿಮುಕ್ತಸಙ್ಗಾ ಮುನಯಃ ಸುಸಾಧವಃ ।
ಚರನ್ತ್ಯಲೋಕವ್ರತಮವ್ರಣಂ ವನೇ
ಭೂತಾತ್ಮಭೂತಾಃ ಸುಹೃದಃ ಸ ಮೇ ಗತಿಃ ॥೭॥

ಯಾವನ ಪರಮಮಂಗಳಸ್ವರೂಪವನ್ನು ಸಂದರ್ಶಿಸಲು ಸಾಧುಶಿರೋಮಣಿಗಳಾದ ಮಹಾಮುನಿಗಳು ಸಂಸಾರದಲ್ಲಿ ಸಮಸ್ತ ಆಸಕ್ತಿ ಗಳನ್ನೂ ಪರಿತ್ಯಜಿಸಿ ಅರಣ್ಯಕ್ಕೆ ಹೋಗಿ ನಿರಂತರವಾಗಿ ಬ್ರಹ್ಮಚರ್ಯವೇ ಮೊದಲಾದ ಅಲೌಕಿಕವಾದ ವ್ರತಗಳನ್ನು ಪರಿಪಾಲಿಸುವರೋ, ತಮ್ಮಲ್ಲಿ ವಿರಾಜಮಾನನಾಗಿರುವ ಆತ್ಮನೇ ಎಲ್ಲರಲ್ಲಿಯೂ ವಿರಾಜಿಸುತ್ತಿರುವನೆಂಬುದನ್ನು ತಿಳಿದು ಎಲ್ಲರಿಗೂ ಒಳ್ಳೆಯದನ್ನೇ ಮಾಡುವ ಮನಸ್ಸುಳ್ಳವರಾಗಿರುವರೋ ಅಂತಹ ಪರಮೇಶ್ವರನೇ ನನಗೆ ಪರಮಗತಿಯು.

ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ
ನ ನಾಮರೂಪೇ ಗುಣದೋಷ ಏವ ವಾ ।
ತಥಾಪಿ ಲೋಕಾಪ್ಯಯಸಮ್ಭವಾಯ ಯಃ
ಸ್ವಮಾಯಯಾ ತಾನ್ಯನುಕಾಲಮೃಚ್ಛತಿ ॥೮॥

ಯಾವನಿಗೆ ಜನ್ಮವಾಗಲೀ ಕರ್ಮವಾಗಲೀ ಇಲ್ಲವೋ, ನಾಮವಾಗಲೀ ರೂಪವಾಗಲೀ ಇಲ್ಲವೋ–ಅಂತಹವನಿಗೆ ಗುಣವಾಗಲೀ ದೋಷವಾಗಲೀ ಇರಲು ಹೇಗೆ ತಾನೇ ಸಾಧ್ಯವಾದೀತು? ಆದರೂ ಲೋಕದ ಸೃಷ್ಟಿ ಮತ್ತು ಸಂಹಾರಕ್ಕಾಗಿ ತನ್ನ ಮಾಯೆಯಿಂದಲೇ ಆಯಾ ಕಾಲಕ್ಕೆ ಅನುಗುಣವಾಗಿ

ಪರಮಾತ್ಮನು ಅವತರಿಸುತ್ತಾನೆ. ಅಂತಹ ಸಚ್ಚಿದಾನಂದಸ್ವರೂಪನಾದ ಪರಮಾತ್ಮನು ನನ್ನನ್ನು ರಕ್ಷಿಸಲಿ.

ತಸ್ಮೈ ನಮಃ ಪರೇಶಾಯ ಬ್ರಹ್ಮಣೇಽನನ್ತಶಕ್ತಯೇ ।
ಅರೂಪಾಯೋರುರೂಪಾಯ ನಮ ಆಶ್ಚರ್ಯಕರ್ಮಣೇ ॥೯॥

ಬ್ರಹ್ಮನೇ ಮೊದಲಾದವರಿಗೂ ಈಶನಾದ, ಅನಂತಶಕ್ತಿಯಾದ, ಸರ್ವೈಶ್ವರ್ಯಮಯನಾದ ಪರಬ್ರಹ್ಮಪರಮಾತ್ಮನಿಗೆ ನಮಸ್ಕರಿಸುತ್ತೇನೆ. ರೂಪರಹಿತನಾದ, ಬ್ರಹ್ಮರೂಪಿಯಾದ, ಆಶ್ಚರ್ಯಕರವಾದ ಕಾರ್ಯಗಳನ್ನೆಸಗುವ ದೇವದೇವನ ಪಾದಗಳಿಗೆ ನಮಸ್ಕರಿಸುತ್ತೇನೆ.

ನಮ ಆತ್ಮಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।
ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥೧೦॥

ಸ್ವಯಂಪ್ರಕಾಶನಾದ, ಎಲ್ಲಕ್ಕೂ ಸಾಕ್ಷೀಭೂತನಾದ ಪರಮಾತ್ಮನಿಗೆ ನಮಸ್ಕರಿಸುತ್ತೇನೆ. ಮಾತು-ಮನಸ್ಸು ಮತ್ತು ಬುದ್ಧಿಗಳಿಗೆ ದೂರದಲ್ಲಿರುವ ಮನಸ್ಸು-ಮಾತು-ಬುದ್ಧಿಗಳಿಗೆ ಅಗೋಚರನಾದ ದೇವದೇವನಿಗೆ ನಮಸ್ಕರಿಸುತ್ತೇನೆ.

ಸತ್ತ್ವೇನ ಪ್ರತಿಲಭ್ಯಾಯ ನೈಷ್ಕರ್ಮ್ಯೇಣ ವಿಪಶ್ಚಿತಾ ।
ನಮಃ ಕೈವಲ್ಯನಾಥಾಯ ನಿರ್ವಾಣಸುಖಸಂವಿದೇ ॥೧೧॥

ವಿವೇಕಿಗಳಾದವರು ಕರ್ಮಸಂನ್ಯಾಸದಿಂದ ಅಥವಾ ಕರ್ಮಫಲಪರಿತ್ಯಾಗದಿಂದ ಅಂತಃಕರಣವನ್ನು ಶುದ್ಧಗೊಳಿಸಿ ಸತ್ತ್ವಗುಣಸಂಪನ್ನರಾಗಿ ಅವನನ್ನು ಕಂಡುಕೊಳ್ಳುತ್ತಾರೆ. ಆತ್ಯಂತಿಕದುಃಖನಾಶರೂಪವಾದ ಮೋಕ್ಷಕ್ಕೆ ಸ್ವಾಮಿಯಾಗಿರುವ ಮೋಕ್ಷಾನಂದಾನುಭವಸ್ವರೂಪನಾಗಿರುವ ಪ್ರಭುವಿಗೆ ನಮಸ್ಕರಿಸುತ್ತೇನೆ.

ನಮಃ ಶಾನ್ತಾಯ ಘೋರಾಯ ಮೂಢಾಯ ಗುಣಧರ್ಮಿಣೇ ।
ನಿರ್ವಿಶೇಷಾಯ ಸಾಮ್ಯಾಯ ನಮೋ ಜ್ಞಾನಘನಾಯ ಚ ॥೧೨॥

ಯಾವನು ಸತ್ತ್ವ-ರಜಸ್ಸು ಮತ್ತು ತಮಸ್ಸು ಈ ಮೂರು ಗುಣಗಳನ್ನೂ ಸ್ವೀಕರಿಸಿ ಅನುಕ್ರಮವಾಗಿ ಶಾಂತ-ಘೋರ ಮತ್ತು ಮೂಢಾವಸ್ಥೆ

ಗಳನ್ನು ಹೊಂದುವನೋ, ಗುಣರಹಿತನಾಗಿಯೂ ಇರುವನೋ, ಸರ್ವ ಸಮಭಾವದಲ್ಲಿಯೂ ಇರುವನೋ, ಅಂತಹ ಜ್ಞಾನಘನಸ್ವರೂಪನಾದ ಪರಮಾತ್ಮನಿಗೆ ನಮಸ್ಕರಿಸುತ್ತೇನೆ.*

ಕ್ಷೇತ್ರಜ್ಞಾಯ ನಮಸ್ತುಭ್ಯಂ ಸರ್ವಾಧ್ಯಕ್ಷಾಯ ಸಾಕ್ಷಿಣೇ ।
ಪುರುಷಾಯಾತ್ಮಮೂಲಾಯ ಮೂಲಪ್ರಕೃತಯೇ ನಮಃ ॥೧೩॥

ನೀನು ಸಮಸ್ತರಿಗೂ ಸ್ವಾಮಿಯಾಗಿರುವೆ. ಸಮಸ್ತಕ್ಷೇತ್ರಗಳನ್ನೂ ತಿಳಿದವನಾಗಿರುವೆ. ಸಮಸ್ತಕಾರ್ಯಗಳಿಗೂ ಸಾಕ್ಷೀಭೂತನಾಗಿರುವೆ. ನೀನೇ ನಿನಗೆ ಮೂಲಕಾರಣನಾಗಿರುವೆ. ನೀನು ಪುರುಷ ಮತ್ತು ಮೂಲಪ್ರಕೃತಿಯ ರೂಪದಲ್ಲಿಯೂ ಇರುವೆ. ಅಂತಹ ನಿನಗೆ ನಮಸ್ಕಾರಮಾಡುತ್ತೇನೆ.

ಸರ್ವೇನ್ದ್ರಿಯಗುಣದ್ರಷ್ಟ್ರೇ ಸರ್ವಪ್ರತ್ಯಯಹೇತವೇ ।
[1]ಅಸತಾಚ್ಛಾಯಯೋಕ್ತಾಯ ಸದಾಭಾಸಾಯ ತೇ ನಮಃ ॥೧೪॥

ಮಹಾನುಭಾವನೇ! ನೀನು ಸಮಸ್ತಇಂದ್ರಿಯಗಳನ್ನೂ ಶಬ್ದ- ಸ್ಪರ್ಶವೇ ಮೊದಲಾದ ಅವುಗಳ ವಿಷಯಗಳನ್ನೂ ನೋಡುವೆ. ವಿಶ್ವಾಸಕ್ಕೆ ಆಧಾರಭೂತನಾಗಿರುವೆ. ಅಹಂಕಾರವೇ ಮೊದಲಾದ ಛಾಯಾರೂಪವಾದ ಅಸದ್ವಸ್ತುಗಳ ಮೂಲಕವಾಗಿ ನಿನ್ನ ಅಸ್ತಿತ್ವವು ಪ್ರಕಟವಾಗುತ್ತದೆ. ಸದ್ರೂಪನಾಗಿ ವಿಷಯಗಳಲ್ಲಿಯೂ ಪ್ರತಿಫಲಿಸಿರುವೆ. ಅಂತಹ ನಿನಗೆ ನಮಸ್ಕಾರವು.

---

* ಸತ್ಪುರುಷರಿಗೆ ಶಾಂತನಾಗಿರುವನೋ, ದುಷ್ಟರಿಗೆ ಘೋರನಾಗಿರುವನೋ, ಆತ್ಮ ಸ್ವರೂಪಕ್ಕಿಂತ ಬೇರೆಡೆಯಲ್ಲಿ ದೃಷ್ಟಿಯಿಲ್ಲದವನಾಗಿ ಮೂಢನಾಗಿಯೂ ಇರುವನೋ– ಎಂದೊಬ್ಬರು ಅರ್ಥಮಾಡಿರುತ್ತಾರೆ.

1 **ಪೂರ್ವಮೇವಾಹಮಿಹಾಸಮಿತಿ । ತತ್ಪುರುಷಸ್ಯ ಪುರುಷತ್ವಂ ॥** ಎಲ್ಲಕ್ಕಿಂತಲೂ ಮೊದಲಿನಿಂದಲೂ ಇರುವುದರಿಂದ ಶ್ರೀಭಗವಂತನಿಗೆ ಪುರುಷನೆಂದು ಹೆಸರಾಯಿತು.

(ಭಾವಾರ್ಥದೀಪಿಕಾ)

ಕ್ಷೇತ್ರಜ್ಞಾಯ-ಸರ್ವಾಧ್ಯಕ್ಷಾಯ-ಸಾಕ್ಷಿಣೇ-ಪುರುಷಾಯ–ಎಂಬ ವಿಶೇಷಣಗಳಿಂದ ಸಮಷ್ಟಿಶರೀರವೆಂದೂ, ಈ ಶ್ಲೋಕದಿಂದ ವ್ಯಷ್ಟಿಶರೀರಕವೆಂತಲೂ ಛಾಯಯಾ ಎಂಬುದರಿಂದ ನೆರಳಿನಂತೆ ಎಡೆಬಿಡದಿರುವ ಜಡಪ್ರಕೃತಿಯೆಂಬ ಮಾಯಾನಿಯಾಮಕ ನೆಂದು ಸೂಚಿಸಲ್ಪಡುವನೆಂತಲೂ ತಿಳಿಯಬೇಕು.

ನಮೋ ನಮಸ್ತೇಽಖಿಲಕಾರಣಾಯ
ನಿಷ್ಕಾರಣಾಯಾದ್ಭುತಕಾರಣಾಯ ।
ಸರ್ವಾಗಮಾಮ್ನಾಯಮಹಾರ್ಣವಾಯ
ನಮೋಽಪವರ್ಗಾಯ ಪರಾಯಣಾಯ ॥೧೫॥

ನಿನ್ನ ಅಸ್ತಿತ್ವಕ್ಕೆ ಯಾವ ಕಾರಣವೂ ಇಲ್ಲ. ನೀನು ನಿಷ್ಕಾಮನಾಗಿರುವೆ. ಆದರೆ ನೀನು ಸಮಸ್ತಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೂ ಮೂಲ ಕಾರಣನಾಗಿರುವೆ. ನೀನು ಜಗತ್ತಿನ ಸೃಷ್ಟಿಗೆ ಕಾರಣನಾದರೂ ನಿನ್ನಲ್ಲಿ ವಿಕಾರವೇನೂ ಉಂಟಾಗುವುದಿಲ್ಲ. ಆದುದರಿಂದ ನೀನು ಅದ್ಭುತಕಾರಣ ನಾಗಿರುವೆ. ನಿನಗೆ ನಾನು ಬಾರಿ-ಬಾರಿಗೂ ನಮಸ್ಕರಿಸುತ್ತೇನೆ. ನದೀನದ ಗಳಿಗೆ ಸಮುದ್ರವು ಪರಮಾಶ್ರಯಸ್ಥಾನವಾಗಿರುವಂತೆ–ಸಮಸ್ತವಾದ ವೇದ ಶಾಸ್ತ್ರಗಳಿಗೂ ನೀನು ಸಮುದ್ರಪ್ರಾಯನಾಗಿರುವೆ. ಮೋಕ್ಷಸ್ವರೂಪನಾದ ಮತ್ತು ಸಾಧು-ಸತ್ಪುರುಷರಿಗೆ ಪರಮಾಶ್ರಯನಾದ ನಿನಗೆ ನಮಸ್ಕಾರವು.

ಗುಣಾರಣಿಚ್ಛನ್ನಚಿದೂಷ್ಮಪಾಯ
ತತ್ಕ್ಷೋಭವಿಸ್ಫೂರ್ಜಿತಮಾನಸಾಯ ।
ನೈಷ್ಕರ್ಮ್ಯಭಾವೇನ ವಿವರ್ಜಿತಾಗಮ-
ಸ್ವಯಂಪ್ರಕಾಶಾಯ ನಮಸ್ಕರೋಮಿ ॥೧೬॥

ಯಾವ ರೀತಿಯಲ್ಲಿ ಕಡೆಯಲ್ಪಡುವ ಮರದ ಕೊರಡಿನಲ್ಲಿ ಅಗ್ನಿಯು ಗುಪ್ತವಾಗಿರುವುದೋ ಅದೇ ರೀತಿಯಲ್ಲಿ ನಿನ್ನ ಸಂಬಂಧವಾದ ಜ್ಞಾನವನ್ನು ಗುಣಗಳೆಂಬ ಮಾಯೆಯ ಮೂಲಕವಾಗಿ ಮುಚ್ಚಿಬಿಟ್ಟಿರುವೆ. ಸತ್ತ್ವಾದಿ ಗುಣಗಳಲ್ಲಿ ಕ್ಷೋಭೆಯುಂಟಾದಾಗ (ಅವು ಚಲಿಸಲು ಪ್ರಾರಂಭಿಸಿದಾಗ) ಅವುಗಳ ಮೂಲಕವಾಗಿ ವಿಧ-ವಿಧವಾದ ಸೃಷ್ಟಿಯನ್ನು ಮಾಡಲು ನೀನು ಸಂಕಲ್ಪಿಸುವೆ. ಸರ್ವಕರ್ಮಸಂನ್ಯಾಸವನ್ನು ಅಥವಾ ಸರ್ವಕರ್ಮಫಲಪರಿ ತ್ಯಾಗವನ್ನು ಮಾಡಿ ವಿಧಿ-ನಿಷೇಧಗಳಿಗೆ ಒಳಪಡದಿರುವ ಜ್ಞಾನಿಗಳ ಹೃದಯ ದಲ್ಲಿ ನೀನು ಸ್ವಯಂಪ್ರಕಾಶನಾಗಿರುವೆ. ಇಂತಹ ನಿನಗೆ ನಮಸ್ಕಾರವು.*

---

* ಗುಣಗಳ ಸಾಮ್ಯರೂಪವಾದ ಪ್ರಕೃತಿ ಎಂಬ ಅರಣಿಯಲ್ಲಿ ಲೀನವಾಗಿರುವ ಜೀವಸಮಷ್ಟಿಯೆಂಬ ಅಗ್ನಿಯನ್ನು ಪ್ರಳಯಕಾಲದಲ್ಲಿ ತನ್ನಲ್ಲಡಗಿಸಿಕೊಂಡು ಕಾಪಾಡುವನೆಂಬ ತಾತ್ಪರ್ಯ. (ವೀರರಾಘವೀಯ)

ಮಾದೃಕ್ಪ್ರಪನ್ನಪಶುಪಾಶವಿಮೋಕ್ಷಣಾಯ
ಮುಕ್ತಾಯ ಭೂರಿಕರುಣಾಯ ನಮೋಽಲಯಾಯ ।
ಸ್ವಾಂಶೇನ ಸರ್ವತನುಭೃನ್ಮನಸಿ ಪ್ರತೀತ-
ಪ್ರತ್ಯಗ್ದೃಶೇ ಭಗವತೇ ಬೃಹತೇ ನಮಸ್ತೇ ॥೧೭॥

ದಯಾಳುವಾದ ಮನುಷ್ಯನೊಬ್ಬನು ಬಂಧನಕ್ಕೆ ಸಿಕ್ಕಿಹಾಕಿಕೊಂಡಿ ರುವ ಪಶುವನ್ನು ಬಿಡಿಸುವಂತೆ ಸಂಸಾರಬಂಧನದಿಂದ ಬಂಧಿಸಲ್ಪಟ್ಟಿರುವ ಶರಣಾಗತನಾಗಿರುವ ನನ್ನನ್ನೂ ವಿಮುಕ್ತಿಗೊಳಿಸುವೆ. ನೀನು ನಿತ್ಯಮುಕ್ತ ನಾಗಿರುವೆ. ಕರುಣಾಮಯನಾಗಿರುವೆ. ಭಕ್ತರಿಗೆ ಕಲ್ಯಾಣವನ್ನುಂಟುಮಾಡಲು ನಿನಗೆ ಯಾವಾಗಲೂ ಆಲಸ್ಯವೆಂಬುದೇ ಇಲ್ಲ. ಅಂತಹ ಪರಮ ಕಾರುಣಿಕನಾದ ನಿನಗೆ ನಮಸ್ಕರಿಸುತ್ತೇನೆ. ಸಮಸ್ತಪ್ರಾಣಿಗಳ ಹೃದಯ ದಲ್ಲಿಯೂ ನಿನ್ನ ಅಂಶದ ಮೂಲಕವಾಗಿ ಅಂತರಾತ್ಮನ ರೂಪದಲ್ಲಿ ನೀನು ಸರ್ವೈಶ್ವರ್ಯಪೂರ್ಣನೂ ಅಪರಿಚ್ಛಿನ್ನನೂ ಆಗಿರುವೆ. ಇಂತಹ ನಿನಗೆ ನಮಸ್ಕಾರಮಾಡುತ್ತೇನೆ.

ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈ-
ರ್ದುಷ್ಪ್ರಾಪಣಾಯ ಗುಣಸಙ್ಗವಿವರ್ಜಿತಾಯ ।
ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ
ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥೧೮॥

ಯಾವ ಮನುಷ್ಯರು ತಾನು, ತನ್ನ ಮಗ, ಪತ್ನೀ–ತನಗೆ ಆಪ್ತರಾದ ವರು, ತನ್ನ ಐಶ್ವರ್ಯ, ತನ್ನ ಜನರು, ಮನೆ-ಮಠ–ಇವುಗಳಲ್ಲಿಯೇ ಆಸಕ್ತ ರಾಗಿರುವರೋ ಅಂತಹವರಿಗೆ ನೀನು ದೊರೆಯುವುದಿಲ್ಲ . ಏಕೆಂದರೆ: ನೀನು ಗುಣಗಳ ಸಂಗದಿಂದ ಮುಕ್ತನಾಗಿರುವೆ. ಗುಣಾತೀತನಾಗಿರುವೆ. ಆದುದ

ಜ್ಞಾನ-ವೈರಾಗ್ಯ ಮೊದಲಾದ ಗುಣಗಳನ್ನುಂಟುಮಾಡುವ ಭಕ್ತಿಯೆಂಬ ಅರಣಿಯಲ್ಲಿ ಅಡಗಿರುವ ಜೀವನೆಂಬ ಅಗ್ನಿಯನ್ನು ಸಲಹುವವನಾಗಿಯೂ, ತನ್ನ ಭಕ್ತರ ವಿಷಯಕವಾದ ಸ್ನೇಹದಿಂದ ಸಂತುಷ್ಟವಾದ ಮನಸ್ಸುಳ್ಳವನಾಗಿಯೂ ತನ್ನಲ್ಲಿಯೇ ಮನಸ್ಸನ್ನಿಟ್ಟು ಭಕ್ತಿಗೆ ವಿರುದ್ಧಗಳಾದ ವಿಧಿ-ನಿಷೇಧಗಳಿಗೊಳಗಾಗದ ಏಕಾಂತ ಭಕ್ತರ ಮನಸ್ಸಿನಲ್ಲಿ ಪರಮಾನಂದಮೂರ್ತಿಯಾಗಿ ಆವಿರ್ಭವಿಸುವ ಭಗವಂತನಿಗೆ ನಮಸ್ಕಾರವು.

(ಸಿದ್ಧಾಂತದೀಪಿಕಾ)

ರಿಂದ ಸತ್ತ್ವ-ರಜಸ್ಸೇ ಮೊದಲಾದ ಗುಣಗಳಿಂದ ಕೂಡಿದವರೊಡನೆ ನಿನ್ನ ಸಂಗವಿರುವುದಿಲ್ಲ. ಅಂತಹವರಿಗೆ ನೀನು ಲಭಿಸುವುದಿಲ್ಲ. ಜೀವನ್ಮುಕ್ತರು ಅಥವಾ ಪ್ರಕೃತಿಯ ಗುಣಗಳಿಂದ ವಿಮುಕ್ತರಾದ ಶುದ್ಧಾತ್ಮರು ನಿನ್ನನ್ನೇ ತಮ್ಮ ಹೃದಯಗಳಲ್ಲಿ ನಿರಂತರವಾಗಿ ಧ್ಯಾನಮಾಡುತ್ತಿರುತ್ತಾರೆ. ಅಂತಹ ಸರ್ವೇಶ್ವರನಾದ ಜ್ಞಾನಸ್ವರೂಪನಾದ ಶ್ರೀಭಗವಂತನಿಗೆ ನಮಸ್ಕರಿಸುತ್ತೇನೆ.

ಯಂ ಧರ್ಮಕಾಮಾರ್ಥವಿಮುಕ್ತಿಕಾಮಾ
ಭಜನ್ತ ಇಷ್ಟಾಂ ಗತಿಮಾಪ್ನುವನ್ತಿ ।
ಕಿಂ ತ್ವಾಶಿಷೋ ರಾತ್ಯಪಿ ದೇಹಮವ್ಯಯಂ
ಕರೋತು ಮೇಽದಭ್ರದಯೋ ವಿಮೋಕ್ಷಣಮ್ ॥೧೯॥

ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಪಡೆದುಕೊಳ್ಳಲು ಮಾನವರು ಶ್ರೀಭಗವಂತನನ್ನು ಆರಾಧಿಸಿ ತಮಗೆ ಇಷ್ಟವಾದುದನ್ನು ಪಡೆದುಕೊಳ್ಳುತ್ತಾರೆ. ಇಷ್ಟು ಮಾತ್ರವಲ್ಲ. ಪ್ರಸನ್ನನಾದ ಶ್ರೀಭಗವಂತನು ಭಕ್ತರಿಗೆ ಇತರ ಅನೇಕವಿಧವಾದ ಫಲಗಳನ್ನೂ ನಾಶರಹಿತವಾದ ದಿವ್ಯಶರೀರವನ್ನೂ ದಯಪಾಲಿಸುತ್ತಾನೆ. ಅಂತಹ ಅಧಿಕ ದಯೆಯುಳ್ಳ ಪರಮಾತ್ಮನು ಈ ಮೊಸಳೆಯಿಂದ ನನ್ನನ್ನು ಬಿಡುಗಡೆ ಮಾಡಲಿ.*

ಏಕಾನ್ತಿನೋ ಯಸ್ಯ ನ ಕಞ್ಚನಾರ್ಥಂ
ವಾಞ್ಛನ್ತಿ ಯೇ ವೈ ಭಗವತ್ಪ್ರಪನ್ನಾಃ ।
ಅತ್ಯದ್ಭುತಂ ತಚ್ಚರಿತಂ ಸುಮಙ್ಗಲಂ
ಗಾಯನ್ತ ಆನನ್ದಸಮುದ್ರಮಗ್ನಾಃ ॥೨೦॥

ಶ್ರೀಭಗವಂತನಿಗೆ ಸಂಪೂರ್ಣವಾಗಿ ಶರಣಾಗತರಾದ ಅವನ ಅನನ್ಯ

---

* ಗಜೇನ್ದ್ರೋ ಭಗವತ್ಸ್ಪರ್ಶಾದ್ವಿಮುಕ್ತೋಽಜ್ಞಾನಬನ್ಧನಾತ್ । ಪ್ರಾಪ್ತೋ ಭಗವತೋ ರೂಪಂ ಪೀತವಾಸಾಶ್ಚತುರ್ಭುಜಃ ॥ ಗಜೇಂದ್ರನು ಭಗವಂತನ ಹಸ್ತಸ್ಪರ್ಶದಿಂದ ಅಜ್ಞಾನವನ್ನು ಕಳೆದುಕೊಂಡು ಚತುರ್ಭುಜನೂ ಪೀತಾಂಬರಧಾರಿಯೂ ಆಗಿ ಭಗವಂತನ ರೂಪವನ್ನೇ ಪಡೆದನು–ಎಂಬುದರಿಂದ ಶ್ರೀಹರಿಯು ಭಕ್ತರಿಗೆ ತನಗೆ ಸಮಾನವಾದ ರೂಪವನ್ನು ಕೊಡುವನೆಂಬ ಭಾವವು. (ವಿಜಯಧ್ವಜೀಯ)

ಭಕ್ತರು ಭಗವಂತನಿಂದ ಯಾವುದೇ ಪ್ರಯೋಜನವನ್ನೂ ಅಪೇಕ್ಷಿಸುವುದಿಲ್ಲ. ಭೋಗವಸ್ತುಗಳು ಹಾಗಿರಲಿ ; ಸರ್ವಾಪೇಕ್ಷಿತವಾದ ಮುಕ್ತಿಯನ್ನೂ ಬಯಸುವುದಿಲ್ಲ. ಮಂಗಳಕರವಾದ ಅತ್ಯದ್ಭುತವಾದ ಪರಮಾತ್ಮನ ಚರಿತ್ರೆಗಳನ್ನು ಹಾಡುತ್ತಾ, ನಲಿಯುತ್ತಾ, ಕುಣಿಯುತ್ತಾ ಆನಂದಸಮುದ್ರದಲ್ಲಿ ಮುಳುಗಿಬಿಡುತ್ತಾರೆ. ಅಂತಹ ಭಕ್ತರಿಗೂ ಭಕ್ತವತ್ಸಲನಾದ ಪರಮಾತ್ಮನಿಗೂ ನಮಸ್ಕಾರಮಾಡುತ್ತೇನೆ.

ತಮಕ್ಷರಂ ಬ್ರಹ್ಮಪರಂ ಪರೇಶ-
ಮವ್ಯಕ್ತಮಾಧ್ಯಾತ್ಮಿಕಯೋಗಗಮ್ಯಮ್ ।
ಅತೀನ್ದ್ರಿಯಂ ಸೂಕ್ಷ್ಮಮಿವಾತಿದೂರ-
ಮನನ್ತಮಾದ್ಯಂ ಪರಿಪೂರ್ಣಮೀಡೇ ॥೨೧॥

ಅವಿನಾಶಿಯಾದ, ಪರಬ್ರಹ್ಮಸ್ವರೂಪನಾದ, ಬ್ರಹ್ಮಾದಿಗಳಿಗೂ ಈಶನಾದ, ಅವ್ಯಕ್ತನಾದ, ಅಧ್ಯಾತ್ಮಯೋಗಗಳಾದ ಭಕ್ತಿಯೋಗ-ಜ್ಞಾನಯೋಗಗಳಿಂದ ತಿಳಿಯಲ್ಪಡುವ, ಇಂದ್ರಿಯಾತೀತನಾದ, ಮಹತೋಮಹೀಯನಾದರೂ ಸೂಕ್ಷ್ಮಾತ್ಸೂಕ್ಷ್ಮತರನಾದ, ಹತ್ತಿರದಲ್ಲಿಯೇ ಇದ್ದರೂ ಹೃದಯಗುಹೆಯಲ್ಲಿಯೇ ಇದ್ದರೂ ಎಲ್ಲಿಯೋ ದೂರದಲ್ಲಿರುವಂತೆ ಭಾಸವಾಗುವ, ಆದ್ಯಂತರಹಿತನಾದ, ಪರಿಪೂರ್ಣಸ್ವರೂಪನಾದ ಪರಬ್ರಹ್ಮಪರಮಾತ್ಮನನ್ನು ಸ್ತೋತ್ರಮಾಡುತ್ತೇನೆ.

ಯಸ್ಯ ಬ್ರಹ್ಮಾದಯೋ ದೇವಾ ವೇದಾ ಲೋಕಾಶ್ಚರಾಚರಾಃ ।
ನಾಮರೂಪವಿಭೇದೇನ ಫಲ್ಗ್ವ್ಯಾ ಚ ಕಲಯಾ ಕೃತಾಃ ॥೨೨॥

ಯಾವನ ಅತ್ಯಲ್ಪವಾದ ಅಂಶದಿಂದ ನಾನಾರೂಪಗಳ ಮತ್ತು ನಾಮಗಳ ಭೇದದಿಂದ ಕೂಡಿದ ಬ್ರಹ್ಮಾದಿದೇವತೆಗಳೂ, ವೇದಗಳೂ, ಚರಾಚರಗಳೂ, ಲೋಕಗಳೂ ರಚಿತವಾದುವೋ–ಅಂತಹ ಪರಮಾತ್ಮನಿಗೆ ನಮಸ್ಕರಿಸುತ್ತೇನೆ.

ಯಥಾರ್ಚಿಷೋಽಗ್ನೇಃ ಸವಿತುರ್ಗಭಸ್ತಯೋ
ನಿರ್ಯಾನ್ತಿ ಸಂಯಾನ್ತ್ಯಸಕೃತ್ ಸ್ವರೋಚಿಷಃ ।
ತಥಾ ಯತೋಽಯಂ ಗುಣಸಮ್ಪ್ರವಾಹೋ
ಬುದ್ಧಿರ್ಮನಃ ಖಾನಿ ಶರೀರಸರ್ಗಾಃ ॥೨೩॥

ಯಾವ ರೀತಿಯಲ್ಲಿ ಅಗ್ನಿಯಿಂದ ಜ್ವಾಲೆಗಳೂ ಸೂರ್ಯನಿಂದ ಕಿರಣಗಳೂ ಹಲವಾರು ಬಾರಿ ಹೊರಹೊಮ್ಮುವುವೋ ಮತ್ತು ಲೀನವಾಗುವುವೋ ಹಾಗೆಯೇ ಪರಮಾತ್ಮನಿಂದ ಬುದ್ಧಿ, ಮನಸ್ಸು, ಇಂದ್ರಿಯ ಮತ್ತು ಶರೀರಗಳ ಪ್ರವಾಹರೂಪವಾದ ಪ್ರಪಂಚವು ಸೃಷ್ಟಿಯರೂಪದಲ್ಲಿ ಹೊರಬರುತ್ತಿರುತ್ತದೆ. ಲಯರೂಪದಲ್ಲಿ ಲೀನವಾಗುತ್ತಿರುತ್ತದೆ. ಅಂತಹ ಪರಮಾತ್ಮನಿಗೆ ನಮಸ್ಕರಿಸುತ್ತೇನೆ.

ಸ ವೈ ನ ದೇವಾಸುರಮರ್ತ್ಯತಿರ್ಯ-
ಙ್ನ ಸ್ತ್ರೀ ನ ಷಣ್ಢೋ ನ ಪುಮಾನ್ನ ಜನ್ತುಃ ।
ನಾಯಂ ಗುಣಃ ಕರ್ಮ ನ ಸನ್ನ ಚಾಸ-
ನ್ನಿಷೇಧಶೇಷೋ ಜಯತಾದಶೇಷಃ ॥೨೪॥

ಆ ಭಗವಂತನು ದೇವತೆಯಲ್ಲ, ರಾಕ್ಷಸನಲ್ಲ, ಮನುಷ್ಯನಲ್ಲ, ತಿರ್ಯಗ್ಜಂತುವಲ್ಲ, ಹೆಣ್ಣಲ್ಲ, ಗಂಡಲ್ಲ, ನಪುಂಸಕನೂ ಅಲ್ಲ, ಅಸಾಧಾರಣವಾದ ಅಥವಾ ಸಾಧಾರಣವಾದ ಪ್ರಾಣಿಯೂ ಅಲ್ಲ, ಗುಣವಲ್ಲ, ಕರ್ಮಕಾರ್ಯವೂ ಅಲ್ಲ, ಕಾರಣವೂ ಅಲ್ಲ, ಸತ್ತಲ್ಲ-ಅಸತ್ತಲ್ಲ. ಈ ಸಕಲ ವಸ್ತುಗಳಿಗಿಂತಲೂ ಬೇರೆಯಾಗಿರುವ ಇವು ಯಾವುವೂ ಅಲ್ಲವೆಂದು ನಿಷೇಧಿಸಿದ ಬಳಿಕ ಉಳಿಯುವ ಸರ್ವಾತ್ಮನಾದ ಭಗವಂತನು ನನ್ನ ಉದ್ಧಾರಕ್ಕಾಗಿ ಪ್ರಕಟವಾಗಲಿ.

ಜಿಜೀವಿಷೇ ನಾಹಮಿಹಾಮುಯಾ ಕಿ-
ಮನ್ತರ್ಬಹಿಶ್ಚಾವೃತಯೇಭಯೋನ್ಯಾ ।
ಇಚ್ಛಾಮಿ ಕಾಲೇನ ನ ಯಸ್ಯ ವಿಪ್ಲವ-
ಸ್ತಸ್ಯಾತ್ಮಲೋಕಾವರಣಸ್ಯ ಮೋಕ್ಷಮ್ ॥೨೫॥

ಓ ಭಗವಂತ! ನಾನು ಈ ಮೊಸಳೆಯಿಂದ ಬಿಡಿಸಿಕೊಂಡು ಬದುಕಿರಲು ಇಚ್ಛಿಸುತ್ತಿಲ್ಲ. ಹೊರಗೂ-ಒಳಗೂ ಸಮಾವೃತವಾಗಿರುವ ಈ ಆನೆಯ ಶರೀರದಿಂದ ನನಗೇನಾಗಬೇಕಾಗಿದೆ? ನಾನಾದರೋ ಆತ್ಮಪ್ರಕಾಶವನ್ನು ಮುಚ್ಚಿಬಿಟ್ಟಿರುವ ಅಜ್ಞಾನರೂಪವಾದ ಆವರಣದಿಂದ ಮುಕ್ತಿಯನ್ನು ಪಡೆಯಲು ಆಶಿಸಿದ್ದೇನೆ. ಕಾಲಾನುಕ್ರಮವಾಗಿ ಆ ಅಜ್ಞಾನವು ತಾನೇ ತಾನಾಗಿ

ಹೋಗಿಬಿಡುವುದಿಲ್ಲ. ಆ ಅಜ್ಞಾನವು ಕೇವಲ ಭಗವತ್ಕೃಪೆಯಿಂದಲೂ ಮತ್ತು ತತ್ತ್ವಜ್ಞಾನದಿಂದಲೂ ನಾಶಹೊಂದುತ್ತದೆ.

ಸೋಽಹಂ ವಿಶ್ವಸೃಜಂ ವಿಶ್ವಮವಿಶ್ವಂ ವಿಶ್ವವೇದಸಮ್ ।
ವಿಶ್ವಾತ್ಮಾನಮಜಂ ಬ್ರಹ್ಮ ಪ್ರಣತೋಽಸ್ಮಿ ಪರಂ ಪದಮ್ ॥೨೬॥

ಆದುದರಿಂದ ಅಜ್ಞಾನವೆಂಬ ಆವರಣದಿಂದ ಮುಕ್ತಿಯನ್ನು ಪಡೆಯಲು ಇಚ್ಛಿಸಿರುವ ನಾನು–ವಿಶ್ವವಲ್ಲದಿದ್ದರೂ ವಿಶ್ವದ ಸೃಷ್ಟಿಗೆ ಕಾರಣನಾದ, ವಿಶ್ವಸ್ವರೂಪನಾದ, ವೇದಗಳನ್ನೇ ಉಪಕರಣಗಳನ್ನಾಗಿ ಹೊಂದಿರುವ, ವಿಶ್ವವನ್ನೇ ಆತ್ಮನಲ್ಲಿ ಧರಿಸಿರುವ, ಹುಟ್ಟು-ಸಾವುಗಳಿಲ್ಲದ ಪರಮಪದ ಸ್ವರೂಪನಾದ ಪರಬ್ರಹ್ಮವನ್ನು ನಮಸ್ಕರಿಸುತ್ತೇನೆ.

ಯೋಗರನ್ಧಿತಕರ್ಮಾಣೋ ಹೃದಿ ಯೋಗವಿಭಾವಿತೇ ।
ಯೋಗಿನೋ ಯಂ ಪ್ರಪಶ್ಯನ್ತಿ ಯೋಗೇಶಂ ತಂ ನತೋಽಸ್ಮ್ಯಹಮ್ ॥

ಯೋಗಿಗಳು ಭಕ್ತಿಯೋಗದ ಮೂಲಕವಾಗಿ ಕರ್ಮ, ಕರ್ಮವಾಸನೆ ಮತ್ತು ಕರ್ಮಫಲಗಳನ್ನು ಭಸ್ಮಮಾಡಿ ಭಕ್ತಿಯೋಗದಿಂದ ಶುದ್ಧವಾದ ಹೃದಯದಿಂದ ಯಾವ ಯೋಗೇಶ್ವರ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳು ವರೋ–ಅಂತಹ ಯೋಗಗಮ್ಯನಾದ ಪ್ರಭುವನ್ನು ನಮಸ್ಕರಿಸುತ್ತೇನೆ.

ನಮೋ ನಮಸ್ತುಭ್ಯಮಸಹ್ಯವೇಗ-
ಶಕ್ತಿತ್ರಯಾಯಾಖಿಲಧೀಗುಣಾಯ ।
ಪ್ರಪನ್ನಪಾಲಾಯ ದುರನ್ತಶಕ್ತಯೇ
ಕದಿನ್ದ್ರಿಯಾಣಾಮನವಾಪ್ಯವರ್ತ್ಮನೇ ॥೨೮॥

ಪ್ರಭುವೇ! ನೀನು ಸಹಿಸಲು ಅಸಾಧ್ಯವಾದ ವೇಗವುಳ್ಳ (ಸತ್ತ್ವ ರಜಸ್ತಮಗಳೆಂಬ) ಮೂರು ಶಕ್ತಿಗಳನ್ನು ಹೊಂದಿರುವೆ. ಎಲ್ಲ ಬುದ್ಧಿಗುಣ ಗಳನ್ನೂ ಹೊಂದಿರುವೆ. ಆದುದರಿಂದ ಯಾವನು ಜಿತೇಂದ್ರಿಯನಲ್ಲವೋ ಅಂತಹವನಿಗೆ ನಿನ್ನನ್ನು ಹೊಂದುವ ಮಾರ್ಗವೂ ತಿಳಿಯದಾಗುತ್ತದೆ. ನೀನು ಅಪಾರವಾದ ಶಕ್ತಿಯುಳ್ಳವನು. ಶರಣಾಗತರಕ್ಷಕನು. ನಿನ್ನನ್ನು ಬಾರಿ-ಬಾರಿಗೂ ನಮಸ್ಕರಿಸುತ್ತೇನೆ.

ನಾಯಂ ವೇದ ಸ್ವಮಾತ್ಮಾನಂ ಯಚ್ಛಕ್ತ್ಯಾಹಂ ಧಿಯಾ ಹತಮ್ ।
ತಂ ದುರತ್ಯಯಮಾಹಾತ್ಮ್ಯಂ ಭಗವನ್ತಮಿತೋಽಸ್ಮ್ಯಹಮ್ ॥೨೯॥

ನಿನ್ನ ಮಾಯಾಶಕ್ತಿಯಿಂದ ಜೀವನಿಗೆ ಅಹಂಭಾವವುಂಟಾಗಿ ಸ್ವರೂಪ ಜ್ಞಾನವೇ ಹಾಳಾಗಿಹೋಗಿದೆ. ಜೀವನು ತನ್ನ ಸ್ವರೂಪವನ್ನೇ ತಿಳಿಯದವನಾಗಿದ್ದಾನೆ. ಅಂತಹ ಅಹಂಭಾವವಿರುವವರಿಗೆ ತಿಳಿಯಲು ಅಶಕ್ಯನಾದ ಅಪಾರಮಹಿಮನಾದ ಶ್ರೀಭಗವಂತನಿಗೆ ಶರಣಾಗುತ್ತೇನೆ.”

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತ! ಹೀಗೆ ಗಜೇಂದ್ರನು ಯಾವ ವಿಧವಾದ ವ್ಯತ್ಯಾಸವೂ ಇಲ್ಲದೆ ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ಆತ್ಮಸ್ವರೂಪದಿಂದ ಪ್ರಕಾಶಿ ಸುವ ಪರಬ್ರಹ್ಮಪರಮಾತ್ಮನನ್ನೇ ಪ್ರಾರ್ಥಿಸಿದನು. ಭಿನ್ನ-ಭಿನ್ನವಾದ ನಾಮಗಳಿಂದಲೂ, ಸ್ವರೂಪಗಳಿಂದಲೂ, ಶಕ್ತಿಗಳಿಂದಲೂ ಪ್ರತ್ಯೇಕವಾದ ಅಸ್ತಿತ್ವವನ್ನು ಪಡೆದಿರುವ ಬ್ರಹ್ಮಾದಿದೇವತೆಗಳಾರೂ ಗಜೇಂದ್ರನ ರಕ್ಷಣೆಗಾಗಿ ಹೋಗಲಿಲ್ಲ. ಏಕೆಂದರೆ ಗಜೇಂದ್ರನು ಅವರ ನಾಮಗಳನ್ನು ನಿರ್ದೇಶಿಸಿ ಅವರನ್ನು ಪ್ರಾರ್ಥಿಸಲಿಲ್ಲ. ಆ ಸಮಯದಲ್ಲಿ ಗಜೇಂದ್ರನು ಪ್ರಾರ್ಥಿಸಿದಂತೆ ಸರ್ವಾತ್ಮಕನಾಗಿರುವುದರಿಂದ ಸಕಲದೇವತಾಸ್ವರೂಪನಾದ ಭಗವಂತನಾದ ಶ್ರೀಹರಿಯೇ ಪ್ರತ್ಯಕ್ಷನಾದನು.

ಜಗತ್ತಿಗೇ ನಿವಾಸಸ್ಥಾನನಾದ ಶ್ರೀಹರಿಯು ಮೊಸಳೆಯಿಂದ ಪೀಡಿಸಲ್ಪಡುತ್ತಿದ್ದ ಗಜೇಂದ್ರನನ್ನು ನೋಡಿದನು. ಅವನು ಏಕಾಗ್ರಚಿತ್ತನಾಗಿ ಮಾಡುತ್ತಿದ್ದ ಸ್ತೋತ್ರವನ್ನೂ ಕೇಳಿದನು. ದೇವತೆಗಳೆಲ್ಲರೂ ಸ್ತೋತ್ರ ಮಾಡುತ್ತಿರಲು ಅವನು ವೇದಸ್ವರೂಪನಾದ ಗರುಡನ ಮೇಲೆ ಕುಳಿತು ಚಕ್ರಾಯುಧವನ್ನು ಹಿಡಿದು ಗಜೇಂದ್ರನಿದ್ದೆಡೆಗೆ ಬಹುಬೇಗ ದಯಮಾಡಿಸಿದನು. ಆ ಸಮಯದಲ್ಲಿ ಸರೋವರದಲ್ಲಿದ್ದ ಬಲಿಷ್ಠವಾದ ಮೊಸಳೆಯಿಂದ ಸೆಳೆಯಲ್ಪಡುತ್ತಿದ್ದ ಗಜೇಂದ್ರನು ಬಹಳ ವ್ಯಾಕುಲಗೊಂಡಿದ್ದನು. ಆಕಾಶದಲ್ಲಿ ಚಕ್ರಪಾಣಿಯಾಗಿ ಗರುಡನ ಮೇಲೆ ಕುಳಿತಿದ್ದ ಶ್ರೀಹರಿಯನ್ನು ನೋಡಿದೊಡನೆಯೇ ಗಜೇಂದ್ರನು ಬಹಳ ಕಷ್ಟದಿಂದ ದಿವ್ಯವಾದ ಕಮಲವೊಂದನ್ನು ತನ್ನ ಸೊಂಡಿಲಿನಿಂದ ಮೇಲೆತ್ತಿ ಶ್ರೀಹರಿಗೆ ಸಮರ್ಪಿಸುತ್ತಾ ಅನನ್ಯಶರಣನಾಗಿ ಹೀಗೆ ಸ್ತುತಿಸಿದನು :

ನಾರಾಯಣಾಖಿಲಗುರೋ ಭಗವನ್ನಮಸ್ತೇ ॥೩೨॥

"ನಾರಾಯಣನೇ! ಜಗದ್ಗುರುವೇ! ಶ್ರೀಭಗವಂತನೇ! ನಿನಗೆ ನಮೋ ನಮಃ."

ಗಜೇಂದ್ರನು ಮೊಸಳೆಯಿಂದ ಪೀಡಿಸಲ್ಪಡುತ್ತಿದ್ದುದನ್ನು ನೋಡಿದೊಡನೆಯೇ ದಯಾಮಯನಾದ ನಾರಾಯಣನು ಗರುಡನಿಂದ ಥಟ್ಟನೆ ಕೆಳಗಿಳಿದು ಗಜೇಂದ್ರನೊಡನೆ ಅದರ ಕಾಲನ್ನು ಹಿಡಿದಿದ್ದ ಮೊಸಳೆಯನ್ನು ಶೀಘ್ರಾತಿಶೀಘ್ರವಾಗಿ ಸರೋವರದಿಂದ ಮೇಲಕ್ಕೆ ಎಳೆದುಕೊಂಡನು. ಮರುಕ್ಷಣದಲ್ಲಿ ಎಲ್ಲ ದೇವತೆಗಳೂ ನೋಡುತ್ತಿದ್ದಂತೆಯೇ ಚಕ್ರಾಯುಧದಿಂದ ಮೊಸಳೆಯ ಬಾಯನ್ನು ಸೀಳಿ ಗಜೇಂದ್ರನನ್ನು ಮೊಸಳೆಯ ಹಿಡಿತದಿಂದ ಮುಕ್ತಗೊಳಿಸಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೪ನೆಯ ಅಧ್ಯಾಯ

ಆನೆ ಮತ್ತು ಮೊಸಳೆಗಳ ಪೂರ್ವಚರಿತ್ರೆ: ಅವುಗಳ ಉದ್ಧಾರ

ಶ್ರೀಶುಕಮುನಿಗಳು ಹೇಳುತ್ತಾರೆ :

ತದಾ ದೇವರ್ಷಿಗನ್ಧರ್ವಾ ಬ್ರಹ್ಮೇಶಾನಪುರೋಗಮಾಃ ।
ಮುಮುಚುಃ ಕುಸುಮಾಸಾರಂ ಶಂಸನ್ತಃ ಕರ್ಮ ತದ್ಧರೇಃ ॥೧॥

ಪರೀಕ್ಷಿತ! ಆ ಸಮಯದಲ್ಲಿ ಬ್ರಹ್ಮ, ಈಶಾನನೇ ಮುಂತಾದ ದೇವತೆಗಳು, ಗಂಧರ್ವರು ಶ್ರೀಹರಿಯ ಆ ಅದ್ಭುತಕಾರ್ಯವನ್ನು ಪ್ರಶಂಸೆಮಾಡುತ್ತಾ ಹೂಮಳೆಯನ್ನು ಧಾರಾಕಾರವಾಗಿ ಸುರಿಸಿದರು.

ಸ್ವರ್ಗದ ದೇವದುಂದುಭಿಗಳು ಮೊಳಗಿದುವು. ಗಂಧರ್ವಾಪ್ಸರೆಯರು ನೃತ್ಯಗಾನಗಳನ್ನು ಮಾಡತೊಡಗಿದರು. ಋಷಿ-ಚಾರಣ-ಸಿದ್ಧರು ಪುರುಷೋತ್ತಮನಾದ ಶ್ರೀಹರಿಯನ್ನು ಸ್ತೋತ್ರಮಾಡತೊಡಗಿದರು. ಗಜೇಂದ್ರನ ಕಾಲನ್ನು ಹಿಡಿದುಕೊಂಡಿದ್ದ ಆ ಮೊಸಳೆಯು ಶ್ರೀಹರಿಯ

ಚಕ್ರಪ್ರಹಾರವಾಗುತ್ತಲೇ ದೇವಲಮಹರ್ಷಿಯ ಶಾಪದಿಂದ ಬಿಡುಗಡೆ ಹೊಂದಿ ಪರಮಾಶ್ಚರ್ಯಕರವಾದ ರೂಪವನ್ನು ಧರಿಸಿ ಹೂಹೂ ಎಂಬ ಗಂಧರ್ವಶ್ರೇಷ್ಠನ ರೂಪವನ್ನು ಹೊಂದಿತು.* ಹಾಗೆ ಶ್ರೀಭಗವಂತನ ಅನುಗ್ರಹದಿಂದ ನಿಜಸ್ವರೂಪವನ್ನು ಪಡೆದು ಗಂಧರ್ವನು ಅತಿಶಯ ಯಶೋವಂತನಾದ, ಸಾರ್ವಭೌಮನಾದ, ನಾಶರಹಿತನಾದ, ಕೀರ್ತಿಧಾಮ ನಾದ, ಕೀರ್ತಿಸಬೇಕಾಗಿರುವ ಅಪಾರಕಲ್ಯಾಣಗುಣಗಣಗಳನ್ನೂ ಸಚ್ಚರಿತ್ರೆ ಗಳನ್ನೂ ಹೊಂದಿರುವ ಶ್ರೀಭಗವಂತನಿಗೆ ತಲೆಬಾಗಿ ನಮಸ್ಕರಿಸಿ ಅವನ ಅನುಪಮವಾದ ಗುಣಗಳನ್ನು ಗಾನಮಾಡತೊಡಗಿದನು. ಭಗವಂತನ ಕೃಪಾಪೂರ್ಣವಾದ ಸ್ಪರ್ಶದಿಂದ ಅವನ ಸಮಸ್ತಪಾಪಗಳೂ ಪರಿಹಾರ ವಾದುವು. ಗಂಧರ್ವನು ಭಗವಂತನ ಗುಣಗಳನ್ನು ಯಥೇಚ್ಛವಾಗಿ ಗಾನಮಾಡಿದನಂತರ ಪುನಃ ಪ್ರಭುವಿಗೆ ಪ್ರದಕ್ಷಿಣನಮಸ್ಕಾರಮಾಡಿ ಎಲ್ಲರೂ ನೋಡುತ್ತಿದ್ದಂತೆಯೇ ತನ್ನ ಲೋಕಕ್ಕೆ ಹೊರಟುಹೋದನು. ಗಜೇಂದ್ರನು ಕೂಡ ಭಗವಂತನ ದಿವ್ಯಸ್ಪರ್ಶವಾದೊಡನೆಯೇ ಅಜ್ಞಾನವೆಂಬ ಬಂಧನ ದಿಂದಲೂ ಬಿಡುಗಡೆಹೊಂದಿದನು. ಅವನಿಗೆ ಭಗವಂತನ ಸಾರೂಪ್ಯವು ಸಿಕ್ಕಿ ಭಗವಂತನಂತೆಯೇ ಚತುರ್ಭುಜನೂ ಪೀತಾಂಬರಧಾರಿಯೂ ಆಗಿ ಕಂಗೊಳಿಸಿದನು.

ಆ ಗಜೇಂದ್ರನು ಹಿಂದಿನ ಜನ್ಮದಲ್ಲಿ ದ್ರಾವಿಡರಲ್ಲಿ ಶ್ರೇಷ್ಠನಾಗಿದ್ದು, ಪಾಂಡ್ಯದೇಶಕ್ಕೆ ಅಧಿಪತಿಯಾಗಿದ್ದನು. ವಿಷ್ಣುವಿಗೆ ಸಂಬಂಧಿಸಿದ ವ್ರತಾದಿ

---

* ಹಿಂದೊಮ್ಮೆ ಹೂಹೂ ಎಂಬ ಗಂಧರ್ವನು ಸ್ತ್ರೀಯರಿಂದೊಡಗೂಡಿ ಒಂದು ಸರೋವರದಲ್ಲಿ ಜಲಕ್ರೀಡೆಯನ್ನಾಡುತ್ತಿದ್ದನು. ದೇವಲನೆಂಬ ಮಹರ್ಷಿಯು ಅಲ್ಲಿಗೆ ಸ್ನಾನಮಾಡಲು ಬಂದನು. ತನ್ನ ಕ್ರೀಡೆಗೆ ಭಂಗವಾಯಿತೆಂದು ಭಾವಿಸಿದ ಗಂಧರ್ವನು ದೇವಲಮುನಿಯನ್ನು ಹಿಗ್ಗಾ-ಮುಗ್ಗಾ ಎಳೆದಾಡಿದನು. ಆಗ ಕುಪಿತನಾದ ಆ ಮುನಿಯು ಗಂಧರ್ವನಿಗೆ ಮೊಸಳೆಯಾಗೆಂದು ಶಾಪವನ್ನಿತ್ತನು. ಗಂಧರ್ವನು ಶಾಪದ ಪರಿಹಾರಕ್ಕಾಗಿ ಪ್ರಾರ್ಥಿಸಲು ಕರುಣಾಶಾಲಿಯಾದ ದೇವಲನು–'ನೀನು ಮೊಸಳೆ ಯಾಗುವುದು ತಪ್ಪಿದ್ದಲ್ಲ. ಆ ಜನ್ಮದಲ್ಲಿ ಹಲವಾರು ವರ್ಷಗಳು ಕಳೆದನಂತರ ನೀನು ಇರುವೆಡೆಗೆ ಗಜೇಂದ್ರನು ಬರುತ್ತಾನೆ. ಅವನನ್ನು ಹಿಡಿ. ಅವನ ಉದ್ಧಾರಕ್ಕಾಗಿ ಶ್ರೀಹರಿಯು ಬಂದು ನಿನ್ನನ್ನು ಈ ಶಾಪದಿಂದ ಮುಕ್ತಿಗೊಳಿಸುತ್ತಾನೆ'–ಎಂದು ಹೇಳಿ ಹೊರಟುಹೋದನು.

ಗಳಲ್ಲಿಯೇ ನಿಷ್ಠೆಯನ್ನು ಹೊಂದಿದ್ದ ಆ ರಾಜನು ಇಂದ್ರದ್ಯುಮ್ನನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಅವನೊಮ್ಮೆ ರಾಜ್ಯಸಿಂಹಾಸನವನ್ನು ಪರಿತ್ಯಾಗಮಾಡಿ ಮಲಯಪರ್ವತದಲ್ಲಿ ಆಶ್ರಮವನ್ನು ಕಟ್ಟಿಕೊಂಡು ಅಲ್ಲಿಯೇ ವಾಸವಾಗಿದ್ದನು. ಜಟಾಧರನಾಗಿ ತಪಸ್ವಿಯ ವೇಷ-ಭೂಷಣ ಗಳನ್ನು ಧರಿಸಿದ್ದನು. ಹೀಗೆಯೇ ಇರುತ್ತಿರಲಾಗಿ ಒಂದು ದಿನ ಇಂದ್ರದ್ಯುಮ್ನರಾಜನು ಸ್ನಾನವನ್ನು ಮಾಡಿ ಪೂಜೆಯ ಸಮಯದಲ್ಲಿ ಮನಸ್ಸನ್ನು ಶ್ರೀಭಗವಂತನಲ್ಲಿಯೇ ಏಕಾಗ್ರಗೊಳಿಸಿ ಮೌನದಿಂದ ಸರ್ವಶಕ್ತಿವಂತನೂ, ಲೋಕಾಧ್ಯಕ್ಷನೂ, ನಾಶರಹಿತನೂ ಆದ ಶ್ರೀಹರಿ ಯನ್ನು ಆರಾಧಿಸುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ದೈವಯೋಗದಿಂದ ಮಹಾಯಶೋವಂತರಾದ ಅಗಸ್ತ್ಯಮಹರ್ಷಿಗಳು ತಮ್ಮ ಹಲವಾರು ಶಿಷ್ಯರೊಡನೆ ಇಂದ್ರದ್ಯುಮ್ನನಿದ್ದ ಆಶ್ರಮಕ್ಕೆ ಆಗಮಿಸಿದರು. ಮೌನಿಯಾಗಿದ್ದ ರಾಜನು ಶಿಷ್ಯಸಮೇತರಾಗಿದ್ದ ಮಹರ್ಷಿಗಳಿಗೆ ಸ್ವಾಗತ-ಸತ್ಕಾರಗಳನ್ನು ಮಾಡಲಿಲ್ಲ. ಪರಮಾತ್ಮನನ್ನು ಮನಸ್ಸಿನಲ್ಲಿಯೇ ಉಪಾಸಿಸುತ್ತಿದ್ದನು. ದೇಶ-ಕಾಲ-ಪಾತ್ರಗಳಿಗೆ ಉಚಿತವಾದ ಕರ್ತವ್ಯವನ್ನು ಮಾಡದೆ ತಪಸ್ವಿಯಂತೆ ಏಕಾಂತದಲ್ಲಿ ಕುಳಿತು ಉಪಾಸನೆಮಾಡುತ್ತಿರುವುದನ್ನು ನೋಡಿ ಅಗಸ್ತ್ಯರು ರಾಜನ ಮೇಲೆ ಕೋಪಗೊಂಡು ಶಪಿಸಿದರು.

ತಸ್ಮಾ ಇಮಂ ಶಾಪಮದಾದಸಾಧು-
ರಯಂ ದುರಾತ್ಮಾಕೃತಬುದ್ಧಿರದ್ಯ ।
ವಿಪ್ರಾವಮನ್ತಾ ವಿಶತಾಂ ತಮೋಽನ್ಧಂ
ಯಥಾ ಗಜಃ ಸ್ತಬ್ಧಮತಿಃ ಸ ಏವ ॥೧೦॥

"ಈ ರಾಜನು ಗುರುಜನರಿಂದ ಶಿಕ್ಷಣವನ್ನು ಪಡೆದಿಲ್ಲ. ಇವನು ದುಷ್ಟನೂ ದುರಾತ್ಮನೂ ಆಗಿದ್ದಾನೆ. ಬ್ರಾಹ್ಮಣರನ್ನು ಅವಮಾನಿಸಿದ್ದಾನೆ. ಆನೆಯಂತೆ ಜಡಬುದ್ಧಿಯವನಾಗಿದ್ದಾನೆ. ಆದುದರಿಂದ ಇವನು ಘೋರವಾದ ಅಜ್ಞಾನವನ್ನು ಹೊಂದಿ ಆನೆಯಾಗಿಯೇ ಹುಟ್ಟಲಿ."

ಪರೀಕ್ಷಿತನೇ! ಶಾಪಕೊಡುವುದರಲ್ಲಿಯೂ ಮತ್ತು ವರವನ್ನು ದಯ

ಪಾಲಿಸುವುದರಲ್ಲಿಯೂ ಸಮರ್ಥರಾದ ಅಗಸ್ತ್ಯರು ಇಂದ್ರದ್ಯುಮ್ನರಾಜನಿಗೆ ಈ ಪರಿಯಾಗಿ ಶಾಪವನ್ನಿತ್ತು ತಮ್ಮ ಅನುಯಾಯಿಗಳಾದ ಶಿಷ್ಯರೊಡನೆ ಹೊರಟುಹೋದರು. ಇಂದ್ರದ್ಯುಮ್ನನು ಕೂಡ ಆ ಶಾಪವನ್ನು ದೈವದತ್ತ ವಾದುದೆಂದು ಆಲೋಚಿಸುತ್ತಾ ಸ್ವೀಕರಿಸಿದನು. ಅನಂತರ ಇಂದ್ರದ್ಯುಮ್ನನು ಆತ್ಮದ ಸ್ಮೃತಿಯನ್ನು ವಿನಾಶಗೊಳಿಸುವ ಆನೆಯ ಜನ್ಮದಲ್ಲಿ ಹುಟ್ಟಿದನು. ಆದರೆ ಶ್ರೀಭಗವಂತನನ್ನು ಪೂಜಿಸಿದ ಪ್ರಭಾವದಿಂದಾಗಿ ಇಂದ್ರದ್ಯುಮ್ನನಿಗೆ ಆನೆಯ ಜನ್ಮದಲ್ಲಿಯೂ ಹಿಂದಿನ ಜನ್ಮದ ಮರೆವು ಉಂಟಾಗಿರಲಿಲ್ಲ. ಶ್ರೀಹರಿಯನ್ನು ಏಕಾಂತದಲ್ಲಿ ಆರಾಧಿಸುತ್ತಿದ್ದುದು ಅವನ ಸ್ಮರಣೆಯಲ್ಲಿ ಯಾವಾಗಲೂ ಇರುತ್ತಿತ್ತು.

ಪರೀಕ್ಷಿತನೇ! ಹೀಗೆ ಪದ್ಮನಾಭಸ್ವಾಮಿಯು ಗಜೇಂದ್ರನನ್ನು ಅಜ್ಞಾನದಿಂದಲೂ ಮೊಸಳೆಯಿಂದಲೂ ಮುಕ್ತಿಗೊಳಿಸಿ ಅವನನ್ನು ತನ್ನ ಪಾರ್ಷದರಲ್ಲಿ ಒಬ್ಬನನ್ನಾಗಿ ಮಾಡಿಕೊಂಡನು. ಗಂಧರ್ವ-ಸಿದ್ಧ-ದೇವತೆಗಳು ಸ್ತೋತ್ರಮಾಡುತ್ತಿರಲಾಗಿ ಶ್ರೀಭಗವಂತನು ಪಾರ್ಷದನಾದ ಗಜೇಂದ್ರನನ್ನು ಜೊತೆಯಲ್ಲಿಯೇ ಕರೆದುಕೊಂಡು ಗರುಡವಾಹನನಾಗಿ ಅದ್ಭುತವಾದ, ಅಲೌಕಿಕವಾದ ತನ್ನ ಲೋಕಕ್ಕೆ ಹೊರಟುಹೋದನು. ಕುರುವರ್ಯನೇ! ಮಹಾರಾಜ! ನಾನು ನಿನಗೆ ಶ್ರೀಕೃಷ್ಣನ ಮಹಿಮೆಯನ್ನೂ ಗಜೇಂದ್ರ ಮೋಕ್ಷದ ಕಥೆಯನ್ನೂ ವಿಸ್ತಾರವಾಗಿ ಹೇಳಿರುವೆನು. ಈ ಗಜೇಂದ್ರಮೋಕ್ಷದ ಕಥಾಪ್ರಸಂಗವನ್ನು ಕೇಳುವವರಿಗೆ ಕಲಿಕಲ್ಮಷದೋಷವಿರುವುದಿಲ್ಲ. ದುಃಸ್ವಪ್ನಗಳು ಉಂಟಾಗುವುದಿಲ್ಲ. ಇದು ಇಹದಲ್ಲಿ ಯಶಸ್ಸನ್ನೂ ಉನ್ನತಿ ಯನ್ನೂ ಉಂಟುಮಾಡಿ ಮರಣಾನಂತರದಲ್ಲಿ ಸ್ವರ್ಗದಾಯಕವೂ ಆಗುತ್ತದೆ. ಶ್ರೇಯಸ್ಕಾಮರಾದ ಬ್ರಾಹ್ಮಣರು ದುಃಸ್ವಪ್ನವೇ ಮೊದಲಾದ ಅನಿಷ್ಟಗಳ ನಿವಾರಣೆಗಾಗಿ ಪ್ರಾತಃಕಾಲದಲ್ಲಿ ಎದ್ದೊಡನೆಯೇ ಶುಚೀಭೂತರಾಗಿ ಪವಿತ್ರವಾದ ಈ ಗಜೇಂದ್ರಮೋಕ್ಷಪ್ರಸಂಗವನ್ನು ಪಾರಾಯಣಮಾಡುತ್ತಾರೆ. ಪರೀಕ್ಷಿತನೇ! ಗಜೇಂದ್ರನು ಮಾಡಿದ ಸ್ತೋತ್ರದಿಂದ ಪ್ರಸನ್ನನಾದ ಸರ್ವವ್ಯಾಪಕನಾದ ಸರ್ವಭೂತಸ್ವರೂಪನಾದ ಶ್ರೀಹರಿಯು ಸಮಸ್ತ ಪ್ರಾಣಿಗಳೂ ಕೇಳಿಸಿಕೊಳ್ಳುವಂತೆ ಈ ಮಾತನ್ನು ಹೇಳಿದನು :

ಶ್ರೀಭಗವಂತನು ಹೇಳುತ್ತಾನೆ :

ಯೇ ಮಾಂ ತ್ವಾಂ ಚ ಸರಶ್ಚೇದಂ ಗಿರಿಕನ್ದರಕಾನನಮ್ ।
ವೇತ್ರಕೀಚಕವೇಣೂನಾಂ ಗುಲ್ಮಾನಿ ಸುರಪಾದಪಾನ್ ॥೧೭॥

ಶೃಙ್ಗಾಣೀಮಾನಿ ಧಿಷ್ಣ್ಯಾನಿ ಬ್ರಹ್ಮಣೋ ಮೇ ಶಿವಸ್ಯ ಚ ।
ಕ್ಷೀರೋದಂ ಮೇ ಪ್ರಿಯಂ ಧಾಮ ಶ್ವೇತದ್ವೀಪಂ ಚ ಭಾಸ್ವರಮ್ ॥

ಶ್ರೀವತ್ಸಂ ಕೌಸ್ತುಭಂ ಮಾಲಾಂ ಗದಾಂ ಕೌಮೋದಕೀಂ ಮಮ ।
ಸುದರ್ಶನಂ ಪಾಞ್ಚಜನ್ಯಂ ಸುಪರ್ಣಂ ಪತಗೇಶ್ವರಮ್ ॥೧೯॥

ಶೇಷಂ ಚ ಮತ್ಕಲಾಂ ಸೂಕ್ಷ್ಮಾಂ
ಶ್ರಿಯಂ ದೇವೀಂ ಮದಾಶ್ರಯಾಮ್ ।
ಬ್ರಹ್ಮಾಣಂ ನಾರದಮೃಷಿಂ
ಭವಂ ಪ್ರಹ್ಲಾದಮೇವ ಚ ॥೨೦॥

ಮತ್ಸ್ಯಕೂರ್ಮವರಾಹಾದ್ಯೈರವತಾರೈಃ ಕೃತಾನಿ ಮೇ ।
ಕರ್ಮಾಣ್ಯನನ್ತಪುಣ್ಯಾನಿ ಸೂರ್ಯಂ ಸೋಮಂ ಹುತಾಶನಮ್ ॥

ಪ್ರಣವಂ ಸತ್ಯಮವ್ಯಕ್ತಂ ಗೋವಿಪ್ರಾನ್ಧರ್ಮಮವ್ಯಯಮ್ ।
ದಾಕ್ಷಾಯಣೀರ್ಧರ್ಮಪತ್ನೀಃ ಸೋಮಕಾಶ್ಯಪಯೋರಪಿ ॥೨೨॥

ಗಙ್ಗಾಂ ಸರಸ್ವತೀಂ ನನ್ದಾಂ ಕಾಲಿನ್ದೀಂ ಸಿತವಾರಣಮ್ ।
ಧ್ರುವಂ ಬ್ರಹ್ಮಋಷೀನ್ಸಪ್ತ ಪುಣ್ಯಶ್ಲೋಕಾಂಶ್ಚ ಮಾನವಾನ್ ॥

ಉತ್ಥಾಯಾಪರರಾತ್ರಾನ್ತೇ ಪ್ರಯತಾಃ ಸುಸಮಾಹಿತಾಃ ।
ಸ್ಮರನ್ತಿ ಮಮ ರೂಪಾಣಿ ಮುಚ್ಯನ್ತೇ ಹ್ಯೇನಸೋಽಖಿಲಾತ್ ॥೨೪॥
ಯೇ ಮಾಂ ಸ್ತುವನ್ತ್ಯನೇನಾಙ್ಗ ಪ್ರತಿಬುಧ್ಯ ನಿಶಾತ್ಯಯೇ ।
ತೇಷಾಂ ಪ್ರಾಣಾತ್ಯಯೇ ಚಾಹಂ ದದಾಮಿ ವಿಮಲಾಂ ಮತಿಮ್ ॥

"ಗಜೇಂದ್ರನೇ! ಅಪರರಾತ್ರಿಯು ಕಳೆದನಂತರ ಬ್ರಾಹ್ಮೀ ಮುಹೂರ್ತದಲ್ಲೆದ್ದು ಏಕಾಗ್ರಚಿತ್ತರಾಗಿ, ವಿನಯಶೀಲರಾಗಿ, ಶ್ರದ್ಧಾ ಪೂರ್ವಕವಾಗಿ, ನನ್ನನ್ನೂ, ನಿನ್ನನ್ನೂ, ಈ ಸರೋವರವನ್ನೂ, ಈ ತ್ರಿಕೂಟ

ಪರ್ವತವನ್ನೂ, ಪರ್ವತದಲ್ಲಿರುವ ಗುಹೆಗಳನ್ನೂ, ಇಲ್ಲಿರುವ ಉದ್ಯಾನವನ ವನ್ನೂ, ಬೆತ್ತ-ಬಿದಿರು ಹೆಬ್ಬಿದಿರುಗಳ ಪೊದರುಗಳನ್ನೂ, ಕಲ್ಪವೃಕ್ಷವನ್ನೂ, ನನ್ನ ನೆಲೆಯಾಗಿರುವ, ಬ್ರಹ್ಮನ ಮತ್ತು ಶಿವನ ವಾಸಸ್ಥಾನವಾಗಿರುವ ಈ ಮೂರು ಶಿಖರಗಳನ್ನೂ, ಈ ಪರ್ವತದ ಸುತ್ತಲೂ ಇರುವ ಮತ್ತು ನನಗೆ ಪ್ರಿಯವಾದ ಕ್ಷೀರಸಮುದ್ರವನ್ನೂ, ಪ್ರಕಾಶಮಾನವಾದ ಈ ಶ್ವೇತದ್ವೀಪವನ್ನೂ, ಶ್ರೀವತ್ಸಚಿಹ್ನೆಯನ್ನೂ, ಕೌಸ್ತುಭಮಣಿಯನ್ನೂ, ವನಮಾಲೆಯನ್ನೂ, ನಾನು ಧರಿಸಿರುವ ಕೌಮೋದಕೀ ಎಂಬ ಗದೆಯನ್ನೂ, ಸುದರ್ಶನ ಚಕ್ರವನ್ನೂ, ಪಾಂಚಜನ್ಯಶಂಖವನ್ನೂ, ಸುಂದರವಾದ ರೆಕ್ಕೆಗಳುಳ್ಳ ನನ್ನ ವಾಹನವಾದ ಗರುತ್ಮಂತನನ್ನೂ, ನನ್ನ ಸೂಕ್ಷ್ಮಾಂಶದಿಂದ ಹುಟ್ಟಿ ನನಗೆ ಹಾಸಿಗೆಯಾಗಿರುವ ಶೇಷನಾಗನನ್ನೂ, ನನ್ನ ಹೃತ್ಕಮಲವನ್ನೇ ಆಶ್ರಯಿಸಿ ಕುಳಿತಿರುವ ಶ್ರೀದೇವಿಯನ್ನೂ, ಬ್ರಹ್ಮನನ್ನೂ, ನಾರದಮಹರ್ಷಿಯನ್ನೂ, ಈಶ್ವರನನ್ನೂ, ಪ್ರಹ್ಲಾದನನ್ನೂ, ಮತ್ಸ್ಯ-ಕೂರ್ಮ-ವರಾಹ-ನಾರಸಿಂಹ ಇವೇ ಮೊದಲಾದ ಅವತಾರಗಳಲ್ಲಿ ನಾನು ಮಾಡಿರುವ ಅತ್ಯಂತ ಪುಣ್ಯ ಪ್ರಾಪಕವಾದ ಚರಿತ್ರೆಗಳನ್ನೂ, ಸೂರ್ಯ-ಚಂದ್ರಾಗ್ನಿಗಳನ್ನೂ, ಓಂಕಾರವನ್ನೂ, ಸತ್ಯವನ್ನೂ, ಮೂಲಪ್ರಕೃತಿಯನ್ನೂ, ಗೋ-ಬ್ರಾಹ್ಮಣರನ್ನೂ, ಅವಿನಾಶಿಯಾದ ಸನಾತನಧರ್ಮವನ್ನೂ, ಸೋಮ-ಕಶ್ಯಪರ ಧರ್ಮಪತ್ನಿಯರಾದ ದಕ್ಷನ ಪುತ್ರಿಯರನ್ನೂ, ಗಂಗಾ-ಸರಸ್ವತೀ-ನಂದಾ-ಕಾಲಿಂದೀ ನದಿಗಳನ್ನೂ, ಐರಾವತವನ್ನೂ, ಧ್ರುವಕುಮಾರನನ್ನೂ, ಸಪ್ತಬ್ರಹ್ಮರ್ಷಿಗಳನ್ನೂ, ಪವಿತ್ರಕೀರ್ತಿಗಳಾದ ನಲ-ಯುಧಿಷ್ಠಿರ-ಜನಕರೇ ಮೊದಲಾದ ಮಹಾಪುರುಷರನ್ನೂ ಯಾರು ಸ್ಮರಿಸುವರೋ ಅಂತಹವರು ಸಮಸ್ತಪಾಪ ಗಳಿಂದಲೂ ಬಿಡುಗಡೆಹೊಂದುತ್ತಾರೆ. ಏಕೆಂದರೆ : ಇವೆಲ್ಲವೂ ನನ್ನ ರೂಪಗಳೇ ಆಗಿವೆ. ಪ್ರಿಯನಾದ ಗಜೇಂದ್ರನೇ! ಬೆಳಗಿನಜಾವದಲ್ಲಿ ಎದ್ದು ಯಾರು ಈ ನಾಮಾವಳಿಗಳ ಮೂಲಕವಾಗಿ ನನ್ನನ್ನು ಸ್ತೋತ್ರಮಾಡುವರೋ ಅಂತಹವರಿಗೆ ನಾನು ಅವರ ಅವಸಾನಕಾಲದಲ್ಲಿ ನಿರ್ಮಲವಾದ, ಪರಿಶುದ್ಧವಾದ, ಶಾಂತವಾದ, ಬುದ್ಧಿಯನ್ನು ಕೊಡುತ್ತೇನೆ."

ಪರೀಕ್ಷಿತನೇ! ಭಗವಂತನು ಗಜೇಂದ್ರನಿಗೆ ಇಂತಹ ದಿವ್ಯವಾದ

ಸಂದೇಶವನ್ನಿತ್ತು ಪಾಂಚಜನ್ಯಶಂಖವನ್ನು ಊದುವುದರ ಮೂಲಕವಾಗಿ ದೇವತೆಗಳನ್ನು ಆನಂದಗೊಳಿಸುತ್ತಾ ಗರುಡನನ್ನೇರಿ ದಿವಿಗೆ ಪ್ರಯಾಣ ಮಾಡಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೪ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೫ನೆಯ ಅಧ್ಯಾಯ

ದೇವತೆಗಳೆಲ್ಲರೂ ಬ್ರಹ್ಮನ ಬಳಿಗೆ ಹೋದುದು : ಬ್ರಹ್ಮನು ಮಾಡಿದ ಭಗವತ್ಸ್ತೋತ್ರ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ರಾಜನ್ನುದಿತಮೇತತ್ತೇ ಹರೇಃ ಕರ್ಮಾಘನಾಶನಮ್ ।
ಗಜೇನ್ದ್ರಮೋಕ್ಷಣಂ ಪುಣ್ಯಂ ರೈವತಂ ತ್ವನ್ತರಂ ಶೃಣು ॥೧॥

ಪರೀಕ್ಷಿತನೇ! ತಾಮಸಮನ್ವಂತರವನ್ನು ಹೇಳುವ ಪ್ರಸಂಗದಲ್ಲಿ ನಿನಗೆ ಆ ಮನ್ವಂತರದಲ್ಲಿ ನಡೆದ ಪರಮಪವಿತ್ರವೂ ಪಾಪಹಾರಕವೂ ಆದ ಗಜೇಂದ್ರಮೋಕ್ಷದ ಚರಿತ್ರೆಯನ್ನು ಹೇಳಿದೆನು. ಇನ್ನು ಮುಂದೆ ನಾನು ನಿನಗೆ ರೈವತಮನ್ವಂತರದ ವಿಷಯವನ್ನು ಹೇಳುತ್ತೇನೆ, ಕೇಳು.

ಐದನೆಯ ಮನುವಿನ ಹೆಸರು ರೈವತ. ಇವನು ನಾಲ್ಕನೆಯ ಮನುವಾದ ತಾಮಸನ ತಮ್ಮನು. ಇವನಿಗೆ ಅರ್ಜುನ, ಬಲ, ವಿಂಧ್ಯ–ಇವರೇ ಮೊದಲಾದ ಮಕ್ಕಳಿದ್ದರು. ರೈವತನು ಮನುವಾಗಿದ್ದಾಗ ವಿಭು ಎಂಬುವನು ಇಂದ್ರನಾಗಿದ್ದನು. ಭೂತರಯನೇ ಮೊದಲಾದವರು ದೇವತೆಗಳಾಗಿದ್ದರು. ಹಿರಣ್ಯರೋಮಾ, ವೇದಶಿರ, ಊರ್ಧ್ವಬಾಹು ಇವರೇ ಮೊದಲಾದವರು ಸಪ್ತರ್ಷಿಗಳಾಗಿದ್ದರು. ಸಪ್ತರ್ಷಿಗಳಲ್ಲೊಬ್ಬರಾದ ಶುಭ್ರಮಹರ್ಷಿಗಳ ಪತ್ನಿಯ ಹೆಸರು ವಿಕುಂಠಾ ಎಂದು. ಅವಳ ಗರ್ಭದಲ್ಲಿ ವೈಕುಂಠರೆಂಬ ಹೆಸರಿನ ದೇವತೆಗಳು ಹುಟ್ಟಿದರು. ಆ ವೈಕುಂಠರೆಂಬ ದೇವತೆಗಳೊಡನೆ ಸ್ವಾಂಶದಿಂದ ಭಗವಂತನು ವೈಕುಂಠನೆಂಬ ಹೆಸರಿನಿಂದ ಅವತಾರ ಮಾಡಿದನು. ಈ ದೇವದೇವನಾದ ವೈಕುಂಠನೇ ತನ್ನ ಪತ್ನಿಯಾದ ಮಹಾ

ಲಕ್ಷ್ಮಿಯ ಪ್ರಾರ್ಥನೆಯಂತೆ ಅವಳ ಪ್ರೀತ್ಯರ್ಥವಾಗಿ ವೈಕುಂಠಲೋಕವನ್ನು ರಚಿಸಿದನು.*

ಸಮಸ್ತಲೋಕಗಳಿಂದಲೂ ನಮಸ್ಕರಿಸಲ್ಪಡುವ ವೈಕುಂಠನಾಥನಾದ ಭಗವಂತನ ಕಲ್ಯಾಣಗುಣಗಳನ್ನೂ ಮತ್ತು ಮಹಿಮೆಗಳನ್ನೂ ಸಂಕ್ಷೇಪವಾಗಿ ಈ ಹಿಂದೆಯೇ (೩ನೆಯ ಸ್ಕಂಧದಲ್ಲಿ) ವರ್ಣಿಸಿದ್ದೇನೆ. ಭೂಮಿಯಲ್ಲಿರುವ ಧೂಳಿನ ಕಣಗಳನ್ನು ಎಣಿಸಲು ಸಮರ್ಥನಾದವನು ಭಗವಂತನ ಗುಣ ಗಳನ್ನೂ ಎಣಿಸಬಲ್ಲವನಾಗುತ್ತಾನೆ. ಆರನೆಯ ಮನ್ವಂತರದಲ್ಲಿ ಚಕ್ಷುವಿನ ಮಗನಾದ ಚಾಕ್ಷುಷನು ಮನುವಾದನು. ಅವನಿಗೆ ಪೂರು, ಪೂರುಷ, ಸುದ್ಯುಮ್ನ ಇವರೇ ಮೊದಲಾದ ಮಕ್ಕಳಿದ್ದರು. ಚಾಕ್ಷುಷಮನ್ವಂತರದಲ್ಲಿ ಮಂತ್ರದ್ರುಮ–ಎಂಬುವನು ಇಂದ್ರನಾದನು. ಆಪ್ಯರೇ ಮೊದಲಾದವರು ಪ್ರಧಾನದೇವತೆಗಳಾಗಿದ್ದರು. ಹವಿಷ್ಮಂತ, ವೀರಕ ಇವರೇ ಮೊದಲಾದವರು ಚಾಕ್ಷುಷಮನ್ವಂತರದಲ್ಲಿ ಸಪ್ತರ್ಷಿಗಳಾಗಿದ್ದರು. ಆ ಚಾಕ್ಷುಷಮನ್ವಂತರ ದಲ್ಲಿಯೂ ಜಗತ್ಪತಿಯಾದ ಭಗವಂತನು ವೈರಾಜನ ಪತ್ನಿಯಾದ ಸಂಭೂತಿ ಎಂಬುವಳ ಗರ್ಭದಲ್ಲಿ ಅಜಿತನೆಂಬ ಹೆಸರಿನಿಂದ ಅಂಶಾವತಾರಮಾಡಿದನು.

ಯಾವ ಶ್ರೀಭಗವಂತನು ನೆಲೆಯಿಲ್ಲದೇ ಅಳ್ಳಾಡುತ್ತಿದ್ದ ಮಂದರ ಪರ್ವತವನ್ನು ಕೂರ್ಮಮೂರ್ತಿಯಾಗಿ ಬೆನ್ನಿನಲ್ಲಿ ಹೊತ್ತು ಸಮುದ್ರವನ್ನು ಕಡೆಯಲು ಅವಕಾಶಮಾಡಿಕೊಟ್ಟನೋ ಮತ್ತು ಸಮುದ್ರವನ್ನು ಕಡೆದ ನಂತರ ಪ್ರಾಪ್ತವಾದ ಅಮೃತವನ್ನು ಮೋಹಿನೀರೂಪವನ್ನು ಧರಿಸಿ ದೇವತೆ ಗಳಿಗೆ ಹಂಚಿಕೊಟ್ಟನೋ ಅವನೇ ವೈರಾಜನಿಗೆ ಸಂಭೂತಿಯಲ್ಲಿ ಹುಟ್ಟಿದ ಅಜಿತಮೂರ್ತಿಯು.” (ಶ್ಲೋಕ 2-10)

ಶುಕಮಹರ್ಷಿಗಳ ಈ ಮಾತನ್ನು ಕೇಳಿ ಪರೀಕ್ಷಿತನು ಪ್ರಶ್ನಿಸುತ್ತಾನೆ :

“ಬ್ರಾಹ್ಮಣಶ್ರೇಷ್ಠರೇ! ಯಾವ ರೀತಿಯಲ್ಲಿ ಶ್ರೀಭಗವಂತನು ಕ್ಷೀರ ಸಾಗರವನ್ನು ಕಡೆದನು? ಶ್ರೀಭಗವಂತನು ಆಮೆಯ ರೂಪವನ್ನು ಧರಿಸಿ ಯಾವ ಕಾರಣದಿಂದ ಮತ್ತು ಯಾವ ಉದ್ದೇಶದಿಂದ ಮಂದರಪರ್ವತವನ್ನು ತನ್ನ ಬೆನ್ನಮೇಲೆ ಇಟ್ಟುಕೊಂಡನು? ದೇವತೆಗಳಿಗೆ ಅಮೃತವು ಹೇಗೆ

* ಇದು ಕಾರ್ಯವೈಕುಂಠವೆನಿಸುತ್ತದೆ. ಪರಮಪದವೆಂಬ ವೈಕುಂಠವು ಎಲ್ಲಕ್ಕಿಂತಲೂ ಮಿಗಿಲಾದುದು.

ಸಿಕ್ಕಿತು? ಆ ಸಮಯದಲ್ಲಿ ಇನ್ನೂ ಯಾವ ಯಾವ ವಸ್ತುಗಳು ಸಮುದ್ರ ಮಥನದಿಂದ ಪ್ರಾಪ್ತವಾದುವು? ಶ್ರೀಭಗವಂತನ ಈ ಲೀಲೆಯು ನಿಶ್ಚಯ ವಾಗಿಯೂ ಪರಮಾದ್ಭುತವಾಗಿದೆ. ಕೃಪೆಯಿಟ್ಟು ಈ ಎಲ್ಲವನ್ನೂ ವಿಶದವಾಗಿ ನನಗೆ ಹೇಳಿರಿ. ನೀವು ಹೇಳುತ್ತಿರುವ ಯದುಪತಿಯ ಮಹಿಮೆಯಿಂದ ಕೂಡಿದ ಚರಿತ್ರೆಯು ನನಗೆ ತೃಪ್ತಿಯನ್ನು ಉಂಟುಮಾಡುತ್ತಲೇ ಇಲ್ಲ. ಪುನಃ ಪುನಃ ಕೇಳಬೇಕೆಂದು ಸಂಸಾರತಾಪದಿಂದ ಬಳಲುತ್ತಿರುವ ನನ್ನ ಮನಸ್ಸು ತವಕಪಡುತ್ತಿದೆ." (ಶ್ಲೋಕ 11-13)

ಸೂತಪುರಾಣಿಕರು ಶೌನಕಾದಿಮಹರ್ಷಿಗಳಿಗೆ ಹೇಳುತ್ತಾರೆ :

ಬ್ರಾಹ್ಮಣಶ್ರೇಷ್ಠರೇ! ಪೂಜ್ಯರಾದ ಶುಕಮಹರ್ಷಿಗಳು ಪರೀಕ್ಷಿತನ ಈ ಪ್ರಶ್ನೆಗಳನ್ನು ಶ್ಲಾಘಿಸುತ್ತಾ ಶ್ರೀಭಗವಂತನ ಸಮುದ್ರಮಂಥನದ ಲೀಲೆಯನ್ನು ವರ್ಣಿಸತೊಡಗಿದರು.

"ಪರೀಕ್ಷಿತಮಹಾರಾಜ! ಹಿಂದೊಮ್ಮೆ ಅಸುರರು ತಮ್ಮ ನಿಶಿತವಾದ ಶಸ್ತ್ರಾಸ್ತ್ರಗಳಿಂದ ದೇವತೆಗಳನ್ನು ಪರಾಜಯಗೊಳಿಸಿಬಿಟ್ಟರು. ದೇವಾಸುರ ಮಹಾಯುದ್ಧದಲ್ಲಿ ಹಲವಾರು ದೇವತೆಗಳು ಅಸುನೀಗಿದರು. ಕೆಳಕ್ಕೆ ಬಿದ್ದ ಅನೇಕ ದೇವತೆಗಳು ಪುನಃ ಮೇಲಕ್ಕೇಳಲೇ ಇಲ್ಲ. ದುರ್ವಾಸ ಮಹರ್ಷಿಗಳ ಶಾಪದಿಂದಾಗಿ* ಇಂದ್ರನಿಂದ ಕೂಡಿದ ಮೂರು ಲೋಕ

---

* ದುರ್ವಾಸಮಹರ್ಷಿಗಳು ಇಂದ್ರನಿಗೆ ಶಾಪಕೊಟ್ಟ ಪ್ರಸಂಗವು ವಿಷ್ಣುಪುರಾಣ ದಲ್ಲಿ ಉಕ್ತವಾಗಿದೆ. ಒಮ್ಮೆ ದುರ್ವಾಸರು ವೈಕುಂಠಲೋಕದಿಂದ ಬರುತ್ತಿದ್ದರು. ಹಾದಿಯಲ್ಲಿ ಐರಾವತದ ಮೇಲೆ ಕುಳಿತಿದ್ದ ಇಂದ್ರನನ್ನು ನೋಡಿದರು. ಅವನು ತ್ರಿಲೋಕಾಧಿಪತಿಯೆಂದು ಗೌರವಿಸುತ್ತಾ ಭಗವಂತನ ಪ್ರಸಾದರೂಪವಾದ ಮಾಲೆ ಯನ್ನು ಇಂದ್ರನಿಗೆ ಕೊಟ್ಟರು. ಆದರೆ ಮದದಿಂದ ಕೊಬ್ಬಿಹೋಗಿದ್ದ ಇಂದ್ರನು ಪ್ರಸಾದರೂಪವಾದ ಪುಷ್ಪಮಾಲೆಗಾಗಲೀ ದುರ್ವಾಸರಿಗಾಗಲೀ ಗೌರವವನ್ನು ತೋರ ಲಿಲ್ಲ. ತಾತ್ಸಾರದಿಂದ ಮಹರ್ಷಿಗಳು ಕೊಟ್ಟ ಮಾಲೆಯನ್ನು ಐರಾವತದ ತಲೆಯ ಮೇಲೆ ಹಾಕಿದನು. ಐರಾವತವು ತಲೆಯ ಮೇಲಿದ್ದ ಮಾಲೆಯನ್ನು ನೆಲಕ್ಕೆ ಹಾಕಿ ಕಾಲಿನಿಂದ ತುಳಿದು ಅಪ್ಪಚ್ಚಿ ಮಾಡಿಬಿಟ್ಟಿತು. ಇದನ್ನು ಕಂಡ ದುರ್ವಾಸರು ಕೋಪಗೊಂಡು ಮೂರು ಲೋಕಗಳೊಡನೆ ಐಶ್ವರ್ಯಹೀನನಾಗುವಂತೆ ಇಂದ್ರನನ್ನು ಶಪಿಸಿದರು. ಈ ಶಾಪದ ಪರಿಣಾಮವಾಗಿ ಇಂದ್ರಸಹಿತವಾದ ಮೂರು ಲೋಕಗಳೂ ಐಶ್ವರ್ಯದಿಂದ ಹೀನವಾದುವು.

ಗಳೂ ಐಶ್ವರ್ಯದಿಂದ ಹೀನವಾದುವು. ಯಜ್ಞ-ಯಾಗಾದಿಗಳೂ ನಿಂತು ಹೋದುವು. ಅಂತಹ ದುರ್ದಶೆಯನ್ನು ನೋಡಿ ಇಂದ್ರಾವರುಣರೇ ಮೊದಲಾದ ದೇವತೆಗಳು ತಮ್ಮ-ತಮ್ಮಲ್ಲಿಯೇ ಜಿಜ್ಞಾಸೆಮಾಡಿದರು. ಆದರೆ ಅವರಿಗೆ ಯಾವ ನಿಶ್ಚಯಕ್ಕೂ ಬರಲಾಗಲಿಲ್ಲ. ಆಗ ಇಂದ್ರಪ್ರಮುಖರಾದ ದೇವತೆಗಳೆಲ್ಲರೂ ಸುಮೇರುಪರ್ವತದ ಶಿಖರದ ಮೇಲಿದ್ದ ಬ್ರಹ್ಮನ ಸಭಾಭವನಕ್ಕೆ ಹೋದರು. ವಿನಯಪೂರ್ವಕವಾಗಿ ಪರಮೇಷ್ಠಿಗೆ ನಮಸ್ಕರಿಸಿ ಅವನಲ್ಲಿ ತಮ್ಮ ಎಲ್ಲ ಸುಖ-ದುಃಖಗಳನ್ನೂ ನಿವೇದಿಸಿಕೊಂಡರು. ಇಂದ್ರ-ವಾಯು-ಅಗ್ನಿ–ಇವರೇ ಮೊದಲಾದ ದೇವತೆಗಳು ಕಳೆಗುಂದಿರುವುದನ್ನೂ ಶಕ್ತಿಹೀನರಾಗಿರುವುದನ್ನೂ ಬ್ರಹ್ಮನು ನೋಡಿದನು. ಮೂರು ಲೋಕಗಳೂ ಯಜ್ಞವೇ ಮೊದಲಾದ ಮಂಗಳಕಾರ್ಯಗಳು ನಡೆಯದೇ ಅಮಂಗಳ ಸ್ವರೂಪದಿಂದಿರುವುದನ್ನೂ ಇದಕ್ಕೆ ಪ್ರತಿಯಾಗಿ ಅಸುರರ ಶಕ್ತಿಯೂ ಮತ್ತು ಐಶ್ವರ್ಯವೂ ವರ್ಧಿಸಿರುವುದನ್ನೂ ಬ್ರಹ್ಮನು ಗಮನಿಸಿದನು. ಮರುಕ್ಷಣ ದಲ್ಲಿಯೇ ಚತುರ್ಮುಖನು ಮನಸ್ಸನ್ನು ಏಕಾಗ್ರಗೊಳಿಸಿ ಪರಮ ಪುರುಷನಾದ ಶ್ರೀಭಗವಂತನನ್ನು ಸ್ಮರಿಸಿದನು. ಅಂತರ್ಮುಖನಾಗಿ ಸ್ವಲ್ಪ ಹೊತ್ತು ಕಳೆದನಂತರ ಪರಮಪುರುಷನ ಆದೇಶವನ್ನು ಪಡೆದವನಂತೆ ಹೊರಮುಖನಾಗಿ ಪ್ರಫುಲ್ಲಿತವಾದ ಮುಖಾರವಿಂದದಿಂದ ಕೂಡಿ ದೇವತೆ ಗಳನ್ನು ಸಂಬೋಧಿಸುತ್ತಾ ಹೇಳಿದನು : (ಶ್ಲೋಕ 14-20)

"ಇಂದ್ರಪ್ರಮುಖರಾದ ದೇವತೆಗಳೇ! ನಾನು, ರುದ್ರ, ನೀವು, ಅಸುರರು, ದೈತ್ಯರು, ಮನುಷ್ಯರು, ಪಶು-ಪಕ್ಷಿಗಳು, ವೃಕ್ಷಗಳು, ಸ್ವೇದಜ-ಉದ್ಭಿಜ್ಜ–ಇವೇ ಮುಂತಾದ ಪ್ರಾಣಿಗಳು–ಎಲ್ಲರೂ ವಿರಾಟ್ಪುರುಷನ ಪರಮಾಣುವಿನಷ್ಟು ಅತ್ಯಂತಸೂಕ್ಷ್ಮವಾದ ಅಂಶದಿಂದ ಸೃಷ್ಟಿಸಲ್ಪಟ್ಟಿದ್ದೇವೆ. ಆದುದರಿಂದ ನಾವೆಲ್ಲರೂ ಅವಿನಾಶಿಯಾದ ಆ ಪ್ರಭುವನ್ನೇ ಶರಣು ಹೊಂದೋಣ.

ಮಹಾನುಭಾವನಾದ ನಮ್ಮ ಆ ಪ್ರಭುವಿನ ದೃಷ್ಟಿಯಿಂದ ವಧಾರ್ಹನೂ ಇಲ್ಲ ; ರಕ್ಷಿಸಲ್ಪಡತಕ್ಕವನೂ ಇಲ್ಲ ; ಉಪೇಕ್ಷಣೀಯನೂ ಇಲ್ಲ ; ಆದರಣೀಯನೂ ಇಲ್ಲ. ಆದರೂ ಸೃಷ್ಟಿ-ಸ್ಥಿತಿ-ಲಯಗಳಿಗಾಗಿ ಆ ನಮ್ಮ ಪ್ರಭುವು ಸತ್ತ್ವ-ರಜಸ್ತಮೋಗುಣಗಳನ್ನು ಹೊಂದುತ್ತಾನೆ. ಅವನು

ಈ ಸಮಯದಲ್ಲಿ ಪ್ರಾಣಿಗಳ ರಕ್ಷಣೆಗಾಗಿ ಸತ್ತ್ವಗುಣವನ್ನು ಹೊಂದಿದ್ದಾನೆ. ಈ ಸಮಯವು ಅವನಿಗೆ ಸ್ಥಿತಿ ಮತ್ತು ಪಾಲನೆಗಳ ಸಮಯವಾಗಿದೆ. ಆದುದರಿಂದ ಜಗದ್ಗುರುವಾದ ಪರಮಾತ್ಮನನ್ನೇ ನಾವೀಗ ಶರಣು ಹೊಂದೋಣ. ದೇವತೆಗಳಿಗೆ ಪ್ರಿಯನಾಗಿರುವ ಅವನು ತನ್ನವರೆಲ್ಲರಿಗೂ ನಿಶ್ಚಯವಾಗಿಯೂ ಸುಖವನ್ನೇ ಉಂಟುಮಾಡುತ್ತಾನೆ."

ಪರೀಕ್ಷಿತನೇ! ದೇವತೆಗಳೊಡನೆ ಹೀಗೆ ಹೇಳಿದ ಚತುರ್ಮುಖನು ಅವರನ್ನೂ ಜೊತೆಗೂಡಿಸಿಕೊಂಡು ಅಜಿತನ ನಿಜಧಾಮವಾದ ವೈಕುಂಠಕ್ಕೆ ಹೋದನು. ಆ ದಿವ್ಯವಾದ ವೈಕುಂಠಧಾಮವು ತಮೋಮಯವಾದ ಪ್ರಕೃತಿ ಗಿಂತಲೂ ಆಚೆಗಿದೆ. ಬ್ರಹ್ಮಪ್ರಮುಖರಾದ ಆ ದೇವತೆಗಳು ವೈಕುಂಠ ಧಾಮವನ್ನಾಗಲೀ ಮಹಾಮಹಿಮನಾದ ಅಜಿತನನ್ನಾಗಲೀ ಅಲ್ಲಿ ಕಾಣಲೇ ಇಲ್ಲ. ಆಗ ಬ್ರಹ್ಮನು ಏಕಾಗ್ರಚಿತ್ತನಾಗಿ ಪ್ರಸಿದ್ಧವಾದ ವೇದವಾಣಿಯ ಮೂಲಕ ವೇದಗಮ್ಯನಾದ ಶ್ರೀಭಗವಂತನನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು.
(ಶ್ಲೋಕ 21-25)

ಅವಿಕ್ರಿಯಂ ಸತ್ಯಮನನ್ತಮಾದ್ಯಂ
ಗುಹಾಶಯಂ ನಿಷ್ಕಲಮಪ್ರತರ್ಕ್ಯಮ್ ।
ಮನೋಽಗ್ರಯಾನಂ ವಚಸಾನಿರುಕ್ತಂ
ನಮಾಮಹೇ ದೇವವರಂ ವರೇಣ್ಯಮ್ ॥೨೬॥

"ದೇವದೇವನೇ! ನೀನು ನಿರ್ವಿಕಾರನೂ, ಸತ್ಯಸ್ವರೂಪನೂ, ಅನಂತನೂ, ಆದಿಪುರುಷನೂ, ಎಲ್ಲರ ಹೃದಯದಲ್ಲಿಯೂ ಅಂತರ್ಯಾಮಿಯ ರೂಪದಲ್ಲಿ ವಿರಾಜಿಸುತ್ತಿರುವವನೂ, ಉಪಾಧಿ ರಹಿತನೂ, ಊಹಿಸಲು ಅಸಾಧ್ಯನಾದವನೂ, ಮನಸ್ಸಿಗಿಂತಲೂ ವೇಗವಾದ ಗಮನವುಳ್ಳವನೂ, ಮಾತಿನಿಂದ ವಿವರಿಸಲು ಅಶಕ್ಯನಾದವನೂ, ದೇವತೆ ಗಳಲ್ಲಿ ಶ್ರೇಷ್ಠನೂ, ಸರ್ವೋತ್ತಮನೂ ಆಗಿರುವೆ. ಶ್ರೀಭಗವಂತನಾದ ನಿನಗೆ ನಮಸ್ಕರಿಸುತ್ತೇವೆ.

ವಿಪಶ್ಚಿತಂ ಪ್ರಾಣಮನೋಧಿಯಾತ್ಮನಾ-
ಮರ್ಥೇನ್ದ್ರಿಯಾಭಾಸಮನಿದ್ರಮವ್ರಣಮ್ ।

ಛಾಯಾತಪೌ ಯತ್ರ ನ ಗೃಧ್ರಪಕ್ಷೌ
ತಮಕ್ಷರಂ ಖಂ ತ್ರಿಯುಗಂ ವ್ರಜಾಮಹೇ* **॥೨೭॥**

ಮಹಾನುಭಾವನೇ! ನೀನು ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರಗಳನ್ನು ತಿಳಿದವನಾಗಿರುವೆ. ಇಂದ್ರಿಯಗಳು ಮತ್ತು ಇಂದ್ರಿಯಾರ್ಥಗಳು (ವಿಷಯಗಳು) ನಿನ್ನ ಮೂಲಕವಾಗಿಯೇ ಪ್ರಕಾಶಗೊಳ್ಳುತ್ತವೆ. ಅಜ್ಞಾನವು ನಿನ್ನನ್ನು ಸ್ಪರ್ಶಿಸಲು ಕೂಡ ಸಮರ್ಥವಾಗಿಲ್ಲ. ಪ್ರಕೃತಿಯ ವಿಕಾರವಾದ ಜನನ-ಮರಣಗಳಿಂದ ಕೂಡಿದ ಶರೀರದಿಂದಲೂ ನೀನು ರಹಿತನಾಗಿರುವೆ. ಜೀವದ ಎರಡು ರೆಕ್ಕೆಗಳಾದ ವಿದ್ಯೆಯಾಗಲೀ, ಅವಿದ್ಯೆಯಾಗಲೀ ನಿನ್ನಲ್ಲಿರುವುದಿಲ್ಲ. ನೀನು ಅವಿನಾಶಿನಿಯೂ ಸುಖಸ್ವರೂಪನೂ ಆಗಿರುವೆ. ಸರ್ವವ್ಯಾಪಿಯಾದರೂ ನೀನು ಆಕಾಶದಂತೆ ನಿರ್ಮಲನಾಗಿರುವೆ. ಸತ್ಯ-ತ್ರೇತಾ-ದ್ವಾಪರಯುಗಗಳಲ್ಲಿ ನೀನು ಅವತರಿಸುವೆ. ಅಂತಹ ನಿನ್ನನ್ನು ನಾವೆಲ್ಲರೂ ಶರಣುಹೊಂದುತ್ತೇವೆ.

ಅಜಸ್ಯ ಚಕ್ರಂ ತ್ವಜಯೇರ್ಯಮಾಣಂ
ಮನೋಮಯಂ ಪಞ್ಚದಶಾರಮಾಶು ।
ತ್ರಿಣಾಭಿ ವಿದ್ಯುಚ್ಚಲಮಷ್ಟನೇಮಿ
ಯದಕ್ಷಮಾಹುಸ್ತಮೃತಂ ಪ್ರಪದ್ಯೇ **॥೨೮॥**

ಈ ಶರೀರವು ಜೀವನ ಒಂದು ಮನೋಮಯಚಕ್ರವಾಗಿದೆ. ಆ

---

* ಛಾಯಾತಪೌ = ವಿದ್ಯೆ-ಅವಿದ್ಯೆಗಳು. ಆವರಣಸ್ವಭಾವತ್ವಾಚ್ಛಾಯಾ ಶಬ್ದೇನಾವಿದ್ಯಾ. ಛಾಯೆಗೆ ಆವರಣದ ಸ್ವಭಾವವಿರುವುದರಿಂದ ಅವಿದ್ಯೆ–ಎಂದು ಅರ್ಥಮಾಡಿದೆ. **ಪ್ರಕಾಶಸ್ವಭಾವತ್ವಾದಾತಪಶಬ್ದೇನ ವಿದ್ಯಾ ಚ ಗೃಹ್ಯತೇ ।** ಆತಪಕ್ಕೂ ಪ್ರಕಾಶದ ಭಾವವಿರುವುದರಿಂದ ವಿದ್ಯೆ–ಎಂದು ಅರ್ಥಮಾಡಿದೆ. **ಗೃಧ್ಯತಿ ಭಕ್ತಿ ಮುಕ್ತೀ ಅಭಿಕಾಂಕ್ಷತೀತಿ ವ್ಯುತ್ಪತ್ತ್ಯಾ ಗೃಧ್ರಶಬ್ದೇನ ಜೀವಃ ।** ಭಕ್ತಿ-ಮುಕ್ತಿಗಳನ್ನು ಬಯಸುತ್ತದೆ ಎಂಬ ವ್ಯುತ್ಪತ್ತಿಯಿಂದ ಗೃಧ್ರಶಬ್ದಕ್ಕೆ ಜೀವ–ಎಂದು ಅರ್ಥ.

ಛಾಯಾತ್ವವಿದ್ಯಾ ಸಂಪ್ರೋಕ್ತಾ ಜನ್ಯವಿದ್ಯಾ ತಪಃ ಸ್ಮೃತಮ್ ।
ಜೀವಗೃಧ್ರಸ್ಯತಾ ಪಕ್ಷಾವಥ ಊರ್ಧ್ವಪಥೋ ಪೃಥಕ್ ।
ತಾವಿಷ್ಣೋಸ್ತು ನ ವಿದ್ಯೇತೇ ನಿತ್ಯವಿದ್ಯಾಸ್ವರೂಪಿಣಃ ॥ (ವಿಜಯಧ್ವಜೀಯ)

ಚಕ್ರಕ್ಕೆ ದಶೇಂದ್ರಿಯಗಳೆಂಬ ಮತ್ತು ಪಂಚಪ್ರಾಣಗಳೆಂಬ ಹದಿನೈದು ಅರೆಕಾಲುಗಳಿವೆ. ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳು ಆ ಚಕ್ರಕ್ಕೆ ನಾಭಿಪ್ರದೇಶವಾಗಿದೆ. ನೆಲ-ನೀರು-ತೇಜಸ್ಸು-ಗಾಳಿ-ಆಕಾಶಗಳೂ ಮನಸ್ಸು-ಬುದ್ಧಿ-ಅಹಂಕಾರಗಳು ಈ ಎಂಟು ಚಕ್ರದ ಅಂಚಾಗಿದೆ. ಮಾಯೆಯೇ ಈ ಚಕ್ರವನ್ನು ನಡೆಸುತ್ತದೆ. ಇದಕ್ಕೆ ಮಿಂಚಿಗಿಂತಲೂ ಮಿಗಿಲಾದ ಶೀಘ್ರಗತಿಯುಂಟು. ಆ ಚಕ್ರಕ್ಕೆ ಅಚ್ಚಿನಮರ ಸ್ವಯಂ ಪರಮಾತ್ಮನೇ ಆಗಿದ್ದಾನೆ. ಏಕಮಾತ್ರ ಋತಸ್ವರೂಪನಾದ ಅವನಿಗೆ ನಾನು ಶರಣಾಗು ತ್ತೇನೆ.

ಯ ಏಕವರ್ಣಂ ತಮಸಃ ಪರಂ ತ-
ದಲೋಕಮವ್ಯಕ್ತಮನನ್ತಪಾರಮ್ ।
ಆಸಾಞ್ಚಕಾರೋಪಸುಪರ್ಣಮೇನ-
ಮುಪಾಸತೇ ಯೋಗರಥೇನ ಧೀರಾಃ ॥೨೯॥

ಯಾವನು ಏಕಮಾತ್ರ ಜ್ಞಾನಸ್ವರೂಪನೋ, ಪ್ರಕೃತಿಯ ಆಚೆಗೆ ಇದ್ದು ಅದೃಶ್ಯನಾಗಿರುವನೋ, ನಿರ್ವಿಕಲ್ಪನಾಗಿರುವನೋ, ದೇಶ-ಕಾಲಗಳಿಗೆ ಒಳಪಡದಿರುವನೋ, ಜೀವರುಗಳ ಹೃದಯದಲ್ಲಿರುವ ಅಂತಹ ಪರಬ್ರಹ್ಮ ಪರಮಾತ್ಮನನ್ನು ಧೀರರಾದ ಯೋಗಿಗಳು ಭಕ್ತಿಯೋಗವೆಂಬ ಸಾಧನದ ಮೂಲಕವಾಗಿ ಉಪಾಸನೆಮಾಡುತ್ತಾರೆ.

ನ ಯಸ್ಯ ಕಶ್ಚಾತಿತಿತರ್ತಿ ಮಾಯಾಂ
ಯಯಾ ಜನೋ ಮುಹ್ಯತಿ ವೇದ ನಾರ್ಥಮ್ ।
ತಂ ನಿರ್ಜಿತಾತ್ಮಾತ್ಮಗುಣಂ ಪರೇಶಂ
ನನಾಮ ಭೂತೇಷು ಸಮಂ ಚರನ್ತಮ್ ॥೩೦॥

ಯಾವ ಮಾಯೆಯಿಂದ ವಿಮೋಹಿತನಾಗಿ ಜೀವನು ತನ್ನ ಪರಮ ಗುರಿಯನ್ನು ಮತ್ತು ಸ್ವರೂಪವನ್ನು ಮರೆತುಬಿಟ್ಟಿರುವನೋ, ಅಂತಹ ಮಾಯೆಯು ಅವನದೇ ಆಗಿದೆ. ಯಾರೂ ಕೂಡ ಅವನ ಆ ಮಾಯೆಯನ್ನು ದಾಟಲಾರರು. ಆದರೆ ಶಕ್ತಿಸಂಪನ್ನನಾದ ಭಗವಂತನು ತನ್ನ ಆ ಮಾಯೆಯನ್ನೂ ಅದರ ಗುಣಗಳನ್ನೂ ವಶದಲ್ಲಿಟ್ಟುಕೊಂಡು ಸಮಸ್ತಪ್ರಾಣಿಗಳ

ಹೃದಯದಲ್ಲಿಯೂ ಸರ್ವವಸುಭಾವದಿಂದ ಸಂಚರಿಸುತ್ತಿರುತ್ತಾನೆ. ಅಂತಹ ಪರಮಾತ್ಮನಿಗೆ ನಮಸ್ಕರಿಸೋಣ.

ಇಮೇ ವಯಂ ಯತ್ಪ್ರಿಯಯೈವ ತನ್ವಾ
ಸತ್ತ್ವೇನ ಸೃಷ್ಟಾ ಬಹಿರನ್ತರಾವಿಃ ।
ಗತಿಂ ನ ಸೂಕ್ಷ್ಮಾಮೃಷಯಶ್ಚ ವಿದ್ಮಹೇ
ಕುತೋಽಸುರಾದ್ಯಾ ಇತರ ಪ್ರಧಾನಾಃ ॥೩೧॥

ನಾವು, ದೇವತೆಗಳು, ಋಷಿಗಣಗಳು—ಎಲ್ಲರೂ ಪರಮಾತ್ಮನಿಗೆ ಅತಿ ಪ್ರಿಯವಾದ ಸತ್ತ್ವಮಯಶರೀರದಿಂದಲೇ ಹುಟ್ಟಿದ್ದೇವೆ. ಆದರೂ ಒಳಗೂ-ಹೊರಗೂ ಪ್ರಕಟವಾಗಿರುವ ಅವನ ಸೂಕ್ಷ್ಮವಾದ ಗತಿಯನ್ನು ನಾವು ತಿಳಿಯದವರಾಗಿದ್ದೇವೆ. ಸತ್ತ್ವಗುಣಪ್ರಧಾನರಾಗಿರುವ ನಮಗೇ ಅವನ ನಿಜಸ್ವರೂಪವು ತಿಳಿದಿಲ್ಲವೆಂದಮೇಲೆ ರಜೋಗುಣ-ತಮೋಗುಣಪ್ರಧಾನ ರಾಗಿರುವ ಅಸುರ-ದೈತ್ಯರಿಗೆ ಅವನ ನಿಜಸ್ವರೂಪವನ್ನು ತಿಳಿಯಲು ಹೇಗೆ ತಾನೇ ಸಾಧ್ಯವಾಗುವುದು?

ಪಾದೌ ಮಹೀಯಂ ಸ್ವಕೃತೈವ ಯಸ್ಯ
ಚತುರ್ವಿಧೋ ಯತ್ರ ಹಿ ಭೂತಸರ್ಗಃ ।
ಸ ವೈ ಮಹಾಪುರುಷ ಆತ್ಮತನ್ತ್ರಃ
ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ ॥೩೨॥

ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜಗಳೆಂಬ ನಾಲ್ಕು ಬಗೆಯ ಪ್ರಾಣಿಗಳಿಗೆ ವಾಸಸ್ಥಾನವಾಗಿರುವ, ಪರಬ್ರಹ್ಮಪರಮಾತ್ಮನಿಂದಲೇ ಸೃಷ್ಟಿಸಲ್ಪಟ್ಟಿರುವ ಈ ಭೂಮಂಡಲವೇ ಅವನ ದಿವ್ಯಪಾದವಾಗಿದೆ. ಅಂತಹ ಸರ್ವತಂತ್ರಸ್ವತಂತ್ರನಾದ ಮಹಾವಿಭೂತಿಯಾದ ಪುರುಷೋತ್ತಮನಾದ ಪರಬ್ರಹ್ಮನು ನಮಗೆ ಪ್ರಸನ್ನನಾಗಲಿ.

ಅಮ್ಭಸ್ತು ಯದ್ರೇತ ಉದಾರವೀರ್ಯಂ
ಸಿಧ್ಯನ್ತಿ ಜೀವನ್ತ್ಯುತ ವರ್ಧಮಾನಾಃ ।
ಲೋಕಾಸ್ತ್ರಯೋಽಥಾಖಿಲಲೋಕಪಾಲಾಃ
ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ ॥೩೩॥

ಮಹಾಶಕ್ತಿಶಾಲಿಯಾದ ಈ ಜಲವು ಆ ಪರಬ್ರಹ್ಮಪರಮಾತ್ಮನ ವೀರ್ಯವಾಗಿದೆ. ಇದರಿಂದಲೇ ಮೂರು ಲೋಕಗಳೂ, ಸಮಸ್ತಲೋಕ ಪಾಲಕರೂ ಹುಟ್ಟಿದ್ದಾರೆ ; ಜೀವಿಸುತ್ತಿದ್ದಾರೆ ಮತ್ತು ಅಭಿವೃದ್ಧಿಹೊಂದು ತ್ತಲೂ ಇದ್ದಾರೆ. ಅಂತಹ ದಿವ್ಯತೇಜಸ್ಸನ್ನು ಹೊಂದಿರುವ ಮಹಾವಿಭೂತಿ ಯಾದ ಪರಬ್ರಹ್ಮಪರಮಾತ್ಮನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ಸೋಮಂ ಮನೋ ಯಸ್ಯ ಸಮಾಮನನ್ತಿ
ದಿವೌಕಸಾಂ ವೈ ಬಲಮನ್ಧ ಆಯುಃ ।
ಈಶೋ ನಗಾನಾಂ ಪ್ರಜನಃ ಪ್ರಜಾನಾಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೩೪॥

ಸಮಸ್ತದೇವತೆಗಳಿಗೂ ಅನ್ನ, ಬಲ ಮತ್ತು ಆಯುಃಸ್ವರೂಪನಾಗಿ ರುವ, ವೃಕ್ಷಗಳಿಗೆ ಸ್ವಾಮಿಯಾಗಿರುವ, ಪ್ರಜೆಗಳಿಗೆ ಉತ್ಪತ್ತಿಸ್ಥಾನನಾಗಿರುವ ಯಾವ ಚಂದ್ರನನ್ನು ವೇದಗಳು ಪರಬ್ರಹ್ಮಪರಮಾತ್ಮನ ಮನಸ್ಸೆಂದೂ ಅಥವಾ ಮನಸ್ಸಿನಿಂದ ಹುಟ್ಟಿದವನೆಂದೂ ಹೇಳುತ್ತವೆಯೋ* ಅಂತಹ ಮಹೈಶ್ವರ್ಯಸಂಪನ್ನನಾದ ಪರಮಾತ್ಮನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ಅಗ್ನಿರ್ಮುಖಂ ಯಸ್ಯ ತು ಜಾತವೇದಾ
ಜಾತಃ ಕ್ರಿಯಾಕಾಣ್ಡನಿಮಿತ್ತಜನ್ಮಾ ।
ಅನ್ತಃ ಸಮುದ್ರೇಽನುಪಚರನ್ಸ್ವಧಾತೂ-
ನ್ಪ್ರಸೀದತಾಂ ನಃ ಸ ಮಹಾವಿಭೂತಿಃ ॥೩೫॥

ಕರ್ಮಕಾಂಡದಲ್ಲಿ ಹೇಳಿರುವ ಯಜ್ಞ-ಯಾಗಾದಿ ಕರ್ಮಗಳಿಗೆ ನಿಮಿತ್ತವಾದ ಜನ್ಮವುಳ್ಳ, ಸಮುದ್ರಮಧ್ಯದಲ್ಲಿ ಬಡಬಾಗ್ನಿಯಾಗಿ ನೀರನ್ನು ಶೋಷಿಸುವ, ಪ್ರಾಣಿಗಳ ಹೊಟ್ಟೆಯಲ್ಲಿ ಜಠರಾಗ್ನಿಯಾಗಿ ಆಹಾರವನ್ನು ಜೀರ್ಣಗೊಳಿಸುವ, ಐಶ್ವರ್ಯಪ್ರದನಾದ ಅಗ್ನಿಯು ಯಾವ ಪರಬ್ರಹ್ಮ ಪರಮಾತ್ಮನಿಗೆ ಮುಖವಾಗಿರುವನೋ–ಅಂತಹ ಮಹೈಶ್ವರ್ಯಸಂಪನ್ನನಾದ ಪರಮಾತ್ಮನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

---

* ಚಂದ್ರನು ಪುರುಷೋತ್ತಮನ ಮನಸ್ಸಿನಿಂದ ಹುಟ್ಟಿದನೆಂದು ಶ್ರುತಿಯು ಸಾರುತ್ತದೆ. 'ಚಂದ್ರಮಾ ಮನಸೋ ಜಾತಃ' (ಪುರುಷಸೂಕ್ತ)

ಯಚ್ಚಕ್ಷುರಾಸೀತ್ತರಣಿರ್ದೇವಯಾನಂ
ತ್ರಯೀಮಯೋ ಬ್ರಹ್ಮಣ ಏಷ ಧಿಷ್ಣ್ಯಮ್ ।
ದ್ವಾರಂ ಚ ಮುಕ್ತೇರಮೃತಂ ಚ ಮೃತ್ಯುಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೩೬॥

ಯಾವನ ಮೂಲಕವಾಗಿ ಯೋಗಿಗಳು ದೇವಯಾನಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗುವರೋ, ಯಾವನು ಸಾಕ್ಷಾತ್ ವೇದಮೂರ್ತಿಯಾಗಿರುವನೋ, ಯಾವನ ಮಂಡಲದ ಮಧ್ಯದಲ್ಲಿ ನಾರಾಯಣನು ಸರಸಿಜಾಸನನಾಗಿ ಕುಳಿತಿರುವನೋ* ಯಾವನು ಮುಕ್ತಿಗೆ ದ್ವಾರಪ್ರಾಯನಾಗಿರುವನೋ, ಅಮೃತಮಯನಾಗಿರುವನೋ, ಕಾಲರೂಪನಾಗಿರುವುದರಿಂದ ಮೃತ್ಯುವೂ ಆಗಿರುವನೋ–ಅಂತಹ ಸೂರ್ಯಭಗವಂತನು ಯಾರಿಗೆ ನೇತ್ರನಾಗಿರುವನೋ ಅಂತಹ ಮಹೈಶ್ವರ್ಯಸಂಪನ್ನನಾದ ಪರಬ್ರಹ್ಮಪರಮಾತ್ಮನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ಪ್ರಾಣಾದಭೂದ್ಯಸ್ಯ ಚರಾಚರಾಣಾಂ
ಪ್ರಾಣಃ ಸಹೋ ಬಲಮೋಜಶ್ಚ ವಾಯುಃ ।
ಅನ್ವಾಸ್ಮ ಸಮ್ರಾಜಮಿವಾನುಗಾ ವಯಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೩೭॥

ಯಾವನು ಸಕಲಚರಾಚರಪ್ರಾಣಿಗಳಿಗೂ ಪ್ರಾಣಸ್ವರೂಪನೂ ಶರೀರೇಂದ್ರಿಯಮನಸ್ಸುಗಳಿಗೆ ಬಲ-ಪುಷ್ಟಿ ಮತ್ತು ಶಕ್ತಿಗಳನ್ನು ಕೊಡತಕ್ಕವನೂ ಆಗಿರುವನೋ–ಚಕ್ರವರ್ತಿಯನ್ನು ಹಿಂಬಾಲಿಸುವ ಸೇವಕರಂತೆ ನಾವೆಲ್ಲರೂ ಬುದ್ಧಿಯೇ ಮೊದಲಾದ ಇಂದ್ರಿಯಗಳಲ್ಲಿ ಅಧಿಷ್ಠಾತೃದೇವತೆ ಗಳಾಗಿ ಯಾವನನ್ನು ಅನುಸರಿಸಿಕೊಂಡಿರುವೆವೋ–ಅಂತಹ ವಾಯುವು ಕೂಡ ಯಾವ ಶ್ರೀಭಗವಂತನ ಪ್ರಾಣದಿಂದ ಜನಿಸಿರುವುದೋ ಅಂತಹ ಮಹೈಶ್ವರ್ಯಸಂಪನ್ನನಾದ ಶ್ರೀಭಗವಂತನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

---

* ಬ್ರಹ್ಮಣ ಏಷ ಧಿಷ್ಣ್ಯಂ ಎಂಬುದಕ್ಕೆ ಶ್ರುತಿ-ಪುರಾಣವಾಕ್ಯಗಳು ಹೀಗಿವೆ :

ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷಃ ।
ಧ್ಯೇಯಃ ಸದಾ ಸವಿತೃಮಣ್ಡಲಮಧ್ಯವರ್ತೀ ನಾರಾಯಣಃ ॥

ಶ್ರೋತ್ರಾದ್ದಿಶೋ ಯಸ್ಯ ಹೃದಶ್ಚ ಖಾನಿ
ಪ್ರಜಜ್ಞಿರೇ ಖಂ ಪುರುಷಸ್ಯ ನಾಭ್ಯಾಃ ।
ಪ್ರಾಣೇನ್ದ್ರಿಯಾತ್ಮಾ ಸುಶರೀರಕೇತಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೩೮॥

ಯಾವ ವಿರಾಟ್ಪುರುಷನ ಕಿವಿಯಿಂದ ದಿಕ್ಕುಗಳು ಹುಟ್ಟಿವೆಯೋ, ಹೃದಯದಿಂದ ಜ್ಞಾನೇಂದ್ರಿಯಗಳು ಹುಟ್ಟಿವೆಯೋ, ಹೊಕ್ಕಳಿನಿಂದ ಪ್ರಾಣ-ಅಪಾನ-ಉದಾನ-ಸಮಾನ ಮತ್ತು ವ್ಯಾನಗಳೆಂಬ ಐದು ವಾಯುಗಳಿಗೂ, ನಾಗ-ಕೂರ್ಮ-ಕೃಕಲ-ದೇವದತ್ತ ಮತ್ತು ಧನಂಜಯಗಳೆಂಬ ಉಪವಾಯುಗಳಿಗೂ, ಕರ್ಮೇಂದ್ರಿಯಗಳಿಗೂ, ಬುದ್ಧಿ ಮತ್ತು ಶರೀರಗಳಿಗೂ ಆಶ್ರಯವಾದ ಅಂತರಿಕ್ಷವುಂಟಾಯಿತೋ–ಅಂತಹ ಮಹೈಶ್ವರ್ಯ ಸಂಪನ್ನನಾದ ಶ್ರೀಭಗವಂತನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ಬಲಾನ್ಮಹೇನ್ದ್ರಸ್ತ್ರಿದಶಾಃ ಪ್ರಸಾದಾ-
ನ್ಮನ್ಯೋರ್ಗಿರೀಶೋ ಧಿಷಣಾದ್ವಿರಿಞ್ಚಃ ।
ಖೇಭ್ಯಶ್ಚ ಛನ್ದಾಂಸ್ಯೃಷಯೋ ಮೇಢ್ರತಃ ಕಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೩೯॥

ಯಾವನ ಬಲದಿಂದ ಇಂದ್ರನೂ, ಪ್ರಸನ್ನತೆಯಿಂದ ದೇವತೆಗಳೂ, ಕ್ರೋಧದಿಂದ ಶಂಕರನೂ, ಬುದ್ಧಿಯಿಂದ ಬ್ರಹ್ಮನೂ (ನಾನೂ), ಇಂದ್ರಿಯಗಳಿಂದ ಋಷಿಗಳೂ ಮತ್ತು ವೇದಗಳೂ, ಶಿಶ್ನದಿಂದ ಪ್ರಜಾಪತಿಯೂ ಉತ್ಪನ್ನರಾದರೋ ಅಂತಹ ಮಹೈಶ್ವರ್ಯಸಂಪನ್ನನಾದ ಶ್ರೀಭಗವಂತನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ಶ್ರೀರ್ವಕ್ಷಸಃ ಪಿತರಶ್ಛಾಯಯಾಸ-
ನ್ಧರ್ಮಃ ಸ್ತನಾದಿತರಃ ಪೃಷ್ಠತೋಽಭೂತ್ ।
ದ್ಯೌರ್ಯಸ್ಯ ಶೀರ್ಷ್ಣೋಽಪ್ಸರಸೋ ವಿಹಾರಾ-
ತ್ಪ್ರಸೀದತಾಂ ನಃ ಸ ಮಹಾವಿಭೂತಿಃ ॥೪೦॥

ಯಾವನ ವಕ್ಷಃಸ್ಥಳದಿಂದ ಲಕ್ಷ್ಮಿಯು ಹುಟ್ಟಿದಳೋ, ನೆರಳಿನಿಂದ ಪಿತೃಗಣಗಳೂ, ಸ್ತನದಿಂದ ಧರ್ಮವೂ, ಪೃಷ್ಠಭಾಗದಿಂದ ಅಧರ್ಮವೂ, ತಲೆಯಿಂದ ಸ್ವರ್ಗವೂ, ವಿಹಾರದಿಂದ ಅಪ್ಸರೆಯರೂ ಹುಟ್ಟಿದರೋ–ಅಂತಹ

ಮಹೈಶ್ವರ್ಯಸಂಪನ್ನನಾದ ಪರಮಾತ್ಮನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ವಿಪ್ರೋ ಮುಖಂ ಬ್ರಹ್ಮ ಚ ಯಸ್ಯ ಗುಹ್ಯಂ
ರಾಜನ್ಯ ಆಸೀದ್ಭುಜಯೋರ್ಬಲಂ ಚ ।
ಊರ್ವೋರ್ವಿಡೋಜೋಙ್ಘ್ರಿರವೇದಶೂದ್ರೌ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೪೧॥

ಯಾವನ ಮುಖದಿಂದ ಬ್ರಾಹ್ಮಣನೂ ಮತ್ತು ಅತ್ಯಂತ ರಹಸ್ಯಮಯವಾಗಿರುವ ವೇದವೂ, ಭುಜಗಳಿಂದ ಕ್ಷತ್ರಿಯನೂ ಮತ್ತು ಬಲವೂ, ತೊಡೆಗಳಿಂದ ವೈಶ್ಯನೂ ಮತ್ತು ವ್ಯಾಪಾರಕುಶಲತೆಯೂ, ಪಾದಗಳಿಂದ ಶೂದ್ರನೂ ಮತ್ತು ಸೇವಾರೂಪವಾದ ವೃತ್ತಿಯೂ ಪ್ರಕಟವಾಗಿರುವುದೋ– ಅಂತಹ ಮಹೈಶ್ವರ್ಯಸಂಪನ್ನನಾದ ಶ್ರೀಭಗವಂತನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ಲೋಭೋಽಧರಾತ್ಪ್ರೀತಿರುಪರ್ಯಭೂದ್ದ್ಯುತಿ–
ರ್ನಸ್ತಃ ಪಶವ್ಯಃ ಸ್ಪರ್ಶೇನ ಕಾಮಃ ।
ಭ್ರುವೋರ್ಯಮಃ ಪಕ್ಷ್ಮಭವಸ್ತು ಕಾಲಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೪೨॥

ಯಾವನ ಕೆಳದುಟಿಯಿಂದ ಲೋಭವೂ, ಮೇಲ್ದುಟಿಯಿಂದ ಪ್ರೀತಿಯೂ, ಮೂಗಿನಿಂದ ಕಾಂತಿಯೂ, ಸ್ಪರ್ಶದಿಂದ ಪಶುಗಳಿಗೆ ಹಿತವಾದ ಕಾಮವೂ, ಹುಬ್ಬುಗಳಿಂದ ಯಮನೂ, ರೆಪ್ಪೆಗಳಿಂದ ಕಾಲವೂ ಹುಟ್ಟಿರುವುವೋ–ಅಂತಹ ಮಹೈಶ್ವರ್ಯಸಂಪನ್ನನಾದ ಶ್ರೀಭಗವಂತನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ದ್ರವ್ಯಂ ವಯಃ ಕರ್ಮ ಗುಣಾನ್ವಿಶೇಷಂ
ಯದ್ಯೋಗಮಾಯಾವಿಹಿತಾನ್ವದನ್ತಿ ।
ಯದ್ದುರ್ವಿಭಾವ್ಯಂ ಪ್ರಬುಧಾಪಬಾಧಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥೪೩॥

ಪೃಥಿವ್ಯಾದಿಪಂಚಮಹಾಭೂತಗಳು, ಕಾಲ, ಕರ್ಮ, ಸತ್ತ್ವಾದಿಗುಣಗಳು, ಭೌತಿಕಪ್ರಪಂಚ-ಇವೆಲ್ಲವೂ ಶ್ರೀಭಗವಂತನ ಯೋಗಮಾಯೆಯಿಂದ

ಕಲ್ಪಿತವಾದುವುಗಳೆಂದು ಹೇಳುತ್ತಾರೆ. ಯೋಗಮಾಯೆಯ ಶಕ್ತಿಯು ಊಹಿಸಲೂ ಕೂಡ ಅಸಾಧ್ಯವಾದುದು. ವಿವೇಕಿಗಳಾದ ವಿದ್ವಾಂಸರಿಂದ ತಿರಸ್ಕರಿಸಲ್ಪಡುವ ಅಂತಹ ಯೋಗಮಾಯೆಗೆ ಅಧ್ಯಕ್ಷನಾದ ಮಹೈಶ್ವರ್ಯ ಸಂಪನ್ನನಾದ ಶ್ರೀಭಗವಂತನು ನಮ್ಮ ವಿಷಯದಲ್ಲಿ ಪ್ರಸನ್ನನಾಗಲಿ.

ನಮೋಽಸ್ತು ತಸ್ಮಾ ಉಪಶಾನ್ತಶಕ್ತಯೇ
ಸ್ವರಾಜ್ಯಲಾಭಪ್ರತಿಪೂರಿತಾತ್ಮನೇ ।
ಗುಣೇಷು ಮಾಯಾರಚಿತೇಷು ವೃತ್ತಿಭಿ-
ರ್ನ ಸಜ್ಜಮಾನಾಯ ನಭಸ್ವದೂತಯೇ ॥೪೪॥

ಯಾವ ಶ್ರೀಭಗವಂತನು ಜಗತ್ಸ್ವರೂಪನಾಗಿದ್ದರೂ ತನಗೆ ಬೇಡ ವೆಂದು ತೋರಿದಾಗ ಸೃಷ್ಟಿಯೇ ಮೊದಲಾದ ವ್ಯಾಪಾರಗಳನ್ನು ತೊರೆದು ಉಪಶಮನಹೊಂದಿದ ಶಕ್ತಿಯುಳ್ಳವನಾಗಿ (ಶಾಂತನಾಗಿ) ಆತ್ಮಾನಂದ ಭಾವದಿಂದ ತೃಪ್ತವಾದ ಸ್ವರೂಪವುಳ್ಳವನಾಗುವನೋ, ಮಾಯಾಕಲ್ಪಿತವಾದ ಗುಣಗಳಲ್ಲಿ ಅಂಟಿಕೊಳ್ಳದೆ ವಾಯುವಿನಂತೆ ಅಸಂಗನಾಗಿರುವನೋ ಅಂತಹ ಪರಬ್ರಹ್ಮಪರಮಾತ್ಮನಿಗೆ ನಮಸ್ಕಾರಮಾಡುತ್ತೇನೆ.

ಸ ತ್ವಂ ನೋ ದರ್ಶಯಾತ್ಮಾನಮಸ್ಮತ್ಕರಣಗೋಚರಮ್ ।
ಪ್ರಪನ್ನಾನಾಂ ದಿದೃಕ್ಷೂಣಾಂ ಸಸ್ಮಿತಂ ತೇ ಮುಖಾಮ್ಬುಜಮ್ ॥೪೫॥

ಅಂತಹ ಮಹೈಶ್ವರ್ಯಸಂಪನ್ನನಾದ ನೀನು-ಶರಣಾಗತರಾಗಿ ನಿನ್ನನ್ನು ಸಂದರ್ಶಿಸಲು ಬಂದಿರುವ ನಮಗೆ ನಮ್ಮ ನೇತ್ರೇಂದ್ರಿಯಗಳಿಗೆ ಕಾಣತಕ್ಕ ಮುಗುಳ್ನಗೆಯಿಂದ ಕೂಡಿದ ನಿನ್ನ ಮುಖಾರವಿಂದವನ್ನು ತೋರಿಸು.

ತೈಸ್ತೈಃ ಸ್ವೇಚ್ಛಾಧೃತೈ ರೂಪೈಃ ಕಾಲೇ ಕಾಲೇ ಸ್ವಯಂ ವಿಭೋ ।
ಕರ್ಮ ದುರ್ವಿಷಹಂ ಯನ್ನೋ ಭಗವಾಂಸ್ತತ್ಕರೋತಿ ಹಿ ॥೪೬॥

ಪ್ರಭುವೇ! ಕಾಲಕಾಲಕ್ಕೆ ನೀನಾಗಿಯೇ ಸ್ವೇಚ್ಛೆಯಿಂದ ನಾನಾವಿಧ ರೂಪಗಳನ್ನು ಧರಿಸಿ ಭೂಮಿಯಲ್ಲಿ ಅವತರಿಸಿ ನಮಗೆ ಅಸಾಧ್ಯವೆನಿಸಿದ ಕಾರ್ಯಗಳನ್ನು ಮಾಡಿಕೊಡುವೆಯಲ್ಲವೇ!

ಕ್ಲೇಶಭೂರ್ಯಲ್ಪಸಾರಾಣಿ ಕರ್ಮಾಣಿ ವಿಫಲಾನಿ ವಾ ।
ದೇಹಿನಾಂ ವಿಷಯಾರ್ತಾನಾಂ ನ ತಥೈವಾರ್ಪಿತಂ ತ್ವಯಿ ॥೪೭॥

ವಿಷಯಾಸಕ್ತನಾದ ಮನುಷ್ಯನು ದುಃಖಪಡುತ್ತಿರುತ್ತಾನೆ. ಅವನು ಮಾಡುವ ಕರ್ಮಗಳೆಲ್ಲವೂ ಕ್ಲೇಶದಾಯಕಗಳಾಗಿರುತ್ತವೆ ಮತ್ತು ಅಲ್ಪವಾದ ಫಲವನ್ನು ಕೊಡುತ್ತವೆ. ಕೆಲವು ಸಮಯಗಳಲ್ಲಿ ಯಾವ ಫಲವನ್ನೂ ಕೊಡುವುದೇ ಇಲ್ಲ. ಆದರೆ ನಿನ್ನ ಪ್ರೀತ್ಯರ್ಥವಾಗಿ ಅರ್ಪಿಸಿದ ಕರ್ಮಗಳು ಒಡನೆಯೇ ಫಲವನ್ನು ಕೊಡುತ್ತವೆ. ವ್ಯರ್ಥವಂತೂ ಆಗುವುದೇ ಇಲ್ಲ. ಪರಮಸುಖದಾಯಕಗಳಾಗುತ್ತವೆ.

ನಾವಮಃ ಕರ್ಮಕಲ್ಪೋಽಪಿ ವಿಫಲಾಯೇಶ್ವರಾರ್ಪಿತಃ ।
ಕಲ್ಪತೇ ಪುರುಷಸ್ಯೈಷ ಸ ಹ್ಯಾತ್ಮಾ ದಯಿತೋ ಹಿತಃ ॥೪೮॥

ಶ್ರೀಭಗವಂತನಿಗೆ ಸಮರ್ಪಿಸಿದ ಅತ್ಯಲ್ಪವಾದ ಕರ್ಮಾಭಾಸವಾದ ಲೌಕಿಕಕರ್ಮವೂ ಕೂಡ ವಿಫಲವಾಗುವುದಿಲ್ಲ. ಏಕೆಂದರೆ ಪರಮಾತ್ಮನು ಮನುಷ್ಯರಿಗೆ ಪರಮಹಿತೈಷಿಯೂ ಪ್ರಿಯತಮನೂ ಮತ್ತು ಆತ್ಮಸ್ವರೂಪನೂ ಆಗಿದ್ದಾನೆ.

ಯಥಾ ಹಿ ಸ್ಕನ್ಧಶಾಖಾನಾಂ ತರೋರ್ಮೂಲಾವಸೇಚನಮ್ ।
ಏವಮಾರಾಧನಂ ವಿಷ್ಣೋಃ ಸರ್ವೇಷಾಮಾತ್ಮನಶ್ಚ ಹಿ ॥೪೯॥

ಒಂದು ಮರದ ಬೇರಿಗೆ ನೀರೆರೆದಾಗ ಯಾವ ರೀತಿಯಲ್ಲಿ ಆ ಮರದ ಬುಡದಿಂದ ತುದಿಯವರೆಗೂ ಇರುವ ಶಾಖೆಗಳಿಗೂ ಉಪಶಾಖೆಗಳಿಗೂ ಎಲೆ-ಚಿಗುರು-ಪುಷ್ಪ-ಫಲಗಳಿಗೂ ತೃಪ್ತಿಯುಂಟಾಗುವುದೋ—ಅದೇ ರೀತಿ ಯಲ್ಲಿ ವಿಷ್ಣುವೊಬ್ಬನನ್ನು ಆರಾಧಿಸಿದಲ್ಲಿ ಎಲ್ಲರಿಗೂ ಸುಖವುಂಟಾಗುವುದು. ತನಗೂ ಸುಖವುಂಟಾಗುವುದು.

ನಮಸ್ತುಭ್ಯಮನನ್ತಾಯ ದುರ್ವಿತರ್ಕ್ಯಾತ್ಮಕರ್ಮಣೇ ।
ನಿರ್ಗುಣಾಯ ಗುಣೇಶಾಯ ಸತ್ತ್ವಸ್ಥಾಯ ಚ ಸಾಮ್ಪ್ರತಮ್ ॥೫೦॥

ಆದಿ-ಮಧ್ಯಾಂತರಹಿತನಾದ, ಊಹಿಸಲು ಅಶಕ್ಯವಾದ ನಡವಳಿಕೆ ಯುಳ್ಳ, ನಿರ್ಗುಣನಾಗಿದ್ದರೂ ಕಲ್ಯಾಣಗುಣಪರಿಪೂರ್ಣನಾದ, ಸತ್ತ್ವಾದಿ ಗುಣಗಳಿಗೆ ಸ್ವಾಮಿಯಾದ, ಪ್ರಕೃತದಲ್ಲಿ ಸತ್ತ್ವಗುಣದಲ್ಲಿರುವ ನಿನಗೆ ನಮಸ್ಕಾರವು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಅಷ್ಟಮಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೬ನೆಯ ಅಧ್ಯಾಯ

ದೇವ-ದಾನವರು ಸೇರಿ ಸಮುದ್ರವನ್ನು ಕಡೆದುದು

ಶ್ರೀಶುಕರು ಹೇಳುತ್ತಾರೆ :

ಏವಂ ಸ್ತುತಃ ಸುರಗಣೈರ್ಭಗವಾನ್ಹರಿರೀಶ್ವರಃ ।
ತೇಷಾಮಾವಿರಭೂದ್ರಾಜನ್ಸಹಸ್ರಾರ್ಕೋದಯದ್ಯುತಿಃ ॥೧॥

ಪರೀಕ್ಷಿತನೇ! ಹೀಗೆ ಬ್ರಹ್ಮದೇವರೇ ಮುಂತಾದ ದೇವತೆಗಳು ಸ್ತೋತ್ರಮಾಡಲು ಸರ್ವೇಶ್ವರನಾದ, ಭಗವಂತನಾದ ಶ್ರೀಹರಿಯು ಪ್ರತ್ಯಕ್ಷನಾದನು. ಆ ಸಮಯದಲ್ಲಿ ಅವನ ಆ ದಿವ್ಯಕಾಂತಿಯು ಸಾವಿರ ಸೂರ್ಯರು ಏಕಕಾಲದಲ್ಲಿ ಉದಯಿಸಿದರೆ ಉಂಟಾಗುವ ದಿವ್ಯಪ್ರಕಾಶಕ್ಕೆ ಸಮಾನವಾಗಿದ್ದಿತು.

ಅಂತಹ ಉಜ್ಜ್ವಲವಾದ ಪ್ರಭೆಯಿಂದಾಗಿ ದೇವತೆಗಳ ಕಣ್ಣು ಕೋರೈಸಿ ಶ್ರೀಭಗವಂತನನ್ನು ಕಾಣುವುದಿರಲಿ ; ಪೃಥಿವ್ಯಾಕಾಶಗಳನ್ನಾಗಲೀ ದಿಕ್ಕುಗಳನ್ನಾಗಲೀ ನೋಡಲು ಅವರಿಗೆ ಸಾಧ್ಯವಾಗಲಿಲ್ಲ. ಕಡೆಗೆ ತಮ್ಮ ತಮ್ಮ ಶರೀರಗಳನ್ನು ನೋಡಿಕೊಳ್ಳಲೂ ಕೂಡ ಅವರಿಗೆ ಸಾಧ್ಯವಾಗಲಿಲ್ಲ. ಚತುರ್ಮುಖನು ಈಶನೊಡನೆ ಆ ದಿವ್ಯಮಂಗಳವಿಗ್ರಹವನ್ನು ನೋಡಿದನು.

ಆ ದಿವ್ಯಶರೀರವು ಸ್ವಚ್ಛವಾಗಿ ನಿರ್ಮಲವಾಗಿದ್ದಿತು. ಮರಕತಮಣಿಯಂತೆ ಶ್ಯಾಮಲವರ್ಣದಿಂದ ಶೋಭಿಸುತ್ತಿದ್ದಿತು. ಕಮಲದ ಒಳಭಾಗದಲ್ಲಿರುವ ಕೆಂಪಾದ ಪರಾಗದಂತೆ ಎಣ್ಣೆಗೆಂಪಿನ ಕಣ್ಣುಗಳಿಂದ ಕಂಗೊಳಿಸುತ್ತಿದ್ದಿತು. ಪುಟಕ್ಕೆ ಹಾಕಿದ ಚಿನ್ನದಂತೆ ಥಳ-ಥಳಿಸುತ್ತಿದ್ದ ಪೀತಾಂಬರದಿಂದ ಸಮಲಂಕೃತವಾಗಿದ್ದಿತು. ಆ ದಿವ್ಯಶರೀರದ ಎಲ್ಲ ಅವಯವಗಳೂ ಅತ್ಯಂತ ಪ್ರಸನ್ನವಾಗಿಯೂ ಕಡುಚೆಲುವಾಗಿಯೂ ಕಂಗೊಳಿಸುತ್ತಿದ್ದುವು. ಆ ದಿವ್ಯ ಶರೀರಕ್ಕೆ ಸುಂದರವಾದ, ಮನಮೋಹಕವಾದ ಮುಖವಿದ್ದಿತು. ಆ ಮುಖಕ್ಕೆ ಸುಂದರವಾದ ಹುಬ್ಬುಗಳಿದ್ದುವು. ಜೀವಮಣಿಗಳಿಂದ ಯುಕ್ತವಾದ ದಿವ್ಯ ಕಿರೀಟದಿಂದಲೂ ಕನಕಾಂಗದ-ಕೇಯೂರಗಳಿಂದಲೂ ಆ ದಿವ್ಯಶರೀರದ ಶಿರೋಬಾಹುಗಳು ಅಲಂಕರಿಸಲ್ಪಟ್ಟಿದ್ದುವು. ಕರ್ಣಕುಂಡಲಗಳ ದಿವ್ಯಕಾಂತಿ

ಯಿಂದ ಬೆಳಗುತ್ತಿದ್ದ ಕಪೋಲಗಳಿಂದ ಕೂಡಿ ಆ ದಿವ್ಯಶರೀರದ ಮುಖ ಕಮಲವು ರಾರಾಜಿಸುತ್ತಿದ್ದಿತು. ಒಡ್ಯಾಣ, ಕೈಕಡಗ, ಕಾಲಂದುಗೆ, ಮುತ್ತಿನ ಹಾರ ಇವುಗಳಿಂದ ಆ ದಿವ್ಯಶರೀರವು ಶೋಭಾಯಮಾನವಾಗಿ ಕಾಣು ತ್ತಿದ್ದಿತು. ವಕ್ಷಃಸ್ಥಳದಲ್ಲಿ ಕೌಸ್ತುಭಮಣಿಯನ್ನೂ ವನಮಾಲೆಯನ್ನೂ ಲಕ್ಷ್ಮೀದೇವಿಯನ್ನೂ ಧರಿಸಿದ್ದಿತು. ಸುದರ್ಶನವೇ ಮೊದಲಾದ ದಿವ್ಯಾಯುಧಗಳು ಮೂರ್ತಿಮತ್ತಾಗಿ ನಿಂತು ಆ ದಿವ್ಯಶರೀರವನ್ನು ಉಪಾಸನೆಮಾಡುತ್ತಿದ್ದುವು. ಅಂತಹ ದಿವ್ಯವಾದ, ಅನುಪಮವಾದ, ಕೋಟಿಸೂರ್ಯಪ್ರಕಾಶವಾದ ದಿವ್ಯಶರೀರವನ್ನು ಹೊಂದಿದ್ದ ಪುರುಷೋ ತ್ತಮನನ್ನು ಕಂಡು ದೇವಶ್ರೇಷ್ಠನಾದ ಬ್ರಹ್ಮನು ಶಿವನೊಡನೆಯೂ, ಸಾಷ್ಟಾಂಗಪ್ರಣಾಮಮಾಡುತ್ತಿದ್ದ ದೇವತೆಗಳೊಡನೆಯೂ ಸೇರಿಕೊಂಡು ಸ್ತೋತ್ರಮಾಡಿದನು : (ಶ್ಲೋಕ 2-7)

ಅಜಾತಜನ್ಮಸ್ಥಿತಿಸಂಯಮಾಯಾ-
ಗುಣಾಯ ನಿರ್ವಾಣಸುಖಾರ್ಣವಾಯ ।
ಅಣೋರಣಿಮ್ನೇಽಪರಿಗಣ್ಯಧಾಮ್ನೇ
ಮಹಾನುಭಾವಾಯ ನಮೋ ನಮಸ್ತೇ ॥೮॥

“ಹುಟ್ಟಾಗಲೀ ಬಾಳಾಟವಾಗಲೀ ಸಾವಾಗಲೀ ಇಲ್ಲದ, ಪ್ರಾಕೃತ ಗುಣಗಳಿಂದ ರಹಿತನಾದ, ಮೋಕ್ಷಸ್ವರೂಪವಾದ ಪರಮಾನಂದಕ್ಕೆ ಸಮುದ್ರ ಪ್ರಾಯನಾಗಿರುವ, ಸೂಕ್ಷ್ಮಾತಿಸೂಕ್ಷ್ಮನಾದ, ಅಪರಿಮಿತವಾದ ತೇಜಸ್ಸಿನಿಂದ ರಾರಾಜಿಸುತ್ತಿರುವ ಮಹಾನುಭಾವನಾದ ನಿನಗೆ ಅನಂತಾನಂತ ನಮಸ್ಕಾರಗಳು.

ರೂಪಂ ತವೈತತ್ಪುರುಷರ್ಷಭೇಜ್ಯಂ
ಶ್ರೇಯೋಽರ್ಥಿಭಿರ್ವೈದಿಕತಾನ್ತ್ರಿಕೇಣ ।
ಯೋಗೇನ ಧಾತಃ ಸಹ ನಸ್ತ್ರಿಲೋಕಾ-
ನ್ಪಶ್ಯಾಮ್ಯಮುಷ್ಮಿನ್ನು ಹ ವಿಶ್ವಮೂರ್ತೌ ॥೯॥

ಪುರುಷೋತ್ತಮನೇ! ವಿಶ್ವಮೂರ್ತಿಯೇ! ತಮ್ಮ ಶ್ರೇಯಸ್ಸನ್ನು ಬಯಸುವ ಸಾಧಕರು ವೇದೋಕ್ತವಾದ ಕರ್ಮಗಳಿಂದ ಮತ್ತು ತಂತ್ರ

ಗಳಿಂದ ನಿನ್ನ ಈ ದಿವ್ಯಸ್ವರೂಪವನ್ನು ಉಪಾಸಿಸುತ್ತಾರೆ. ಭಗವಂತ! ವಿಶ್ವಮಯವಾದ ನಿನ್ನ ಈ ದಿವ್ಯಸ್ವರೂಪದಲ್ಲಿ ನಾವು ನಮ್ಮನ್ನೂ ಕೂಡಿ ದೇವಗಣಗಳಿಂದ ಯುಕ್ತವಾದ ಮೂರು ಲೋಕಗಳನ್ನೂ ಕಾಣುತ್ತಿದ್ದೇವೆ.

ತ್ವಯ್ಯಗ್ರ ಆಸೀತ್ತ್ವಯಿ ಮಧ್ಯ ಆಸೀ-
ತ್ತ್ವಯ್ಯನ್ತ ಆಸೀದಿದಮಾತ್ಮತನ್ತ್ರೇ ।
ತ್ವಮಾದಿರನ್ತೋ ಜಗತೋಽಸ್ಯ ಮಧ್ಯಂ
ಘಟಸ್ಯ ಮೃತ್ಸ್ನೇವ ಪರಃ ಪರಸ್ಮಾತ್ ॥೧೦॥

ಭಗವಂತ! ಈ ಜಗತ್ತು ಮೊದಲು ಸರ್ವತಂತ್ರಸ್ವತಂತ್ರನಾದ ನಿನ್ನಲ್ಲಿಯೇ ಲೀನವಾಗಿದ್ದಿತು. ಮಧ್ಯದಲ್ಲಿ ನಿನ್ನಲ್ಲಿಯೇ ಕಾಣಿಸಿಕೊಂಡಿತು. ಅಂತ್ಯದಲ್ಲಿ ಪುನಃ ಈ ಜಗತ್ತು ನಿನ್ನಲ್ಲಿಯೇ ಲಯವಾಗಿಬಿಟ್ಟಿತು. ಮಡಕೆಗೆ ಮಣ್ಣು ಯಾವ ರೀತಿಯಲ್ಲಿ ಆದಿ-ಮಧ್ಯ ಮತ್ತು ಅಂತ್ಯವಾಗಿರುವುದೋ ಅದೇರೀತಿಯಲ್ಲಿ ಈ ಜಗತ್ತಿಗೆ ನೀನು ಆದಿಯೂ, ಮಧ್ಯನೂ ಮತ್ತು ಅಂತ್ಯನೂ ಆಗಿರುವೆ.

ತ್ವಂ ಮಾಯಯಾತ್ಮಾಶ್ರಯಯಾ ಸ್ವಯೇದಂ
ನಿರ್ಮಾಯ ವಿಶ್ವಂ ತದನುಪ್ರವಿಷ್ಟಃ ।
ಪಶ್ಯನ್ತಿ ಯುಕ್ತಾ ಮನಸಾ ಮನೀಷಿಣೋ
ಗುಣವ್ಯವಾಯೇಽಪ್ಯಗುಣಂ ವಿಪಶ್ಚಿತಃ ॥೧೧॥

ಸ್ವಾಮಿಯೇ! ನೀನು ನಿನ್ನ ಆಶ್ರಯದಲ್ಲಿಯೇ ಇರುವ ನಿನ್ನ ಮಾಯೆಯಿಂದ ಈ ಜಗತ್ತನ್ನು ನಿರ್ಮಿಸಿ ಅದರಲ್ಲಿಯೇ ಪ್ರವೇಶಿಸಿ ಅಂತರ್ಯಾಮಿಯ ಸ್ವರೂಪದಿಂದ ವಿರಾಜಮಾನನಾಗಿರುವೆ. ಆದರೆ ವಿವೇಕಿಗಳಾದ ವಿದ್ವಾಂಸರು ತಮ್ಮ ಮನಸ್ಸನ್ನು ಏಕಾಗ್ರಗೊಳಿಸಿ ಚಿಂತಿಸುತ್ತಾ–ಗುಣಗಳ ಪರಿಣಾಮವಾಗಿ ನೀನು ಪ್ರಪಂಚವನ್ನು ಸೃಷ್ಟಿಸಿದ್ದರೂ– ನಿನ್ನನ್ನು ನಿರ್ಗುಣನೆಂದೇ ನಿಶ್ಚಯಿಸಿ ಸಾಕ್ಷಾತ್ಕರಿಸಿಕೊಂಡಿದ್ದಾರೆ.

ಯಥಾಗ್ನಿಮೇಧಸ್ಯಮೃತಂ ಚ ಗೋಷು
ಭುವ್ಯನ್ನಮಮ್ಬೂದ್ಯಮನೇ ಚ ವೃತ್ತಿಮ್ ।

ಯೋಗೈರ್ಮನುಷ್ಯಾ ಅಧಿಯನ್ತಿ ಹಿ ತ್ವಾಂ
ಗುಣೇಷು ಬುದ್ಧ್ಯಾ ಕವಯೋ ವದನ್ತಿ ॥೧೨॥

ಜಗತ್ಪತಿಯೇ! ಹೇಗೆ ಮಾನವನು ಯುಕ್ತಿಯಿಂದ ಕಟ್ಟಿಗೆಯಲ್ಲಿ (ಕಟ್ಟಿಗೆಯನ್ನು ಕಡೆದು) ಅಗ್ನಿಯನ್ನೂ, ಹಸುವಿನಲ್ಲಿ ಅಮೃತಕ್ಕೆ ಸಮಾನವಾದ ಹಾಲನ್ನೂ, ಭೂಮಿಯಲ್ಲಿ ಬೆಳೆ ಬೆಳೆದು ಅನ್ನವನ್ನೂ, ಬಾವಿಯನ್ನು ತೋಡಿಸಿ ನೀರನ್ನೂ, ಉದ್ಯಮದಿಂದ ತನ್ನ ಜೀವನದ ವೃತ್ತಿಯನ್ನೂ ಮಾಡಿಕೊಳ್ಳುವನೋ–ಅದೇ ರೀತಿಯಲ್ಲಿ ಮನುಷ್ಯರು ತಮ್ಮ ಶುದ್ಧವಾದ ಸಾತ್ವಿಕಬುದ್ಧಿಯಿಂದ ಧ್ಯಾನಯೋಗವೇ ಮುಂತಾದುವುಗಳ ಮೂಲಕವಾಗಿ ಸತ್ವಾದಿಗುಣಗಳಲ್ಲಿಯೂ (ಗುಣಗಳಿಂದ ಕೂಡಿದ ಈ ಜಗತ್ತಿನಲ್ಲಿಯೂ) ನಿನ್ನನ್ನು ಕಂಡುಕೊಳ್ಳುವರು ಮತ್ತು ಹಾಗೆ ಸಾಕ್ಷಾತ್ಕರಿಸಿಕೊಂಡು ತಮಗಾದ ಅನುಭವವನ್ನು ವರ್ಣಿಸಿ ಹೇಳುವರು.

ತಂ ತ್ವಾಂ ವಯಂ ನಾಥ ಸಮುಜ್ಜಿಹಾನಂ
ಸರೋಜನಾಭಾತಿ ಚಿರೇಪ್ಸಿತಾರ್ಥಮ್ ।
ದೃಷ್ಟ್ವಾ ಗತಾ ನಿರ್ವೃತಿಮದ್ಯ ಸರ್ವೇ
ಗಜಾ ದವಾರ್ತಾ ಇವ ಗಾಙ್ಗಮಮ್ಭಃ ॥೧೩॥

ಕಮಲನಾಭನೇ! ನಾವು ಬಹಳ ದಿವಸಗಳಿಂದ ನಿನ್ನ ಪವಿತ್ರವಾದ ದರ್ಶನವನ್ನು ಪಡೆಯುವ ಲಾಲಸೆಯಿಂದಿದ್ದೆವು. ಈಗ ನಮ್ಮ ಮುಂದೆ ಆವಿರ್ಭವಿಸಿರುವ ದಿವ್ಯಮಂಗಳಮೂರ್ತಿಯಾದ ನಿನ್ನನ್ನು ಸಂದರ್ಶಿಸಿ–ಕಾಡುಗಿಚ್ಚಿನಿಂದ ಬೆಂದು ನೊಂದಿರುವ ಕಾಡಾನೆಗಳು ಗಂಗಾನದಿಯನ್ನು ನೋಡಿದೊಡನೆಯೇ ಸಂತೋಷಪಡುವಂತೆ–ನಾವೆಲ್ಲರೂ ಆನಂದತುಂದಿಲರಾಗಿದ್ದೇವೆ.

ಸ ತ್ವಂ ವಿಧತ್ಸ್ವಾಖಿಲಲೋಕಪಾಲಾ
ವಯಂ ಯದರ್ಥಾಸ್ತವ ಪಾದಮೂಲಮ್ ।
ಸಮಾಗತಾಸ್ತೇ ಬಹಿರನ್ತರಾತ್ಮ-
ನ್ಕಿಂ ವಾನ್ಯವಿಜ್ಞಾಪ್ಯಮಶೇಷಸಾಕ್ಷಿಣಃ ॥೧೪॥

ಅಂತರ್ಯಾಮಿಯೇ! ಲೋಕಪಾಲರಾದ ನಾವೆಲ್ಲರೂ ಯಾವ ಉದ್ದೇಶದಿಂದ ನಿನ್ನ ಚರಣಾರವಿಂದಗಳನ್ನು ಆಶ್ರಯಿಸಿ ಬಂದಿರುವೆವೋ ಆ

ನಮ್ಮ ಉದ್ದೇಶವನ್ನು ಸಫಲಗೊಳಿಸು. ನೀನು ಎಲ್ಲಕ್ಕೂ ಸಾಕ್ಷೀಭೂತನಾಗಿ ರುವೆ. ನಾವು ಯಾವ ಕಾರ್ಯಾರ್ಥವಾಗಿ ಬಂದಿರುವೆವೆಂಬುದೂ ನಿನಗೆ ತಿಳಿದಿದೆ. ಹೀಗಿರುವಾಗ ಬಹಿರಂಗವಾಗಿ ಅರಿಕೆಮಾಡಿಕೊಳ್ಳಲು ಬೇರೆ ಯಾವ ವಿಷಯವಿದೆ?

ಅಹಂ ಗಿರಿತ್ರಶ್ಚ ಸುರಾದಯೋ ಯೇ
ದಕ್ಷಾದಯೋऽಗ್ನೇರಿವ ಕೇತವಸ್ತೇ ।
ಕಿಂ ವಾ ವಿದಾಮೇಶ ಪೃಥಗ್ವಿಭಾತಾ
ವಿಧತ್ಸ್ವ ಶಂ ನೋ ದ್ವಿಜದೇವಮನ್ತ್ರಮ್ ॥೧೫॥

ಪ್ರಭುವೇ! ನಾನು, ಶಂಕರನು, ಇತರದೇವತೆಗಳು, ಋಷಿ-ಮುನಿ ಗಳು, ದಕ್ಷನೇ ಮೊದಲಾದ ಪ್ರಜಾಪತಿಗಳು–ಎಲ್ಲರೂ ಉರಿಯುತ್ತಿರುವ ಯಜ್ಞೇಶ್ವರನಿಂದ ಹೊರಬಂದ ಕಿಡಿಗಳಂತೆ ನಿನ್ನಿಂದಲೇ ಹೊರಬಂದಿದ್ದೇವೆ. ಆದರೆ ನಿನ್ನಿಂದ ಪ್ರತ್ಯೇಕವಾದ ಅಸ್ತಿತ್ವವಿದೆಯೆಂದು ಭಾವಿಸಿಕೊಂಡಿದ್ದೇವೆ. ಇಂತಹ ಸ್ಥಿತಿಯಲ್ಲಿ ನಾವೇನು ಬಲ್ಲೆವು? ನಮಗೂ, ದೇವತೆಗಳಿಗೂ, ಬ್ರಾಹ್ಮಣರಿಗೂ ಯಾವುದರಿಂದ ಹಿತವಾಗುವುದೋ ಅಂತಹ ಉಪಾಯ ವೊಂದನ್ನು ಕಲ್ಪಿಸು."

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತನೇ! ಹೀಗೆ ಚತುರ್ಮುಖನೇ ಮೊದಲಾದ ದೇವತೆಗಳಿಂದ ಸ್ತೋತ್ರಮಾಡಲ್ಪಟ್ಟ ಶ್ರೀಹರಿಯು, ಅವರ ಮನಸ್ಸಿನಲ್ಲಿರುವ ಆಶಯವನ್ನು ತಿಳಿದವನಾಗಿ, ಜಿತೇಂದ್ರಿಯರಾಗಿದ್ದ ಮತ್ತು ಕೈಜೋಡಿಸಿಕೊಂಡಿದ್ದ ಬ್ರಹ್ಮನೇ ಮುಂತಾದ ದೇವತೆಗಳನ್ನು ಕುರಿತು ಮೇಘದಂತೆ ಗಂಭೀರವಾಗಿದ್ದ ಮಾತಿನಿಂದ ಹೇಳಿದನು.

ಮಹಾರಾಜ! ಸಮಸ್ತದೇವತೆಗಳಿಗೂ ಮತ್ತು ಜಗತ್ತಿಗೂ ಏಕಮಾತ್ರ ಸ್ವಾಮಿಯಾದ ಸುರೇಶ್ವರನು ತಾನೊಬ್ಬನೇ ಅವರ ಎಲ್ಲ ಕಾರ್ಯಗಳನ್ನೂ ಮಾಡಿಕೊಡಲು ಸಮರ್ಥನಾಗಿದ್ದರೂ ಸಮುದ್ರಮಥನವೇ ಮೊದಲಾದ ಲೀಲೆಗಳನ್ನು ತೋರಿಸಲಿಚ್ಛಿಸಿ ದೇವತೆಗಳಿಗೆ ಹೀಗೆ ಹೇಳಿದನು :

"ಚತುರ್ಮುಖನೇ! ಶಂಕರನೇ! ದೇವತೆಗಳೇ! ನೀವು ಸಾವಧಾನ

ಚಿತ್ತದಿಂದ ನನ್ನ ಮಾತನ್ನು ಕೇಳಿರಿ. ನಿಮಗೆ ಶ್ರೇಯಸ್ಸು ಹೇಗೆ ಲಭಿಸುವುದೆಂಬುದನ್ನು ಹೇಳುತ್ತೇನೆ. ಈಗ ಅಸುರರಿಗೆ ಒಳ್ಳೆಯ ಕಾಲವಾಗಿದೆ. ಆದುದರಿಂದ ನಿಮಗೆ ಅಭ್ಯುದಯ ಮತ್ತು ನಿಃಶ್ರೇಯಸ್ಸುಗಳು ದೊರೆಯುವವರೆಗೆ ನೀವು ದೈತ್ಯ-ದಾನವರ ಬಳಿಗೆ ಹೋಗಿ ಅವರೊಡನೆ ಸಂಧಿಯನ್ನು ಮಾಡಿಕೊಳ್ಳಿರಿ.

ಅರಯೋಽಪಿ ಹಿ ಸನ್ಧೇಯಾಃ ಸತಿ ಕಾರ್ಯಾರ್ಥಗೌರವೇ ।
ಅಹಿಮೂಷಕವದ್ದೇವಾ ಹ್ಯರ್ಥಸ್ಯ ಪದವೀಂ ಗತೈಃ ॥೨೦॥

ಯಾವುದಾದರೂ ದೊಡ್ಡ ಕೆಲಸವನ್ನು ಸಾಧಿಸಬೇಕಾಗಿ ಬಂದಾಗ ಶತ್ರುಗಳೊಡನೆಯೂ ಸಂಧಾನವನ್ನು ನಡೆಸಬೇಕು. ಸರ್ಪವು ತನ್ನ ಶತ್ರುವಾದ ಇಲಿಯಿಂದ ತನ್ನ ಕೆಲಸವನ್ನು ಮಾಡಿಸಿಕೊಂಡು ತನ್ನ ಕಾರ್ಯವು ಸಿದ್ಧಿಯಾದೊಡನೆಯೇ ಇಲಿಯನ್ನು ತಿಂದುಹಾಕಿದಂತೆ ನೀವೂ ದೈತ್ಯರ ಸಹಾಯದಿಂದ ಸ್ವಕಾರ್ಯಸಿದ್ಧಿಯನ್ನು ಪಡೆದು ಒಡನೆಯೇ ಅವರನ್ನು ಧ್ವಂಸಮಾಡಿಬಿಡಬೇಕು. ಸರ್ಪ ಮತ್ತು ಇಲಿಗಳ ನ್ಯಾಯವನ್ನು ಅನುಸರಿಸಬೇಕು.*

ನೀವು ದಾನವರೊಡನೆ ಸೇರಿಕೊಂಡು ತಡಮಾಡದೆ ಅಮೃತಪ್ರಾಪ್ತಿಗೆ ಪ್ರಯತ್ನಿಸಿರಿ. ಅದನ್ನು ಪಾನಮಾಡುವುದರಿಂದ ಮರಣಧರ್ಮವಿರುವವನೂ

---

* ಅಹಿಮೂಷಕನ್ಯಾಯ : ಹಾವಾಡಿಗನ ಬುಟ್ಟಿಯಲ್ಲಿ ಹಾವಿದ್ದಿತು. ಅದೇ ಬುಟ್ಟಿಗೆ ಹೇಗೋ ಒಂದು ಇಲಿಯೂ ಬಂದುಬಿಟ್ಟಿತು. ಸರ್ಪವನ್ನು ನೋಡಿ ಇಲಿಗೆ ಭಯ ವಾಯಿತು. ಆದರೆ ಸರ್ಪವು ಇಲಿಯನ್ನು ಸಮಾಧಾನಗೊಳಿಸುತ್ತಾ ಹೇಳಿತು : 'ಇಲಿಯಣ್ಣ! ನೀನು ನನಗಾಗಿ ಭಯಪಡುವ ಕಾರಣವಿಲ್ಲ. ಇಬ್ಬರೂ ಈಗ ಹಾವಾಡಿಗನ ಬಂಧನ ದಲ್ಲಿದ್ದು ಇಬ್ಬರೂ ಕಷ್ಟದಲ್ಲಿದ್ದೇವೆ. ಈ ಸಮಯದಲ್ಲಿ ಇಬ್ಬರೂ ಮಿತ್ರರಾಗಿ ವ್ಯವಹರಿಸೋಣ. ನೀನು ಹೇಗಾದರೂ ಮಾಡಿ ಈ ಬುಟ್ಟಿಯಲ್ಲಿ ಒಂದು ಕಂಡಿಯನ್ನು ಮಾಡಿಬಿಡು. ಇಬ್ಬರೂ ಇಲ್ಲಿಂದ ತಪ್ಪಿಸಿಕೊಂಡು ಹೋಗೋಣ.' ಮೊದಲು ಮೊದಲು ಇಲಿಯು ಒಪ್ಪದಿದ್ದರೂ ಸರ್ಪವು ಸವಿಮಾತುಗಳಿಂದ ಇಲಿಯನ್ನು ಒಪ್ಪಿಸಿತು. ಇಲಿಯು ರಾತ್ರಿಯೆಲ್ಲಾ ಕಷ್ಟಪಟ್ಟು ಬುಟ್ಟಿಗೆ ಕಂಡಿಯನ್ನು ಮಾಡಿತು. ಸರ್ಪವು ಮೊದಲು ಕಂಡಿಯಿಂದ ಹೊರಕ್ಕೆ ಹೊರಟಿತು. ಹಿಂಬಾಲಿಸಿ ಬಂದ ಇಲಿಯನ್ನು ಕ್ಷಣಮಾತ್ರದಲ್ಲಿ ಗುಳಕ್ಕನೆ ನುಂಗಿಹಾಕಿತು.

ಅಮರನಾಗುತ್ತಾನೆ. ನೀವು ಮೊದಲು ಪಾಲ್ಗಡಲಿನಲ್ಲಿ ಎಲ್ಲ ಬಗೆಯ ಬಳ್ಳಿಗಳನ್ನೂ, ಗಿಡ-ಮರಗಳನ್ನೂ, ಸೊಪ್ಪುಗಳನ್ನೂ, ನಾರು-ಬೇರುಗಳನ್ನೂ ಹಾಕಿರಿ. ಮಂದರಪರ್ವತವನ್ನು ಕಡೆಗೋಲನ್ನಾಗಿಯೂ ವಾಸುಕಿಯನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಳ್ಳಿರಿ. ನನ್ನ ಸಹಾಯದಿಂದ ಸ್ವಲ್ಪವೂ ಅಲಸಿಕೆಯಿಲ್ಲದೆ ದಾನವರೊಡನೆ ಸೇರಿಕೊಂಡು ಸಮುದ್ರವನ್ನು ಕಡೆಯಿರಿ. ರಾಕ್ಷಸರು ಕ್ಲೇಶಕ್ಕೆ ಭಾಗಿಗಳಾಗುತ್ತಾರೆ. ನೀವು ಫಲಕ್ಕೆ ಭಾಗಿಗಳಾಗುವಿರಿ. ದೇವತೆಗಳೇ! ಅಸುರರು ಯಾವುದನ್ನು ಅಪೇಕ್ಷಿಸು ವರೋ ಅದನ್ನು ನೀವು ಅನುಮೋದಿಸಿರಿ. ಅವರು ಕೇಳಿದುದನ್ನು ಇಲ್ಲವೆನ್ನಬೇಡಿರಿ. ಇಲ್ಲದಿದ್ದರೆ ಸಂಘರ್ಷಕ್ಕೆ ಅವಕಾಶವಾಗುತ್ತದೆ.

ಯೂಯಂ ತದನುಮೋದಧ್ವಂ ಯದಿಚ್ಛನ್ತ್ಯಸುರಾಃ ಸುರಾಃ ।
ನ ಸಂರಮ್ಭೇಣ ಸಿಧ್ಯನ್ತಿ ಸರ್ವೇಽರ್ಥಾಃ ಸಾನ್ತ್ವಯಾ ಯಥಾ ॥೨೪॥

ಸಮಸ್ತಕಾರ್ಯಗಳೂ ಸಾಮೋಪಾಯದಿಂದ ಸಿದ್ಧಿಸುವಂತೆ ಕೋಪ-ತಾಪಗಳಿಂದ ಸಿದ್ಧಿಸಲಾರವು. ನೀವು ಸಮುದ್ರವನ್ನು ಕಡೆಯುವಾಗ ಅದರಿಂದ ಹುಟ್ಟುವ ಕಾಲಕೂಟವಿಷವನ್ನು ನೋಡಿ ಭಯಪಡುವ ಕಾರಣವಿಲ್ಲ. ಅಂತೆಯೇ ಸಮುದ್ರದಿಂದ ಹುಟ್ಟುವ ಇತರ ವಸ್ತುಗಳ ವಿಷಯದಲ್ಲಿಯೂ ಲೋಭವಾಗಲೀ, ಕಾಮವಾಗಲೀ, ದೊರೆಯಲಿಲ್ಲವೆಂಬ ಕಾರಣದಿಂದ ಕೋಪವಾಗಲೀ ಉಂಟಾಗಬಾರದು."

ಪರೀಕ್ಷಿತನೇ! ಹೀಗೆ ಶ್ರೀಭಗವಂತನಾದ ಪುರುಷೋತ್ತಮನು ದೇವತೆಗಳಿಗೆ ಆದೇಶಿಸಿ ಅವರು ನೋಡುತ್ತಿರುವಂತೆಯೇ ತನ್ನ ಇಷ್ಟಾನುಸಾರವಾಗಿ ಮಾಯವಾದನು. ಶ್ರೀಭಗವಂತನು ಅದೃಶ್ಯನಾದನಂತರ ಬ್ರಹ್ಮ ಮತ್ತು ಶಂಕರರು ಶ್ರೀಭಗವಂತನಿಗೆ ಪುನಃ ನಮಸ್ಕರಿಸಿ ತಮ್ಮ ತಮ್ಮ ಲೋಕಗಳಿಗೆ ಹೊರಟುಹೋದರು. ಬಳಿಕ ಇಂದ್ರಪ್ರಮುಖರಾದ ದೇವತೆಗಳು ಶ್ರೀಹರಿಯ ನಿರ್ದೇಶನದಂತೆ ಅಸುರರೊಡನೆ ಶಾಂತಿ-ಸಂಧಾನಮಾಡಿಕೊಳ್ಳಲು ಬಲಿ ಚಕ್ರವರ್ತಿಯ ಬಳಿಗೆ ಹೋದರು. ದೇವತೆಗಳು ಶಸ್ತ್ರಾಸ್ತ್ರಗಳಿಂದ ರಹಿತರಾಗಿ ತಮ್ಮ ಬಳಿಗೆ ಬಂದುದನ್ನು ನೋಡಿ ರಾಕ್ಷಸನಾಯಕರ ಮನಸ್ಸಿನಲ್ಲಿ ತಳಮಳವೇ ಉಂಟಾಯಿತು. ಅವರು ದೇವತೆಗಳನ್ನು ಬಂಧಿಸಲು ಬಯಸಿದರು. ಆದರೆ ದೈತ್ಯರಾಜನಾದ ಸ್ತೋತ್ರಾರ್ಹನಾದ ಬಲಿಸಾರ್ವಭೌಮನು ಸಂಧಿ-

ವಿಗ್ರಹಗಳ ಕಾಲವನ್ನು ತಿಳಿದಿದ್ದನಾದ ಕಾರಣ ದೇವತೆಗಳನ್ನು ತನ್ನ ಸೇನಾನಾಯಕರು ಬಂಧಿಸದಂತೆ ತಡೆಹಿಡಿದನು. ಮೂರು ಲೋಕಗಳನ್ನೂ ಜಯಿಸಿದ್ದ, ಮಹೈಶ್ವರ್ಯಸಂಪನ್ನನಾಗಿದ್ದ ಮತ್ತು ಅಸುರಸೇನಾನಾಯಕರಿಂದ ರಕ್ಷಿಸಲ್ಪಡುತ್ತಿದ್ದ ರಾಜಸಿಂಹಾಸನಾರೂಢನಾಗಿದ್ದ ಬಲಿಚಕ್ರವರ್ತಿಯನ್ನು ಇಂದ್ರನೇ ಮುಂತಾದ ದೇವತೆಗಳು ಸಂಧಿಸಿದರು.

ಔಪಚಾರಿಕವಾದ ಮಾತುಗಳಾದನಂತರ ಮಹಾಮತಿಯಾದ ಇಂದ್ರನು ಬಲಿಚಕ್ರವರ್ತಿಯನ್ನು ಮಧು-ಮಧುರವಾದ ಮಾತುಗಳಿಂದ ಸಂತೈಸುತ್ತಾ, ಪುರುಷೋತ್ತಮನು ಹೇಳಿ ಕಳುಹಿಸಿದಂತೆ ಎಲ್ಲ ವಿಷಯ ಗಳನ್ನೂ ಬಲಿಚಕ್ರವರ್ತಿಗೆ ಹೇಳಿದನು. ಇಂದ್ರನು ಹೇಳಿದ ಮಾತು ಬಲಿಚಕ್ರವರ್ತಿಗೂ ಮತ್ತು ಅವನ ಸಭೆಯಲ್ಲಿದ್ದ ಶಂಬರ, ಅರಿಷ್ಟನೇಮಿ, ತ್ರಿಪುರಾಸುರ–ಇವರೇ ಮೊದಲಾದ ದೈತ್ಯನಾಯಕರಿಗೂ ಸಮ್ಮತವಾಯಿತು. ಬಳಿಕ ದೇವಾಸುರರು ಪರಸ್ಪರವಾಗಿ ಶಾಂತಿಸಂಧಾನವನ್ನು ಮಾಡಿಕೊಂಡು ಗೆಳೆಯರಾಗಿಬಿಟ್ಟರು. ಎರಡು ಪಕ್ಷಗಳವರೂ ಸೇರಿ ಅಮೃತದ ಪ್ರಾಪ್ತಿಗಾಗಿ ಅಗಾಧವಾದ ಪ್ರಯತ್ನವನ್ನು ಮಾಡಿದರು. ಪರಿಘಾಯುಧಕ್ಕೆ ಸಮಾನವಾದ ತೋಳುಗಳನ್ನು ಹೊಂದಿದ್ದ, ಮಹಾಶಕ್ತಿವಂತರಾಗಿದ್ದ, ಬಲದಿಂದ ಕೊಬ್ಬಿ ಹೋಗಿದ್ದ ದೇವ-ರಾಕ್ಷಸರು ಮಂದರಪರ್ವತವನ್ನು ತಮ್ಮ ವೀರ್ಯ-ಪರಾಕ್ರಮಗಳಿಂದ ಬುಡಸಹಿತವಾಗಿ ಕಿತ್ತು ಅದನ್ನೆತ್ತಿಕೊಂಡು ನಾಲ್ಕು ದಿಕ್ಕುಗಳಿಗೂ ಪ್ರತಿಧ್ವನಿಸುವಂತೆ ಗರ್ಜನೆಮಾಡುತ್ತಾ ಕ್ಷೀರಸಮುದ್ರದ ಕಡೆಗೆ ಹೊರಟರು. ಶಕ್ರ-ವೈರೋಚನರೇ ಮೊದಲಾದ ಸುರಾಸುರಪ್ರಮುಖರು ಬಹಳ ದೂರದವರೆಗೆ ಮಹಾಭಾರವಾಗಿದ್ದ ಆ ಮಂದರಪರ್ವತವನ್ನು ಹೊತ್ತುತಂದುದರಿಂದ ಬಳಲಿ-ಬೆಂಡಾಗಿ, ಹೊತ್ತುಕೊಂಡು ಮುಂದೆ ಸಾಗಲು ಕೈಲಾಗದೆ ವಿವಶರಾಗಿ ಆ ಪರ್ವತವನ್ನು ಕೆಳಕ್ಕೆ ಹಾಕಿಬಿಟ್ಟರು. ಮಹಾಭಾರದಿಂದ ಕೂಡಿದ್ದ, ಸ್ವರ್ಣಮಯವಾಗಿದ್ದ ಆ ಮಂದರಪರ್ವತವು ಕೆಳಕ್ಕೆ ಬೀಳುತ್ತಾ ಅದರ ತಳಭಾಗದಲ್ಲಿದ್ದ ಹಲವಾರು ದೇವ-ದಾನವರನ್ನು ಪುಡಿ-ಪುಡಿಮಾಡಿಬಿಟ್ಟಿತು. ಹೀಗೆ ದೇವ-ದಾನವರು ಪರ್ವತದ ಕೆಳಕ್ಕೆ ಸಿಕ್ಕಿ ಮುರಿದುಹೋದ ತೋಳು-ತೊಡೆ-ಕುತ್ತಿಗೆಯುಳ್ಳವರಾಗಿರುವುದನ್ನೂ ಈ ಕಾರಣದಿಂದಲೇ ಅವರು ಎದೆಗುಂದಿರುವರೆಂಬುದನ್ನೂ ತಿಳಿದು ಗರುಡಧ್ವಜ

ನಾದ ಶ್ರೀಹರಿಯು ಅಲ್ಲಿ ಕಾಣಿಸಿಕೊಂಡನು. ಪರ್ವತದ ಪತನದಿಂದ ಅಜ್ಜಿ-ಬಜ್ಜಿಯಾಗಿ ಹೋಗಿದ್ದ ದೇವ-ದಾನವರನ್ನು ನೋಡಿ ಅಮೃತಮಯ ವಾದ ಸವಿನೋಟದಿಂದಲೇ ಗಾಯಗಳು ವಾಸಿಯಾಗಿ ಅವರು ಸಂಕಟರಹಿತ ರಾಗುವಂತೆ ಮಾಡಿ ಬದುಕಿಸಿದನು. ಬಳಿಕ ಮಹಾನುಭಾವನಾದ ಶ್ರೀಹರಿಯು ಲೀಲಾಜಾಲವಾಗಿ ಒಂದೇ ಕೈಯಿಂದಲೇ ಆ ಮಹಾಮಂದರ ಪರ್ವತವನ್ನು ಮೇಲೆತ್ತಿ ಗರುಡನ ಮೇಲಿಟ್ಟುಕೊಂಡು ಅನಂತರ ತಾನೂ ಗರುಡಾರೂಢನಾಗಿ ದೇವಾಸುರರಿಂದ ಪರಿವೃತನಾಗಿ ಕ್ಷೀರಸಮುದ್ರಕ್ಕೆ ತೆರಳಿದನು. ಪಕ್ಷಿರಾಜನಾದ ಗರುಡನು ಶ್ರೀಹರಿಯಿಂದ ತನ್ನ ಹೆಗಲಮೇಲೆ ಇಡಲ್ಪಟ್ಟಿದ್ದ ಮಂದರಪರ್ವತವನ್ನು ಕೆಳಗಿಳಿಸಿ ಸಮುದ್ರಮಧ್ಯದಲ್ಲಿ ಆ ಪರ್ವತವನ್ನಿರಿಸಿ ಶ್ರೀಹರಿಯಿಂದ ಬೀಳ್ಕೊಡುಗೆಯನ್ನು ಪಡೆದು ಹೊರಟುಹೋದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಅಷ್ಟಮಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೭ನೆಯ ಅಧ್ಯಾಯ

ಸಮುದ್ರಮಂಥನದ ಪ್ರಾರಂಭ : ಪರಶಿವನು ವಿಷವನ್ನು ಪಾನಮಾಡಿದುದು

ಶ್ರೀಶುಕರು ಹೇಳುತ್ತಾರೆ :

ತೇ ನಾಗರಾಜಮಾಮನ್ತ್ರ್ಯ ಫಲಭಾಗೇನ ವಾಸುಕಿಮ್ ।
ಪರಿವೀಯ ಗಿರೌ ತಸ್ಮಿನ್ನೇತ್ರಮಬ್ಧಿಂ ಮುದಾನ್ವಿತಾಃ ॥೧॥

ಪರೀಕ್ಷಿತ! ಅನಂತರ ದೇವ-ದಾನವರು ವಾಸುಕಿಯ ಬಳಿಗೆ ಹೋಗಿ 'ನೀನು ಮಂದರಪರ್ವತವೆಂಬ ಕಡೆಗೋಲಿಗೆ ಹಗ್ಗವಾಗಬೇಕು. ಅಮೃತವನ್ನು ಕಡೆದನಂತರ ದೊರಕುವ ಅಮೃತದಲ್ಲಿ ನಿನಗೆ ಭಾಗವನ್ನು ಕೊಡು ವೆವು'—ಎಂದು ಹೇಳಿ ಅವನನ್ನು ಹಗ್ಗವಾಗಲು ಒಪ್ಪಿಸಿ, ಸಂತೋಷಭರಿತರಾಗಿ ವಾಸುಕಿಯನ್ನು ಕರೆತಂದು ಮಂದರಪರ್ವತಕ್ಕೆ ಸುತ್ತಿದರು.

ಕುರುಶ್ರೇಷ್ಠನೇ! ಅಮೃತವನ್ನು ಪಡೆಯುವ ಸಲುವಾಗಿ ದೇವ-ದಾನವರು ಒಟ್ಟಾಗಿ ಸೇರಿ ಪ್ರಯತ್ನಪೂರ್ವಕವಾಗಿ ಸಮುದ್ರವನ್ನು ಕಡೆ

ಯಲು ಪ್ರಾರಂಭಿಸಿದರು. ಮೊದಲು ಶ್ರೀಹರಿಯು ವಾಸುಕಿಯ ತಲೆಯ ಕಡೆ ಹಿಡಿದುಕೊಂಡನು. ದೇವತೆಗಳು ಅವನನ್ನನುಸರಿಸಿನಿಂತು ವಾಸುಕಿ ಯನ್ನು ತಲೆಯ ಕಡೆಯಲ್ಲೇ ಹಿಡಿದುಕೊಂಡರು. ಆದರೆ ಮಹಾವಿಷ್ಣುವು ಮಾಡಿದ ಈ ವ್ಯವಸ್ಥೆಯನ್ನು ದಾನವರು ಒಪ್ಪಿಕೊಳ್ಳಲಿಲ್ಲ. 'ಹಾವಿನ ಬಾಲವು ಅಮಂಗಳಕರ. ಆದುದರಿಂದ ನಾವು ವಾಸುಕಿಯ ಬಾಲವನ್ನು ಹಿಡಿಯು ವುದಿಲ್ಲ. ನಾವು ವೇದ-ಶಾಸ್ತ್ರಗಳನ್ನು ವಿಧಿಪೂರ್ವಕವಾಗಿ ಅಧ್ಯಯನಮಾಡಿ ದ್ದೇವೆ. ಶ್ರೇಷ್ಠವಾದ ವಂಶದಲ್ಲಿ ಜನ್ಮತಾಳಿದ್ದೇವೆ. ಹಲವಾರು ಸಾಹಸ ಕಾರ್ಯಗಳನ್ನು ಮಾಡಿದ್ದೇವೆ. ಪ್ರಪಂಚವನ್ನೇ ಅನೇಕ ಬಾರಿ ಜಯಿಸಿದ್ದೇವೆ. ಆದುದರಿಂದ ಬಾಲ ಹಿಡಿಯುವುದು ನಮ್ಮ ಗೌರವಕ್ಕೆ ತಕ್ಕುದಾಗಿಲ್ಲ'–ಎಂದು ಹೇಳಿ ದೈತ್ಯನಾಯಕರು ಸುಮ್ಮನೇ ನಿಂತುಬಿಟ್ಟರು. ಇದನ್ನು ನೋಡಿ ಪುರುಷೋತ್ತಮನಾದ ಶ್ರೀಹರಿಯು ಮಂದಹಾಸವನ್ನು ಬೀರುತ್ತಾ ವಾಸುಕಿಯ ಹೆಡೆಯನ್ನು ಬಿಟ್ಟು ದೇವತೆಗಳೊಡನೆ ಬಾಲವನ್ನೇ ಹಿಡಿದು ಕೊಂಡನು. ಹೀಗೆ ದೇವ-ದಾನವರು ತಮ್ಮ-ತಮ್ಮ ಸ್ಥಾನಗಳನ್ನು ನಿಶ್ಚಯಿಸಿ ಕೊಂಡನಂತರ ಅಮೃತದ ಪ್ರಾಪ್ತಿಗಾಗಿ ಪರಮಪ್ರಯತ್ನದಿಂದ ಕ್ಷೀರಸಾಗರವನ್ನು ಕಡೆಯಲು ತೊಡಗಿದರು. (ಶ್ಲೋಕ 2-5)

ಪರೀಕ್ಷಿತ! ಮಹಾಬಲಿಷ್ಠರಾದ ದೇವ-ದಾನವರು ಕಡೆಗೋಲನ್ನು ವಾಸುಕಿಯ ಮೂಲಕವಾಗಿ ಭದ್ರವಾಗಿ ಹಿಡಿದುಕೊಂಡಿದ್ದರೂ ಪರ್ವತವು ಮಹಾಭಾರವಾಗಿದ್ದುದರಿಂದಲೂ ಆ ಪರ್ವತಕ್ಕೆ ಕೆಳಗಡೆಯಲ್ಲಿ ಯಾವುದೇ ಆಧಾರವೂ ಇಲ್ಲದೇ ಇದ್ದುದರಿಂದಲೂ ಅದು ಕ್ಷೀರಸಾಗರದಲ್ಲಿ ಮುಳುಗಿ ಹೋಯಿತು. ಹೀಗೆ ಬಲಿಷ್ಠವಾದ ದೈವದಿಂದ ತಮ್ಮ ಪುರುಷಪ್ರಯತ್ನ ವೆಲ್ಲವೂ ನಷ್ಟವಾಗಿ ಹೋಗಲು ಖೇದಗೊಂಡ ದೇವ-ರಾಕ್ಷಸರ ಮುಖವು ಕಳೆಗುಂದಿತು.

ಅದ್ಭುತಪರಾಕ್ರಮನಾದ, ಸತ್ಯಸಂಕಲ್ಪನಾದ ಶ್ರೀಭಗವಂತನು ವಿಘ್ನೇಶ್ವರನ ಕಾರ್ಯರೂಪವಾದ ಈ ವಿಘ್ನವನ್ನು ನೋಡಿ ಪರಮಾಶ್ಚರ್ಯ ಕರವಾದ ಮತ್ತು ಬಲುದೊಡ್ಡದಾದ ಆಮೆಯ ರೂಪವನ್ನು ತಾಳಿ ನೀರಿನಲ್ಲಿ ಮುಳುಗಿ ಮಂದರಪರ್ವತವನ್ನು ಮೇಲಕ್ಕೆತ್ತಿದನು. ದೇವ-ದಾನವರು ಮುಳುಗಿಹೋಗಿದ್ದ ಕಡೆಗೋಲು ಮೇಲಕ್ಕೆ ಬಂದುದನ್ನು ನೋಡಿ ಪುನಃ

ಉತ್ಸಾಹಭರಿತರಾಗಿ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದರು. ಆ ಸಮಯದಲ್ಲಿ ಆ ಕೂರ್ಮಮೂರ್ತಿಯು ಸಮುದ್ರಮಧ್ಯದಲ್ಲಿರುವ ವಿಶಾಲವಾದ ದ್ವೀಪದಂತಿದ್ದ ತನ್ನ ಲಕ್ಷಯೋಜನವಿಸ್ತೀರ್ಣದ ಬೆನ್ನಿನ ಮೇಲೆ ಆ ಕಡೆಗೋಲಿನ ರೂಪವಾದ ಮಂದರಪರ್ವತವನ್ನು ಧರಿಸಿದ್ದನು. ಮಹಾಪರಾಕ್ರಮಿಗಳಾದ ದೇವ-ದಾನವರು ತಮ್ಮ ಭುಜಬಲದಿಂದ ವಾಸುಕಿ ಯೆಂಬ ಹಗ್ಗದ ಮೂಲಕವಾಗಿ ಮಂದರಪರ್ವತವನ್ನು ರಭಸದಿಂದ ಕಡೆ ಯುತ್ತಿದ್ದರು. ಆ ಸಮಯದಲ್ಲಿ ಮಂದರಪರ್ವತವು ಆಧಾರಭೂತನಾಗಿದ್ದ ಕೂರ್ಮಮೂರ್ತಿಯ ಮೇಲೆ ತಿರುಗುತ್ತಿದ್ದಿತು. ಆ ಪರ್ವತದ ಪರಿಭ್ರಮಣವು ಅಪ್ರಮೇಯನಾದ ಕೂರ್ಮಮೂರ್ತಿಗೆ ಶರೀರದಲ್ಲಾಗುವ ಕಡಿತವನ್ನು ತುರಿಸಿಕೊಂಡಂತೆ ಭಾಸವಾಗುತ್ತಿದ್ದಿತು. ಆ ಮಹಾನುಭಾವನು ಅಷ್ಟು ಲೀಲಾಜಾಲವಾಗಿ ಅದನ್ನು ಪರಿಗಣಿಸಿದನು. (ಶ್ಲೋಕ 6-10)

ಕಾರ್ಯಸಿದ್ಧಿಯಲ್ಲಿ ಸತ್ಯಸಂಕಲ್ಪನಾಗಿದ್ದ ಮಹಾವಿಷ್ಣುವು ಕೆಲವು ವೇಳೆ ಅಸುರರ ರೂಪವನ್ನು ತಳೆದು ಅವರ ಸಮೂಹದಲ್ಲಿ ಸೇರಿಕೊಂಡು ಪ್ರೋತ್ಸಾಹದ ಮಾತುಗಳಿಂದ ಅವರ ಬಲ-ವೀರ್ಯಗಳನ್ನು ಹೆಚ್ಚಿಸುತ್ತಿದ್ದನು. ಅಂತೆಯೇ ದೇವಸ್ವರೂಪನಾಗಿ ದೇವತೆಗಳ ಮಧ್ಯದಲ್ಲಿ ಸೇರಿಕೊಂಡು ಪ್ರೋತ್ಸಾಹದ ಮಾತುಗಳಿಂದ ಅವರ ಬಲ-ವೀರ್ಯ-ಪರಾಕ್ರಮಗಳನ್ನು ಹೆಚ್ಚಿಸುತ್ತಿದ್ದನು. ಅಂತೆಯೇ ನಿದ್ರಾರೂಪದಿಂದ ವಾಸುಕಿಯನ್ನೂ ಹೊಕ್ಕು ಅದಕ್ಕೆ ಆಗುತ್ತಿದ್ದ ಶ್ರಮವನ್ನು ಕಡಿಮೆಮಾಡುತ್ತಿದ್ದನು. ಸಹಸ್ರ ಬಾಹುವಾದ ಭಗವಂತನು ಪರ್ವತದ ಮೇಲಿರುವ ಮತ್ತೊಂದು ಪರ್ವತದಂತೆ ತನ್ನ ಒಂದು ಕೈಯಿಂದ ಮಂದರಪರ್ವತವನ್ನು ಹಿಡಿದುಕೊಂಡು ನಿಂತಿದ್ದನು. ಇದನ್ನು ನೋಡಿ ಆಕಾಶದಲ್ಲಿದ್ದ ಬ್ರಹ್ಮೇಂದ್ರರು ಮಹಾವಿಷ್ಣುವನ್ನು ಸ್ತೋತ್ರಮಾಡುತ್ತಾ ಅವನ ಮೇಲೆ ಹೂಮಳೆಗರೆದರು.

ಹೀಗೆ ಭಗವಂತನು ಮಂದರಪರ್ವತದ ಮೇಲೆ, ಅದನ್ನು ಎತ್ತಿ ಹಿಡಿಯುವವನ ರೂಪದಲ್ಲಿಯೂ, ಪರ್ವತದ ಕೆಳಭಾಗದಲ್ಲಿ ಅದರ ಆಧಾರ ಭೂತನಾಗಿ ಕೂರ್ಮಮೂರ್ತಿಯ ರೂಪದಲ್ಲಿಯೂ, ದೇವ-ದಾನವರ ಶರೀರಗಳಲ್ಲಿ ಶಕ್ತಿಯ ರೂಪದಲ್ಲಿಯೂ, ಪರ್ವತದಲ್ಲಿ ದೃಢತೆಯ ರೂಪ ದಲ್ಲಿಯೂ, ಕಡೆಯುವ ಹಗ್ಗವಾಗಿದ್ದ ವಾಸುಕಿಯಲ್ಲಿ ನಿದ್ರೆಯ ರೂಪ

ದಲ್ಲಿಯೂ, ಯಾರಿಗೂ ಕಷ್ಟವಾಗದಿರಲೆಂದು ವ್ಯಾಪ್ತನಾಗಿದ್ದನು. ಎಲ್ಲರಲ್ಲಿಯೂ ನಾನಾರೂಪದಲ್ಲಿ ಪ್ರವೇಶಿಸಿ ಎಲ್ಲರನ್ನೂ ಶಕ್ತಿಸಂಪನ್ನರನ್ನಾಗಿ ಮಾಡಿದ್ದನು. ಆ ಸಮಯದಲ್ಲಿ ದೇವ-ದಾನವರು ಮದೋನ್ಮತ್ತರಾಗಿ ಮಂದರಪರ್ವತದ ಮೂಲಕವಾಗಿ ಅತ್ಯಂತವೇಗದಿಂದ ಸಮುದ್ರವನ್ನು ಕಡೆಯತೊಡಗಿದರು. ಇದರ ಪರಿಣಾಮವಾಗಿ ಸಮುದ್ರವೂ ಸಮುದ್ರದಲ್ಲಿ ವಾಸಿಸುತ್ತಿದ್ದ ಮೀನು-ಮೊಸಳೆಯೇ ಮೊದಲಾದ ಜಲಚರಗಳೂ ಕಳವಳಗೊಂಡುವು. ಆ ಸಮಯದಲ್ಲಿ ನಾಗರಾಜನಾದ ವಾಸುಕಿಯ ಕಠೋರವಾದ ಸಾವಿರಾರು ಕಣ್ಣುಗಳಿಂದಲೂ, ಮುಖಗಳಿಂದಲೂ, ನಿಟ್ಟುಸಿರಿನಿಂದಲೂ ಬೆಂಕಿಯ ಜ್ವಾಲೆಗಳು ಹೊರಹೊಮ್ಮತೊಡಗಿದುವು. ಆ ಮಹಾಜ್ವಾಲೆಯಿಂದ ಮುಖದ ಭಾಗವನ್ನೇ ಹಿಡಿದು ನಿಂತಿದ್ದ ಪೌಲೋಮ-ಕಾಲೇಯ-ಬಲಿ-ಇಲ್ವಲ ಇವರೇ ಮುಂತಾದ ದಾನವರೆಲ್ಲರೂ ನಿಸ್ತೇಜರಾಗಿಬಿಟ್ಟರು. ಕಾಡುಗಿಚ್ಚಿನಿಂದ ಸುಡಲ್ಪಟ್ಟ ಸಾಲವೃಕ್ಷಗಳಂತೆ ವಾಸುಕಿಯ ಮುಖಗಳಿಂದ ಹೊರಹೊಮ್ಮುತ್ತಿದ್ದ ಅಗ್ನಿಯ ಜ್ವಾಲೆಗಳಿಂದ ರಾಕ್ಷಸರೆಲ್ಲರೂ ಬೆಂದುಹೋದರು. ವಾಸುಕಿಯ ಸಾವಿರ ಮುಖಗಳಿಂದ ಹೊರಟ ಜ್ವಾಲೆಯ ತಾಪವನ್ನು ಬಾಲವನ್ನು ಹಿಡಿದುಕೊಂಡಿದ್ದ ದೇವತೆಗಳಿಗೂ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆ ವಿಷಜ್ವಾಲೆಯ ಬೆಂಕಿಯಿಂದ ತಲ್ಲಣಿಸಿಹೋದರು. ನಿಸ್ತೇಜರಾದರು. ಜ್ವಾಲೆಗಳ ಹೊಗೆಯಿಂದಾಗಿ ದೇವತೆಗಳು ಧರಿಸಿದ್ದ ವಸ್ತ್ರ-ಮಾಲೆ-ಕವಚಗಳು ಮತ್ತು ಮುಖಗಳು ಧೂಮ್ರವರ್ಣಕ್ಕೆ ತಿರುಗಿದುವು. ಆದರೆ ಭಗವಂತನ ದಯೆಯಿಂದಾಗಿ ಭಗವಂತನ ಅಧೀನದಲ್ಲಿದ್ದ ಮೇಘಗಳು ದೇವ-ದಾನವರ ಮೇಲೆ ಮಳೆಗರೆಯತೊಡಗಿದುವು. ಸಮುದ್ರದ ತೆರೆಗಳ ಮೂಲಕವಾಗಿ ತಂಪಾದ ವಾಯುವು ಬೀಸತೊಡಗಿತು. ಹೀಗೆ ದೇವಾಸುರರು ಸಮುದ್ರಮಥನವನ್ನು ಮುಂದುವರಿಸಿದರು. ಎಷ್ಟು ರಭಸದಿಂದ ಕಡೆದರೂ ಅಮೃತವು ಬಾರದಿರಲು ಭಗವಂತನಾದ ಅಜಿತನೇ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದನು. ಆ ಸಮಯದಲ್ಲಿ ಮೇಘಶ್ಯಾಮಲನಾದ ಭಗವಂತನು ಚಿನ್ನದ ಬಣ್ಣದ ಪೀತಾಂಬರವನ್ನುಟ್ಟಿದ್ದನು. ಆತನಿಗೆ ಕಿವಿಗಳಲ್ಲಿ ಮಿಂಚಿನಂತೆ ಫಳಫಳಿಸುವ ಕುಂಡಲಗಳಿದ್ದುವು. ತಲೆಯಲ್ಲಿ ಹೊಳೆ-ಹೊಳೆಯುತ್ತಿದ್ದ ಗುಂಗುರುಕೂದಲುಗಳಿದ್ದುವು. ಕುತ್ತಿಗೆಯು ವನಮಾಲೆಯಿಂದ

ಸಮಲಂಕೃತವಾಗಿದ್ದಿತು. ಕಮನೀಯವಾದ ಕಣ್ಣುಗಳು ಕೆಂಬಣ್ಣದಿಂದ ಕಂಗೊಳಿಸುತ್ತಿದ್ದುವು. ಸಮಸ್ತ ಜಗತ್ತಿಗೂ ಅಭಯದಾನಮಾಡುವ, ವಿಶ್ವ ವಿಜಯಿಯಾದ ತನ್ನ ಭುಜದಂಡಗಳಿಂದ ಹಗ್ಗದ ರೂಪವಾಗಿದ್ದ ವಾಸುಕಿಯನ್ನು ಹಿಡಿದು, ಕೂರ್ಮಮೂರ್ತಿಯ ರೂಪದಲ್ಲಿ ಕಡೆಗೋಲಾದ ಮಂದರಪರ್ವತವನ್ನು ಬೆನ್ನಿನಲ್ಲಿ ಧರಿಸಿ, ಅದರ ಮೂಲಕವಾಗಿಯೇ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದನು. ಆ ಸಮಯದಲ್ಲಿ ಅಜಿತಮೂರ್ತಿಯು ಮತ್ತೊಂದು ಶ್ರೇಷ್ಠವಾದ ಪರ್ವತದಂತೆಯೇ ರಾರಾಜಿಸಿದನು. ಅಜಿತಭಗವಂತನೇ ಹೀಗೆ ಸಮುದ್ರವನ್ನು ರಭಸದಿಂದ ಕಡೆಯುತ್ತಿರಲಾಗಿ ಸ್ವಲ್ಪ ಹೊತ್ತಿನಲ್ಲಿಯೇ ಪ್ರಪ್ರಥಮವಾಗಿ ಅತ್ಯಂತಭಯಂಕರವಾದ ಹಾಲಾಹಲವೆಂಬ ವಿಷವು ಪ್ರಾದುರ್ಭವಿಸಿತು. ಆ ವಿಷದ ಜ್ವಾಲೆಯಿಂದ ಸಮುದ್ರದಲ್ಲಿದ್ದ ಮೀನು-ಆಮೆ-ಮೊಸಳೆ-ನೀರಾನೆ-ತಿಮಿ-ತಿಮಿಂಗಿಲ ಇವೇ ಮುಂತಾದ ಸಕಲ ಜಲಚರಪ್ರಾಣಿಗಳೂ ತಳಮಳಗೊಂಡುವು. ಮಹಾಘೋರವಾದ ಆ ಹಾಲಾಹಲಮಹಾವಿಷವು ದಿಕ್ಕುಗಳಲ್ಲಿಯೂ ಉಪದಿಕ್ಕುಗಳಲ್ಲಿಯೂ ಭೂಮ್ಯಂತರಿಕ್ಷಗಳಲ್ಲಿಯೂ ಸರ್ವತ್ರ ಬಹುವೇಗದಿಂದ ವ್ಯಾಪಿಸತೊಡಗಿತು. ಸಹಿಸಲು ಅಶಕ್ಯವಾದ, ಅಪ್ರತಿಹತವಾದ ಆ ವಿಷದ ಜ್ವಾಲೆಯಿಂದ ಭಯಭೀತರಾದ ಪ್ರಜೆಗಳೂ ಮತ್ತು ಪ್ರಜಾಪತಿಗಳೂ ಬೇರೆ ಯಾರೂ ರಕ್ಷಕರಿಲ್ಲದಿರಲು ಭಗವಂತನಾದ ಶ್ರೀಸದಾಶಿವನನ್ನೇ ರಕ್ಷಕನೆಂದು ತಿಳಿದು ಅವನ ಬಳಿಗೆ ಓಡಿಹೋದರು. ಪಾರ್ವತೀದೇವಿಯೊಡನೆ ಕೈಲಾಸಪರ್ವತದಲ್ಲಿ ವಿರಾಜಮಾನನಾಗಿದ್ದ, ಮೂರು ಲೋಕಗಳ ಅಭ್ಯುದಯಕ್ಕಾಗಿಯೂ ಮತ್ತು ಮೋಕ್ಷಮಾರ್ಗೋಪದೇಶದಿಂದ ಋಷಿಗಳನ್ನು ಉದ್ಧರಿಸುವುದಕ್ಕಾಗಿಯೂ ತನಗೆ ಇಷ್ಟವಾದ ತಪಸ್ಸನ್ನು ಮಾಡುತ್ತಿದ್ದ, ದೇವಶ್ರೇಷ್ಠನಾದ ಪರಶಿವನನ್ನು ಕಂಡು ಪ್ರಜಾಪತಿಪ್ರಮುಖರಾದ ದೇವತೆಗಳು ಸಾಷ್ಟಾಂಗಪ್ರಣಾಮಮಾಡಿ ಸ್ತುತಿಸಿದರು : (ಶ್ಲೋಕ 11-20)

ದೇವದೇವ ಮಹಾದೇವ ಭೂತಾತ್ಮನ್ಭೂತಭಾವನ ।
ತ್ರಾಹಿ ನಃ ಶರಣಾಪನ್ನಾಂಸ್ತ್ರೈಲೋಕ್ಯದಹನಾದ್ವಿಷಾತ್ ॥೨೧॥

"ದೇವದೇವನೇ! ಮಹಾದೇವನೇ! ಸಕಲಪ್ರಾಣಿಗಳಲ್ಲಿಯೂ ಆತ್ಮರೂಪದಲ್ಲಿರುವವನೇ! ಪ್ರಾಣಿಗಳನ್ನು ಸೃಷ್ಟಿಸುವವನೇ! ಮೂರು ಲೋಕ

ಗಳನ್ನೂ ಸುಡಲು ಹೊರಟಿರುವ ಈ ಮಹಾವಿಷದಿಂದ ಶರಣಾಗತರಾಗಿ ರುವ ನಮ್ಮನ್ನು ರಕ್ಷಿಸು.

ತ್ವಮೇಕಃ ಸರ್ವಜಗತ ಈಶ್ವರೋ ಬನ್ಧಮೋಕ್ಷಯೋಃ ।
ತಂ ತ್ವಾಮರ್ಚನ್ತಿ ಕುಶಲಾಃ ಪ್ರಪನ್ನಾರ್ತಿಹರಂ ಗುರುಮ್ ॥೨೨॥

ಪರಮೇಶ್ವರನೇ! ಸಕಲಲೋಕಗಳಲ್ಲಿರುವ ಸಮಸ್ತಪ್ರಾಣಿಗಳ ಬಂಧ ಮತ್ತು ಮೋಕ್ಷಗಳಿಗೆ ನೀನೊಬ್ಬನೇ ಒಡೆಯನು. ಆದುದರಿಂದಲೇ ಕುಶಲಮತಿಗಳು ಶರಣಾಗತರ ಕಷ್ಟವನ್ನು ಪರಿಹರಿಸುವ ಲೋಕಗುರುವಾದ ನಿನ್ನನ್ನೇ ಆರಾಧಿಸುತ್ತಾರೆ.

ಗುಣಮಯ್ಯಾ ಸ್ವಶಕ್ತ್ಯಾಸ್ಯ ಸರ್ಗಸ್ಥಿತ್ಯಪ್ಯಯಾನ್ವಿಭೋ ।
ಧತ್ಸೇ ಯದಾ ಸ್ವದೃಗ್ಭೂಮನ್ಬ್ರಹ್ಮವಿಷ್ಣುಶಿವಾಭಿಧಾಮ್ ॥೨೩॥

ಸರ್ವಾತ್ಮನೇ! ಸ್ವಾಮಿಯೇ! ಸ್ವಯಂಪ್ರಕಾಶನಾದ ನೀನು ಈ ಜಗತ್ತಿನ ಸೃಷ್ಟಿ-ಸ್ಥಿತಿ-ಪ್ರಳಯಗಳನ್ನು ಯಾವಾಗ ಮಾಡಲು ಇಚ್ಛಿಸುವೆಯೋ ಆಗ ಗುಣಗಳ ರೂಪವಾದ ನಿನ್ನ ಶಕ್ತಿಯಿಂದ ಬ್ರಹ್ಮ-ವಿಷ್ಣು ಮತ್ತು ಶಿವ–ಎಂಬ ಹೆಸರುಗಳನ್ನು ಪಡೆದು ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವೆ.

ತ್ವಂ ಬ್ರಹ್ಮ ಪರಮಂ ಗುಹ್ಯಂ ಸದಸದ್ಭಾವಭಾವನಃ ।
ನಾನಾಶಕ್ತಿಭಿರಾಭಾತಸ್ತ್ವಮಾತ್ಮಾ ಜಗದೀಶ್ವರಃ ॥೨೪॥

ದೇವದೇವನೇ! ನೀನು ಅತಿಗುಹ್ಯವಾದ ಬ್ರಹ್ಮತತ್ತ್ವವೇ ಆಗಿರುವೆ. ಕಾರ್ಯ-ಕಾರಣರೂಪದಿಂದ ದೇವತೆಗಳನ್ನೂ, ಮನುಷ್ಯರನ್ನೂ, ಪಶು-ಪಕ್ಷಿ ಗಳನ್ನೂ ಸೃಷ್ಟಿಸಿ ಪೋಷಿಸುವವನೂ ನೀನೇ ಆಗಿರುವೆ. ಅನೇಕಶಕ್ತಿಗಳ ಮೂಲಕವಾಗಿ ನೀನು ಜಗತ್ತಿನ ರೂಪದಲ್ಲಿಯೂ ಕಾಣಿಸಿಕೊಳ್ಳುವೆ. ಸಕಲ ಪ್ರಾಣಿಗಳ ಆತ್ಮಸ್ವರೂಪನೂ ಆಗಿರುವ ನೀನು ಜಗದೀಶ್ವರನೂ ಆಗಿರುವೆ.

ತ್ವಂ ಶಬ್ದಯೋನಿರ್ಜಗದಾದಿರಾತ್ಮಾ
ಪ್ರಾಣೇನ್ದ್ರಿಯದ್ರವ್ಯಗುಣಃ ಸ್ವಭಾವಃ ।
ಕಾಲಃ ಕ್ರತುಃ ಸತ್ಯಮೃತಂ ಚ ಧರ್ಮ-
ಸ್ತ್ವಯ್ಯಕ್ಷರಂ ಯತ್ತ್ರಿವೃದಾಮನನ್ತಿ ॥೨೫॥

ಮಹಾದೇವನೇ! ಸಮಸ್ತವೇದಗಳೂ ನಿನ್ನಿಂದಲೇ ಪ್ರಕಟವಾಗಿವೆ. ಆದುದರಿಂದ ನೀನು ಸಮಸ್ತಜ್ಞಾನಗಳಿಗೂ ಮೂಲಸ್ರೋತನಾಗಿ ಜ್ಞಾನ ಸ್ವರೂಪನೇ ಆಗಿರುವೆ. ಜಗತ್ತಿಗೆ ಆದಿಕಾರಣವಾದ ಮಹತ್ತತ್ತ್ವವೂ ನೀನೇ ಆಗಿರುವೆ. ಪ್ರಾಣ-ಇಂದ್ರಿಯ ಮತ್ತು ಪಂಚಮಹಾಭೂತಗಳಿಗೆ ಕಾರಣ ಗಳಾದ ರಾಜಸ-ಸಾತ್ತ್ವಿಕಾದಿಗುಣಗಳ ಸ್ವಭಾವವುಳ್ಳವನೂ ನೀನೇ ಆಗಿರುವೆ. ಪ್ರಾಣಿಗಳನ್ನು ವೃದ್ಧಿಗೊಳಿಸುವ ಮತ್ತು ವಿನಾಶಗೊಳಿಸುವ ಕಾಲನೂ ನೀನೇ ಆಗಿರುವೆ. ಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡುವ ಯಜ್ಞಸ್ವರೂಪನೂ ನೀನೇ. ಸತ್ಯ ಮತ್ತು ಋತಗಳೂ ನೀನೇ ಆಗಿರುವೆ. ಧರ್ಮವೆಂಬುದು ನಿನ್ನ ಸ್ವರೂಪವೇ ಆಗಿದೆ. ಅ-ಉ-ಮ ಈ ಮೂರು ಅಕ್ಷರಗಳಿಂದ ಯುಕ್ತವಾದ ಓಂಕಾರಸ್ವರೂಪನೂ ನೀನೇ ಆಗಿರುವೆ. ತ್ರಿಗುಣಾತ್ಮಕವಾದ ಪ್ರಕೃತಿಯೂ ನೀನೇ. ಹೀಗೆ ವೇದವಾದಿಗಳಾದ ಮಹಾತ್ಮರು ನಿನ್ನ ಗುಣಗಾನಮಾಡುತ್ತಾರೆ.

ಅಗ್ನಿರ್ಮುಖಂ ತೇಽಖಿಲದೇವತಾತ್ಮಾ
ಕ್ಷಿತಿಂ ವಿದುರ್ಲೋಕಭವಾಙ್ಘ್ರಿಪಙ್ಕಜಮ್ ।
ಕಾಲಂ ಗತಿಂ ತೇಽಖಿಲದೇವತಾತ್ಮನೋ
ದಿಶಶ್ಚ ಕರ್ಣೌ ರಸನಂ ಜಲೇಶಮ್ ॥೨೬॥

ಮೂರು ಲೋಕಗಳಿಗೂ ಅಭ್ಯುದಯವನ್ನುಂಟುಮಾಡುವ ಶಂಕರನೇ! ಸರ್ವದೇವಸ್ವರೂಪನಾದ ಅಗ್ನಿಯೇ ನಿನಗೆ ಮುಖವಾಗಿದ್ದಾನೆ. ಈ ಭೂಮಂಡಲವು ನಿನ್ನ ಚರಣಕಮಲವಾಗಿದೆ. ನೀನು ಸಕಲದೇವತಾ ಸ್ವರೂಪನಾಗಿರುವೆ. ಈ ಕಾಲವೇ ನಿನ್ನ ಗತಿಯಾಗಿದೆ. ದಿಕ್ಕುಗಳೇ ನಿನ್ನ ಕಿವಿಗಳಾಗಿವೆ. ಜಲೇಶನಾದ ವರುಣನೇ ನಿನ್ನ ರಸನೇಂದ್ರಿಯವಾಗಿದ್ದಾನೆ.

ನಾಭಿರ್ನಭಸ್ತೇ ಶ್ವಸನಂ ನಭಸ್ವಾ-
ನ್ಸೂರ್ಯಶ್ಚ ಚಕ್ಷೂಂಷಿ ಜಲಂ ಸ್ಮ ರೇತಃ ।
ಪರಾವರಾತ್ಮಾಶ್ರಯಣಂ ತವಾತ್ಮಾ
ಸೋಮೋ ಮನೋ ದ್ಯೌರ್ಭಗವಞ್ಛಿರಸ್ತೇ ॥೨೭॥

ಭಗವಂತ! ಆಕಾಶವೇ ನಿನ್ನ ನಾಭಿಕಮಲವಾಗಿದೆ. ವಾಯುವು ಉಸಿರಾಗಿದೆ. ಸೂರ್ಯನು ಕಣ್ಣುಗಳಾಗಿದ್ದಾನೆ. ಜಲವೇ ನಿನ್ನ ರೇತಸ್ಸಾಗಿದೆ.

ನಿನ್ನ ಅಹಂಕಾರವು ಉಚ್ಚನೀಚರೆನಿಸಿದ ಸಮಸ್ತಪ್ರಾಣಿಗಳಿಗೂ ಪರಮಾಶ್ರಯವಾಗಿದೆ. ಚಂದ್ರನೇ ನಿನ್ನ ಮನಸ್ಸಾಗಿದ್ದಾನೆ. ಸ್ವರ್ಗವೇ ನಿನ್ನ ತಲೆಯಾಗಿದೆ. ಅಂತಹ ಪರಾತ್ಪರನಾದ ನಿನಗೆ ನಮಸ್ಕಾರಮಾಡುತ್ತೇವೆ.

ಕುಕ್ಷಿಃ ಸಮುದ್ರಾ ಗಿರಯೋಽಸ್ಥಿಸಙ್ಘಾ
ರೋಮಾಣಿ ಸರ್ವೌಷಧಿವೀರುಧಸ್ತೇ ।
ಛನ್ದಾಂಸಿ ಸಾಕ್ಷಾತ್ತವ ಸಪ್ತ ಧಾತವ-
ಸ್ತ್ರಯೀಮಯಾತ್ಮನ್ಹೃದಯಂ ಸರ್ವಧರ್ಮಃ ॥೨೮॥

ವೇದಮಯವಾದ ಆತ್ಮವುಳ್ಳವನೇ! ಪರಮೇಶ್ವರ! ನಿನಗೆ ಸಮುದ್ರಗಳೇ ಹೊಟ್ಟೆಯಾಗಿವೆ. ಪರ್ವತಗಳೇ ಮೂಳೆಗಳಾಗಿವೆ. ಪೃಥ್ವಿಯಲ್ಲಿರುವ ಗಿಡ-ಬಳ್ಳಿಗಳೇ ನಿನ್ನ ಕೂದಲುಗಳ ರೂಪದಲ್ಲಿವೆ. ಗಾಯತ್ರಿಯೇ ಮೊದಲಾದ ಛಂದಸ್ಸುಗಳೇ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜಾ ಮತ್ತು ಶುಕ್ರಗಳೆಂಬ ಸಪ್ತಧಾತುಗಳಾಗಿವೆ. ಸಮಸ್ತವಾದ ಧರ್ಮಗಳೂ ನಿನ್ನ ಹೃದಯವೇ ಆಗಿದೆ.

ಮುಖಾನಿ ಪಞ್ಚೋಪನಿಷದಸ್ತವೇಶ
ಯೈಸ್ತ್ರಿಂಶದಷ್ಟೋತ್ತರಮನ್ತ್ರವರ್ಗಃ ।
ಯತ್ತಚ್ಛಿವಾಖ್ಯಂ ಪರಮಾರ್ಥತತ್ತ್ವಂ
ದೇವ ಸ್ವಯಂಜ್ಯೋತಿರವಸ್ಥಿತಿಸ್ತೇ ॥೨೯॥

ಸರ್ವೇಶನೇ! ಯಾವ ಉಪನಿಷನ್ಮಂತ್ರಗಳ ಸಮುಚ್ಚಯದಿಂದ ಮೂವತ್ತೆಂಟು ಭಿನ್ನ-ಭಿನ್ನವಾದ ಮಂತ್ರಗಳಾಗುವುವೋ ಅಂತಹ ಐದು ಉಪನಿಷನ್ಮಂತ್ರಗಳೇ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನಗಳೆಂಬ ನಿನ್ನ ಐದು ಮುಖಗಳಾಗಿವೆ. ಸ್ವಯಂಜ್ಯೋತಿಸ್ವರೂಪದ 'ಶಿವ'–ಎಂಬ ಹೆಸರಿನ ಯಾವ ಕೈವಲ್ಯಸ್ವರೂಪವಿರುವುದೋ ಅದೇ ನಿನ್ನ ನಿಜಸ್ವರೂಪವು.*

---

* ಈಶ್ವರನ ಸಂಬಂಧವಾದ ಪಂಚೋಪನಿಷತ್ತುಗಳು ಹೀಗಿವೆ :

೧) ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈ ನಮೋ ನಮಃ । ಭವೇ ಭವೇನಾತಿಭವೇ ಭವಸ್ವಮಾಮ್ । ಭವೋದ್ಭವಾಯ ನಮಃ ॥೨॥ ವಾಮದೇವಾಯ

ಛಾಯಾ ತ್ವಧರ್ಮೋರ್ಮಿಷು ಯೈರ್ವಿಸರ್ಗೋ
ನೇತ್ರತ್ರಯಂ ಸತ್ತ್ವರಜಸ್ತಮಾಂಸಿ ।
ಸಾಂಖ್ಯಾತ್ಮನಃ ಶಾಸ್ತ್ರಕೃತಸ್ತವೇಕ್ಷಾ
ಛನ್ದೋಮಯೋ ದೇವ ಋಷಿಃ ಪುರಾಣಃ ॥೩೦॥

ಅಧರ್ಮಕ್ಕೆ ಮೂಲವಾದ ದಂಭಾಭಿಮಾನ-ಅಹಂಕಾರಗಳೆಂಬ ತರಂಗಗಳೇ ನಿನ್ನ ನೆರಳಾಗಿವೆ. ವಿಧ-ವಿಧವಾದ ಸೃಷ್ಟಿಗಳಿಗೆ ಕಾರಣವಾಗಿರುವ ಅಂತಹ ಸತ್ತ್ವರಜಸ್ತಮೋಗುಣಗಳೇ ನಿನ್ನ ಮೂರು ಕಣ್ಣುಗಳಾಗಿವೆ. ಸರ್ವಸಾಕ್ಷಿಯೂ ಮತ್ತು ಶಾಸ್ತ್ರಗಳನ್ನು ರಚಿಸಿದವನೂ ಆದ ನಿನಗೆ ಛಂದೋಮಯವಾದ ಮತ್ತು ಸನಾತನವಾದ ವೇದವೇ ನೋಟವಾಗಿದೆ.

ನ ತೇ ಗಿರಿತ್ರಾಖಿಲಲೋಕಪಾಲ-
ವಿರಿಞ್ಚವೈಕುಣ್ಠ ಸುರೇನ್ದ್ರಗಮ್ಯಮ್ ।
ಜ್योತಿಃ ಪರಂ ಯತ್ರ ರಜಸ್ತಮಶ್ಚ
ಸತ್ತ್ವಂ ನ ಯದ್ಬ್ರಹ್ಮ ನಿರಸ್ತಭೇದಮ್ ॥೩೧॥

ಗಿರಿತ್ರನೇ! ಪರಮೇಶ್ವರನೇ! ನೀನು ಪರಂಜ್ಯೋತಿಮಯ ಸ್ವರೂಪನು. ಪರಬ್ರಹ್ಮಪರಾತ್ಮತತ್ತ್ವವೇ ಆಗಿರುವೆ. ಸಚ್ಚಿದಾನಂದಘನಸ್ವರೂಪನು ನೀನು. ಪರಂಜ್ಯೋತಿಸ್ವರೂಪನಾದ ನಿನ್ನಲ್ಲಿ ಸತ್ತ್ವರಜಸ್ತಮೋಗುಣಗಳಾಗಲೀ

ನಮೋ ಜ್ಯೇಷ್ಠಾಯ ನಮಃ ಶ್ರೇಷ್ಠಾಯ ನಮೋ ರುದ್ರಾಯ ನಮಃ ಕಾಲಾಯ ನಮಃ ಕಲವಿಕರಣಾಯ ನಮೋ ಬಲವಿಕರಣಾಯ ನಮೋ ಬಲಾಯ ನಮೋ ಬಲ ಪ್ರಮಥನಾಯ ನಮಃ ಸರ್ವಭೂತದಮನಾಯ ನಮೋ ಮನೋನ್ಮನಾಯ ನಮಃ ॥೩॥ ಅಘೋರೇಭ್ಯೋಽಥಘೋರೇಭ್ಯೋ ಘೋರಘೋರತರೇಭ್ಯಃ । ಸರ್ವೇಭ್ಯಃ ಸರ್ವಶರ್ವೇಭ್ಯೋ ನಮಸ್ತೇಽಸ್ತು ರುದ್ರರೂಪೇಭ್ಯಃ ॥೪॥ ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ । ತನ್ನೋ ರುದ್ರಃ ಪ್ರಚೋದಯಾತ್ ॥೫॥ ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್ ॥

ಈ ಪಂಚೋಪನಿಷತ್ತುಗಳ ಪದವಿಭಾಗದಿಂದ ಮೂವತ್ತೆಂಟು ಮಂತ್ರಗಳಾಗುತ್ತವೆ ಎಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಪದವಿಭಾಗಮಾಡಿ ಹೇಳಿಲ್ಲ. ಈ

ಗಲೀ ಯಾವುದೇ ಭೇದಭಾವವಾಗಲೀ ಇಲ್ಲ. ಅಂತಹ ನಿನ್ನ ಚಿದಾನಂದ ಘನಸ್ವರೂಪವನ್ನು ಲೋಕಪಾಲಕರಾಗಲೀ ಬ್ರಹ್ಮೇಂದ್ರವಿಷ್ಣುಗಳಾಗಲೀ ಅರಿಯರು.

ಕಾಮಾಧ್ವರತ್ರಿಪುರಕಾಲಗರಾದ್ಯನೇಕ-
ಭೂತದ್ರುಹಃ ಕ್ಷಪಯತಃ ಸ್ತುತಯೇ ನ ತತ್ತೇ ।
ಯಸ್ತ್ವಂತಕಾಲ ಇದಮಾತ್ಮಕೃತಂ ಸ್ವನೇತ್ರ-
ವಹ್ನಿಸ್ಫುಲಿಙ್ಗಶಿಖಯಾ ಭಸಿತಂ ನ ವೇದ ॥೩೨॥

ಕಾಮದಹನ, ದಕ್ಷಯಜ್ಞವಿಧ್ವಂಸನ, ತ್ರಿಪುರಾಸುರಸಂಹಾರ (ಈಗ ನಮ್ಮ ಪ್ರಾರ್ಥನೆಯಂತೆ ನಡೆಯಲಿರುವ) ಕಾಲಕೂಟವಿಷಭಕ್ಷಣ, ಭೂತ ದ್ರೋಹಿಗಳಾದ ಹಲವಾರು ರಾಕ್ಷಸರ ಸಂಹಾರ–ಇವೇ ಮುಂತಾದ ಪ್ರಪಂಚಕ್ಕೆ ಹಿತವಾದ ಕಾರ್ಯಗಳನ್ನು ಮಾಡಿರುವೆ. ಇದು ನಿನ್ನನ್ನು ಸ್ತುತಿಮಾಡುವುದಕ್ಕಾಗಿ ಹೇಳುತ್ತಿರುವ ಮಾತಲ್ಲ. ಇದೆಲ್ಲವೂ ನಿನ್ನ ದೃಷ್ಟಿಯಿಂದ ಅತ್ಯಲ್ಪವಾದ ವಿಷಯಗಳು. ಹೇಗೆಂದರೆ : ಪ್ರಳಯಕಾಲದಲ್ಲಿ ನೀನೇ ಸೃಷ್ಟಿಸಿದ ಈ ಜಗತ್ತು ನಿನ್ನ ಕಣ್ಣಿನಿಂದ ಹೊರಡುವ ಅಗ್ನಿಯ ಕಿಡಿಯ ಜ್ವಾಲೆಗಳಿಂದ ಕ್ಷಣಮಾತ್ರದಲ್ಲಿ ಭಸ್ಮವಾಗಿಹೋಗುತ್ತದೆ. ಸದಾ ಧ್ಯಾನ ಮಗ್ನನಾಗಿರುವ ನೀನು ಈ ಕಾರ್ಯಗಳ ಸಾಧನೆಯ ವಿಷಯವಾಗಿ ಯೋಚಿಸುವುದೇ ಇಲ್ಲ. ನಿನ್ನ ಪರಮಾದ್ಭುತವಾದ ಶಕ್ತಿಯಿಂದ ತಾನೇ ತಾನಾಗಿ ಎಲ್ಲವೂ ನಡೆದುಹೋಗಿರುತ್ತದೆ.

ಪಂಚೋಪನಿಷತ್ತುಗಳ ಹಿಂದಿನ ಅನುವಾದವನ್ನು ಸೇರಿಸಿಕೊಂಡು ನಮಃ ಎಂಬಲ್ಲಿಗೆ ನಿಲ್ಲಿಸಿ ಗಣನೆಮಾಡಿದರೆ ಮೂವತ್ತೆಂಟು ಮಂತ್ರಗಳಾಗುತ್ತವೆ.

೧) ನಿಧನಪತಯೇ ನಮಃ ೨) ನಿಧನಪತಾನ್ತಿಕಾಯ ನಮಃ ೩) ಊರ್ಧ್ವಾಯ ನಮಃ ೪) ಊರ್ಧ್ವಲಿಂಗಾಯ ನಮಃ ೫) ಹಿರಣ್ಯಾಯ ನಮಃ ೬) ಹಿರಣ್ಯ ಲಿಂಗಾಯ ನಮಃ ೭) ಸುವರ್ಣಾಯ ನಮಃ ೮) ಸುವರ್ಣಲಿಂಗಾಯ ನಮಃ ೯) ದಿವ್ಯಾಯ ನಮಃ ೧೦) ದಿವ್ಯಲಿಂಗಾಯ ನಮಃ ೧೧) ಭವಾಯ ನಮಃ ೧೨) ಭವಲಿಂಗಾಯ ನಮಃ ೧೩) ಶರ್ವಾಯ ನಮಃ ೧೪) ಶರ್ವಲಿಂಗಾಯ ನಮಃ ೧೫) ಶಿವಾಯ ನಮಃ ೧೬) ಶಿವಲಿಂಗಾಯ ನಮಃ ೧೭) ಜ್ವಲಾಯ ನಮಃ ೧೮) ಜ್ವಲಲಿಂಗಾಯ ನಮಃ ೧೯) ಆತ್ಮಾಯ ನಮಃ ೨೦) ಆತ್ಮಲಿಂಗಾಯ ನಮಃ ೨೧) ಪರಮಾಯ ನಮಃ ೨೨) ಪರಮಲಿಂಗಾಯ ನಮಃ। ಏತತ್ಸೋಮಸ್ಯ ಸೂರ್ಯಸ್ಯ

ಯೇ ತ್ವಾತ್ಮರಾಮಗುರುಭಿರ್ಹೃದಿ ಚಿನ್ತಿತಾಙ್ಘ್ರಿ-
ದ್ವನ್ದ್ವಂ ಚರನ್ತಮುಮಯಾ ತಪಸಾಭಿತಪ್ತಮ್ ।
ಕತ್ಥನ್ತ ಉಗ್ರಪರುಷಂ ನಿರತಂ ಶ್ಮಶಾನೇ
ತೇ ನೂನಮೂತಿಮವಿದಂಸ್ತವ ಹಾತಲಜ್ಜಾಃ ॥೩೩॥

ಜೀವನ್ಮುಕ್ತರಾದ ಆತ್ಮಾರಾಮರಾದ ಗುರುಜನರು ತಮ್ಮ ಹೃದಯ ಕಮಲಗಳಲ್ಲಿ ನಿನ್ನ ದಿವ್ಯವಾದ ಪಾದದ್ವಯಗಳನ್ನು ಧ್ಯಾನಮಾಡುತ್ತಿರುತ್ತಾರೆ. ನೀನೂ ಕೂಡ ನಿರಂತರವಾಗಿ ತಪಸ್ಸಿನಲ್ಲಿಯೇ ತೊಡಗಿರುವೆ. ಅಂತಹ ನಿನ್ನನ್ನು ಕೆಲವರು ಕಾಮಾಸಕ್ತನೆಂದೂ ಸದಾ ಉಮೆಯೊಡನೆ ತಿರುಗುತ್ತಿರುವನೆಂದೂ ಹೇಳುತ್ತಾರೆ. ನಿರಂತರವಾಗಿ ಶ್ಮಶಾನದಲ್ಲಿ ವಾಸಮಾಡುವ ನಿನ್ನನ್ನು ಉಗ್ರಪುರುಷನೆಂದೂ ತೆಗಳುತ್ತಾರೆ. ನಾಚಿಕೆಗೆಟ್ಟು ಹೀಗೆ ಹೇಳುವ ಅವರಿಗೆ ನಿನ್ನ ಮಹಿಮೆಯೇನಾದರೂ ತಿಳಿದಿರುವುದೇ?

ತತ್ತಸ್ಯ ತೇ ಸದಸತೋಃ ಪರತಃ ಪರಸ್ಯ
ನಾಞ್ಜಃ ಸ್ವರೂಪಗಮನೇ ಪ್ರಭವನ್ತಿ ಭೂಮ್ನಃ ।
ಬ್ರಹ್ಮಾದಯಃ ಕಿಮುತ ಸಂಸ್ತವನೇ ವಯಂ ತು
ತತ್ಸರ್ಗಸರ್ಗವಿಷಯಾ ಅಪಿ ಶಕ್ತಿಮಾತ್ರಮ್ ॥೩೪॥

ಪ್ರಭುವೇ! ಕಾರ್ಯ-ಕಾರಣರೂಪವಾದ ಜಗತ್ತಿನ ಆಚೆ ಮಾಯೆ

ಸರ್ವಲಿಂಗಗ್ಗ್‌ಸ್ಥಾಪಯತಿ ಪಾಣಿಮಂತ್ರಂ ಪವಿತ್ರಮ್ । ೨೩) ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈ ನಮೋ ನಮಃ । ೨೪) ಭವೇ ಭವೇನಾತಿಭವೇ ಭವಸ್ವಮಾಮ್ । ಭವೋದ್ಭವಾಯ ನಮಃ । ೨೫) ವಾಮದೇವಾಯ ನಮಃ ೨೬) ಜ್ಯೇಷ್ಠಾಯ ನಮಃ ೨೭) ಶ್ರೇಷ್ಠಾಯ ನಮಃ ೨೮) ರುದ್ರಾಯ ನಮಃ ೨೯) ಕಾಲಾಯ ನಮಃ ೩೦) ಕಲವಿಕರಣಾಯ ನಮಃ ೩೧) ಬಲವಿಕರಣಾಯ ನಮಃ ೩೨) ಬಲಾಯ ನಮಃ ೩೩) ಬಲಪ್ರಮಥನಾಯ ನಮಃ ೩೪) ಸರ್ವಭೂತದಮನಾಯ ನಮಃ ೩೫) ಮನೋನ್ಮನಾಯ ನಮಃ ೩೬) ಅಘೋರೇಭ್ಯೋಽಥಘೋರೇಭ್ಯೋ ಘೋರಘೋರತರೇಭ್ಯಃ। ಸರ್ವೇಭ್ಯಃ ಸರ್ವಶರ್ವೇಭ್ಯೋ ನಮಸ್ತೇ ಅಸ್ತು ರುದ್ರ ರೂಪೇಭ್ಯಃ ೩೭) ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ । ತನ್ನೋ ರುದ್ರಃ ಪ್ರಚೋದಯಾತ್ । ೩೮) ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವ ಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್ ॥

ಯಿದೆ. ಆ ಮಾಯೆಗೂ ಅತೀತನಾಗಿ ನೀನಿರುವೆ. ನಿನ್ನ ಅನಂತಸ್ವರೂಪದ ಸಾಕ್ಷಾತ್ಕಾರಮಾಡಿಕೊಳ್ಳಲು ಬ್ರಹ್ಮಾದಿಗಳೂ ಅಸಮರ್ಥರೇ ಸರಿ. ನಿನ್ನ ಸ್ವರೂಪವೇ ತಿಳಿಯದಿದ್ದರೆ ಸ್ತುತಿಮಾಡುವುದಾದರೂ ಹೇಗೆ ಸಾಧ್ಯ? ಹೀಗಿರುವಾಗ ಬ್ರಹ್ಮನ ಅಂಶಾಂಶಸಂಭೂತರಾಗಿರುವ ನಾವೇನು ಮಾಡ ಬಲ್ಲೆವು ? ಆದರೂ ನಮ್ಮ ಶಕ್ತಿಗೆ ಅನುಸಾರವಾಗಿ ನಿನ್ನ ಗುಣಗಾನ ಮಾಡಿದ್ದೇವೆ. ಇದರಿಂದಲೇ ನೀನು ತೃಪ್ತನಾಗಿ ವರದಾನಮಾಡಬೇಕಾಗಿದೆ.

ಏತತ್ಪರಂ ಪ್ರಪಶ್ಯಾಮೋ ನ ಪರಂ ತೇ ಮಹೇಶ್ವರ ।
ಮೃಡನಾಯ ಹಿ ಲೋಕಸ್ಯ ವ್ಯಕ್ತಿಸ್ತೇಽವ್ಯಕ್ತಕರ್ಮಣಃ ॥೩೫॥

ಪರಮೇಶ್ವರನೇ! ನಾವಾದರೋ ನಿನ್ನ ಲೀಲಾವಿಹಾರೀ ನಿಜಸ್ವರೂಪ ವನ್ನು ನೋಡುತ್ತಿದ್ದೇವೆ. ಪರತತ್ತ್ವದ ಆನಂದಘನಸ್ವರೂಪವನ್ನು ಕಾಣುತ್ತಿಲ್ಲ. ಅಗೋಚರವ್ಯಾಪಾರವುಳ್ಳ ನಿನ್ನ ವ್ಯಕ್ತಸ್ವರೂಪವು ಲೋಕಕಲ್ಯಾಣಕ್ಕಾಗಿಯೇ ನಿಯಮಿತವಾಗಿದೆ.”

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಪರೀಕ್ಷಿತನೇ! ಸಕಲ ಪ್ರಾಣಿಗಳ ಹಿತೈಷಿಯೂ ಆದ ದೇವ-ದೇವನಾದ ಕರುಣಾಮಯನಾದ ಮೃಡನು ದೇವತೆಗಳ ದುಃಖವನ್ನು ಕಂಡು ವ್ಯಥೆಗೊಂಡು ಪ್ರೇಯಸಿಯಾದ ಪಾರ್ವತಿಗೆ ಹೇಳಿದನು :

“ಪ್ರಿಯಳೇ! ಅಯ್ಯೋ ಪಾಪ! ಕ್ಷೀರಸಮುದ್ರದ ಕಡೆಯುವಿಕೆಯಿಂದ ಹುಟ್ಟಿದ ಮಹಾಘೋರವಾದ ಕಾಲಕೂಟವಿಷದಿಂದ ಪ್ರಜೆಗಳಿಗುಂಟಾಗಿರುವ ದುಃಖವನ್ನಾದರೂ ನೋಡು. ಪ್ರಾಣಗಳನ್ನುಳಿಸಿಕೊಳ್ಳಬೇಕೆಂಬ ಕಾತರದಿಂದ ನಮ್ಮ ಬಳಿಗೆ ಆಗಮಿಸಿರುವ ಇವರಿಗೆ ಅಭಯಪ್ರದಾನಮಾಡುವುದು ನಮ್ಮ ಕರ್ತವ್ಯವಾಗಿದೆ. ಸಮರ್ಥನಾದ ಪ್ರಭುವಿಗೆ ದೀನರಾದವರ ಸಂಕಟವನ್ನು ಪರಿಹರಿಸುವುದೇ ಜೀವನದ ಮುಖ್ಯಪ್ರಯೋಜನವಾಗಿದೆ.

ಪ್ರಾಣೈಃ ಸ್ವೈಃ ಪ್ರಾಣಿನಃ ಪಾನ್ತಿ ಸಾಧವಃ ಕ್ಷಣಭಙ್ಗುರೈಃ ।
ಬದ್ಧವೈರೇಷು ಭೂತೇಷು ಮೋಹಿತೇಷ್ವಾತ್ಮಮಾಯಯಾ ॥೩೯॥

ಭಗವಂತನ ಮಾಯೆಯಿಂದ ವಿಮೋಹಿತರಾಗಿ ಪರಸ್ಪರವಾಗಿ ದ್ವೇಷಿ

ಸುವ ಪ್ರಾಣಿಗಳ ವಿಷಯದಲ್ಲಿ ಕೃಪಾವಿಷ್ಟರಾಗಿ, ಕ್ಷಣಕಾಲಮಾತ್ರವೇ ಇರುವ ಅಶಾಶ್ವತವಾದ ಪ್ರಾಣಗಳನ್ನಾದರೂ ಒತ್ತೆಯಿಟ್ಟು ದೀನರಾದವರನ್ನು ಯಾರು ರಕ್ಷಿಸುವರೋ ಅವರೇ ಸಾಧುಗಳು.

ಪುಂಸ�ః ಕೃಪಯತೋ ಭದ್ರೇ ಸರ್ವಾತ್ಮಾ ಪ್ರೀಯತೇ ಹರಿః ।
ಪ್ರೀತೇ ಹರೌ ಭಗವತಿ ಪ್ರೀಯೇಽಹಂ ಸಚರಾಚರః ।
ತಸ್ಮಾದಿದಂ ಗರಂ ಭುಞ್ಜೇ ಪ್ರಜಾನಾಂ ಸ್ವಸ್ತಿರಸ್ತು ಮೇ ॥೪೦॥

ಸರ್ವಮಂಗಳೆಯೇ! ದೀನರಾದವರನ್ನು ಕೃಪಾದೃಷ್ಟಿಯಿಂದ ಕಾಣುವ ಸಾಧುಗಳ ವಿಷಯದಲ್ಲಿ ಸರ್ವಾತ್ಮನಾದ ಶ್ರೀಹರಿಯು ಪ್ರಸನ್ನನಾಗುವನು. ಶ್ರೀಹರಿಯು ಸುಪ್ರೀತನಾದರೆ ಚರಾಚರಪ್ರಾಣಿಗಳಿಂದ ಕೂಡಿದ ನಾನೂ ಪ್ರಸನ್ನನಾಗುವೆನು. ಆದುದರಿಂದ ಸಕಲ ಪ್ರಾಣಿಗಳ ಹಿತಕ್ಕಾಗಿ ಹಾಲಾಹಲ ವಿಷವನ್ನು ಈಗಲೇ ನಾನು ಕುಡಿಯುತ್ತೇನೆ. ಇದರಿಂದ ನನ್ನ ಪ್ರಜೆಗಳಿಗೆ ಕಲ್ಯಾಣವುಂಟಾಗಲಿ ; ಲೋಕಕ್ಕೆ ಕ್ಷೇಮವಾಗಲಿ.”

ಶ್ರೀಶುಕರು ಹೇಳುತ್ತಾರೆ :

ವಿಶ್ವಪ್ರೇಮಿಯಾದ, ಭಗವಂತನಾದ ಈಶ್ವರನು ಹೀಗೆ ಪಾರ್ವತಿಗೆ ಹೇಳಿ, ಅವಳ ಸಮ್ಮತಿಯನ್ನು ಪಡೆದು, ಆ ಹಾಲಾಹಲವಿಷವನ್ನು ಕುಡಿಯಲು ಪ್ರಾರಂಭಿಸಿದನು. ಶಿವನ ಪ್ರಭಾವವನ್ನು ಚೆನ್ನಾಗಿ ತಿಳಿದಿದ್ದ ಪಾರ್ವತಿಯು ಆತನ ವಿಷಪ್ರಾಶನಕ್ಕೆ ಸಮ್ಮತಿಸಿದಳು. ಪ್ರಾಣಿಗಳ ಹಿತೈಷಿಯಾದ ಮಹಾದೇವನು ಅವುಗಳ ಮೇಲಿನ ಕನಿಕರದಿಂದ ಸರ್ವತ್ರವ್ಯಾಪಿಸುತ್ತಿದ್ದ ಹಾಲಾಹಲವಿಷವನ್ನು ಅಂಗೈಯಿನಲ್ಲಿ ಆಕರ್ಷಿಸಿ ಕುಡಿದುಬಿಟ್ಟನು. ಜಲಕ್ಕೆ ಕಲ್ಮಷಪ್ರಾಯವಾಗಿದ್ದ ಆ ವಿಷವು ಪರಶಿವನ ಕೊರಳಿನಲ್ಲಿ ಕಪ್ಪನ್ನುಂಟುಮಾಡಿ ತನ್ನ ಶಕ್ತಿಯನ್ನು ಪ್ರದರ್ಶಿಸಿತು. ಆದರೆ ಆ ನೀಲಚ್ಛಾಯೆಯೂ ಜಗದ್ರಕ್ಷಕನಾದ ಪರಮೇಶ್ವರನಿಗೆ ಅಲಂಕಾರವೇ ಆಯಿತು.

ತಪ್ಯನ್ತೇ ಲೋಕತಾಪೇನ ಸಾಧವః ಪ್ರಾಯಶೋ ಜನాః ।
ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನః ॥೪೪॥

ಪರೀಕ್ಷಿತ! ಪ್ರಾಯಶః ಸಾಧು-ಸತ್ಪುರುಷರು ಇತರರ ದುಃಖವನ್ನು ನೋಡಿ ತಾವೂ ಸಂಕಟಪಡುವುದು ಮಾತ್ರವಲ್ಲದೆ ದೀನರಾದವರ ಸಂಕಟ

ವನ್ನು ತಪ್ಪಿಸಲು ಸತತವಾಗಿ ಪ್ರಯತ್ನಿಸುವರು. ಅಂತಹ ಸೇವಾಕಾರ್ಯವು ಸರ್ವಾತ್ಮನಾದ ಪರಮಪುರುಷನ ಆರಾಧನೆಯೇ ಆಗುತ್ತದೆ.

ದೇವದೇವನಾದ, ಆಶ್ರಿತರಕ್ಷಕನಾದ ಶಂಭುವು ಮಾಡಿದ ಆ ಅದ್ಭುತ ಕಾರ್ಯವನ್ನು ಕೇಳಿ ಪ್ರಜೆಗಳೂ, ಪಾರ್ವತಿದೇವಿ, ಬ್ರಹ್ಮ, ವಿಷ್ಣು–ಇವರೆಲ್ಲರೂ ಬಹಳವಾಗಿ ಪ್ರಶಂಸಿಸಿದರು. ಪರಮೇಶ್ವರನು ಹಾಲಾಹಲವಿಷವನ್ನು ಕುಡಿಯುವಾಗ ಕೈಯಿಂದ ಜಾರಿದ ಅಲ್ಪ-ಸ್ವಲ್ಪ ವಿಷದ ಕಣಗಳನ್ನು ಚೇಳು-ಹಾವು-ದಂದಶೂಕ-ವೃಕ್ಷೌಷಧಿಲತೆಗಳು ಮತ್ತು ಇತರ ವಿಷಜಂತುಗಳು ಪಡೆದುಕೊಂಡುವು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೮ನೆಯ ಅಧ್ಯಾಯ

ಕ್ಷೀರಸಮುದ್ರದಲ್ಲಿ ಅಮೃತವು ಪ್ರಕಟವಾದುದು : ಭಗವಂತನ ಮೋಹಿನೀ ಅವತಾರ

ಶ್ರೀಶುಕಮುನಿಗಳು ಹೇಳುತ್ತಾರೆ :

ಪೀತೇ ಗರೇ ವೃಷಾಙ್ಕೇಣ ಪ್ರೀತಾಸ್ತೇಽಮರದಾನವಾಃ ।
ಮಮನ್ಥುಸ್ತರಸಾ ಸಿನ್ಧುಂ ಹವಿರ್ಧಾನೀ ತತೋಽಭವತ್ ॥೧॥

ವೃಷಾಂಕನಾದ ಪರಶಿವನು ಹಾಲಾಹಲವಿಷವನ್ನು ಕುಡಿಯಲಾಗಿ ದೇವ-ದಾನವರು ಸುಪ್ರೀತರಾದರು. ನೂತನವಾದ ಉತ್ಸಾಹದಿಂದ ಅವರು ಬಹಳ ವೇಗವಾಗಿ ಸಮುದ್ರವನ್ನು ಕಡೆಯಲು ಉಪಕ್ರಮಿಸಿದರು. ಇದರ ಪರಿಣಾಮವಾಗಿ ಅಗ್ನಿಹೋತ್ರಕ್ಕೆ ಬೇಕಾದ ಹವಿಸ್ಸನ್ನು ಕೊಡುವ ಕಾಮಧೇನುವು ಹುಟ್ಟಿತು.

ವೇದಾಧ್ಯಯನಸಂಪನ್ನರಾದ ಋಷಿಗಳು ಅಗ್ನಿಹೋತ್ರವೇ ಮೊದಲಾದ ಕರ್ಮಗಳಿಗೆ ಸಹಾಯಕವಾದ ಆ ಕಾಮಧೇನುವನ್ನು ಬ್ರಹ್ಮಲೋಕಮಾರ್ಗಪ್ರಾಪಕವಾದ ಯಜ್ಞಗಳಿಗೆ ಬೇಕಾಗುವ ಪವಿತ್ರವಾದ ಹವಿಸ್ಸಿಗಾಗಿ ಪಡೆದುಕೊಂಡರು. ಬಳಿಕ ಚಂದ್ರನಂತೆ ಬಿಳುಪಾದ

ಉಚ್ಚೈಶ್ರವಸ್ಸೆಂಬ ಕುದುರೆಯು ಹುಟ್ಟಿತು. ಅದನ್ನು ಕಂಡೊಡನೆಯೇ ಬಲಿಚಕ್ರವರ್ತಿಯು ಅದನ್ನು ಬಯಸಿದನು. ಇಂದ್ರನಿಗೂ ಅದನ್ನು ಪಡೆದು ಕೊಳ್ಳುವ ಆಸೆಯಿತ್ತಾದರೂ ಪರಮಾತ್ಮನ ಆದೇಶದಂತೆ ಅವನು ತನ್ನ ಆಸೆಯನ್ನು ಬಹಿರಂಗಪಡಿಸಲಿಲ್ಲ.

ಬಳಿಕ ನಾಲ್ಕು ದಂತಗಳಿದ್ದ ಶ್ರೇಷ್ಠವಾದ ಐರಾವತವೆಂಬ ಆನೆಯು ಹುಟ್ಟಿತು. ಅದರ ದಂತಗಳ ಕಾಂತಿಯು ಮಹಾತೇಜಸ್ಸುಳ್ಳ ರುದ್ರನ ಉಜ್ಜ್ವಲವಾದ ಕಾಂತಿಯಿಂದ ಕೂಡಿದ್ದು ಕೈಲಾಸಪರ್ವತದ ಕಾಂತಿಯನ್ನು ಮೀರಿಸುತ್ತಿದ್ದಿತು. ಬಳಿಕ ಕ್ಷೀರಸಮುದ್ರದಿಂದ ಕೌಸ್ತುಭವೆಂಬ ಮಣಿಯು ಹುಟ್ಟಿತು. ಆ ಮಣಿಯನ್ನು ವಕ್ಷಃಸ್ಥಳದಲ್ಲಿ ಧರಿಸಿಕೊಳ್ಳುವ ಸಲುವಾಗಿ ಭಗವಂತನಾದ, ಅಜಿತನಾದ ಮಹಾವಿಷ್ಣುವು ಅಪೇಕ್ಷಿಸಿದನು. ಬಳಿಕ ಸ್ವರ್ಗ ಲೋಕದ ಶೋಭೆಯನ್ನು ಹೆಚ್ಚಿಸುವ ಕಲ್ಪವೃಕ್ಷವು ಹುಟ್ಟಿತು. ಪರೀಕ್ಷಿತ! ಭೂಮಂಡಲದಲ್ಲಿ ನೀನು ಸಕಲರ ಇಚ್ಛೆಗಳನ್ನೂ ಪೂರ್ಣಗೊಳಿಸುತ್ತಿರು ವಂತೆ ಆ ಕಲ್ಪವೃಕ್ಷವು ಬೇಡಿದವರ ಇಷ್ಟಾರ್ಥಗಳೆಲ್ಲವನ್ನೂ ಪೂರೈಸಿಕೊಡು ತ್ತದೆ. ಅನಂತರ ಸುವರ್ಣದ ಹಾರಗಳಿಂದ ಸಮಲಂಕೃತರಾಗಿದ್ದ ದಿವ್ಯವಾದ ವಸ್ತ್ರಗಳನ್ನುಟ್ಟಿದ್ದ, ನಡೆ-ಬೆಡಗು-ನೋಟಗಳಿಂದ ದೇವತೆಗಳನ್ನು ಸಂತೋಷ ಗೊಳಿಸುವವರಾಗಿದ್ದ, ಕಡುಚೆಲುವೆಯರಾದ ಅಪ್ಸರೆಯರು ಹುಟ್ಟಿದರು. ಅಪ್ಸರೆಯರು ಹುಟ್ಟಿದನಂತರ, ಮೂರ್ತಿಮತ್ತಾಗಿ ಬಂದಿರುವ ಸಂಪತ್ತಿ ನಂತೆಯೇ ಕಾಣುತ್ತಿದ್ದ ಸ್ವಯಂ ಭಗವತೀ ಲಕ್ಷ್ಮೀದೇವಿಯು ಪ್ರಕಟ ವಾದಳು. ಭಗವಂತನನ್ನು ಯಾವಾಗಲೂ ಎಡೆಬಿಡದಿರುವ ಮಹಾಲಕ್ಷ್ಮಿಯು ಸ್ಫಟಿಕಪರ್ವತದ ಮೇಲೆ ಬೀಳುವ ಮಿಂಚಿನಂತೆ ತನ್ನ ದಿವ್ಯವಾದ ಕಾಂತಿ ಯಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ಸಾಕ್ಷಾತ್ತಾಗಿ ಆವಿರ್ಭವಿಸಿದಳು. ಶ್ರೀದೇವಿಯ ರೂಪ, ಔದಾರ್ಯ, ಯೌವನ, ನಯನಮನೋಹರವಾದ ಶರೀರಕಾಂತಿ ಮತ್ತು ಮಹಿಮೆಗಳಿಗೆ ಮನಸೋತು ದೇವ-ದಾನವ-ಮನುಷ್ಯರೆಲ್ಲರೂ ಅವಳನ್ನು ಪಡೆದುಕೊಳ್ಳಲು ಬಯಸಿದರು. ಮಹೇಂದ್ರನು, ಮಹಾಲಕ್ಷ್ಮಿಯು ಕುಳಿತುಕೊಳ್ಳಲು ಅದ್ಭುತವಾದ ಮತ್ತು ದೊಡ್ಡದಾದ ಪೀಠವನ್ನು ತಂದಿಟ್ಟನು. ಮೂರ್ತಿಮತ್ತಾಗಿ ಆಗಮಿಸಿದ

ಗಂಗಾ-ಯಮುನ-ಕಾವೇರಿಯೇ ಮೊದಲಾದ ನದಿಗಳ ಅಧಿದೇವತೆಗಳು ಚಿನ್ನದ ಬಿಂದಿಗೆಗಳಲ್ಲಿ ಪರಿಶುದ್ಧವಾದ ನೀರನ್ನು ತಂದರು. ಭೂದೇವಿಯು ಅಭಿಷೇಕಕ್ಕೆ ಬೇಕಾದ ಮೂಲಿಕೆಗಳನ್ನು ಸಿದ್ಧಪಡಿಸಿದಳು. ಗೋವುಗಳು ಪವಿತ್ರವಾದ ಪಂಚಗವ್ಯವನ್ನು ಸಿದ್ಧಪಡಿಸಿದುವು. ವಸಂತನು ಚೈತ್ರ-ವೈಶಾಖಮಾಸಗಳಲ್ಲಿ ಸಿಕ್ಕುವ ಎಲ್ಲ ಬಗೆಯ ಫಲ-ಪುಷ್ಪಗಳನ್ನೂ ಕಾಣಿಕೆಯಾಗಿ ತಂದನು. ಋಷಿ-ಮುನಿಗಳು ಲಕ್ಷ್ಮೀದೇವಿಗೆ ಶಾಸ್ತ್ರೋಕ್ತಪ್ರಕಾರವಾಗಿ ಶುದ್ಧಜಲದಿಂದ ಅಭಿಷೇಕಮಾಡಿದರು. ಗಂಧರ್ವರು ಮಂಗಳಕರವಾದ ಹಾಡುಗಳನ್ನು ಹಾಡಿದರು. ಅಪ್ಸರೆಯರು ನರ್ತನಮಾಡಿದರು. ಮೇಘಗಳು ಮೂರ್ತಿಮತ್ತಾಗಿ ಬಂದು ಮೃದಂಗ, ಪಣವ, ಆನಕ, ಗೋಮುಖ, ಶಂಖ, ಕೊಳಲು, ವೀಣೆ ಮುಂತಾದ ವಾದ್ಯಗಳನ್ನು ಏಕಕಾಲದಲ್ಲಿ ತಾಳ-ಲಯಬದ್ಧವಾಗಿ ಬಾರಿಸಿದುವು. ಅನಂತರ ಬ್ರಾಹ್ಮಣಶ್ರೇಷ್ಠರು ಅಭಿಷೇಕ ಸೂಕ್ತಗಳನ್ನು ಪಠಿಸುತ್ತಿರಲಾಗಿ ದಿಗ್ಗಜಗಳು ಪೂರ್ಣಕುಂಭಗಳಿಂದ ಪದ್ಮಹಸ್ತಳಾದ, ಸರ್ವೋತ್ತಮೆಯಾದ ಶ್ರೀದೇವಿಗೆ ಅಭಿಷೇಕವನ್ನು ಮಾಡಿದುವು. ಯಥಾವಿಧಿಯಾಗಿ ಮಂಗಳವಾದ್ಯಗಳೊಡನೆ ಮಹಾಲಕ್ಷ್ಮಿಗೆ ಅಭಿಷೇಕವಾದನಂತರ ಸಮುದ್ರರಾಜನು ಆಕೆಗೆ ಎರಡು ರೇಷ್ಮೆಯ ಪೀತಾಂಬರಗಳನ್ನು ಉಡುಗೊರೆಯಾಗಿ ಕೊಟ್ಟನು. ವರುಣನು ಮಧುಪಾನದಿಂದ ಮತ್ತವಾದ ದುಂಬಿಗಳಿಂದ ವ್ಯಾಪ್ತವಾಗಿದ್ದ ವೈಜಯಂತೀಮಾಲೆಯನ್ನು ಬಳುವಳಿಯಾಗಿಕೊಟ್ಟನು. ವಿಶ್ವಕರ್ಮಪ್ರಜಾಪತಿಯು ನಾನಾ ವಿಧವಾದ ವಿಚಿತ್ರವಾದ ಆಭರಣಗಳನ್ನೂ, ಸರಸ್ವತೀದೇವಿಯು ಮುತ್ತಿನ ಹಾರವನ್ನೂ, ಬ್ರಹ್ಮನು ದಿವ್ಯವಾದ ಕಮಲವನ್ನೂ, ನಾಗಶ್ರೇಷ್ಠರು ನಯನಮನೋಹರವಾದ ಕುಂಡಲ (ವಾಲೆ)ಗಳನ್ನೂ ಲಕ್ಷ್ಮೀದೇವಿಗೆ ಅರ್ಪಿಸಿದರು. (ಶ್ಲೋಕ 2-16)

ಬಳಿಕ ರಮಾದೇವಿಯು ಝೇಂಕರಿಸುವ ದುಂಬಿಗಳಿಂದ ವ್ಯಾಪ್ತವಾಗಿದ್ದ ಮಂಗಳಾಶಾಸನದಿಂದ ಪವಿತ್ರೀಕೃತವಾಗಿದ್ದ ಕನ್ನೈದಿಲೆಯ ಮಾಲೆಯನ್ನು ಕೈಯಲ್ಲಿ ಹಿಡಿದು, ಕುಂಡಲಗಳ ಕಾಂತಿಯಿಂದ ಪ್ರಕಾಶಮಾನವಾಗಿ ಕಾಣುತ್ತಿದ್ದ ಕಪೋಲಗಳಿದ್ದ, ನಾಚಿಕೆಯಿಂದುಂಟಾದ ಕಿರುನಗೆಯಿಂದ ಬೆಳಗುತ್ತಿದ್ದ, ಮಂಗಳಕರವಾದ ಮುಖಕಮಲದಿಂದ ಕೂಡಿ ಮೆಲ್ಲನೆ ಹೊರಟಳು.

ಲಕ್ಷ್ಮೀದೇವಿಯ ಸೊಂಟವು ಬಹಳ ಸೂಕ್ಷ್ಮವಾಗಿದ್ದಿತು. ಸ್ತನಗಳು ಒಂದ ಕ್ಕೊಂದು ವ್ಯತ್ಯಾಸವಿಲ್ಲದೇ ಸೇರಿಕೊಂಡು ತುಂಬಿಕೊಂಡಿದ್ದು ಕುಂಕುಮ ಕೇಸರಿಯ ಗಂಧದಿಂದ ಲೇಪಿಸಲ್ಪಟ್ಟಿದ್ದುವು. ಕಾಲ್ಬಳೆಗಳ ಝಣ-ಝಣ ಶಬ್ದದೊಡನೆ ಅತ್ತಿಂದಿತ್ತ ಇತ್ತಿಂದತ್ತ ಸುಳಿದಾಡುತ್ತಿದ್ದ ಪದಾಕ್ಷಿಯಾದ ರಮಾದೇವಿಯು ಚಿನ್ನದ ಬಳ್ಳಿಯಂತೆಯೇ ಕಾಣುತ್ತಿದ್ದಳು. ದೋಷರಹಿತ ನಾದ, ಸಮಸ್ತವಾದ ಉತ್ತಮಗುಣಗಳಿಂದಲೂ ಸಂಪನ್ನನಾದ ಅವಿನಾಶಿ ಯಾದ ಪುರುಷನ ಆಶ್ರಯವನ್ನು ಬಯಸಿ ಆಕೆಯು ಹೊರಟಿದ್ದಳು. ಆದರೆ ಗಂಧರ್ವ-ಯಕ್ಷ-ರಾಕ್ಷಸ-ಸಿದ್ಧ-ಚಾರಣ-ದೇವತೆಗಳೇ ಮೊದಲಾದವರಲ್ಲಿ ಅಂತಹ ಕಲ್ಯಾಣಗುಣಸಂಪನ್ನನೂ, ನಾಶವಿಲ್ಲದವನೂ, ದೋಷವಿಲ್ಲದ ವನೂ ಸಿಕ್ಕಲೇ ಇಲ್ಲ. ಆಗವಳು ತನ್ನಲ್ಲಿ ತಾನೇ ಯೋಚಿಸತೊಡಗಿದಳು :

ನೂನಂ ತಪೋ ಯಸ್ಯ ನ ಮನ್ಯುನಿರ್ಜಯೋ
ಜ್ಞಾನಂ ಕ್ವಚಿತ್ತಚ್ಚ ನ ಸಙ್ಗವರ್ಜಿತಮ್ ।
ಕಶ್ಚಿನ್ಮಹಾಂಸ್ತಸ್ಯ ನ ಕಾಮನಿರ್ಜಯಃ
ಸ ಈಶ್ವರಃ ಕಿಂ ಪರತೋವ್ಯಪಾಶ್ರಯಃ ॥೨೦॥

ಯಾವನು ಮಹಾತಪಸ್ವಿಯೋ ಅವನು ಕೋಪವನ್ನು ಗೆದ್ದಿರುವು ದಿಲ್ಲ. ತಪಸ್ವಿಯು ಕೋಪವನ್ನು ಗೆದ್ದವನಾಗಿರಬೇಕು. (ದುರ್ವಾಸರು ಮಹಾತಪಸ್ವಿಗಳು. ಆದರೆ ಕೋಪವನ್ನು ಜಯಿಸಿದವರಲ್ಲ.) ಯಾವನಲ್ಲಿ ಜ್ಞಾನವಿರುವುದೋ ಅವನು ಸಂಗವರ್ಜಿತನಾಗಿರುವುದಿಲ್ಲ. ಜ್ಞಾನಿಯು ಸಂಗವರ್ಜಿತನಾಗಿರಬೇಕು. (ಗುರು-ಶುಕ್ರರಲ್ಲಿ ತಪಸ್ಸೂ ಇದೆ ; ಜ್ಞಾನವೂ ಇದೆ. ಆದರೆ ಅವರು ಯಾವಾಗಲೂ ಪ್ರಾಣಿಗಳಿಗೆ ಒಳ್ಳೆಯ ಫಲ ಅಥವಾ ಕೆಟ್ಟ ಫಲಗಳನ್ನು ಕೊಡುವುದರಲ್ಲಿಯೇ ಆಸಕ್ತರಾಗಿರುವುದರಿಂದ ಅವರು ಜ್ಞಾನಿಗಳಾಗಿದ್ದರೂ, ತಪಸ್ವಿಗಳಾಗಿದ್ದರೂ ಸಂಗವರ್ಜಿತರಲ್ಲ.) ಕೆಲವು ಮಹಾತ್ಮರಿರುತ್ತಾರೆ. ಆದರೆ ಅವರು ಕಾಮವನ್ನು ಜಯಿಸಿರುವುದಿಲ್ಲ. (ಚಂದ್ರನು ಮಹಾತ್ಮನೇ ಸರಿ. ಆದರೆ ದೇವಗುರುವಾದ ಬೃಹಸ್ಪತಿಯ ಪತ್ನಿಯಾದ ತಾರೆಯನ್ನೇ ಮೋಹಿಸಿದವನು.) ಇತರರ ಆಶ್ರಯದಿಂದ ಐಶ್ವರ್ಯವಂತನಾದವನು ಪ್ರಭುವಾಗುವನೇ? (ಇತರರ ಸಹಾಯದಿಂದಲೇ

ತ್ರೈಲೋಕ್ಯಾಧಿಪತ್ಯವನ್ನು ಗಳಿಸಿರುವ ಇಂದ್ರನನ್ನು ಪ್ರಭು ಎಂದು ಕರೆಯಲು ಸಾಧ್ಯವೆ?)

ಧರ್ಮಃ ಕ್ವಚಿತ್ತತ್ರ ನ ಭೂತಸೌಹೃದಂ
ತ್ಯಾಗಃ ಕ್ವಚಿತ್ತತ್ರ ನ ಮುಕ್ತಿಕಾರಣಮ್ ।
ವೀರ್ಯಂ ನ ಪುಂಸೋಽಸ್ತ್ಯಜವೇಗನಿಷ್ಕೃತಂ
ನ ಹಿ ದ್ವಿತೀಯೋ ಗುಣಸಙ್ಗವರ್ಜಿತಃ ॥೨೦॥

ಕೆಲವರಲ್ಲಿ ಧರ್ಮವಿದೆ. ಆದರೆ ಭೂತದಯೆಯಿಲ್ಲ. (ಧರ್ಮಾತ್ಮರಾದವರಿಗೆ ಮುಖ್ಯವಾಗಿ ಭೂತದಯಾಪಶ್ಚಾತ್ತಾಪಗಳಿರಬೇಕು. ಯಮಧರ್ಮನು ಧರ್ಮಾತ್ಮನು ಹೌದು. ಆದರೆ ಅವನಿಗೆ ಭೂತದಯೆಯಿಲ್ಲ. ನಿಷ್ಕರುಣೆಯಿಂದ ಪ್ರಾಣಿಗಳನ್ನು ಸಂಹರಿಸುವನು.)

ಕೆಲವರಲ್ಲಿ ತ್ಯಾಗವಿದೆ. ಆದರೆ ಅದು ಮುಕ್ತಿಯ ಕಾರಣದಿಂದ ಕೂಡಿದುದಲ್ಲ. (ಮೋಕ್ಷಾಪೇಕ್ಷೆಯಿಂದಲೇ ತ್ಯಾಗಮಾಡಬೇಕು. ಶಿಬಿ ಮೊದಲಾದವರಲ್ಲಿ ತ್ಯಾಗಬುದ್ಧಿಯಿದೆ. ಆದರೆ ಅದು ನಿಷ್ಕಾಮದಿಂದ ಮಾಡಿದ ತ್ಯಾಗವಲ್ಲ.) ಪುರುಷನಿಗೆ ವೀರ್ಯ-ಪರಾಕ್ರಮಗಳಿವೆ. (ಕಾಲ ಚಕ್ರವನ್ನು ಗೆಲ್ಲುವುದೇ ವೀರ್ಯಶೌರ್ಯಗಳ ಪ್ರಯೋಜನ. ಕಾರ್ತವೀರ್ಯನೇ ಮೊದಲಾದವರಲ್ಲಿ ವೀರ್ಯಪರಾಕ್ರಮಗಳಿದ್ದರೂ ಅವರು ಅದರಿಂದ ಕಾಲಚಕ್ರವನ್ನು ಗೆಲ್ಲಲಿಲ್ಲ.) ಗುಣಸಂಗಗಳನ್ನು ವರ್ಜಿಸಿದ ಅತ್ಯಂತ ವಿರಕ್ತರಾದವರು ನನಗೆ ಅನುರೂಪರಲ್ಲ. (ಪ್ರಕೃತಿಗುಣಗಳ ಸಂಗವನ್ನೇ ತೊರೆದಿರುವ ಸನಕಾದಿಗಳು ನಿರ್ದುಷ್ಟರಾಗಿದ್ದರೂ ವಿರಕ್ತರಾದುದರಿಂದ ನನಗೆ ತಕ್ಕವರಲ್ಲ.)

ಕ್ವಚಿಚ್ಚಿರಾಯುರ್ನ ಹಿ ಶೀಲಮಙ್ಗಲಂ
ಕ್ವಚಿತ್ತದಪ್ಯಸ್ತಿ ನ ವೇದ್ಯಮಾಯುಷಃ ।
ಯತ್ರೋಭಯಂ ಕುತ್ರ ಚ ಸೋಽಪ್ಯಮಙ್ಗಲಃ
ಸುಮಙ್ಗಲಃ ಕಶ್ಚ ನ ಕಾಂಕ್ಷತೇ ಹಿ ಮಾಮ್ ॥೨೧॥

ಒಬ್ಬನು ಚಿರಾಯುವಾಗಿರುತ್ತಾನೆ. ಆದರೆ ಅವನಲ್ಲಿ ಶುಭಕರವಾದ ನಡತೆಯಿರುವುದಿಲ್ಲ. (ಮಾರ್ಕಂಡೇಯನೇ ಮೊದಲಾದವರು ಚಿರಂಜೀವಿ

ಗಳೇ ಸರಿ. ಆದರೆ ಅವರು ಯಾವಾಗಲೂ ಇಂದ್ರಿಯಗಳನ್ನು ನಿಗ್ರಹಿಸಿಯೇ ಇರುವುದರಿಂದ ಗೃಹಸ್ಥಾಶ್ರಮೋಚಿತವಾದ ಒಳ್ಳೆಯ ನಡವಳಿಕೆಯು ಅವರಲ್ಲಿರುವುದಿಲ್ಲ.) ಒಬ್ಬನಲ್ಲಿ ಶುಭಕರವಾದ ನಡವಳಿಕೆಯಿರುತ್ತದೆ. ಆದರೆ ಅವನು ಚಿರಾಯುವಾಗಿರುವುದಿಲ್ಲ. (ಹಿರಣ್ಯಕಶಿಪು ಮುಂತಾದವರಲ್ಲಿ ಒಳ್ಳೆಯ ನಡವಳಿಕೆಯಿದ್ದರೂ ಅವರಿಗೆ ಪೂರ್ಣಾಯುಷ್ಯವಿಲ್ಲ. ಅವರು ದೈವದ್ರೋಹಿಗಳಾದುದರಿಂದ ಅವರ ಅವಸಾನವು ಯಾವಾಗಲಾದರೂ ಆಗಿಬಿಡಬಹುದು.) ಒಬ್ಬನಲ್ಲಿ ದೀರ್ಘಾಯುಷ್ಯ ಮತ್ತು ಶೀಲ ಎರಡೂ ಇರುತ್ತದೆ. ಆದರೆ ಮಂಗಳವಿರುವುದಿಲ್ಲ. ಯಾವ ವಿಧವಾದ ದೋಷಗಳೂ ಇಲ್ಲದವನು ಯಾವನಿದ್ದಾನೆಯೋ ಅವನು ನನ್ನನ್ನೇ ಬಯಸುವುದಿಲ್ಲ. (ಪುರುಷೋತ್ತಮನಾದ ಶ್ರೀಹರಿಯು ಇಂತಹ ಯಾವುದೇ ದೋಷಗಳೂ ಇಲ್ಲದವನು. ಆದರೆ ನನ್ನನ್ನು ಮದುವೆಯಾಗಲು ಅವನು ಒಲ್ಲನು.) ಅವನು ಆತ್ಮಾರಾಮನಾಗಿರುವುದೇ ಇದಕ್ಕೆ ಕಾರಣವಾಗಿದೆ.

ಪರೀಕ್ಷಿತನೇ! ಹೀಗೆ ಮಹಾಲಕ್ಷ್ಮಿಯು ಬಹಳವಾಗಿ ಯೋಚಿಸಿ ಕಡೆಗೆ ತನಗೆ ಇಷ್ಟನಾಗಿದ್ದ, ತಾನೂ ಬಹಳವಾಗಿ ಅಪೇಕ್ಷಿಸಿದ್ದ ಮುಕುಂದನನ್ನೇ ಪತಿಯನ್ನಾಗಿ ವರಿಸಿದಳು. ಮುಕುಂದನು ಅಪೇಕ್ಷಿಸದಿದ್ದರೂ ಲಕ್ಷ್ಮೀ ದೇವಿಯೇ ಅವನನ್ನು ವರಿಸಿದ ಕಾರಣವೇನೆಂದರೆ : ನಿರ್ದುಷ್ಟವಾದ ಸಮಸ್ತ ಸದ್ಗುಣಗಳೂ ಅವನಲ್ಲಿಯೇ ವಾಸಮಾಡುತ್ತಿದ್ದುವು. ಪ್ರಾಕೃತಗುಣಗಳು ಅವನನ್ನು ಮುಟ್ಟುತ್ತಲೂ ಇರಲಿಲ್ಲ. ಅಣಿಮಾದಿ ಅಷ್ಟಸಿದ್ಧಿಗಳೂ ಅವನನ್ನೇ ಅಪೇಕ್ಷಿಸುತ್ತಿದ್ದುವು. ಅವನು ಮಾತ್ರ ಯಾವುದನ್ನೂ ಅಪೇಕ್ಷಿಸುತ್ತಿರಲಿಲ್ಲ. ವಾಸ್ತವವಾಗಿ ಮಹಾಲಕ್ಷ್ಮಿಗೆ ಪರಮಾಶ್ರಯನು ಭಗವಂತನಾದ ಶ್ರೀಹರಿಯೇ ಆಗಿದ್ದನು. ಈ ಎಲ್ಲ ಕಾರಣಗಳಿಂದ ಲಕ್ಷ್ಮಿಯು ಶ್ರೀಹರಿಯನ್ನೇ ವರಿಸಿದಳು. ಹೀಗೆ ರಮಾದೇವಿಯು ತನ್ನ ಕೈಯಲ್ಲಿ ಹಿಡಿದಿದ್ದ ಸುಂದರವಾದ, ಮದಿಸಿದ ದುಂಬಿಗಳ ಝೇಂಕಾರದಿಂದ ಕೂಡಿದ್ದ, ವಿನೂತನವಾದ ಕಮಲದ ಹಾರವನ್ನು ಶ್ರೀಮುಕುಂದನ ಕೊರಳಲ್ಲಿ ಹಾಕಿದಳು. ನಾಚಿಕೆಯಿಂದ ಕೂಡಿದ್ದ ಕಿರುನಗೆಯ ನೋಟದಿಂದ ತನ್ನ ವಾಸಸ್ಥಳವಾದ ಮುಕುಂದನ ವಕ್ಷಃಸ್ಥಳವನ್ನೇ ವೀಕ್ಷಿಸುತ್ತಾ ಅವನ ಬಳಿಗೆ ಹೋಗಿ ನಿಂತುಕೊಂಡಳು.

ಜಗತ್ಪತಿಯಾದ ಶ್ರೀಭಗವಂತನು ಜಗಜ್ಜನನಿಯಾದ, ಸಮಸ್ತವಾದ

ಸಂಪತ್ತಿಗೂ ಅಧಿಷ್ಠಾತೃದೇವತೆಯಾದ ಲಕ್ಷ್ಮೀದೇವಿಗೆ ತನ್ನ ವಕ್ಷಃಸ್ಥಳದಲ್ಲಿಯೇ ನಿರಂತರವಾಗಿ ವಾಸಮಾಡಿಕೊಂಡಿರಲು ಸ್ಥಾನವನ್ನು ಕಲ್ಪಿಸಿಕೊಟ್ಟನು. ರಮಾದೇವಿಯು ವಿಷ್ಣುವಿನ ವಕ್ಷಃಸ್ಥಳದಲ್ಲಿಯೇ ವಿರಾಜಮಾನಳಾಗಿರುತ್ತಾ ದಯಾಪೂರ್ಣವಾದ ನೋಟದಿಂದ ಮೂರು ಲೋಕಗಳನ್ನೂ ಲೋಕಪತಿಗಳನ್ನೂ ಮತ್ತು ಅವರ ಪ್ರಜೆಗಳನ್ನೂ ಅಭಿವೃದ್ಧಿಗೊಳಿಸಿದಳು. ಲಕ್ಷ್ಮೀನಾರಾಯಣರ ಮಂಗಳಮಯವಾದ ಆ ವಿವಾಹಸಮಯದಲ್ಲಿ ಯಕ್ಷ-ಗಂಧರ್ವ-ಕಿನ್ನರರೇ ಮೊದಲಾದವರು ತಮ್ಮ ತಮ್ಮ ಪತ್ನಿಯರಿಂದೊಡಗೂಡಿ ಶಂಖ, ಮೃದಂಗ, ಭೇರಿ ಮೊದಲಾದ ವಾದ್ಯಗಳನ್ನು ಬಾರಿಸುತ್ತಾ ಹಾಡುತ್ತಾ-ಪಾಡುತ್ತಾ ನೃತ್ಯವಾಡಿದರು. ಇದರಿಂದಾದ ದೊಡ್ಡದಾದ ಶಬ್ದವು ಎಲ್ಲ ಕಡೆಗಳಲ್ಲಿಯೂ ಪ್ರತಿಧ್ವನಿಸುತ್ತಿದ್ದಿತು. ಬ್ರಹ್ಮ-ರುದ್ರ-ಆಂಗಿರಸ–ಇವರೇ ಮೊದಲಾದ ಸಮಸ್ತಪ್ರಜಾಪತಿಗಳೂ ಶ್ರೀಲಕ್ಷ್ಮೀನಿವಾಸನಾಗಿದ್ದ ಶ್ರೀಹರಿಯ ಮೇಲೆ ಹೂಮಳೆಗರೆಯುತ್ತಾ ಭಗವಂತನ ಗುಣ-ಸ್ವರೂಪ ಮತ್ತು ಲೀಲೆಗಳನ್ನು ಯಥಾವತ್ತಾಗಿ ವರ್ಣಿಸುವ ಮಂತ್ರಗಳಿಂದ ಅವನ ಸ್ತೋತ್ರಮಾಡಿದರು. ಸಮಸ್ತದೇವತೆಗಳೂ, ಪ್ರಜಾಪತಿಗಳೂ ಮತ್ತು ಪ್ರಜೆಗಳೂ ಲಕ್ಷ್ಮೀದೇವಿಯ ಕೃಪಾಕಟಾಕ್ಷದಿಂದ ಸೌಶೀಲ್ಯವೇ ಮೊದಲಾದ ಶ್ರೇಷ್ಠವಾದ ಸದ್ಗುಣಗಳಿಂದ ಸಂಪನ್ನರಾಗಿ ಪರಮಾನಂದವನ್ನು ಹೊಂದಿದರು. (ಶ್ಲೋಕ 23-28)

ಮಹಾರಾಜ! ಯಾವಾಗ ಲಕ್ಷ್ಮೀದೇವಿಯು ದೈತ್ಯ-ದಾನವರನ್ನು ಉಪೇಕ್ಷಿಸಿಬಿಟ್ಟಳೋ ಆಗ ಅವರೆಲ್ಲರೂ ನಿರ್ಬಲರೂ, ನಿಸ್ಸತ್ತ್ವರೂ, ಉದ್ಯೋಗರಹಿತರೂ, ನಿರ್ಲಜ್ಜರೂ, ಕಡುಲೋಭಿಗಳೂ ಆದರು. ಸಮುದ್ರ ಮಂಥನವು ಮುಂದುವರಿಯುತ್ತಿರಲಾಗಿ ಕಮಲಲೋಚನೆಯಾದ, ಕನ್ಯೆಯಾದ (ಮದುವೆಯಿಲ್ಲದ) ಮದ್ಯಾಧಿದೇವತೆಯಾದ ವಾರುಣೀದೇವಿಯು ಹುಟ್ಟಿದಳು. ಮಹಾವಿಷ್ಣುವಿನ ಅನುಮತಿಯನ್ನು ಪಡೆದು ರಾಕ್ಷಸರು ಅವಳನ್ನು ಪರಿಗ್ರಹಿಸಿದರು. ಕಶ್ಯಪನ ಮಕ್ಕಳಾದ ದೇವ-ದಾನವರು ಅಮೃತವನ್ನು ಬಯಸಿ ಸಮುದ್ರಮಂಥನವನ್ನು ಮುಂದುವರಿಸಲು ಪರಮಾದ್ಭುತನಾದ ಪುರುಷನೊಬ್ಬನು ಹುಟ್ಟಿದನು. ಅವನ ತೋಳುಗಳು ನೀಳವಾಗಿಯೂ ದಪ್ಪವಾಗಿಯೂ ಇದ್ದುವು. ಅವನ ಕುತ್ತಿಗೆಯು ಶಂಖವನ್ನು ಹೋಲುತ್ತಿದ್ದಿತು.

ಕಡೆಗಣ್ಣುಗಳು ಕೆಂಪಾಗಿದ್ದುವು. ಅವನು ಶ್ಯಾಮಲವರ್ಣದ ಯುವಕನಾಗಿದ್ದನು. ಮಾಲೆಯಿಂದಲೂ ಸಮಸ್ತವಾದ ಆಭರಣಗಳಿಂದಲೂ ಸಮಲಂಕೃತನಾಗಿದ್ದನು. ಪೀತಾಂಬರವನ್ನುಟ್ಟಿದ್ದನು. ಅವನಿಗೆ ವಿಶಾಲವಾದ ವಕ್ಷಃಸ್ಥಳವಿದ್ದಿತು. ಆತನ ಕಿವಿಗಳಲ್ಲಿ ಕುಂಡಲಗಳು ಜಗಿ-ಜಗಿಸುತ್ತಿದ್ದುವು. ನುಣುಪಾದ ಮುಂಗುರುಳುಗಳು ಜೋಲಾಡುತ್ತಿದ್ದುವು. ಆತನು ಮಂದಹಾಸದಿಂದ ಕೂಡಿದ್ದನು. ಸಿಂಹದಂತೆ ನಡಿಗೆಯುಳ್ಳವನಾಗಿದ್ದನು. ಇಂತಹ ಆ ಮಹಾಪುರುಷನು ಕೈಬಳೆಗಳಿಂದ ಸಮಲಂಕೃತವಾದ ಎರಡು ಕೈಗಳಿಂದಲೂ ಅಮೃತಕಲಶವನ್ನೆತ್ತಿಕೊಂಡು ಮೇಲೆ ಬಂದನು.

ಆ ಮಹಾಪುರುಷನು ವಿಷ್ಣುವಿನ ಅಂಶಾಂಶದಿಂದ ಹುಟ್ಟಿದವನಾಗಿದ್ದನು. ಆಯುರ್ವೇದದ ದ್ರಷ್ಟಾರನಾಗಿದ್ದನು. ಯಜ್ಞದಲ್ಲಿಯೂ ಅವನಿಗೆ ಹವಿರ್ಭಾಗವಿದ್ದಿತು. ಧನ್ವಂತರಿಯೆಂಬ ಹೆಸರಿನಿಂದ ಅವನು ಪ್ರಸಿದ್ಧನಾಗಿದ್ದನು. ಅಮೃತಹಸ್ತನಾಗಿದ್ದ ಧನ್ವಂತರಿಯನ್ನು ಕಂಡಕೂಡಲೇ ಸಮುದ್ರ ಮಂಥನದಿಂದ ಹುಟ್ಟಿದ ವಸ್ತುಗಳೆಲ್ಲವೂ ತಮಗೆ ಸೇರಬೇಕೆಂದು ಹೇಳು ತ್ತಿದ್ದ ಅಸುರ-ದಾನವರು ಧನ್ವಂತರಿಯ ಕೈಯ್ಯಲ್ಲಿದ್ದ ಅಮೃತಕಲಶವನ್ನು ಅಪಹರಿಸಿಕೊಂಡು ಹೊರಟುಹೋದರು. ಅಸುರರಿಂದ ಅಮೃತವು ಅಪಹೃತವಾಗಲು ದೇವತೆಗಳು ಬಹಳವಾಗಿ ವಿಷಾದಿಸಿದರು. ಅನ್ಯಮಾರ್ಗವನ್ನು ಕಾಣದೆ ಅವರು ಶ್ರೀಹರಿಯನ್ನೇ ಮೊರೆಹೊಕ್ಕರು. ದೇವತೆಗಳ ಆ ದೈನ್ಯಾವಸ್ಥೆಯನ್ನು ಕಂಡು ಭಕ್ತರ ಕಲ್ಪತರುವಾದ ಶ್ರೀಮುಕುಂದನು ದೇವತೆಗಳಿಗೆ ಹೇಳಿದನು : (ಶ್ಲೋಕ 29-37)

ಮಾ ಖಿದ್ಯತ ಮಿಥೋಽರ್ಥಂ ವಃ ಸಾಧಯಿಷ್ಯೇ ಸ್ವಮಾಯಯಾ ||

"ದೇವತೆಗಳೇ! ದುಃಖಿಸಬೇಡಿರಿ. ನನ್ನ ಮಾಯೆಯಿಂದಲೇ ನಾನು ನಿಮ್ಮ ಪ್ರಯೋಜನವನ್ನು ಸಾಧಿಸಿಕೊಡುವೆನು."

ಹೀಗೆ ಹೇಳಿ ದೇವತೆಗಳನ್ನು ಸಂತೈಸಿ ಶ್ರೀಹರಿಯು ಅಲ್ಲಿಯೇ ಮಾಯವಾದನು.

ಅಷ್ಟರಲ್ಲಿ ಅಮೃತವನ್ನು ಅಪಹರಿಸಿಕೊಂಡು ಹೋಗಿದ್ದ ದಾನವರಲ್ಲಿಯೇ ಪರಸ್ಪರಕಲಹವು ಪ್ರಾರಂಭವಾಯಿತು. ಅಮೃತಪಾನಾಸಕ್ತ

ರಾಗಿದ್ದ ಅವರಲ್ಲಿ ಕೆಲವರು 'ಅಹಂ ಪೂರ್ವಂ' 'ನಾನು ಮೊದಲು ಕುಡಿಯಬೇಕು'–ಎಂದು ಗರ್ಜಿಸಿದರೆ ಮತ್ತೊಂದು ಗುಂಪಿನವರು 'ನ ತ್ವಂ' 'ನೀನು ಮೊದಲು ಕುಡಿಯಬಾರದು'–ಎಂದು ಗರ್ಜಿಸುತ್ತಿದ್ದರು. ಅವರಲ್ಲಿ ಧರ್ಮಾತ್ಮರಾದ ಕೆಲವರು ಹೀಗೂ ಹೇಳುತ್ತಿದ್ದರು.

ದೇವಾಃ ಸ್ವಂ ಭಾಗಮರ್ಹನ್ತಿ ಯೇ ತುಲ್ಯಾಯಾಸಹೇತವಃ ।
ಸತ್ರಯಾಗ ಇವೈತಸ್ಮಿನ್ನೇಷ ಧರ್ಮಃ ಸನಾತನಃ ॥೩೯॥

"ಅಮೃತಪ್ರಾಪ್ತಿಗಾಗಿ ನಮ್ಮಂತೆಯೇ ಕಷ್ಟಪಟ್ಟಿರುವ ದೇವತೆಗಳೂ ಈ ಅಮೃತದಲ್ಲಿ ಭಾಗವನ್ನು ತೆಗೆದುಕೊಳ್ಳಲು ಯೋಗ್ಯರಾಗಿರುತ್ತಾರೆ. ಸತ್ರಯಾಗದಲ್ಲಿ ಋತ್ವಿಜರೆಲ್ಲರೂ ದಕ್ಷಿಣೆಯನ್ನು ಸಮ-ಸಮವಾಗಿ ಹಂಚಿ ಕೊಳ್ಳುವಂತೆ ಈ ಅಮೃತವನ್ನು ದೇವ-ದಾನವರು ಸಮಾನವಾಗಿ ಹಂಚಿಕೊಳ್ಳಬೇಕು. ಹೀಗೆ ಮಾಡುವುದೇ ಸನಾತನಧರ್ಮವಾಗಿದೆ."

ಪರೀಕ್ಷಿತ! ಹೀಗೆ ಹೊಟ್ಟೆಕಿಚ್ಚಿನಿಂದ ಕೂಡಿದ್ದ ಆ ದೈತ್ಯರು ಪರಸ್ಪರ ವಾಗಿ ಕಚ್ಚಾಡುತ್ತಿದ್ದರು. ಅಮೃತಕಲಶವನ್ನು ಇಟ್ಟುಕೊಂಡಿದ್ದ ಪ್ರಬಲರಾದ ವರನ್ನು ದುರ್ಬಲರಾದವರು ಅಮೃತಪಾನಮಾಡಲು ಸಾಧ್ಯವಾಗದಂತೆ ಬಾರಿಬಾರಿಗೂ ತಡೆಯುತ್ತಿದ್ದರು.

ಅದೇ ಸಮಯಕ್ಕೆ ಸರಿಯಾಗಿ ಸಮಸ್ತವಾದ ಉಪಾಯಗಳನ್ನೂ ತಿಳಿದಿರುವವನೂ, ಲೋಕೇಶ್ವರನೂ ಆದ ಶ್ರೀಹರಿಯು ಪರಮಾದ್ಭುತ ವಾಗಿಯೂ, ಊಹಿಸಲು ಅಸದಳವಾಗಿಯೂ ಇದ್ದ ಮೋಹಿನಿಯ ವೇಷ ವನ್ನು ಧರಿಸಿಕೊಂಡು ಅಲ್ಲಿಗೆ ಬಂದನು. ಪ್ರೇಕ್ಷಣೀಯಳಾದ ಆ ಸುಂದರಿಯ ಶರೀರವು ನೈದಿಲೆಯಂತೆ ಶ್ಯಾಮಲವರ್ಣದಿಂದ ಶೋಭಿಸುತ್ತಿದ್ದಿತು. ಅವಳ ಎಲ್ಲ ಅವಯವಗಳೂ ಕಡುಚೆಲುವಾಗಿದ್ದುವು. ಕಿವಿಗಳೆರಡರಲ್ಲಿಯೂ ಒಂದೇ ಸಮವಾದ ಕುಂಡಲಗಳಿದ್ದುವು. ಅವಳಿಗೆ ಸುಂದರವಾದ ಕೆನ್ನೆಗಳಿದ್ದುವು. ಎತ್ತರವಾದ ಮೂಗಿನಿಂದ ಮುಖವು ಕಂಗೊಳಿಸು ತ್ತಿದ್ದಿತು. ನವಯೌವನದಿಂದಾಗಿ ದುಂಡಾಗಿ ಹೊರಹೊಮ್ಮುತ್ತಿದ್ದ ಸ್ತನಗಳ ಭಾರದಿಂದ ಸೊಂಟವು ಕೃಶವಾಗಿ ಬಳುಕುತ್ತಿರುವಂತೆ ಕಾಣುತ್ತಿದ್ದಿತು. ಮುಖದ ಸುವಾಸನೆಯಿಂದ ಪುಷ್ಪವೆಂದು ಭ್ರಮಿಸಿ ಮುತ್ತಿಡುತ್ತಿದ್ದ

ದುಂಬಿಗಳ ಝೇಂಕಾರದಿಂದ ಆಕೆಯ ಕಣ್ಣಾಲೆಗಳು ಉದ್ವಿಗ್ನವಾಗಿದ್ದುವು. ಜೋಲುಬಿದ್ದಿದ್ದ ತುರುಬಿನಲ್ಲಿ ಅರಳಿದ ಮಲ್ಲಿಗೆಯ ಹಾರವು ಕಂಗೊಳಿಸು ತ್ತಿದ್ದಿತು. ಕಂಠಾಭರಣಗಳಿಂದ ಕುತ್ತಿಗೆಯೂ ಅಂಗದ-ಕೇಯೂರಗಳಿಂದ ತೋಳುಗಳೂ ಸುಂದರವಾಗಿ ಕಾಣುತ್ತಿದ್ದುವು. ದ್ವೀಪಗಳಂತಿದ್ದ ಎರಡು ನಿತಂಬಗಳು ಸ್ವಚ್ಛವಾದ ವಸ್ತ್ರದಿಂದಲೂ, ಡಾಬಿನಿಂದಲೂ ಸಮಲಂಕೃತವಾಗಿ ಸೊಗಸಾಗಿಯೂ ಮನೋಹರವಾಗಿಯೂ ಕಾಣುತ್ತಿದ್ದುವು. ಅವಳ ಕಾಲಂದುಗೆಗಳು ಸುಮಧುರವಾಗಿ ಝುಣ-ಝುಣಶಬ್ದಮಾಡುತ್ತಿದ್ದುವು. ಅಂತಹ ಸರ್ವಾಂಗಸುಂದರಿಯಾಗಿದ್ದ ಮೋಹಿನಿಯು ನಾಚಿಕೆಯಿಂದ ಕೂಡಿದ ಕಿರುನಗೆಯಿಂದಲೂ, ಹಾರಿಸಲ್ಪಡುತ್ತಿದ್ದ ಹುಬ್ಬುಗಳಿಂದಲೂ, ವೈಯ್ಯಾರದ ನೋಟದಿಂದಲೂ ದೈತ್ಯನಾಯಕರ ಮನಸ್ಸಿನಲ್ಲಿದ್ದ ಕಾಮವನ್ನು ಹುಟ್ಟೇಳಿಸಿದಳು. (ಶ್ಲೋಕ 40-46)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಅಷ್ಟಮಸ್ಕಂಧದ ೮ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೯ನೆಯ ಅಧ್ಯಾಯ

ಭಗವಂತನು ಮೋಹಿನೀರೂಪದಲ್ಲಿ ಅಮೃತವನ್ನು ಹಂಚಿದುದು

ಶ್ರೀಶುಕರು ಹೇಳುತ್ತಾರೆ :

ತೇಽನ್ಯೋನ್ಯತೋಽಸುರಾಃ ಪಾತ್ರಂ ಹರನ್ತಸ್ತ್ಯಕ್ತಸೌಹೃದಾಃ ।
ಕ್ಷಿಪನ್ತೋ ದಸ್ಯುಧರ್ಮಾಣ ಆಯಾನ್ತೀಂ ದದೃಶುಃ ಸ್ತ್ರಿಯಮ್ ॥೧॥

ಪರೀಕ್ಷಿತನೇ! ನಾನು ಈ ಹಿಂದೆ ಹೇಳಿದಂತೆ ದಾನವರು ತಮ್ಮ ತಮ್ಮಲ್ಲಿಯೇ ಸದ್ಭಾವವನ್ನೂ ವಿಶ್ವಾಸವನ್ನೂ ದೂರೀಕರಿಸಿ, ಒಬ್ಬರು ಮತ್ತೊಬ್ಬರನ್ನು ನಿಂದಿಸುತ್ತಾ, ಕಳ್ಳರಂತೆಯೇ ಒಬ್ಬರಿಂದ ಮತ್ತೊಬ್ಬರು ಅಮೃತಕಲಶವನ್ನು ಅಪಹರಿಸುತ್ತಾ ಜಗಳವಾಡುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಸುಂದರಿಯಾದ ಸ್ತ್ರೀಯೊಬ್ಬಳು ತಮ್ಮ ಕಡೆಗೆ ಬರುತ್ತಿದ್ದುದನ್ನು ನೋಡಿ ಅವರು ದಂಗುಬಡಿದು ಹೇಳಿದರು :

'ಆಹ! ಎಂತಹ ರೂಪು! ಎಂತಹ ತೇಜಸ್ಸು! ಎಂತಹ ನವ ಯೌವನ!'–ಎಂದು ಉದ್ಗರಿಸುತ್ತಾ ಕಾಮೋದ್ದೀಪ್ತರಾಗಿದ್ದ ಆ ದಾನವರು ಅವಳ ಬಳಿಗೆ ಓಡಿ ಬಂದು ಬೆಸಗೊಂಡರು.

ಕಾ ತ್ವಂ ಕಞ್ಜಪಲಾಶಾಕ್ಷಿ ಕುತೋ ವಾ ಕಿಂ ಚಿಕೀರ್ಷಸಿ ।
ಕಸ್ಯಾಸಿ ವದ ವಾಮೋರು ಮಥ್ನನ್ತೀವ ಮನಾಂಸಿ ನಃ ॥೩॥

"ಪದ್ಮಪತ್ರಾಕ್ಷಿಯೇ! ಸುಂದರಿಯೇ! ನೀನು ಯಾರು? ಎಲ್ಲಿಂದ ಬಂದಿರುವೆ? ಏನು ಮಾಡುವ ಇಚ್ಛೆಯಿಂದ ಇಲ್ಲಿಗೆ ಬಂದಿರುವೆ? ಸುಂದರ ವಾದ ತೊಡೆಗಳುಳ್ಳವಳೇ! ನೀನು ಯಾರಿಗೆ ಸೇರಿದವಳಾಗಿರುವೆ? ನಮ್ಮ ಮನಸ್ಸನ್ನಂತೂ ನೀನು ಕಲಕಿಬಿಟ್ಟಿರುವೆ. ನೀನು ಯಾರೆಂಬುದನ್ನು ಬೇಗ ಹೇಳು.

ಸುಂದರಿಯೇ! ನಮಗೆ ತಿಳಿದಿರುವಂತೆ ದೇವತೆಗಳಾಗಲೀ, ದೈತ್ಯ ರಾಗಲೀ, ಸಿದ್ಧ-ಗಂಧರ್ವ-ಚಾರಣರಾಗಲೀ ನಿನ್ನನ್ನು ಸ್ಪರ್ಶಿಸಿರುವುದಿಲ್ಲ. (ಉಪಭೋಗಿಸಿರುವುದಿಲ್ಲ.) ಹೀಗಿರುವಾಗ ಮನುಷ್ಯರು ನಿನ್ನನ್ನು ಸ್ಪರ್ಶಿ ಸಿಲ್ಲವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಯೇ ಇಲ್ಲ.

ಸುಂದರವಾದ ಹುಬ್ಬುಗಳುಳ್ಳವಳೇ! ಶರೀರವನ್ನು ಧರಿಸಿರುವ ಪ್ರಾಣಿಗಳ ಇಂದ್ರಿಯಗಳಿಗೂ, ಮನಸ್ಸಿಗೂ ಸಂತೋಷವನ್ನುಂಟುಮಾಡುವ ಸಲುವಾಗಿ ಪರಮದಯಾಳುವಾದ ಬ್ರಹ್ಮನೇ ನಿನ್ನನ್ನು ಸೃಷ್ಟಿಸಿ ಇಲ್ಲಿಗೆ ಕಳುಹಿಸಿರಬಹುದೇ? ನಿಜ! ಹಾಗೆಯೇ ಆಗಿರಬೇಕು. ಸುಂದರವಾದ ನಡುವಿನಿಂದ ಕೂಡಿರುವವಳೇ! ಮಾನಿನಿಯೇ! ಹೀಗೆ ವಿಧಿಪ್ರಚೋದಿತ ಳಾಗಿಯೇ ಬಂದಿರುವ ನೀನು, ಒಂದೇ ವಸ್ತುವನ್ನಾಶಿಸಿ ಸೆಣೆಸಾಡುತ್ತಾ ಬದ್ಧವೈರಿಗಳಾಗಿಬಿಟ್ಟಿರುವ ಜ್ಞಾತಿ-ಬಾಂಧವರಾದ ನಮಗೆ ಕ್ಷೇಮ ವನ್ನುಂಟುಮಾಡು. ನಾವೆಲ್ಲರೂ ಕಶ್ಯಪನ ಮಕ್ಕಳು. ಅಣ್ಣ-ತಮ್ಮಂದಿರು. ಈ ಒಂದು ವಸ್ತುವಿಗಾಗಿ ನಮ್ಮ ಪರಾಕ್ರಮವನ್ನು ತೋರಿಸುತ್ತಾ ಕಾದಾಡುತ್ತಿದ್ದೇವೆ. ನಮಗೆ ಸಿಕ್ಕಬೇಕಾಗಿರುವ ಪಾಲಿನಲ್ಲಿ ವ್ಯತ್ಯಾಸವಾಗದಂತೆ ನ್ಯಾಯೋಚಿತವಾಗಿ ಈ ಅಮೃತವನ್ನು ನಮಗೆ ಹಂಚಿಕೊಡು."

ಪರೀಕ್ಷಿತ! ರಾಕ್ಷಸರಿಂದ ಹೀಗೆ ಪ್ರಾರ್ಥಿಸಲ್ಪಟ್ಟ ಮಾಯೆಯಿಂದ

ಹೆಂಗಸಿನ ವೇಷವನ್ನು ಧರಿಸಿದ್ದ ಶ್ರೀಹರಿಯು ಗಹಗಹಿಸಿ ನಗುತ್ತಾ ಸುಂದರವಾದ ಕಟಾಕ್ಷವೀಕ್ಷಣದಿಂದ ದಾನವನಾಯಕರನ್ನು ನೋಡುತ್ತಾ ಈ ಮಾತನ್ನು ಹೇಳಿದನು :

ಕಥಂ ಕಶ್ಯಪದಾಯಾದಾಃ ಪುಂಶ್ಚಲ್ಯಾಂ ಮಯಿ ಸಙ್ಗತಾಃ ।
ವಿಶ್ವಾಸಂ ಪಣ್ಡಿತೋ ಜಾತು ಕಾಮಿನೀಷು ನ ಯಾತಿ ಹಿ ॥೯॥

ಸಾಲಾವೃಕಾಣಾಂ ಸ್ತ್ರೀಣಾಂ ಚ ಸ್ವೈರಿಣೀನಾಂ ಸುರದ್ವಿಷಃ ।
ಸಖ್ಯಾನ್ಯಾಹುರನಿತ್ಯಾನಿ ನೂತ್ನಂ ನೂತ್ನಂ ವಿಚಿನ್ವತಾಮ್ ॥೧೦॥

"ದೈತ್ಯರೇ! ಮಹರ್ಷಿಗಳಾದ ಕಶ್ಯಪರ ಮಕ್ಕಳಾಗಿರುವ ನೀವು ಸ್ವೇಚ್ಛೆಯಿಂದ ಮನೆ ಮನೆಗೂ ತಿರುಗುವ ಕುಲಟೆಯಾದ ನನ್ನೊಡನೆ ಸಾಂಗತ್ಯವನ್ನು ಹೇಗೆ ಬೆಳೆಸುವಿರಿ? ಪಂಡಿತರಾದವರು ಯಾವಾಗಲೂ ಕಾಮಿನಿಯರಲ್ಲಿ ವಿಶ್ವಾಸವನ್ನಿಡುವುದಿಲ್ಲ. ಹೊಸ ಹೊಸ ಪುರುಷನನ್ನು ಹುಡುಕಿಕೊಂಡು ಹೋಗುವ ಜಾರಿಣಿಯರಾದ ಸ್ತ್ರೀಯರ ವಿಷಯ ದಲ್ಲಿಯೂ ತೋಳಗಳ ವಿಷಯದಲ್ಲಿಯೂ ಸ್ನೇಹವೂ ಅನಿತ್ಯವಾದುದೆಂದು ವಿದ್ವಾಂಸರು ಹೇಳುತ್ತಾರೆ."

ಶ್ರೀಶುಕರು ಹೇಳುತ್ತಾರೆ :

ಮಹಾರಾಜ! ಮೋಹಿನಿಯ ಇಂತಹ ಹುಡುಗಾಟದ ಮಾತುಗಳಿಂದ ಅವಳ ವಿಷಯದಲ್ಲಿ ದೈತ್ಯರಿಗೆ ವಿಶ್ವಾಸವೇ ಉಂಟಾಯಿತು. ಅವಳ ಮಾತಿನಿಂದ ಸಂತುಷ್ಟರಾದ ದಾನವರು ಗಂಭೀರವಾದ ಭಾವನೆಯಿಂದ ಗಹಗಹಿಸಿ ನಕ್ಕರು ಮತ್ತು ಅಮೃತಕಲಶವನ್ನು ಮೋಹಿನಿಗೆ ಒಪ್ಪಿಸಿಬಿಟ್ಟರು. ಬಳಿಕ ಶ್ರೀಹರಿಯು ಆ ಅಮೃತಕಲಶವನ್ನು ತೆಗೆದುಕೊಂಡು ಕಿರುನಗೆಯೊಡನೆ ಬೆರೆತ ಸವಿನುಡಿಗಳಿಂದ ಹೇಳಿದನು :

ಯದ್ಯಭ್ಯುಪೇತಂ ಕ್ವ ಚ ಸಾಧ್ವಸಾಧು ವಾ ।
ಕೃತಂ ಮಯಾ ವೋ ವಿಭಜೇ ಸುಧಾಮಿಮಾಮ್ ॥೧೨॥

"ದೈತ್ಯಶಿರೋಮಣಿಗಳೇ! ನನ್ನಿಂದ ಮಾಡಲ್ಪಡುವ ವಿಭಾಗವು ಸರಿ

ಯಾಗಿರಲಿ, ಸರಿಯಾಗಿಲ್ಲದಿರಲಿ ನೀವು ಅದನ್ನು ಸಮ್ಮತಿಸುವುದಾದರೆ ನಿಮ್ಮ ಪ್ರಾರ್ಥನೆಯಂತೆ ಈ ಕಲಶದಲ್ಲಿರುವ ಅಮೃತವನ್ನು ನಾನು ಹಂಚುತ್ತೇನೆ."

ಪರೀಕ್ಷಿತನೇ! ದೈತ್ಯರು ಹೀಗೆ ಆಕೆಯು ಹೇಳಿದ ಮಾತುಗಳನ್ನು ಕೇಳಿ ಅವಳ ಮನಸ್ಸಿನಲ್ಲಿದ್ದ ಅಪ್ರಾಮಾಣ್ಯವನ್ನು ತಿಳಿಯದವರಾಗಿ, ಪರಿಹಾಸಕ್ಕಾಗಿ ಹಾಗೆ ಹೇಳಿರುವಳೆಂದು ಭಾವಿಸಿ ಅವಳ ಮಾತಿಗೆ ಸಮ್ಮತಿಯನ್ನಿತ್ತರು. ಬಳಿಕ ಮೋಹಿನಿಯ ನಿರ್ದೇಶನದಂತೆ ದೇವ-ದಾನವರೆಲ್ಲರೂ ಸ್ನಾನಮಾಡಿ, ಉಪವಾಸವಿದ್ದು, ಹವಿಸ್ಸಿನಿಂದ ಯಜ್ಞೇಶ್ವರನಲ್ಲಿ ಹೋಮಮಾಡಿ, ಗೋ-ಬ್ರಾಹ್ಮಣರಿಗೂ, ಪ್ರಾಣಿಗಳಿಗೂ ಯಥಾಯೋಗ್ಯವಾದ ಉಪಹಾರಗಳನ್ನು ಕೊಟ್ಟು, ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು, ತಮ್ಮ ಇಷ್ಟಾನುಸಾರವಾಗಿ ನೂತನವಾದ ವಸ್ತ್ರಗಳನ್ನು ಧರಿಸಿ* ಗಂಧಮಾಲ್ಯಾದಿಗಳಿಂದ ಅಲಂಕರಿಸಿಕೊಂಡು ಪೂರ್ವಾಗ್ರವಾಗಿದ್ದ ದರ್ಭಾಸನಗಳಲ್ಲಿ ಕುಳಿತುಕೊಂಡರು. ತುಪ್ಪದ ದೀಪಗಳಿಂದ ಬೆಳಗುತ್ತಿದ್ದ, ದಿವ್ಯಪರಿಮಳಗಳಿಂದ ಯುಕ್ತವಾಗಿದ್ದ, ಧೂಪಗಳಿಂದ ಸುವಾಸಿತವಾಗಿದ್ದ ಸುಂದರಮಂದಿರದಲ್ಲಿ ದೇವ-ದಾನವರು ಪೂರ್ವಾಗ್ರಗಳುಳ್ಳ ದರ್ಭಾಸನದಲ್ಲಿ ಕುಳಿತಿದ್ದರು. ಮೋಹಿನಿಯು ಅಮೃತವನ್ನು ಹಿಡಿದು ಆ ಶಾಲೆಯನ್ನು ಪ್ರವೇಶಿಸಿದಳು. ಆ ಸಮಯದಲ್ಲವಳು ಕಮನೀಯವಾದ ಪೀತಾಂಬರದಿಂದ ಆವರಿಸಲ್ಪಟ್ಟು ರಮಣೀಯವಾಗಿ ಕಾಣುತ್ತಿದ್ದ ಪೃಥುವಾದ ನಿತಂಬದ ಭಾರದಿಂದಾಗಿ ಮೆಲ್ಲ-ಮೆಲ್ಲನೆ ನಡೆಯುತ್ತಿದ್ದಳು. ಅವಳ ತೊಡೆಗಳು ದುಂಡಾಗಿಯೂ ಸುಂದರವಾಗಿಯೂ ಇದ್ದುವು. ಅವಳ ಸೊಕ್ಕಿದ ಕಣ್ಣುಗಳು ತಿರುಗುತ್ತಿದ್ದುವು. ಆಕೆಯು ಕುಂಭಸ್ತನಿಯಾಗಿದ್ದಳು. ಚಿನ್ನದ ಕಾಲಂದುಗೆಗಳಿಂದ ಝಣ-ಝಣನೆ ಶಬ್ದಮಾಡುತ್ತಾ ಅಮೃತಹಸ್ತಳಾಗಿ ದೇವ-ದಾನವರಿದ್ದ ಶಾಲೆಯನ್ನು ಪ್ರವೇಶಿಸಿದಳು. ಲಕ್ಷ್ಮೀದೇವಿಯ ಗೆಳತಿಯಂತೆಯೇ ಕಾಣುತ್ತಿದ್ದ,

---

* ಅಹತ (ಒಗೆಯದೇ ಇರುವ) ವಸ್ತ್ರದ ಲಕ್ಷಣ : ಅಹತಂ ಯನ್ತ್ರನಿರ್ಮುಕ್ತ ಮುಕ್ತಂ ವಾಸಃ ಸ್ವಯಮ್ಭುವಾ । ಶಸ್ತಂ ತನ್ಮಾಙ್ಗಲಿಕೇಷು ತಾವನ್ಮಾತ್ರೇ ನ ಸರ್ವದಾ ॥ ನೇಯ್ಗೆಯಿಂದ ಹೊರಬಂದ ವಸ್ತ್ರಕ್ಕೆ ಅಹತವಸ್ತ್ರವೆಂದು ಹೆಸರು. ಅಂತಹ ಒಗೆಯದೇ ಇರುವ ಹೊಸ ವಸ್ತ್ರಗಳನ್ನು ಮಂಗಳಕಾರ್ಯಗಳಲ್ಲಿ ಉಡಬೇಕು.

ಸುವರ್ಣಮಯವಾದ ಕುಂಡಲಗಳಿಂದ ಮನೋಹರವಾಗಿ ಕಾಣುತ್ತಿದ್ದ ಕಿವಿಗಳಿಂದಲೂ, ಸುಂದರವಾದ ಮೂಗಿನಿಂದಲೂ ಮತ್ತು ಕಪೋಲಗಳಿಂದಲೂ ಕೂಡಿ ಶೋಭಾಯಮಾನವಾಗಿ ಕಾಣುತ್ತಿದ್ದ ಮುಖಮಂಡಲದಿಂದ ಮಂಡಿತಳಾಗಿ, ಪರದೇವತೆ–ಎಂದು ವಿಖ್ಯಾತಳಾಗಿದ್ದ, ಜಾರುತ್ತಿರುವ ಸ್ತನಪಟ್ಟಿಯುಳ್ಳವಳಾಗಿದ್ದ ಮೋಹಿನಿಯನ್ನು ನೋಡಿ, ಅವಳ ಮಂದಹಾಸ ಯುಕ್ತವಾದ ಓರೆನೋಟಗಳಿಂದ ಅಲ್ಲಿದ್ದ ದೇವಾಸುರರೆಲ್ಲರೂ ಸಮ್ಮೋಹಿತರಾದರು.

ಸ್ವಭಾವದಿಂದಲೇ ಕ್ರೂರಿಗಳಾದ ದಾನವರಿಗೆ ಅಮೃತವನ್ನು ಕೊಡುವುದು ಹಾವುಗಳಿಗೆ ಹಾಲೆರೆದಂತೆ ನೀತಿಬಾಹಿರವಾಗುವುದೆಂದು ಭಾವಿಸಿ ಅಚ್ಯುತನು ಅವರಿಗೆ ಅಮೃತವನ್ನು ಹಂಚಿಕೊಡಲಿಲ್ಲ. (ಶ್ಲೋಕ 13-19)

ಜಗತ್ಪತಿಯಾದ, ಮೋಹಿನೀರೂಪಧರನಾಗಿದ್ದ ಶ್ರೀಹರಿಯು ಪ್ರತ್ಯೇಕ ಪ್ರತ್ಯೇಕವಾದ ಸಾಲುಗಳಲ್ಲಿ ದೇವ-ದಾನವರನ್ನು ಕುಳ್ಳಿರಿಸಿದನು. ಬಳಿಕ ಅಮೃತಕಲಶವನ್ನು ಹಿಡಿದು ಮರ್ಯಾದೆ, ಸವಿನುಡಿ, ಬೆಡಗು-ಬಿನ್ನಾಣದ ಮಾತುಗಳು, ಓರೆನೋಟ, ಹುಸಿನಗೆ, ಒಯ್ಯಾರ–ಇತ್ಯಾದಿಗಳಿಂದ ದಾನವರನ್ನು ವಂಚಿಸುತ್ತಾ ದೇವತೆಗಳು ದೂರದಲ್ಲಿದ್ದರೂ ಅವರಿಗೆ ಮುಪ್ಪು-ಸಾವುಗಳನ್ನು ತೊಲಗಿಸುವ ಅಮೃತವನ್ನು ಪಾನಮಾಡಿಸಿದನು. ದಾನವರಾದರೋ ತಾವು ಮೋಹಿನಿಗೆ ಕೊಟ್ಟಿದ್ದ ಮಾತಿನಂತೆ ಸುಮ್ಮನಿದ್ದುಬಿಟ್ಟರು. ಮುಖ್ಯವಾಗಿ ಅವರಿಗೆ ಮೋಹಿನಿಯಲ್ಲಿ ಅಪಾರವಾದ ಸ್ನೇಹವಿದ್ದಿತು. ಅವಳ ಕಟಾಕ್ಷವೀಕ್ಷಣವೇ ಅವರಿಗೆ ಅಮೃತಪ್ರಾಯವಾಗಿದ್ದಿತು. ಮೇಲಾಗಿ ಹೆಂಗಸಿನೊಡನೆ ಜಗಳವಾಡುವುದೂ ಅವರಿಗೆ ಜುಗುಪ್ಸಿತವಾಗಿದ್ದಿತು. 'ಸವಿಮಾತುಗಳೇ ಹೊರತು ಅಮೃತದ ಸವಿಯು ತಮಗಾಗಲಿಲ್ಲ'–ಎಂಬ ಅರಿವೂ ಅವರಿಗಿದ್ದಿತು. ಆದರೂ ಅವರು ಮೋಹಿನಿಯನ್ನು ಬಹಳವಾಗಿ ಮೋಹಿಸಿದ್ದರು. ಅವಳ ಸ್ನೇಹಪಾಶದಿಂದ ಬಂಧಿಸಲ್ಪಟ್ಟಿದ್ದರು. ತಾವು ಆಕ್ಷೇಪವೆತ್ತಿದರೆ ಅಂತಹ ಸ್ನೇಹಕ್ಕೆ ಧಕ್ಕೆಯುಂಟಾದೀತೆಂದು ಭಯಪಟ್ಟಿದ್ದರು. ಆದುದರಿಂದ ಅವಳ ವಿಷಯದಲ್ಲಿ ಯಾವ ಅಪ್ರಿಯವಾದ ಮಾತುಗಳನ್ನೂ ಆಡದೆ ಮರ್ಯಾದೆಯಿಂದ ಸ್ವಸ್ಥವಾಗಿ ಕುಳಿತಿದ್ದರು. ದೈವಸಂಕಲ್ಪವನ್ನೂ ಮೀರಿಸಲೋ ಎಂಬಂತೆ ಸ್ವರ್ಭಾನು ಎಂಬ ರಾಕ್ಷಸನು ದೇವತೆಗಳ ವೇಷವನ್ನು ಧರಿಸಿ ಅವರ ಸಾಲಿನಲ್ಲಿಯೇ ಕುಳಿತುಬಿಟ್ಟಿದ್ದನು. ಮೋಹಿನಿಯು ಹಂಚಿಕೊಟ ಅಮೃತ

ವನ್ನು ಪಾನಮಾಡುತ್ತಿರುವ ವೇಳೆಗೆ ಸರಿಯಾಗಿ ಸೂರ್ಯ-ಚಂದ್ರರು, ರಾಕ್ಷಸನು ದೇವತೆಗಳ ವೇಷದಲ್ಲಿ ಬಂದು ಕುಳಿತು ಅಮೃತಪಾನಮಾಡುತ್ತಿರುವುದನ್ನು ಶ್ರೀಹರಿಗೆ ಸೂಚಿಸಿದರು. ಒಡನೆಯೇ ಶ್ರೀಹರಿಯು ಕತ್ತಿಯ ಅಲುಗಿನಂತೆ ಬಹಳ ತೀಕ್ಷ್ಣವಾಗಿದ್ದ ಚಕ್ರದಿಂದ ಅಮೃತಪಾನಮಾಡುತ್ತಿದ್ದ ಸ್ವರ್ಭಾನುವಿನ ತಲೆಯನ್ನು ಕತ್ತರಿಸಿಬಿಟ್ಟನು. ಆ ವೇಳೆಗೆ ಕುಡಿದ ಅಮೃತವು ಗಂಟಲೊಳಗೆ ಹೋಗದೇ ಇದ್ದುದರಿಂದ ಕಬಂಧವು (ತಲೆಯಿಲ್ಲದ ಶರೀರವು) ಬಿದ್ದುಹೋಯಿತು. ಅಮೃತವನ್ನು ಪಾನಮಾಡಿದ ತಲೆಯು ಮಾತ್ರ ದೇವತ್ವವನ್ನು ಹೊಂದಿತು. ದೇವತ್ವವನ್ನು ಹೊಂದಿದ್ದ ಆ ತಲೆಯನ್ನು ಬ್ರಹ್ಮನು ಗ್ರಹವನ್ನಾಗಿ ಮಾಡಿದನು. ಆ ಗ್ರಹವು ಈಗಲೂ ಪರ್ವಕಾಲದಲ್ಲಿ (ಗ್ರಹಣಗಳಲ್ಲಿ) ದ್ವೇಷಬುದ್ಧಿಯುಳ್ಳದ್ದಾಗಿ ಸೂರ್ಯ-ಚಂದ್ರರನ್ನು ನುಂಗಲು ಹೋಗುತ್ತದೆ.

ಹೀಗೆ ಕೃಪಾಳುವಾದ ಭಗವಂತನ ಸಹಾಯದಿಂದ ದೇವತೆಗಳೆಲ್ಲರೂ ಅಮೃತಪಾನಮಾಡಲು ಜಗದ್ರಕ್ಷಕನಾದ, ಶ್ರೀಭಗವಂತನಾದ ಮಹಾ ವಿಷ್ಣುವು ರಾಕ್ಷಸವೀರರು ನೋಡುತ್ತಿದ್ದಂತೆಯೇ ಮೋಹಿನೀರೂಪವನ್ನು ಬಿಟ್ಟು ನಿಜರೂಪವನ್ನು ತಾಳಿದನು. (ಶ್ಲೋಕ 20-27)

ಏವಂ ಸುರಾಸುರಗಣಾಃ ಸಮದೇಶಕಾಲ-
ಹೇತ್ವರ್ಥಕರ್ಮಮತಯೋಽಪಿ ಫಲೇ ವಿಕಲ್ಪಾಃ ।
ತತ್ರಾಮೃತಂ ಸುರಗಣಾಃ ಫಲಮಞ್ಜಸಾಽಽಪು-
ರ್ಯತ್ಪಾದಪಙ್ಕಜರಜಃಶ್ರಯಣಾನ್ನ ದೈತ್ಯಾಃ ॥೨೮॥

ಪರೀಕ್ಷಿತ! ಹೀಗೆ ದೇವ-ದಾನವರು ಒಂದೇ ಕಡೆಯಲ್ಲಿ, ಒಂದೇ ಕಾಲದಲ್ಲಿ, ಅಮೃತರೂಪವಾದ ಒಂದೇ ಪ್ರಯೋಜನವನ್ನುದ್ದೇಶಿಸಿ, ಒಂದೇ ವಿಧವಾದ ಧೈರ್ಯ ಮತ್ತು ಬುದ್ಧಿಯುಳ್ಳವರಾಗಿ, ಒಂದೇಸಮನಾಗಿ ಶ್ರಮಿಸಿದರೂ ವ್ಯತ್ಯಾಸವಾದ ಫಲಗಳನ್ನು ಹೊಂದಿದರು. ಭಗವಂತನ ಪಾದಕಮಲಗಳ ಆಶ್ರಯದಿಂದ ದೇವತೆಗಳು ಅಮೃತವನ್ನು ಪಡೆದರು. ಭಗವಂತನನ್ನು ವಿರೋಧಿಸುವವರಾದುದರಿಂದ ದೈತ್ಯರಿಗೆ ಅಮೃತವು ಸಿಕ್ಕಲಿಲ್ಲ.

ಯದ್ಯುಜ್ಯತೇಽಸುಕರ್ಮಮನೋವಚೋಭಿ-
ರ್ದೇಹಾತ್ಮಜಾದಿಷು ನೃಭಿಸ್ತದಸತ್ಪೃಥಕ್ತ್ವಾತ್
ತೈರೇವ ಸದ್ಭವತಿ ಯತಿ ಯತೇಽಪೃಥಕ್ತ್ವಾ
ತ್ಸರ್ವಸ್ಯ ತದ್ಭವತಿ ಮೂಲನಿಷೇಚನಂ ಯತ್ ॥೨೯॥

ಮನುಷ್ಯನು ತನ್ನ ಪ್ರಾಣ, ಧನ, ಕರ್ಮ, ಮನಸ್ಸು, ಮಾತು–ಇವುಗಳಿಂದ ತನ್ನ ಶರೀರಕ್ಕಾಗಿ, ಪತ್ನೀ-ಪುತ್ರ-ಬಂಧುಗಳಿಗಾಗಿ ಯಾವುದನ್ನು ಮಾಡುವನೋ ಅವೆಲ್ಲವೂ ವ್ಯರ್ಥವೇ ಸರಿ. ಏಕೆಂದರೆ ಅದರಲ್ಲಿ 'ನಾನು-ನನ್ನದು'–ಎಂಬ ಭೇದಬುದ್ಧಿಯಿರುತ್ತದೆ. ಆದರೆ ಅದೇ ಪ್ರಾಣ-ಧನ-ಮಾತು-ಮನಸ್ಸು-ಕಾಯಗಳಿಂದ 'ನಾನು' 'ನನ್ನದು' ಎಂಬ ಅಭಿಮಾನವನ್ನು ತೊರೆದು ಭಗವಂತನ ಸಲುವಾಗಿ ಮಾಡಿದುದೆಲ್ಲವೂ ಸಾರ್ಥಕವಾಗುತ್ತದೆ. ಶರೀರ-ಪುತ್ರ-ಪತ್ನಿಯರಿಗೂ ಹಿತವಾಗುತ್ತದೆ. ಸಂಸಾರಕ್ಕೆ ಮೂಲ ಪುರುಷನು ಪರಮಾತ್ಮ. ಪರಮಾತ್ಮನ ಅರ್ಚನೆಯಿಂದ ಸಂಸಾರಕ್ಕೆ ಹಿತವಾಗುತ್ತದೆ. ಬುಡಕ್ಕೆ ನೀರೆರೆದರೆ ಅದು ವೃಕ್ಷಗಳಲ್ಲಿರುವ ಎಲೆ-ಚಿಗುರು-ಹೂವು-ಹಣ್ಣು-ಎಲ್ಲಕ್ಕೂ ತಲುಪುತ್ತದೆ. ಆದುದರಿಂದ ಯಾವುದೇ ಕಾರ್ಯವನ್ನೇ ಮಾಡಿದರೂ ಅದನ್ನು ಶ್ರೀಭಗವಂತನಿಗೇ ಅರ್ಪಿಸಿಬಿಡಬೇಕು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೧೦ನೆಯ ಅಧ್ಯಾಯ

ದೇವಾಸುರರ ಯುದ್ಧ

ಶ್ರೀಶುಕಮುನಿಗಳು ಹೇಳುತ್ತಾರೆ :

ಇತಿ ದಾನವದೈತೇಯಾ ನಾವಿನ್ದನ್ನಮೃತಂ ನೃಪ ।
ಯುಕ್ತಾಃ ಕರ್ಮಣಿ ಯತ್ತಾಶ್ಚ ವಾಸುದೇವಪರಾಙ್ಮುಖಾಃ ॥೧॥

ಮಹಾರಾಜ! ಯದ್ಯಪಿ ದೈತ್ಯ-ದಾನವರು ಅಧಿಕಪ್ರಯಾಸದಿಂದಲೂ ಅತ್ಯಂತಸಾಹಸದಿಂದಲೂ ಕಡಲನ್ನು ಕಡೆಯುವ ಕೆಲಸದಲ್ಲಿ ಪಾಲು

ಗೊಂಡರೂ ಅವರು ವಾಸುದೇವನನ್ನು ಆಶ್ರಯಿಸದೇ ಇದ್ದುದರಿಂದ ಅವರಿಗೆ ಅಮೃತವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ.

ಹಿಂದೆಯೇ ಹೇಳಿದಂತೆ ಗರುಡಧ್ವಜನಾದ ಮಹಾವಿಷ್ಣುವು ದಾನವರಲ್ಲಿದ್ದ ಅಮೃತಕಲಶವನ್ನು ಉಪಾಯಾಂತರದಿಂದ ಪಡೆದುಕೊಂಡು ಅದನ್ನು ತನ್ನವರಾದ ದೇವತೆಗಳಿಗೆ ಪಾನಮಾಡಿಸಿ ಸಮಸ್ತಪ್ರಾಣಿಗಳೂ ನೋಡುತ್ತಿರುವಂತೆಯೇ ಗರುಡಾರೂಢನಾಗಿ ಹೊರಟುಹೋದನು.

ದೈತ್ಯರು ತಮ್ಮ ಶತ್ರುಗಳಾದ ದೇವತೆಗಳಿಗೆ ಅಮೃತಪಾನವೆಂಬ ಶ್ರೇಷ್ಠವಾದ ಫಲವು ದೊರೆತದ್ದನ್ನು ನೋಡಿ ಸಹಿಸಿಕೊಳ್ಳಲಾರದೆ ಆಯುಧಗಳನ್ನೆತ್ತಿಕೊಂಡು ದೇವತೆಗಳನ್ನು ಆಕ್ರಮಿಸಿದರು. ಅಮೃತಪಾನದಿಂದ ವಿಶೇಷವಾದ ಶಕ್ತಿಯನ್ನು ಪಡೆದುಕೊಂಡವರಾಗಿ ನಾರಾಯಣನನ್ನೇ ಆಶ್ರಯಿಸಿದ್ದ ದೇವತೆಗಳೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ದೈತ್ಯರನ್ನು ಎದುರಿಸಿದರು. ದೇವಾಸುರಸಂಗ್ರಾಮವೆಂಬ ಹೆಸರಿನಿಂದ ದೇವತೆಗಳಿಗೂ ಮತ್ತು ದಾನವರಿಗೂ ಸಮುದ್ರತೀರದಲ್ಲಿ ಪರಮದಾರುಣವಾದ, ರೋಮಾಂಚಕರವಾದ, ಭೀಕರವಾದ ಯುದ್ಧವು ಪ್ರಾರಂಭವಾಯಿತು. ದೇವ-ದಾನವರಿಬ್ಬರೂ ಒಬ್ಬರಿಗೊಬ್ಬರಿಗೆ ಪರಮಶತ್ರುಗಳಾಗಿದ್ದರು. ಎರಡು ಪಕ್ಷದವರೂ ಕ್ರೋಧಾಭಿಭೂತರಾಗಿದ್ದರು. ದೇವಾಸುರರು ಒಬ್ಬರನ್ನೊಬ್ಬರು ಎದುರಿಸಿ ನಿಂತು ಕತ್ತಿಗಳಿಂದಲೂ, ಬಾಣಗಳಿಂದಲೂ, ಇತರ ಅಸ್ತ್ರ-ಶಸ್ತ್ರಗಳಿಂದಲೂ ಪರಸ್ಪರವಾಗಿ ಪ್ರಹರಿಸತೊಡಗಿದರು. ಆ ಸಮಯದಲ್ಲಿ ಶಂಖ-ತೂರ್ಯ-ಮೃದಂಗಾದಿಗಳ ಮತ್ತು ಭೇರಿ-ಡಮರುಗವೇ ಮುಂತಾದುವುಗಳ ಶಬ್ದವೂ, ಆನೆಗಳ ಘೀಂಕಾರವೂ, ಕುದುರೆಗಳ ಕೆನೆಯುವ ಶಬ್ದವೂ, ರಥಗಳ ಗಡ-ಗಡಾ ಶಬ್ದವೂ, ಪದಾತಿಗಳ ಸಿಂಹನಾದವೂ ಸರ್ವತ್ರ ಕೇಳಿ ಬರುತ್ತಿದ್ದಿತು. ಆ ಮಹಾಯುದ್ಧದಲ್ಲಿ ರಥಿಕರು-ರಥಿಕರೊಡನೆಯೂ, ಕಾಲಾಳುಗಳು-ಕಾಲಾಳುಗಳೊಡನೆಯೂ, ಕುದುರೆಸವಾರರು-ಕುದುರೆಸವಾರರೊಡನೆಯೂ, ಗಜಸೈನಿಕರು-ಗಜಸೈನಿಕರೊಡನೆಯೂ ಕಾದಾಡುತ್ತಿದ್ದರು. ಆ ದೇವಾಸುರಸಂಗ್ರಾಮದಲ್ಲಿ ಕೆಲವರು ಒಂಟೆಗಳ ಮೇಲೂ, ಕೆಲವರು ಆನೆಗಳ ಮೇಲೂ, ಕೆಲವರು ಕತ್ತೆಗಳ ಮೇಲೂ, ಕೆಲವರು ಗೌರಮೃಗಗಳ ಮೇಲೂ, ಕೆಲವರು ಕರಡಿ-ಹುಲಿ-ಸಿಂಹಗಳ ಮೇಲೂ ಕುಳಿತು ಯುದ್ಧಮಾಡುತ್ತಿದ್ದರು.

ಇತರ ಕೆಲವು ದೇವತೆಗಳು ಮತ್ತು ಅಸುರರು ಹದ್ದುಗಳ ಮೇಲೂ, ಬಕಗಳ ಮೇಲೂ, ಗಿಡಗ-ತಿಮಿಂಗಿಲಗಳ ಮೇಲೂ, ಶರಭ-ಮಹಿಷಗಳ ಮೇಲೂ, ಖಡ್ಗಮೃಗಗಳ ಮೇಲೂ, ಎತ್ತು ಮತ್ತು ಗವಯಗಳ ಮೇಲೂ ಕುಳಿತು ಯುದ್ಧಮಾಡುತ್ತಿದ್ದರು. ದೇವ-ರಾಕ್ಷಸರಲ್ಲಿ ಕೆಲವರು ರುಣಗಳೆಂಬ ಪ್ರಾಣಿಗಳ ಮೇಲೂ, ನರಿಗಳ ಮೇಲೂ, ಇಲಿಗಳ ಮೇಲೂ, ಓತಿಕೇತಗಳ ಮೇಲೂ, ಮೊಲಗಳ ಮೇಲೂ, ಮನುಷ್ಯರ ಮೇಲೂ, ಕೆಲವರು ಟಗರು, ಜಿಂಕೆಗಳ ಮೇಲೂ, ಕೆಲವರು ಹಂಸಗಳ ಮೇಲೂ, ಕೆಲವರು ಹಂದಿಗಳ ಮೇಲೂ, ಕೆಲವರು ನೀರುಹಕ್ಕಿಗಳ ಮೇಲೂ, ಕೆಲವರು ವಿಕಾರವಾದ ಆಕೃತಿಗಳುಳ್ಳ ಪ್ರಾಣಿಗಳ ಮೇಲೂ ಕುಳಿತು ಯುದ್ಧಮಾಡುತ್ತಿದ್ದರು. ಇಂತಹ ಚಿತ್ರ-ವಿಚಿತ್ರವಾದ ವಾಹನಗಳ ಮೇಲೆ ಕುಳಿತು ದೇವ-ದಾನವರು ಮುಂದೆ-ಮುಂದೆ ಧಾವಿಸುತ್ತಿದ್ದರು.

ಪರೀಕ್ಷಿತಮಹಾರಾಜ! ಚಿತ್ರ-ವಿಚಿತ್ರವಾದ ಬಗೆ-ಬಗೆಯಾದ ಧ್ವಜ ಪಟಗಳಿಂದಲೂ, ಬಿಳುಪಾಗಿಯೂ ಮತ್ತು ನಿರ್ಮಲವಾಗಿಯೂ ಇದ್ದ ಶ್ವೇತ ಛತ್ರಗಳಿಂದಲೂ, ಬಹುಮೂಲ್ಯವಾದ ವಜ್ರಖಚಿತವಾದ ದಂಡಗಳಿಂದ ಯುಕ್ತವಾಗಿದ್ದ ಬೀಸಣಿಗೆಗಳಿಂದಲೂ, ನವಿಲುಗರಿಗಳಿಂದ ಮಾಡಿದ ಚಾಮರಗಳಿಂದಲೂ, ಗಾಳಿಯಿಂದ ಚಲಿಸಲ್ಪಡುತ್ತಿದ್ದ ಸೈನಿಕರ ಉತ್ತರೀಯ ಗಳಿಂದಲೂ ಮತ್ತು ಉಷ್ಣೀಶಗಳಿಂದಲೂ, ಸೈನಿಕರು ಧರಿಸಿದ್ದ ಥಳ-ಥಳಿಸುವ ವಜ್ರಾಭರಣಗಳಿಂದಲೂ, ಸೂರ್ಯನ ಕಿರಣಗಳಿಂದ ಥಳ-ಥಳನೆ ಮಿಂಚುತ್ತಿದ್ದ ಕತ್ತಿಯೇ ಮೊದಲಾದ ಆಯುಧಗಳಿಂದಲೂ, ವೀರಮಾಲೆ ಗಳನ್ನು ಧರಿಸಿದ್ದ ಸೈನಿಕರಿಂದಲೂ ಸಂಪನ್ನವಾಗಿದ್ದ ಆ ಮಹಾದಾನವರ ಸೈನ್ಯವು ರಮಣೀಯಜಂತುಗಳಿಂದ ಕೂಡಿದ ಸಮುದ್ರದಂತೆಯೇ ರಾರಾಜಿಸುತ್ತಿದ್ದಿತು. (ಶ್ಲೋಕ 2-15)

ಮಹಾರಾಜ! ರಣಭೂಮಿಯಲ್ಲಿ ದೈತ್ಯರ ಸೇನಾಪತಿಯಾಗಿದ್ದ ವಿರೋಚನನ ಮಗನಾದ ಬಲಿಚಕ್ರವರ್ತಿಯು ಮಯನಿರ್ಮಿತವಾಗಿದ್ದ ವೈಹಾಯಸವೆಂಬ ವಿಮಾನದಲ್ಲಿ ಕುಳಿತಿದ್ದನು. ಆ ವಿಮಾನವು, ಕುಳಿತಿದ್ದ ವರು ಇಚ್ಛಿಸಿದೆಡೆಗೆ ಹೋಗುವುದಾಗಿದ್ದಿತು. ಯುದ್ಧದ ಸಮಸ್ತಸಾಮಗ್ರಿ ಗಳಿಂದಲೂ ಅದು ಸಂಪನ್ನವಾಗಿದ್ದಿತು. ಆ ವಿಮಾನವು ಅತ್ಯಂತ ಆಶ್ಚರ್ಯ

ಕರವಾಗಿದ್ದು ಕೆಲವು ವೇಳೆ ಕಾಣಿಸಿಕೊಳ್ಳುತ್ತಿದ್ದಿತು. ಕೆಲವು ವೇಳೆ ಅದೃಶ್ಯ ವಾಗಿರುತ್ತಿದ್ದಿತು. ಅದು ಎಲ್ಲಿದೆಯೆಂದು ಯಾರಿಗೂ ಹೇಳಲು ಸಾಧ್ಯವಾಗು ತ್ತಿರಲಿಲ್ಲ. ಊಹಿಸಲೂ ಕೂಡ ಸಾಧ್ಯವಾಗುತ್ತಿರಲಿಲ್ಲ. ಅಂತಹ ಶ್ರೇಷ್ಠವಾದ ವೈಹಾಯಸವೆಂಬ ವಿಮಾನದಲ್ಲಿ ಬಲಿಯು ಕುಳಿತಿದ್ದನು. ಅವನು ತನ್ನ ಎಲ್ಲ ಸೇನಾಪತಿಗಳಿಂದಲೂ ಸುತ್ತುವರಿಯಲ್ಪಟ್ಟಿದ್ದನು. ಚಾಮರ-ಬೀಸಣಿಗೆ-ಬೆಳ್ಗೊಡೆ ಇವೇ ಮುಂತಾದುವುಗಳಿಂದ ಕೂಡಿದ್ದ ಬಲಿಯು ಆಗ ತಾನೇ ಉದಯಿಸಿದ ಚಂದ್ರನಂತೆಯೇ ಪ್ರಕಾಶಿಸುತ್ತಿದ್ದನು.

ಬಲಿಚಕ್ರವರ್ತಿಯ ವೈಹಾಯಸ ವಿಮಾನವನ್ನು ನಾಲ್ಕು ಕಡೆ ಗಳಿಂದಲೂ ಸುತ್ತುವರಿದು ಯೂಥಪತಿಗಳಾದ ನಮುಚಿ, ಶಂಬರ, ಬಾಣ, ವಿಪ್ರಚಿತ್ತಿ, ಅಯೋಮುಖ, ದ್ವಿಮೂರ್ಧಾ, ಕಾಲನಾಭ, ಪ್ರಹೇತಿ, ಹೇತಿ, ಇಲ್ವಲ, ಶಕುನಿ, ಭೂತಸಂತಾಪ, ವಜ್ರದಂಷ್ಟ್ರ, ವಿರೋಚನ, ಹಯಗ್ರೀವ, ಶಂಕುಶಿರಸ, ಕಪಿಲ, ಮೇಘದುಂದುಭಿ, ತಾರಕ, ಚಕ್ರದೃಕ್, ಶುಂಭ, ನಿಶುಂಭ, ಜಂಭ, ಉತ್ಕಲ, ಅರಿಷ್ಟ, ಅರಿಷ್ಟನೇಮಿ, ತ್ರಿಪುರಾಧಿಪತಿಯಾದ ಮಯ, ಪೌಲೋಮ, ಕಾಲೇಯ ಮತ್ತು ನಿವಾತಕವಚರು—ಇವರೇ ಮೊದಲಾದವರು ವಿಮಾನಾರೂಢರಾಗಿ ಯುದ್ಧಸನ್ನದ್ಧರಾಗಿದ್ದರು. ಇವರೆಲ್ಲರೂ ಸಮುದ್ರವನ್ನು ಕಡೆಯುವುದರಲ್ಲಿ ಭಾಗವಹಿಸಿದ್ದವರೇ. ಆದರೆ ಅವರಿಗೆ ಅಮೃತವು ಸಿಕ್ಕಲಿಲ್ಲ. ಕ್ಲೇಶವು ಮಾತ್ರ ಉಳಿಯಿತು. ಹಿಂದೆ ಈ ರಾಕ್ಷಸರು ಹಲವು ಬಾರಿ ದೇವತೆಗಳನ್ನು ಪರಾಜಯಗೊಳಿಸಿಯೂ ಇದ್ದರು. ಅದರಿಂದಾಗಿ ದಾನವರು ಈಗಲೂ ಅತ್ಯುತ್ಸಾಹದಿಂದ ಸಿಂಹನಾದಮಾಡು ತ್ತಿದ್ದರು. ಘೋರವಾದ ಶಬ್ದವುಳ್ಳ ಶಂಖಗಳನ್ನು ಊದುತ್ತಿದ್ದರು. ಸ್ವರ್ಗಾಧಿಪತಿಯಾದ ಇಂದ್ರನು, ಗರ್ವದಿಂದ ಕೊಬ್ಬಿ ಯುದ್ಧೋದ್ಯತರಾಗಿ ಬಂದಿದ್ದ ಶತ್ರುಗಳನ್ನು ನೋಡಿ ಕ್ರುದ್ಧನಾದನು. ಗಿರಿ-ನದಿಗಳಿಂದ ಕೂಡಿದ ಉದಯಾಚಲವನ್ನೇರಿ ಪ್ರಕಾಶಿಸುವ ಸೂರ್ಯನಂತೆ ಇಂದ್ರನು ಮದೋದಕ ವನ್ನು ಸುರಿಸುತ್ತಿದ್ದ ಐರಾವತವೆಂಬ ದಿಗ್ಗಜದ ಮೇಲೆ ಕುಳಿತು ಬಹಳವಾಗಿ ಪ್ರಕಾಶಿಸಿದನು. ಐರಾವತಾರೂಢನಾಗಿದ್ದ ದೇವೇಂದ್ರನ ಸುತ್ತಲೂ ಅನೇಕ ವಿಧವಾದ ವಾಹನಗಳಿಂದಲೂ, ಧ್ವಜಗಳಿಂದಲೂ, ಆಯುಧಗಳಿಂದಲೂ ಯುಕ್ತರಾಗಿದ್ದ ವಾಯು-ಅಗ್ನಿ-ವರುಣ—ಇವರೇ ಮುಂತಾದ ದೇವತೆಗಳು

ತಮ್ಮ ತಮ್ಮ ಗಣಗಳೊಡನೆ ಯುದ್ಧಸನ್ನದ್ಧರಾಗಿ ನಿಂತರು. ದೇವ-ದಾನವರ ಸೈನ್ಯಗಳು ಎದುರು-ಬದುರಾಗಿ ನಿಂತುವು. ಇಬ್ಬಿಬ್ಬರೇ ನಿಂತು ಮಾಡುವ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. ಕೆಲವರು ಮುಂದೆ ಬಂದು ತಮಗೆ ಬೇಕಾದ ಎದುರಾಳಿಯನ್ನು ಹೆಸರು ಹಿಡಿದು ಕರೆಯುತ್ತಿದ್ದರು. ಕೆಲವರು ಮರ್ಮವನ್ನು ಭೇದಿಸುವ ಚುಚ್ಚುಮಾತುಗಳನ್ನಾಡುತ್ತಾ ಯುದ್ಧಕ್ಕೆ ಆಹ್ವಾನಿಸುತ್ತಿದ್ದರು. ಹೀಗೆ ದೇವ-ದಾನವರಿಗೆ ದ್ವಂದ್ವಯುದ್ಧವು ಪ್ರಾರಂಭ ವಾಯಿತು.

ಬಲಿಯು ಇಂದ್ರನೊಡನೆಯೂ, ತಾರಕನು ಕುಮಾರಸ್ವಾಮಿಯೊಡ ನೆಯೂ, ಹೇತಿಯು ವರುಣನೊಡನೆಯೂ, ಪ್ರಹೇತಿಯು ಸೂರ್ಯನೊಡ ನೆಯೂ ದ್ವಂದ್ವಯುದ್ಧವನ್ನು ಆರಂಭಿಸಿದರು.

ಯಮನು ಕಾಲನಾಭನೊಡನೆಯೂ, ವಿಶ್ವಕರ್ಮನು ಮಯನೊಡ ನೆಯೂ, ಶಂಬರಾಸುರನು ತ್ವಷ್ಟೃವಿನೊಡನೆಯೂ, ಸವಿತೃವು ವಿರೋಚನ ನೊಡನೆಯೂ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. (ಶ್ಲೋಕ 16-29)

ಅಂತೆಯೇ ನಮುಚಿಯು ಅಪರಾಜಿತನೊಡನೆಯೂ, ಅಶ್ವಿನೀ ಕುಮಾರರು ವೃಷಪರ್ವನೊಡನೆಯೂ ದ್ವಂದ್ವಯುದ್ಧದಲ್ಲಿ ತೊಡಗಿದರು. ಸೂರ್ಯನು ಬಲಿಯ ಹಿರಿಯ ಮಗನಾದ ಬಾಣನೇ ಮೊದಲಾದ ನೂರು ಮಂದಿ ಮಕ್ಕಳೊಡನೆ ಯುದ್ಧಮಾಡುತ್ತಿದ್ದನು. ಚಂದ್ರನು ರಾಹುವಿ ನೊಡನೆಯೂ, ವಾಯುವು ಪುಲೋಮನೊಡನೆಯೂ, ವೇಗವತಿಯಾದ ಭದ್ರಕಾಳಿಯು ನಿಶುಂಭ-ಶುಂಭರೊಡನೆಯೂ ಯುದ್ಧಮಾಡತೊಡಗಿದರು. ಜಂಭಾಸುರನೊಡನೆ ಮಹಾದೇವನೂ, ಮಹಿಷಾಸುರನೊಡನೆ ಅಗ್ನಿ ದೇವನೂ, ವಾತಾಪಿ ಮತ್ತು ಇಲ್ವಲರೊಡನೆ ಬ್ರಹ್ಮನ ಮಕ್ಕಳಾದ ಮರೀಚಿಯೇ ಮೊದಲಾದವರೂ, ದುರ್ಮರ್ಷಣನೊಡನೆ ಕಾಮದೇವನೂ, ಉತ್ಕಲನೊಡನೆ ಮಾತೃದೇವತೆಗಳೂ, ಶುಕ್ರಾಚಾರ್ಯರೊಡನೆ ಬೃಹಸ್ಪತ್ಯಾ ಚಾರ್ಯರೂ, ನರಕಾಸುರನೊಡನೆ ಶನೈಶ್ಚರನೂ ಕಾಳಗಮಾಡಲು ಪ್ರಾರಂಭಿ ಸಿದರು. ನಿವಾತಕವಚರೊಡನೆ ಮರುದ್ಗಣಗಳೂ, ಕಾಲಕೇಯರೊಡನೆ ವಸು

ಗಣಗಳೂ, ಪೌಲೋಮರೊಡನೆ ವಿಶ್ವೇದೇವಗಣಗಳೂ, ಕ್ರೋಧವಶರೊಡನೆ ರುದ್ರಗಣಗಳೂ ದ್ವಂದ್ವಯುದ್ಧದಲ್ಲಿ ತೊಡಗಿದುವು. ಹೀಗೆ ದೇವತೆಗಳು ಮತ್ತು ಅಸುರರು ರಣಭೂಮಿಯಲ್ಲಿ ದ್ವಂದ್ವಯುದ್ಧದ ಮೂಲಕವಾಗಿಯೂ, ಸಾಮೂಹಿಕಯುದ್ಧದ ಮೂಲಕವಾಗಿಯೂ ಒಂದು ಪಕ್ಷದವರು ಮತ್ತೊಂದು ಪಕ್ಷದವರನ್ನು ಎದುರಿಸುತ್ತಾ, ಪರಸ್ಪರವಾಗಿ ವಿಜಯಿಗಳಾಗಬೇಕೆನ್ನುವ ಇಚ್ಛೆಯಿಂದ ತೀಕ್ಷ್ಣವಾದ ಕತ್ತಿಗಳಿಂದಲೂ, ಭಲ್ಲಗಳಿಂದಲೂ ಒಬ್ಬರನ್ನೊಬ್ಬರು ಪ್ರಹರಿಸತೊಡಗಿದರು. ಭುಶುಂಡಿ, ಚಕ್ರ, ಗದೆ, ಭಲ್ಲ, ಪರಿಘ, ಮುದ್ಗರ, ಭಿಂದಿಪಾಲ–ಇವೇ ಮೊದಲಾದ ಆಯುಧಗಳಿಂದ ಒಬ್ಬರು ಮತ್ತೊಬ್ಬರ ಶಿರಸ್ಸುಗಳನ್ನು ಕತ್ತರಿಸಿಹಾಕಲು ಪ್ರಾರಂಭಿಸಿದರು. ಭಯಂಕರವಾಗಿದ್ದ ಆ ಮಹಾಯುದ್ಧದಲ್ಲಿ ಗಜಾಶ್ವ-ಸೈನಿಕರ, ರಥಿಕರ, ಪದಾತಿಗಳ, ಸೇನಾಪತಿಗಳ ತೋಳು, ತೊಡೆ, ತಲೆ, ಕಾಲುಗಳೂ ಅವರು ಧರಿಸಿದ್ದ ಧ್ವಜ, ಗದೆ, ಕತ್ತಿ, ಕವಚ, ಒಡವೆಗಳೂ ಛಿನ್ನ-ಭಿನ್ನವಾದುವು. ಸೈನಿಕರ ಕಾಲುಗಳ ಸಂಘಟ್ಟನೆಯಿಂದಲೂ ರಥಚಕ್ರಗಳ ಹರಿದಾಟದಿಂದಲೂ ಚೂರ್ಣೀಕೃತವಾಗಿ ರಣರಂಗದಿಂದ ಮೇಲೆದ್ದ ಧೂಳಿಯು ಎಲ್ಲ ದಿಕ್ಕುಗಳನ್ನೂ, ಅಂತರಿಕ್ಷವನ್ನೂ, ಸೂರ್ಯನನ್ನೂ ಮುಚ್ಚಿಬಿಟ್ಟಿತು. ಆದರೆ ಮರುಕ್ಷಣದಲ್ಲಿಯೇ ಕತ್ತರಿಸಲ್ಪಟ್ಟ ಸೈನಿಕರ ಶರೀರದಿಂದ ಪ್ರವಾಹರೂಪವಾಗಿ ಹರಿದ ರಕ್ತದಿಂದ ಅಂತಹ ಅಗಾಧವಾದ ಧೂಳಿಯೂ ಉಡುಗಿಹೋಯಿತು. ಆ ಭಯಂಕರವಾದ ರಣಾಂಗಣವು ಸ್ವಲ್ಪಹೊತ್ತಿನಲ್ಲಿಯೇ ಕತ್ತರಿಸಲ್ಪಟ್ಟ ಶಿರಸ್ಸುಗಳಿಂದ ತುಂಬಿಹೋಯಿತು. ಸೈನಿಕರ ಕಿರೀಟಗಳೂ, ಕುಂಡಲಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಸತ್ತು ಕೆಳಗೆ ಬಿದ್ದಿದ್ದ ಕೆಲವರ ಕಣ್ಣುಗಳಲ್ಲಿ ಕ್ರೋಧದ ಚಿಹ್ನೆಯು ಕಾಣುತ್ತಿದ್ದಿತು. ಕೆಲವರು ಹಲ್ಲುಗಳಿಂದ ತುಟಿಗಳನ್ನು ಕಚ್ಚಿದ್ದರು. ಹಲವಾರು ಸೈನಿಕರ ಶಸ್ತ್ರಸಜ್ಜಿತವಾದ ಮತ್ತು ಆಭರಣಗಳಿಂದ ಸಮಲಂಕೃತವಾದ ತೋಳುಗಳು ಕತ್ತರಿಸಲ್ಪಟ್ಟು ಯುದ್ಧಭೂಮಿಯಲ್ಲಿ ಬಿದ್ದಿದ್ದುವು. ಕೆಲವರ ದುಂಡಾದ ತೊಡೆಗಳು ಕತ್ತರಿಸಲ್ಪಟ್ಟು ರಣರಂಗದಲ್ಲಿ ಬಿದ್ದಿದ್ದುವು. ಹೀಗೆ ಕತ್ತರಿಸಲ್ಪಟ್ಟ ಮುಂಡಗಳಿಂದಲೂ, ರುಂಡಗಳಿಂದಲೂ ಕೈ-ಕಾಲುಗಳಿಂದಲೂ

ವ್ಯಾಪ್ತವಾಗಿದ್ದ ಆ ರಣರಂಗವು ಬಹಳ ಭಯಂಕರವಾಗಿ ಕಾಣುತ್ತಿದ್ದಿತು. ಆ ರಣರಂಗದ ಕೆಲವು ಕಡೆಗಳಲ್ಲಿ ತಲೆಯಿಲ್ಲದ ಮುಂಡಗಳು (ತಲೆಯು ಬಿದ್ದು ಹೋಗಿದ್ದರೂ) ಆಯುಧಪಾಣಿಗಳಾಗಿ ಮುನ್ನಡೆಯುತ್ತಿದ್ದುವು. ಇದನ್ನು ನೋಡಿದರೆ ಅವುಗಳ ಶಿರಸ್ಸಿನಲ್ಲಿದ್ದ ಕಣ್ಣುಗಳ ಮೂಲಕವಾಗಿ ಶತ್ರುಗಳನ್ನು ನೋಡುತ್ತಾ ಆಯುಧಗಳಿಂದ ಕೂಡಿದ ತೋಳುಗಳನ್ನೆತ್ತಿಕೊಂಡು ಶತ್ರುಗಳ ಮೇಲೆ ಬೀಳುತ್ತಿವೆಯೋ ಎಂಬಂತೆ ಕಾಣುತ್ತಿದ್ದಿತು. ಇತ್ತಲಾಗಿ ಬಲಿಚಕ್ರ ವರ್ತಿಯು ತನಗೆ ಎದುರಾಗಿ ನಿಂತು ಯುದ್ಧಮಾಡುತ್ತಿದ್ದ ಮಹೇಂದ್ರನನ್ನು ಹತ್ತು ಬಾಣಗಳಿಂದಲೂ ಅವನ ವಾಹನವಾದ ಐರಾವತವನ್ನು ಮೂರು ಬಾಣಗಳಿಂದಲೂ ನಾಲ್ಕು ಅಂಗರಕ್ಷಕರನ್ನು ನಾಲ್ಕು ಬಾಣಗಳಿಂದಲೂ ಮಾವಟಿಗನನ್ನು ಒಂದು ಬಾಣದಿಂದಲೂ ಪ್ರಹರಿಸಿದನು. ಶೀಘ್ರವಿಕ್ರಮ ನಾದ ಇಂದ್ರನು ತನ್ನ ಮೇಲೆ ಬೀಳಲಿದ್ದ ಬಾಣಗಳನ್ನು, ಆ ಬಾಣಗಳು ತನ್ನ ಬಳಿಗೆ ಬರುವುದರೊಳಗಾಗಿಯೇ ಅಷ್ಟೇ ಸಂಖ್ಯೆಯ ಭಲ್ಲಗಳಿಂದ ನಗು-ನಗುತ್ತಲೇ ಕತ್ತರಿಸಿಹಾಕಿದನು. ಇಂದ್ರನ ಅಂತಹ ಶ್ರೇಷ್ಠವಾದ ಧನುರ್ವಿದ್ಯಾ ಪಾಂಡಿತ್ಯವನ್ನು ಕಂಡು ಸೈರಿಸಲಾರದೇ ಇಂದ್ರನ ಮೇಲೆ ಪ್ರಯೋಗಿಸುವ ಸಲುವಾಗಿ ಬಲಿಯು ಶಕ್ತ್ಯಾಯುಧವನ್ನೆತ್ತಿದನು. ಇಂದ್ರನು ಮರುಕ್ಷಣ ದಲ್ಲಿಯೇ ಪ್ರಜ್ವಲಿಸುತ್ತಿದ್ದ ಪಂಜಿನಂತೆ ಉರಿಯುತ್ತಿದ್ದ ಬಲಿಚಕ್ರವರ್ತಿಯ ಕೈಯಲ್ಲಿದ್ದ ಶಕ್ತ್ಯಾಯುಧವನ್ನು ಕತ್ತರಿಸಿಹಾಕಿದನು. ಬಳಿಕ ಬಲಿಯು ರೋಷಾವೇಶದಿಂದ ಕೈಗೆತ್ತಿಕೊಂಡ ಶೂಲ, ಪ್ರಾಸ, ತೋಮರ, ಋಷ್ಟಿ– ಇವೇ ಮುಂತಾದ ಆಯುಧಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಇಂದ್ರನು ಕತ್ತರಿಸಿಹಾಕಿದನು. ಯಾವುದೇ ಆಯುಧವನ್ನು ಬಲಿಯು ತೆಗೆದು ಕೊಂಡರೂ ಅದನ್ನು ಪ್ರಯೋಗಿಸಲೂ ಕೂಡ ಅವಕಾಶವಾಗದಂತೆ ಶೀಘ್ರ ವಿಕ್ರಮನಾದ ಇಂದ್ರನು ಆ ಎಲ್ಲ ಆಯುಧಗಳನ್ನೂ ಕತ್ತರಿಸಿಹಾಕುತ್ತಿದ್ದನು. ಇಂದ್ರನನ್ನು ಸಂಹರಿಸಬೇಕೆಂಬ ತನ್ನ ಪ್ರಯತ್ನಗಳೆಲ್ಲವೂ ವ್ಯರ್ಥವಾದನಂತರ ಬಲಿಚಕ್ರವರ್ತಿಯು ಆಸುರೀಮಾಯೆಯನ್ನು ಸೃಷ್ಟಿಸಿ ಮಾಯವಾದನು. ಮರುಕ್ಷಣದಲ್ಲಿಯೇ ದೊಡ್ಡ ಪರ್ವತವೊಂದು ದೇವಸೈನ್ಯದ ಮೇಲೆ ಬಿದ್ದಿತು. ಅದನ್ನನುಸರಿಸಿ ಕಾಡುಗಿಚ್ಚಿನಿಂದ ಸುಡಲ್ಪಡುತ್ತಿದ್ದ ವೃಕ್ಷಗಳು ಬೀಳತೊಡಗಿ

ದುವು. ಬಳಿಕ ಕಲ್ಲುಳಿಗಳಂತೆ ಹರಿತವಾದ ಶಿಖರಗಳಿಂದ ಕೂಡಿದ್ದ ಬೆಟ್ಟಗಳೂ ದೇವಸೈನ್ಯವನ್ನು ಚೂರ್ಣಗೊಳಿಸುತ್ತಾ ರಣರಂಗದಲ್ಲಿ ಬಿದ್ದುವು.

(ಶ್ಲೋಕ 30-46)

ಅನಂತರ ಹೆಬ್ಬಾವುಗಳೂ, ಚೇಳುಗಳಿಂದ ಕೂಡಿದ ವಿಷಸರ್ಪಗಳೂ, ಹುಲಿ-ಕರಡಿಗಳೂ, ಆನೆಗಳನ್ನು ಧ್ವಂಸಮಾಡುವ ಸಿಂಹಗಳೂ, ಹಿಂಡು-ಹಿಂಡಾಗಿ ಯುದ್ಧಭೂಮಿಗೆ ನುಗ್ಗಿಬಂದುವು. ಶೂಲಾಯುಧವನ್ನು ಕೈಯಲ್ಲಿ ಹಿಡಿದಿರುವ ಬೆತ್ತಲೆಯಾಗಿರುವ ರಾಕ್ಷಸಿಯರೂ ಮತ್ತು ರಾಕ್ಷಸರ ಗುಂಪು ಗಳೂ 'ಕಡಿ-ಬಡಿ-ತಿವಿ'–ಎಂದು ಅರಚಿಕೊಳ್ಳುತ್ತಾ ಸಮರಾಂಗಣಕ್ಕೆ ನುಗ್ಗಿ ದುವು. ಆಕಾಶದಲ್ಲಿ ಗಂಭೀರವಾಗಿಯೂ, ಕಠೋರವಾಗಿಯೂ ಇದ್ದ ಧ್ವನಿ ಯಿಂದ ಕೂಡಿದ್ದ ಮಹಾಮೇಘಗಳು ಗಾಳಿಯಿಂದ ಹೊಡೆಯಲ್ಪಟ್ಟುವುಗಳಾಗಿ ಗುಡುಗುತ್ತಾ ಬೆಂಕಿಯ ಮಳೆಗರೆದುವು. ದೈತ್ಯನಾದ ಬಲಿಚಕ್ರ ವರ್ತಿಯ ಮಾಯೆಯಿಂದ ಸೃಷ್ಟಿಸಲ್ಪಟ್ಟಿದ್ದ ಬೃಹದಾಕಾರವಾಗಿ ಸುತ್ತಲೂ ಹರಡುತ್ತಿದ್ದ ಆ ಬೆಂಕಿಯು ಗಾಳಿಯ ಸಹಾಯವನ್ನು ಪಡೆದು ಪ್ರಳಯ ಕಾಲದ ಅಗ್ನಿಯಂತೆ ಅತಿಭಯಂಕರವಾಗಿ ದೇವಸೈನ್ಯವನ್ನು ಸುಡತೊಡಗಿತು. ಬಳಿಕ ಚಂಡಮಾರುತಗಳಿಂದ ಎಬ್ಬಿಸಲ್ಪಟ್ಟ ಅಲೆಗಳಿಂದಲೂ, ಸುಳಿ ಗಳಿಂದಲೂ ಕೂಡಿದ್ದ ಸಮುದ್ರವು ಎಲ್ಲ ಕಡೆಗಳಿಂದಲೂ ಎಲ್ಲೆಯನ್ನು ಮೀರಿ ಮುನ್ನುಗ್ಗಿ ಬರುತ್ತಿರುವಂತೆ ಕಾಣುತ್ತಿದ್ದಿತು. (ಶ್ಲೋಕ 47-51)

ಪರೀಕ್ಷಿತನೇ! ಹೀಗೆ ಭಯಂಕರರಾದ ಅಸುರರು ಅದೃಶ್ಯರಾಗಿ ಚಿತ್ರ-ವಿಚಿತ್ರವಾದ ಮಾಯೆಗಳನ್ನು ಸೃಷ್ಟಿಮಾಡಿ ದೇವತೆಗಳ ಸೈನ್ಯವನ್ನು ಪೀಡಿಸುತ್ತಿದ್ದರು. ಅವರು ಅದೃಶ್ಯರಾಗಿದ್ದುದರಿಂದ ಅವರ ಮೇಲೆ ಶಸ್ತ್ರಾಸ್ತ್ರ ಗಳನ್ನು ಪ್ರಯೋಗಿಸಲೂ ಸಾಧ್ಯವಾಗುತ್ತಿರಲಿಲ್ಲ. ಈ ಕಾರಣದಿಂದಾಗಿ ದೇವತೆಗಳು ಬಹಳ ಖಿನ್ನರಾದರು. ಅಸುರರು ಕಲ್ಪಿಸಿದ್ದ ಮಾಯೆಗೆ ಪ್ರತೀ ಕಾರ ಮಾಡಲು ಇಂದ್ರನೇ ಮೊದಲಾದ ದೇವತೆಗಳು ಬಹಳವಾಗಿ ಯೋಚಿಸಿ ದರು. ಆದರೆ ಅವರಿಂದ ಅದು ಸಾಧ್ಯವಾಗಲಿಲ್ಲ. ಮಾಯೆಯನ್ನು ಹೋಗ ಲಾಡಿಸಲು ಏನು ಮಾಡಬೇಕೆಂಬುದು ಅವರಿಗೆ ತಿಳಿದಿರಲಿಲ್ಲ. ಆಗ ದೇವತೆಗಳು ಜಗದ್ರಕ್ಷಕನಾದ ಪರಬ್ರಹ್ಮಪರಮಾತ್ಮನನ್ನೇ ಅನನ್ಯಭಕ್ತಿಯಿಂದ ಧ್ಯಾನಮಾಡಿದರು. ಭಕ್ತಪರಾಧೀನನಾದ ಶ್ರೀಹರಿಯು ಒಡನೆಯೇ ದೇವ

ಸೈನ್ಯದ ಮಧ್ಯದಲ್ಲಿ ಆವಿರ್ಭವಿಸಿದನು. ಗರುಡನ ಹೆಗಲ ಮೇಲೆ ಭಗವಂತನ ಚರಣಕಮಲಗಳು ವಿರಾಜಮಾನವಾಗಿದ್ದುವು. ಭಗವಂತನಿಗೆ ಆಗ ತಾನೇ ಅರಳಿದ ಕಮಲಗಳಂತೆ ವಿಶಾಲವಾದ ಮತ್ತು ಸುಂದರವಾದ ನೇತ್ರಗಳಿದ್ದುವು. ದೇವದೇವನು ಪೀತಾಂಬರವನ್ನು ಧರಿಸಿದ್ದನು. ಎಂಟುಕೈಗಳಿಂದ ಎಂಟು ದಿವ್ಯಾಯುಧಗಳನ್ನು ಧರಿಸಿದ್ದನು. ಎದೆಯಲ್ಲಿ ಕೌಸ್ತುಭಮಣಿಯೂ, ತಲೆಯಲ್ಲಿ ಅಮೂಲ್ಯವಾದ ಕಿರೀಟವೂ, ಕಿವಿಗಳಲ್ಲಿ ದಿವ್ಯಕುಂಡಲಗಳೂ ರಾರಾಜಿಸುತ್ತಿದ್ದುವು. ಇಂತಹ ದಿವ್ಯವಾದ ಕಾಂತಿಯಿಂದ ಶ್ರೀಭಗವಂತನು ದೇವತೆಗಳಿಗೆ ಕಾಣಿಸಿಕೊಂಡನು. ಪರಮಪುರುಷಪರಮಾತ್ಮನು ಪ್ರಕಟವಾದೊಡನೆಯೇ ಅವನ ಪ್ರಭಾವದಿಂದ–ಎಚ್ಚರಗೊಂಡೊಡನೆಯೇ ಸ್ವಪ್ನವು ವಿನಾಶವಾಗುವಂತೆ–ರಾಕ್ಷಸರು ಮಂತ್ರಶಕ್ತಿಯಿಂದ ಕಲ್ಪಿಸಿದ್ದ ಮಾಯೆಯು ಪ್ರಕೃತಿಯಲ್ಲಿ ಲೀನವಾಗಿಹೋಯಿತು. **''ಹರಿಸ್ಮೃತಿಃ ಸರ್ವವಿಪದ್ವಿಮೋಕ್ಷಣಮ್''**–ಶ್ರೀಹರಿಯ ಸ್ಮರಣೆಯು ಸಮಸ್ತವಾದ ವಿಪತ್ತನ್ನೂ ಪರಿಹರಿಸುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಅಸುರಕಲ್ಪಿತವಾಗಿದ್ದ ಮಾಯೆಯು ಶ್ರೀಹರಿಯ ಪ್ರಭಾವದಿಂದ ನಾಶವಾಯಿತಾದರೂ ಯುದ್ಧವು ನಡೆಯುತ್ತಲೇ ಇದ್ದಿತು. ಮಾಯೆಯನ್ನು ನಿವಾರಿಸಿದ ಮಾಯಾತೀತನಾದ ಗರುಡವಾಹನನಾದ ಶ್ರೀಹರಿಯನ್ನು ಕಂಡು ಸಿಂಹದ ಮೇಲೆ ಕುಳಿತಿದ್ದ ಕಾಲನೇಮಿಯೆಂಬ ರಾಕ್ಷಸನು ಭಯಂಕರವಾಗಿದ್ದ ಶೂಲಾಯುಧವನ್ನು ಗರ-ಗರನೆ ತಿರುಗಿಸಿ ಶ್ರೀಹರಿಯ ಮೇಲೆ ಪ್ರಯೋಗಿಸಿದನು. ತ್ರಿಲೋಕೇಶ್ವರನಾದ ಶ್ರೀಹರಿಯಾದರೋ ಗರುಡನ ತಲೆಯ ಮೇಲೆ ಬೀಳಲಿದ್ದ ಆ ಶೂಲಾಯುಧವನ್ನು ಲೀಲಾಜಾಲವಾಗಿ ಹಿಡಿದು ಆ ಶೂಲಾಯುಧದಿಂದಲೇ ಸಿಂಹವಾಹನನಾಗಿದ್ದ ಕಾಲನೇಮಿಯನ್ನು ಸಂಹರಿಸಿದನು. ಬಳಿಕ ಮಾಲಿ ಮತ್ತು ಸುಮಾಲಿ ಎಂಬ ಇಬ್ಬರು ಮಹಾಬಲಿಷ್ಠರಾಗಿದ್ದ ರಾಕ್ಷಸರು ಶ್ರೀಹರಿಯನ್ನು ಆಕ್ರಮಿಸಿದರು. ಶ್ರೀಹರಿಯು ಕ್ಷಣಮಾತ್ರದಲ್ಲಿ ಅವರ ತಲೆಗಳನ್ನು ಚಕ್ರಾಯುಧದಿಂದ ಕತ್ತರಿಸಿಬಿಟ್ಟನು. ಬಳಿಕ ಮಾಲ್ಯವಂತನೆಂಬ ಮಹಾದೈತ್ಯನು ತನ್ನ ಸಹೋದರರಾದ ಮಾಲಿ-ಸುಮಾಲಿಗಳು ಹತರಾದುದನ್ನು ಕಂಡು ಪರಮಕ್ರುದ್ಧನಾಗಿ ಪ್ರಚಂಡವಾದ ಗದೆಯನ್ನು ತಿರುಗಿಸುತ್ತಾ ಅದನ್ನು ಗರುಡನ ಮೇಲೆ ಬಹಳ ವೇಗವಾಗಿ ಪ್ರಯೋಗಿಸಿದನು. ಗರುಡ

ನನ್ನು ಗದೆಯಿಂದ ಪ್ರಹರಿಸಿ ಗರ್ಜನೆಮಾಡುತ್ತಿರುವಾಗಲೇ ಶ್ರೀಹರಿಯು ತನ್ನ ದಿವ್ಯವಾದ ಚಕ್ರದಿಂದ ಮಾಲ್ಯವಂತನ ಶಿರಸ್ಸನ್ನು ಕತ್ತರಿಸಿಬಿಟ್ಟನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಅಷ್ಟಮಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೧೧ನೆಯ ಅಧ್ಯಾಯ

ದೇವಾಸುರಸಂಗ್ರಾಮದ ಪರಿಸಮಾಪ್ತಿ

ಶ್ರೀಶುಕಮುನಿಗಳು ಹೇಳುತ್ತಾರೆ :

ಅಥೋ ಸುರಾಃ ಪ್ರತ್ಯುಪಲಬ್ಧಚೇತಸಃ
ಪರಸ್ಯ ಪುಂಸಃ ಪರಯಾನುಕಮ್ಪಯಾ ।
ಜಘ್ನುರ್ಭೃಶಂ ಶಕ್ರಸಮೀರಣಾದಯ-
ಸ್ತಾಂಸ್ತಾನ್ರಣೇ ಯೈರಭಿಸಂಹತಾಃ ಪುರಾ ॥೧॥

ಪರೀಕ್ಷಿತನೇ! ಪರಮಪುರುಷನಾದ ಶ್ರೀಭಗವಂತನ ನಿರತಿಶಯವಾದ ಕೃಪೆಯಿಂದಾಗಿ ದೇವತೆಗಳ ಭಯವು ದೂರವಾಗಿ ಅವರಲ್ಲಿ ನವಚೇತನ ವುಂಟಾಯಿತು. ಈ ಹಿಂದೆ ಇಂದ್ರ-ವಾಯುಗಳೇ ಮೊದಲಾದ ದೇವತೆಗಳು ಯಾವ ಯಾವ ದೈತ್ಯರನ್ನು ಎದುರಿಸಿ ದ್ವಂದ್ವಯುದ್ಧಮಾಡುತ್ತಿದ್ದರೋ ಪುನಃ ಅದೇ ದೈತ್ಯರನ್ನೆದುರಿಸಿ ಶೌರ್ಯದಿಂದ ಯುದ್ಧಮಾಡಲು ಪ್ರಾರಂಭಿಸಿ ಅವರನ್ನು ಬಹಳವಾಗಿ ಪೀಡಿಸತೊಡಗಿದರು. ಮಹಾಮಹಿಮನಾದ ಇಂದ್ರನು ಅತ್ಯಂತಕ್ರುದ್ಧನಾಗಿ ಬಲಿಯನ್ನು ಸಂಹರಿಸಬೇಕೆಂಬ ಆಶಯದಿಂದ ವಜ್ರಾಯುಧವನ್ನೆತ್ತಿದನು. ಒಡನೆಯೇ ಸಮಸ್ತ ಪ್ರಜೆಗಳೂ 'ಅಯ್ಯೋ! ಅಯ್ಯೋ!' ಎಂದು ಕೂಗಿಕೊಂಡರು. ಬಲಿಚಕ್ರವರ್ತಿಯು ಅಸ್ತ್ರ-ಶಸ್ತ್ರಗಳಿಂದ ಸಜ್ಜಾಗಿ ನಿರ್ಭಯವಾಗಿ ಪರಮೋತ್ಸಾಹದಿಂದ ಯುದ್ಧಭೂಮಿಯಲ್ಲಿ ಸಂಚರಿಸುತ್ತಿದ್ದನು. ತನ್ನ ಎದುರಿಗೆ ಬಂದ ಅವನನ್ನು ತಿರಸ್ಕಾರಭಾವದಿಂದ ಕಾಣುತ್ತಾ ವಜ್ರಪಾಣಿಯಾದ ಇಂದ್ರನು ಬಲಿಗೆ ಹೇಳಿದನು :

"ಮೂರ್ಖ! ನಟನಂತೆ, ಮಾಯೆಗೆ ಈಶರಾದ ನಮ್ಮನ್ನೇ ಮಾಯೆ

ಯಿಂದ ಜಯಿಸಲು ಆಶಿಸುವೆಯಾ? ನಟನೊಬ್ಬನು (ಯಕ್ಷಿಣಿ ಮಾಡುವವನು) ಕುತೂಹಲದಿಂದ ಆಟವನ್ನು ನೋಡಲು ಬಂದ ಮಕ್ಕಳನ್ನು ಪರಿಹಾಸದ ಮಾತುಗಳಿಂದ ಗೆದ್ದು, ಅವರ ಕಣ್ಣುಗಳನ್ನು ಕಟ್ಟಿ ಅವರಲ್ಲಿರುವ ಹಣವನ್ನು ಅಪಹರಿಸುತ್ತಾನೆ. ಹಾಗೆಯೇ ನಮ್ಮ ವಿಷಯದಲ್ಲಿಯೂ ಸಾಧ್ಯವಾಗಬಹುದೆಂದು ನೀನು ಭಾವಿಸಿರಬಹುದು. ಇದು ನಿನ್ನ ಮೂರ್ಖತನವೇ ಸರಿ.

ಯಾವ ಮೂರ್ಖರು ಮಾಯೆಯನ್ನೇ ಆಶ್ರಯಿಸಿ ಅಧೋಲೋಕಗಳಿಂದ ಸ್ವರ್ಗಲೋಕಕ್ಕೆ ಬಂದು ಅಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸಲು ಇಚ್ಛಿಸುವರೋ ಮತ್ತು ಅದೇ ಮಾಯೆಯಿಂದಲೇ ಇನ್ನೂ ಮೇಲಿನ ಲೋಕಗಳಿಗೆ ಹೋಗಲು ಪ್ರಯತ್ನಿಸುವರೋ–ಅಂತಹ ದಸ್ಯುಗಳೆಲ್ಲರನ್ನೂ ನಾನೀಗಲೇ ಸಂಹಾರಮಾಡುತ್ತೇನೆ. ಅವರು ಈಗಿರುವ ಸ್ಥಾನಗಳಿಗಿಂತಲೂ ಕೆಳಗಿನ ಸ್ಥಾನಗಳಿಗೆ ಹೋಗುವಂತೆ ಮಾಡುತ್ತೇನೆ.

ಮಂದಮತಿಯೇ! ನಾನೀಗಲೇ ನೂರು ಗಿಣ್ಣುಗಳಿಂದ ಕೂಡಿರುವ ಈ ನನ್ನ ಅಜೇಯವಾದ ವಜ್ರಾಯುಧದಿಂದ, ದುಷ್ಟವಾದ ಮಾಯೆಯಿಂದ ಕೂಡಿರುವ ನಿನ್ನ ತಲೆಯನ್ನು ಕತ್ತರಿಸಿಹಾಕುತ್ತೇನೆ. ನೀನು ನಿನ್ನ ಜ್ಞಾತಿಗಳೊಡನೆ ಸೇರಿಕೊಂಡು ಇದಕ್ಕೆ ಪ್ರತಿಯಾಗಿ ಏನು ಮಾಡಲು ಸಾಧ್ಯವಿರುವುದೋ ಅದನ್ನು ಮಾಡು." (ಶ್ಲೋಕ 2-6)

ಇಂತಹ ಈ ಗರ್ಜನೆಯನ್ನು ಕೇಳಿ ಬಲಿಚಕ್ರವರ್ತಿಯು ಶಾಂತನಾಗಿಯೇ ಉತ್ತರಿಸಿದನು :

ಸಙ್ಗ್ರಾಮೇ ವರ್ತಮಾನಾನಾಂ
ಕಾಲಚೋದಿತಕರ್ಮಣಾಮ್ ।
ಕೀರ್ತಿರ್ಜಯೋಽಜಯೋ ಮೃತ್ಯುಃ
ಸರ್ವೇಷಾಂ ಸ್ಯುರನುಕ್ರಮಾತ್ ॥೭॥

"ಮಹೇಂದ್ರ! ಯಾರು ಕಾಲಶಕ್ತಿಯ ಪ್ರೇರಣೆಯಿಂದ ತಮ್ಮ ಕರ್ಮಕ್ಕೆ ಅನುಸಾರವಾಗಿ ಯುದ್ಧಮಾಡುವರೋ ಅವರಿಗೆ ಜಯ ಅಥವಾ

ಅಪಜಯ, ಯಶಸ್ಸು ಅಥವಾ ಅಪಯಶಸ್ಸು, ಮೃತ್ಯು–ಇವುಗಳು ಅನುಕ್ರಮವಾಗಿ ಆಗುತ್ತಲೇ ಇರುತ್ತವೆ.

ತದಿದಂ ಕಾಲರಶನಂ ಜನಾಃ ಪಶ್ಯನ್ತಿ ಸೂರಯಃ ।
ನ ಹೃಷ್ಯನ್ತಿ ನ ಶೋಚನ್ತಿ ತತ್ರ ಯೂಯಮಪಣ್ಡಿತಾಃ ॥೮॥

ಆದುದರಿಂದ ಪಂಡಿತರಾದವರು ಕೀರ್ತಿ, ಜಯ, ಅಪಜಯ–ಇವೇ ಮುಂತಾದುವನ್ನು ಪಡೆದುಕೊಂಡ ಜನರನ್ನು ಕಾಲಪಾಶಕ್ಕೆ ಕಟ್ಟುಬಿದ್ದವ ರೆಂದು ಭಾವಿಸಿ ಜಯಗಳಿಸಿದರೆ ಸಂತೋಷಿಸುವುದೂ ಇಲ್ಲ ; ಪರಾಜಯವಾದರೆ ಸಂಕಟಪಡುವುದೂ ಇಲ್ಲ. ಆ ವಿಷಯದಲ್ಲಿ ನೀವು ತಿಳಿವಳಿಕೆಯಿಲ್ಲದವರು.

ನ ವಯಂ ಮನ್ಯಮಾನಾನಾಮಾತ್ಮಾನಂ ತತ್ರ ಸಾಧನಮ್ ।
ಗಿರೋ ವಃ ಸಾಧುಶೋಚ್ಯಾನಾಂ ಗೃಹ್ಣೀಮೋ ಮರ್ಮತಾಡನಾಃ ॥

ಕೀರ್ತಿಗಳಿಸುವುದರಲ್ಲಿ ಜಯಗಳಿಸುವುದರಲ್ಲಿ ದೈವದ ಅಸ್ತಿತ್ವವೇನೂ ಇಲ್ಲ ; ಕೇವಲ ಶಾರೀರಕಶೌರ್ಯದಿಂದ ಸಾಧ್ಯವಾಗತಕ್ಕುದು–ಎಂದು ಭಾವಿಸಿರುವ ನಿನ್ನ ಮಾತನ್ನು ಸಾಧುಗಳು ಶೋಚನೀಯವಾದ ಮಾತುಗಳೆಂದು ಭಾವಿಸುತ್ತಾರೆ. ಆದುದರಿಂದ ನಿನ್ನ ಮರ್ಮಭೇದಿಗಳಾದ ಮಾತನ್ನು ನಾವೂ ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ."

ವೀರರಿಗೆ ಮರ್ಯಾದೆಯನ್ನು ಕೊಡುವ ಶೂರನಾದ ಬಲಿಚಕ್ರವರ್ತಿಯು ಹೀಗೆ ಪ್ರಭುವಾದ ಇಂದ್ರನನ್ನು ನಿಂದಿಸಿ, ತಿರಸ್ಕಾರದ ಮಾತುಗಳಿಂದ ಪ್ರಹರಿಸಲ್ಪಟ್ಟಿದ್ದ ಇಂದ್ರನನ್ನು ಪುನಃ ಕಿವಿಯವರೆಗೂ ಸೆಳೆಯಲ್ಪಟ್ಟ ತೀಕ್ಷ್ಣವಾದ ಬಾಣಗಳಿಂದ ಪ್ರಹರಿಸಿದನು.

ಹೀಗೆ ಸತ್ಯವಾದಿಯಾದ ಮತ್ತು ವೀರನಾದ ಬಲಿಯಿಂದ ತಿರಸ್ಕರಿಸಲ್ಪಟ್ಟ ದೇವೇಂದ್ರನು–ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ಆ ಬಲಿಯಾಡಿದ ಮಾತುಗಳನ್ನು ಸಹಿಸಿಕೊಳ್ಳಲಿಲ್ಲ. ಅರಿಮರ್ದನನಾದ ಇಂದ್ರನು ಬಲಿಯು ಬಿಟ್ಟ ಬಾಣಗಳಿಗೆ ಪ್ರತಿಯಾಗಿ ಅಮೋಘವಾದ ವಜ್ರಾಯುಧವನ್ನೇ ಪ್ರಯೋಗಿಸಿದನು. ವಜ್ರಾಯುಧದ ಪ್ರಹಾರದಿಂದ ರೆಕ್ಕೆಗಳನ್ನು ಕತ್ತರಿಸಿದ ಪರ್ವತದಂತೆ ಬಲಿಚಕ್ರವರ್ತಿಯು ವಿಮಾನದೊಡನೆ ಭೂಮಿಯಲ್ಲಿ ಬಿದ್ದನು. ಬಲಿಯ ಮಿತ್ರನೂ ಆಪ್ತನೂ ಆದ ಜಂಭಾಸುರನೆಂಬ ರಾಕ್ಷಸನು

ತನ್ನ ಮಿತ್ರನಾದ ಬಲಿಯು ಕೆಳಕ್ಕೆ ಬಿದ್ದುದನ್ನು ನೋಡಿ ಆತನು ಸತ್ತು ಹೋಗಿದ್ದರೂ ಆತನೊಡನೆ ತನಗಿದ್ದ ಮೈತ್ರಿಯನ್ನು ಸ್ಮರಿಸುತ್ತಾ ಇಂದ್ರನೊಡನೆ ಯುದ್ಧಮಾಡಲು ಹೋದನು. ಸಿಂಹವಾಹನನಾದ, ಮಹಾ ಬಲನಾದ ಆ ಜಂಭಾಸುರನು ಇಂದ್ರನನ್ನು ಎದುರಿಸಿ ನಿಂತು ಭಯಂಕರ ವಾದ ಗದೆಯನ್ನೆತ್ತಿ ರಭಸದಿಂದ ಇಂದ್ರನ ಕೊರಳಿನ ಪ್ರದೇಶದಲ್ಲಿ ಪ್ರಹರಿ ಸಿದನು. ಮತ್ತೊಮ್ಮೆ ಇಂದ್ರನ ವಾಹನವಾದ ಐರಾವತವನ್ನು ಪ್ರಹರಿಸಿದನು. ಐರಾವತವು ಗದಾಪ್ರಹಾರದಿಂದ ಬಹಳವಾಗಿ ವ್ಯಥೆಗೊಂಡು ಮೊಳ ಕಾಲೂರಿ ನೆಲಕ್ಕೆ ಬಾಗಿ ಬಾಧೆಯಿಂದ ತಡೆಯಲಾರದ ದುಃಖವನ್ನು ಅನುಭವಿಸಿತು. ಅದರಿಂದ ಅದು ಗಾಯಗೊಂಡು ನೆಲಕ್ಕೆ ಬೀಳಲು ಇಂದ್ರನ ಸಾರಥಿಯಾದ ಮಾತಲಿಯು ಸಾವಿರ ಕುದುರೆಗಳನ್ನು ಹೂಡಿದ್ದ ದಿವ್ಯವಾದ ರಥವನ್ನು ರಣರಂಗಕ್ಕೆ ತಂದನು. ರಥವು ಬಂದುದನ್ನು ನೋಡಿ ಇಂದ್ರನು ಐರಾವತದಿಂದಿಳಿದು ರಥದಲ್ಲಿ ಹತ್ತಿಕೊಂಡನು. ದಾನವೇಂದ್ರನಾದ ಜಂಭಾಸುರನು ಮಾತಲಿಯ ಜಾಗರೂಕತೆಯನ್ನು ಶ್ಲಾಘಿಸುತ್ತಾ ಉರಿಯುತ್ತಿದ್ದ ಶೂಲಾಯುಧದಿಂದ ಮಾತಲಿಯನ್ನು ನಗು-ನಗುತ್ತಲೇ ಪ್ರಹರಿ ಸಿದನು. ಮಾತಲಿಯು ತನ್ನ ಬಲವನ್ನು ಅವಲಂಬಿಸಿ, ಸಹಿಸಿಕೊಳ್ಳಲು ಅಸಾಧ್ಯವಾಗಿದ್ದ ಆ ಶೂಲಪ್ರಹಾರದ ಸಂಕಟವನ್ನು ಸಹಿಸಿಕೊಂಡನು. ಇದನ್ನು ನೋಡಿದ ಇಂದ್ರನು ಪರಮಕ್ರುದ್ಧನಾಗಿ ವಜ್ರಾಯುಧದಿಂದ ಜಂಭಾಸುರನ ತಲೆಯನ್ನು ಕತ್ತರಿಸಿಬಿಟ್ಟನು. ಜಂಭಾಸುರನು ಹತನಾದು ದನ್ನು ಮಹರ್ಷಿಗಳಾದ ನಾರದರಿಂದ ಕೇಳಿ ಅವನ ಬಂಧುಗಳಾದ ನಮುಚಿ- ಬಲ-ಪಾಕ–ಇವರೇ ಮುಂತಾದವರು ತ್ವರೆಯಿಂದ ಅಲ್ಲಿಗೆ ಆಗಮಿಸಿದರು.

ನಮುಚಿಯೇ ಮೊದಲಾದ ರಾಕ್ಷಸರು ಪೌರುಷದ ಮಾತುಗಳಿಂದ ಇಂದ್ರನ ಮರ್ಮಸ್ಥಳಗಳನ್ನು ಭೇದಿಸುತ್ತಾ–ಮೇಘಗಳು ಜಲಧಾರೆಯಿಂದ ಪರ್ವತವನ್ನು ಮುಚ್ಚಿಬಿಡುವಂತೆ–ಶರವರ್ಷಗಳಿಂದ ಇಂದ್ರನನ್ನು ಮುಚ್ಚಿಬಿಟ್ಟರು. ಕೈಚಳಕವುಳ್ಳ ಬಲಾಸುರನು ಆ ದೇವಾಸುರಮಹಾ ಸಂಗ್ರಾಮದಲ್ಲಿ ಇಂದ್ರನ ರಥಕ್ಕೆ ಹೂಡಿದ್ದ ಸಾವಿರ ಕುದುರೆಗಳನ್ನು ಅಷ್ಟೇ ಸಂಖ್ಯೆಯ ಬಾಣಗಳಿಂದ ಏಕಕಾಲದಲ್ಲಿ ಪ್ರಹರಿಸಿದನು. ಪಾಕಾಸುರನು

ಒಂದೇ ಬಾರಿಗೆ ಇನ್ನೂರು ಬಾಣಗಳನ್ನು ಧನುಸ್ಸಿನಲ್ಲಿ ಸಂಧಾನಮಾಡಿ ಪ್ರಯೋಗಿಸಿ ಸಾರಥಿಯಾದ ಮಾತಲಿಯನ್ನೂ ಅವಯವಗಳಿಂದ ಕೂಡಿದ್ದ ರಥವನ್ನೂ ಮರ್ದನಮಾಡಿದನು. ಶರಸಂಧಾನವು ಒಂದೇ ಆಗಿ ಲಕ್ಷ್ಯವು ನಾನಾ ಕಡೆಗಳಲ್ಲಿದ್ದುದು ಪರಮಾದ್ಭುತವಾಗಿ ಕಂಡಿತು. ನಮುಚಿಯು ಸುವರ್ಣ ಮಯವಾದ ರೆಕ್ಕೆಗಳಿದ್ದ ಹದಿನೈದು ಬಾಣಗಳಿಂದ ಇಂದ್ರನನ್ನು ಪ್ರಹರಿಸಿ– ನೀರಿನಿಂದ ಕೂಡಿದ ಮೇಘವು ಗರ್ಜನೆಮಾಡುವಂತೆ ರಣರಂಗದಲ್ಲಿ ಗರ್ಜಿಸಿದನು. ಅಸುರನಾಯಕರು ಎಲ್ಲ ಕಡೆಗಳಿಂದಲೂ ಬಾಣಗಳ ಸಮೂಹಗಳಿಂದ–ಮಳೆಗಾಲದಲ್ಲಿ ಸೂರ್ಯನನ್ನು ಮೋಡಗಳು ಮುಚ್ಚು ವಂತೆ ರಥ-ಸಾರಥಿಗಳಿಂದ ಸಹಿತನಾದ ಇಂದ್ರನನ್ನು ಮುಚ್ಚಿಬಿಟ್ಟರು. ಅನುಯಾಯಿಗಳಿಂದ ಕೂಡಿದ ದೇವತೆಗಳು ಸ್ವಲ್ಪಕಾಲ ತಮ್ಮ ನಾಯಕನಾದ ಇಂದ್ರನನ್ನು ಕಾಣದೆ ಅನಾಯಕರಾಗಿ ಶತ್ರುಸೈನ್ಯಗಳಿಂದ ಜಯಿಸಲ್ಪಟ್ಟವ ರಾಗಿ–ಸಮುದ್ರದ ಮಧ್ಯದಲ್ಲಿ ಒಡೆದುಹೋದ ನಾವೆಯಲ್ಲಿರುವ ವರ್ತಕ ರಂತೆ–ಬಹಳವಾಗಿ ದುಃಖಪಡುತ್ತಾ ರಕ್ಷಣೆಗಾಗಿ ಕೂಗಿಕೊಳ್ಳುತ್ತಿದ್ದರು. ಅಷ್ಟರಲ್ಲಿಯೇ ರಥಾಶ್ವ-ಧ್ವಜಗಳಿಂದ ಕೂಡಿದ ಇಂದ್ರನು ಬಾಣಗಳ ಪಂಜರ ದಿಂದ ಹೊರಬಂದು–ಬೆಳಗಾದ ಕೂಡಲೇ ತನ್ನ ತೇಜಸ್ಸಿನಿಂದ ದಿಕ್ಕು ಗಳನ್ನೂ, ಆಕಾಶವನ್ನೂ, ಭೂಮಿಯನ್ನೂ ಪ್ರಕಾಶಗೊಳಿಸುವ ಸೂರ್ಯ ನಂತೆ–ಪ್ರಕಾಶಿಸಿದನು. ಯುದ್ಧದಲ್ಲಿ ಶತ್ರುಗಳಿಂದ ಸತತವಾಗಿ ಪೀಡಿಸಲ್ಪಡು ತ್ತಿದ್ದ ತನ್ನ ಸೈನ್ಯವನ್ನು ನೋಡಿ ವಜ್ರಧರನಾದ ಇಂದ್ರನು ಪರಮಕ್ರುದ್ಧನಾಗಿ ಶತ್ರುಗಳನ್ನು ನಿರ್ಮೂಲನಮಾಡುವ ಸಲುವಾಗಿ ವಜ್ರಾಯುಧವನ್ನು ಮೇಲೆತ್ತಿದನು. ಸಮರವನ್ನು ನೋಡುತ್ತಿದ್ದ ರಾಕ್ಷಸನಾಯಕರ ಬಂಧುಗಳಿಗೆ ಭಯವನ್ನುಂಟುಮಾಡುತ್ತಾ ಇಂದ್ರನು ಎಂಟು ಮೂಲೆಗಳುಳ್ಳ ಆ ವಜ್ರಾಯುಧದಿಂದಲೇ ಬಲಾಸುರ-ಪಾಕಾಸುರರ ತಲೆಗಳನ್ನು ಹಾರಿಸಿಬಿಟ್ಟನು.

ಪರೀಕ್ಷಿತನೇ! ಬಲ-ಪಾಕರಿಬ್ಬರೂ ಇಂದ್ರನಿಂದ ಹತರಾದುದನ್ನು ನೋಡಿ ನಮುಚಿಯೆಂಬ ರಾಕ್ಷಸನು ಶೋಕದಿಂದಲೂ, ಅಸಹನೆಯಿಂದಲೂ ಮತ್ತು ಕೋಪದಿಂದಲೂ ಕೆಂಪೇರಿ ಅಸುರಶತ್ರುವಾದ ಇಂದ್ರನನ್ನು ಸಂಹರಿ ಸಲು ಬಹಳವಾಗಿ ಪ್ರಯತ್ನಿಸಿದನು. ಕಿರುಗಂಟೆಗಳಿಂದ ಝಣ-ಝಣೆ

ಸುತ್ತಾ ಸುವರ್ಣಭೂಷಿತವಾಗಿದ್ದ ಒಂದು ಶೂಲವನ್ನು ಎತ್ತಿಕೊಂಡು ಅತ್ಯಂತಕ್ರುದ್ಧನಾಗಿ **'ಹತೋಽಸಿ'**–'ಇದೋ ನೀನು ಸತ್ತೆ!'–ಎಂದು ಗರ್ಜಿಸುತ್ತಾ, ಸಿಂಹನಾದಮಾಡುತ್ತಾ ದೇವೇಂದ್ರನ ಮೇಲೆ ನಮುಚಿಯು ಆ ಶೂಲವನ್ನು ರಭಸದಿಂದೆಸೆದನು. ಹೀಗೆ ನಮುಚಿಯಿಂದ ಬಿಡಲ್ಪಟ್ಟು ಆಕಾಶದಲ್ಲಿ ಅತ್ಯಂತವೇಗವಾಗಿ ಬರುತ್ತಿದ್ದ ಆ ಮಹಾಶೂಲಾಯುಧವನ್ನು ಇಂದ್ರನು ತನ್ನ ನಿಶಿತವಾದ ಬಾಣಗಳಿಂದ ಸಾವಿರಾರು ತುಂಡುಗಳಾಗಿ ಕತ್ತರಿಸಿಬಿಟ್ಟನು. ಶೂಲಾಯುಧವು ವ್ಯರ್ಥವಾದ ಮೇಲೂ ಮುನ್ನುಗ್ಗಿ ಬರುತ್ತಿದ್ದ ನಮುಚಿಯನ್ನು ಸಂಹರಿಸಲಿಚ್ಛಿಸಿ ದೇವೇಂದ್ರನು ಅತ್ಯಂತ ಕ್ರುದ್ಧನಾಗಿ ವಜ್ರಾಯುಧವನ್ನು ರಾಕ್ಷಸನ ಕುತ್ತಿಗೆಯ ಮೇಲೆ ಪ್ರಯೋ ಗಿಸಿದನು. ಆದರೆ ಹಾಗೆ ಇಂದ್ರನು ಅತ್ಯಂತವೇಗವಾಗಿ, ತನ್ನ ಬಲವನ್ನೆಲ್ಲಾ ಕೇಂದ್ರೀಕರಿಸಿ ಆಯುಧಗಳಲ್ಲಿಯೇ ಶ್ರೇಷ್ಠವಾದುದೆಂದು ಪ್ರಸಿದ್ಧವಾಗಿದ್ದ ವಜ್ರಾಯುಧವನ್ನು ಪ್ರಯೋಗಿಸಿದರೂ ಸರ್ವತ್ರಜಯಶಾಲಿಯಾಗಿದ್ದ ಆ ವಜ್ರಾಯುಧಕ್ಕೆ ನಮುಚಿಯ ಕುತ್ತಿಗೆಯ ಚರ್ಮವನ್ನು ಕೂಡ ಕತ್ತರಿಸಲು ಸಾಧ್ಯವಾಗಲಿಲ್ಲ. ಅದು ಪರಮಾದ್ಭುತವಾಗಿ ಕಂಡಿತು. ನಮುಚಿಯ ವಿಷಯದಲ್ಲಿ ವಜ್ರಾಯುಧವೂ ಬಲಹೀನವಾದುದನ್ನು ಕಂಡು ಇಂದ್ರನು ಭಯಪಟ್ಟನು. 'ಲೋಕಗಳನ್ನೂ ವಿಮೋಹಗೊಳಿಸುವ ರಾಕ್ಷಸರೂಪದ ಈ ಪ್ರಾಣಿಯು ದೈವಯೋಗದಿಂದಲೇ ಹುಟ್ಟಿರಬಹುದೇ?'–ಎಂದೂ ಇಂದ್ರನು ಸಂದೇಹಿಸಿದನು.

'ಈ ನನ್ನ ವಜ್ರಾಯುಧವು ಅಪ್ರತಿಹತವಾದುದು. ಹಿಂದೆ ರೆಕ್ಕೆಗಳನ್ನು ಹೊಂದಿದ್ದ ಪರ್ವತಗಳು ತಮ್ಮ ಭಾರವಾದ ರೆಕ್ಕೆಗಳಿಂದ ಎಲ್ಲೆಲ್ಲಿಯೂ ಹಾರಾಡುತ್ತಾ ಸಮಯಗಳಲ್ಲಿ ಪಟ್ಟಣಗಳ ಮೇಲೂ ಗ್ರಾಮಗಳ ಮೇಲೂ ಇಳಿದು ಸಾವಿರಾರು ಪ್ರಜೆಗಳನ್ನು ಕೊಂದುಹಾಕುತ್ತಿದ್ದುವು. ನಾನು ಈ ನನ್ನ ವಜ್ರಾಯುಧದಿಂದಲೇ ಆ ಮಹಾಪರ್ವತಗಳಲ್ಲಿದ್ದ ರೆಕ್ಕೆಗಳನ್ನು ಕತ್ತರಿಸಿ ಹಾಕಿದೆನು. ಈಗ ಅದೇ ವಜ್ರಾಯುಧವು ನಮುಚಿಯ ವಿಷಯದಲ್ಲಿ ವ್ಯರ್ಥವಾಗಿಬಿಟ್ಟಿದೆ.

ತ್ವಷ್ಟೃ ಪ್ರಜಾಪತಿಯ ತಪಸ್ಸಿನ ಸಾರವೇ ವೃತ್ರಾಸುರನ ರೂಪದಲ್ಲಿ ಪ್ರಕಟವಾಗಿದ್ದಿತು. ಅಂತಹವನನ್ನೇ ನಾನು ಈ ವಜ್ರಾಯುಧದಿಂದ ಸಂಹ

ರಿಸಿದ್ದೇನೆ. ಅತ್ಯಂತ ಬಲಿಷ್ಠನಾಗಿದ್ದ ಮತ್ತು ಸಮಸ್ತವಾದ ಶಸ್ತ್ರಾಸ್ತ್ರಗಳಿಂದಲೂ ಕಿಂಚಿತ್ತಾದರೂ ಗಾಯಗೊಳ್ಳದಿದ್ದ ಮಹಾಸುರನನ್ನು ಈ ವಜ್ರಾಯುಧದಿಂದಲೇ ನಾನು ಸಂಹರಿಸಿದ್ದೇನೆ. ಅಂತಹ ಶ್ರೇಷ್ಠವಾದ ನನ್ನ ವಜ್ರಾಯುಧವು ಅತ್ಯಲ್ಪನಾದ ಈ ನಮುಚಿರಾಕ್ಷಸನ ವಿಷಯದಲ್ಲಿ ಪರಾಭವವನ್ನು ಹೊಂದಿತು. ಈ ವಜ್ರಾಯುಧವು ಮಹಾಮಹಿಮನಾದ ದಧೀಚಿಮಹರ್ಷಿಯ ಬ್ರಹ್ಮತೇಜಸ್ಸಿನ ರೂಪವಾಗಿದ್ದರೂ ನಿಷ್ಕಾರಣವಾಗಿ ಬಲಗುಂದಿ ಕೇವಲ ದೊಣ್ಣೆಯಂತಾದಕಾರಣ ನಾನು ಇನ್ನು ಮುಂದೆ ಇದನ್ನು ಹಿಡಿಯುವುದಿಲ್ಲ'–ಹೀಗೆ ಹೇಳಿಕೊಂಡು ದುಃಖಿಸುತ್ತಿದ್ದ ಮಹೇಂದ್ರನನ್ನು ಕುರಿತು ಆಕಾಶವಾಣಿಯು ಹೇಳಿತು :

ನಾಯಂ ಶುಷ್ಕೈರಥೋ ನಾರ್ದ್ರೈರ್ವಧಮರ್ಹತಿ ದಾನವಃ ॥೩೭॥

"ವಾಸವನೇ! ಈ ರಾಕ್ಷಸನನ್ನು ಒಣಗಿರುವ ವಸ್ತುವಿನಿಂದಾಗಲೀ ಹಸಿಯಾಗಿರುವ ವಸ್ತುವಿನಿಂದಾಗಲೀ ವಧಿಸಲು ಸಾಧ್ಯವಾಗುವುದಿಲ್ಲ.

ಮಯಾಸ್ಮೈ ಯದ್ವರೋ ದತ್ತೋ
ಮೃತ್ಯುರ್ನೈವಾರ್ದ್ರಶುಷ್ಕಯೋಃ ।
ಅತೋಽನ್ಯಶ್ಚಿನ್ತನೀಯಸ್ತೇ
ಉಪಾಯೋ ಮಘವನ್ರಿಪೋಃ ॥೩೮॥

ಮಹೇಂದ್ರ! ನಾನು ಈ ರಾಕ್ಷಸನಿಗೆ ಒಣಗಿದ ಪದಾರ್ಥದಿಂದಾಗಲೀ, ಹಸಿಯಾದ ಪದಾರ್ಥದಿಂದಾಗಲೀ ಮರಣವಾಗದೆಂಬ ವರವನ್ನು ಕೊಟ್ಟುಬಿಟ್ಟಿದ್ದೇನೆ. ಆದುದರಿಂದ ಇವನನ್ನು ಸಂಹರಿಸಲು ಬೇರೆ ಯಾವುದಾದರೂ ಉಪಾಯವನ್ನು ಯೋಚಿಸು."

ಮಹೇಂದ್ರನು ಆ ದೇವವಾಣಿಯನ್ನು ಕೇಳಿ ಏಕಾಗ್ರಚಿತ್ತನಾಗಿ ಯೋಚಿಸುತ್ತಾ ಒಣಗಿದ ಪದಾರ್ಥವೂ ಆಗಿರದೆ ಹಸಿಯ ಪದಾರ್ಥವೂ ಆಗದೇ ಇದ್ದ ನೊರೆಯು ನಮುಚಿಯನ್ನು ಸಂಹರಿಸಲು ಸಮರ್ಥವಾದ ಆಯುಧವಾಗಬಹುದೆಂದು ನಿಶ್ಚಯಿಸಿದನು. ಅಂತೆಯೇ ಇಂದ್ರನು ಆ ನೊರೆಯಿಂದಲೇ ನಮುಚಿರಾಕ್ಷಸನ ತಲೆಯನ್ನು ಕತ್ತರಿಸಿಬಿಟ್ಟನು. ನಮುಚಿಯ ಸಂಹಾರವಾದೊಡನೆಯೇ ಮುನಿಗಳು ಇಂದ್ರನನ್ನು ಸ್ತುತಿಸಿ

ದರು ಮತ್ತು ಇಂದ್ರನ ಮೇಲೆ ಪುಷ್ಪಹಾರಗಳ ಮಳೆಗರೆದರು. ವಿಶ್ವಾವಸು-ಪರಾವಸು–ಎಂಬಿಬ್ಬರು ಗಂಧರ್ವಮುಖ್ಯರು ಇಂದ್ರನ ಗುಣಗಾನಮಾಡಿದರು. ದೇವದುಂದುಭಿಗಳು ಮೊಳಗಿದುವು. ನರ್ತಕರು ಆನಂದದಿಂದ ನರ್ತನ ಮಾಡಿದರು. ವಾಯು, ಅಗ್ನಿ, ವರುಣ ಇವರೇ ಮುಂತಾದ ಲೋಕಪಾಲರು ಮೃಗಗಳನ್ನು ಸಿಂಹಗಳು ಸಂಹರಿಸುವಂತೆ–ಅಸ್ತ್ರಗಳ ಸಮೂಹದಿಂದ ಎದುರಾಳಿಗಳಾದ ರಾಕ್ಷಸನಾಯಕರನ್ನು ಧ್ವಂಸಮಾಡಿದರು. ಆ ವೇಳೆಗೆ ಬ್ರಹ್ಮನಿಂದ ಕಳುಹಿಸಲ್ಪಟ್ಟಿದ್ದ ನಾರದರು ರಣರಂಗಕ್ಕೆ ಬಂದು ರಾಕ್ಷಸರು ಸಂಪೂರ್ಣವಾಗಿ ನಾಶವಾಗುತ್ತಿರುವುದನ್ನು ನೋಡಿ ಮುಂದೆ ಯುದ್ಧಮಾಡದಂತೆ ದೇವತೆಗಳನ್ನು ತಡೆದರು.

ಭವದ್ಭಿರಮೃತಂ ಪ್ರಾಪ್ತಂ ನಾರಾಯಣಭುಜಾಶ್ರಯೈಃ ।
ಶ್ರಿಯಾ ಸಮೇಧಿತಾಃ ಸರ್ವ ಉಪಾರಮತ ವಿಗ್ರಹಾತ್ ॥೪೪॥

"ದೇವತೆಗಳೇ! ಶ್ರೀಮನ್ನಾರಾಯಣನ ಭುಜಬಲವನ್ನು ಆಶ್ರಯಿಸಿ ನೀವು ಅಮೃತವನ್ನು ಪಡೆದುಕೊಂಡಿರಿ. ಮೂರು ಲೋಕಗಳ ಆಧಿಪತ್ಯವನ್ನೂ ಪಡೆದು ಮಹೋನ್ನತರಾಗಿರುವಿರಿ. ಇನ್ನು ನೀವು ದಾನವರೊಡನೆ ಯುದ್ಧಮಾಡುವುದನ್ನು ನಿಲ್ಲಿಸಿರಿ."

ಶ್ರೀಶುಕರು ಹೇಳುತ್ತಾರೆ :

ಮಹಾರಾಜ! ಇಂದ್ರನೇ ಮುಂತಾದ ಎಲ್ಲ ದೇವತೆಗಳೂ ಮಹರ್ಷಿನಾರದರ ಮಾತನ್ನು ಗೌರವಿಸುತ್ತಾ, ಕೋಪವನ್ನು ತೊರೆದು ಶಾಂತರಾಗಿ, ಗಂಧರ್ವಾಪ್ಸರೆಯರೇ ಮೊದಲಾದ ಅನುಚರರಿಂದ ಸ್ತುತಿಸಲ್ಪಡುತ್ತಾ ಸ್ವರ್ಗಕ್ಕೆ ತೆರಳಿದರು. ಯುದ್ಧದಲ್ಲಿ ಅಳಿದುಳಿದಿದ್ದ ರಾಕ್ಷಸರು ನಾರದಮಹರ್ಷಿಗಳ ಇಷ್ಟದಂತೆ ವಜ್ರಾಯುಧಪ್ರಹಾರದಿಂದ ಸತ್ತುಬಿದ್ದಿದ್ದ ಬಲಿಚಕ್ರವರ್ತಿಯನ್ನೆತ್ತಿಕೊಂಡು ಅಸ್ತಾಚಲಕ್ಕೆ ತೆರಳಿದರು. ದೈತ್ಯರ ಗುರುಗಳಾದ ಶುಕ್ರಾಚಾರ್ಯರು ಯುದ್ಧದಲ್ಲಿ ಮಡಿದಿದ್ದ ರಾಕ್ಷಸರ ರುಂಡ-ಮುಂಡಗಳನ್ನು ತರಿಸಿ ಹೀನಾಂಗರಿಗೂ ಅಂಗಗಳನ್ನು ಜೋಡಿಸಿ ತಮ್ಮ ಸಂಜೀವಿನೀವಿದ್ಯೆಯಿಂದ ಅವರೆಲ್ಲರನ್ನೂ ಬದುಕಿಸಿದರು. ಬಲಿಚಕ್ರವರ್ತಿಯೂ ಕೂಡ ಶುಕ್ರಾಚಾರ್ಯರು ಸ್ಪರ್ಶಿಸಿದೊಡನೆಯೇ

ಇಂದ್ರಿಯಶಕ್ತಿಯನ್ನೂ ಸ್ಮೃತಿಯನ್ನೂ ಪಡೆದುಕೊಂಡು ಜೀವಂತನಾದನು. ಇಂದ್ರನಿಂದ ಪರಾಜಿತನಾಗಿದ್ದರೂ–ಲೋಕದಲ್ಲಿ ಕಾಲನ ಪ್ರೇರಣೆಯಿಂದ ಜಯಾಪಜಯಗಳೂ ಸುಖ-ದುಃಖಗಳೂ ಉಂಟಾಗುತ್ತವೆಯೆಂಬ ತತ್ತ್ವವನ್ನು ತಿಳಿದಿದ್ದನಾದುದರಿಂದ ಆತನು ತನಗೆ ಆಗಿದ್ದ ಪರಾಜಯಕ್ಕೆ ಸ್ವಲ್ಪವಾದರೂ ದುಃಖಿಸಲಿಲ್ಲ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೧೨ನೆಯ ಅಧ್ಯಾಯ

ಮೋಹಿನೀರೂಪವನ್ನು ನೋಡಿ ಮಹಾದೇವನು ವಿಮೋಹಿತನಾದುದು

ಶ್ರೀಶುಕರು ಹೇಳುತ್ತಾರೆ :

ವೃಷಧ್ವಜೋ ನಿಶಮ್ಯೇದಂ ಯೋಷಿದ್ರೂಪೇಣ ದಾನವಾನ್ ।
ಮೋಹಯಿತ್ವಾ ಸುರಗಣಾನ್ಹರಿಃ ಸೋಮಮಪಾಯಯತ್ ॥೧॥

ವೃಷಮಾರುಹ್ಯ ಗಿರಿಶಃ ಸರ್ವಭೂತಗಣೈರ್ವೃತಃ ।
ಸಹ ದೇವ್ಯಾ ಯಯೌ ದ್ರಷ್ಟುಂ ಯತ್ರಾಸ್ತೇ ಮಧುಸೂದನಃ ॥೨॥

ಶ್ರೀಹರಿಯು ಮೋಹಿನೀರೂಪವನ್ನು ಧರಿಸಿ ದೈತ್ಯರನ್ನು ವಂಚಿಸಿ ದೇವತೆಗಳಿಗೆ ಅಮೃತವನ್ನು ಕುಡಿಸಿದನೆಂಬ ವಾರ್ತೆಯನ್ನು ಕೇಳಿ, ವೃಷಧ್ವಜನಾದ ಪರಮೇಶ್ವರನು ಪಾರ್ವತಿಯೊಡನೆ ತನ್ನ ವಾಹನವಾದ ವೃಷಭವನ್ನೇರಿ ಸಮಸ್ತ ಭೂತಗಣಗಳಿಂದಲೂ ಪರಿವೃತನಾಗಿ ಮಧುಸೂದನನಿದ್ದಲ್ಲಿಗೆ ಅವನನ್ನು ಕಾಣುವುದಕ್ಕಾಗಿ ತೆರಳಿದನು. ಪಾರ್ವತೀ-ಪರಮೇಶ್ವರರನ್ನು ನೋಡಿದೊಡನೆಯೇ ಶ್ರೀಹರಿಯು ಅವರನ್ನು ಯಥೋಚಿತವಾಗಿ ಆದರಿಸಿ ಸತ್ಕರಿಸಿದನು. ಇದಕ್ಕೆ ಪ್ರತಿಯಾಗಿ ಶಿವನು, ಶ್ರೀಹರಿಯನ್ನು ಯಥೋಚಿತವಾಗಿ ಪೂಜಿಸಿದನಂತರ ಎಲ್ಲರೂ ಸುಖವಾಗಿ ಕುಳಿತರು. ಪರಮೇಶ್ವರನು ನಸುನಗುತ್ತಾ ಶ್ರೀಹರಿಗೆ ಹೇಳಿದನು :

ದೇವದೇವ ಜಗದ್ವ್ಯಾಪಿಞ್ಜಗದೀಶ ಜಗನ್ಮಯ ।
ಸರ್ವೇಷಾಮಪಿ ಭಾವಾನಾಂ ತ್ವಮಾತ್ಮಾ ಹೇತುರೀಶ್ವರಃ ॥೪॥

"ದೇವದೇವನೇ! ಪ್ರಪಂಚವೆಲ್ಲವನ್ನೂ ವ್ಯಾಪಿಸಿಕೊಂಡಿರುವವನೇ! ಮೂಜಗದೊಡೆಯನೇ! ಜಗತ್ಸ್ವರೂಪನೇ! ನೀನು ಸಮಸ್ತ ಚರಾಚರ ಪ್ರಾಣಿಗಳಿಗೂ ಮತ್ತು ವಸ್ತುಗಳಿಗೂ ಮೂಲಕಾರಣನು. ನೀನು ಈ ಜಗತ್ತಿಗೆ ನಿಯಾಮಕನೂ ಆಗಿರುವೆ.

ಆದ್ಯನ್ತಾವಸ್ಯ ಯನ್ಮಧ್ಯಮಿದಮನ್ಯದಹಂ ಬಹಿಃ ।
ಯತೋಽವ್ಯಯಸ್ಯ ನೈತಾನಿ ತತ್ಸತ್ಯಂ ಬ್ರಹ್ಮ ಚಿದ್ಭವಾನ್ ॥೫॥

ದೇವೇಶ! ಈ ಜಗತ್ತಿಗೆ ನೀನು ಆದಿಯೂ, ಮಧ್ಯವೂ ಮತ್ತು ಅಂತ್ಯವೂ ಆಗಿರುವೆ. ಆದರೆ ನಿನಗೆ ಆದಿ-ಮಧ್ಯಾಂತಗಳಾವುವೂ ಇಲ್ಲ. ನೀನು ಅನಂತನು. ನಿನ್ನ ಅವಿನಾಶಿಯಾದ ಬ್ರಹ್ಮಸ್ವರೂಪದಲ್ಲಿ ಯಾವ ಭೇದಭಾವಗಳೂ ಇರುವುದಿಲ್ಲ. ವಾಸ್ತವವಾಗಿ ನೀನು ಸತ್ಯನೂ, ಚಿನ್ಮಾತ್ರನೂ, ಪರಬ್ರಹ್ಮಪರಮಾತ್ಮನೂ ಆಗಿರುವೆ.

ತವೈವ ಚರಣಾಮ್ಭೋಜಂ ಶ್ರೇಯಸ್ಕಾಮಾ ನಿರಾಶಿಷಃ ।
ವಿಸೃಜ್ಯೋಭಯತಃ ಸಙ್ಗಂ ಮುನಯಃ ಸಮುಪಾಸತೇ ॥೬॥

ಶ್ರೇಯಸ್ಕಾಮರಾದ ಮಹಾತ್ಮರು ಇಹಲೋಕ-ಪರಲೋಕಗಳಲ್ಲಿ ಆಸಕ್ತಿಯನ್ನು ತೊರೆದು ಸಮಸ್ತಕಾಮನೆಗಳನ್ನೂ ಪರಿತ್ಯಾಗಮಾಡಿ ನಿನ್ನ ಚರಣಕಮಲಗಳ ಆರಾಧನೆಯಲ್ಲಿಯೇ ಸದಾ ಆಸಕ್ತರಾಗಿರುತ್ತಾರೆ.

ತ್ವಂ ಬ್ರಹ್ಮ ಪೂರ್ಣಮಮೃತಂ ವಿಗುಣಂ ವಿಶೋಕ-
ಮಾನನ್ದಮಾತ್ರಮವಿಕಾರಮನನ್ಯದನ್ಯತ್ ।
ವಿಶ್ವಸ್ಯ ಹೇತುರುದಯಸ್ಥಿತಿಸಂಯಮಾನಾ-
ಮಾತ್ಮೇಶ್ವರಶ್ಚ ತದಪೇಕ್ಷತಯಾನಪೇಕ್ಷಃ ॥೭॥

ಪರಮಾತ್ಮನೇ! ಪರಂಜ್ಯೋತಿಯೇ! ನೀನು ಅಮೃತಸ್ವರೂಪನು. ಸಮಸ್ತ ಪ್ರಾಕೃತಗುಣಗಳಿಂದಲೂ ರಹಿತನಾದವನು. ಶೋಕದ ನೆರಳಿನಿಂದಲೂ ದೂರವಿರತಕ್ಕವನು. ಶೋಕವೆಂಬುದು ನಿನ್ನ ಹತ್ತಿರಕ್ಕೂ

ಸುಳಿಯುವುದಿಲ್ಲ. ನೀನು ಪರಿಪೂರ್ಣಬ್ರಹ್ಮಸ್ವರೂಪನಾಗಿರುವೆ. ನೀನು ಕೇವಲ ಆನಂದಸ್ವರೂಪನು. ನಿರ್ವಿಕಾರನು. ನಿನಗಿಂತ ಭಿನ್ನವಾದುದು ಯಾವುದೂ ಇಲ್ಲ. ಆದರೆ ನೀನು ಎಲ್ಲರಿಂದಲೂ ಭಿನ್ನನಾಗಿರುವೆ. ನೀನು ವಿಶ್ವದ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಪರಮಕಾರಣನಾಗಿರುವೆ. ನೀನು ಸಮಸ್ತಪ್ರಾಣಿಗಳಿಗೂ ಶುಭಾಶುಭಕರ್ಮಫಲಗಳನ್ನು ಕೊಡುವ ಸ್ವಾಮಿಯಾಗಿರುವೆ. ನೀನ ಯಾವುದನ್ನೂ ಬಯಸದವನಾದರೂ ಜೀವರ ಪ್ರಾರ್ಥನೆಯಂತೆ ಅವರವರ ಕೋರಿಕೆಗಳನ್ನು ಸಲ್ಲಿಸುವೆಯಾದುದರಿಂದ ಅವರಿಗೆ ಅಪೇಕ್ಷ್ಯನಾಗಿರುವೆ. ನಿನಗೆ ಯಾವುದೂ ಬೇಡ. ಆದರೆ ಜೀವರಿಗೆ ನೀನು ಬೇಕು.

ಏಕಸ್ತ್ವಮೇವ ಸದಸದ್ದ್ವಯಮದ್ವಯಂ ಚ
ಸ್ವರ್ಣಂ ಕೃತಾಕೃತಮಿವೇಹ ನ ವಸ್ತುಭೇದಃ ।
ಅಜ್ಞಾನತಸ್ತ್ವಯಿ ಜನೈರ್ವಿಹಿತೋ ವಿಕಲ್ಪೋ
ಯಸ್ಮಾದ್ಗುಣೈರ್ವ್ಯತಿಕರೋ ನಿರುಪಾಧಿಕಸ್ಯ ॥೮॥

ಸ್ವಾಮಿಯೇ! ಕಾರ್ಯ-ಕಾರಣ, ದ್ವೈತ-ಅದ್ವೈತ–ಎಲ್ಲವೂ ನೀನೇ ಆಗಿರುವೆ. ಆಭರಣಗಳ ರೂಪದಲ್ಲಿ ಇರುವ ಚಿನ್ನಕ್ಕೂ ಮೂಲರೂಪದಲ್ಲಿ ಇರುವ ಚಿನ್ನಕ್ಕೂ ವ್ಯತ್ಯಾಸವಿಲ್ಲದಂತೆ–ಎರಡೂ ಏಕಮಾತ್ರ ಸುವರ್ಣವಾಗಿರುವಂತೆ–ಪರಮಕಾರಣರೂಪದಿಂದ ಅದ್ವಿತೀಯನಾಗಿಯೂ, ಪ್ರಪಂಚರೂಪದಿಂದ ಬಗೆ-ಬಗೆಯಾಗಿಯೂ ಕಾಣುವೆ. ಜನರು ನಿನ್ನ ವಾಸ್ತವಿಕ ರೂಪವನ್ನು ತಿಳಿಯದಿರುವ ಕಾರಣ ನಿನ್ನಲ್ಲಿ ನಾನಾವಿಧವಾದ ಭೇದಗಳನ್ನೂ ವಿಕಲ್ಪಗಳನ್ನೂ ಕಲ್ಪಿಸಿಕೊಂಡಿದ್ದಾರೆ. ಸತ್ತ್ವಾದಿ ಗುಣಗಳಿಂದುಂಟಾಗುವ ಭೇದವನ್ನು ಕಂಡು ಅರಿಯದವರು ನಿರುಪಾಧಿಕನಾದ ನಿನ್ನಲ್ಲಿ ಅಜ್ಞಾನದಿಂದ ಭೇದಭಾವವನ್ನು ಆರೋಪಿಸುತ್ತಾರೆ.*

---

* ಕಟಕ-ಕುಂಡಲಾದಿರೂಪದಿಂದ ಹಲವು ಬಗೆಯಾಗಿಯೂ ನಿಜರೂಪದಿಂದ ಒಂದಾಗಿಯೂ ಇರುವ ಚಿನ್ನದಲ್ಲಿ ಯಾವ ಭೇದವೂ ಇಲ್ಲ. ಭೇದವಿಲ್ಲದಿರುವಂತೆ ಚೇತನಾದಿ ಸಕಲವಸ್ತುಗಳಲ್ಲಿಯೂ ನೆಲೆಸಿ ಅದರದರ ಸ್ವಭಾವವನ್ನು ನಡೆಸುತ್ತಿರು ವುದರಿಂದ ಆಯಾ ರೂಪವಾಗಿ ಕರೆಯಲ್ಪಡುವ ನಿನ್ನಲ್ಲಿ ಭೇದವಿಲ್ಲ. ಸ್ಥಾನಭೇದದಿಂದ ನಿನ್ನಲ್ಲಿ ಭೇದವನ್ನು ಕಲ್ಪಿಸುವುದಕ್ಕೆ ಅಜ್ಞಾನವೇ ಕಾರಣ. (ವಿಜಯಧ್ವಜೀಯ)

ತ್ವಾಂ ಬ್ರಹ್ಮ ಕೇಚಿದವಯನ್ತ್ಯುತ ಧರ್ಮಮೇಕ
ಏಕೇ ಪರಂ ಸದಸತೋಃ ಪುರುಷಂ ಪರೇಶಮ್ ।
ಅನ್ಯೇಽವಯನ್ತಿ ನವಶಕ್ತಿಯುತಂ ಪರಂ ತ್ವಾಂ
ಕೇಚಿನ್ಮಹಾಪುರುಷಮವ್ಯಯಮಾತ್ಮತನ್ತ್ರಮ್ ॥೯॥

ಪ್ರಭುವೇ! ನಿನ್ನನ್ನು ಕೆಲವರು ಬ್ರಹ್ಮವೆಂದು ತಿಳಿಯುತ್ತಾರೆ. ಮತ್ತೆ ಕೆಲವರು ನಿನ್ನನ್ನು ಧರ್ಮನೆಂದು ವರ್ಣನೆಮಾಡುತ್ತಾರೆ. ಹಾಗೆಯೇ ಮತ್ತೆ ಕೆಲವರು ಪ್ರಕೃತಿ ಮತ್ತು ಪುರುಷರಿಗಿಂತಲೂ ಅತೀತನಾದ ಪುರುಷನೆಂದು ಹೇಳುತ್ತಾರೆ. ಕೆಲವರು ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ ಮತ್ತು ಅನುಗ್ರಹಾ ಎಂಬ ಒಂಬತ್ತು ಶಕ್ತಿಗಳಿಂದ ಯುಕ್ತನಾದ ಮಹಾಪುರುಷನೆಂದು ಹೇಳುತ್ತಾರೆ. ಕೆಲವರು ಕ್ಲೇಶ-ಕರ್ಮ ಇವೇ ಮುಂತಾದ ಬಂಧನಗಳಿಂದ ರಹಿತನಾದವನೆಂದೂ ಪೂರ್ವಜರಿಗೂ ಪೂರ್ವಜನೆಂದೂ, ಸರ್ವತಂತ್ರಸ್ವತಂತ್ರನಾದ ಮಹಾ ಪುರುಷನೆಂದೂ ತಿಳಿಯುತ್ತಾರೆ.

ನಾಹಂ ಪರಾಯುರ್ಋಷಯೋ ನ ಮರೀಚಿಮುಖ್ಯಾ
ಜಾನನ್ತಿ ಯದ್ವಿಚರಿತಂ ಖಲು ಸತ್ತ್ವಸರ್ಗಾಃ ।
ಯನ್ಮಾಯಯಾ ಮುಷಿತಚೇತಸ ಈಶ ದೈತ್ಯ-
ಮರ್ತ್ಯಾದಯಃ ಕಿಮುತ ಶಶ್ವದಭದ್ರವೃತ್ತಾಃ ॥೧೦॥

ಈಶನೇ! ಸತ್ತ್ವಗುಣದ ಸೃಷ್ಟಿಯಲ್ಲಿ ಅಂತರ್ಗತರಾಗಿರುವ ನಾನು, ಬ್ರಹ್ಮಾ, ಮರೀಚಿಯೇ ಮೊದಲಾದ ಮಹರ್ಷಿಗಳು ಕೂಡ ನೀನು ಮಾಡಿರುವ ಸೃಷ್ಟಿಯ ರಹಸ್ಯವನ್ನು ತಿಳಿದವರಾಗಿಲ್ಲ. ಹೀಗಿರುವಾಗ ಮಾಯೆ

ಎಲೈ ಭಗವಂತನೇ! ನಿನ್ನ ಮಾಯೆಯಿಂದ ಕಲ್ಪಿತವಾಗಿ ಕಾರ್ಯಕಾರಣರೂಪ ವಾಗಿರುವ ಈ ಜಗತ್ತಿನಲ್ಲಿ ಕಾರ್ಯವೆನಿಸಿದ ವೈರಾಜನೂ, ಕಾರಣವೆನಿಸಿದ ಮಹ ದಾದಿಗಳೂ ಪರಮಕಾರಣನಾದ ನಿನಗಿಂತ ಬೇರೆಯಲ್ಲ. ಇಂತಿದ್ದರೂ ಅಜ್ಞಾನಿಗಳು ಜಗತ್ಕಾರಣಬ್ರಹ್ಮವೆಂದೂ, ಮಾಯೆಯೆಂದೂ, ಕರ್ಮವೆಂದೂ, ನಿನ್ನೊಬ್ಬನಲ್ಲಿಯೇ ಹಲವು ಬಗೆಯಾಗಿ ವಿಕಲ್ಪಿಸುವರು. (ಸಾರಾರ್ಥ ದರ್ಶಿನಿ)

ಯಿಂದ ಅಪಹೃತವಾದ ಮನಸ್ಸುಳ್ಳ ರಜಸ್ತಮೋಗುಣಪ್ರಧಾನವಾದ ಕರ್ಮಗಳಲ್ಲಿಯೇ ಆಸಕ್ತರಾಗಿರುವ ರಾಕ್ಷಸ-ಮನುಷ್ಯರು ಅಂತಹ ನಿನ್ನ ಸೃಷ್ಟಿಯ ರಹಸ್ಯವನ್ನು ಹೇಗೆತಾನೇ ತಿಳಿದಾರು ?

ಸ ತ್ವಂ ಸಮೀಹಿತಮದಃ ಸ್ಥಿತಿಜನ್ಮನಾಶಂ
ಭೂತೇಹಿತಂ ಚ ಜಗತೋ ಭವಬನ್ಧಮೋಕ್ಷೌ ।
ವಾಯುರ್ಯಥಾವಿಶತಿ ಖಂ ಚ ಚರಾಚರಾಖ್ಯಂ
ಸರ್ವಂ ತದಾತ್ಮಕತಯಾವಗಮೋಽವರುನ್ತ್ಸೇ ॥೧೧॥

ಪ್ರಭುವೇ! ನೀನು ಸರ್ವಾತ್ಮನೂ ಜ್ಞಾನಸ್ವರೂಪನೂ ಆಗಿರುವೆ. ಆದುದರಿಂದ ವಾಯುವಿನಂತೆ ಆಕಾಶದಲ್ಲಿ ಅದೃಶ್ಯನಾಗಿದ್ದರೂ ಸಂಪೂರ್ಣವಾದ ಚರಾಚರಜಗತ್ತಿನಲ್ಲಿಯೂ ನೀನು ಸದಾ-ಸರ್ವದಾ ಉಪಸ್ಥಿತನಾಗಿರುವೆ. ಈ ಜಗತ್ತಿನ ಸ್ಥಿತಿ, ಉತ್ಪತ್ತಿ, ನಾಶ, ಪ್ರಾಣಿಗಳ ಕರ್ಮಸಂಸಾರರೂಪವಾದ ಬಂಧನ-ಮೋಕ್ಷಗಳು–ಈ ಎಲ್ಲವನ್ನೂ ನೀನು ತಿಳಿದವನಾಗಿರುವೆ.

ಅವತಾರಾ ಮಯಾ ದೃಷ್ಟಾ ರಮಮಾಣಸ್ಯ ತೇ ಗುಣೈಃ ।
ಸೋಽಹಂ ತದ್ದ್ರಷ್ಟುಮಿಚ್ಛಾಮಿ ಯತ್ತೇ ಯೋಷಿದ್ವಪುರ್ಧೃತಮ್ ॥೧೨॥

ಸ್ವಾಮಿಯೇ! ನೀನು ಪ್ರಪಂಚದಲ್ಲಿ ನಿನ್ನ ಲೀಲೆಯನ್ನು ತೋರಿಸುವ ಸಲುವಾಗಿ ಸತ್ತ್ವವೇ ಮೊದಲಾದ ಗುಣಗಳನ್ನು ಅಂಗೀಕರಿಸಿ ಹಲವಾರು ಅವತಾರಗಳನ್ನು ಮಾಡಿರುವೆ. ಆ ಎಲ್ಲ ಅವತಾರಗಳನ್ನೂ ನಾನು ನೋಡಿದ್ದೇನೆ. ಈಗ ನೀನು ಸಮುದ್ರಮಂಥನದ ಕಾಲದಲ್ಲಿ ಸ್ತ್ರೀರೂಪವನ್ನು ಧರಿಸಿ ಯಾವ ಮೋಹಿನಿಯ ಅವತಾರವನ್ನು ಮಾಡಿದ್ದೆಯೋ ಆ ಅವತಾರವನ್ನೂ ನಾನು ನೋಡಲು ಬಯಸಿದ್ದೇನೆ.

ಯಾವ ನಿನ್ನ ಅಂತಹ ಅದ್ಭುತವಾದ ಮೋಹಿನೀ ಅವತಾರದಿಂದ ಅಸುರರನ್ನು ವಿಮೋಹಗೊಳಿಸಿ ದೇವತೆಗಳಿಗೆ ಅಮೃತವನ್ನು ಕುಡಿಸಿದೆಯೋ ಅಂತಹ ನಿನ್ನ ಅವತಾರವನ್ನು ನೋಡಲು ನಾವೆಲ್ಲರೂ ಇಲ್ಲಿಗೆ ಬಂದಿರುತ್ತೇವೆ. ನಮ್ಮ ಮನಸ್ಸಿನಲ್ಲಿ ಅದನ್ನು ನೋಡಲು ಬಹಳ ಕುತೂಹಲವುಂಟಾಗಿದೆ.”

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತ! ಹೀಗೆ ಶೂಲಪಾಣಿಯಾದ ಶಿವನಿಂದ ಪ್ರಾರ್ಥಿಸಲ್ಪಟ್ಟ ಪೂಜ್ಯನಾದ ಮಹಾವಿಷ್ಣುವು ಗಂಭೀರವಾದ ಭಾವನೆಯನ್ನು ಹೊಂದಿ ಗಹ-ಗಹಿಸಿ ನಗುತ್ತಾ ಉಮಾಪತಿಗೆ ಹೇಳಿದನು :

"ಶಂಕರನೇ! ಆ ಸಮಯದಲ್ಲಿ ಅಮೃತಕಲಶವು ದೈತ್ಯರಿಗೆ ಸೇರಿ ಹೋಗಿದ್ದಿತು. ಆಗ ನಾನು ದೇವತೆಗಳ ಕಾರ್ಯವನ್ನು ನೆರವೇರಿಸಿ ಕೊಡುವುದಕ್ಕಾಗಿ ದೈತ್ಯರನ್ನು ವಿಮೋಹಗೊಳಿಸಲು ಮೋಹಿನಿಯ ರೂಪವನ್ನು ತಾಳಿದೆನು. ದೇವಶಿರೋಮಣಿಯೇ! ಈಗ ನೀವೆಲ್ಲರೂ ಆ ರೂಪವನ್ನು ನೋಡಬಯಸಿರುವುದರಿಂದ ನಿಮಗೂ ಅದನ್ನು ತೋರಿಸುತ್ತೇನೆ. ಆದರೆ ಆ ನನ್ನ ರೂಪವು ಕಾಮಿಗಳಾದ ಪುರುಷರಿಗೆ ಆದರಣೀಯವಾದುದು. ಏಕೆಂದರೆ ಆ ನನ್ನ ರೂಪವು ಪ್ರಾಣಿಗಳ ಮನಸ್ಸಿನಲ್ಲಿರುವ ಕಾಮಭಾವವನ್ನು ಉತ್ತೇಜಿಸುತ್ತದೆ."

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತನೇ! ಶ್ರೀಭಗವಂತನು ಶಂಕರನಿಗೆ ಹೀಗೆ ಹೇಳಿ ಅಲ್ಲಿಯೇ ಮಾಯವಾದನು. ಭಗವಾನ್ ಶಂಕರನು ಸತಿಯಾದ ಉಮೆಯೊಡನೆ ನಾಲ್ಕು ದಿಕ್ಕುಗಳನ್ನೂ ನೋಡುತ್ತಾ ಅಲ್ಲಿಯೇ ಕುಳಿತಿದ್ದನು.

ಸ್ವಲ್ಪ ಹೊತ್ತಿನಲ್ಲಿಯೇ ಶಂಕರನು-ಹಲವು ಬಗೆಯ ಪುಷ್ಪಗಳಿಂದಲೂ, ಚಿಗುರುಗಳಿಂದಲೂ ತುಂಬಿದ ಗಿಡ-ಮರ-ಬಳ್ಳಿಗಳುಳ್ಳ ಉದ್ಯಾನವನದಲ್ಲಿ ಪ್ರಕಾಶಮಾನವಾದ ಪೀತಾಂಬರದಿಂದ ಸಮಾವೃತವಾದ ಸೊಂಟದಲ್ಲಿ ಒಡ್ಯಾಣವನ್ನು ಧರಿಸಿದ್ದ, ಚೆಂಡಿನಿಂದ ಆಟವಾಡುತ್ತಿದ್ದ ಸುಂದರಸ್ತ್ರೀಯನ್ನು ಕಂಡನು. ಚೆಂಡಿನ ಪುಟಹೊಡೆಯುವಾಗ ಆ ಸುಂದರಿಯು ಚೆಂಡಿನೊಡನೆ ಬಗ್ಗಿ–ಎದ್ದು ಮಾಡುತ್ತಿದ್ದಳು. ಹಾಗೆ ವೇಗವಾಗಿ ಬಗ್ಗಿ–ಎದ್ದುಮಾಡುವಾಗ, ಅವಳ ನಲಿದಾಡುವ ಸ್ತನಗಳಿಂದಲೂ ರತ್ನಹಾರಗಳ ಭಾರದಿಂದಲೂ ಅವಳ ಅತ್ಯಂತ ತೆಳುವಾಗಿದ್ದ ಸೊಂಟವು ಮುರಿದುಹೋಗುವುದೋ ಎಂಬಂತೆ ಕಾಣುತ್ತಿದ್ದಿತು. ನಲುಗಿಹೋಗಬಹುದೆಂಬ ಭಯದಿಂದ ಆ ಲಲನಾಮಣಿಯು ಚಿಗುರಿನಂತೆ ಸುಕೋಮಲವಾದ ತನ್ನ ಹೆಜ್ಜೆಗಳನ್ನು ತುಂಬಾ ಮೆಲ್ಲ-ಮೆಲ್ಲನೆ

ಇಡುತ್ತಿದ್ದಳು. ಅಂತಹ ವೈಯ್ಯಾರದ ಸ್ತ್ರೀರತ್ನವನ್ನು ಮಹೇಶನು ನೋಡಿ ದನು. ನಾಲ್ಕು ದಿಕ್ಕುಗಳಲ್ಲಿಯೂ ಪುಟಿಸುತ್ತಿದ್ದ ಚೆಂಡನ್ನು ಹಿಡಿಯುವ ತವಕದಿಂದ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ನೆಗೆದಾಡುತ್ತಿದ್ದ ಆ ಸುಂದರಿಯ ವಿಶಾಲವಾದ ಕಣ್ಣುಗಳು ಉದ್ವಿಗ್ನವಾಗಿರುವಂತೆ ಕಾಣುತ್ತಿದ್ದುವು. ಹೊಳೆಯುತ್ತಿರುವ ಕಿವಿಯ ಕುಂಡಲಗಳ ಕಾಂತಿಯಿಂದ ಬೆಳಗುವ ಕಪೋಲ ಗಳಿಂದಲೂ ಮತ್ತು ಕಪ್ಪಾದ ಮುಂಗುರುಳುಗಳಿಂದಲೂ ಕೂಡಿ ಶೋಭಾಯಮಾನವಾಗಿ ಕಾಣುತ್ತಿದ್ದ ಸುಂದರಮುಖಾರವಿಂದವನ್ನು ಹೊಂದಿದ್ದ ನವತರುಣೀಮಣಿಯನ್ನು ಶಂಕರನು ನೋಡಿದನು.

ಒಮ್ಮೆ ಆ ಸುಂದರಿಯ ಸೆರಗೂ ಜಾರಿಹೋಗುತ್ತಿದ್ದಿತು. ತಲೆಯೂ ಬಿಚ್ಚಿಹೋಗುತ್ತಿದ್ದಿತು. ಆದರೂ ಚೆಂಡಾಟವನ್ನು ನಿಲ್ಲಿಸುವಂತಿರಲಿಲ್ಲ. ಆ ಸಮಯದಲ್ಲವಳು ಬಿಚ್ಚಿಹೋಗುತ್ತಿದ್ದ ತಲೆಗೂದಲನ್ನು ಮನೋಹರವಾದ ಎಡಗೈಯಿಂದ ಕಟ್ಟಿಕೊಂಡಳು. ಬಲಗೈಯಿಂದ ಚೆಂಡನ್ನು ಪುಟಿಸುತ್ತಿದ್ದಳು. ಕುಚಕಲಶಗಳು ತೋರದಂತೆ, ಜಾರುತ್ತಿದ್ದ ಸೆರಗನ್ನು ಸೆಳೆದುಕೊಳ್ಳಲು ಅವಳಿಗೆ ಸಾಧ್ಯವಾಗಲೇ ಇಲ್ಲ. ಹೀಗೆ ತನ್ನ ಮಾಯೆಯಿಂದ ಜಗತ್ತನ್ನೇ ಮರುಳುಗೊಳಿಸುತ್ತಿದ್ದ ತ್ರಿಲೋಕಸುಂದರಿಯನ್ನು ಶಂಕರನು ನೋಡಿದನು.

ಹೀಗೆಯೇ ಚೆಂಡಿನಿಂದ ಆಟವಾಡುತ್ತಿದ್ದಾಗ ಆ ಸುಂದರಿಯು ಲಜ್ಜೆ ಯನ್ನು ತೋರಿಸುತ್ತಾ ಮಂದಹಾಸದಿಂದ ಒಮ್ಮೆ ಶಂಕರನನ್ನು ಓರೆಗಣ್ಣಿನಿಂದ ನೋಡಿದಳು. ಆ ಸ್ತ್ರೀಯ ಕಟಾಕ್ಷವೀಕ್ಷಣೆಯಿಂದಲೂ ಪ್ರೇಮಭಾವದ ಸೂಚನೆಯಿಂದಲೂ ಕಾಮಪರವಶನಾದ ಶಂಕರನು ತನ್ನನ್ನು ತಾನೇ ಮರೆತುಕೊಂಡುಬಿಟ್ಟನು. ಹೀಗಿರುವಾಗ ಹತ್ತಿರದಲ್ಲೇ ಕುಳಿತಿದ್ದ ಉಮೆಯ ವಿಷಯವಾಗಿ ಮತ್ತು ಪರಿವಾರದವರ ವಿಷಯವಾಗಿ ಹೇಳುವುದೇನಿದೆ? ಅವರಿರುವುದೇ ಅವನಿಗೆ ತಿಳಿಯದೇ ಹೋಯಿತು. ಒಮ್ಮೆ ಆ ಸುಂದರಿಯು ಆಡುತ್ತಿದ್ದ ಚೆಂಡು ಬಹಳ ದೂರಕ್ಕೆ ಹೋಗಿಬಿಟ್ಟಿತು. ಅದನ್ನನುಸರಿಸಿ ಆ ಸುಂದರಿಯೂ ಓಡಿಹೋಗುತ್ತಿದ್ದಳು. ಆ ಸಮಯದಲ್ಲಿ ಶಿವನು ನೋಡು ತ್ತಿರುವಂತೆಯೇ ವಾಯುದೇವನು ಆ ಸುಂದರಿಯು ಉಟ್ಟ ಪೀತಾಂಬರವನ್ನು ಒಡ್ಯಾಣದ ಸಮೇತವಾಗಿ ಅಪಹರಿಸಿಬಿಟ್ಟನು. ಹೀಗೆ ಸುಂದರವಾದ ಕಡೆ

ಗಣ್ಣುಗಳಿಂದ ಕೂಡಿದ್ದ, ಎಷ್ಟು ನೋಡಿದರೂ ಮತ್ತೂ ನೋಡಬೇಕೆಂಬ ಆಕಾಂಕ್ಷೆಯನ್ನು ಉಂಟುಮಾಡುತ್ತಿದ್ದ, ವಕ್ರವಾದ ಕಟಾಕ್ಷದಿಂದ ತನ್ನನ್ನೇ ತಾನು ನೋಡಿಕೊಳ್ಳುತ್ತಿದ್ದ ಆ ನಾರೀಮಣಿಯಲ್ಲಿ ಶಂಭುವಿನ ಮನಸ್ಸು ನೆಟ್ಟುಹೋಯಿತು. ಕ್ಷಣಮಾತ್ರದಲ್ಲಿ ಮೋಹಿನಿಯು ಶಂಕರನ ವಿವೇಕವನ್ನೇ ಅಪಹರಿಸಿಬಿಟ್ಟಳು. ಅವನು ಅವಳ ಹಾವ-ಭಾವಗಳಿಂದ ಕಾಮಾತುರನಾಗಿ ಬಿಟ್ಟನು. ಪಕ್ಕದಲ್ಲಿಯೇ ಇದ್ದ ಪಾರ್ವತಿಯು ನೋಡುತ್ತಿದ್ದರೂ ನಾಚಿಕೆಯನ್ನು ಬಿಟ್ಟು ಶಂಕರನು ಮೋಹಿನಿಯ ಬಳಿಗೆ ಓಡಿದನು. ವಿವಸ್ತ್ರಳಾಗಿದ್ದ ಮೋಹಿನಿಯು, ತನ್ನ ಕಡೆಗೆ ಶಿವನು ಬರುತ್ತಿರುವುದನ್ನು ನೋಡಿ ಬಹಳ ನಾಚಿಕೆಯಿಂದ ಕಿಲ-ಕಿಲನೆ ನಗುತ್ತಾ ಅಲ್ಲಿ ನಿಲ್ಲದೆ ವೃಕ್ಷಗಳ ಹಿಂದೆ ಅವಿತುಕೊಂಡಳು. ಭಗವಾನ್ ಭವನ ಮನಸ್ಸು ವ್ಯಾಕುಲಗೊಂಡಿತು. ಅವನು ಕಾಮಕ್ಕೆ ವಶನಾಗಿಬಿಟ್ಟಿದ್ದನು. ಹೆಣ್ಣಾನೆಯನ್ನು ಹಿಂಬಾಲಿಸಿ ಹೋಗುವ ಸಲಗದಂತೆ ಶಿವನು ಮೋಹಿನಿಯನ್ನು ಹಿಂಬಾಲಿಸಿದನು. ಅವನು ಬಹಳ ವೇಗವಾಗಿ ಅವಳನ್ನು ಹಿಂಬಾಲಿಸಿ ಓಡೋಡುತ್ತಾ ಅವಳನ್ನು ಸಮೀಪಿಸಿ ಅವಳ ಮುಡಿಯನ್ನು ಹಿಡಿದು ಅವಳನ್ನು ನಿಲ್ಲಿಸಿದನು. ಅವಳಿಗೆ ಇಷ್ಟವಿಲ್ಲದಿದ್ದರೂ ಪರಶಿವನು ಮೋಹಿನಿಯನ್ನು ಎರಡು ತೋಳುಗಳಿಂದಲೂ ಗಾಢವಾಗಿ ತಬ್ಬಿಕೊಂಡು–ಮದಗಜವು ಹೆಣ್ಣಾನೆಯನ್ನು ಹಿಡಿಯುವಂತೆ– ಆಕೆಯನ್ನು ಹಿಡಿದು ಗಾಢವಾಗಿ ಆಲಿಂಗಿಸಿಕೊಂಡನು. ಒಲ್ಲದ ಮೋಹಿನಿಯು ಕೈತೆಕ್ಕೆಯಿಂದ ಬಿಡಿಸಿಕೊಳ್ಳಲು ಸಾಹಸಮಾಡಿದಳು. ಅವಳ ತಲೆಗೂದಲುಗಳು ಕೆದರಿದುವು. ವಿಷ್ಣುಮಾಯಾಕಲ್ಪಿತಳಾಗಿದ್ದ, ದೊಡ್ಡದಾದ ಕಟಿಪ್ರದೇಶವನ್ನು ಹೊಂದಿದ್ದ ಮೋಹಿನಿಯು ಹೆಣಗಾಡಿ ಕಡೆಗೂ ಶಿವನ ಬಾಹುಪಾಶದಿಂದ ತಪ್ಪಿಸಿಕೊಂಡು ಓಡತೊಡಗಿದಳು. ಶತ್ರುವಾದ ಕಾಮದೇವನಿಂದ ಪರಾಜಿತನಾದವನಂತೆ ಶಿವನು–ಮೋಹಿನಿಯು ತಪ್ಪಿಸಿಕೊಂಡು ಓಡಿದರೂ ತಟಸ್ಥನಾಗದೆ ಅದ್ಭುತಕರ್ಮನಾದ ಮಹಾವಿಷ್ಣುವಿನ (ಮೋಹಿನಿಯ) ಮಾರ್ಗವನ್ನೇ ಅನುಸರಿಸಿ ಪುನಃ ಓಡತೊಡಗಿದನು. ಬೆದೆಬಂದ ಹೆಣ್ಣಾನೆಯ ಹಿಂದೆ ಮದಿಸಿದ ಗಂಡಾನೆಯು ಹೋಗುವಂತೆ ಶಿವನು ಮೋಹಿನಿಯನ್ನೇ ಹಿಂಬಾಲಿಸಿ ಓಡುತ್ತಿದ್ದನು. ಹಾಗೆ ತದೇಕಚಿತ್ತನಾಗಿ ಓಡುತ್ತಿದ್ದಾಗ ಅಮೋಘವೀರ್ಯನಾದ ಪರಶಿವನ ವೀರ್ಯವು ಸ್ಖಲಿ

ಸಿತು. ಮಹೀಪತಿಯೇ! ಮಹಾತ್ಮನಾದ ಪರಶಿವನ ರೇತಸ್ಸು ಎಲ್ಲೆಲ್ಲಿ ಸ್ಖಲಿಸಿತೋ ಆ ಎಲ್ಲ ಪ್ರದೇಶಗಳಲ್ಲೂ ಚಿನ್ನದ ಮತ್ತು ಬೆಳ್ಳಿಯ ಗಣಿಗಳಾದುವು. ಹೀಗೆ ಮೋಹಿನಿಯನ್ನರಸಿಕೊಂಡು ಪರಶಿವನು ನದೀ-ನದ-ಸರೋವರಗಳ ದಂಡೆಗಳಲ್ಲಿಯೂ ಬೆಟ್ಟ-ಗುಡ್ಡಗಳಲ್ಲಿಯೂ, ವನಗಳಲ್ಲಿಯೂ, ಉದ್ಯಾನವನಗಳಲ್ಲಿಯೂ ಅಡ್ಡಾಡುತ್ತಾ ಕಡೆಗೆ ಮಹರ್ಷಿಗಳಿದ್ದ ಒಂದು ಆಶ್ರಮಕ್ಕೆ ಬಂದನು.

ಪರೀಕ್ಷಿತ! ರೇತಸ್ಖಲನವಾದನಂತರ ಮಹರ್ಷಿಗಳ ಆಶ್ರಮಕ್ಕೆ ಬಂದ ಶಿವನು ವಿಷ್ಣುಮಾಯೆಯಿಂದ ವಿವೇಕಶೂನ್ಯನಾದೆನೆಂದು ಭಾವಿಸಿ ಕಾಮವಿಕಾರದಿಂದ ಮನಸ್ಸನ್ನು ಹಿಂತೆಗೆದುಕೊಂಡನು. ಜಗತ್ತಿಗೆ ಆತ್ಮಸ್ವರೂಪನಾದ, ತಿಳಿಯಲಶಕ್ಯವಾದ ವೀರ್ಯವುಳ್ಳ ಭಗವಂತನ ಮಹಿಮೆಯನ್ನು ತಿಳಿದ ಪರಶಿವನು ತನ್ನ ವಿಷಯದಲ್ಲಾದ ಈ ಪ್ರಸಂಗವನ್ನು ಅದ್ಭುತವಾದುದೆಂದೂ ಭಾವಿಸಲಿಲ್ಲ. ಬಳಿಕ ಪುರುಷರೂಪವನ್ನು ಧರಿಸಿ ಬಂದ ಮಧುಸೂದನನು ಈ ಪ್ರಸಂಗದಿಂದ ದುಃಖಿಸದಿರುವ ಮತ್ತು ನಾಚಿಕೆಗೊಳ್ಳದಿರುವ ಶಿವನನ್ನು ನೋಡಿ ಪರಮಪ್ರೀತನಾಗಿ ಪರಮೇಶ್ವರನಿಗೆ ಹೇಳಿದನು :

"ದೇವೋತ್ತಮನೇ! ನನ್ನ ಸ್ತ್ರೀರೂಪವಾದ ಮಾಯೆಯಿಂದ ವಿಮೋಹಿತನಾದರೂ ನೀನು ಅದೃಷ್ಟವಶದಿಂದ ನಿನ್ನ ಬುದ್ಧಿಯಿಂದಲೇ ಹಿಂದಿನ ನೆಲೆಯಲ್ಲಿ ನಿಂತಿರುವೆ. ವಿಮೋಹಿತವಾಗಿದ್ದ ಬುದ್ಧಿಯನ್ನು ನೀನೇ ಸರಿಪಡಿಸಿಕೊಂಡಿರುವೆ. ಜಿತೇಂದ್ರಿಯರಲ್ಲದವರಿಂದ ದಾಟಲು ಅಸಾಧ್ಯವಾದ ಬಗೆ-ಬಗೆಯ ಹಾವ-ಭಾವಗಳನ್ನು ಪ್ರಕಟಿಸುವ ನನ್ನ ಮಾಯೆಯನ್ನು ನಿನ್ನೊಬ್ಬ ನನ್ನು ಬಿಟ್ಟು ವಿಷಯಾಸಕ್ತನಾದ ಬೇರೆ ಯಾವನು ತಾನೇ ದಾಟಬಲ್ಲನು? ಸೃಷ್ಟ್ಯಾದಿಗಳಿಗೆ ಕಾರಣವಾದ, ನನ್ನೊಡನಿರುವ ರಜಸ್ಸು ಮೊದಲಾದ ಅಂಶಗಳಿಂದ ಯುಕ್ತವಾಗಿರುವ ತ್ರಿಗುಣಾತ್ಮಕವಾದ ಈ ಮಾಯೆಯು ನಿನ್ನನ್ನು ಪರಾಜಯಗೊಳಿಸಲಾರದು."

ಶ್ರೀಶುಕರು ಹೇಳುತ್ತಾರೆ :

ಮಹಾರಾಜ! ಹೀಗೆ ಶ್ರೀವತ್ಸಚಿಹ್ನೆಯನ್ನು ಧರಿಸಿರುವ ಭಗವಂತನಾದ ಶ್ರೀಹರಿಯಿಂದ ಸತ್ಕೃತನಾದ ಶಿವನು ಶ್ರೀಹರಿಗೆ ಪ್ರದಕ್ಷಿಣೆ-ನಮಸ್ಕಾರ

ಮಾಡಿ ಅವನ ಅಪ್ಪಣೆಯನ್ನು ಪಡೆದು ಗಣಗಳೊಂದಿಗೆ ತನ್ನ ಆಲಯವಾದ ಕೈಲಾಸಕ್ಕೆ ತೆರಳಿದನು. ಕೈಲಾಸಕ್ಕೆ ಹೋದನಂತರ ಋಷಿಗಳ ಮಧ್ಯದಲ್ಲಿ ಅವರೆಲ್ಲರಿಗೂ ಕೇಳಿಸುವಂತೆ ತನ್ನ ಅಂಶದಿಂದಲೇ ಹುಟ್ಟಿದ್ದ ತನಗೆ ಅರ್ಧಶರೀರವೆನಿಸಿದ ಶಕ್ತಿಸ್ವರೂಪಿಣಿಯಾದ ಭವಾನಿಗೆ ಹೇಳಿದನು :

ಅಪಿ ವ್ಯಪಶ್ಯಸ್ತ್ವಮಜಸ್ಯ ಮಾಯಾಂ
ಪರಸ್ಯ ಪುಂಸಃ ಪರದೇವತಾಯಾಃ ।
ಅಹಂ ಕಲಾನಾಮೃಷಭೋ ವಿಮುಹ್ಯೇ
ಯಯಾವಶೋಽನ್ಯೇ ಕಿಮುತಾಸ್ವತನ್ತ್ರಾಃ ॥೪೩॥

"ಪಾರ್ವತಿಯೇ! ದೇವೋತ್ತಮನಾದ, ಪರಮಪುರುಷನಾದ, ಹುಟ್ಟು-ಸಾವುಗಳಿಲ್ಲದ ಶ್ರೀಹರಿಯ ಅಮೋಘವಾದ ಮಾಯೆಯನ್ನು ನೀನೂ ಕಂಡೆಯಲ್ಲವೇ! ಸಕಲಕಲಾವಲ್ಲಭನಾದ ನಾನೇ ಕಾಮವಶನಾಗಿ ವಿಮೋಹಗೊಂಡೆನು. ಹೀಗಿರುವಾಗ ಅಸ್ವತಂತ್ರರಾದ (ರಾಗ-ದ್ವೇಷಾದಿಗಳಿಗೆ ವಶರಾದ) ಇತರರ ವಿಷಯದಲ್ಲಿ ಹೇಳುವುದೇನಿದೆ?

ಯಂ ಮಾಮಪೃಚ್ಛಸ್ತ್ವಮುಪೇತ್ಯ ಯೋಗಾ-
ತ್ಸಮಾಸಹಸ್ರಾನ್ತ ಉಪಾರತಂ ವೈ ।
ಸ ಏಷ ಸಾಕ್ಷಾತ್ಪುರುಷಃ ಪುರಾಣೋ
ನ ಯತ್ರ ಕಾಲೋ ವಿಶತೇ ನ ವೇದಃ ॥೪೪॥

ಹಿಂದೆ ಒಂದು ಸಾವಿರ ವರ್ಷಗಳ ಕಾಲ ತಪಸ್ಸುಮಾಡಿ ತಪಸ್ಸಿನಿಂದ ವಿರತನಾಗಿ ಹಿಂದಿರುಗಿದ ನನ್ನನ್ನು ಕುರಿತು ನೀನು–'ಸ್ವಾಮೀ! ನೀನು ಯಾರನ್ನು ಕುರಿತು ಈ ಮಹಾತಪಸ್ಸನ್ನು ಮಾಡಿದೆ?'–ಎಂದು ಪ್ರಶ್ನಿಸಿದೆಯಲ್ಲವೇ? ವೇದವಾಕ್ಕುಗಳಿಗೂ ಅಗೋಚರನಾದ, ಕಾಲಾತೀತನಾದ, ಪುರಾಣಪುರುಷನಾದ ಈ ಪರಬ್ರಹ್ಮಪರಮಾತ್ಮನನ್ನೇ ಕುರಿತು ನಾನು ತಪಸ್ಸುಮಾಡುತ್ತಿದ್ದೆನು."

ಪರೀಕ್ಷಿತಮಹಾರಾಜ! ಸಮುದ್ರವನ್ನು ಕಡೆಯುವ ಸಮಯದಲ್ಲಿ ಯಾವನು ಕೂರ್ಮರೂಪಿಯಾಗಿ ದೊಡ್ಡದಾಗಿದ್ದ ಮಂದರಪರ್ವತವನ್ನು ತನ್ನ ಬೆನ್ನಮೇಲೆ ಧರಿಸಿದ್ದನೋ ಅಂತಹ ಶಾರ್ಙ್ಗಧನ್ವನಾದ ಮಹಾವಿಷ್ಣುವಿನ ಮಹಿಮೆಯನ್ನು ನಿನಗೆ ವರ್ಣಿಸಿ ಹೇಳಿರುತ್ತೇನೆ.

ಏತನ್ಮುಹುಃ ಕೀರ್ತಯತೋಽನುಶೃಣ್ವತೋ
ನ ರಿಷ್ಯತೇ ಜಾತು ಸಮುದ್ಯಮಃ ಕ್ವಚಿತ್ ।
ಯದುತ್ತಮಶ್ಲೋಕಗುಣಾನುವರ್ಣನಂ
ಸಮಸ್ತಸಂಸಾರಪರಿಶ್ರಮಾಪಹಮ್ ॥೪೬॥

ಯಾವ ಪುರುಷನು ಈ ಪ್ರಸಂಗವನ್ನು ಬಾರಿ-ಬಾರಿಗೂ ಸಂಕೀರ್ತಿಸುವನೋ ಅಥವಾ ಶ್ರವಣಮಾಡುವನೋ ಅವನ ಪ್ರಯತ್ನವು ಯಾವಾಗಲೂ ಎಲ್ಲಿಯೂ ನಿಷ್ಫಲವಾಗುವುದಿಲ್ಲ. ಪವಿತ್ರಕೀರ್ತಿಯಾದ ಭಗವಂತನ ಗುಣಗಳನ್ನೂ ಮತ್ತು ಲೀಲೆಗಳನ್ನೂ ಕೀರ್ತನೆಮಾಡುವುದು ಸಂಸಾರದ ಸಮಸ್ತಕ್ಲೇಶಗಳನ್ನೂ ಪರಿಶ್ರಮಗಳನ್ನೂ ಹೋಗಲಾಡಿಸುತ್ತದೆ.

ಅಸದವಿಷಯಮಙ್ಘ್ರಿಂ ಭಾವಗಮ್ಯಂ ಪ್ರಪನ್ನಾ-
ನಮೃತಮಮರವರ್ಯಾನಾಶಯತ್ಸಿನ್ಧುಮಥ್ಯಮ್ ।
ಕಪಟಯುವತಿವೇಷೋ ಮೋಹಯನ್ಯಃ ಸುರಾರೀಂ-
ಸ್ತಮಹಮುಪಸೃತಾನಾಂ ಕಾಮಪೂರಂ ನತೋಽಸ್ಮಿ ॥

ದುಷ್ಟಜನರಿಗೆ ಶ್ರೀಭಗವಂತನ ದಿವ್ಯಚರಣಕಮಲಗಳು ಎಂದಿಗೂ ಸಿಕ್ಕುವುದಿಲ್ಲ. ಭಕ್ತಿಭಾವದಿಂದ ಯುಕ್ತರಾದ ಪುರುಷರಿಗೆ ಮಾತ್ರವೇ ಅದು ಲಭ್ಯವಾಗುತ್ತದೆ. ಈ ಕಾರಣದಿಂದಲೇ ಅವನು ಮಾಯಾಮಯವಾದ ಹೆಂಗಸಿನ ರೂಪವನ್ನು ಧರಿಸಿ ದೈತ್ಯರನ್ನು ಮೋಹಪರವಶರನ್ನಾಗಿ ಮಾಡಿದನು. ತನ್ನ ಚರಣಕಮಲಗಳಿಗೆ ಶರಣಾಗತರಾಗಿ ಬಂದ ದೇವತೆಗಳಿಗೆ ಸಮುದ್ರಮಧ್ಯದಿಂದ ದೊರಕಿದ ಅಮೃತವನ್ನು ಕುಡಿಸಿದನು. ಕೇವಲ ದೇವತೆಗಳಿಗೆ ಮಾತ್ರವಲ್ಲ; ಅವನ ದಿವ್ಯಚರಣಕಮಲಗಳಿಗೆ ಶರಣಾದ ಯಾರಿಗೇ ಆದರೂ ದಯಾಮಯನಾದ ಆ ಭಗವಂತನು ಅವರ ಸಮಸ್ತ ಕಾಮನೆಗಳನ್ನೂ ಪೂರ್ಣಗೊಳಿಸಿಕೊಡುತ್ತಾನೆ. ಅಂತಹ ಪ್ರಭುವಿನ ಚರಣ ಕಮಲಗಳಿಗೆ ನಾನು ನಮಸ್ಕರಿಸುತ್ತೇನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೧೩ನೆಯ ಅಧ್ಯಾಯ

ಮುಂದೆ ಬರುವ ಏಳು ಮನ್ವಂತರಗಳ ವರ್ಣನೆ

ಶ್ರೀಶುಕರು ಹೇಳುತ್ತಾರೆ :

ಮನುರ್ವಿವಸ್ವತಃ ಪುತ್ರಃ ಶ್ರಾದ್ಧದೇವ ಇತಿ ಶ್ರುತಃ ।
ಸಪ್ತಮೋ ವರ್ತಮಾನೋ ಯಸ್ತದಪತ್ಯಾನಿ ಮೇ ಶೃಣು ॥೧॥

"ಪರೀಕ್ಷಿತಮಹಾರಾಜ! ಚಾಕ್ಷುಷಮನ್ವಂತರದಲ್ಲಿ ನಡೆದ ಅಜಿತಾವತಾರವನ್ನೂ ಮತ್ತು ಅವನ ಮಹಿಮೆಯನ್ನೂ ಹೇಳಿದ್ದಾಯಿತು. ಈಗ ಏಳನೆಯ ಮನ್ವಂತರದ ಚರಿತ್ರೆಯನ್ನು ಹೇಳುತ್ತೇನೆ. ವಿವಸ್ವಂತನ ಮಗನಾದ ಯಶೋವಂತನಾದ ಶ್ರಾದ್ಧದೇವನೆಂಬುವನೇ ಏಳನೆಯ ಮನ್ವಂತರಕ್ಕೆ ಮನುವಾಗಿದ್ದಾನೆ. ಈಗ ನಡೆಯುತ್ತಿರುವ ಮನ್ವಂತರವೇ ಅವನ ಕಾರ್ಯದ ಕಾಲವಾಗಿದೆ. ಅವನ ಸಂತಾನವನ್ನು ನಾನು ವರ್ಣಿಸಿ ಹೇಳುತ್ತೇನೆ ; ಕೇಳು.

ವೈವಸ್ವತಮನುವಿಗೆ ಇಕ್ಷ್ವಾಕು, ನಭಗ, ಧೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ದಿಷ್ಟ, ಕರೂಷ, ಪೃಷಧ್ರ ಮತ್ತು ವಸುಮಾನರೆಂಬ ಹತ್ತು ಮಕ್ಕಳಿದ್ದಾರೆ. ಆದಿತ್ಯ, ವಸು, ರುದ್ರ, ವಿಶ್ವೇದೇವತೆಗಳು, ಮರುದ್ಗಣಗಳು, ಅಶ್ವಿನೀಕುಮಾರರು ಮತ್ತು ಋಭು–ಇವರೇ ಈ ಮನ್ವಂತರದ ಪ್ರಧಾನರಾದ ದೇವತೆಗಳು. ಇವರಿಗೆ ಪುರಂದರನೆಂಬುವನು ಇಂದ್ರನಾಗಿದ್ದಾನೆ. ಕಶ್ಯಪ, ಅತ್ರಿ, ವಸಿಷ್ಠ, ವಿಶ್ವಾಮಿತ್ರ, ಗೌತಮ, ಜಮದಗ್ನಿ ಮತ್ತು ಭರದ್ವಾಜ–ಇವರೇ ಈ ಮನ್ವಂತರದ ಸಪ್ತರ್ಷಿಗಳು. ಈ ಮನ್ವಂತರದಲ್ಲಿಯೂ ಕಶ್ಯಪರ ಪತ್ನಿಯಾದ ಅದಿತಿಯ ಗರ್ಭದಲ್ಲಿ ಆದಿತ್ಯನ ಕಡೆಯ ತಮ್ಮನಾಗಿ ವಾಮನರೂಪದಲ್ಲಿ ಭಗವಂತನಾದ ಮಹಾವಿಷ್ಣುವು ಅವತಾರಮಾಡಿದನು.

ಪರೀಕ್ಷಿತನೇ! ಹೀಗೆ ನಾನು ನಿನಗೆ ಸಂಕ್ಷೇಪವಾಗಿ ಏಳು ಮನ್ವಂತರಗಳ ವರ್ಣನೆಯನ್ನು ಮಾಡಿದ್ದೇನೆ. ಇನ್ನು ಮುಂದೆ ನಾನು ಶ್ರೀಭಗವಂತನ ಶಕ್ತಿಯಿಂದ ಕೂಡಿದ, ಮುಂದೆ ಬರುವ ಏಳು ಮನ್ವಂತರಗಳ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳುತ್ತೇನೆ. (ಶ್ಲೋಕ 2-7)

ಪರೀಕ್ಷಿತನೇ! ನಾನು ಈ ಹಿಂದೆಯೇ (ಆರನೆಯ ಸ್ಕಂಧದಲ್ಲಿ) ಸೂರ್ಯದೇವನಿಗೆ ಸಂಜ್ಞಾ ಮತ್ತು ಛಾಯಾ ಎಂಬಿಬ್ಬರು ಮಡದಿಯರಿದ್ದ ರೆಂಬ ವಿಷಯವನ್ನು ಹೇಳಿದ್ದೆನು. ಆ ಇಬ್ಬರೂ ವಿಶ್ವಕರ್ಮನ ಮಕ್ಕಳು. ವಡವಾ–ಎಂಬ ಮೂರನೆಯ ಪತ್ನಿಯೂ ಸೂರ್ಯನಿಗೆ ಇದ್ದಳೆಂದು ಕೆಲವರು ಹೇಳುತ್ತಾರೆ. (ಸಂಜ್ಞಾದೇವಿಗೇ ವಡವಾ–ಎಂಬ ಹೆಸರು ಎಂಬುದಾಗಿಯೂ ಹೇಳುತ್ತಾರೆ.) ಸೂರ್ಯನ ಪತ್ನಿಯರಲ್ಲಿ ಸಂಜ್ಞಾ ಎಂಬುವಳಿಗೆ ಯಮ, ಯಮೀ ಮತ್ತು ಶ್ರಾದ್ಧದೇವರೆಂಬ ಮೂವರು ಮಕ್ಕಳು ಹುಟ್ಟಿದರು. ಛಾಯಾದೇವಿಯಲ್ಲಿ ಸಾವರ್ಣಿ ಮತ್ತು ಶನೈಶ್ಚರ ಎಂಬ ಇಬ್ಬರು ಗಂಡು ಮಕ್ಕಳೂ ತಪತೀ–ಎಂಬ ಹೆಸರಿನ ಕನ್ಯೆಯೂ ಹುಟ್ಟಿದರು. ತಪತಿಯು ಮುಂದೆ ಸಂವರಣನ ಪತ್ನಿಯಾದಳು. ಸಂಜ್ಞಾ ದೇವಿಯು ವಡವಾ ಎಂಬ ರೂಪವನ್ನು ತಾಳಿದಾಗ ಅವಳಲ್ಲಿ ಅಶ್ವಿನೀ ಕುಮಾರರು ಜನಿಸಿದರು.

ಎಂಟನೆಯ ಮನ್ವಂತರದಲ್ಲಿ ಸಾವರ್ಣಿ ಎಂಬುವನು ಮನುವಾಗುತ್ತಾನೆ. ನಿರ್ಮೋಕ, ವಿರಜಸ್ಕ–ಇವರೇ ಮೊದಲಾದವರು ಅವನಿಗೆ ಮಕ್ಕಳಾಗಿ ಹುಟ್ಟುತ್ತಾರೆ. ಸುತಪಸ, ವಿರಜಸ್ಕ ಮತ್ತು ಅಮೃತಪ್ರಭರೆಂಬುವರು ದೇವತೆಗಳಾಗುತ್ತಾರೆ. ಆಗ ವಿರೋಚನನ ಮಗನಾದ ಬಲಿಯೇ ಇಂದ್ರನಾಗುತ್ತಾನೆ. ಭಗವಂತನಾದ ಮಹಾವಿಷ್ಣುವು ವಾಮನಾವತಾರವನ್ನು ಮಾಡಿ ಬಲಿಚಕ್ರವರ್ತಿಯಿಂದ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಬೇಡಿದನು. ಆದರೆ ಬಲಿಚಕ್ರವರ್ತಿಯು ವಾಮನಾವತಾರವೆತ್ತಿದ್ದ ಭಗವಂತನಿಗೆ ಮೂರು ಲೋಕಗಳನ್ನೂ ಅರ್ಪಿಸಿಬಿಟ್ಟನು. ಭಗವಂತನು ಒಮ್ಮೆ ಬಲಿಚಕ್ರವರ್ತಿಯನ್ನು ಬಂಧನದಲ್ಲಿಟ್ಟಿದ್ದನು. ಅನಂತರ ಅವನ ವಿಷಯದಲ್ಲಿ ಪ್ರಸನ್ನನಾಗಿ ಸ್ವರ್ಗಲೋಕಕ್ಕಿಂತಲೂ ಶ್ರೇಷ್ಠವಾದ ಸುತಲಲೋಕಕ್ಕೆ ಆತನನ್ನು ಅಧಿಪತಿಯನ್ನಾಗಿ ಮಾಡಿದನು. ಅವನೀಗ ಆ ಸುತಲಲೋಕದಲ್ಲಿ ಇಂದ್ರನಂತೆಯೇ ವಿರಾಜಮಾನನಾಗಿದ್ದಾನೆ. ಮುಂದೆ ಅವನು ಸಾವರ್ಣಿಮನ್ವಂತರದಲ್ಲಿ ಇಂದ್ರನಾಗುತ್ತಾನೆ. ಅನಂತರ ಅವನು ಸಮಸ್ತವಾದ ಐಶ್ವರ್ಯವನ್ನೂ ಇಂದ್ರನ ಪದವಿಯನ್ನೂ ಪರಿತ್ಯಜಿಸಿ ಪರಮಸಿದ್ಧಿಯನ್ನು ಹೊಂದುತ್ತಾನೆ. ಗಾಲವ, ದೀಪ್ತಿಮಂತ, ಪರಶುರಾಮ,

ಅಶ್ವತ್ಥಾಮ, ಕೃಪಾಚಾರ್ಯ, ಋಷ್ಯಶೃಂಗ ಮತ್ತು ನನ್ನ ತಂದೆ ವ್ಯಾಸರು ಸಾವರ್ಣಿಮನ್ವಂತರದಲ್ಲಿ ಸಪ್ತರ್ಷಿಗಳಾಗುತ್ತಾರೆ. ಆ ಸಮಯದಲ್ಲವರು ಯೋಗಬಲದಿಂದ ತಮ್ಮ-ತಮ್ಮ ಆಶ್ರಮಗಳಲ್ಲಿ ನೆಲೆಸಿರುತ್ತಾರೆ. ಮುಂದೆಯೂ ಹಾಗೆಯೇ ಇರುತ್ತಾರೆ. ದೇವಗುಹ್ಯನ ಪತ್ನಿಯಾದ ಸರಸ್ವತೀ ಎಂಬುವಳ ಗರ್ಭದಲ್ಲಿ ಸಾರ್ವಭೌಮ ಎಂಬ ಹೆಸರಿನಿಂದ ಶ್ರೀಭಗವಂತನು ಅವತರಿಸುತ್ತಾನೆ. ಸಾರ್ವಭೌಮಾವತಾರದಲ್ಲಿಯೇ ಶ್ರೀಭಗವಂತನು ಈ ಏಳನೆಯ ಮನ್ವಂತರದಲ್ಲಿ ಇಂದ್ರನಾಗಿರುವ ಪುರಂದರನಿಂದ ಸ್ವರ್ಗಾಧಿಪತ್ಯ ವನ್ನು ಕಸಿದು ಬಲಿಗೆ ವಹಿಸಿಕೊಡುತ್ತಾನೆ. (ಶ್ಲೋಕ 8-17)

ಪರೀಕ್ಷಿತನೇ! ವರುಣನ ಮಗನಾದ ದಕ್ಷಸಾವರ್ಣಿ–ಎಂಬುವನು ಒಂಬತ್ತನೆಯ ಮನ್ವಂತರದ ಮನುವಾಗುತ್ತಾನೆ. ಇವನಿಗೆ ಭೂತಕೇತು, ದೀಪ್ತಕೇತು–ಇವರೇ ಮೊದಲಾದವರು ಮಕ್ಕಳಾಗುತ್ತಾರೆ. ಆಗ ಪಾರಾ, ಮರೀಚಿಗರ್ಭ–ಇವರೇ ಮೊದಲಾದವರು ದೇವತೆಗಳಾಗುತ್ತಾರೆ. ಅದ್ಭುತ–ಎಂಬುವನು ಒಂಬತ್ತನೆಯ ಮನ್ವಂತರದಲ್ಲಿ ಇಂದ್ರನಾಗುತ್ತಾನೆ. ದ್ಯುತಿ ಮಂತನೇ ಮೊದಲಾದವರು ಸಪ್ತರ್ಷಿಗಳಾಗುತ್ತಾರೆ. ಆಯುಷ್ಮಂತನ ಪತ್ನಿಯಾದ ಅಂಬುಧಾರಾ–ಎಂಬುವಳ ಗರ್ಭದಲ್ಲಿ ಋಷಭನ ರೂಪದಲ್ಲಿ ಭಗವಂತನು ಅಂಶಾವತಾರಮಾಡುತ್ತಾನೆ. ಅದ್ಭುತನೆಂಬ ಇಂದ್ರನು, ಋಷಭನು ಗೆದ್ದುಕೊಡುವ ಮೂರು ಲೋಕಗಳನ್ನೂ ಉಪಭೋಗಿಸು ತ್ತಾನೆ. ಉಪಶ್ಲೋಕನ ಮಗನಾದ ಬ್ರಹ್ಮಸಾವರ್ಣಿ ಎಂಬುವನು ಹತ್ತನೆಯ ಮನ್ವಂತರದಲ್ಲಿ ಮನುವಾಗುತ್ತಾನೆ. ಅವನು ಸಮಸ್ತ ಸದ್ಗುಣಗಳಿಗೂ ನಿವಾಸಸ್ಥಾನವಾಗಿರುತ್ತಾನೆ. ಅವನಿಗೆ ಭೂರಿಷೇಣನೇ ಮೊದಲಾದ ಮಕ್ಕಳಿರು ತ್ತಾರೆ. ಆಗ ಹವಿಷ್ಮಂತ, ಸುಕೃತಿ, ಸತ್ಯ, ಜಯ, ಮೂರ್ತಿ–ಇವರೇ ಮೊದ ಲಾದವರು ಸಪ್ತರ್ಷಿಗಳಾಗಿರುತ್ತಾರೆ. ಸುವಾಸನ, ವಿರುದ್ಧ ಇವರೇ ಮೊದ ಲಾದವರು ದೇವತೆಗಳಾಗಿರುತ್ತಾರೆ. ಶಂಭುವು ಹತ್ತನೆಯ ಮನ್ವಂತರದಲ್ಲಿ ಇಂದ್ರನಾಗುತ್ತಾನೆ. ವಿಶ್ವಸೃಜನ ಪತ್ನಿಯಾದ ವಿಷೂಚೀ–ಎಂಬುವಳ ಗರ್ಭ ದಲ್ಲಿ ಭಗವಂತನು ವಿಷ್ವಕ್ಸೇನನ ರೂಪದಲ್ಲಿ ಅಂಶಾವತಾರಮಾಡುತ್ತಾನೆ. ವಿಷ್ವಕ್ಸೇನನು ಇಂದ್ರನಾದ ಶಂಭುವಿನ ಮಿತ್ರನಾಗಿರುತ್ತಾನೆ. ಅತ್ಯಂತ ಸಂಯಮಿಯೂ ಜಿತೇಂದ್ರಿಯನೂ ಆದ ಧರ್ಮಸಾವರ್ಣಿಯು ಹನ್ನೊಂದ

ನೆಯ ಮನ್ವಂತರಕ್ಕೆ ಮನುವಾಗುತ್ತಾನೆ. ಅವನಿಗೆ ಸತ್ಯ-ಧರ್ಮ ಇವರೇ ಮೊದಲಾದವರು ಮಕ್ಕಳಾಗುತ್ತಾರೆ. ಆಗ ವಿಹಂಗಮ, ಕಾಮಗಮ, ನಿರ್ವಾಣರುಚಿ-ಇವರೇ ಮೊದಲಾದವರು ದೇವತೆಗಳಾಗುತ್ತಾರೆ. ಅರುಣನೇ ಮೊದಲಾದವರು ಸಪ್ತರ್ಷಿಗಳಾಗುತ್ತಾರೆ. ವೈಧೃತನೆಂಬುವನು ಹನ್ನೊಂದ ನೆಯ ಮನ್ವಂತರಕ್ಕೆ ಇಂದ್ರನಾಗುತ್ತಾನೆ. ಆರ್ಯಕನ ಪತ್ನಿಯಾದ ವೈಧೃತಾ ಎಂಬುವಳ ಗರ್ಭದಲ್ಲಿ ಧರ್ಮಸೇತುವಿನ ರೂಪದಲ್ಲಿ ಭಗವಂತನು ಅಂಶಾವತಾರಮಾಡುತ್ತಾನೆ. ಈ ರೂಪದಲ್ಲಿಯೇ ಶ್ರೀಭಗವಂತನು ಮೂರು ಲೋಕಗಳನ್ನೂ ರಕ್ಷಿಸುತ್ತಾನೆ.

ಪರೀಕ್ಷಿತನೇ! ಹನ್ನೆರಡನೆಯ ಮನ್ವಂತರಕ್ಕೆ ರುದ್ರಸಾವರ್ಣಿಯು ಮನುವಾಗುತ್ತಾನೆ. ಅವನಿಗೆ ದೇವವಂತ, ಉಪದೇವ, ದೇವಶ್ರೇಷ್ಠ ಇವರೇ ಮೊದಲಾದವರು ಮಕ್ಕಳಾಗುತ್ತಾರೆ. ಋತಧಾಮಾ ಎಂಬುವನು ಹನ್ನೆರಡ ನೆಯ ಮನ್ವಂತರಕ್ಕೆ ಇಂದ್ರನಾಗುತ್ತಾನೆ. ಆಗ ಹರಿತನೇ ಮೊದಲಾದವರು ದೇವತೆಗಳಾಗುತ್ತಾರೆ. ತಪೋಮೂರ್ತಿ, ತಪಸ್ವೀ, ಅಗ್ನೀಧ್ರಕ ಇವರೇ ಮೊದಲಾದವರು ಸಪ್ತರ್ಷಿಗಳಾಗುತ್ತಾರೆ. ಸತ್ಯಸಹನ ಪತ್ನಿಯಾದ ಸೂನೃತಾ ಎಂಬುವಳ ಗರ್ಭದಲ್ಲಿ ಸ್ವಧಾಮನ ರೂಪದಿಂದ ಶ್ರೀಭಗವಂತನೇ ಅಂಶಾವತಾರಮಾಡುತ್ತಾನೆ ಮತ್ತು ಅದೇ ರೂಪದಿಂದ ಹನ್ನೆರಡನೆಯ ಮನ್ವಂತರವನ್ನು ರಕ್ಷಿಸುತ್ತಾನೆ. (ಶ್ಲೋಕ 18-29)

ಪರಮಜಿತೇಂದ್ರಿಯನಾದ ದೇವಸಾವರ್ಣಿಯು ಹದಿಮೂರನೆಯ ಮನ್ವಂತರದ ಮನುವಾಗುತ್ತಾನೆ. ಅವನಿಗೆ ಚಿತ್ರಸೇನ, ವಿಚಿತ್ರ–ಇವರೇ ಮೊದಲಾದವರು ಮಕ್ಕಳಾಗುತ್ತಾರೆ. ಸುಕರ್ಮ, ಸುತ್ರಾಮ–ಇವರೇ ಮೊದಲಾದವರು ದೇವತೆಗಳಾಗುತ್ತಾರೆ. ದಿವಸ್ಪತಿ ಎಂಬುವನು ಹದಿಮೂರ ನೆಯ ಮನ್ವಂತರದಲ್ಲಿ ಇಂದ್ರನಾಗುತ್ತಾನೆ. ನಿರ್ಮೋಕ, ತತ್ತ್ವದರ್ಶ ಇವರೇ ಮೊದಲಾದವರು ಸಪ್ತರ್ಷಿಗಳಾಗುತ್ತಾರೆ. ದೇವಹೋತ್ರನ ಪತ್ನಿಯಾದ ಬೃಹತೀ–ಎಂಬುವಳ ಗರ್ಭದಲ್ಲಿ ಯೋಗೇಶ್ವರನ ರೂಪದಲ್ಲಿ ಶ್ರೀಭಗವಂತನು ಅಂಶಾವತಾರಮಾಡುತ್ತಾನೆ. ಅದೇ ರೂಪದಲ್ಲಿಯೇ ದಿವಸ್ಪತಿಗೆ ಇಂದ್ರನ ಪದವಿಯನ್ನು ವಹಿಸಿಕೊಡುತ್ತಾನೆ. ಮಹಾರಾಜ! ಇಂದ್ರಸಾವರ್ಣಿಯು ಹದಿನಾಲ್ಕನೆಯ ಮನ್ವಂತರದಲ್ಲಿ ಮನುವಾಗು ತ್ತಾನೆ. ಉರು, ಗಂಭೀರಬುದ್ಧಿ–ಇವರೇ ಮೊದಲಾದವರು ಅವನ

ಮಕ್ಕಳಾಗುತ್ತಾರೆ. ಪವಿತ್ರ, ಚಾಕ್ಷುಷ ಇವರೇ ಮೊದಲಾದವರು ದೇವತೆಗಳಾಗುತ್ತಾರೆ. ಶುಚಿ ಎಂಬುವನು ಹದಿನಾಲ್ಕನೆಯ ಮನ್ವಂತರದಲ್ಲಿ ಇಂದ್ರನಾಗುತ್ತಾನೆ. ಅಗ್ನಿಬಾಹು, ಶುಚಿ, ಶುದ್ಧ ಮತ್ತು ಮಾಗಧನೇ ಮೊದಲಾದವರು ಸಪ್ತರ್ಷಿಗಳಾಗುತ್ತಾರೆ. ಸತ್ರಾಯಣನ ಪತ್ನಿಯಾದ ವಿತಾನಾ ಎಂಬುವಳ ಗರ್ಭದಲ್ಲಿ ಬೃಹದ್ಭಾನುವಿನ ರೂಪದಿಂದ ಭಗವಂತನು ಅಂಶಾವತಾರ ಮಾಡುತ್ತಾನೆ. ಆ ಮನ್ವಂತರದಲ್ಲಿ ಭಗವದ್ರೂಪಿಯಾದ ಬೃಹದ್ಭಾನುವು ಅನೇಕ ಯಜ್ಞಕ್ರಿಯೆಗಳನ್ನು ನಡೆಸುತ್ತಾನೆ.

ಮಹಾರಾಜ! ಈವರೆಗೆ ಕಳೆದುಹೋಗಿರುವ ಮನ್ವಂತರಗಳು ಆರು. ಈಗ ನಡೆಯುತ್ತಿರುವುದು ಏಳನೆಯ ಮನ್ವಂತರ. ಮುಂದೆ ಏಳು ಮನ್ವಂತರಗಳು ಬರಲಿವೆ. ಹೀಗೆ ಭೂತ-ಭವಿಷ್ಯದ್ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ವ್ಯಾಪಿಸಿರುವ ಹದಿನಾಲ್ಕು ಮನ್ವಂತರಗಳನ್ನೂ ಹೇಳಿದ್ದೇನೆ. ಈ ಹದಿನಾಲ್ಕು ಮನ್ವಂತರಗಳ ಕಾಲಕ್ಕೆ ಸಾವಿರ ಯುಗಗಳ ಪರಿವರ್ತನವುಳ್ಳ ಒಂದು *ಕಲ್ಪವೆಂದು ಹೆಸರು." (ಶ್ಲೋಕ 30-36)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

---

* ಕಲ್ಪ : ಜಗತ್ತಿನ ಸೃಷ್ಟಿಕಾಲ : ಬ್ರಹ್ಮನು ಜಗತ್ತನ್ನು ಸೃಷ್ಟಿಸುವ ಕಾಲ : ಬ್ರಹ್ಮನ ಹಗಲು. ೨) ಬ್ರಹ್ಮನ ರಾತ್ರಿ ಜಗತ್ತಿನ ವ್ಯಾಪಾರವಿಲ್ಲದ ಪ್ರಳಯಕಾಲ. ಇದು ಕಲ್ಪಶಬ್ದಕ್ಕೆ ಸಾಮಾನ್ಯವಾದ ಅರ್ಥ. ಚತುರ್ಮುಖನ ಒಂದು ಹಗಲಿಗೂ ಅದೇ ಪ್ರಮಾಣವುಳ್ಳ ಒಂದು ರಾತ್ರಿಗೂ ಕಲ್ಪವೆಂದು ಹೆಸರು. ಚಾಂದ್ರಮಾನದಲ್ಲಿ ಮನುಷ್ಯರ ಒಂದು ತಿಂಗಳು ಪಿತೃದೇವತೆಗಳಿಗೆ ಒಂದು ದಿವಸ. (ಶುಕ್ಲಪಕ್ಷವು ಹಗಲು ಕೃಷ್ಣಪಕ್ಷವು ರಾತ್ರಿ) ಸೌರಮಾನದಲ್ಲಿ ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ದಿವಸ. (ಉತ್ತರಾಯಣವು ದೇವತೆಗಳ ಒಂದು ಹಗಲು. ದಕ್ಷಿಣಾಯನವು ದೇವತೆಗಳ ಒಂದು ರಾತ್ರಿ). ಈ ರೀತಿ 43,20,000 ಮಾನವ ವರ್ಷಗಳು ಅಥವಾ 12,000 ದೇವತೆಗಳ ವರ್ಷಗಳು ಕಳೆದರೆ ಒಂದು ಚತುರ್ಯುಗವು ಕಳೆದಂತಾಗುವುದು. ಈ ರೀತಿ ಒಂದು ಸಾವಿರ ಚತುರ್ಯುಗಗಳು 1,20,00,000 ದೇವವರ್ಷಗಳು ಅಥವಾ 4,32,00,00,000 ಮಾನವವರ್ಷಗಳು ಕಳೆದರೆ ಬ್ರಹ್ಮನಿಗೆ ಒಂದು ಹಗಲಾಗುವುದು ಮತ್ತು ಇಷ್ಟೇ ಕಾಲದಲ್ಲಿ ಒಂದು ರಾತ್ರಿಯೂ ಆಗುವುದು. ಬ್ರಹ್ಮನ ಈ ಹಗಲಿನಲ್ಲಿ ಜಗತ್ತಿನ ಸೃಷ್ಟಿಯೂ ರಾತ್ರಿಯಲ್ಲಿ ಪ್ರಳಯವೂ ನಡೆಯುವುವು.

ಮನುವೇ ಮೊದಲಾದವರ ಕರ್ತವ್ಯನಿರೂಪಣೆ

ಪರೀಕ್ಷಿದ್ರಾಜನು ಪ್ರಶ್ನಿಸುತ್ತಾನೆ :

ಮನ್ವನ್ತರೇಷು ಭಗವನ್ಯಥಾ ಮನ್ವಾದಯಸ್ತ್ವಿಮೇ ।
ಯಸ್ಮಿನ್ಕರ್ಮಣಿ ಯೇ ಯೇನ ನಿಯುಕ್ತಾಸ್ತದ್ವದಸ್ವ ಮೇ ॥೧॥

"ಪೂಜ್ಯರೇ! ತಾವು ಹೇಳಿದ ಈ ಮನುಗಳು, ಮನುಪುತ್ರರು, ಸಪ್ತರ್ಷಿಗಳು ತಮ್ಮ-ತಮ್ಮ ಮನ್ವಂತರಗಳಲ್ಲಿ ಯಾರಿಂದ ನಿಯುಕ್ತರಾಗಿರುತ್ತಾರೆ? ಇವರನ್ನು ಆ ಪದವಿಗಳಲ್ಲಿ ಕುಳ್ಳಿರಿಸುವವರಾರು? ಯಾವ ಯಾವ ಕರ್ಮಗಳನ್ನು ಯಾವ ರೀತಿಯಲ್ಲಿ ಇವರು ಮಾಡುತ್ತಾರೆ? ಈ ವಿಷಯ ವನ್ನು ದಯಮಾಡಿ ನನಗೆ ತಿಳಿಯಪಡಿಸಿರಿ."

ಶ್ರೀಶುಕರು ಹೇಳುತ್ತಾರೆ :

"ಪರೀಕ್ಷಿತನೇ! ಮನುಗಳು, ಮನುಪುತ್ರರು, ಸಪ್ತರ್ಷಿಗಳು, ದೇವತೆಗಳು, ಇಂದ್ರರು–ಇವರೇ ಮುಂತಾದ ಸಮಸ್ತರ ನಿಯಾಮಕನೂ ಸ್ವಯಂ ಭಗವಂತನೇ ಆಗಿರುತ್ತಾನೆ. ಭಗವಂತನ ಯಜ್ಞಪುರುಷನೇ ಮೊದಲಾದ ಅಂಶಾವತಾರಗಳ ವಿಷಯವಾಗಿ ನಾನು ಹೇಳಿದೆನಲ್ಲವೇ! ಆ ಅಂಶಾವತಾರಗಳ ಪ್ರೇರಣೆಯಿಂದಲೇ ಮನುವೇ ಮೊದಲಾದವರು ಲೋಕದ ರಕ್ಷಣೆಯ

ಈ ಹಗಲು ಮತ್ತು ರಾತ್ರಿಗಳಿಗೆ ಕಲ್ಪ ಎಂದು ಹೆಸರು. 8,64,00,00,000 ಸೌರವರ್ಷಗಳು ಕಳೆದರೆ ಬ್ರಹ್ಮನಿಗೆ ಒಂದು ಹಗಲೂ ಮತ್ತು ಒಂದು ರಾತ್ರಿಯೂ ಆಗುವುದು. 71 ಚತುರ್ಯುಗಗಳಿಗೆ ಒಂದು ಮನ್ವಂತರ. ಹೀಗೆ ಬ್ರಹ್ಮನ ಒಂದು ಹಗಲಿನಲ್ಲಿ ಹದಿನಾಲ್ಕು ಮನ್ವಂತರಗಳಾಗುತ್ತವೆ. ಸ್ವರ್ಗಲೋಕದಲ್ಲಿ ಹದಿನಾಲ್ಕು ಮಂದಿ ಇಂದ್ರರೂ, ಹದಿನಾಲ್ಕು ಮಂದಿ ಮನುಗಳೂ ರಾಜ್ಯವಾಳುವರು. ರಾತ್ರಿಯ ಕಾಲದಲ್ಲಿ ಪ್ರಳಯವಾಗುವುದು. ಇಂತಹ 30 ದಿವಸಗಳಿಗೆ ಬ್ರಹ್ಮನ ಒಂದು ತಿಂಗಳು. ಬ್ರಹ್ಮನ 30 ದಿವಸಗಳ ಅಥವಾ ಕಲ್ಪಗಳ ಹೆಸರುಗಳು ಹೀಗಿವೆ : ೧) ಶ್ವೇತ, ೨) ನೀಲಲೋಹಿತ, ೩) ವಾಸುದೇವ, ೪) ರಥಂತರ, ೫) ರೌರವ, ೬) ಪ್ರಾಣ, ೭) ಬೃಹತ್, ೮) ಕಂದರ್ಪ, ೯) ಸದ್ಯ, ೧೦) ಈಶಾನ, ೧೧) ವ್ಯಾನ, ೧೨) ಸಾರಸ್ವತ, ೧೩) ಉದಾನ, ೧೪) ಗಾರುಡ, ೧೫) ಕೌರ್ಮ, ೧೬) ನಾರಸಿಂಹ, ೧೭) ಸಮಾನ, ೧೮) ಆಗ್ನೇಯ, ೧೯) ಸೋಮ, ೨೦) ಮಾನವ, ೨೧) ತತ್ಪುರುಷ, ೨೨) ವೈಕುಂಠ, ೨೩) ಲಕ್ಷ್ಮೀ, ೨೪) ಸಾವಿತ್ರೀ, ೨೫) ಘೋರ,

ಕಾರ್ಯವನ್ನು ನಿರ್ವಹಿಸುತ್ತಾರೆ. ಕೃತ-ತ್ರೇತಾ-ದ್ವಾಪರ-ಕಲಿಗಳೆಂಬ ನಾಲ್ಕು ಯುಗಗಳ ಅಂತ್ಯದಲ್ಲಿ ಕಾಲಾನುಗುಣವಾಗಿ ನಷ್ಟವಾಗಿಹೋದ ವೇದಗಳ ಸಮೂಹಗಳನ್ನು ಸಪ್ತರ್ಷಿಗಳು ತಪಸ್ಸಿನಿಂದ ಪುನಃ ಕಂಡುಕೊಳ್ಳುವರು. ಆ ವೇದಗಳ ಉದ್ಧಾರದಿಂದಲೇ ಸನಾತನಧರ್ಮದ ಪುನರುಜ್ಜೀವನವಾಗುವುದು. ಹೀಗೆ ಮಾಡುವುದು ಸಪ್ತರ್ಷಿಗಳ ಧರ್ಮವಾಗಿದೆ. ಬಳಿಕ ಆಯಾ ಮನ್ವಂತರ ಮನುಗಳು ಶ್ರೀಹರಿಯಿಂದ ಪ್ರೇರಿತರಾಗಿ ತಮ್ಮ-ತಮ್ಮ ಕಾಲಗಳಲ್ಲಿ ಪ್ರಯತ್ನಪೂರ್ವಕವಾಗಿ ನಾಲ್ಕು ಪಾದಗಳಿಂದ ಕೂಡಿದ ಸನಾತನ ಧರ್ಮವನ್ನು ವಿಶ್ವದಲ್ಲಿ ಪ್ರಚುರಗೊಳಿಸುತ್ತಾರೆ. ಇದು ಮನುಗಳ ಕರ್ತವ್ಯವಾಗಿರುತ್ತದೆ. ಮನುಪುತ್ರರು ಆಯಾ ಮನ್ವಂತರದ ಕಡೆಯವರೆಗೂ ಕಾಲ-ದೇಶಗಳನ್ನು ವಿಭಾಗಿಸಿಕೊಂಡು ಪ್ರಜಾಪಾಲನೆಯನ್ನೂ ಧರ್ಮದ ರಕ್ಷಣೆಯನ್ನೂ ಮಾಡುತ್ತಿರುತ್ತಾರೆ. ಇದು ಮನುಪುತ್ರರ ಕರ್ತವ್ಯವಾಗಿರುತ್ತದೆ. ಪಂಚಮಹಾಯಜ್ಞಗಳಲ್ಲಿ ಭೋಕ್ತೃಗಳಾದ ಋಷಿಗಳು, ಪಿತೃಗಳು, ಭೂತಗಳು ಮತ್ತು ಮನುಷ್ಯರು ಇವರೊಡನೆ ದೇವತೆಗಳು ಆಯಾ ಮನ್ವಂತರದಲ್ಲಿ ನಡೆಯುವ ಯಜ್ಞಗಳ ಹವಿರ್ಭಾಗಗಳನ್ನು ಪಡೆದುಕೊಳ್ಳುತ್ತಾರೆ.

ಇಂದ್ರನು ಭಗವಂತನಿಂದ ಕೊಡಲ್ಪಡುವ ಸಂಪತ್ಸಮೃದ್ಧವಾದ ಮೂರು ಲೋಕಗಳ ಐಶ್ವರ್ಯವನ್ನೂ ಉಪಭುಂಜಿಸುತ್ತಾ ಮೂರು ಲೋಕ

---

೨೬) ವರಾಹ, ೨೭) ವೈರಾಜ, ೨೮) ಗೌರೀ, ೨೯) ಮಾಹೇಶ್ವರ ಮತ್ತು ೩೦) ಪಿತೃ. ಇವುಗಳಲ್ಲಿ 15ನೆಯದಾದ ಕೌರ್ಮಕಲ್ಪವು ಹುಣ್ಣಿಮೆ. 30ನೆಯದಾದ ಪಿತೃಕಲ್ಪವು ಅಮಾವಾಸ್ಯೆ. ಈ ಮೂವತ್ತು ಕಲ್ಪಗಳಿಗೆ ಬ್ರಹ್ಮನ ಒಂದು ತಿಂಗಳು. ಹನ್ನೆರಡು ತಿಂಗಳಿಗೆ ಒಂದು ವರ್ಷ. ಬ್ರಹ್ಮನ ಆಯುಸ್ಸು ಇಂತಹ ಒಂದು ನೂರು ವರ್ಷಗಳು. ದೇವಮಾನದ ರೀತ್ಯಾ 864,00,00,00,000 ವರ್ಷಗಳು. ಮಾನುಷಮಾನದ ರೀತಿಯಲ್ಲಿ 3110,40,00,00,00,000 ವರ್ಷಗಳು. ಇದಕ್ಕೆ ಪರ ಎಂದು ಹೆಸರು. ಈಗ ಪರಾರ್ಧ (50 ವರ್ಷಗಳು) ಕಳೆದು ಎರಡನೆಯ ಪರಾರ್ಧವು ನಡೆಯುತ್ತಿದೆ. ಈಗ ಬ್ರಹ್ಮನ ಆಯುಸ್ಸಿನಲ್ಲಿ ಐವತ್ತೊಂದನೆಯ ವರ್ಷದ ಮೊದಲನೆಯ ತಿಂಗಳ ಇಪ್ಪತ್ತೈದು ದಿವಸಗಳು ಕಳೆದು ಇಪ್ಪತ್ತಾರನೆಯ ದಿವಸದ ಹಗಲಿನ ಮೊದಲನೆಯ ಯಾಮವು ನಡೆಯುತ್ತಿದೆ. ಈಗ ನಾವು (ಶ್ವೇತ) ವರಾಹಕಲ್ಪದಲ್ಲಿದ್ದೇವೆ.

ಗಳನ್ನೂ ರಕ್ಷಿಸುತ್ತಿರುತ್ತಾನೆ. ಪ್ರಜೆಗಳ ಪರಿಪಾಲನೆಗಾಗಿ ಯಥೇಷ್ಟವಾಗಿ ಮಳೆಗರೆಯುತ್ತಾನೆ. ಕಪಿಲನೇ ಮೊದಲಾದ ಸಿದ್ಧರ ರೂಪವನ್ನು ಧರಿಸಿ ಶ್ರೀಹರಿಯು ಯುಗಾನುರೂಪವಾಗಿ ಪ್ರಜೆಗಳಿಗೆ ಜ್ಞಾನವನ್ನು ಉಪದೇಶಿಸುತ್ತಾನೆ. ಯೋಗೇಶ್ವರನಾಗಿ ಅವತರಿಸಿ ಋಷಿಗಳ ರೂಪದಿಂದ ಕರ್ಮಯೋಗವನ್ನು ಉಪದೇಶಿಸುತ್ತಾನೆ.* ಮರೀಚಿಯೇ ಮೊದಲಾದ ಪ್ರಜಾಪತಿಗಳ ರೂಪವನ್ನು ಧರಿಸಿ ಸೃಷ್ಟಿಯ ವಿಸ್ತಾರವನ್ನು ಮಾಡುತ್ತಾನೆ. ಇಂದ್ರನ ರೂಪದಲ್ಲಿ ದಸ್ಯುಗಳನ್ನು ಸಂಹರಿಸುತ್ತಾನೆ. ಶೀತೋಷ್ಣವೇ ಮೊದಲಾದ ವಿಭಿನ್ನಗುಣಗಳನ್ನು ಧಾರಣೆಮಾಡಿ ಕಾಲರೂಪನಾಗಿ ಎಲ್ಲ ಪ್ರಾಣಿಗಳನ್ನೂ ಸಂಹರಿಸುತ್ತಾನೆ. ಭಗವಂತನ ನಾಮ ಮತ್ತು ರೂಪಗಳ ಮಾಯೆಯಿಂದಾಗಿ ಪ್ರಾಣಿಗಳ ಬುದ್ಧಿಯು ವಿಮೂಢವಾಗಿಬಿಟ್ಟಿದೆ. ಈ ಕಾರಣದಿಂದಲೇ ಅನೇಕ ಪ್ರಕಾರವಾದ ದರ್ಶನಶಾಸ್ತ್ರಗಳ ಮೂಲಕವಾಗಿ ಭಗವಂತನ ಮಾಯೆಯನ್ನು ಕೀರ್ತಿಸುತ್ತಿದ್ದರೂ ಅವನ ನಿಜಸ್ವರೂಪವು ಯಾರಿಗೂ ತಿಳಿಯುತ್ತಿಲ್ಲ.

ಪರೀಕ್ಷಿತನೇ! ನಾನು ಹೀಗೆ ನಿನಗೆ ಮಹಾಕಲ್ಪಗಳ ಮತ್ತು ಅವಾಂತರಕಲ್ಪಗಳ ಪರಿಮಾಣವನ್ನು ಹೇಳಿರುತ್ತೇನೆ. ಪುರಾಣತತ್ತ್ವವನ್ನು ತಿಳಿದಿರುವ ವಿದ್ವಾಂಸರು ಪ್ರತ್ಯೇಕವಾದ ಅವಾಂತರಕಲ್ಪಗಳಲ್ಲಿ ಹದಿನಾಲ್ಕು ಮನ್ವಂತರಗಳಿವೆಯೆಂದು ಹೇಳುತ್ತಾರೆ.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೧೪ನೆಯ ಅಧ್ಯಾಯವು ಮುಗಿಯಿತು.

---

* ಕಪಿಲನೇ ಮೊದಲಾದ ಸಿದ್ಧರ ರೂಪವನ್ನು ಧರಿಸಿ ಜ್ಞಾನವನ್ನೂ, ಯಾಜ್ಞವಲ್ಕ್ಯಾದಿಮುನಿಗಳ ರೂಪವನ್ನು ಧರಿಸಿ ಕರ್ಮಕಾಂಡವನ್ನೂ, ದತ್ತಾತ್ರೇಯನೇ ಮೊದಲಾದ ಯೋಗೇಶ್ವರರೂಪರನ್ನು ಧರಿಸಿ ಯೋಗವನ್ನೂ ಉಪದೇಶಿಸುವನೆಂದು ಒಬ್ಬ ವ್ಯಾಖ್ಯಾನಕಾರರು ವಿವರಿಸಿದ್ದಾರೆ.

ಅಷ್ಟಮಸ್ಕಂಧ ೧೫ನೆಯ ಅಧ್ಯಾಯ

ಬಲಿಚಕ್ರವರ್ತಿಯು ಸ್ವರ್ಗವನ್ನು ಜಯಿಸಿದುದು : ವಾಮನಾವತಾರದ ಕಥೆ

ಪರೀಕ್ಷಿತನು ಪ್ರಶ್ನಿಸುತ್ತಾನೆ :

ಬಲೇಃ ಪದತ್ರಯಂ ಭೂಮೇಃ ಕಸ್ಮಾದ್ಧರಿರಯಾಚತ ।
ಭೂತ್ವೇಶ್ವರಃ ಕೃಪಣವಲ್ಲಬ್ಧಾರ್ಥೋऽಪಿ ಬಬನ್ಧ ತಮ್ ॥೧॥

ಏತದ್ವೇದಿತುಮಿಚ್ಛಾಮೋ ಮಹತ್ಕೌತೂಹಲಂ ಹಿ ನಃ ।
ಯಜ್ಞೇಶ್ವರಸ್ಯ ಪೂರ್ಣಸ್ಯ ಬನ್ಧನಂ ಚಾಪ್ಯನಾಗಸಃ ॥೨॥

"ಪೂಜ್ಯರೇ! ಶ್ರೀಹರಿಯು ತಾನೇ ಎಲ್ಲರಿಗೂ ಸ್ವಾಮಿಯಾಗಿದ್ದಾನೆ. ಹೀಗಿದ್ದರೂ ಅವನು ದೀನನಂತೆ ಬಲಿಚಕ್ರವರ್ತಿಯಿಂದ ಮೂರು ಹೆಜ್ಜೆ ಭೂಮಿಯನ್ನು ಬೇಡಿದುದೇಕೆ? ಆಯಿತು ; ಬೇಡಿ ಪಡೆದುಕೊಂಡಮೇಲೆ ಹರಿಯು ಬಲಿಯನ್ನು ಬಂಧಿಸಿದ್ದೇಕೆ? ಪರಿಪೂರ್ಣಸ್ವರೂಪನೂ ಯಜ್ಞ ಫಲದಾಯಕನೂ ಆದ ಭಗವಂತನು ಯಾಚಿಸಿದ್ದು ಮತ್ತು ನಿರಪರಾಧಿಯಾದ ಬಲಿಯನ್ನು ಬಂಧಿಸಿದ್ದು ಈ ಎರಡೂ ನನಗೆ ಬಹಳ ಅಚ್ಚರಿಯನ್ನುಂಟುಮಾಡಿದೆ. ಇದು ಹೇಗೆ ಸಂಭವಿಸಿತು? ಇದನ್ನು ನಾವೆಲ್ಲರೂ ಕೇಳಲು ಬಯಸಿದ್ದೇವೆ."

ಶ್ರೀಶುಕರು ಹೇಳುತ್ತಾರೆ :

"ಪರೀಕ್ಷಿತನೇ! ಇಂದ್ರನು ಬಲಿಯನ್ನು ಪರಾಜಯಗೊಳಿಸಿ ಅವನ ಐಶ್ವರ್ಯವೆಲ್ಲವನ್ನೂ ಕಿತ್ತುಕೊಂಡುದಲ್ಲದೆ ಅವನನ್ನು ಸಂಹರಿಸಿಯೂ ಬಿಟ್ಟನು. ಆದರೆ ಭೃಗುನಂದನರಾದ ಶುಕ್ರಾಚಾರ್ಯರು ಸಂಜೀವಿನೀವಿದ್ಯೆಯಿಂದ ಬಲಿಯನ್ನು ಬದುಕಿಸಿದರು. ಇದರಿಂದ ಶುಕ್ರಾಚಾರ್ಯರಿಗೆ ಅತ್ಯಂತ ಪ್ರಿಯಶಿಷ್ಯನಾಗಿ ಬಲಿಯು ತನ್ನಲಿದ್ದ ಸರ್ವಸ್ವವನ್ನೂ ಅವರ ಪಾದಕಮಲಗಳಲ್ಲಿ ಸಮರ್ಪಿಸಿದನು. ತನು-ಮನ-ಧನಗಳಿಂದಲೂ ಗುರುಗಳ ಸೇವೆಯಲ್ಲಿಯೇ ನಿರತನಾಗಿರುತ್ತಾ ಭೃಗುವಂಶೀಯ ಬ್ರಾಹ್ಮಣರ ಸೇವೆಯನ್ನೂ ನಿಷ್ಠೆಯಿಂದ ಮಾಡುತ್ತಿದ್ದನು. ಬಲಿಯು ಮಾಡುತ್ತಿದ್ದ ಸೇವೆಯಿಂದ

ಭಾರ್ಗವರು ಬಹಳ ಪ್ರಸನ್ನರಾದರು. ಸ್ವರ್ಗವನ್ನು ಗೆಲ್ಲಬೇಕೆಂಬ ಅಭಿಲಾಷೆ ಯಿಂದಿದ್ದ ಬಲಿಗೆ ಪ್ರಭಾವಶಾಲಿಗಳಾಗಿದ್ದ ಭಾರ್ಗವರು ಮಹಾಭಿಷೇಕದ ವಿಧಿಯಿಂದ ತ್ರೈಲೋಕ್ಯಾಧಿಪತ್ಯದ ಪೀಠದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದರು. ಬಳಿಕ ಅವರು ಬಲಿಚಕ್ರವರ್ತಿಯಿಂದ ವಿಶ್ವಜಿತ್–ಎಂಬ ಯಜ್ಞವನ್ನೂ ಮಾಡಿಸಿದರು. ಪೂರ್ಣಾಹುತಿಯಾದನಂತರ ಸಮಿತ್ತು, ಚರು, ಆಜ್ಯ ಮುಂತಾದುವುಗಳ ಹವಿಸ್ಸುಗಳಿಂದ ಜಾಜ್ವಲ್ಯಮಾನನಾಗಿದ್ದ ಯಜ್ಞೇಶ್ವರನ ಮಧ್ಯಭಾಗದಿಂದ ಇಂದ್ರನ ಕುದುರೆಗಳಂತೆ ಹಸಿರುಬಣ್ಣವುಳ್ಳ ಕುದುರೆಗಳಿಂದಲೂ, ಸಿಂಹದ ಚಿಹ್ನೆಯಿಂದ ವಿರಾಜಿಸುತ್ತಿದ್ದ ಧ್ವಜದಿಂದಲೂ ಕೂಡಿ ಚಿನ್ನದ ಪರಿಕರಗಳಿಂದ ಸಮಲಂಕೃತವಾಗಿದ್ದ ರಥವು ಹೊರಬಂದಿತು. ದಿವ್ಯವಾದ ಸುವರ್ಣಭೂಷಿತವಾದ ಧನುಸ್ಸೂ, ಅಕ್ಷಯವಾದ ಬತ್ತಳಿಕೆ ಗಳೂ, ದಿವ್ಯವಾದ ಕವಚವೂ ಯಜ್ಞೇಶ್ವರನಿಂದಲೇ ಹೊರಬಂದುವು. ಬಳಿಕ ಬ್ರಹ್ಮನು ಬಾಡದೇ ಇರುವ ಕಮಲದ ಮಾಲೆಯನ್ನೂ ಶುಕ್ರಾಚಾರ್ಯರು ಶಂಖವನ್ನೂ ಆತನಿಗೆ ಅನುಗ್ರಹಿಸಿ ಕೊಟ್ಟರು. ಹೀಗೆ ಬಲಿಯು ಯುದ್ಧದ ಸಾಮಗ್ರಿಗಳೆಲ್ಲವನ್ನೂ ಬ್ರಾಹ್ಮಣರ ಅನುಗ್ರಹದಿಂದ ಪಡೆದುಕೊಂಡು, ಅವರಿಂದ ಸ್ವಸ್ತಿವಾಚನವನ್ನೂ ಮಾಡಿಸಿಕೊಂಡು, ಅವರಿಗೆ ಭಕ್ತಿಪೂರ್ವಕ ವಾಗಿ ಪ್ರದಕ್ಷಿಣ-ನಮಸ್ಕಾರಾದಿಗಳನ್ನು ಮಾಡಿ, ಅಜ್ಜನಾದ ಪ್ರಹ್ಲಾದ ನಿಂದಲೂ ದಿಗ್ವಿಜಯಕ್ಕೆ ಅನುಮತಿಯನ್ನು ಪಡೆದು ಅವನಿಗೂ ನಮಸ್ಕರಿಸಿ ದನು. ಬಳಿಕ ಮಹಾರಥನಾದ ಬಲಿಚಕ್ರವರ್ತಿಯು ಬ್ರಹ್ಮನು ಅನುಗ್ರಹಿಸಿ ಕೊಟ್ಟಿದ್ದ ಬಾಡದಿರುವ ಕಮಲದ ಮಾಲೆಯನ್ನು ಧರಿಸಿ, ಭೃಗುವಂಶೀಯ ಬ್ರಾಹ್ಮಣರಿಂದ ಕೊಡಲ್ಪಟ್ಟಿದ್ದ ದಿವ್ಯವಾದ ರಥವನ್ನೇರಿ ಧನುಸ್ಸನ್ನು ಹಿಡಿದು ಕತ್ತಿಯನ್ನು ಸೊಂಟಕ್ಕೆ ಬಿಗಿದು ಬರಿದಾಗದ ಬತ್ತಳಿಕೆಗಳನ್ನು ಬೆನ್ನಿಗೆ ಕಟ್ಟಿಕೊಂಡನು. ಸುವರ್ಣಮಯವಾದ ಭುಜಕೀರ್ತಿಗಳಿಂದ ಪ್ರಕಾಶ ಮಾನವಾಗಿ ಕಾಣುತ್ತಿದ್ದ ತೋಳುಗಳಿಂದ ಕಂಗೊಳಿಸುತ್ತಾ, ಹೊಳೆ ಯುತ್ತಿರುವ ಮಕರಾಕಾರದ ಕುಂಡಲಗಳನ್ನೂ ಧರಿಸಿದ್ದ ಬಲಿಯು ರಥಾರೂಢನಾಗಿ ವೇದಿಯಲ್ಲಿರುವ ಯಜ್ಞೇಶ್ವರನಂತೆಯೇ ಪ್ರಕಾಶಿಸಿದನು. ಕಣ್ಣುಗಳಿಂದಲೇ ಆಕಾಶವನ್ನು ಕುಡಿಯುತ್ತಿರುವನೋ–ಎಂಬಂತೆಯೂ, ದಿಕ್ಕುಗಳನ್ನು ಸುಟ್ಟುಹಾಕುತ್ತಿರುವನೋ ಎಂಬಂತೆಯೂ ಕಾಣುತ್ತಿದ್ದ, ತನಗೆ

ಸಮಾನವಾದ ಐಶ್ವರ್ಯ-ಬಲ-ಸಂಪತ್ತುಗಳಿಂದ ಕೂಡಿದ್ದ ದೈತ್ಯನಾಯಕರಿಂದ ಸುತ್ತುವರಿಯಲ್ಪಟ್ಟ ಬಲಿಚಕ್ರವರ್ತಿಯು ದಂಡಯಾತ್ರೆಗೆ ಹೊರಟನು. ರಾಕ್ಷಸರ ದೊಡ್ಡದಾದ ಸೈನ್ಯದೊಡನೆ ಪ್ರಭುವಾದ ಬಲಿಯು ಭೂಮ್ಯಾಕಾಶಗಳನ್ನೂ ನಡುಗಿಸುತ್ತಿರುವನೋ ಎಂಬಂತೆ ಗರ್ಜನೆಮಾಡುತ್ತಾ ಸಂಪತ್ಸಮೃದ್ಧವಾದ ಅಮರಾವತಿಗೆ ಹೊರಟನು. (ಶ್ಲೋಕ 3-11)

ಆ ಅಮರಾವತಿಯು ಕಾಂತಿಯುಕ್ತವಾದ ನಂದನವನವೇ ಮೊದಲಾದ ಉದ್ಯಾನವನಗಳಿಂದಲೂ, ಉಪವನಗಳಿಂದಲೂ ಪರಿಶೋಭಿಸುತ್ತಿದ್ದಿತು. ಆ ಉದ್ಯಾನವನಗಳೂ ಮತ್ತು ಉಪವನಗಳೂ ಚಿಲಿಪಿಲಿಗುಟ್ಟುತ್ತಿದ್ದ ಪಕ್ಷಿಗಳ ಜೋಡಿಗಳಿಂದಲೂ, ಸಂಗೀತದಂತೆ ಧ್ವನಿಮಾಡುತ್ತಿರುವ ಮಕರಂದವನ್ನು ಕುಡಿದು ಮತ್ತೇರಿದ ದುಂಬಿಗಳಿಂದಲೂ, ಚಿಗುರು-ಹೂವು ಮತ್ತು ಹಣ್ಣುಗಳ ಭಾರದಿಂದ ಬಗ್ಗಿರುವ ಕೊಂಬೆಗಳಿಂದ ಕೂಡಿದ ಕಲ್ಪವೃಕ್ಷಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದುವು. ಅಲ್ಲಿದ್ದ ಸರೋವರಗಳು ಹಂಸ, ಸಾರಸ, ಚಕ್ರವಾಕ, ಕಾರಂಡವ–ಇವೇ ಮೊದಲಾದ ಪಕ್ಷಿಗಳಿಂದ ತುಂಬಿದ್ದುವು. ಆ ಸರೋವರಗಳಲ್ಲಿ ದೇವತೆಗಳಿಂದ ಸಮ್ಮಾನಿತರಾದ ದೇವಾಂಗನೆಯರು ಜಲಕ್ರೀಡೆಯಾಡುತ್ತಿದ್ದರು. ಜ್ಯೋತಿರ್ಮಯವಾದ ಆಕಾಶಗಂಗೆಯು ಅಮರಾವತಿಯ ಅಗಳಿನಂತೆ ಅದರ ನಾಲ್ಕು ದಿಕ್ಕುಗಳನ್ನು ಆವರಿಸಿ ಪ್ರವಹಿಸುತ್ತಿದ್ದಿತು. ಅಮರಾವತಿಯ ಸುತ್ತಲೂ ಎತ್ತರವಾದ ಬೆಂಕಿಯಂತೆ ಜಾಜ್ವಲ್ಯಮಾನವಾಗಿದ್ದ ಉಪ್ಪರಿಗೆಯಿಂದ ಕೂಡಿದ ಸುವರ್ಣಮಯವಾದ ಪ್ರಾಕಾರವಿದ್ದಿತು. ಆ ಪ್ರಾಕಾರದ ಸುತ್ತಲೂ ಚಿನ್ನದಪಟ್ಟಿಯಿಂದ ಕೂಡಿರುವ ಕವಾಟಗಳಿಂದಲೂ, ಸ್ಫಟಿಕಮಯವಾದ ಗುಮ್ಮಟಗಳನ್ನು ಹೊಂದಿರುವ ಹೆಬ್ಬಾಗಿಲುಗಳಿಂದಲೂ ಅಮರಾವತಿಯು ಪರಿಶೋಭಿಸುತ್ತಿದ್ದಿತು. ಅಲ್ಲಿದ್ದ ರಾಜಮಾರ್ಗಗಳು ಚೆನ್ನಾಗಿ ವಿಂಗಡಿಸಲ್ಪಟ್ಟಿದ್ದುವು. ವಿಶ್ವಕರ್ಮನಿಂದಲೇ ನಿರ್ಮಿಸಲ್ಪಟ್ಟಿದ್ದ ಸಭಾಭವನಗಳಿಂದಲೂ, ಚೌಕಗಳಿಂದಲೂ, ದೊಡ್ಡ ದೊಡ್ಡ ಬೀದಿಗಳಿಂದಲೂ ಅಮರಾವತಿಯು ಶೋಭಿಸುತ್ತಿದ್ದಿತು. ಹತ್ತು ಕೋಟಿ ವಿಮಾನಗಳು ಅಮರಾವತಿಯನ್ನು ಅಲಂಕರಿಸಿದ್ದುವು. ರತ್ನಖಚಿತವಾದ ವಜ್ರ-ಹವಳಗಳಿಂದ ಚೆಂದವಾಗಿ ಮಾಡಲ್ಪಟ್ಟಿದ್ದ ಜಗುಲಿಗಳು, ಅಮರಾವತಿಯ ನಾಲ್ಕು ಮಾರ್ಗಗಳು

ಸೇರುವ ಚೌಕಗಳಲ್ಲಿ ಶೋಭಿಸುತ್ತಿದ್ದುವು. ಅಂತಹ ಅಮರಾವತಿಯನ್ನು ದೈತ್ಯಸಮೇತನಾದ ಬಲಿಯು ನೋಡಿದನು. ಶಾಶ್ವತವಾದ ರೂಪಲಾವಣ್ಯ ವುಳ್ಳ, ನಿತ್ಯಯುವತಿಯರಾದ, ನಿರ್ಮಲವಾದ ವಸ್ತ್ರಗಳನ್ನು ಧರಿಸಿದ್ದ, ರೂಪವತಿಯರಾದ ಅಮರಾವತಿಯ ನಾರಿಯರು ಜ್ವಾಲೆಗಳಿಂದ ಕೂಡಿದ ಅಗ್ನಿಯೋಪಾದಿಯಲ್ಲಿ ರಾರಾಜಿಸುತ್ತಿದ್ದರು. ದೇವಸ್ತ್ರೀಯರ ಮುಡಿಯಿಂದ ಕೆಳಗೆ ಬಿದ್ದ ನೂತನವಾದ ಸೌಗಂಧಿಕಾಪುಷ್ಪಗಳ ಸುರಭಿಯನ್ನು ಹೊತ್ತು ವಾಯುದೇವನು ಎಲ್ಲ ಮಾರ್ಗಗಳಲ್ಲಿಯೂ ಬೀಸುತ್ತಿದ್ದನು. ಅಮರಾವತಿಯ ವಾತಾವರಣವು ಸುಗಂಧಮಯವಾಗಿದ್ದಿತು. ಮಹಾಸೌಧಗಳಲ್ಲಿದ್ದ ಸುವರ್ಣಮಯವಾದ ಕಿಟಕಿಗಳಿಂದ ಹೊರಬರುತ್ತಿದ್ದ ಅಗುರುವಾಸನೆಯಿಂದ ಕೂಡಿದ, ಬಿಳಿಯ ಹೊಗೆಯಿಂದ ಸಮಾವೃತವಾದ ಮಾರ್ಗಗಳಲ್ಲಿ ಅಪ್ಸರಸ್ತ್ರೀಯರು ಸಂಚರಿಸುತ್ತಿದ್ದರು. ಮುತ್ತಿನ ಛಾವಣಿಗಳಿಂದಲೂ, ರತ್ನ ಖಚಿತವಾದ ಚಿನ್ನದ ಧ್ವಜಗಳಿಂದಲೂ ಸೌಧಗಳ ಎತ್ತರವಾದ ಭಾಗಗಳಲ್ಲಿ ಹಾರಾಡುತ್ತಿದ್ದ ನಾನಾವಿಧವಾದ ಪತಾಕೆಗಳಿಂದಲೂ ಸಮಾವೃತವಾಗಿದ್ದ- ನವಿಲು, ಪಾರಿವಾಳ ಮತ್ತು ದುಂಬಿಗಳಿಂದ ಶಬ್ದಾಯಮಾನವಾಗಿದ್ದ, ದೇವತೆಗಳ ಇಂಪಾದ ಸಂಗೀತದಿಂದ ಮಂಗಳಮಯವಾಗಿದ್ದ ಅಮರಾವತಿ ಯನ್ನು ಬಲಿಯು ನೋಡಿದನು. ಮೃದಂಗ, ಶಂಖ, ಆನಕ, ದುಂದುಭಿ- ಇವೇ ಮೊದಲಾದ ವಾದ್ಯಗಳ ಧ್ವನಿಯಿಂದಲೂ ತಾಳ-ಮದ್ದಳೆಗಳಿಂದ ಕೂಡಿದ ವೇಣು-ವೀಣಾನಿನಾದಗಳಿಂದಲೂ, ಪಕ್ಕವಾದ್ಯಗಳಿಂದ ಕೂಡಿದ ನಾಟ್ಯದಿಂದಲೂ, ಗಂಧರ್ವರ ದಿವ್ಯಗಾನದಿಂದಲೂ, ಹೃನ್ಮನಗಳಿಗೆ ಆನಂದ ವನ್ನುಂಟುಮಾಡುತ್ತಿದ್ದ ಅಮರಾವತಿಯು ತನ್ನ ಕಾಂತಿಯಿಂದ, ಕಾಂತಿಯ ಅಧಿದೇವತೆಯನ್ನೂ ಧಿಕ್ಕರಿಸುತ್ತಿದೆಯೋ ಎಂಬಂತೆ ಕಾಣುತ್ತಿದ್ದಿತು. ಅಂತಹ ಅಮರಾವತಿಯನ್ನು ಬಲಿಯು ನೋಡಿದನು. (ಶ್ಲೋಕ 12-21)

ಯಾಂ ನ ವ್ರಜನ್ತ್ಯಧರ್ಮಿಷ್ಠಾಃ ಖಲಾ ಭೂತದ್ರುಹಃ ಶಠಾಃ ।
ಮಾನಿನಃ ಕಾಮಿನೋ ಲುಬ್ಧಾ ಏಭಿರ್ಹೀನಾ ವ್ರಜನ್ತಿ ಯತ್ ॥೨೨॥

ಯಾವ ಪಟ್ಟಣವನ್ನು ಅಧರ್ಮಿಷ್ಠರಾಗಲೀ, ಪ್ರಾಣಿಹಿಂಸಕರಾಗಲೀ, ಧರ್ಮದ್ರೋಹಿಗಳಾಗಲೀ, ದುರಭಿಮಾನಿಗಳಾಗಲೀ, ಕಾಮುಕರಾಗಲೀ, ಜಿಪುಣರಾಗಲೀ ಪ್ರವೇಶಿಸಲಾರರೋ ಮತ್ತು ಇಂತಹ ಆರು ದುರ್ಗುಣಗಳಿಂದ

ವಿಹೀನರಾದವರು ಮಾತ್ರವೇ ಸುಖವಾಗಿ ಪ್ರವೇಶಿಸುವರೋ–ಅಂತಹ ಪುಣ್ಯತಮವಾದ ಅಮರಾವತಿಯನ್ನು ಬಲಿಯು ನೋಡಿದನು.

ಬಳಿಕ ಮುಖ್ಯಸೇನಾನಾಯಕನಾದ ಬಲಿಯು ತನ್ನ ಸೈನ್ಯದ ಮೂಲಕ ವಾಗಿ ಹೊರಗಿನಿಂದ ದೇವತೆಗಳ ರಾಜಧಾನಿಯಾದ ಆ ಅಮರಾವತಿಯನ್ನು ಆಕ್ರಮಿಸಿದನು ಮತ್ತು ದೇವತಾಸ್ತ್ರೀಯರಿಗೆ ಭಯವನ್ನುಂಟುಮಾಡುವ, ಆಚಾರ್ಯರಿಂದ ಕೊಡಲ್ಪಟ್ಟಿದ್ದ ಶಂಖವನ್ನು ಗಟ್ಟಿಯಾಗಿ ಊದಿದನು. ಬಲಿಯ ಪ್ರಯತ್ನವು ಪ್ರಬಲವಾಗಿರುವುದೆಂದು ತಿಳಿದು ಇಂದ್ರನು ತನ್ನ ಎಲ್ಲ ದೇವಗಣಗಳಿಂದಲೂ ಕೂಡಿಕೊಂಡು ದೇವಗುರುವಾದ ಬೃಹಸ್ಪತಿಯ ಬಳಿಗೆ ಹೋಗಿ ಹೇಳಿದನು :

"ಪೂಜ್ಯರೇ! ಹಿಂದಿನ ವೈರಿಯಾದ ಬಲಿಯ ಈಗಿನ ಪ್ರಯತ್ನವು ಅಗಾಧವಾದುದೆಂದೂ ಈ ಪ್ರಯತ್ನವು ನಮ್ಮಿಂದ ತಡೆಯಲು ಸಾಧ್ಯ ವಾಗದೆಂದೂ ಭಾವಿಸುತ್ತೇನೆ. ದೇವಗುರುವೇ! ಇವನು ಯಾವನ ತೇಜಸ್ಸಿ ನಿಂದಾಗಿ ನಮ್ಮನ್ನು ಎದುರಿಸುವಷ್ಟು ಬಲಶಾಲಿಯಾಗಿ ಬಂದಿದ್ದಾನೆ? ಮುಖದಿಂದ ಈ ಜಗತ್ತನ್ನು ಕುಡಿದುಬಿಡುವನೋ ಎಂಬಂತೆಯೂ, ಹತ್ತು ದಿಕ್ಕುಗಳನ್ನೂ ಕಟವಾಯಿಯಿಂದ ನೆಕ್ಕುತ್ತಿರುವನೋ ಎಂಬಂತೆಯೂ, ಕಣ್ಣು ಗಳಿಂದ ದಿಕ್ಕುಗಳನ್ನು ಸುಟ್ಟು ಭಸ್ಮಮಾಡುತ್ತಿರುವನೋ ಎಂಬಂತೆಯೂ ಕಾಣುತ್ತಿರುವ ಪ್ರಲಯಾಗ್ನಿಗೆ ಸಮಾನನಾಗಿರುವ ಇವನನ್ನು ಎದುರಿಸಲು ಯಾವನೂ ಯಾವ ಕಾರಣದಿಂದಲೂ ಸಮರ್ಥನಲ್ಲ. ನನ್ನ ಶತ್ರುವಾದ ಈ ಬಲಿಗೆ ನಾನೂ ಕೂಡ ಎದುರಿಸಲಾರದಷ್ಟು ಪರಾಕ್ರಮವು ಎಲ್ಲಿಂದ ಬಂದಿತು? ಹೇಗೆ ಬಂದಿತು? ಯಾವುದರಿಂದ ಇವನಿಗೆ ಇಂತಹ ಇಂದ್ರಿಯ ಶಕ್ತಿಯೂ, ಮನಶ್ಶಕ್ತಿಯೂ, ದೇಹಶಕ್ತಿಯೂ, ತೇಜಸ್ಸೂ ಮತ್ತು ಈ ಸಮರೋದ್ಯಮಕ್ಕೆ ಪ್ರೇರಣೆಯೂ ಲಭಿಸಿದುವು?–ಎಂಬುವುದನ್ನು ದಯಮಾಡಿ ಹೇಳಿರಿ."

(ಶ್ಲೋಕ 23-27)

ದೇವಗುರುವಾದ ಬೃಹಸ್ಪತಿಗಳು ಹೇಳುತ್ತಾರೆ :

"ಇಂದ್ರ! ನಿನ್ನ ಈ ಶತ್ರುವಿನ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣವನ್ನು ನಾನು ಬಲ್ಲೆನು. ವೇದಾಧ್ಯಯನಸಂಪನ್ನರಾದ ಇವನ ಗುರು ಗಳು (ಭಾರ್ಗವ ಬ್ರಾಹ್ಮಣರು) ಇವನಲ್ಲಿ ತೇಜಸ್ಸನ್ನು ತುಂಬಿಸಿ ಕಳುಹಿಸಿ

ದ್ದಾರೆ. ಸರ್ವೇಶ್ವರನಾದ ಶ್ರೀಹರಿಯೊಬ್ಬನನ್ನು ಬಿಟ್ಟು ನಿನ್ನಂತಹವನಾಗಲೀ ನೀನೇ ಆಗಲೀ ಬಲಿಯ ಬಳಿಗೆ ಹೋಗಿ ಅವನ ಮುಂದೆ ಕ್ಷಣಕಾಲವಾದರೂ ನಿಲ್ಲಲು ಸಮರ್ಥರಾಗುವುದಿಲ್ಲ. ನಿಮ್ಮ ಶತ್ರುವಿಗೆ ವಿನಾಶಕಾಲವು ಯಾವಾಗ ಪ್ರಾಪ್ತವಾಗುವುದೆಂಬುದನ್ನು ನಿರೀಕ್ಷಿಸುತ್ತಾ ನೀವೆಲ್ಲರೂ ಈಗಲೇ ನಿಮ್ಮ ನಿಲಯವಾದ ಈ ಸ್ವರ್ಗಲೋಕವನ್ನು ಬಿಟ್ಟು ಹೊರಟುಹೋಗಿರಿ. ಈಗ ಬ್ರಾಹ್ಮಣರ ಬಲದಿಂದ ವೃದ್ಧಿಹೊಂದುತ್ತಿರುವ ಮತ್ತು ಅತಿಶಯಪರಾಕ್ರಮನಾಗಿರುವ ಇವನು ಅಂತಹ ಬ್ರಾಹ್ಮಣರನ್ನು ಅವಮಾನಗೊಳಿಸುವುದರಿಂದಲೇ ಸಮಸ್ತವಾದ ಐಶ್ವರ್ಯದೊಡನೆಯೂ ವಿನಾಶಹೊಂದುತ್ತಾನೆ."

ಆಚಾರ್ಯ ಬೃಹಸ್ಪತಿಗಳು ದೇವತೆಗಳ ಸ್ವಾರ್ಥ-ಪರಮಾರ್ಥಗಳೆರಡನ್ನೂ ತಿಳಿದವರಾಗಿದ್ದರು. ಅವನು ಹೀಗೆ ಸಲಹೆಯನ್ನು ನೀಡಿದೊಡನೆಯೇ ದೇವತೆಗಳು ತಮ-ತಮಗೆ ಅನುಕೂಲವಾದ ರೂಪಗಳನ್ನು ಧರಿಸಿ ಸ್ವರ್ಗವನ್ನು ಬಿಟ್ಟು ಹೊರಟುಹೋದರು. ಹೀಗೆ ದೇವತೆಗಳೆಲ್ಲರೂ ಕಣ್ಮರೆ ಯಾಗಲು ವಿರೋಚನನ ಮಗನಾದ ಬಲಿಯು ದೇವತೆಗಳ ರಾಜಧಾನಿ ಯಾದ ಅಮರಾವತಿಯಲ್ಲಿ ನೆಲೆಸಿ ಮೂರು ಲೋಕಗಳನ್ನೂ ವಶಪಡಿಸಿ ಕೊಂಡು ಆಳತೊಡಗಿದನು. ಶಿಷ್ಯನ ವಿಷಯದಲ್ಲಿ ಅತ್ಯಂತವಾತ್ಸಲ್ಯದಿಂದ ಕೂಡಿದ್ದ ಶುಕ್ರಾಚಾರ್ಯರೇ ಮೊದಲಾದ ಭೃಗುವಂಶೀಯಬ್ರಾಹ್ಮಣರು ತಮ್ಮ ಶಿಷ್ಯನಾದ ಅವನಿಂದ ನೂರು ಅಶ್ವಮೇಧಯಾಗಗಳನ್ನು ಮಾಡಿಸಿದರು. ಬಳಿಕ ಆ ಯಜ್ಞಗಳ ಮಹಿಮೆಯಿಂದ ಬಲಿಯ ಕೀರ್ತಿಕೌಮುದಿಯು ಮೂರು ಲೋಕಗಳನ್ನೂ ಆಕ್ರಮಿಸಿ ದಶದಿಕ್ಕು ಗಳಲ್ಲಿಯೂ ಪ್ರಸರಿಸಿತು. ನಕ್ಷತ್ರಗಳ ರಾಜನಾದ ಚಂದ್ರನಂತೆ ದೈತ್ಯರಾಜ ನಾದ ಬಲಿಯು ಬಹಳವಾಗಿ ಪ್ರಕಾಶಿಸಿದನು. ದೇವತಾಸ್ವರೂಪರಾದ ಬ್ರಾಹ್ಮಣರ ಕೃಪಾಶ್ರಯದಿಂದ ಲಭಿಸಿದ ಸಂಪತ್ಸಮೃದ್ಧವಾದ ರಾಜ್ಯಲಕ್ಷ್ಮಿಯನ್ನು ಮಹಾತ್ಮನಾದ ಬಲಿಯು ಉಪಭೋಗಿಸುತ್ತಾ ತಾನು ಕೃತಕೃತ್ಯನಾದೆನೆಂದು ಭಾವಿಸಿಕೊಂಡನು.

(ಶ್ಲೋಕ 28-36)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೧೫ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೧೬ನೆಯ ಅಧ್ಯಾಯ

ಕಶ್ಯಪನು ಅದಿತಿಗೆ ಪಯೋವ್ರತವನ್ನು ಉಪದೇಶಿಸಿದುದು

ಶ್ರೀಶುಕರು ಹೇಳುತ್ತಾರೆ :

ಏವಂ ಪುತ್ರೇಷು ನಷ್ಟೇಷು ದೇವಮಾತಾದಿತಿಸ್ತದಾ ।
ಹೃತೇ ತ್ರಿವಿಷ್ಟಪೇ ದೈತ್ಯೈಃ ಪರ್ಯತಪ್ಯದನಾಥವತ್ ॥೧॥

ಪರೀಕ್ಷಿತಮಹಾರಾಜ! ಯಾವಾಗ ದೇವತೆಗಳು ಸ್ವರ್ಗದಿಂದ ಪಲಾಯನಮಾಡಿ ಯಾರ ಕಣ್ಣಿಗೂ ಕಾಣಿಸದಂತೆ ಅದೃಶ್ಯರಾಗಿಬಿಟ್ಟರೋ ಮತ್ತು ದೈತ್ಯರಿಗೆ ಸ್ವರ್ಗದ ಆಧಿಪತ್ಯವು ಸಿಕ್ಕಿಹೋಯಿತೋ, ಆಗ ದೇವ ಮಾತೆಯಾದ ಅದಿತಿಯು ದಿಕ್ಕಿಲ್ಲದವಳಂತೆ ಬಹಳವಾಗಿ ಸಂಕಟಪಟ್ಟಳು. ಬಹಳ ಕಾಲದ ಮೇಲೆ ಸಮಾಧಿಯಿಂದ ಬಹಿರ್ಮುಖನಾದ, ಪೂಜ್ಯನಾದ ಕಶ್ಯಪಮುನಿಯು ಉತ್ಸಾಹವಾಗಲೀ, ಆನಂದವಾಗಲೀ ಇಲ್ಲದೆ ಮಂಕುಕವಿ ದಂತಿದ್ದ ಅದಿತಿಯ ಆಶ್ರಮಕ್ಕೆ ಬಂದನು. ಯಥೋಚಿತವಾದ ಆಸನದಲ್ಲಿ ಕುಳಿತಿದ್ದ ಮಹರ್ಷಿಯನ್ನು ಅದಿತಿಯು ವಿಧಿಪೂರ್ವಕವಾಗಿ ಸತ್ಕರಿಸಿದಳು. ಬಾಡಿದ ಮುಖಭಾವದಿಂದ ಕೂಡಿದ್ದ ಪತ್ನಿಯನ್ನು ನೋಡಿ ಕಶ್ಯಪನು ಹೇಳಿದನು :

ಅಪ್ಯಭದ್ರಂ ನ ವಿಪ್ರಾಣಾಂ ಭದ್ರೇ ಲೋಕೇಽಧುನಾಗತಮ್ ।
ನ ಧರ್ಮಸ್ಯ ನ ಲೋಕಸ್ಯ ಮೃತ್ಯೋಶ್ಛನ್ದಾನುವರ್ತಿನಃ ॥೪॥

“ಕಲ್ಯಾಣಿ! ಲೋಕದಲ್ಲಿ ಈಗ ಬ್ರಾಹ್ಮಣರಿಗೆ ಯಾವುದೇ ವಿಧವಾದ ವಿಪತ್ತೂ ಉಂಟಾಗಿಲ್ಲವಷ್ಟೇ? ಧರ್ಮಕ್ಕೂ ಮತ್ತು ಮೃತ್ಯುವಿನ ವಶವರ್ತಿ ಗಳಾಗಿರುವ ಜನರಿಗೂ ಯಾವ ವಿಧವಾದ ತೊಂದರೆಯೂ ಆಗಿಲ್ಲ ವಲ್ಲವೇ?

ಅಪಿ ವಾಕುಶಲಂ ಕಿಂಚಿದ್ಗೃಹೇಷು ಗೃಹಮೇಧಿನಿ ।
ಧರ್ಮಸ್ಯಾರ್ಥಸ್ಯ ಕಾಮಸ್ಯ ಯತ್ರ ಯೋಗೋ ಹ್ಯಯೋಗಿನಾಮ್ ॥

ಪ್ರಿಯಳೇ! ಯೋಗಾಭ್ಯಾಸದಲ್ಲಿ ನಿರತರಾಗದೇ ಇರುವವರಿಗೂ ಧರ್ಮಾರ್ಥಕಾಮಗಳೆಂಬ ಫಲವನ್ನು ಕೊಡುವ ಗೃಹಸ್ಥಾಶ್ರಮಕ್ಕೂ ಯಾವು ದಾದರೂ ತೊಂದರೆಯುಂಟಾಗಿರುವುದೇ?

ಅಪಿ ವಾತಿಥಯೋಽಭ್ಯೇತ್ಯ ಕುಟುಮ್ಬಾಸಕ್ತಯಾ ತ್ವಯಾ ।
ಗೃಹಾದಪೂಜಿತಾ ಯಾತಾಃ ಪ್ರತ್ಯುತ್ಥಾನೇನ ವಾ ಕ್ವಚಿತ್ ॥೬॥

ನೀನು ಯಾವಾಗಲಾದರೂ ಮನೆಗೆಲಸಗಳಲ್ಲಿ ತೊಡಗಿದ್ದ ಸಮಯದಲ್ಲಿ ಯಾರಾದರೂ ಅತಿಥಿಗಳು ಬಂದು, ಅವರನ್ನು ನೀನು ಎದ್ದು ಎದುರುಗೊಂಡು ಸತ್ಕರಿಸದೇ ಅವರು ನಿರಾಶರಾಗಿ ನಮ್ಮ ಮನೆಯಿಂದ ಹೊರಟುಹೋದರೆ? ಅದರಿಂದೇನಾದರೂ ನೀನು ಖಿನ್ನಮನಸ್ಕ ಳಾಗಿರುವೆಯಾ?

ಗೃಹೇಷು ಯೇಷ್ವತಿಥಯೋ ನಾರ್ಚಿತಾಃ ಸಲಿಲೈರಪಿ ।
ಯದಿ ನಿರ್ಯಾನ್ತಿ ತೇ ನೂನಂ ಫೇರುರಾಜಗೃಹೋಪಮಾಃ ॥೭॥

ಯಾವ ಮನೆಗಳಲ್ಲಿ ಆಗಮಿಸಿದ ಅತಿಥಿಗಳನ್ನು ನೀರಿನಿಂದಾದರೂ ಸತ್ಕರಿಸುವುದಿಲ್ಲವೋ, ಬಂದವರು ನಿರಾಶರಾಗಿ ಹೋಗಿಬಿಡುವರೋ– ಅಂತಹ ಮನೆಗಳು ನರಿಯ ಬಿಲಗಳೇ ಸರಿ.

ಅಪ್ಯಗ್ನಯಸ್ತು ವೇಲಾಯಾಂ ನ ಹುತಾ ಹವಿಷಾ ಸತಿ ।
ತ್ವಯೋದ್ವಿಗ್ನಧಿಯಾ ಭದ್ರೇ ಪ್ರೋಷಿತೇ ಮಯಿ ಕರ್ಹಿಚಿತ್ ॥೮॥

ಮಂಗಳಕರಳಾದ ಅದಿತಿಯೇ! ನಾನು ತಪಸ್ಸಿಗಾಗಿ ಹೊರಟು ಹೋಗಿರಲು, ಕಳವಳಗೊಂಡ ಮನಸ್ಸಿನಿಂದ ಕೂಡಿದ ನೀನು ಆಯಾ ಕಾಲ ಗಳಲ್ಲಿ ಅಗ್ನಿಪರಿಚರ್ಯೆಯನ್ನು ಮಾಡಿರದೇ ಇರಬಹುದೇ!

ಯತ್ಪೂಜಯಾ ಕಾಮದುಘಾನ್ಯಾತಿ ಲೋಕಾನ್ಗೃಹಾನ್ವಿತಃ ।
ಬ್ರಾಹ್ಮಣೋಽಗ್ನಿಶ್ಚ ವೈ ವಿಷ್ಣೋಃ ಸರ್ವದೇವಾತ್ಮನೋ ಮುಖಮ್ ॥

ಸರ್ವದೇವಮಯನಾದ ಭಗವಂತನಿಗೆ ಬ್ರಾಹ್ಮಣ ಮತ್ತು ಅಗ್ನಿ ಇಬ್ಬರೂ ಮುಖಪ್ರಾಯರಾಗಿದ್ದಾರೆ. ಗೃಹಸ್ಥನಾದ ಪುರುಷನು ಬ್ರಾಹ್ಮಣರನ್ನೂ ಅಗ್ನಿಯನ್ನೂ ಆರಾಧಿಸಿದ್ದೇ ಆದರೆ ಸಮಸ್ತಕಾಮನೆಗಳನ್ನೂ ಪೂರ್ಣ ಗೊಳಿಸುವ ಪುಣ್ಯಲೋಕಗಳಿಗೆ ಹೋಗುತ್ತಾನೆ.

ಅಪಿ ಸರ್ವೇ ಕುಶಲಿನಸ್ತವ ಪುತ್ರಾ ಮನಸ್ವಿನಿ ।
ಲಕ್ಷಯೇಽಸ್ವಸ್ಥಮಾತ್ಮಾನಂ ಭವತ್ಯಾ ಲಕ್ಷಣೈರಹಮ್ ॥೧೦॥

ಮನಸ್ವಿನಿಯೇ! ನಿನ್ನ ಮಕ್ಕಳೆಲ್ಲರೂ ಕುಶಲಿಗಳಾಗಿರುವರೇ? ನಿನ್ನ ಮುಖಲಕ್ಷಣಗಳಿಂದ ನಾನು, ನೀನು ಸ್ವಲ್ಪ ಅಸ್ವಸ್ಥಳಾಗಿರುವೆಯೆಂಬುದನ್ನು ಗಮನಿಸಿದ್ದೇನೆ."

ಅದಿತಿಯು ಯಥೋಕ್ತವಾಗಿ ಉತ್ತರಿಸಿದಳು.

"ಪೂಜ್ಯನೇ! ಬ್ರಾಹ್ಮಣಶ್ರೇಷ್ಠನೇ! ಬ್ರಾಹ್ಮಣರು, ಗೋವುಗಳು, ಧರ್ಮ, ನಿನ್ನ ಸೇವಕಿಯಾದ ನಾನು-ಎಲ್ಲರೂ ಕುಶಲಿಗಳಾಗಿದ್ದೇವೆ. ಸ್ವಾಮಿಯೇ! ಈ ಗೃಹಸ್ಥಾಶ್ರಮವು ನೀನು ಹೇಳಿದಂತೆ ಧರ್ಮಾರ್ಥ ಕಾಮಗಳ ಸಾಧನೆಗೆ ಸಹಾಯಕವಾಗಿದೆ. ನಿನ್ನ ನಿರಂತರವಾದ ಸ್ಮರಣೆ ಯಿಂದಲೂ ಮತ್ತು ಶುಭಕಾಮನೆಯಿಂದಲೂ ಅಗ್ನಿ, ಅತಿಥಿಗಳು, ಸೇವಕರು, ಭಿಕ್ಷುಕರು ಮತ್ತು ಇತರ ಯಾಚಕರು–ಯಾರನ್ನೂ ತಿರಸ್ಕಾರಭಾವದಿಂದ ಕಂಡಿರುವುದಿಲ್ಲ. ಎಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸಿದ್ದೇನೆ.

ಸ್ವಾಮಿಯೇ! ಪ್ರಜಾಧ್ಯಕ್ಷನಾದ ನೀನೇ ನನಗೆ ಧರ್ಮೋಪದೇಶ ಮಾಡುತ್ತಿರುವಾಗ ನನ್ನ ಮನಸ್ಸಿನ ಯಾವ ಕಾಮನೆಗಳು ತಾನೇ ಈಡೇರಲಾರವು?

ಮಾರೀಚನೇ! ಸತ್ವಾದಿಗುಣಗಳೇ ಪ್ರಧಾನವಾಗಿರುವ ಈ ಪ್ರಜೆಗಳು ನಿನ್ನ ಮನಸ್ಸಂಕಲ್ಪದಿಂದಲೂ ಶರೀರದಿಂದಲೂ ಹುಟ್ಟಿದವರಾಗಿದ್ದಾರೆ. ನೀನಾದರೋ ದೇವಾಸುರರೇ ಮೊದಲಾದ ಈ ನಿನ್ನ ಮಕ್ಕಳ ವಿಷಯದಲ್ಲಿ ಸರ್ವಸಮಾನನು. ಎಲ್ಲರನ್ನೂ ಒಂದೇ ಸಮನಾಗಿ ಕಾಣುವೆ. ಆದರೂ ಮಹೇಶ್ವರನಾದ ನೀನು ಭಕ್ತರಾದವರಿಗೆ ವಿಶೇಷವಾದ ಪ್ರೀತಿಯನ್ನು ತೋರಿಸುವೆ. ಅವರ ಅಭಿಲಾಷೆಯನ್ನು ಪೂರ್ಣಗೊಳಿಸುವ ನಾಥನೇ! ನಾನು ನಿನ್ನ ದಾಸಿಯಾಗಿದ್ದೇನೆ. ನನಗೆ ಒಳ್ಳೆಯದು ಹೇಗಾಗುವುದೆಂಬು ದನ್ನು ವಿಚಾರಮಾಡಿ ನೋಡು. ಮಾನದನೇ! ಪ್ರಭುವೇ! ನಮ್ಮ ಶತ್ರುಗಳು ನಮ್ಮ ಸಂಪತ್ತನ್ನೂ ರಾಜ್ಯವನ್ನೂ ಅಪಹರಿಸಿಬಿಟ್ಟಿದ್ದಾರೆ. ರಾಜ್ಯಭ್ರಷ್ಟ ರಾಗಿರುವ ನಮ್ಮನ್ನು ಕಾಪಾಡು. ಬಲಿಷ್ಠರಾದ ದೈತ್ಯರು ನಮ್ಮ ಐಶ್ವರ್ಯ, ಧನ, ಯಶಸ್ಸು, ಪದವಿ–ಎಲ್ಲವನ್ನೂ ಅಪಹರಿಸಿಬಿಟ್ಟಿದ್ದಾರೆ. ಮನೆ

ಯಿಂದಲೂ ನಮ್ಮನ್ನು ಹೊರಗಟ್ಟಿದ್ದಾರೆ. ದುಃಖಸಾಗರದಲ್ಲಿ ನಾನು ಮುಳುಗಿಹೋಗಿದ್ದೇನೆ.

ಸತ್ಪುರುಷನೇ! ಅತ್ಯಂತಮಂಗಳದಾಯಕನೇ! ನನ್ನ ಮಕ್ಕಳು ಕಳೆದುಕೊಂಡಿರುವ ರಾಜ್ಯಸಂಪತ್ತಿಯನ್ನು ಪುನಃ ಪಡೆದುಕೊಳ್ಳುವಂತೆ ನಿನ್ನ ಕಲ್ಯಾಣಕರವಾದ ಬುದ್ಧಿಯಿಂದ ಅನುಗ್ರಹಿಸು." (ಶ್ಲೋಕ 11-17)

ಪರೀಕ್ಷಿತನೇ! ಅದಿತಿಯು ಹೀಗೆ ಪ್ರಾರ್ಥಿಸಿಕೊಳ್ಳಲು ಕಶ್ಯಪನು ನಸುನಗುತ್ತಾ ಅದಿತಿಗೆ ಹೇಳಿದನು :

ಅಹೋ ಮಾಯಾಬಲಂ ವಿಷ್ಣೋಃ ಸ್ನೇಹಬದ್ಧಮಿದಂ ಜಗತ್ ||೧೮||

ಕ್ವ ದೇಹೋ ಭೌತಿಕೋಽನಾತ್ಮಾ ಕ್ವ ಚಾತ್ಮಾ ಪ್ರಕೃತೇಃ ಪರಃ |
ಕಸ್ಯ ಕೇ ಪತಿಪುತ್ರಾದ್ಯಾ ಮೋಹ ಏವ ಹಿ ಕಾರಣಮ್ ||೧೯||

"ದೇವಿ! ಇದೆಂತಹ ಅಚ್ಚರಿ! ವಿಷ್ಣುವಿನ ಮಾಯೆಯೆಂಬುದು ಎಷ್ಟು ಪ್ರಬಲವಾಗಿದೆ ; ನೋಡು! ಸಮಸ್ತವಾದ ಈ ಪ್ರಪಂಚವೆಲ್ಲವೂ ಸ್ನೇಹ ವೆಂಬ ಹಗ್ಗದಿಂದ ಕಟ್ಟಲ್ಪಟ್ಟಿದೆ. ಪಂಚಭೂತಗಳಿಂದ ಸೃಷ್ಟಿಯಾಗಿರುವ ಅನಾತ್ಮವಾದ ಶರೀರವೆಲ್ಲಿ? ಪ್ರಕೃತಿಗಿಂತಲೂ ಆಚೆ ಇರುವ ಆತ್ಮವೆಲ್ಲಿ? ಒಂದು ನಶ್ವರ ಮತ್ತೊಂದು ಅವಿನಾಶಿ. ಯಾರಿಗೂ ಯಾರೂ ಪತಿಯೂ ಅಲ್ಲ ; ಯಾರಿಗೂ ಯಾರೂ ಪುತ್ರನೂ ಅಲ್ಲ. ಈ ಎಲ್ಲ ಬಂಧನಗಳಿಗೂ ಅಜ್ಞಾನವೇ ಕಾರಣವಾಗಿದೆ.

ಪ್ರಿಯಳೇ! ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ವಿರಾಜಮಾನ ನಾಗಿರುವ, ತನ್ನ ಭಕ್ತರ ದುಃಖವನ್ನು ಹೋಗಲಾಡಿಸುವ, ಜಗದ್ಗುರುವಾದ ಶ್ರೀಭಗವಂತನನ್ನು ಆರಾಧಿಸು. ಅವನು ಅತ್ಯಂತ ದಯಾರೂಪನು. ಅವಶ್ಯ ವಾಗಿ ನಿನ್ನ ಕಾಮನೆಗಳನ್ನು ಪೂರ್ಣಗೊಳಿಸಿಕೊಡುತ್ತಾನೆ. ಭಗವಂತನಲ್ಲಿ ಡುವ ಭಕ್ತಿಯು ಯಾವುದೇ ಕಾರಣದಿಂದಲೂ ವ್ಯರ್ಥವಾಗುವುದಿಲ್ಲವೆಂಬ ದೃಢವಿಶ್ವಾಸವು ನನಗಿದೆ. ಭಗವಂತನ ಆರಾಧನೆಯನ್ನು ಬಿಟ್ಟರೆ ನಿನ್ನ ಕಷ್ಟಪರಿಹಾರಕ್ಕೆ ಬೇರೆ ಯಾವ ಉಪಾಯವೂ ಇಲ್ಲ."

ಆಗ ಅದಿತಿದೇವಿಯು–"ಪೂಜ್ಯನೇ! ಜಗದೀಶ್ವರನಾದ ಭಗವಂತನ ಆರಾಧನೆಯನ್ನು ಹೇಗೆ ಮಾಡಬೇಕು? ಯಾವ ರೀತಿಯಲ್ಲಿ ಅವನನ್ನು

ಪೂಜಿಸುವುದರಿಂದ ಸತ್ಯಸಂಕಲ್ಪನಾದ ಪ್ರಭುವು ಪ್ರಸನ್ನನಾಗಿ ನನ್ನ ಮನೋರಥವನ್ನು ನಡೆಸಿಕೊಡುತ್ತಾನೆ? ಪತಿದೇವ! ನಾನು ನಿನ್ನ ಮಕ್ಕಳೊಡನೆ ಬಹಳವಾದ ದುಃಖವನ್ನು ಅನುಭವಿಸುತ್ತಿರುವೆನು. ಪರಬ್ರಹ್ಮ ಪರಮಾತ್ಮನು ಯಾವ ವಿಧವಾದ ಆರಾಧನೆಯಿಂದ ಶೀಘ್ರವಾಗಿ ಪ್ರಸನ್ನನಾಗುವನೋ ಅಂತಹ ಪೂಜಾಕ್ರಮವನ್ನೂ ಅದರ ವಿಧಿ-ವಿಧಾನಗಳನ್ನೂ ನನಗೆ ಉಪದೇಶಿಸು"–ಎಂದು ಪತಿದೇವನನ್ನು ಪ್ರಾರ್ಥಿಸಿದಳು.

ಕಶ್ಯಪಪ್ರಜಾಪತಿಯು ಆಕೆಗೆ ಹೀಗೆಂದನು :

"ಸಾಧ್ವಿಯೇ! ಹಿಂದೊಮ್ಮೆ ನಾನು ಸಂತಾನದ ಅಪೇಕ್ಷೆಯಿಂದ ಬ್ರಹ್ಮನನ್ನು ಪ್ರಾರ್ಥಿಸಿದೆನು. ನನ್ನ ಪ್ರಾರ್ಥನೆಗೆ ಓಗೊಟ್ಟು ಬ್ರಹ್ಮನೇ ಉಪದೇಶಿಸಿದ, ಭಗವಂತನಾದ ಕೇಶವನನ್ನು ಸಂತೋಷಗೊಳಿಸುವ (ಮಕ್ಕಳನ್ನು ಪಡೆಯಬಹುದಾದ) ವ್ರತವನ್ನು ನಾನು ನಿನಗೆ ಹೇಳುತ್ತೇನೆ.

ಫಾಲ್ಗುನಸ್ಯಾಮಲೇ ಪಕ್ಷೇ ದ್ವಾದಶಾಹಂ ಪಯೋವ್ರತಃ ।
ಅರ್ಚಯೇದರವಿನ್ದಾಕ್ಷಂ ಭಕ್ತ್ಯಾ ಪರಮಯಾನ್ವಿತಃ ॥೨೫॥

ಫಾಲ್ಗುನಮಾಸದ ಶುಕ್ಲಪಕ್ಷದಲ್ಲಿ ಪ್ರಥಮೆಯಿಂದ ದ್ವಾದಶಿಯವರೆಗೆ ಹನ್ನೆರಡು ದಿವಸಗಳು ಕೇವಲ ಹಾಲನ್ನು ಕುಡಿದುಕೊಂಡು ಅನನ್ಯಭಕ್ತಿಯಿಂದ ಕಮಲಾಕ್ಷನಾದ ಕೇಶವನನ್ನು ಪೂಜಿಸಬೇಕು.

ಸಿನೀವಾಲ್ಯಾಂ ಮೃದಾಲಿಪ್ಯ ಸ್ನಾಯಾತ್ತೋ ಽಡವಿದೀರ್ಣಯಾ ।
ಯದಿ ಲಭ್ಯೇತ ವೈ ಸ್ರೋತಸ್ಯೇತಂ ಮನ್ತ್ರಮುದೀರಯೇತ್ ॥೨೬॥

ಫಾಲ್ಗುನಶುಕ್ಲಪ್ರಥಮೆಯ ಹಿಂದಿನ ಮಾಘಮಾಸದ ಅಮಾವಾಸ್ಯೆಯ ದಿನ ಕಾಡುಹಂದಿಯು ಮೂತಿಯಿಂದ ತಿವಿದು ಎಬ್ಬಿಸಿರುವ ಮೃತ್ತಿಕೆಯನ್ನು ಮೈಗೆ ಹಚ್ಚಿಕೊಂಡು ಸ್ನಾನಮಾಡಬೇಕು. ಒಂದು ವೇಳೆ ಸ್ನಾನಮಾಡಲು ನದಿಯೇ ಸಿಕ್ಕಿದರೆ ಈ ಮಂತ್ರವನ್ನು ಹೇಳಿಕೊಂಡು ನದಿಯಲ್ಲಿ ಸ್ನಾನ ಮಾಡಬೇಕು.

ತ್ವಂ ದೇವ್ಯಾದಿವರಾಹೇಣ ರಸಾಯಾಃ ಸ್ಥಾನಮಿಚ್ಛತಾ ।
ಉದ್ಧೃತಾಸಿ ನಮಸ್ತುಭ್ಯಂ ಪಾಪ್ಮಾನಂ ಮೇ ಪ್ರಣಾಶಯ ॥೨೭॥

'ಹೇ ಭಗವತಿ! ಭೂದೇವಿ! ಪ್ರಾಣಿಗಳಿಗೆ ಜೀವಿಸಲು ಸ್ಥಾನವನ್ನು

ಕಲ್ಪಿಸಿಕೊಡುವ ಸಲುವಾಗಿ ಮಹಾವರಾಹಮೂರ್ತಿಯು ರಸಾತಲದಿಂದ ನಿನ್ನನ್ನು ಮೇಲಕ್ಕೆತ್ತಿ ತಂದನು. ನಿನಗೆ ನಾನು ನಮಸ್ಕಾರಮಾಡುತ್ತೇನೆ. ನೀನು ನನ್ನ ಪಾಪಗಳನ್ನು ಪರಿಹರಿಸು'–ಹೀಗೆ ಮೃತ್ತಿಕೆಯನ್ನಿಟ್ಟುಕೊಂಡು ಈ ಮಂತ್ರವನ್ನು ಹೇಳಿ ಅನಂತರ ಮೈಗೆ ಹಚ್ಚಿಕೊಂಡು ಸ್ನಾನಮಾಡ ಬೇಕು.

ಸ್ನಾನಮಾಡಿದನಂತರ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಏಕಾಗ್ರ ಚಿತ್ತನಾಗಿ ಅರ್ಚಾವಿಗ್ರಹರೂಪದಲ್ಲಿರುವ, ಅಗ್ನಿಯ ರೂಪದಲ್ಲಿರುವ ಮತ್ತು ಗುರುವಿನ ರೂಪದಲ್ಲಿರುವ ಶ್ರೀಭಗವಂತನನ್ನು ಪೂಜಿಸಬೇಕು ಮತ್ತು ಹೀಗೆ ಪ್ರಾರ್ಥನೆಮಾಡಬೇಕು :

ನಮಸ್ತುಭ್ಯಂ ಭಗವತೇ ಪುರುಷಾಯ ಮಹೀಯಸೇ ।
ಸರ್ವಭೂತನಿವಾಸಾಯ ವಾಸುದೇವಾಯ ಸಾಕ್ಷಿಣೇ ॥೨೯॥

'ಷಾಡ್ಗುಣ್ಯಪರಿಪೂರ್ಣನಾದ, ಸಮಸ್ತಪ್ರಾಣಿಗಳಲ್ಲಿಯೂ ವಾಸ ಮಾಡುತ್ತಿರುವ, ಸರ್ವಶ್ರೇಷ್ಠನಾದ, ಸಮಸ್ತಪ್ರಾಣಿಗಳನ್ನೂ ತನ್ನಲ್ಲಿಯೇ ಧರಿಸಿರುವ, ಸಮಸ್ತಚರಾಚರಜಗತ್ತಿಗೂ ಮತ್ತು ಅದರ ಕಾರಣಕ್ಕೂ ಸಾಕ್ಷಿಭೂತನಾಗಿರುವ ವಾಸುದೇವನೇ! ನಿನಗೆ ನಮಸ್ಕರಿಸುತ್ತೇನೆ.

ನಮೋಽವ್ಯಕ್ತಾಯ ಸೂಕ್ಷ್ಮಾಯ ಪ್ರಧಾನಪುರುಷಾಯ ಚ ।
ಚತುರ್ವಿಂಶದ್ಗುಣಜ್ಞಾಯ ಗುಣಸಂಖ್ಯಾನಹೇತವೇ ॥೩೦॥

ಪ್ರಭುವೇ! ನೀನು ಅವ್ಯಕ್ತನೂ ಸೂಕ್ಷ್ಮನೂ ಆಗಿರುವೆ. ಪ್ರಕೃತಿ ಮತ್ತು ಪುರುಷರ ರೂಪದಲ್ಲಿಯೂ ಇರುವವನು ನೀನೇ. ನೀನು *ಇಪ್ಪತ್ತುನಾಲ್ಕು ಗುಣಗಳನ್ನು (ತತ್ತ್ವಗಳನ್ನು) ತಿಳಿದವನಾಗಿರುವೆ. ಸಾಂಖ್ಯಶಾಸ್ತ್ರಪ್ರವರ್ತಕ ನಾಗಿಯೂ ಇರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ.

---

* ಸಾಂಖ್ಯಮತದ ಪ್ರಕಾರ ೨೪ ತತ್ತ್ವಗಳು ಹೀಗಿವೆ : ಪ್ರಕೃತಿ, ಮಹತ್ತು, ಅಹಂಕಾರ, ಮನಸ್ಸು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು. ಶಬ್ದಸ್ಪರ್ಶಾದಿ ಐದು ತನ್ಮಾತ್ರೆಗಳು, ಆಕಾಶವೇ ಮೊದಲಾದ ಪಂಚಭೂತಗಳು ಇವು ೨೪ ತತ್ತ್ವಗಳು, ಜೀವಾತ್ಮನೂ ಸೇರಿ ಇಪ್ಪತ್ತೈದು ತತ್ತ್ವಗಳಾಗುತ್ತವೆ.

ನಮೋ ದ್ವಿಶೀರ್ಷ್ಣೇ ತ್ರಿಪದೇ ಚತುಃಶೃಙ್ಗಾಯ ತನ್ತವೇ ।
ಸಪ್ತಹಸ್ತಾಯ ಯಜ್ಞಾಯ ತ್ರಯೀವಿದ್ಯಾತ್ಮನೇ ನಮಃ ॥೩೧॥

ನೀನು ಯಜ್ಞಸ್ವರೂಪನಾಗಿರುವೆ. ಪ್ರಾಯಣೀಯ ಮತ್ತು ಉದಯನೀಯಗಳೆಂಬ ಎರಡು ಯಜ್ಞಕರ್ಮಗಳು ನಿನ್ನ ಶಿರಸ್ಸಿನ ರೂಪ ದಲ್ಲಿವೆ. ಪ್ರಾತಃಸವನ, ಮಾಧ್ಯಂದಿನಸವನ ಮತ್ತು ಸಾಯಂಸವನ ಎಂಬ ಮೂರು ಸವನಗಳೇ ನಿನ್ನ ಪಾದಗಳಾಗಿವೆ. ಗಾಯತ್ರಿಯೇ ಮೊದಲಾದ ಏಳು ಛಂದಸ್ಸುಗಳು ನಿನ್ನ ಏಳು ಕೈಗಳಾಗಿವೆ. ಧರ್ಮಮಯವಾದ ವೃಷಭರೂಪವಾದ ಈ ಯಜ್ಞವು ವೇದಗಳಿಂದ ಪ್ರತಿಪಾದಿತವಾಗಿದೆ. ಈ ಯಜ್ಞಕ್ಕೆ ಆತ್ಮನು ನೀನೇ ಆಗಿರುವೆ. ಅಂತಹ ಯಜ್ಞಸ್ವರೂಪನಾದ ನಿನಗೆ ನಮಸ್ಕರಿಸುತ್ತೇನೆ.*

ನಮಃ ಶಿವಾಯ ರುದ್ರಾಯ ನಮಃ ಶಕ್ತಿಧರಾಯ ಚ ।
ಸರ್ವವಿದ್ಯಾಧಿಪತಯೇ ಭೂತಾನಾಂ ಪತಯೇ ನಮಃ ॥೩೨॥

ಭಗವಂತ! ಲೋಕಕ್ಕೆ ಕಲ್ಯಾಣವನ್ನುಂಟುಮಾಡುವ ಶಿವನೂ ನೀನೇ ಆಗಿರುವೆ. ಪ್ರಳಯವನ್ನುಂಟುಮಾಡುವವನೂ ನೀನೇ. ನೀನು ಸಮಸ್ತವಾದ ಶಕ್ತಿಗಳನ್ನೂ ಧರಿಸಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ನೀನು ಸಮಸ್ತವಿದ್ಯೆಗಳಿಗೂ ಅಧಿಪತಿಯಾಗಿರುವೆ. ಸರ್ವಪ್ರಾಣಿಗಳಿಗೂ ಸ್ವಾಮಿ ಯಾಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ.

---

* ಚತ್ವಾರಿಶೃಙ್ಗಾ ತ್ರಯೋ ಅಸ್ಯಪಾದಾ ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ । ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋದೇವೋ ಮರ್ತ್ಯಾಗ್ಂ ಆವಿವೇಶ (ಶ್ರುತಿ) (ಭಾವಾರ್ಥದೀಪಿಕಾ)

ಚತ್ವಾರಿಶೃಙ್ಗಾ ವೇದಾಸ್ತು ಪಾದಾಸ್ತ್ರಿಭುವನಾನಿ ಚ । ಪ್ರಾಯಣೀಯಂ ಶಿರಸ್ತ್ವೇಕಮನ್ಯಚ್ಚೋದಯನೀಯಕಮ್ ॥ ಹಸ್ತಾಸ್ತು ಸಪ್ತಛನ್ದಾಂಸಿ ತೈರ್ಗೃಹ್ಣನ್ತಿ ಫಲಾನ್ಯಸೌ । ಮನ್ತ್ರಬ್ರಾಹ್ಮಣಕಲ್ಪೈಸ್ತು ತ್ರಿಧಾ ಬದ್ಧ ಇತೀರ್ಯತೇ ॥ ಶಾಸ್ತ್ರೋ- ದ್ಗಾತೃಸ್ತುತಿರವೈ ರೌರವೀರ್ತ್ಯತ್ವಿಜೋ ಮುಖಾತ್ । ವೃಷಭೋ ಮಹಾನ್ ಸ್ವಧರ್ಮತ್ವಾದ್ದೇವಸ್ತು ಫಲಭಾವನಾತ್ ॥ (ವಿಜಯಧ್ವಜೀಯ)

ಯಜ್ಞಪುರುಷನಾದ ಶ್ರೀಭಗವಂತನಿಗೆ ವೇದಗಳೇ ನಾಲ್ಕು ಕೊಂಬುಗಳು. ಮೂರು ಲೋಕಗಳು ಅಥವಾ ಪ್ರಾತರ್ಮಾಧ್ಯಂದಿನಸಾಯಂಸವನಗಳೇ ಮೂರು ಪಾದಗಳು

ನಮೋ ಹಿರಣ್ಯಗರ್ಭಾಯ ಪ್ರಾಣಾಯ ಜಗದಾತ್ಮನೇ ।
ಯೋಗೈಶ್ವರ್ಯಶರೀರಾಯ ನಮಸ್ತೇ ಯೋಗಹೇತವೇ ॥೩೩॥

ಸೃಷ್ಟಿಕರ್ತೃವಾದ, ಬ್ರಹ್ಮಸ್ವರೂಪನಾಗಿರುವ, ಸಕಲಪ್ರಾಣಿಗಳ ಪ್ರಾಣ ಸ್ವರೂಪನಾಗಿರುವ, ಜಗತ್ತಿಗೆ ಆತ್ಮಸ್ವರೂಪನಾಗಿರುವ, ಯೋಗಸ್ವರೂಪನೂ ಮತ್ತು ಯೋಗದಿಂದ ಪ್ರಾಪ್ತವಾಗುವ ಐಶ್ವರ್ಯಸ್ವರೂಪನೂ ಆಗಿರುವ, ಯೋಗೈಶ್ವರ್ಯವೇ ಶರೀರವಾಗಿ ಉಳ್ಳ, ಯೋಗಕ್ಕೂ ಕಾರಣನಾಗಿರುವ ನಿನಗೆ ನಮಸ್ಕಾರಮಾಡುತ್ತೇನೆ.

ನಮಸ್ತ ಆದಿದೇವಾಯ ಸಾಕ್ಷಿಭೂತಾಯ ತೇ ನಮಃ ।
ನಾರಾಯಣಾಯ ಋಷಯೇ ನರಾಯ ಹರಯೇ ನಮಃ ॥೩೪॥

ಆದಿದೇವನಾಗಿರುವ ನಿನಗೆ ನಮಸ್ಕಾರವು. ಸಮಸ್ತಕ್ಕೂ ಸಾಕ್ಷಿಭೂತ ನಾಗಿರುವ ನಿನಗೆ ನಮಸ್ಕಾರವು. ನರ-ನಾರಾಯಣಋಷಿಗಳ ರೂಪದಲ್ಲಿ ಪ್ರಕಟವಾಗುವ ಶ್ರೀಹರಿಗೆ ನಮಸ್ಕರಿಸುತ್ತೇನೆ.

ನಮೋ ಮರಕತಶ್ಯಾಮವಪುಷೇಽಧಿಗತಶ್ರಿಯೇ ।
ಕೇಶವಾಯ ನಮಸ್ತುಭ್ಯಂ ನಮಸ್ತೇ ಪೀತವಾಸಸೇ ॥೩೫॥

ಮರಕತಮಣಿಯಂತೆ ಶ್ಯಾಮಲವರ್ಣನಾಗಿರುವ ನಿನಗೆ ನಮಸ್ಕಾರವು. ಸಮಸ್ತವಾದ ಸಂಪತ್ತನ್ನೂ ಸಂಪತ್ತುಗಳಿಗೆ ಅಧಿದೇವತೆಯಾದ ಮಹಾಲಕ್ಷ್ಮಿಯನ್ನೂ ಹೊಂದಿರುವ ನಿನಗೆ ನಮಸ್ಕಾರವು. ಪೀತಾಂಬರಧರ ನಾದ ಕೇಶವನಾಮಕನಾದ ನಿನಗೆ ನಮಸ್ಕಾರಮಾಡುತ್ತೇನೆ.

ತ್ವಂ ಸರ್ವವರದಃ ಪುಂಸಾಂ ವರೇಣ್ಯ ವರದರ್ಷಭ ।
ಅತಸ್ತೇ ಶ್ರೇಯಸೇ ಧೀರಾಃ ಪಾದರೇಣುಮುಪಾಸತೇ ॥೩೬॥

ಪ್ರಾಯಣೀಯ-ಉದಯನೀಯಗಳೇ ಎರಡು ತಲೆಗಳು. ಗಾಯತ್ರೀ-ತ್ರಿಷ್ಟುಪ್-ಜಗತೀ-ಅನುಷ್ಟುಪ್-ಶಕ್ತಿ-ಜಗತೀ-ಉಷ್ಣಿಕ್ ಈ ಏಳು ಛಂದಸ್ಸುಗಳೇ ಏಳು ಕೈಗಳು. ಮಂತ್ರ-ಬ್ರಾಹ್ಮಣ ಮತ್ತು ಕಲ್ಪಗಳೆಂಬ ಮೂರು ಬಂಧಗಳು. ಋತ್ವಿಜರು ಸರ್ವಕ್ರಮ ವನ್ನನುಸರಿಸಿ ಋಕ್ಕುಗಳಿಂದ ಹೊಗಳುವುದು, ಯಜುಸ್ಸುಗಳಿಂದ ಪೂಜಿಸುವುದು, ಸಾಮಗಳಿಂದ ಗಾನಮಾಡುವುದು–ಇವುಗಳೇ ಧ್ವನಿಯು. ಇಂತಹ ಧರ್ಮಸ್ವರೂಪನಾದ ಯಜ್ಞಮೂರ್ತಿಯು ಯಜ್ಞಗಳಿಗೆ ಅರ್ಹರಾದ ಮಾನವರನ್ನು ಒಳಹೊಕ್ಕನು ಎಂಬುದೇ ಈ ಮಂತ್ರದ ಅರ್ಥ.

ನೀನು ಭಕ್ತರಿಗೆ ಸಮಸ್ತವರಗಳನ್ನೂ ದಯಪಾಲಿಸುವೆ. ಹಾಗೆ ಭಕ್ತರಿಗೆ ವರಗಳನ್ನು ಕೊಡುವವರಲ್ಲಿ ನೀನು ಶ್ರೇಷ್ಠನಾಗಿರುವೆ. ಆದುದರಿಂದಲೇ ಭಕ್ತರಿಗೆ ನೀನು ಇಷ್ಟನಾಗಿರುವೆ. ಆದುದರಿಂದಲೇ ಧೀರರಾದವರು (ವಿವೇಕಿಗಳಾದವರು) ತಮ್ಮ ಶ್ರೇಯಸ್ಸಿಗಾಗಿ ನಿನ್ನ ದಿವ್ಯಪಾದಗಳ ಪವಿತ್ರವಾದ ಧೂಳಿಯನ್ನು ಉಪಾಸಿಸುತ್ತಾರೆ.

ಅನ್ವವರ್ತನ್ತ ಯಂ ದೇವಾಃ ಶ್ರೀಶ್ಚ ತತ್ಪಾದಪದ್ಮಯೋಃ ।
ಸ್ಪೃಹಯನ್ತ ಇವಾಮೋದಂ ಭಗವಾನ್ಮೇ ಪ್ರಸೀದತಾಮ್ ॥೩೭॥

ಯಾವನ ಚರಣಕಮಲಗಳ ಸುಗಂಧವನ್ನು ಆಘ್ರಾಣಿಸುವ ಆಸೆಯಿಂದ ದೇವತೆಗಳೂ ಮತ್ತು ಮಹಾಲಕ್ಷ್ಮಿಯೂ ನಿರಂತರವೂ ಯಾವನನ್ನು ಆಶ್ರಯಿಸಿಕೊಂಡಿರುವರೋ ಅಂತಹ ಭಕ್ತಪರಾಧೀನನಾದ ಭಗವಂತನು ನನಗೆ ಪ್ರಸನ್ನನಾಗಲಿ.'

ಪ್ರಿಯಳೇ! ಅದಿತಿದೇವಿ! ಈ ಮಂತ್ರಗಳಿಂದ ಹೃಷೀಕೇಶನನ್ನು ಆವಾಹಿಸಬೇಕು. ಬಳಿಕ ವಿಷ್ಣುವನ್ನು ಶ್ರದ್ಧಾಪೂರ್ವಕವಾಗಿ ಅರ್ಘ್ಯ ಪಾದ್ಯಾಚಮನೀಯಮಧುಪರ್ಕಾದಿಗಳಿಂದ ಅರ್ಚನೆಮಾಡಬೇಕು. ಬಳಿಕ ಸರ್ವವ್ಯಾಪಕನಾದ ಶ್ರೀಹರಿಯನ್ನು ಹಾಲಿನಿಂದ ಸ್ನಾನಮಾಡಿಸಬೇಕು. ಬಳಿಕ ಗಂಧಮಾಲ್ಯಾದಿಗಳಿಂದ ಅರ್ಚಿಸಿ ವಸ್ತ್ರೋಪವೀತಗಳಿಂದಲೂ ಆಭರಣಾದಿಗಳಿಂದಲೂ ಪರಮಾತ್ಮನನ್ನು ಅಲಂಕರಿಸಿ ಪಾದ್ಯಾಚಮನೀಯಗಳನ್ನು ಸಮರ್ಪಿಸಬೇಕು. '**ಓಂ ನಮೋ ಭಗವತೇ ವಾಸುದೇವಾಯ**'–ಈ ದ್ವಾದಶಾಕ್ಷರಮಂತ್ರವನ್ನು ಹೇಳಿಕೊಂಡು ಗಂಧ-ಅಕ್ಷತೆ-ಪುಷ್ಪ-ಧೂಪ-ದೀಪಾದಿಗಳನ್ನು ಶ್ರೀಹರಿಗೆ ಸಮರ್ಪಿಸಬೇಕು. ತನ್ನ ಸಂಪತ್ತಿಗೆ ಅನುಗುಣವಾಗಿ ಹಾಲಿನಲ್ಲಿ ಪಕ್ವವಾದ, ತುಪ್ಪದಿಂದಲೂ ಬೆಲ್ಲದಿಂದಲೂ ಕೂಡಿದ ಪಾಯಸವನ್ನೂ, ಮೃಷ್ಟಾನ್ನವನ್ನೂ ಶ್ರೀಹರಿಗೆ ನಿವೇದನಮಾಡಿ ದ್ವಾದಶಾಕ್ಷರೀಮಂತ್ರದಿಂದ ಹೋಮಮಾಡಬೇಕು. ಹಾಗೆ ಶ್ರೀಭಗವಂತನಿಗೆ ನಿವೇದನೆಮಾಡಿದ ಮಹಾಪ್ರಸಾದವನ್ನು ಭಕ್ತನಾದವನಿಗೆ ಕೊಡಬೇಕು ಅಥವಾ ತಾನಾದರೂ ಭುಂಜಿಸಬೇಕು. ಬಳಿಕ ಶ್ರೀಭಗವಂತನಿಗೆ ಆಚಮನವನ್ನು ಅರ್ಪಿಸಿ ತಾಂಬೂಲವನ್ನು ನಿವೇದನೆ ಮಾಡಬೇಕು. ಅನಂತರ

ನೂರೆಂಟು ಬಾರಿ ವಾಸುದೇವನ ಮಹಾಮಂತ್ರವನ್ನು ಜಪಿಸಬೇಕು. ಪ್ರಭು ವನ್ನು ಸ್ತೋತ್ರಗಳಿಂದ ಹೊಗಳಬೇಕು. ಸಂತೋಷದಿಂದ ಪ್ರದಕ್ಷಿಣೆಯನ್ನು ಮಾಡಿ ದೀರ್ಘದಂಡನಮಸ್ಕಾರವನ್ನು ಮಾಡಬೇಕು. ನಿರ್ಮಾಲ್ಯವನ್ನು ತಲೆಯಲ್ಲಿ ಧರಿಸಿ ಸ್ವಾಮಿಯನ್ನು ಉದ್ವಾಸನಮಾಡಬೇಕು. ಇಬ್ಬರಿಗೆ ಕಡಿಮೆಯಿಲ್ಲದಂತೆ ಬ್ರಾಹ್ಮಣರನ್ನು ಯಥೋಚಿತವಾಗಿ ಪಾಯಸದಿಂದ ಕೂಡಿದ ಮೃಷ್ಟಾನ್ನದಿಂದ ಭೋಜನಮಾಡಿಸಬೇಕು. ಅನಂತರ ಸತ್ಕೃತರಾದ ಆ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು ಇಷ್ಟಮಿತ್ರರೊಡನೆ ಪ್ರಸಾದ ಶೇಷವನ್ನು ಸ್ವೀಕರಿಸಬೇಕು. ರಾತ್ರಿಯಲ್ಲಿ ಬ್ರಹ್ಮಚರ್ಯದಿಂದಿರಬೇಕು. (ಸ್ತ್ರೀಸಂಗವನ್ನು ಮಾಡಬಾರದು.) ಮೊದಲನೆಯ ದಿನವು ಕಳೆದು ಬೆಳಗಾದೊಡನೆಯೇ ಹಿಂದಿನ ದಿನದಂತೆಯೇ ಸ್ನಾನಮಾಡಿ ಶುಚಿಯಾಗಿ ಯಥೋಕ್ತವಾದ ವಿಧಿಯಿಂದ ಏಕಾಗ್ರಚಿತ್ತನಾಗಿ ಪರಮಾತ್ಮನಿಗೆ ಹಾಲಿನಿಂದ ಅಭಿಷೇಕವನ್ನು ಮಾಡಬೇಕು. ಹಿಂದಿನ ದಿನದಂತೆಯೇ ಷೋಡಶೋಪ ಚಾರಪೂಜಾಕ್ರಮದಿಂದ ಶ್ರೀಭಗವಂತನಿಗೆ ಅರ್ಚನೆಯನ್ನು ಸಲ್ಲಿಸಬೇಕು. ವಿಷ್ಣುವಿನ ಪೂಜೆಯಲ್ಲಿ ಆಸಕ್ತನಾದವನು ಹೀಗೆ ಪ್ರತಿನಿತ್ಯವೂ ಭಗವಂತ ನನ್ನು ಪೂಜಿಸುತ್ತಾ ಕೇವಲ ಹಾಲನ್ನೇ ಆಹಾರವನ್ನಾಗಿ ಮಾಡಿಕೊಂಡು ಹನ್ನೆರಡು ದಿವಸಗಳು ಈ ಪಯೋವ್ರತವನ್ನು ಆಚರಿಸಬೇಕು. ಮೊದಲ ನೆಯ ದಿವಸದಂತೆಯೇ ಪ್ರತಿನಿತ್ಯವೂ ಮೂಲಮಂತ್ರದಿಂದ ಹೋಮ ಮಾಡಬೇಕು ಮತ್ತು ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು. ಹೀಗೆ ಹನ್ನೆರಡು ದಿವಸಗಳು ಪ್ರತಿನಿತ್ಯವೂ ಪಯೋವ್ರತವನ್ನು ಮಾಡಬೇಕು. ವಿಷ್ಣುವಿಗೆ ಪೂಜೆಯನ್ನೂ, ವಿಷ್ಣುವನ್ನು ಉದ್ದೇಶಿಸಿ ಹೋಮವನ್ನೂ, ಛತ್ರ-ಚಾಮರಾದಿ ಮರ್ಯಾದೆಯನ್ನೂ ಅರ್ಪಿಸಿ ಬ್ರಾಹ್ಮಣರಿಗೆ ಭೋಜನ ವನ್ನು ಮಾಡಿಸಬೇಕು. ಫಾಲ್ಗುನ ಶುದ್ಧ ಪ್ರಥಮೆಯನ್ನು ಮೊದಲ್ಗೊಂಡು ತ್ರಯೋದಶಿಯವರೆಗೆ ಸ್ತ್ರೀಸಂಗಮಾಡಬಾರದು. ನೆಲದ ಮೇಲೆ ಮಲಗ ಬೇಕು. ಮೂರು ಹೊತ್ತು ಸ್ನಾನಮಾಡಬೇಕು. ಪ್ರಾಣಿಹಿಂಸೆ ಮಾಡಬಾರದು. ಶ್ರೀಭಗವಂತನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ ಸದಾ ಅವನ ಧ್ಯಾನ ದಲ್ಲಿಯೂ, ಅವನ ಸಂಕೀರ್ತನದಲ್ಲಿಯೂ, ಅವನ ದಿವ್ಯಕಥೆಗಳ ಶ್ರವಣ ಮನನಗಳಲ್ಲಿಯೂ ನಿರತನಾಗಿರಬೇಕು. ಯಾವುದೇ ವಿಧವಾದ ಕೆಟ್ಟಮಾತು

ಗಳನ್ನೂ ಆಡಬಾರದು. ಭೋಗಾದಿಗಳನ್ನು ವರ್ಜಿಸಬೇಕು. ಹದಿಮೂರನೆಯ ದಿವಸ ಪೂಜಾ ವಿಧಿ-ವಿಧಾನಗಳನ್ನು ತಿಳಿದಿರುವ ಐವರು ಬ್ರಾಹ್ಮಣರಿಂದ ಪ್ರಭುವಾದ ವಿಷ್ಣುವಿಗೆ ಶಾಸ್ತ್ರಗಳಲ್ಲಿ ಹೇಳಿರುವಂತೆ ಪಂಚಾಮೃತಸ್ನಾನ ಪೂರ್ವಕವಾಗಿ ಅಭಿಷೇಕವನ್ನು ಮಾಡಿಸಬೇಕು. ಹಣವಿದ್ದೂ ದೇವರನ್ನು ವಂಚಿಸಲು ಹೋಗದೆ (ಜಿಪುಣತನವಿಲ್ಲದೆ-ವಿತ್ತಶಾಠ್ಯಮಾಡದೆ) ಮಹಾ ತೇಜಸ್ವಿಯಾದ ಮಹಾವಿಷ್ಣುವಿಗೆ ಹಾಲಿನಲ್ಲಿ ಬೇಯಿಸಿದ ಚರುವನ್ನು ಸಿದ್ಧ ಗೊಳಿಸಿ ಸರ್ವೋಪಚಾರಗಳಿಂದ ಕೂಡಿದ ಮಹಾಪೂಜೆಯನ್ನು ಮಾಡ ಬೇಕು. ಏಕಾಗ್ರವಾದ ಮನಸ್ಸಿನಿಂದ ಕೂಡಿದವನಾಗಿ ಹದಿನಾರು ಪುರುಷ ಸೂಕ್ತಮಂತ್ರಗಳಿಂದ ಹಾಲಿನಿಂದ ಬೇಯಿಸಿದ ಚರುವನ್ನು ಅಗ್ನಿಯಲ್ಲಿ ಹೋಮಮಾಡಬೇಕು. ಬಳಿಕ ಶ್ರೀಭಗವಂತನಿಗೆ ತೃಪ್ತಿಯಾಗುವ ರೀತಿಯಲ್ಲಿ ಷಡ್ರಸೋಪೇತವಾದ ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯಾದಿಗಳನ್ನು ನಿವೇ ದನೆಮಾಡಬೇಕು. ಜ್ಞಾನಸಂಪನ್ನನಾದ ಆಚಾರ್ಯನನ್ನೂ ಋತ್ವಿಜರನ್ನೂ ವಸ್ತ್ರ-ಆಭರಣ-ಗೋವು ಮತ್ತು ಸುವರ್ಣಪ್ರದಾನದಿಂದ ಸಂತೋಷ ಗೊಳಿಸಬೇಕು. ಬ್ರಾಹ್ಮಣರನ್ನು ಪೂಜಿಸಿ ತೃಪ್ತಿಪಡಿಸುವುದೂ ಶ್ರೀಹರಿಯ ಆರಾಧನೆಯೇ ಆಗುತ್ತದೆ. ಶುಭ್ರವಾದ ನಗೆಯುಳ್ಳವಳೇ! ಶುಚಿ-ರುಚಿಯಾದ ಭಕ್ಷ್ಯ-ಭೋಜ್ಯಾದಿಗಳಿಂದ ಕೂಡಿದ ಮೃಷ್ಟಾನ್ನದಿಂದ ಆಚಾರ್ಯ-ಋತ್ವಿಜರಿಗೂ ಪೂಜಾಸಮಾರಂಭಕ್ಕೆ ಆಗಮಿಸಿರುವ ಇತರ ಬ್ರಾಹ್ಮಣರಿಗೂ ಶಕ್ತ್ಯನುಸಾರವಾಗಿ ಭೋಜನಮಾಡಿಸಬೇಕು. ಗುರುವಿಗೂ ಮತ್ತು ಋತ್ವಿಜರಿಗೂ ಯಥಾಯೋಗ್ಯವಾಗಿ ದಕ್ಷಿಣೆಯನ್ನು ಕೊಡಬೇಕು. ಪೂಜೆಯ ಸಮಯಕ್ಕೆ ಆಗಮಿಸಿದ ಚಂಡಾಲರೇ ಮೊದಲಾದವರನ್ನೂ ಅನ್ನ-ವಸ್ತ್ರಗಳನ್ನಿತ್ತು ತೃಪ್ತಿಗೊಳಿಸಬೇಕು. (ಶ್ಲೋಕ 38-55)

ದೀನರು, ಬಡವರು, ಕುಂಟರು, ಕುರುಡರು, ಕೈಲಾಗದವರು—ಇವ ರೆಲ್ಲರೂ ಊಟಮಾಡಿದನಂತರ ಮಹಾವಿಷ್ಣುವು ಸುಪ್ರೀತನಾದನೆಂದು ಭಾವಿಸಿ ಬಂಧು-ಬಳಗದವರೊಡನೆಯೂ ಜ್ಞಾತಿಗಳೊಡನೆಯೂ ಕುಳಿತು ಶಿಷ್ಟಾನ್ನವನ್ನು ಊಟಮಾಡಬೇಕು. ಪ್ರಥಮೆಯನ್ನು ಮೊದಲ್ಗೊಂಡು ತ್ರಯೋದಶೀವರೆಗೂ ವಿರಾಮಕಾಲದಲ್ಲಿ ಪ್ರತಿನಿತ್ಯವೂ ನಾಟ್ಯ-ವಾದ್ಯ-ಸಂಗೀತಗಳಿಂದಲೂ, ಸ್ತೋತ್ರಗಳಿಂದಲೂ, ಸ್ವಸ್ತಿವಾಚನಗಳಿಂದಲೂ ಶ್ರೀಹರಿಯ

ಅದ್ಭುತವಾದ ಮತ್ತು ರಮ್ಯವಾದ ಕಥೆಗಳಿಂದಲೂ ಶ್ರೀಭಗವಂತನಿಗೆ ಸೇವೆಯನ್ನು ಸಲ್ಲಿಸಬೇಕು.

ಪ್ರೇಯಸಿಯೇ! ಪಿತಾಮಹನಿಂದ ಹೇಳಲ್ಪಟ್ಟಿದ್ದ ಅತ್ಯಂತಶ್ರೇಷ್ಠವಾದ ಪಯೋವ್ರತವೆಂಬ ಭಗವದಾರಾಧನೆಯನ್ನು ನಾನು ನಿನಗೆ ಯಥಾವತ್ತಾಗಿ ಹೇಳಿರುತ್ತೇನೆ. ಭಾಗ್ಯವತಿಯೇ! ನೀನೂ ಕೂಡ ಈ ಪಯೋವ್ರತದ ಅನುಷ್ಠಾನವನ್ನು ಕೈಗೊಂಡು ದೇವದೇವನಾದ ಶ್ರೀಕೇಶವನನ್ನು ಚೆನ್ನಾಗಿ ಆರಾಧಿಸು. ಶಾಂತಚಿತ್ತಳಾಗಿ ಭಕ್ತಿಭಾವದಿಂದ ಕೂಡಿದ ಮನಸ್ಸಿನಿಂದ ನಾಶರಹಿತನಾದ ಶ್ರೀಹರಿಯನ್ನು ಪೂಜಿಸು.

ಅಯಂ ವೈ ಸರ್ವಯಜ್ಞಾಖ್ಯಃ ಸರ್ವವ್ರತಮಿತಿ ಸ್ಮೃತಮ್ ।
ತಪಃಸಾರಮಿದಂ ಭದ್ರೇ ದಾನಂ ಚೇಶ್ವರತರ್ಪಣಮ್ ॥೬೦॥

ತ ಏವ ನಿಯಮಾಃ ಸಾಕ್ಷಾತ್ತ ಏವ ಚ ಯಮೋತ್ತಮಾಃ ।
ತಪೋ ದಾನಂ ವ್ರತಂ ಯಜ್ಞೋ ಯೇನ ತುಷ್ಯತ್ಯಧೋಕ್ಷಜಃ ॥೬೧॥

ಕಲ್ಯಾಣಿ! ಈ ವ್ರತಾಚರಣೆಯಿಂದ ಭಗವಂತನು ಸಂತುಷ್ಟನಾಗುತ್ತಾನೆ. ಆದುದರಿಂದಲೇ ಇದಕ್ಕೆ ಸರ್ವಯಜ್ಞವೆಂಬ ಮತ್ತು ಸರ್ವವ್ರತವೆಂಬ ಹೆಸರು ಬಂದಿದೆ. ಈ ಪಯೋವ್ರತವು ಸಮಸ್ತತಪಸ್ಸುಗಳ ಸಾರವೂ ಮುಖ್ಯವಾದ ದಾನವೂ ಆಗಿದೆ. ಯಾವುದರಿಂದ ಶ್ರೀಭಗವಂತನು ಪ್ರಸನ್ನನಾಗುವನೋ ಅದೇ ಒಳ್ಳೆಯ ನಿಯಮವಾಗಿದೆ. ಅದೇ ಉತ್ತಮವಾದ ಯಮವೂ ಆಗಿದೆ. (ಯಮ-ನಿಯಮಗಳ ಸಾರಭೂತವೇ ಈ ಪಯೋವ್ರತವಾಗಿದೆ.) ಶ್ರೀಭಗವಂತನು ಯಾವುದರಿಂದ ಪ್ರಸನ್ನನಾಗುವನೋ ಅದೇ ವಾಸ್ತವವಾಗಿ ತಪಸ್ಸು-ದಾನ-ವ್ರತ-ಯಜ್ಞಗಳೂ ಆಗಿವೆ.

ಆದುದರಿಂದ, ಅದಿತಿದೇವಿಯೇ! ಸಂಯಮದಿಂದಲೂ ಮತ್ತು ಶ್ರದ್ಧೆಯಿಂದಲೂ ನೀನು ಈ ವ್ರತದ ಅನುಷ್ಠಾನವನ್ನು ಮಾಡು. ಭಗವಂತನು ಶೀಘ್ರವಾಗಿಯೇ ನಿನಗೆ ಪ್ರಸನ್ನನಾಗುತ್ತಾನೆ ಮತ್ತು ನಿನ್ನ ಮನಸ್ಸಿನ ಅಭಿಲಾಷೆಯನ್ನೂ ಪೂರ್ಣಗೊಳಿಸಿಕೊಡುತ್ತಾನೆ.” (ಶ್ಲೋಕ 56-62)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೧೬ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೧೭ನೆಯ ಅಧ್ಯಾಯ

ಭಗವಂತನು ಪ್ರತ್ಯಕ್ಷನಾಗಿ ಅದಿತಿಗೆ ವರವನ್ನು ಕೊಟ್ಟುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಇತ್ಯುಕ್ತಾ ಸಾದಿತೀ ರಾಜನ್ಸ್ವಭರ್ತ್ರಾ ಕಶ್ಯಪೇನ ವೈ ।
ಅನ್ವತಿಷ್ಠದ್ವ್ರತಮಿದಂ ದ್ವಾದಶಾಹಮತನ್ದ್ರಿತಾ ॥೧॥

"ಪರೀಕ್ಷಿತನೇ! ತನ್ನ ಪತಿಯಾದ ಮಹರ್ಷಿ ಕಶ್ಯಪರ ಉಪದೇಶವನ್ನು ಪಡೆದ ಅದಿತಿದೇವಿಯು ಸ್ವಲ್ಪವೂ ಆಲಸಿಕೆಯಿಲ್ಲದೆ, ಶ್ರದ್ಧಾ-ಭಕ್ತಿಗಳಿಂದ ಕೂಡಿದವಳಾಗಿ ಹನ್ನೆರಡು ದಿವಸಗಳ ಪರ್ಯಂತವಾಗಿ ಪಯೋವ್ರತವನ್ನು ಆಚರಿಸಿದಳು.

ಆಕೆಯು ಬುದ್ಧಿಯನ್ನೇ ಸಾರಥಿಯನ್ನಾಗಿ ಮಾಡಿಕೊಂಡು ಮನಸ್ಸೆಂಬ ಲಗಾಮಿನ (ಹಗ್ಗದ) ಮೂಲಕವಾಗಿ ಇಂದ್ರಿಯಗಳೆಂಬ ದುಷ್ಟಕುದುರೆಗಳನ್ನು ಹಿಡಿದು ನಿಲ್ಲಿಸಿ, ಏಕಾಗ್ರವಾದ ಬುದ್ಧಿಯಿಂದ ಪುರುಷೋತ್ತಮನಾದ ಭಗವಂತನನ್ನು ಧ್ಯಾನಿಸುತ್ತಿದ್ದಳು. ಅದಿತಿದೇವಿಯು ಏಕಾಗ್ರವಾದ ಬುದ್ಧಿಯಿಂದ ತನ್ನ ಮನಸ್ಸನ್ನು ಸರ್ವಾತ್ಮನಾದ ವಾಸುದೇವನಲ್ಲಿ ಸಂಪೂರ್ಣವಾಗಿ ಲೀನಗೊಳಿಸಿ ಪಯೋವ್ರತದ ಅನುಷ್ಠಾನವನ್ನು ಮಾಡಿದಳು. ಸುನಿಶ್ಚಲವಾದ ಬುದ್ಧಿಯಿಂದಲೂ ಶ್ರದ್ಧೆಯಿಂದಲೂ ಅದಿತಿಯು ಮಾಡಿದ ವ್ರತದಿಂದ ಸಂತುಷ್ಟನಾದ ಪುರುಷೋತ್ತಮನು ದೇವಮಾತೆಯ ಮುಂದೆ ಪ್ರತ್ಯಕ್ಷನಾದನು. ಆ ಸಮಯದಲ್ಲಿ ಶ್ರೀಭಗವಂತನು ಪೀತಾಂಬರವನ್ನುಟ್ಟಿದ್ದನು. ಚತುರ್ಭುಜನಾಗಿದ್ದನು. ಶಂಖ-ಚಕ್ರ-ಗದೆಗಳನ್ನು ಧರಿಸಿದ್ದನು. ತನ್ನ ಕಣ್ಮುಂದೆ ನಿಂತ ಭಗವಂತನನ್ನು ಸಾಕ್ಷಾತ್ತಾಗಿ ನೋಡಿದ ಅದಿತಿಯು ಒಡನೆಯೇ ಆದರದಿಂದ ಮೇಲೆದ್ದು ಪ್ರೀತಿಯಿಂದ ಪರವಶಳಾಗಿ ಭೂಮಿಯ ಮೇಲೆ ದೀರ್ಘದಂಡನಮಸ್ಕಾರಮಾಡಿದಳು. ಪುನಃ ಮೇಲೆದ್ದು ಎರಡು ಕೈಗಳನ್ನೂ ಜೋಡಿಸಿಕೊಂಡು ಭಗವಂತನನ್ನು ಸ್ತುತಿಸಲು ಪ್ರಾರಂಭಿಸಿದಳು. ಆನಂದಬಾಷ್ಪಗಳು ಉಕ್ಕಿಹರಿಯುತ್ತಿದ್ದುದರಿಂದ ಅವಳ ಬಾಯಿಂದ ಮುಂದೆ ಮಾತುಗಳೇ ಹೊರಡಲಿಲ್ಲ. ಶರೀರಾದ್ಯಂತವಾಗಿ ರೋಮಾಂಚನವಾಯಿತು. ಭಗವಂತನ ದಿವ್ಯದರ್ಶನದ ಆನಂದೋಲ್ಲಾಸದಿಂದ ಅವಳ

ಶರೀರವು ನಡುಗತೊಡಗಿತು. ಅವಳು ಸ್ತೋತ್ರವನ್ನು ಮಾಡಲಾಗದೆ ಸುಮ್ಮನೇ ನಿಂತುಬಿಟ್ಟಳು.

ಪರೀಕ್ಷಿತನೇ! ಲಕ್ಷ್ಮೀಪತಿಯೂ, ಜಗತ್ಪತಿಯೂ, ಯಜ್ಞಪತಿಯೂ ಆದ ಭಗವಂತನನ್ನು ಕಣ್ಣುಗಳಿಂದಲೇ ಕುಡಿದುಬಿಡುವಳೋ ಎಂಬಂತೆ ಅದಿತಿಯು ತನ್ನ ಪ್ರೇಮಪೂರ್ಣವಾದ ಕಣ್ಣುಗಳಿಂದ ನೋಡುತ್ತಿದ್ದಳು. ಅನಂತರ ಪ್ರೀತಿಯಿಂದ ಗದ್ಗದವಾದ ಮಾತುಗಳಿಂದಲೇ ಮೆಲ್ಲ-ಮೆಲ್ಲಗೆ ಶ್ರೀಭಗವಂತನನ್ನು ಸ್ತೋತ್ರಮಾಡಲು ಉಪಕ್ರಮಿಸಿದಳು. (ಶ್ಲೋಕ 2-7)

ಯಜ್ಞೇಶ ಯಜ್ಞಪುರುಷಾಚ್ಯುತ ತೀರ್ಥಪಾದ
ತೀರ್ಥಶ್ರವಃ ಶ್ರವಣಮಙ್ಗಲನಾಮಧೇಯ ।
ಆಪನ್ನಲೋಕವೃಜಿನೋಪಶಮೋದಯಾದ್ಯ
ಶಂ ನಃ ಕೃಧೀಶ ಭಗವನ್ನಸಿ ದೀನನಾಥಃ ॥೮॥

“ಯಜ್ಞೇಶನೇ! ಯಜ್ಞಪುರುಷನೇ! ಅಚ್ಯುತನೇ! ಶ್ರೇಷ್ಠತೀರ್ಥ ವಾದ ಗಂಗಾನದಿಯನ್ನು ಪಾದಗಳಲ್ಲಿ ಧರಿಸಿರುವವನೇ! ಪುಣ್ಯಕೀರ್ತಿಯೇ! ಶ್ರವಣಮಾತ್ರದಿಂದಲೇ ಮಂಗಳವನ್ನುಂಟುಮಾಡುವ ನಾಮಾವಳಿಗಳುಳ್ಳ ವನೇ! ಶರಣಾಗತರ ಪಾಪಗಳನ್ನು ಹೋಗಲಾಡಿಸುವುದಕ್ಕಾಗಿಯೇ ಅವತರಿಸಿರುವವನೇ! ಆದಿಪುರುಷನೇ! ಸ್ವಾಮಿಯೇ! ಭಗವಂತ! ನೀನು ದೀನರಿಗೆ ನಾಥನಾಗಿರುವೆ. ಆದುದರಿಂದ ದೀನರಾಗಿ ಬೇಡಿಕೊಳ್ಳುತ್ತಿರುವ ನಮಗೆ ಮಂಗಳವನ್ನುಂಟುಮಾಡು.

ವಿಶ್ವಾಯ ವಿಶ್ವಭವನಸ್ಥಿತಿಸಂಯಮಾಯ
ಸ್ವೈರಂ ಗೃಹೀತಪುರುಶಕ್ತಿಗುಣಾಯ ಭೂಮ್ನೇ ।
ಸ್ವಸ್ಥಾಯ ಶಶ್ವದುಪಬೃಂಹಿತಪೂರ್ಣಬೋಧ-
ವ್ಯಾಪಾದಿತಾತ್ಮತಮಸೇ ಹರಯೇ ನಮಸ್ತೇ ॥೯॥

ಜಗದ್ರೂಪನಾದ, ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗಾಗಿ ಸ್ವೇಚ್ಛೆಯಿಂದ ಮಾಯೆಯ ಗುಣಗಳಾದ ಸತ್ತ್ವ-ರಜಸ್ತಮಸ್ಸುಗಳನ್ನು ಧರಿಸಿರುವ, ಗುಣವಂತನಾಗಿದ್ದರೂ ನಿತ್ಯನಿರ್ಲಿಪ್ತನಾಗಿ ಸ್ವಸ್ಥನಾಗಿ ನಿಜಸ್ವರೂಪ ದಲ್ಲಿಯೂ ಇರುವ, ವ್ಯಾಪಕನಾದ, ಅಡಿಗಡಿಗೂ ಬೆಳಗುತ್ತಿರುವ ಪೂರ್ಣ

ಜ್ಞಾನದಿಂದ ಹೃದಯಾಂಧಕಾರವನ್ನು ಹೋಗಲಾಡಿಸುವ ಶ್ರೀಹರಿಗೆ ನಮಸ್ಕರಿಸುತ್ತೇನೆ.

ಆಯುಃ ಪರಂ ವಪುರಭೀಷ್ಟಮತುಲ್ಯಲಕ್ಷ್ಮೀ-
ರ್ದ್ಯೌಭೂರಸಾಃ ಸಕಲಯೋಗಗುಣಾಸ್ತ್ರಿವರ್ಗಃ ।
ಜ್ಞಾನಂ ಚ ಕೇವಲಮನನ್ತ ಭವನ್ತಿ ತುಷ್ಟಾ-
ತ್ತ್ವತ್ತೋ ನೃಣಾಂ ಕಿಮು ಸಪತ್ನಜಯಾದಿರಾಶೀಃ ॥

ಅಂತವಿಲ್ಲದ ಅನಂತನೇ! ನೀನು ಸಂತುಷ್ಟನಾದಲ್ಲಿ ದೀರ್ಘಾಯುಷ್ಯವೂ, ಇಷ್ಟವಾದ ಶರೀರವೂ, ಅಸದೃಶವಾದ ಐಶ್ವರ್ಯವೂ, ಸ್ವರ್ಗ-ಮರ್ತ್ಯ-ಪಾತಾಲಲೋಕಗಳೂ, ಯೋಗಗಳ ಗುಣಗಳಾದ ಅಣಿಮಾದ್ಯಷ್ಟ ಸಿದ್ಧಿಗಳೂ, ಧರ್ಮಾರ್ಥಕಾಮಗಳೂ, ಇವೆಲ್ಲಕ್ಕಿಂತಲೂ ಮಿಗಿಲಾದ ಅಪರೋಕ್ಷಜ್ಞಾನವೂ ಮನುಷ್ಯರಿಗೆ ಪ್ರಾಪ್ತವಾಗುತ್ತವೆ. ಹೀಗಿರುವಾಗ ಶತ್ರುಜಯವೇ ಮೊದಲಾದ ಕೋರಿಕೆಯ ವಿಷಯವಾಗಿ ಹೇಳುವುದೇನಿದೆ?"

ಭಾರತನೇ! ಮಹಾರಾಜ! ದೇವಮಾತೆಯಾದ ಅದಿತಿಯು ಹೀಗೆ ಸ್ತೋತ್ರಮಾಡಲು ಕಮಲಾಕ್ಷನಾದ, ಸಕಲಪ್ರಾಣಿಗಳ ಹೃದಯದಲ್ಲಿಯೂ ಅಂತರ್ಯಾಮಿಯಾಗಿರುವ ಶ್ರೀಭಗವಂತನು ಹೇಳಿದನು :

"ದೇವಮಾತೆಯೇ! ಅದಿತಿದೇವಿ! ನಿನ್ನ ಮನಸ್ಸಿನಲ್ಲಿ ಬಹಳ ಕಾಲದಿಂದಿರುವ ಆಶಯವನ್ನು ನಾನು ಬಲ್ಲೆನು. ಶತ್ರುಗಳು ನಿನ್ನ ಮಕ್ಕಳ ಸಂಪತ್ತನ್ನು ಅಪಹರಿಸಿರುವುದಲ್ಲದೆ ಅವರನ್ನು ಅವರ ಸ್ಥಾನದಿಂದಲೂ (ಸ್ವರ್ಗಲೋಕದಿಂದಲೂ) ಓಡಿಸಿಬಿಟ್ಟಿದ್ದಾರೆ. ನಿನ್ನ ಮಕ್ಕಳು, ಬಲದಿಂದ ಕೊಬ್ಬಿರುವ ದಾನವರನ್ನು ಯುದ್ಧದಲ್ಲಿ ಗೆದ್ದು ರಾಜ್ಯಲಕ್ಷ್ಮಿಯನ್ನು ಪುನಃ ಪಡೆದುಕೊಳ್ಳಬೇಕು ಮತ್ತು ಅಂತಹ ವಿಜಯಿಗಳಾದ ಪುತ್ರರೊಡನೆ ನೀನು ಇರಬೇಕು–ಇದು ನಿನ್ನ ಬಯಕೆಯಾಗಿದೆ. ಇಂದ್ರನೇ ಮೊದಲಾದ ನಿನ್ನ ಮಕ್ಕಳು ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸಬೇಕು. ಆಗ ನೀನು–ಗಂಡಂದಿರನ್ನೂ, ಮಕ್ಕಳನ್ನೂ, ಸಹೋದರರನ್ನೂ ಕಳೆದುಕೊಂಡು ರೋದನಮಾಡುತ್ತಿರುವ ದೈತ್ಯಸ್ತ್ರೀಯರನ್ನು ನೋಡಬೇಕು. ಇದೂ ನಿನ್ನ ಬಯಕೆಯಾಗಿದೆ. ಯುದ್ಧದಲ್ಲಿ ದೈತ್ಯರನ್ನು ಗೆದ್ದು, ಕಳೆದುಹೋಗಿದ್ದ ಕೀರ್ತಿ

ಮತ್ತು ಐಶ್ವರ್ಯಗಳನ್ನು ಪುನಃ ಪಡೆದುಕೊಂಡು ಸಕಲೈಶ್ವರ್ಯಸಂಪನ್ನರಾಗಿ ಸ್ವರ್ಗಲೋಕದಲ್ಲಿ ಪುನಃ ನೆಲೆಸಿ ಸ್ವೇಚ್ಛೆಯಿಂದ ಆಟವಾಡುವ ನಿನ್ನ ಮಕ್ಕಳನ್ನು ನೋಡಬೇಕೆಂದು ನೀನು ಬಯಸಿರುವೆ.

ಆದರೆ, ದೇವಿ! ಆ ಅಸುರಸೇನಾಪತಿಗಳನ್ನು ಈ ಸಮಯದಲ್ಲಿ ಜಯಿಸಲು ಸಾಧ್ಯವಾಗದೆಂಬುದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ ಈ ಸಮಯದಲ್ಲಿ ವಿಧಿಯು ಅವರಿಗೆ ಅನುಕೂಲವಾಗಿದೆ. ಬ್ರಾಹ್ಮಣರಿಂದಲೂ ಅವರು ರಕ್ಷಿಸಲ್ಪಡುತ್ತಿದ್ದಾರೆ. ಆದುದರಿಂದ ಈ ಸಮಯದಲ್ಲಿ ಅವರ ಮೇಲೆ ಯುದ್ಧಮಾಡಲು ಹೋದರೆ ಅದರಿಂದ ಸುಖವಾಗುವುದೆಂದು ನಿರೀಕ್ಷಿಸಲು ಸಾಧ್ಯವಿಲ್ಲ. ಪರಾಕ್ರಮವು ಈಗ ಕೆಲಸಕ್ಕೆ ಬರುವುದಿಲ್ಲ. ಅದರಿಂದ ಸುಖವುಂಟಾಗುವುದಿಲ್ಲ.

ಆದರೂ ದೇವಿ! ನೀನು ಆಚರಿಸಿದ ಶ್ರದ್ಧಾಭಕ್ತಿಪೂರ್ವಕವಾದ ವ್ರತಾನುಷ್ಠಾನದಿಂದ ನಾನು ಪ್ರಸನ್ನನಾಗಿದ್ದೇನೆ. ಆದುದರಿಂದ ನಾನು ಈ ವಿಷಯದಲ್ಲಿ ನಿನ್ನ ಆಶಯವನ್ನು ನೆರವೇರಿಸಿಕೊಡಲು ಯಾವುದಾದರೂ ಉಪಾಯವನ್ನು ಯೋಚಿಸಬೇಕಾಗಿದೆ. ನನ್ನ ಸಲುವಾಗಿ ಮಾಡಿರುವ ಆರಾಧನೆಯು ಎಂದಿಗೂ ವ್ಯರ್ಥವಾಗಬಾರದು. ಶ್ರದ್ಧೆಗೆ ಅನುಗುಣವಾಗಿ ಫಲವು ಲಭಿಸಿಯೇ ಲಭಿಸುತ್ತದೆ. ನೀನು ನಿನ್ನ ಮಕ್ಕಳ ರಕ್ಷಣಾರ್ಥವಾಗಿಯೇ ವಿಧಿಪೂರ್ವಕವಾಗಿ ಮಾಡಿರುವ ಪಯೋವ್ರತದ ಮೂಲಕವಾಗಿ ನನ್ನನ್ನು ಆರಾಧಿಸಿರುವೆ ಮತ್ತು ಸ್ತುತಿಸಿರುವೆ. ಆದುದರಿಂದ ನಾನು ಅಂಶರೂಪನಾಗಿ ಕಶ್ಯಪನ ತಪಸ್ಸಿನಲ್ಲಿ ನೆಲೆಸಿ ನಿನ್ನ ಪುತ್ರನಾಗಿ ಹುಟ್ಟಿ ನಿನ್ನ ಸಂತಾನವನ್ನು ಸಂರಕ್ಷಿಸುತ್ತೇನೆ.

ಕಲ್ಯಾಣಿಯೇ! ಪ್ರಕಾಶಮಾನವಾದ ರೂಪವನ್ನು ಹೊಂದಿರುವ ನನ್ನನ್ನು ಪತಿಯಲ್ಲಿ ಸಮೀಕರಿಸಿ ಪಾಪರಹಿತನಾದ ಪ್ರಜಾಪತಿಯಾದ ಕಶ್ಯಪನ ಸೇವೆಯನ್ನು ಮಾಡು. (ಶ್ಲೋಕ 11-19)

ದೇವಿ! ಯಾರಾದರೂ ಕೇಳಿದರೆ ಈ ವಿಷಯವನ್ನು ಯಾವುದೇ ಕಾರಣದಿಂದಲೂ ಯಾರಿಗೂ ಯಾವಾಗಲೂ ಹೇಳಬಾರದು.

ಸರ್ವಂ ಸಮ್ಪದ್ಯತೇ ದೇವಿ ದೇವಗುಹ್ಯಂ ಸುಸಂವೃತಮ್ ॥೨೦॥

ಬಹಳ ಗೋಪ್ಯವಾಗಿಡಲ್ಪಟ್ಟ ದೇವರಹಸ್ಯವು ಸಮಸ್ತವನ್ನೂ ಸಿದ್ಧಿಸಿಕೊಡುತ್ತದೆ."

ಶ್ರೀಭಗವಂತನು ಹೀಗೆ ಹೇಳಿ ಅಲ್ಲಿಯೇ ಮಾಯವಾದನು.

ಅದಿತಿಯು ತನ್ನಲ್ಲಿ ಸುದುರ್ಲಭನಾದ ಶ್ರೀಹರಿಯು ಜನ್ಮತಾಳುವನೆಂದು ತಿಳಿದು ಕೃತಕೃತ್ಯಳಾದೆನೆಂದು ಭಾವಿಸಿ ಶ್ರೀಭಗವಂತನು ಸೂಚಿಸಿದ್ದಂತೆ ಅತ್ಯಂತಭಕ್ತಿಯಿಂದ ಪತಿಯಾದ ಕಶ್ಯಪನನ್ನು ಉಪಚರಿಸತೊಡಗಿದಳು. ಸತ್ಯಜ್ಞಾನವುಳ್ಳ ಕಶ್ಯಪಮುನಿಯು ಸಮಾಧಿಯೋಗದಿಂದ ತನ್ನಲ್ಲಿ ವಿಷ್ಣುವಿನ ಅಂಶವು ಪ್ರವೇಶಿಸಿರುವುದೆಂಬುದನ್ನು ತಿಳಿದುಕೊಂಡನು. ಶಾಂತಚಿತ್ತನಾದ ಕಶ್ಯಪನು–ವಾಯುವು ಪ್ರಚಂಡವಾಗಿ ಬೀಸುತ್ತಾ ಬಿದಿರು ಮೆಳೆಯಲ್ಲಿರುವ ಎರಡು ಬಿದಿರುಗಳಿಗೆ ಸಂಘರ್ಷವನ್ನುಂಟುಮಾಡಿ ಅಗ್ನಿಯನ್ನು ಹುಟ್ಟಿಸುವಂತೆ–ತಪಸ್ಸುಮಾಡುತ್ತಾ ಬಹಳ ಕಾಲದಿಂದ ಧರಿಸಲ್ಪಟ್ಟಿದ್ದ ರೇತಸ್ಸನ್ನು ಅದಿತಿದೇವಿಯ ಗರ್ಭದಲ್ಲಿರಿಸಿದನು. ಚತುರ್ಮುಖನು, ಅದಿತಿಯ ಗರ್ಭದಲ್ಲಿ ಆದಿಪುರುಷನಾದ ಪರಮಾತ್ಮನು ನೆಲೆಸಿರುವನೆಂಬುದನ್ನು ತಿಳಿದು ಬ್ರಹ್ಮಪ್ರತಿಪಾದಕವಾದ ಸ್ತೋತ್ರಗಳಿಂದ ಗರ್ಭಸ್ಥನಾಗಿದ್ದ ಶ್ರೀಹರಿಯನ್ನು ಹೊಗಳಿದನು:

ಜಯೋರುಗಾಯ ಭಗವನ್ನುರುಕ್ರಮ ನಮೋಽಸ್ತು ತೇ ।
ನಮೋ ಬ್ರಹ್ಮಣ್ಯದೇವಾಯ ತ್ರಿಗುಣಾಯ ನಮೋ ನಮಃ ॥೨೫॥

"ಸಮಗ್ರಕೀರ್ತಿಗೂ ಆಶ್ರಯನಾಗಿರುವ ಭಗವಂತನೇ! ನಿನಗೆ ಜಯವಾಗಲಿ. ಅನಂತವಾದ ಶಕ್ತಿಗಳಿಗೂ ಅಧಿಷ್ಠಾನನಾಗಿರುವವನೇ! ನಿನ್ನ ಚರಣಕಮಲಗಳಿಗೆ ನಮಸ್ಕರಿಸುತ್ತೇನೆ. ಬ್ರಾಹ್ಮಣರಿಗೆ ಹಿತವಾಗಿರುವವನೇ! ಸತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳಿಗೂ ನಿಯಾಮಕನೇ! ನಿನ್ನ ಚರಣಕಮಲಗಳಿಗೆ ಬಾರಿ-ಬಾರಿಗೂ ನಮಸ್ಕರಿಸುತ್ತೇನೆ.

ನಮಸ್ತೇ ಪೃಶ್ನಿಗರ್ಭಾಯ ವೇದಗರ್ಭಾಯ ವೇಧಸೇ ।
ತ್ರಿನಾಭಾಯ ತ್ರಿಪೃಷ್ಠಾಯ ಶಿಪಿವಿಷ್ಟಾಯ ವಿಷ್ಣವೇ ॥೨೬॥

ಪೃಶ್ನಿ ಎಂಬುವಳಿಗೆ ಪುತ್ರರೂಪದಲ್ಲಿ ಹುಟ್ಟಿರುವವನೇ! ವೇದಗಳ

ಸಮಸ್ತಜ್ಞಾನವನ್ನೂ ಅಡಗಿಸಿಕೊಂಡಿರುವ ಮಹಾಪ್ರಭುವೇ! ಪರಬ್ರಹ್ಮ ಸ್ವರೂಪನೇ! ನಿನಗೆ ಬಾರಿ-ಬಾರಿಗೂ ನಮಸ್ಕರಿಸುತ್ತೇನೆ. ಮೂರು ಲೋಕ ಗಳನ್ನೂ ನಾಭಿಯಲ್ಲಿಯೇ ಧರಿಸಿರುವವನೇ! ಮೂರು ಲೋಕಗಳಿಗೂ ಆಚೆ ಇರುವ ವೈಕುಂಠದಲ್ಲಿ ವಾಸಿಸುತ್ತಿರುವವನೇ! ಪ್ರಾಣಿಗಳ ಅಂತಃಕರಣದಲ್ಲಿ ಸದಾ ವಾಸಿಸುತ್ತಿರುವವನೇ! ಸರ್ವವ್ಯಾಪಕನಾದ ವಿಷ್ಣುವೇ! ನಿನಗೆ ನಮಸ್ಕರಿಸುತ್ತೇನೆ.

ತ್ವಮಾದಿರನ್ತೋ ಭುವನಸ್ಯ ಮಧ್ಯ-
ಮನನ್ತಶಕ್ತಿಂ ಪುರುಷಂ ಯಮಾಹುಃ ।
ಕಾಲೋ ಭವಾನಾಕ್ಷಿಪತೀಶ ವಿಶ್ವಂ
ಸ್ರೋತೋ ಯಥಾನ್ತಃಪತಿತಂ ಗಭೀರಮ್ ॥೨೮॥

ಸ್ವಾಮಿಯೇ! ಯಾವನನ್ನು ಅಪಾರಮಹಿಮೆಯುಳ್ಳ ಪುರುಷನೆಂದು ಹೇಳುವರೋ ಅಂತಹ ನೀನು ಈ ಲೋಕಕ್ಕೆ ಆದಿಯೂ, ಮಧ್ಯನೂ ಮತ್ತು ಅಂತ್ಯನೂ ಆಗಿರುವೆ. ಹಾಗೆಯೇ ಕಾಲಸ್ವರೂಪನೂ ಆಗಿರುವ ನೀನು– ನೀರಿನ ಸುಳಿಯು ಅದರಲ್ಲಿ ಬಿದ್ದ ಪದಾರ್ಥವನ್ನು ಒಳಕ್ಕೆ ಸೆಳೆದುಕೊಳ್ಳು ವಂತೆ–ಈ ಜಗತ್ತನ್ನು ಪ್ರಳಯಕಾಲದಲ್ಲಿ ಒಳಕ್ಕೆ ಸೆಳೆದುಕೊಳ್ಳುವೆ.

ತ್ವಂ ವೈ ಪ್ರಜಾನಾಂ ಸ್ಥಿರಜಙ್ಗಮಾನಾಂ
ಪ್ರಜಾಪತೀನಾಮಸಿ ಸಮ್ಭವಿಷ್ಣುಃ ।
ದಿವೌಕಸಾಂ ದೇವ ದಿವಶ್ಚ್ಯುತಾನಾಂ
ಪರಾಯಣಂ ನೌರಿವ ಮಜ್ಜತೋಽಪ್ಸು ॥೨೯॥

ಸ್ವಾಮಿಯೇ! ನೀನು ಚರಾಚರಪ್ರಾಣಿಗಳ ಮತ್ತು ಪ್ರಜಾಪತಿಗಳ ಉತ್ಪತ್ತಿಗೆ ಮೂಲಕಾರಣನಾಗಿರುವೆ. ದೇವಾಧಿದೇವನೇ! ಸಮುದ್ರದಲ್ಲಿ ಬಿದ್ದವರಿಗೆ ನೌಕೆಯು ಆಶ್ರಯವಾಗುವಂತೆ–ಸ್ವರ್ಗಸಾಮ್ರಾಜ್ಯದಿಂದ ಭ್ರಷ್ಟರಾಗಿರುವ ದೇವತೆಗಳಿಗೆ ನೀನು ಆಶ್ರಯನಾಗು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೧೭ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೧೮ನೆಯ ಅಧ್ಯಾಯ

ಅದಿತಿಯ ಗರ್ಭದಲ್ಲಿ ವಾಮನನಾಗಿ ಹುಟ್ಟಿದ ಶ್ರೀಭಗವಂತನು ಬಲಿಚಕ್ರವರ್ತಿಯ ಯಜ್ಞಶಾಲೆಗೆ ಪ್ರವೇಶಿಸಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಇತ್ಥಂ ವಿರಿಞ್ಚಸ್ತುತಕರ್ಮವೀರ್ಯಃ
ಪ್ರಾದುರ್ಬಭೂವಾಮೃತಭೂರದಿತ್ಯಾಮ್ ।
ಚತುರ್ಭುಜಃ ಶಙ್ಖಗದಾಬ್ಜಚಕ್ರಃ
ಪಿಶಙ್ಗವಾಸಾ ನಲಿನಾಯತೇಕ್ಷಣಃ ॥೧॥

"ಪರೀಕ್ಷಿತ! ಹೀಗೆ ಬ್ರಹ್ಮನು ಭಗವಂತನ ಅಪಾರವಾದ ಶಕ್ತಿಯನ್ನೂ ಮತ್ತು ಲೀಲೆಗಳನ್ನೂ ಕುರಿತು ಸ್ತೋತ್ರಮಾಡಿದನಂತರ ಆದ್ಯಂತರಹಿತನಾದ ಶ್ರೀಹರಿಯು ನಾಲ್ಕು ತೋಳುಗಳುಳ್ಳವನಾಗಿ ನಾಲ್ಕು ತೋಳುಗಳಲ್ಲಿಯೂ ಶಂಖ-ಚಕ್ರ-ಗದಾ-ಪದ್ಮಗಳನ್ನು ಕ್ರಮವಾಗಿ ಧರಿಸಿ ಪೀತಾಂಬರಧರನಾಗಿ, ಕಮಲಾಕ್ಷನಾಗಿ ಅದಿತಿದೇವಿಯಲ್ಲಿ ಹುಟ್ಟಿದನು.

ಶ್ರೀಭಗವಂತನು ಶ್ಯಾಮಲವರ್ಣದ ಶರೀರವುಳ್ಳವನಾಗಿದ್ದನು. ಮಕರಾಕೃತಿಯ ಕುಂಡಲಗಳ ಕಾಂತಿಯಿಂದ ಆತನ ಕಮಲಾಕೃತಿಯ ಮುಖಮಂಡಲವು ಶೋಭಿಸುತ್ತಿದ್ದಿತು. ವಕ್ಷಃಸ್ಥಳವು ಶ್ರೀವತ್ಸಚಿಹ್ನೆಯಿಂದ ಸಮಲಂಕೃತವಾಗಿದ್ದಿತು. ಕೈಗಳಲ್ಲಿ ಬಳೆಗಳೂ, ತೋಳುಗಳಲ್ಲಿ ಬಾಜುಬಂದಿಗಳೂ, ತಲೆಯಲ್ಲಿ ಕಿರೀಟವೂ, ನಡುವಿನಲ್ಲಿ ಒಡ್ಯಾಣವೂ, ಕಂಠದಲ್ಲಿ ರತ್ನಹಾರಗಳೂ, ಪಾದಗಳಲ್ಲಿ ಕಾಲ್ಕಡಗಗಳೂ ಜಗ-ಜಗಿಸುತ್ತಿದ್ದುವು. ಭಗವಂತನು ಕತ್ತಿನಲ್ಲಿ ಸ್ವಚ್ಛವಾದ ವನಮಾಲೆಯನ್ನು ಧರಿಸಿದ್ದನು. ವನಮಾಲೆಯ ಸುತ್ತಲೂ ಮಧುವಿನಿಂದ ಆಕರ್ಷಿತವಾದ ದುಂಬಿಗಳು ಗುಂಪು-ಗುಂಪಾಗಿ ಸೇರಿಕೊಂಡು ಝೇಂಕಾರಮಾಡುತ್ತಿದ್ದುವು. ಶ್ರೀಹರಿಯ ಕುತ್ತಿಗೆಯಲ್ಲಿ ಕೌಸ್ತುಭಮಣಿಯು ಬೆಳಗುತ್ತಿದ್ದಿತು. ಹೀಗೆ ಸರ್ವಾಭರಣಗಳಿಂದಲೂ ಸಮಲಂಕೃತನಾಗಿದ್ದ ಶ್ರೀಹರಿಯು ತನ್ನ ಶರೀರದ ಕಾಂತಿಯಿಂದ ಕಶ್ಯಪರ ಆಶ್ರಮದ ಕತ್ತಲೆಯನ್ನು ಹೋಗಲಾಡಿಸಿಬಿಟ್ಟನು. ಭಗವಂತನು ಅವತರಿಸಿದ

ಆ ವೇಳೆಯಲ್ಲಿ ಎಲ್ಲ ದಿಕ್ಕುಗಳೂ ನಿರ್ಮಲವಾದುವು. ನದೀ-ಸರೋವರಗಳಲ್ಲಿದ್ದ ಜಲವು ಸ್ವಚ್ಛವಾಯಿತು. ಪ್ರಜೆಗಳ ಮನಸ್ಸು ಆನಂದದಿಂದ ಪುಳಕಿತವಾಯಿತು. ಎಲ್ಲ ಋತುಗಳೂ ಒಂದೇ ಬಾರಿಗೆ ಆಯಾ ಋತುಧರ್ಮ ಗಳಿಂದ ಕೂಡಿ ಬೆಳಗಿದುವು. ಸ್ವರ್ಗ, ಆಕಾಶ, ಭೂಮಿ, ಅಗ್ನಿಜ್ವಾಲೆಗಳು, ಗೋವುಗಳು, ಬ್ರಾಹ್ಮಣರು, ಪರ್ವತಗಳು–ಎಲ್ಲವೂ ಪರಮಾತ್ಮನ ಅವತಾರದಿಂದಾಗಿ ಹರ್ಷಗೊಂಡವು.

ಶ್ರೋಣಾಯಾಂ ಶ್ರವಣದ್ವಾದಶ್ಯಾಂ ಮುಹೂರ್ತೇಽಭಿಜಿತಿ ಪ್ರಭುಃ ।
ಸರ್ವೇ ನಕ್ಷತ್ರತಾರಾದ್ಯಾಶ್ಚಕ್ರುಸ್ತಜ್ಜನ್ಮ ದಕ್ಷಿಣಮ್ ॥೫॥

ಭಗವಂತನು ಅವತರಿಸಿದಾಗ ಚಂದ್ರನು ಶ್ರವಣನಕ್ಷತ್ರದಲ್ಲಿದ್ದನು. ಭಾದ್ರಪದ ಶುಕ್ಲ ದ್ವಾದಶೀ ಶ್ರವಣನಕ್ಷತ್ರದಲ್ಲಿ ಅಭಿಜಿನ್ಮುಹೂರ್ತದಲ್ಲಿ ಭಗವಂತನು ಪ್ರಾದುರ್ಭವಿಸಿದನು. ಆ ಸಮಯದಲ್ಲಿ ಸೂರ್ಯನೇ ಮೊದಲಾದ ಗ್ರಹಗಳೂ ಅಶ್ವಿನಿಯೇ ಮೊದಲಾದ ನಕ್ಷತ್ರಗಳೂ ಒಳ್ಳೊಳ್ಳೆಯ ಸ್ಥಾನಗಳಲ್ಲಿದ್ದು ಭಗವಂತನ ಜನ್ಮಮುಹೂರ್ತಕ್ಕೆ ಗುಣಗಳನ್ನು ಹೆಚ್ಚಿಸಿ ಅದನ್ನು ಸರ್ವೋತ್ತಮಮುಹೂರ್ತವನ್ನಾಗಿ ಮಾಡಿದುವು. ಯಾವ ತಿಥಿಯಲ್ಲಿ ಭಗವಂತನು ಜನ್ಮತಾಳಿದನೋ ಆ ತಿಥಿಯು ವಿಜಯದ್ವಾದಶೀ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ವಾಮನನು ಹುಟ್ಟುವ ಸಮಯದಲ್ಲಿ ಸೂರ್ಯನು ಆಕಾಶದ ಮಧ್ಯಭಾಗದಲ್ಲಿದ್ದನು. ಭಗವಂತನ ಅವತಾರದ ಸಮಯದಲ್ಲಿ ಶಂಖ, ದುಂದುಭಿ, ಮೃದಂಗ, ಪಣವ, ಆನಕ–ಇವೇ ಮೊದಲಾದ ಮಂಗಳವಾದ್ಯಗಳು ಮೊಳಗಿದುವು. ತುತ್ತೂರಿ, ಢಕ್ಕೆ, ಮದ್ದಳೆ–ಇವೇ ಮೊದಲಾದ ವಿಚಿತ್ರವಾದ್ಯಗಳ ಘೋಷಧ್ವನಿಯೂ ಕೇಳಿಬರುತ್ತಿದ್ದಿತು. ಅಪ್ಸರೆಯರು ಸಂತೋಷಭರಿತರಾಗಿ ನರ್ತಿಸಲು ಪ್ರಾರಂಭಿಸಿದರು. ಗಂಧರ್ವರು ಗಾನಮಾಡತೊಡಗಿದರು. ಮುನಿಗಳು, ದೇವತೆಗಳು, ಮನುಗಳು, ಪಿತೃದೇವತೆಗಳು, ಅಗ್ನಿಗಳು–ಇವರೆಲ್ಲರೂ ಭಗವಂತನನ್ನು ಸ್ತೋತ್ರಮಾಡತೊಡಗಿದರು. ಸಿದ್ಧ-ವಿದ್ಯಾಧರರು, ಕಿನ್ನರ-ಕಿಂಪುರುಷರು, ಯಕ್ಷ-ಚಾರಣ-ರಾಕ್ಷಸರು, ಪಕ್ಷಿಗಳು, ಮುಖ್ಯ ಮುಖ್ಯರಾದ ನಾಗದೇವತೆಗಳು, ದೇವತೆಗಳ ಅನುಚರರು–ಇವರೇ ಮೊದಲಾದವರೂ ಗಾಯನದ ಹಿನ್ನೆಲೆಯಲ್ಲಿ ನೃತ್ಯವನ್ನಾಡುತ್ತಾ ಭಗವಂತನ ಅಪಾರ

ಗುಣಗಳನ್ನೂ ಸತ್ಕಥೆಗಳನ್ನೂ ಸಂಕೀರ್ತನಮಾಡುತ್ತಾ, ಅದಿತಿಯ ಆಶ್ರಮ ಪ್ರದೇಶವನ್ನು ಪುಷ್ಪವೃಷ್ಟಿಯಿಂದ ಅಲಂಕರಿಸಿದರು.

ಅದಿತಿಯು ತನ್ನ ಗರ್ಭದಿಂದ ಜನಿಸಿದ ಪರಮಪುರುಷಪರಮಾತ್ಮನನ್ನು ನೋಡಿದೊಡನೆಯೇ ಆಶ್ಚರ್ಯಚಕಿತಳಾಗಿ ಪರಮಾನಂದಭರಿತಳಾದಳು. ಕಶ್ಯಪಪ್ರಜಾಪತಿಯೂ, ಶ್ರೀಭಗವಂತನು ತನ್ನ ಯೋಗಮಾಯೆಯಿಂದ ಶರೀರವನ್ನು ಧರಿಸಿರುವುದನ್ನು ನೋಡಿ ವಿಸ್ಮಿತನಾಗಿ 'ಜಯ!' 'ಭಗವಂತನಿಗೆ ಜಯವಾಗಲಿ!'–ಎಂದು ಹೇಳಿದನು. (ಶ್ಲೋಕ 6-11)

ಪರೀಕ್ಷಿತನೇ! ಭಗವಂತನು ನಿಶ್ಚಯವಾಗಿಯೂ ಅವ್ಯಕ್ತನು ಮತ್ತು ಚಿತ್‌ಸ್ವರೂಪನು. ಅಂತಹವನು ಕಾಂತಿಮಯವಾದ ಆಭರಣಗಳಿಂದಲೂ ಮತ್ತು ಆಯುಧಗಳಿಂದಲೂ ಯುಕ್ತನಾಗಿ ತೇಜೋಮಯವಾದ ಶರೀರವನ್ನು ಧರಿಸಿ ಆವಿರ್ಭವಿಸಿದನು. ಆ ದಿವ್ಯಶರೀರವನ್ನು ಅದಿತಿ-ಕಶ್ಯಪರು ನೋಡಿ ನೋಡಿ ಆನಂದಿಸುತ್ತಿರುವಾಗಲೇ–ನಟನು ತನ್ನ ವೇಷವನ್ನು ಬದಲಾಯಿಸುವಂತೆ ಭಗವಂತನು ಕುಳ್ಳಬ್ರಹ್ಮಚಾರಿಯ ರೂಪವನ್ನು ತಾಳಿಬಿಟ್ಟನು. ನಿಶ್ಚಯವಾಗಿಯೂ ಪರಮಾತ್ಮನ ಲೀಲೆಯು ಪರಮಾದ್ಭುತವಾದುದು.

ಶ್ರೀಭಗವಂತನನ್ನು ವಾಮನಬ್ರಹ್ಮಚಾರಿಯ ರೂಪದಲ್ಲಿ ಕಂಡು ಮಹರ್ಷಿಗಳಿಗೆ ಮಹಾನಂದವಾಯಿತು. ಋಷಿ-ಮುನಿಗಳು ಕಶ್ಯಪ ಪ್ರಜಾಪತಿಯನ್ನು ಮುಂದೆಮಾಡಿಕೊಂಡು ವಾಮನನಿಗೆ ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ಮಾಡಿಸಿದರು. ಬಳಿಕ ಅವನಿಗೆ ಉಪನಯನ ಸಂಸ್ಕಾರವೂ ಪ್ರಾರಂಭವಾಯಿತು. ಗಾಯತ್ರೀಮಂತ್ರಕ್ಕೆ ಅಧಿಷ್ಠಾತೃ ದೇವತೆಯಾದ ಸವಿತೃವೇ ವಾಮನನಿಗೆ ಗಾಯತ್ರೀಮಂತ್ರವನ್ನು ಉಪದೇಶಿಸಿದನು. ದೇವಗುರುವಾದ ಬೃಹಸ್ಪತಿಯು ಯಜ್ಞೋಪವೀತವನ್ನು ಕೊಟ್ಟನು. ಕಶ್ಯಪನು ಮೌಂಜಿಯನ್ನು ಕೊಟ್ಟನು. ಪೃಥ್ವೀದೇವಿಯು ಕೃಷ್ಣಾಜಿನವನ್ನು ಕೊಟ್ಟಳು. ವನಸ್ಪತಿಗಳಿಗೆ ಒಡೆಯನಾದ ಚಂದ್ರನು ದಂಡವನ್ನೂ, ತಾಯಿಯಾದ ಅದಿತಿಯು ಕೌಪೀನ-ಸೊಂಟಪಟ್ಟಿಗಳನ್ನೂ ಕೊಟ್ಟರು. ಆಕಾಶಾಭಿಮಾನದೇವತೆಯು ವಾಮನವೇಷಧಾರಿಯಾದ ಭಗವಂತನಿಗೆ ಛತ್ರಿಯನ್ನು ಕೊಟ್ಟನು. ಅವಿನಾಶಿಯಾದ ವಾಮನಪ್ರಭು

ವಿಗೆ ಬ್ರಹ್ಮನು ಕಮಂಡಲುವನ್ನೂ, ಸಪ್ತರ್ಷಿಗಳು ದರ್ಭೆಯನ್ನೂ ಸರಸ್ವತಿಯು ಜಪಮಾಲೆಯನ್ನೂ ಸಮರ್ಪಿಸಿದರು. ಹೀಗೆ ಭಗವಂತನಾದ ವಾಮನನಿಗೆ ಉಪನಯನಸಂಸ್ಕಾರವಾದನಂತರ ಯಕ್ಷರಾಜನಾದ ಕುಬೇರನು ಆ ವಟುವಿಗೆ ಭಿಕ್ಷಾಪಾತ್ರೆಯನ್ನು ಕೊಟ್ಟನು. ಸತೀಶಿರೋಮಣಿ ಯಾದ, ಜಗಜ್ಜನನಿಯಾದ ಭಗವತೀ ಉಮಾದೇವಿಯೇ ವಾಮನ ಬ್ರಹ್ಮಚಾರಿಗೆ ಪ್ರಥಮಭಿಕ್ಷೆಯನ್ನು ನೀಡಿದಳು. ಹೀಗೆ ಋಷಿ-ಮುನಿ-ದೇವತೆ ಗಳಾದಿಯಾಗಿ ಎಲ್ಲರೂ ಸೇರಿ ವಟುವೇಷಧರನಾದ ಶ್ರೀಭಗವಂತನನ್ನು ನಾನಾವಿಧವಾದ ಪಾರಿತೋಷಿಕಗಳಿಂದ ಸಮ್ಮಾನಿಸಿದರು. ಬ್ರಹ್ಮರ್ಷಿಗಳಿಂದ ತುಂಬಿಹೋಗಿದ್ದ ಆ ಮಹಾಸಭೆಯಲ್ಲಿ ವಾಮನನು ಬ್ರಹ್ಮತೇಜಸ್ಸಿನಿಂದ ಯುಕ್ತನಾಗಿ ಬಹಳವಾಗಿ ಪ್ರಕಾಶಿಸಿದನು. ಬಳಿಕ ವಾಮನನು ಸಮಿತ್ತುಗಳನ್ನು ರಾಶಿಯಾಗಿ ಹಾಕಿ, ಅಗ್ನಿಯನ್ನು ಪ್ರತಿಷ್ಠಾಪಿಸಿ ದರ್ಭೆಯನ್ನು ನಾಲ್ಕು ದಿಕ್ಕು ಗಳಲ್ಲಿಯೂ ಯಥಾವಿಧಿಯಾಗಿ ಇರಿಸಿ ಅಗ್ನಿಪೂಜೆಮಾಡಿ ಸಮಿದಾಧಾನ ವನ್ನು ಮಾಡಿದನು.

ಸಮಸ್ತವಿಧವಾದ ಯಜ್ಞಸಾಮಗ್ರಿಗಳಿಂದಲೂ ಸಂಪನ್ನನಾದ ಯಶೋವಂತನಾದ ಬಲಿಯು ಭೃಗುವಂಶೀಯಬ್ರಾಹ್ಮಣರ ಆದೇಶಾನುಸಾರ ವಾಗಿ ಹಲವಾರು ಅಶ್ವಮೇಧಗಳನ್ನು ಮಾಡುತ್ತಿರುವನೆಂಬ ವಿಷಯವು ಶ್ರೀಭಗವಂತನಾದ ವಾಮನಮೂರ್ತಿಗೆ ತಿಳಿಯಿತು. ಸಮಸ್ತಶಕ್ತಿಗಳಿಂದಲೂ ಯುಕ್ತನಾಗಿದ್ದು ಅತ್ಯಂತ ಭಾರವಾಗಿದ್ದ ವಾಮನನು ತಾನು ಇಡುತ್ತಿದ್ದ ಒಂದೊಂದು ಹೆಜ್ಜೆಯಿಂದಲೂ ಭೂಮಿಯನ್ನೇ ಬಗ್ಗಿಸುತ್ತಾ ಬಲಿ ಚಕ್ರವರ್ತಿಯ ಯಜ್ಞಶಾಲೆಗೆ ಹೋದನು. ಪರೀಕ್ಷಿತನೇ! ನರ್ಮದಾ ನದಿಯ ಉತ್ತರತೀರದಲ್ಲಿ ಭೃಗುಕಚ್ಛವೆಂಬ ಸುಂದರವಾದ ಮತ್ತು ಪವಿತ್ರವಾದ ಸ್ಥಳವಿದೆ. ಅಲ್ಲಿಯೇ ಭೃಗುವಂಶೀಯ ಬ್ರಾಹ್ಮಣಋತ್ವಿಜರು ಬಲಿ ಚಕ್ರವರ್ತಿಯಿಂದ ಯಜ್ಞಗಳನ್ನು ಮಾಡಿಸುತ್ತಿದ್ದರು. ಶ್ರೀವಾಮನ ಮೂರ್ತಿಯು ಯಜ್ಞವಾಟದ ಬಳಿಗೆ ಬರುತ್ತಲೇ ಅವನನ್ನು ನೋಡಿದ ಋತ್ವಿಜರು ಮತ್ತು ಜನಗಳು ಸೂರ್ಯದೇವನ ಉದಯವಾಯಿತೆಂದೇ ಭಾವಿಸಿದರು. (ಶ್ಲೋಕ 12-21)

ಪರೀಕ್ಷಿತನೇ! ಶ್ರೀವಾಮನಮೂರ್ತಿಯ ದಿವ್ಯತೇಜಸ್ಸಿನ ಮುಂದೆ

ಋತ್ವಿಜರು, ಯಜಮಾನ, ಸದಸ್ಯರು–ಇವರೆಲ್ಲರೂ ನಿಸ್ತೇಜರಾಗಿಬಿಟ್ಟರು. ಯಜ್ಞವನ್ನು ನೋಡುವ ಸಲುವಾಗಿ ಸೂರ್ಯನೋ, ಅಗ್ನಿಯೋ ಅಥವಾ ಸನತ್ಕುಮಾರನೋ ಬರುತ್ತಿರಬಹುದೆಂದು ಶಂಕಿಸಿದರು. ಹೀಗೆ ಶಿಷ್ಯರಿಂದ ಕೂಡಿದ ಶುಕ್ರಾಚಾರ್ಯರೇ ಮೊದಲಾದ ಭೃಗುವಂಶೀಯಬ್ರಾಹ್ಮಣ ಋತ್ವಿಜರು ತೇಜಃಪುಂಜನಾಗಿ ಬರುತ್ತಿರುವವನು ಯಾರಿರಬಹುದೆಂದು ತರ್ಕ-ವಿತರ್ಕಗಳನ್ನು ಮಾಡುತ್ತಿದ್ದಾಗಲೇ ಶ್ರೀವಾಮನಮೂರ್ತಿಯು ದಂಡದಿಂದ ಕೂಡಿದ ಛತ್ರಿಯನ್ನೂ ನೀರಿನಿಂದ ತುಂಬಿದ ಕಮಂಡಲುವನ್ನೂ ಹಿಡಿದು ಯಜ್ಞಶಾಲೆಯನ್ನು ಪ್ರವೇಶಿಸಿದನು. ಬ್ರಹ್ಮಚಾರಿಯಾದ ಶ್ರೀವಾಮನಮೂರ್ತಿಯು ನೊಜೆಹುಲ್ಲಿನಿಂದ ಮಾಡಿದ ಉಡಿದಾರವನ್ನು ಸೊಂಟದಲ್ಲಿ ಧರಿಸಿದ್ದನು. ಕತ್ತಿನಲ್ಲಿ ಯಜ್ಞೋಪವೀತವನ್ನು ಧಾರಣೆ ಮಾಡಿದ್ದನು. ಕೃಷ್ಣಾಜಿನವನ್ನೇ ಉತ್ತರೀಯವನ್ನಾಗಿ ಹೊದೆದಿದ್ದನು. ತಲೆಯಲ್ಲಿ ಜಟೆಯಿದ್ದಿತು. ಮಾಯೆಯಿಂದ ಕುಳ್ಳು ಬ್ರಾಹ್ಮಣವಟುವಿನ ಇಂತಹ ವೇಷವನ್ನು ಧರಿಸಿ ಯಜ್ಞವಾಟವನ್ನು ಪ್ರವೇಶಿಸಿದ ಶ್ರೀಹರಿಯನ್ನು ನೋಡಿ, ಅವನ ದಿವ್ಯತೇಜಸ್ಸಿನಿಂದ ನಿಸ್ತೇಜರಾಗಿ, ಏನು ಮಾಡಬೇಕೆಂಬು ದನ್ನರಿಯದೆ ಥಟ್ಟನೆ ಮೇಲೆದ್ದು, ತಮ್ಮ ಶಿಷ್ಯನಾದ ಬಲಿಚಕ್ರವರ್ತಿಯೊಡನೆ ಯಜ್ಞೇಶ್ವರನನ್ನು ಮುಂದೆಮಾಡಿಕೊಂಡು ಭೃಗುವಂಶೀಯಬ್ರಾಹ್ಮಣರು ಶ್ರೀವಾಮನಮೂರ್ತಿಯನ್ನು ಸ್ವಾಗತಿಸಿದರು. (ಶ್ಲೋಕ 22-25)

ಶ್ರೀವಾಮನಮೂರ್ತಿಯು ಕಡುಚೆಲುವನಾಗಿದ್ದನು. ಆತನನ್ನು ಎಷ್ಟು ನೋಡಿದರೂ ತೃಪ್ತಿಯೇ ಆಗುತ್ತಿರಲಿಲ್ಲ. ಪುನಃ-ಪುನಃ ನೋಡುತ್ತಲೇ ಇರಬೇಕೆನ್ನಿಸುತ್ತಿದ್ದಿತು. ಎಲ್ಲರ ಮನಸ್ಸನ್ನೂ ಆಕರ್ಷಿಸುವವನಾಗಿದ್ದನು. ಅವನ ವಾಮನಾಕಾರಕ್ಕೆ ತಕ್ಕಂತೆ ಅವನ ಎಲ್ಲ ಅವಯವಗಳೂ ಇದ್ದುವು. ಇಂತಹ ಅನುಪಮಸೌಂದರ್ಯದಿಂದ ಕೂಡಿದ್ದ ಶ್ರೀವಾಮನಮೂರ್ತಿಯು ತನ್ನ ಯಜ್ಞವಾಟಕ್ಕೆ ಬಂದುದನ್ನು ಕಂಡು ಬಲಿಚಕ್ರವರ್ತಿಗೆ ಪರಮಾನಂದ ವಾಯಿತು. ಆತನು ಬ್ರಹ್ಮಚಾರಿಗೆ ಆಸನವನ್ನಿತ್ತು ಸತ್ಕರಿಸಿದನು. ಬಳಿಕ ಬಲಿಯು ಕುಶಲಪ್ರಶ್ನೆಗಳ ಮೂಲಕವಾಗಿ ವಟುವಿಗೆ ನಮಸ್ಕರಿಸಿ, ಅವನ ದಿವ್ಯವಾದ ಪಾದಗಳನ್ನು ತೊಳೆದು, ನಿಸ್ಸಂಗರಾದ ಯೋಗಿಗಳ ಮನಸ್ಸಿನಲ್ಲಿ ಸರ್ವದಾ ರಮಿಸುವ ಆ ವಾಮನಮೂರ್ತಿಯನ್ನು ಯಥಾವಿಧಿಯಾಗಿ

ಸಂಪೂಜಿಸಿದನು. ದೇವದೇವನಾದ, ಕೈಲಾಸವಾಸಿಯಾದ ಚಂದ್ರಮೌಳಿಯು ಯಾವ ಶ್ರೀಹರಿಯ ಚರಣತೀರ್ಥರೂಪಳಾದ ಗಂಗಾದೇವಿಯನ್ನು ಅತ್ಯಂತ ಭಕ್ತಿಯಿಂದ ತಲೆಯಲ್ಲಿ ಧರಿಸಿದನೋ–ಅಂತೆಯೇ ಕಲಿಕಲ್ಮಷನಾಶಕವಾದ ಅತ್ಯಂತಮಂಗಳಕರವಾದ ಶ್ರೀವಾಮನಮೂರ್ತಿಯ ಚರಣತೀರ್ಥವನ್ನು ತನ್ನ ಧರ್ಮವೇನೆಂಬುದನ್ನು ಚೆನ್ನಾಗಿ ತಿಳಿದಿದ್ದ ಬಲಿಚಕ್ರವರ್ತಿಯು ತಲೆಯ ಮೇಲೆ ಪ್ರೋಕ್ಷಿಸಿಕೊಂಡನು. (ಶ್ಲೋಕ 26-28)

ಬಳಿಕ ಕೈಗಳನ್ನು ಜೋಡಿಸಿಕೊಂಡು ಬಲಿಯು ವಾಮನನಿಗೆ ಹೇಳಿದನು:

ಸ್ವಾಗತಂ ತೇ ನಮಸ್ತುಭ್ಯಂ ಬ್ರಹ್ಮನ್ಕಿಂ ಕರವಾಮ ತೇ ।
ಬ್ರಹ್ಮರ್ಷೀಣಾಂ ತಪಃಸಾಕ್ಷಾನ್ಮನ್ಯೇ ತ್ವಾರ್ಯವಪುರ್ಧರಮ್ ॥೨೯॥

"ಬ್ರಾಹ್ಮಣವಟುವೇ! ನಿನ್ನನ್ನು ಆದರದಿಂದ ಸ್ವಾಗತಿಸುತ್ತೇನೆ ಮತ್ತು ನಿನಗೆ ನಮಸ್ಕಾರಮಾಡುತ್ತೇನೆ. ನಾನು ನಿನಗೆ ಯಾವ ಕಾರ್ಯವನ್ನು ಮಾಡಿಕೊಡಲಿ? ನಿನ್ನನ್ನು ನೋಡಿದರೆ–ಬ್ರಹ್ಮರ್ಷಿಗಳು ಮಾಡಿದ ತಪಸ್ಸೆಲ್ಲವೂ ಒಟ್ಟಾಗಿ ಸೇರಿ ಮೂರ್ತಿಮತ್ತಾಗಿ ಇಲ್ಲಿಗೆ ಬಂದಿರುವಂತೆ ಭಾಸವಾಗುತ್ತಿದೆ. ತಪೋಮೂರ್ತಿಯೇ ನೀನಾಗಿರುವೆ.

ಅದ್ಯ ನಃ ಪಿತರಸ್ತೃಪ್ತಾ ಅದ್ಯ ನಃ ಪಾವಿತಂ ಕುಲಮ್ ।
ಅದ್ಯ ಸ್ವಿಷ್ಟಃ ಕ್ರತುರಯಂ ಯದ್ಭವಾನಾಗತೋ ಗೃಹಾನ್ ॥೩೦॥

ಮಹಾನುಭಾವನೇ! ನೀನು ನಮ್ಮ ಮನೆಗೆ ಆಗಮಿಸಿದೆಯಾದ ಕಾರಣ ನಮ್ಮ ಪಿತೃದೇವತೆಗಳು ತೃಪ್ತರಾದರು. ನಮ್ಮ ಕುಲವು ಪವಿತ್ರವಾಯಿತು. ಇಂದಿಗೆ ನಾನು ಮಾಡಿದ ಯಜ್ಞವೂ ಸಫಲವಾಯಿತು.

ಅದ್ಯಾಗ್ನಯೋ ಮೇ ಸುಹುತಾ ಯಥಾವಿಧಿ
ದ್ವಿಜಾತ್ಮಜ ತ್ವಚ್ಚರಣಾವನೇಜನೈಃ ।
ಹತಾಂಹಸೋ ವಾರ್ಭಿರಿಯಂ ಚ ಭೂರಹೋ
ತಥಾ ಪುನೀತಾ ತನುಭಿಃ ಪದೈಸ್ತವ ॥೩೧॥

ಬ್ರಾಹ್ಮಣಕುಮಾರನೇ! ಇಂದಿಗೆ ನಾನು ಅಗ್ನಿಗಳನ್ನು ತೃಪ್ತಿಪಡಿ

ಸಿರುವೆನೆಂದು ಭಾವಿಸುತ್ತೇನೆ. ಅದರ ಫಲವಾಗಿಯೇ ನಿನ್ನ ದಿವ್ಯದರ್ಶನವಾಗಿದೆ. ನಿನ್ನ ಪಾದೋದಕವನ್ನು ತಲೆಯಲ್ಲಿ ಧರಿಸಿ ನನ್ನ ಪಾಪಗಳೆಲ್ಲವನ್ನೂ ಕಳೆದುಕೊಂಡಿರುತ್ತೇನೆ. ನಾನು ಆಳುತ್ತಿರುವ ಈ ಭೂಮಿಯು ಕೂಡ ಪುಟ್ಟದಾದ ನಿನ್ನ ಪದವಿನ್ಯಾಸಗಳಿಂದ ಪರಿಶುದ್ಧವಾಗಿದೆ.

ಯದ್ಯದ್ವಟೋ ವಾಞ್ಛಸಿ ತತ್ಪ್ರತೀಚ್ಛ ಮೇ
ತ್ವಾಮರ್ಥಿನಂ ವಿಪ್ರಸುತಾನುತರ್ಕಯೇ ।
ಗಾಂ ಕಾಞ್ಚನಂ ಗುಣವದ್ಧಾಮ ಮೃಷ್ಟಂ
ತಥಾನ್ನಪೇಯಮುತ ವಾ ವಿಪ್ರ ಕನ್ಯಾಮ್ ।
ಗ್ರಾಮಾನ್ಸಮೃದ್ಧಾಂಸ್ತುರಗಾನ್ಗಜಾನ್ವಾ
ರಥಾಂಸ್ತಥಾರ್ಹತ್ತಮ ಸಮ್ಪ್ರತೀಚ್ಛ ॥೩೨॥

ಬ್ರಾಹ್ಮಣಪುತ್ರನೇ! ನೀನು ಯಾಚಕನಾಗಿ ನನ್ನ ಬಳಿಗೆ ಬಂದಿರುವೆಯೆಂದು ಭಾವಿಸುತ್ತೇನೆ. ನೀನು ಯಾವುದನ್ನು ನನ್ನಿಂದ ಬಯಸುವೆಯೋ ಅವೆಲ್ಲವನ್ನೂ ನನ್ನಿಂದ ಪಡೆದುಕೊಳ್ಳಬಹುದು.

ಪರಮಪೂಜ್ಯನೇ! ವಿಪ್ರಶ್ರೇಷ್ಠನೇ! ಭೂಮಿ, ಚಿನ್ನ, ಸಮಸ್ತ ಸಾಮಗ್ರಿಗಳಿಂದಲೂ ಕೂಡಿರುವ ಮನೆ, ಮೃಷ್ಟಾನ್ನ, ಕನ್ಯೆ, ಸಂಪತ್ಸಮೃದ್ಧವಾದ ಗ್ರಾಮಗಳು, ಕುದುರೆಗಳು, ಆನೆಗಳು, ರಥಗಳು–ಇವುಗಳಲ್ಲಿ ಯಾವುದನ್ನಾದರೂ ನನ್ನಿಂದ ಕೇಳಿ ನೀನು ಪಡೆಯಬಹುದಾಗಿದೆ ಅಥವಾ ಇವುಗಳೆಲ್ಲವನ್ನೂ ಪಡೆಯಬಹುದಾಗಿದೆ. ಈಗ ನಿನಗೆ ಇಷ್ಟವಾದುದು ಯಾವುದೆಂಬುದನ್ನು ತಿಳಿಸು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೧೮ನೆಯ ಅಧ್ಯಾಯವು ಮುಗಿಯಿತು.

ವಾಮನನು ಬಲಿಯನ್ನು ಮೂರು ಹೆಜ್ಜೆ ಭೂಮಿಯನ್ನು ಬೇಡಿದುದು : ಬಲಿಯ ಸಮ್ಮತಿ : ಶುಕ್ರಾಚಾರ್ಯರಿಂದ ತಡೆ

ಶ್ರೀಶುಕಮುನಿಗಳು ಹೇಳುತ್ತಾರೆ :

ಇತಿ ವೈರೋಚನೇರ್ವಾಕ್ಯಂ ಧರ್ಮಯುಕ್ತಂ ಸ ಸೂನೃತಮ್ ।
ನಿಶಮ್ಯ ಭಗವಾನ್ಪ್ರೀತ್ಯ ಪ್ರತಿನನ್ದ್ಯೇದಮಬ್ರವೀತ್ ॥೧॥

ಮಹಾರಾಜ! ಬಲಿಯು ಹೇಳಿದ ಈ ಮಾತುಗಳು ಧರ್ಮಯುಕ್ತವಾಗಿಯೂ ಇದ್ದುವು. ಸತ್ಯವಾಗಿಯೂ ಪ್ರಿಯವಾಗಿಯೂ ಇದ್ದುವು. ಈ ಮಾತುಗಳನ್ನು ಕೇಳಿ ಶ್ರೀವಾಮನಮೂರ್ತಿಯು ಅತ್ಯಂತಸಂತೋಷದಿಂದ ಬಲಿಯನ್ನು ಅಭಿನಂದಿಸಿ ಹೇಳಿದನು :

"ಸಾರ್ವಭೌಮನೇ! ನೀನು ಯಾವ ಸುಮಧುರವಾದ ಮಾತುಗಳನ್ನಾಡಿದೆಯೋ ಅದು ನಿನ್ನ ಕುಲಪರಂಪರೆಗೆ ಅನುರೂಪವಾಗಿದೆ. ಧರ್ಮಭಾವದಿಂದ ಪರಿಪೂರ್ಣವಾಗಿದೆ ; ಯಶಸ್ಕರವಾಗಿದೆ. ಸತ್ಯವೂ ಪ್ರಿಯಕರವೂ ಆಗಿದೆ. ಇದಕ್ಕೆ ಕಾರಣವೇನೆಂದರೆ ಪರಲೋಕಹಿತಕಾರಿಯಾದ ಧರ್ಮದ ಸಂಬಂಧದಲ್ಲಿ ನೀನು ಭೃಗುವಿನ ಮಕ್ಕಳಾದ ಶುಕ್ರಾಚಾರ್ಯರನ್ನೇ ಪರಮಪ್ರಮಾಣವನ್ನಾಗಿ ಭಾವಿಸಿರುವೆ. ಕುಲವೃದ್ಧನಾದ, ನಿನ್ನ ಪಿತಾಮಹನಾದ, ಪರಮಶಾಂತಸ್ವಭಾವದಿಂದ ಕೂಡಿರುವ ಪ್ರಹ್ಲಾದನ ಆಜ್ಞೆಯನ್ನು ಪರಮಪ್ರಮಾಣವೆಂದು ಭಾವಿಸುವೆ. ನಿನ್ನ ವಂಶಪರಂಪರೆಯಲ್ಲಿ ಧೈರ್ಯವಿಲ್ಲದವನಾಗಲೀ ಕೃಪಣನಾಗಲೀ ಇದುವರೆಗೆ ಯಾವನೂ ಹುಟ್ಟಿಲ್ಲ. ಬ್ರಾಹ್ಮಣನಿಗೆ ದಾನಕೊಡದವನಾಗಲೀ, ಇಂತಹ ವಸ್ತುವನ್ನು ದಾನ ಮಾಡುವೆನೆಂಬುದಾಗಿ ಪ್ರತಿಜ್ಞೆಮಾಡಿ ಅನಂತರ ಆ ಪ್ರತಿಜ್ಞೆಯನ್ನು ಭಂಗಮಾಡಿದವನಾಗಲೀ ನಿನ್ನ ವಂಶದಲ್ಲಿ ಹುಟ್ಟಿಲ್ಲ. ದಾನಕೊಡಬೇಕಾದ ಸಮಯದಲ್ಲಿ ಯಾಚಕರ ಯಾಚನೆಯನ್ನು ಕೇಳಿ ಮುಖತಿರುಗಿಸಿಕೊಂಡು ಹೋದವನಾಗಲೀ, ಯುದ್ಧಸಮಯದಲ್ಲಿ ಎದುರಾಳಿಯನ್ನು ಎದುರಿಸಬೇಕಾಗಿ ಬಂದಾಗ ಭಯದಿಂದ ಶತ್ರುವಿಗೆ ಬೆನ್ನುತೋರಿಸಿಕೊಂಡು ಪಲಾಯನಮಾಡುವ ಹೇಡಿಯಾಗಲೀ ನಿಮ್ಮ ವಂಶದಲ್ಲಿಲ್ಲ. ನಿಮ್ಮ ಕುಲ

ಪರಂಪರೆಯಲ್ಲಿ ಪ್ರಹ್ಲಾದನು ಈಗಲೂ ಆಕಾಶದಲ್ಲಿರುವ ಚಂದ್ರನಂತೆ ನಿರ್ಮಲವಾದ ಯಶಸ್ಸಿನಿಂದ ಬೆಳಗುತ್ತಿದ್ದಾನೆ. ನಿಮ್ಮ ವಂಶದಲ್ಲಿ ಹಿರಣ್ಯಾಕ್ಷರಂತಹ ಮಹಾವೀರರು ಜನ್ಮತಾಳಿದ್ದಾರೆ. ಹಿರಣ್ಯಾಕ್ಷನೊಮ್ಮೆ ಗದಾಪಾಣಿಯಾಗಿ ಏಕಾಕಿಯಾಗಿ ದಿಗ್ವಿಜಯಕ್ಕಾಗಿ ಹೊರಟನು. ಅಖಂಡ ಭೂಮಂಡಲದಲ್ಲೆಲ್ಲಾ ಸುತ್ತಾಡಿದರೂ ಅವನನ್ನು ಎದುರಿಸಿ ಯುದ್ಧಮಾಡುವವರೇ ಯಾರೂ ಸಿಗಲಿಲ್ಲ. ಮಹಾವಿಷ್ಣುವು ರಸಾತಲದಲ್ಲಿದ್ದ ಭೂಮಿ ಯನ್ನು ಮೇಲಕ್ಕೆತ್ತಲು ಹೋದಾಗ ಹಿರಣ್ಯಾಕ್ಷನನ್ನು ಯುದ್ಧದಲ್ಲಿ ಎದುರಿಸಬೇಕಾಯಿತು. ವಿಷ್ಣುವೇನೋ ಬಹಳ ಪ್ರಯಾಸದಿಂದ ಹಿರಣ್ಯಾಕ್ಷನನ್ನು ಗೆದ್ದನು. ಆದರೂ ಅಧಿಕವೀರ್ಯನಾಗಿದ್ದ ಹಿರಣ್ಯಾಕ್ಷನ ಪರಾಕ್ರಮವನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಾ ವಿಷ್ಣುವು ತಾನು ಗೆದ್ದೆನೆಂಬ ಅಭಿಮಾನವನ್ನೇ ಹೊಂದಲಿಲ್ಲ. ನಿನ್ನ ಪೂರ್ವಜನಾದ ಹಿರಣ್ಯಾಕ್ಷನ ಪರಾಕ್ರಮವು ಅಷ್ಟು ಅಸದಳವಾಗಿದ್ದಿತು. ಅವನ ಸಹೋದರ ಹಿರಣ್ಯಕಶಿಪುವಿಗೆ ತನ್ನ ತಮ್ಮನನ್ನು ಹರಿಯು ಕೊಂದನೆಂಬ ವಾರ್ತೆಯು ತಿಳಿಯಿತು. ಒಡನೆಯೇ ಅವನು ಭ್ರಾತೃಹಂತಕನನ್ನು ಸಂಹರಿಸುವ ಸಲುವಾಗಿ ಅವನ ನೆಲೆಯಾದ ವೈಕುಂಠಕ್ಕೆ ಹೋದನು. ಮಾಯಾವಿಗಳಲ್ಲಿ ಶ್ರೇಷ್ಠನಾದ, ಕಾಲಜ್ಞನಾದ, ಯಾವ ಕಾಲದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ತಿಳಿದಿದ್ದ ಮಹಾವಿಷ್ಣುವು–ಯಮನಂತೆ ಶೂಲವನ್ನು ಕೈಯಲ್ಲಿ ಹಿಡಿದು ತನ್ನನ್ನು ಸಂಹರಿಸುವ ಸಲುವಾಗಿ ಬರುತ್ತಿದ್ದ ಹಿರಣ್ಯಕಶಿಪುವನ್ನು ನೋಡಿ ಹೀಗೆ ಯೋಚಿಸಿದನು :

ಯತೋ ಯತೋಽಹಂ ತತ್ರಾಸೌ ಮೃತ್ಯುಃ ಪ್ರಾಣಭೃತಾಮಿವ ।
ಅತೋಽಹಮಸ್ಯ ಹೃದಯಂ ಪ್ರವೇಕ್ಷ್ಯಾಮಿ ಪರಾಗ್ದೃಶಃ ॥೯॥

"ಯಾವಾಗಲೂ ಮೃತ್ಯುವು ಪ್ರಾಣಿಗಳ ಬೆನ್ನುಬಿಡದೇ ಇರುವಂತೆ– ಈ ರಾಕ್ಷಸನು ನಾನು ಎಲ್ಲಿಗೇ ಹೋದರೂ ನನ್ನನ್ನು ಹಿಂಬಾಲಿಸಿಕೊಂಡು ಬರುತ್ತಲೇ ಇರುತ್ತಾನೆ. ಆದುದರಿಂದ ಕೇವಲ ಹೊರದೃಷ್ಟಿಯಿರುವ ಇವನ ಹೃದಯವನ್ನು ನಾನು ಪ್ರವೇಶಿಸಿಬಿಡುತ್ತೇನೆ. ಇವನು ಯಾವಾಗಲೂ ಬಹಿರ್ಮುಖನಾಗಿರುವುದರಿಂದ ಅಂತರಂಗದಲ್ಲಿ ಸೇರಿಕೊಳ್ಳುವ ನನ್ನನ್ನು ಕಾಣಲಾರನು."

ಹೀಗೆ ಯೋಚಿಸಿ ರಾಕ್ಷಸನ ಭಯದಿಂದ ನಡುಗುತ್ತಿದ್ದ ಮಹಾ

ವಿಷ್ಣುವು ನಿಟ್ಟುಸಿರುಬಿಡುತ್ತಾ ಬೆನ್ನಟ್ಟಿ ಬರುತ್ತಿದ್ದ ಹಿರಣ್ಯಕಶಿಪುವಿನ ಉಚ್ಛ್ವಾಸದಲ್ಲಿ ತನ್ನ ಸೂಕ್ಷ್ಮದೇಹವನ್ನಡಗಿಸಿ ಮೂಗಿನ ಹೊಳ್ಳೆಯ ಮಾರ್ಗದಿಂದ ರಾಕ್ಷಸನ ಹೃದಯದಲ್ಲಿ ಸೇರಿಕೊಂಡುಬಿಟ್ಟನು. ಕೇವಲ ಬಹಿರಂಗದೃಷ್ಟಿಯಿದ್ದ ಹಿರಣ್ಯಕಶಿಪುವಿಗೆ ವಿಷ್ಣುವು ಅಂತರಂಗದಲ್ಲಿ ಸೇರಿ ಕೊಂಡುದು ತಿಳಿಯಲೇ ಇಲ್ಲ. ವೈಕುಂಠದಲ್ಲಿ ನೋಡಿದನು. ಅದು ವಿಷ್ಣು ವಿನಿಂದ ಶೂನ್ಯವಾಗಿ ಬರಿದಾಗಿದ್ದಿತು. ಕೋಪಗೊಂಡು ಗಟ್ಟಿಯಾಗಿ ಆರ್ಭಟಿ ಸಿದನು. ಅಲ್ಲಿಂದ ಮುಂದೆ ವೀರನಾದ ಹಿರಣ್ಯಕಶಿಪುವು ಭೂಮ್ಯಂತರಿಕ್ಷ ಗಳಲ್ಲಿಯೂ ಸ್ವರ್ಗ-ಪಾತಾಳಗಳಲ್ಲಿಯೂ ನಾಲ್ಕು ದಿಕ್ಕುಗಳಲ್ಲಿಯೂ ಸಪ್ತಸಮುದ್ರಗಳಲ್ಲಿಯೂ ಹುಡುಕಿದನು. ಆದರೆ ಹಿರಣ್ಯಕಶಿಪುವಿನ ಹೃದಯ ಗುಹೆಯಲ್ಲಿಯೇ ಸೇರಿಕೊಂಡಿದ್ದ ಮಹಾವಿಷ್ಣುವು ಅವನ ಹೊರದೃಷ್ಟಿಗೆ ಎಲ್ಲಿಯೂ ಕಾಣಲೇ ಇಲ್ಲ. ಆಗ ಹಿರಣ್ಯಕಶಿಪುವು ಹೀಗೆ ಯೋಚಿಸಿದನು : "ನನ್ನ ತಮ್ಮನನ್ನು ಕೊಂದವನನ್ನು ಸಂಹರಿಸುವ ನಿಶ್ಚಯದಿಂದ ನಾನು ಮೂಜಗತ್ತಿನ ಎಲ್ಲೆಡೆಗಳಲ್ಲಿಯೂ ಅವನನ್ನು ಹುಡುಕಿಬಿಟ್ಟೆನು. ಆದರೆ ಅವನು ನನಗೆ ಸಿಗಲಿಲ್ಲ. ಬಹುಶಃ ಅವನು-ಮಾನವರು ಎಲ್ಲಿಗೆ ಹೋದರೆ ಅಲ್ಲಿಂದ ಪುನಃ ಹಿಂದಿರುಗುವುದಿಲ್ಲವೋ ಅಂತಹ ಸ್ಥಳಕ್ಕೇ ಹೋಗಿರಬೇಕು. (ಯಮಪುರಿಗೇ ಹೋಗಿರಬೇಕು.) ಇದು ನಿಶ್ಚಯ. (ಶ್ಲೋಕ 10-12)

ವೈರಾನುಬನ್ಧ ಏತಾವಾನಾಮೃತ್ಯೋರಿಹ ದೇಹಿನಾಮ್ ।
ಅಜ್ಞಾನಪ್ರಭವೋ ಮನ್ಯುರಹಮ್ಮಾನೋಪಬೃಂಹಿತಃ ॥೧೩॥

ಮೃತ್ಯುವಶನಾಗಿರುವವನಲ್ಲಿ ವೈರಭಾವವನ್ನು ಇಟ್ಟುಕೊಳ್ಳುವ ಅವಶ್ಯಕತೆಯಿಲ್ಲ. ಅಂತಹವನನ್ನು ದ್ವೇಷಿಯೆಂದು ಭಾವಿಸಲಾಗದು. ಏಕೆಂದರೆ ವೈರವು ದೇಹದೊಡನೆಯೇ ಹೋಗಿಬಿಡುತ್ತದೆ. ದೇಹವೇ ಹೋದ ಮೇಲೆ ವೈರವೆಲ್ಲಿ ಉಳಿದೀತು? ಕ್ರೋಧಕ್ಕೆ ಅಜ್ಞಾನವೇ ಕಾರಣ. ಅಹಂಕಾರದಿಂದ ಆ ಕೋಪವು ವೃದ್ಧಿಸುತ್ತಿರುತ್ತದೆ.'–ಹೀಗೆ ಯೋಚಿಸಿ ಹಿರಣ್ಯಕಶಿಪುವು ತಾತ್ಕಾಲಿಕವಾಗಿ ಹರಿಯೊಡನೆ ಹಗೆತನವನ್ನು ಬಿಟ್ಟು ಶಾಂತಚಿತ್ತನಾದನು.

ಪ್ರಹ್ಲಾದನ ಮಗನಾದ ಮತ್ತು ನಿನ್ನ ತಂದೆಯಾದ ವಿರೋಚನನೂ

ಬ್ರಾಹ್ಮಣಪ್ರಿಯನು. ಒಮ್ಮೆ ಬ್ರಾಹ್ಮಣವೇಷವನ್ನು ಧರಿಸಿದ ದೇವತೆಗಳು ಅವನ ಆಯುಷ್ಯವನ್ನು ಯಾಚಿಸಲು ಬಂದರು. ದೇವತೆಗಳು ಬ್ರಾಹ್ಮಣರ ವೇಷದಿಂದ ಬಂದಿರುವರೆಂಬುದನ್ನು ತಿಳಿದರೂ ವಿರೋಚನನು ಬ್ರಾಹ್ಮಣ ಭಕ್ತನಾಗಿದ್ದುದರಿಂದ ಬೇಡಲು ಬಂದ ಬ್ರಾಹ್ಮಣವೇಷಧಾರಿಗಳಾದ ದೇವತೆಗಳಿಗೆ ತನ್ನ ಆಯುಷ್ಯವನ್ನು ದಾನಮಾಡಿದನು. ನಿನ್ನ ಪೂರ್ವಜರಂತೆಯೇ ನೀನೂ ಕೂಡ ಶುಕ್ರಾಚಾರ್ಯರೇ ಮೊದಲಾದ ಗೃಹಸ್ಥಬ್ರಾಹ್ಮಣರು ಆಚರಿಸುವ ಧರ್ಮಗಳನ್ನೂ, ನಿನ್ನ ಪೂರ್ವಜರಾದ ಪ್ರಹ್ಲಾದನೇ ಮೊದಲಾದ ಯಶೋವಂತರಾದ ದಾನವವೀರರು ಆಚರಿಸಿದ ಧರ್ಮಗಳನ್ನೂ ಆಚರಿಸುತ್ತಿರುವೆ. ನೀನು ವರಕೊಡುವವರಲ್ಲಿ ಶ್ರೇಷ್ಠನಾಗಿರುವೆ. ಅಂತಹ ಮಹಾದಾನಿಯಾದ ನಿನ್ನಿಂದ ಸ್ವಲ್ಪವೇ ಸ್ವಲ್ಪ ಭೂಮಿಯನ್ನು ಯಾಚಿಸಿ ಪಡೆಯಲು ಬಂದಿರುತ್ತೇನೆ. ನನಗೆ ಬೇಕಾಗಿರುವುದು ನನ್ನ ಪಾದದಳತೆಯ ಮೂರು ಹೆಜ್ಜೆಗಳಷ್ಟು ಭೂಮಿ. ಇಷ್ಟನ್ನು ನೀನು ನನಗೆ ಕೊಟ್ಟರೆ ಸಾಕು.

ಮಹಾರಾಜ! ನೀನು ಮೂರು ಲೋಕಗಳಿಗೂ ಚಕ್ರವರ್ತಿಯಾಗಿರುವೆ. ಅತ್ಯಂತ ಉದಾರಿಯೂ ಆಗಿರುವೆ. ಆದರೂ ನನಗೆ ಬೇಕಾಗಿರುವಷ್ಟನ್ನು ಮಾತ್ರವೇ ನಿನ್ನಿಂದ ಯಾಚಿಸುತ್ತೇನೆ. ವಿದ್ವಾಂಸರಾದವರು ತಮ್ಮ ಅವಶ್ಯಕತೆಗೆ ಬೇಕಾದಷ್ಟನ್ನು ಮಾತ್ರವೇ ದಾನವಾಗಿ ಪ್ರತಿಗ್ರಹಿಸಬೇಕು. ಹೀಗೆ ಮಾಡಿದರೆ ಅವರು ಪ್ರತಿಗ್ರಹದೋಷದಿಂದ ಮುಕ್ತರಾಗುತ್ತಾರೆ.” (ಶ್ಲೋಕ 14-17)

ಬಾಲವಟುವಿನ ಮಾತನ್ನು ಕೇಳಿ ಬಲಿಯು ಹೇಳುತ್ತಾನೆ :

“ಬ್ರಾಹ್ಮಣಕುಮಾರ! ನಿನ್ನ ಮಾತುಗಳೇನೋ ವೃದ್ಧರಾದವರೂ ಅನುಮೋದಿಸುವಂತಹವುಗಳು. ಆದರೂ ನೀನು ಹುಡುಗನಾದುದರಿಂದ ಸ್ವಕಾರ್ಯದ ಸಾಧನೆಯ ವಿಷಯದಲ್ಲಿ ಮೂಢನಂತೆಯೇ ವರ್ತಿಸುತ್ತಿರುವೆ. ಮೂರು ಲೋಕಗಳಿಗೂ ಏಕೈಕಸ್ವಾಮಿಯಾದ, ಒಂದು ದ್ವೀಪವನ್ನೇ ಬೇಕಾದರೂ ದಾನವಾಗಿ ಕೊಡುವ ಸಾಮರ್ಥ್ಯವುಳ್ಳ ನನ್ನನ್ನು ಸುಮಧುರವಾದ ಮಾತುಗಳಿಂದ ಸಂತೋಷಗೊಳಿಸಿ, ಕೇವಲ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಬಯಸಿರುವ ನೀನು ನಿಶ್ಚಯವಾಗಿಯೂ ಮೂಢನೇ ಸರಿ.

ಬಾಲಬ್ರಹ್ಮಚಾರಿಯೇ! ಯಾವನೇ ಆಗಲೀ–ನನ್ನನ್ನು ಯಾಚಿಸಲು ಬಂದ ಮೇಲೆ ಅವನು ಮತ್ತೆಲ್ಲಿಗೂ ಪುನಃ ಯಾಚಿಸಲು ಹೋಗಬಾರದು. ಇದು ನನ್ನ ಅಭಿಮತವಾಗಿದೆ. ಆದುದರಿಂದ ನಿನ್ನ ಜೀವಿಕೆಗೆ ಬೇಕಾದಷ್ಟಾದರೂ ಫಲವತ್ತಾದ ಭೂಮಿಯನ್ನು ನನ್ನಿಂದ ಪ್ರತಿಗ್ರಹಿಸು."

(ಶ್ಲೋಕ 18-20)

ಶ್ರೀವಾಮನಮೂರ್ತಿಯು ಹೇಳುತ್ತಾನೆ :

ಯಾವನ್ತೋ ವಿಷಯಾಃ ಪ್ರೇಷ್ಠಾ-
ಸ್ತ್ರಿಲೋಕ್ಯಾಮಜಿತೇನ್ದ್ರಿಯಮ್ ।
ನ ಶಕ್ನುವನ್ತಿ ತೇ ಸರ್ವೇ
ಪ್ರತಿಪೂರಯಿತುಂ ನೃಪ ॥೨೧॥

"ಮಹಾರಾಜ! ಮೂರುಲೋಕಗಳಲ್ಲಿಯೂ ಮನುಷ್ಯನಿಗೆ ಇಷ್ಟವಾದ, ಮನುಷ್ಯನು ಉಪಭೋಗಿಸಲು ಯೋಗ್ಯವಾದ ವಿಷಯಸುಖಗಳು ಎಷ್ಟಿವೆಯೋ ಅವಷ್ಟೂ ಸೇರಿ ದೊರೆತರೂ ಜಿತೇಂದ್ರಿಯನಲ್ಲದ ಒಬ್ಬ ಮನುಷ್ಯನನ್ನು ತೃಪ್ತಿಪಡಿಸಲಾರವು.

ತ್ರಿಭಿಃ ಕ್ರಮೈರಸನ್ತುಷ್ಟೋ ದ್ವೀಪೇನಾಪಿ ನ ಪೂರ್ಯತೇ ।
ನವವರ್ಷಸಮೇತೇನ ಸಪ್ತದ್ವೀಪವರೇಚ್ಛಯಾ ॥೨೨॥

ಮೂರು ಹೆಜ್ಜೆ ಭೂಮಿಯಿಂದ ಯಾವನಿಗೆ ತೃಪ್ತಿಯಾಗುವುದಿಲ್ಲವೋ ಅವನಿಗೆ ಒಂದು ದ್ವೀಪವನ್ನೇ ದಾನವಾಗಿ ಪಡೆದರೂ ತೃಪ್ತಿಯುಂಟಾಗುವುದಿಲ್ಲ. ಅವನಿಗೆ * ಒಂಬತ್ತು ವರ್ಷಗಳಿಂದ ಕೂಡಿದ ಸಪ್ತದ್ವೀಪಗಳನ್ನೂ

---

* ಒಂಬತ್ತು ವರ್ಷಗಳೆಂದರೆ ಒಂಬತ್ತು ಪ್ರದೇಶಗಳು. ಒಂದೊಂದು ದ್ವೀಪಕ್ಕೂ ಇಂತಹ ಒಂಬತ್ತೊಂಬತ್ತು ಪ್ರದೇಶಗಳಿರುತ್ತವೆ. ಜಂಬೂದ್ವೀಪದ ಒಂಬತ್ತು ವರ್ಷಗಳು ಹೀಗಿವೆ. ತುರು, ಹಿರಣ್ಮಯ, ರಮ್ಯಕ, ಇಲಾವೃತ, ಹರಿ, ಕೇತುಮಾಲ, ಭದ್ರಾಶ್ವ, ಕಿನ್ನರ ಮತ್ತು ಭಾರತ. ನಾವು ಜಂಬೂದ್ವೀಪದ ಭಾರತವರ್ಷದಲ್ಲಿದ್ದೇವೆ. ಸಪ್ತದ್ವೀಪಗಳು ; ಜಂಬೂದ್ವೀಪ, ಶಾಕದ್ವೀಪ, ಶಾಲ್ಮಲಿದ್ವೀಪ, ಕುಶದ್ವೀಪ, ಕ್ರೌಂಚದ್ವೀಪ, ಗೋಮೇಧಕ (ಪ್ಲಕ್ಷ) ದ್ವೀಪ ಮತ್ತು ಪುಷ್ಕರದ್ವೀಪ. ಜಮ್ಬು ಪ್ಲಕ್ಷಾಹ್ವಯೌ ದ್ವೀಪೌ ಶಾಲ್ಮಲಿಶ್ಚಾಪರೋ ದ್ವಿಜ। **ಕುಶಃ ಕ್ರೌಂಚಸ್ತಥಾ ಶಾಕಃ ಪುಷ್ಕರಶ್ಚೈವ ಸಪ್ತಮಃ ॥**

ಪಡೆದುಕೊಳ್ಳುವ ಆಸೆಯುಂಟಾಗುತ್ತದೆ. ಆಸೆಗೆ ಇತಿ-ಮಿತಿಗಳೇ ಇಲ್ಲ. ಪೃಥು, ಗಯ ಇವರೇ ಮೊದಲಾದ ರಾಜರು ಏಳು ದ್ವೀಪಗಳಿಗೂ ಅಧಿಪತಿಗಳಾಗಿದ್ದರೂ ಧನ-ಧಾನ್ಯಸಂಪತ್ತಿಗಳಿಂದಲೂ, ಭೋಗಸಾಮಗ್ರಿಗಳಿಂದಲೂ ಸಂಪನ್ನರಾಗಿದ್ದರೂ ಅವರಿಗೆ ಅರ್ಥ-ಕಾಮಗಳ ವಿಷಯದಲ್ಲಿ ತೃಷ್ಣೆಯ ಪಾರವನ್ನು ಕಾಣಲು ಸಾಧ್ಯವಾಗಲಿಲ್ಲವೆಂಬುದನ್ನು ನಾವು ಕೇಳಿದ್ದೇವೆ.

ಯದೃಚ್ಛಯೋಪಪನ್ನೇನ ಸಂತುಷ್ಟೋ ವರ್ತತೇ ಸುಖಮ್ ।
ನಾಸಂತುಷ್ಟಸ್ತ್ರಿಭಿರ್ಲೋಕೈರಜಿತಾತ್ಮೋಪಸಾದಿತೈಃ ॥೨೪॥

ತಾನೇ ತಾನಾಗಿ ದೈವೇಚ್ಛೆಯಿಂದ ಲಭಿಸಿದ ಧನ-ಧಾನ್ಯಗಳಿಂದ ಯಾವನು ಸಂತುಷ್ಟನಾಗುವನೋ ಅಂತಹವನು ತನ್ನ ಜೀವನವನ್ನು ಸುಖವಾಗಿ ಕಳೆಯುತ್ತಾನೆ. ಆದರೆ ಜಿತೇಂದ್ರಿಯನಲ್ಲದವನು ಮೂರು ಲೋಕಗಳ ಆಧಿಪತ್ಯವನ್ನೇ ಪಡೆದುಕೊಂಡರೂ ದುಃಖಿಯಾಗಿಯೇ ಇರುತ್ತಾನೆ. ಏಕೆಂದರೆ ಅವನ ಹೃದಯದಲ್ಲಿ ಅತೃಪ್ತಿಯೆಂಬ ಅಗ್ನಿಯು ಧಗ-ಧಗಿಸುತ್ತಿರುತ್ತದೆ.

ಪುಂಸೋಽಯಂ ಸಂಸೃತೇರ್ಹೇತು-
ರಸಂತೋಷೋಽರ್ಥಕಾಮಯೋಃ ।
ಯದೃಚ್ಛಯೋಪಪನ್ನೇನ
ಸಂತೋಷೋ ಮುಕ್ತಯೇ ಸ್ಮೃತಃ ॥೨೫॥

ಅರ್ಥ-ಕಾಮಗಳಲ್ಲಿ ತೃಪ್ತಿಯಿಲ್ಲದಿರುವುದೇ ಮನುಷ್ಯನ ಹಲವಾರು ಬಗೆಯ ಹುಟ್ಟು-ಸಾವುಗಳಿಗೆ ಕಾರಣವಾಗಿರುತ್ತದೆ. ಕಾಮ್ಯಕವಾದ ಆಸೆಗಳನ್ನು ತೀರಿಸಿಕೊಳ್ಳಲು ಜೀವನು ಹಲವಾರು ಜನ್ಮಗಳನ್ನು ಎತ್ತಬೇಕಾಗುತ್ತದೆ. ಅದು ಮುಗಿಯದೇ–ತೀರದೇ ಇರುವ ಆಸೆಯೇ ಆಗುತ್ತದೆ. ಸಂಸಾರಬಂಧನವು ಲಕ್ಷ-ಲಕ್ಷ ಜನ್ಮಗಳನ್ನೆತ್ತಿದರೂ ಬಿಡುವುದೇ ಇಲ್ಲ. ಆದರೆ ದೈವೇಚ್ಛೆಯಿಂದ ದೊರಕಿದುದಕ್ಕೆ ಯಾವನು ಸಂತೋಷಪಡುವನೋ, ತೃಪ್ತಿಪಡುವನೋ– ಅಂತಹವನಿಗೆ ಈ ತೃಪ್ತಿಯೆಂಬುದೇ ಮೋಕ್ಷಕ್ಕೆ ಕಾರಣವಾಗುತ್ತದೆ.

ಯದೃಚ್ಛಾಲಾಭತುಷ್ಟಸ್ಯ ತೇಜೋ ವಿಪ್ರಸ್ಯ ವರ್ಧತೇ ।
ತತ್ಪ್ರಶಾಮ್ಯತ್ಯಸಂತೋಷಾದಮ್ಭಸೇವಾಶುಶುಕ್ಷಣಿಃ ॥೨೬॥

ಯಾವ ಬ್ರಾಹ್ಮಣನು ದೈವೇಚ್ಛೆಯಿಂದ ಸಿಕ್ಕಿದ ಅರ್ಥ-ಕಾಮಗಳಿಂದಲೇ ತೃಪ್ತನಾಗುವನೋ ಅಂತಹ ಬ್ರಾಹ್ಮಣನ ತೇಜಸ್ಸು ವೃದ್ಧಿಸುತ್ತದೆ. ಅದೇ ಬ್ರಾಹ್ಮಣನು ಅರ್ಥ-ಕಾಮವಿಷಯಗಳಲ್ಲಿ ಅಸಂತುಷ್ಟನಾಗಿದ್ದರೆ–ನೀರಿನಿಂದ ಅಗ್ನಿಯು ಶಾಂತವಾಗಿಬಿಡುವಂತೆ–ತೃಷ್ಣೆಯೆಂಬ ನೀರಿನಿಂದ ಅವನ ತೇಜಸ್ಸು ಕುಂದಿಹೋಗುತ್ತದೆ.

ವರದರ್ಷಭನೇ! ನೀನು ದಾನಕೊಡುವವರಲ್ಲಿ ಶ್ರೇಷ್ಠನಾಗಿರುವೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಧನವು ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಸಂಗ್ರಹಿಸಬೇಕು. '**ವಿತ್ತಂ ಯಾವತ್ಪ್ರಯೋಜನಮ್**' ಆದುದರಿಂದ ಕೇವಲ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಮಾತ್ರವೇ ನಾನು ನಿನ್ನಿಂದ ಪಡೆದುಕೊಳ್ಳಲು ಬಯಸಿದ್ದೇನೆ. ಇದರಿಂದಲೇ ನನಗೆ ಕಾರ್ಯದ ಸಿದ್ಧಿಯಾಗುತ್ತದೆ. ಆದುದರಿಂದ ನಾನು ಕೇಳಿರುವಷ್ಟು ಭೂಮಿಯನ್ನು ಮಾತ್ರವೇ ನನಗೆ ದಾನವಾಗಿ ಕೊಡು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಶ್ರೀವಾಮನಮೂರ್ತಿಯು ಹೀಗೆ ಹೇಳಲು ಬಲಿಯು ಗಹಗಹಿಸಿ ನಗುತ್ತಾ ಹೇಳಿದನು :

'**ವಾಂಛಿತಂ ಪ್ರತಿಗೃಹ್ಯತಾಮ್**' 'ಬ್ರಾಹ್ಮಣವಟುವೇ! ನೀನು ಅಪೇಕ್ಷಿಸಿರುವಷ್ಟನ್ನೇ ತೆಗೆದುಕೊಳ್ಳಬಹುದು'–ಎಂದು ಹೇಳಿ ವಾಮನನಿಗೆ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ವಿಧಿವತ್ತಾಗಿ ದಾನಕೊಡುವ ಸಲುವಾಗಿ ಜಲಪಾತ್ರೆಯನ್ನು ಕೈಗೆತ್ತಿಕೊಂಡನು. ವಿಷ್ಣುವಿಗೆ ಮೂರು ಅಡಿಗಳಷ್ಟು ಭೂದಾನವನ್ನು ಕೊಡಲು ಬಲಿಯು ಉದ್ಯುಕ್ತನಾದುದನ್ನು ನೋಡಿ ನೀತಿಜ್ಞರಲ್ಲಿ ಶ್ರೇಷ್ಠರಾದ ಶುಕ್ರಾಚಾರ್ಯರು ಮಹಾವಿಷ್ಣುವಿನ ಆಶಯವನ್ನು ತಿಳಿದವರಾಗಿ ತನ್ನ ಶಿಷ್ಯನಾದ ಬಲಿಗೆ ಹೇಳಿದರು :

"ವಿರೋಚನನ ಪುತ್ರನಾದ ಬಲಿಯೇ! ಈ ವಟುವು ಅವಿನಾಶಿಯಾದ ಸ್ವಯಂ ಮಹಾವಿಷ್ಣುವೇ ಆಗಿರುತ್ತಾನೆ. ಕಶ್ಯಪನಿಂದ ಅದಿತಿಯ ಗರ್ಭದಲ್ಲಿ ಜನಿಸಿರುವ ಈ ವಾಮನಮೂರ್ತಿಯು ದೇವತೆಗಳ ಕಾರ್ಯಸಾಧಕನಾಗಿ ಬಂದಿದ್ದಾನೆ. ಇವನು ನಿನ್ನಲ್ಲಿರುವ ಸಮಸ್ತರಾಜ್ಯಕೋಶಾದಿಗಳನ್ನೂ

ಅಪಹರಿಸಿಕೊಂಡು ಕೇಡನ್ನುಂಟುಮಾಡುವನೆಂಬುದನ್ನು ನೀನು ಅರಿಯದೆ ಇವನಿಗೆ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿರುವೆ. ಇದರಿಂದ ಸಕಲದೈತ್ಯರಿಗೂ ಅಪಾರವಾದ ವಿಪತ್ತು ಸಂಭವಿಸು ತ್ತದೆ. ಆದುದರಿಂದ ನಿನ್ನ ಕಾರ್ಯವು ಸಾಧುವಾಗಿದೆಯೆಂದು ನಾನು ಭಾವಿಸುವುದಿಲ್ಲ. ಸ್ವಯಂ ಭಗವಂತನೇ ತನ್ನ ಯೋಗಮಾಯೆಯಿಂದ ಬಾಲಬ್ರಹ್ಮಚಾರಿಯಾಗಿ ನಿನ್ನ ಮುಂದೆ ಕುಳಿತಿದ್ದಾನೆ. ಇವನು ನಿನ್ನ ರಾಜ್ಯ, ಐಶ್ವರ್ಯ, ಸಂಪತ್ತು, ತೇಜಸ್ಸು, ಪರಾಕ್ರಮ, ವಿಶ್ವವಿಖ್ಯಾತವಾದ ನಿನ್ನ ಕೀರ್ತಿ–ಇವೆಲ್ಲವನ್ನೂ ನಿನ್ನಿಂದ ಅಪಹರಿಸಿ ಇಂದ್ರನಿಗೆ ಕೊಟ್ಟುಬಿಡುತ್ತಾನೆ. ಇವನು ವಿಶ್ವರೂಪನಾಗಿದ್ದಾನೆ. ತನ್ನ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನೂ ಅಳೆದುಬಿಡುತ್ತಾನೆ.

ಮೂರ್ಖನೇ! ಆ ಸಮಯದಲ್ಲಿ ಸರ್ವಸ್ವವನ್ನೂ ವಿಷ್ಣುವಿಗೇ ಕೊಡಬೇಕಾಗುತ್ತದೆ. ಆಗ ನೀನು ನಿನ್ನ ಜೀವನವನ್ನು ಹೇಗೆತಾನೇ ನಿರ್ವಹಿಸುವೆ? ಜಗತ್ಸ್ವರೂಪವಾದ ದೊಡ್ಡ ಶರೀರವನ್ನೇ ಕಲ್ಪಿಸಿಕೊಂಡು ಒಂದು ಹೆಜ್ಜೆಯಿಂದ ಭೂಮಿಯನ್ನೂ, ಎರಡನೆಯ ಹೆಜ್ಜೆಯಿಂದ ಸ್ವರ್ಗವನ್ನೂ ಮತ್ತು ಆಕಾಶವನ್ನೂ ಆಕ್ರಮಿಸಿದನಂತರ ಮಹಾವಿಷ್ಣುವಿಗೆ ಮೂರನೆಯ ಹೆಜ್ಜೆಯನ್ನಿಡಲು ಅವಕಾಶವೆಲ್ಲಿದೆ? ಆಗ ನಿನಗೆ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಕೊಡಲು ಸಾಧ್ಯವೇ ಆಗುವುದಿಲ್ಲ. ಆ ಸ್ಥಿತಿಯಲ್ಲಿ ನೀನು ನಿನ್ನ ಪ್ರತಿಜ್ಞೆಯನ್ನೂ ಪೂರೈಸಿಕೊಡಲಾಗದೆ ಪ್ರತಿಜ್ಞಾ ಭಂಗದ ಪಾಪಕ್ಕಾಗಿ ನರಕವಾಸಮಾಡಬೇಕಾಗಬಹುದೆಂದು ನಾನು ಭಾವಿಸುತ್ತೇನೆ.

(ಶ್ಲೋಕ 27-35)

ನ ತದ್ದಾನಂ ಪ್ರಶಂಸನ್ತಿ ಯೇನ ವೃತ್ತಿರ್ವಿಪದ್ಯತೇ ।
ದಾನಂ ಯಜ್ಞಸ್ತಪಃ ಕರ್ಮ ಲೋಕೇ ವೃತ್ತಿಮತೋ ಯತಃ ॥೩೬॥

ಯಾವ ದಾನದಿಂದ, ದಾನಮಾಡಿದನಂತರ ಜೀವನನಿರ್ವಹಣೆಗೂ ಯಾವುದೂ ಉಳಿದಿರುವುದಿಲ್ಲವೋ, ಯಾಚಕನ ಸ್ಥಾನವನ್ನು ತಾನೇ ಹೊಂದ ಬೇಕಾಗುವುದೋ, ಅಂತಹ ದಾನವನ್ನು ವಿದ್ವಾಂಸರು ಪ್ರಶಂಸಿಸುವುದಿಲ್ಲ. ಯಾವನು ಜೀವನವನ್ನು ಸರಿಯಾಗಿ ನಿರ್ವಹಿಸಬಲ್ಲನೋ ಅಂತಹವನು ದಾನ, ಯಜ್ಞ, ತಪಸ್ಸು, ಪರೋಪಕಾರ–ಇತ್ಯಾದಿಗಳನ್ನು ಮಾಡಬಲ್ಲನು.

ಧರ್ಮಾಯ ಯಶಸೇಽರ್ಥಾಯ ಕಾಮಾಯ ಸ್ವಜನಾಯ ಚ ।
ಪಞ್ಚಧಾ ವಿಭಜನ್ವಿತ್ತಮಿಹಾಮುತ್ರ ಚ ಮೋದತೇ ॥೩೭॥

ಯಾವನು ತನ್ನಲ್ಲಿರುವ ಸಂಪತ್ತನ್ನು ಧರ್ಮ, ಯಶಸ್ಸು, ಅರ್ಥ, ಕಾಮ ಮತ್ತು ಸ್ವಜನರು ಈ ಐದು ಕಾರಣಗಳಿಗಾಗಿ ವಿಭಜಿಸಿ ಕೊಡುವನೋ ಅಂತಹವನು ಇಹ-ಪರಗಳೆರಡರಲ್ಲಿಯೂ ಆನಂದವಾಗಿರುತ್ತಾನೆ. ಮಾತು ಕೊಟ್ಟು ತಪ್ಪುವುದೆಂತು?–ಎಂಬ ಧರ್ಮಸಂಕಟವೂ ನಿನ್ನ ಮನಸ್ಸಿನಲ್ಲಿ ಉಂಟಾಗಬಹುದು. ಸತ್ಯಾನೃತಗಳ ವಿಷಯವಾಗಿ ಋಗ್ವೇದದಲ್ಲಿ ಹೇಳಿರುವುದನ್ನು ಉಲ್ಲೇಖಿಸುವೆನು. ಕೇಳು :*

ಸತ್ಯಮೋಮಿತಿ ಯತ್ಪ್ರೋಕ್ತಂ ಯನ್ನೇತ್ಯಾಹಾನೃತಂ ಹಿ ತತ್ ।
ಸತ್ಯಂ ಪುಷ್ಪಫಲಂ ವಿದ್ಯಾದಾತ್ಮವೃಕ್ಷಸ್ಯ ಗೀಯತೇ ।
ವೃಕ್ಷೇಽಜೀವತಿ ತನ್ನ ಸ್ಯಾದನೃತಂ ಮೂಲಮಾತ್ಮನಃ ॥೩೮॥

ಯಾರಿಗಾದರೂ ಏನಾದರೂ ಮಾಡುತ್ತೇನೆ. 'ಓಂ'–ಎಂದು ಹೇಳುವುದೇ ಸತ್ಯವು. ಹೀಗೆ ಹೇಳಿದನಂತರ 'ನ' ಕೊಡುವುದಿಲ್ಲ–ಎಂದು ಹೇಳುವುದು ಅಸತ್ಯ ಅಥವಾ ಅನೃತವಾಗುತ್ತದೆ. ಸುಳ್ಳಾಗುತ್ತದೆ. ಈ ಶರೀರವು ಒಂದು ವೃಕ್ಷವಾಗಿದೆ. ಸತ್ಯವು ಈ ಶರೀರವೃಕ್ಷದ ಫಲ-ಪುಷ್ಪವಾಗಿದೆ. ಆದರೆ ವೃಕ್ಷವೇ ಇಲ್ಲದಿದ್ದರೆ (ದೇಹವೇ ಇಲ್ಲದಿದ್ದರೆ) ಫಲ-ಪುಷ್ಪಗಳು ಹುಟ್ಟಲು ತಾನೇ ಹೇಗೆ ಸಾಧ್ಯವಾಗುತ್ತದೆ? ನಕಾರದ ಅರ್ಥ ಅಥವಾ

---

* ಓಮಿತಿ ಸತ್ಯಂ ನೇತ್ಯನೃತಂ ತದೇತತ್ಪುಷ್ಪಂ ಫಲಂ ವಾಚೋ ಯತ್ಸತ್ಯಂ ಸಹೇಶ್ವರೋ ಯಶಸ್ವೀ ಕಲ್ಯಾಣಕೀರ್ತಿರ್ಭವಿತಾ । ಪುಷ್ಪಂ ಹಿ ಫಲಂ ವಾಚಃ ಸತ್ಯಂ ತದೇತ್ಯೈತನ್ಮೂಲಂ ವಾಚೋ ಯದನೃತಮ್ । ತದ್ಯಥಾ ವೃಕ್ಷ ಆವಿರ್ಮೂಲಃ ಶುಷ್ಯತಿ। ಸ ಉದ್ವರ್ತತೇ ಏವಮೇವಾನೃತಂ ವದನ್ನಾವಿರ್ಮೂಲಮಾತ್ಮಾನಂ ಕರೋತಿ । ಸ ಶುಷ್ಯತಿ ಉದ್ವರ್ತತೇ । ತಸ್ಮಾದನೃತಂ ನವದೇದ್ದಯೇ ತತ್ತ್ವೇತೇನ ।

(ಭಾವಾರ್ಥದೀಪಿಕಾ)

ಪರಗ್ವಾ ವಾತದ್ರಿಕ್ತಮಕ್ಷರಂ ಯತ್ತರೋಮಿತಿ । ನ ಯತ್ಸರ್ವಮೋಂ ಕುರ್ಯಾತ್ಸ ಆತ್ಮಾನಂ ಸಕಾಮೇಭ್ಯೋ ನಾಲಂ ಸ್ಯಾತ್ । ಅಥೈತತ್ಪೂರ್ಣಮಧ್ಯಾತ್ಮಂ ಯನ್ನೇತಿ ತತ್ಸರ್ವಂ ನೇತಿಬ್ರೂಯಾದ್ವಾ ಪಾಪಿಕಾಸ್ಯ ಕೀರ್ತಿರ್ಜಾಯೇತ ಸ್ವೇನಂ ತತ್ರೈವ ಹನ್ಯಾತ್। (ವೀರರಾಘವೀಯ)

ಅನೃತದ ಅರ್ಥವೇನೆಂದರೆ ತನ್ನಲ್ಲಿರುವ ವಸ್ತುಗಳನ್ನು ಇತರರಿಗೆ ಕೊಡದೇ ಇರುವುದು. ಮತ್ತೊಂದು ಪರ್ಯಾಯದಲ್ಲಿ ತಾನು ಸಂಗ್ರಹಿಸಿರುವುದನ್ನು ತನಗಾಗಿಯೇ ಇಟ್ಟುಕೊಳ್ಳುವುದು–ಇದು ಶರೀರವೃಕ್ಷದ ಮೂಲವಾಗಿದೆ. ಆದುದರಿಂದ ಬೇರನ್ನು ಕತ್ತರಿಸಿಹಾಕಿದನಂತರ ವೃಕ್ಷವು ಬಹಳ ಬೇಗ ಒಣಗಿಹೋಗುವಂತೆ ಸುಳ್ಳಿಲ್ಲದ (ಸ್ವಾರ್ಥಹೀನವಾದ) ಶರೀರವು ಬಹಳ ಬೇಗ ನಾಶಹೊಂದುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಸತ್ಯದಲ್ಲಿರುವ ದೋಷಗಳನ್ನೂ ಅನೃತದಲ್ಲಿರುವ ಗುಣಗಳನ್ನೂ ಹೇಳುವೆನು ; ಕೇಳು : 'ಓಂ' ಎಂಬ ಪ್ರಣವವು ತನ್ನ ಸರ್ವಸ್ವವನ್ನೂ ಪರರಿಗಾಗಿ ವಿಭಾಗಿಸಿಕೊಡಲ್ಪಡಬೇಕೆಂಬ ಅರ್ಥವನ್ನು ಕೊಡುವುದರಿಂದ ಅದು ಪೂರ್ಣವಾಗುವುದಿಲ್ಲ. ಎಲ್ಲವನ್ನೂ ಕೊಟ್ಟಲ್ಲಿ ದಾನಿಯು ಜೀವನಕ್ಕಿಲ್ಲದೇ ಸಾಯಬೇಕಾಗುವುದರಿಂದ ಆ ದಾನವೂ ಸಫಲವಾಗುವುದಿಲ್ಲ. ಆದುದರಿಂದ ದಾನಿಯು ಯತ್ಕಿಂಚಿತ್ 'ಓಂ' ದಾನ ಕೊಡುವುದಾಗಿ ಹೇಳಬೇಕು. ಇದರಿಂದ ದಾನಿಯು ನಾಶ ಹೊಂದುವುದಿಲ್ಲ. ಬೇಡಿದವರಿಗೆ ತನ್ನ ಸರ್ವಸ್ವವನ್ನೂ ಕೊಡುವೆನೆಂದು ಹೇಳುವವನು ತನ್ನ ಅಪೇಕ್ಷೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದೆ ಸಂಕಟಪಡಬೇಕಾಗುವುದು. ಆದುದರಿಂದ 'ನ' ಇಲ್ಲ, ಕೊಡುವುದಿಲ್ಲ– ಎಂದು ಹೇಳುವ ಸಟೆಯು ತನ್ನ ಧನವನ್ನು ಸುರಕ್ಷಿತವಾಗಿಡುತ್ತದೆ ಮತ್ತು ತನಗೆ ಪೂರ್ಣಸುಖಕರವಾಗಿಯೂ ಇರುತ್ತದೆ. ಆದರೆ ಹೇಗೆ 'ಸರ್ವಸ್ವವನ್ನೂ ಕೊಡುತ್ತೇನೆ'–ಎಂಬುದು ಜೀವನಾಶಕವೋ ಹಾಗೆಯೇ 'ಸರ್ವಂ ನ' 'ಏನನ್ನೂ ಕೊಡುವುದಿಲ್ಲ'–ಎಂದು ಹೇಳುವುದೂ ಕೀರ್ತಿನಾಶಕವಾಗುತ್ತದೆ. **ದುಷ್ಕೀರ್ತಿಃ ಶ್ವಸನ್ಮೃತಃ** ದುಷ್ಕೀರ್ತಿಯನ್ನು ಸಂಪಾದಿಸಿದವನು ಉಸಿರಾಡುತ್ತಿದ್ದರೂ ಸತ್ತವನಂತೆಯೇ ಸರಿ. ಹೀಗೆ ಜೀವನನಿರ್ವಹಣೆಗಾಗಿ ಸ್ವಲ್ಪ ಸುಳ್ಳನ್ನು ಅವಲಂಬಿಸಲೇಬೇಕಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಸುಳ್ಳುಹೇಳುವುದನ್ನು ನಿಂದಿತವೆಂದು ವಿದ್ವಾಂಸರು ಭಾವಿಸುವುದಿಲ್ಲ. (ಶ್ಲೋಕ 40-42)

ಸ್ತ್ರೀಷು ನರ್ಮವಿವಾಹೇ ಚ ವೃತ್ತ್ಯರ್ಥೇ ಪ್ರಾಣಸಂಕಟೇ ।
ಗೋಬ್ರಾಹ್ಮಣಾರ್ಥೇ ಹಿಂಸಾಯಾಂ ನಾನೃತಂ ಸ್ಯಾಜ್ಜುಗುಪ್ಸಿತಮ್ ॥

ಸ್ತ್ರೀಯರನ್ನು ಪ್ರಸನ್ನಗೊಳಿಸುವುದಕ್ಕಾಗಿ, ಪರಿಹಾಸ್ಯಮಾಡುವಾಗ, ಮದುವೆಯ ವಿಷಯದಲ್ಲಿ, ತನ್ನ ಜೀವನದ ರಕ್ಷಣೆಗಾಗಿ, ಪ್ರಾಣಸಂಕಟವು ಸನ್ನಿಹಿತವಾಗಿರುವಾಗ, ಗೋ-ಬ್ರಾಹ್ಮಣರ ಹಿತಾರ್ಥವಾಗಿ ಅಥವಾ ಯಾರ ನ್ನಾದರೂ ಮೃತ್ಯುವಿನಿಂದ ಪಾರುಮಾಡಬೇಕಾಗಿ ಬಂದ ಸಮಯದಲ್ಲಿ ಸುಳ್ಳನ್ನು ಹೇಳಬೇಕಾಗಿ ಬಂದರೂ ಅದು ನಿಂದನೀಯವಲ್ಲ."*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಅಷ್ಟಮಸ್ಕಂಧದ ೧೯ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೨೦ನೆಯ ಅಧ್ಯಾಯ

ಶ್ರೀವಾಮನಮೂರ್ತಿಯು ವಿರಾಡ್ರೂಪಧರನಾಗಿ ಎರಡು ಹೆಜ್ಜೆಗಳಿಂದ ಭೂಮಿಯನ್ನೂ ಮತ್ತು ಸ್ವರ್ಗವನ್ನೂ ಅಳೆದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಬಲಿರೇವಂ ಗೃಹಪತಿಃ ಕುಲಾಚಾರ್ಯೇಣ ಭಾಷಿತಃ ।
ತೂಷ್ಣೀಂ ಭೂತ್ವಾ ಕ್ಷಣಂ ರಾಜನ್ನುವಾಚಾವಹಿತೋ ಗುರುಮ್ ॥೧॥

ಪರೀಕ್ಷಿತನೇ! ಕುಲಗುರುಗಳಾದ ಶುಕ್ರಾಚಾರ್ಯರು ಹೀಗೆ ಹೇಳಲು ಯಜಮಾನನಾದ ಬಲಿಯು ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ವಿನಮ್ರನಾಗಿ ಶುಕ್ರಾಚಾರ್ಯರಿಗೆ ಈ ಮಾತನ್ನು ಹೇಳಿದನು :

"ಪೂಜ್ಯರೇ! ಯಾವ ಧರ್ಮವನ್ನಾಚರಿಸಿದಲ್ಲಿ ಗೃಹಸ್ಥರ ಅರ್ಥ, ಕಾಮ, ಯಶಸ್ಸು, ಜೀವಿಕೆ ಇತ್ಯಾದಿಗಳಿಗೆ ಬಾಧೆಯುಂಟಾಗುವುದಿಲ್ಲವೋ ಅಂತಹ ಧರ್ಮವನ್ನೇ ತಾವು ಉಪದೇಶಿಸಿರುತ್ತೀರಿ. ಇದರಲ್ಲಿ ಸಂಶಯವೇ

* ಪ್ರಪಂಚದಲ್ಲಿರುವ ಸಕಲವಸ್ತುಗಳೂ ಪರಮಾತ್ಮನಿಗೆ ಸೇರಿದುವುಗಳು. ತನ್ನದಲ್ಲ ದಿರುವುದನ್ನು 'ತನ್ನದು' ಎಂದು ಹೇಳಿಕೊಳ್ಳುವುದೇ ಅನೃತ ಅಥವಾ ಸುಳ್ಳು. ಈ ಸುಳ್ಳನ್ನೇ ಜಗತ್ತು ಆಶ್ರಯಿಸಿದೆ. ಏಕೆಂದರೆ : 'ನಾನು-ನನ್ನದು'–ಎಂಬುದಿಲ್ಲದಿದ್ದರೆ ಪ್ರಪಂಚವೇ ಇಲ್ಲ. ಆದುದರಿಂದಲೇ ದೇಹವೆಂಬ ವೃಕ್ಷದ ಮೂಲವು ಸುಳ್ಳೆಂದು ಹೇಳಿದ್ದಾರೆ.

ಇಲ್ಲ. ಆದರೆ ನಾನು ಮಹಾತ್ಮನಾದ ಪ್ರಹ್ಲಾದನ ಮೊಮ್ಮಗನಾಗಿದ್ದೂ ಒಂದು ಬಾರಿ ಕೊಡುವುದಾಗಿ ಪ್ರತಿಜ್ಞೆಮಾಡಿ, ಧನಲೋಭದಿಂದ ಜಿಪುಣನಂತೆ ಹಣದಾಸೆಗಾಗಿ ಈ ಬ್ರಾಹ್ಮಣನಿಗೆ–'ನಾನು ನಿನಗೆ ದಾನಕೊಡುವುದಿಲ್ಲ'–ಎಂದು ಹೇಗೆ ಹೇಳಲಿ?

ನ ಹ್ಯಸತ್ಯಾತ್ಪರೋಽಧರ್ಮ ಇತಿ ಹೋವಾಚ ಭೂರಿಯಮ್ ।
ಸರ್ವಂ ಸೋಢುಮಲಂ ಮನ್ಯೇ ಋತೇಽಲೀಕಪರಂ ನರಮ್ ॥೪॥

ಒಂದು ಸಂದರ್ಭದಲ್ಲಿ ಭೂದೇವಿಯೇ ಹೀಗೆ ಹೇಳಿದ್ದಾಳೆ : "ಸುಳ್ಳಿಗಿಂತಲೂ ಮಹತ್ತರವಾದ ಅಧರ್ಮವು ಬೇರೆ ಯಾವುದೂ ಇಲ್ಲ. ಸುಳ್ಳುಗಾರನಾದ ಮನುಷ್ಯನೊಬ್ಬನನ್ನು ಬಿಟ್ಟು ನಾನು ಉಳಿದವರೆಲ್ಲರನ್ನೂ ಧರಿಸಲು ಸಮರ್ಥಳಾಗಿದ್ದೇನೆ. ಆದರೆ ಸುಳ್ಳುಗಾರನನ್ನು ಮಾತ್ರ ನಾನು ಧರಿಸಲಾರೆನು."

ನಾಹಂ ಬಿಭೇಮಿ ನಿರಯಾನ್ನಾಧನ್ಯಾದಸುಖಾರ್ಣವಾತ್ ।
ನ ಸ್ಥಾನಚ್ಯವನಾನ್ಮೃತ್ಯೋರ್ಯಥಾ ವಿಪ್ರಪ್ರಲಮ್ಭನಾತ್ ॥೫॥

ಬ್ರಾಹ್ಮಣನಿಗೆ ಮಾತು ಕೊಟ್ಟು ಅನಂತರ ವಂಚಿಸುವುದು (ಬ್ರಾಹ್ಮಣನನ್ನು ವಂಚಿಸುವುದು)–ಎಂಬುದನ್ನು ನೆನೆಸಿಕೊಂಡರೆ ಉಂಟಾಗುವಷ್ಟು ಭಯವು–ನನಗೆ ದುಃಖಗಳಿಗೆ ಸಮುದ್ರಪ್ರಾಯವಾದ ನರಕಪ್ರವೇಶವಾಗುವುದೆಂಬ ಕಾರಣದಿಂದಾಗಲೀ, ದರಿದ್ರನಾಗಿಬಿಡುವೆನೆಂಬ ಕಾರಣದಿಂದಾಗಲೀ, ಸ್ಥಾನಭ್ರಷ್ಟನಾಗುವೆನೆಂಬ ಕಾರಣದಿಂದಾಗಲೀ, ಮೃತ್ಯುವು ಸನ್ನಿಹಿತವಾಗುವುದೆಂಬ ಕಾರಣದಿಂದಾಗಲೀ ಉಂಟಾಗುವುದಿಲ್ಲ. ಬ್ರಾಹ್ಮಣರನ್ನು ವಂಚಿಸುವ ವಿಷಯದಲ್ಲಿ ನಾನು ಅಷ್ಟು ಭಯಪಡುತ್ತೇನೆ.

ಯದ್ಯದ್ಧಾಸ್ಯತಿ ಲೋಕೇಽಸ್ಮಿನ್ಸಂಪರೇತಂ ಧನಾದಿಕಮ್ ।
ತಸ್ಯ ತ್ಯಾಗೇ ನಿಮಿತ್ತಂ ಕಿಂ ವಿಪ್ರಸ್ತುಷ್ಯೇನ್ನ ತೇನ ಚೇತ್ ॥೬॥

ಈ ಪ್ರಪಂಚದಲ್ಲಿ ಮನುಷ್ಯನು ಸತ್ತುಹೋದನಂತರ ಅತ್ಯಂತ ಪ್ರಿಯವಾದ ಧನ-ಕನಕ-ವಸ್ತು-ವಾಹನಗಳೆಲ್ಲವೂ ತಾನೇ ತಾನಾಗಿ ಬಿಟ್ಟೇ ಹೋಗುತ್ತವೆ. ಸತ್ತವನ ಜೊತೆಯಲ್ಲಿ ಯಾವುದೂ ಹೋಗುವುದಿಲ್ಲ. ಹೀಗಿರುವಾಗ ಹಾಗೆ ಜೊತೆಗೆ ಬಾರದೇಇರುವ ಸಂಪತ್ತಿನಿಂದ ಒಬ್ಬ

ಬ್ರಾಹ್ಮಣನನ್ನು ತೃಪ್ತಿಗೊಳಿಸಲಾಗದಿದ್ದರೆ ಅದೆಂತಹ ತ್ಯಾಗ? ಅದೆಂತಹ ಸಂಪತ್ತು?

ಶ್ರೇಯಃ ಕುರ್ವನ್ತಿ ಭೂತಾನಾಂ ಸಾಧವೋ ದುಸ್ತ್ಯಜಾಸುಭಿಃ ।
ದಧ್ಯಙ್ಶಿಬಿಪ್ರಭೃತಯಃ ಕೋ ವಿಕಲ್ಪೋ ಧರಾದಿಷು ॥೭॥

ದಧೀಚಿ, ಶಿಬಿ–ಇವರೇ ಮುಂತಾದ ಮಹಾಪುರುಷರು ಪರಮಪ್ರಿಯವಾದ ಮತ್ತು ತ್ಯಜಿಸಲು ಅಸಾಧ್ಯವಾದ ಪ್ರಾಣಗಳನ್ನೇ ತೆತ್ತು ಪ್ರಾಣಿಸಮುದಾಯಕ್ಕೇ ಶ್ರೇಯಸ್ಸನ್ನುಂಟುಮಾಡಿರುತ್ತಾರೆ. ಹೀಗಿರುವಾಗ ಪೃಥ್ವಿಯೇ ಮೊದಲಾದುವುಗಳನ್ನು ದಾನಕೊಡುವುದರಲ್ಲಿ ವಿಚಾರಮಾಡಬೇಕಾದುದು ಯಾವುದಿದೆ? ಹಿಂದಿನ ಯುಗಗಳಲ್ಲಿ ದೊಡ್ಡ-ದೊಡ್ಡ ದೈತ್ಯರಾಜರು ಈ ಭೂಮಂಡಲವನ್ನು ಗೆದ್ದು ಉಪಭೋಗಿಸುತ್ತಿದ್ದರು. ಅವರನ್ನು ಎದುರಿಸುವವರು ಯಾರೂ ಇರಲಿಲ್ಲ. ಆದರೆ ಅವರು ಗೆದ್ದಿದ್ದ ಲೋಕ-ಪರಲೋಕಗಳನ್ನು ಕಾಲವು ನುಂಗಿಹಾಕಿತು. ಅವರು ಗಳಿಸಿದ ಯಶಸ್ಸನ್ನು ಮಾತ್ರ ಕಾಲವು ನುಂಗಿಹಾಕಲಿಲ್ಲ. ಅವರ ಯಶಸ್ಸು ಇಂದಿಗೂ ಶಾಶ್ವತವಾಗಿ ಉಳಿದಿದೆ.

ಬ್ರಹ್ಮರ್ಷಿಗಳೇ! ಯುದ್ಧದಲ್ಲಿ ಶತ್ರುವಿಗೆ ಬೆನ್ನು ತೋರಿಸದೆ ಅಚಲ ರಾಗಿ ನಿಂತು ಯುದ್ಧಮಾಡುತ್ತಾ ಪ್ರಾಣತೊರೆದ ಶೂರರು ಸುಲಭವಾಗಿ ಸಿಕ್ಕುತ್ತಾರೆ. ಆದರೆ ಸತ್ಪಾತ್ರರು ದೊರೆತ ಕಾಲದಲ್ಲಿ ಶ್ರದ್ಧೆಯಿಂದ ಧನವನ್ನು ದಾನಮಾಡುವವರು ಸುದುರ್ಲಭವೇ ಸರಿ.

ಗುರುದೇವ! ಉದಾರನೂ ಕರುಣಾಶಾಲಿಯೂ ಆದ ಪುರುಷನು ಯಾಚಕನ ಕಾಮನೆಗಳನ್ನು ಪೂರ್ಣಗೊಳಿಸಿ ಅದರಿಂದ ಇಹಲೋಕದಲ್ಲಿ ದುರ್ದೆಶೆಯನ್ನು ಹೊಂದುವುದಾದರೆ ಅದು ಅವನಿಗೆ ಶೋಭಾಯಮಾನವೇ ಸರಿ. ಹಾಗೆಯೇ ತಮ್ಮಂತಹ ಬ್ರಹ್ಮವಿದರಾದ ಪುರುಷರಿಗೆ ದಾನಮಾಡುವುದರಿಂದ ದುಃಖವು ಪ್ರಾಪ್ತವಾಗುವುದಾಗಿದ್ದರೆ ಹೇಳುವುದೇನಿದೆ? ಅದು ಅಪಾರವಾದ ಕೀರ್ತಿಯನ್ನೇ ಉಂಟುಮಾಡುತ್ತದೆ. ಆದುದರಿಂದ ನಾನು ಈ ವಟುವಿನ ಇಷ್ಟಾರ್ಥವನ್ನು ಪೂರೈಸಿಕೊಡುತ್ತೇನೆ.

ಗುರುಗಳೇ! ಶಾಸ್ತ್ರವಿಧಿಗಳಲ್ಲಿ ಪಂಡಿತರಾಗಿರುವ ನೀವು ಅತ್ಯಾದರ

ದಿಂದ ಯಾವನನ್ನು ಯಜ್ಞಗಳಿಂದಲೂ ಕ್ರತುಗಳಿಂದಲೂ ಆರಾಧಿಸುವಿರೋ ಅಂತಹ ವರದನಾದ ಮಹಾವಿಷ್ಣುವೇ ಈ ವಟುವಾಗಿರಲೀ, ಅಥವಾ ಬೇರೆಯವನೇ ಆಗಿರಲೀ, ಇವನಿಗೆ ನಾನು ಇವನು ಬಯಸಿರುವಷ್ಟು ಭೂಮಿಯನ್ನು ದಾನವಾಗಿ ಕೊಡುತ್ತೇನೆ. ನಿರಪರಾಧಿಯಾದ ನನ್ನನ್ನು ಇವನು ಅಧರ್ಮಮಾರ್ಗದಿಂದ ಬಂಧಿಸಿದರೂ ಬ್ರಾಹ್ಮಣವೇಷಧರನಾಗಿರುವ ಈ ಶ್ರೀಹರಿಯನ್ನು, ಇವನು ನನ್ನ ಶತ್ರುವೇ ಆದರೂ ನಾನು ಹಿಂಸಿಸುವುದಿಲ್ಲ. ಒಂದು ವೇಳೆ ಇವನು ಪವಿತ್ರಕೀರ್ತಿಯಾದ ಭಗವಾನ್ ವಿಷ್ಣುವೇ ಆಗಿದ್ದಲ್ಲಿ ನನಗೆ ಮೋಸಮಾಡಿ ಅಥವಾ ನನ್ನನ್ನು ವಂಚಿಸಿ ತನ್ನ ಕೀರ್ತಿಯನ್ನು ಕಳೆದುಕೊಳ್ಳುವುದಿಲ್ಲ. ಏಕೆಂದರೆ : ಶ್ರೀಹರಿಯು ನನ್ನೊಡನೆ ಯುದ್ಧವನ್ನು ಮಾಡಿ ಯುದ್ಧದಲ್ಲಿ ನನ್ನನ್ನು ಸಂಹರಿಸಿ ನನ್ನಿಂದ ಈ ಭೂಮಂಡಲವನ್ನು ಕಿತ್ತುಕೊಳ್ಳಲು ಸಮರ್ಥನಾಗಿದ್ದಾನೆ. ಹರಿಯಲ್ಲದೆ ಇವನು ಬೇರೆಯವನಾಗಿದ್ದು ನನ್ನೊಡನೆ ಯುದ್ಧಕ್ಕೆ ಬಂದರೆ ನನ್ನಿಂದ ಕೊಲ್ಲಲ್ಪಟ್ಟು ರಣರಂಗದಲ್ಲಿ ಬಿದ್ದುಹೋಗುತ್ತಾನೆ. ಮುಂದಿನ ಪರಿಣಾಮವು ಏನೇ ಆದರೂ ನಾನು ಮಾತ್ರ ಮಾತಿಗೆ ತಪ್ಪದೆ ಈ ವಟುವು ಕೇಳಿರುವಷ್ಟು ಭೂಮಿಯನ್ನು ದಾನವಾಗಿ ಕೊಡುತ್ತೇನೆ." (ಶ್ಲೋಕ 8-13)

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತ! ಬಲಿಯ ಗುರುಗಳಾದ ಶುಕ್ರಾಚಾರ್ಯರು ಶಿಷ್ಯನು ತಮ್ಮ ಮಾತನ್ನು ಆದರಿಸಲಿಲ್ಲವೆಂದೂ, ತಮ್ಮ ಆದೇಶಾನುಸಾರವಾಗಿ ನಡೆದುಕೊಳ್ಳಲಿಲ್ಲವೆಂದೂ ಭಾವಿಸಿ ಕ್ರುದ್ಧರಾಗಿ ದೈವಪ್ರೇರಣೆಯಿಂದಲೋ ಎಂಬಂತೆ ಸತ್ಯಸಂಧನಾದ ಸ್ಥಿರಚಿತ್ತನಾದ ಬಲಿಯನ್ನು ಶಪಿಸಿಬಿಟ್ಟರು.

ದೃಢಂ ಪಣ್ಡಿತಮಾನ್ಯಜ್ಞಃ ಸ್ತಬ್ಧೋಽಸ್ಯಸ್ಮದುಪೇಕ್ಷಯಾ ।
ಮಚ್ಛಾಸನಾತಿಗೋ ಯಸ್ತ್ವಮಚಿರಾದ್ಭ್ರಶ್ಯಸೇ ಶ್ರಿಯಃ ॥೧೪॥

"ಮೂರ್ಖನೇ! ನೀನು ಮಹಾ ಅಜ್ಞಾನಿಯು. ಆದರೂ ಮಹಾ ಪಂಡಿತನೆಂದು ಭಾವಿಸಿಕೊಂಡುಬಿಟ್ಟಿರುವೆ. ಮಹಾಗರ್ವಿಷ್ಠನಾಗಿ ನಮ್ಮನ್ನು ಉಪೇಕ್ಷಿಸುತ್ತಿರುವೆ. ನೀನು ನನ್ನ ಆಜ್ಞೆಯನ್ನು ಉಲ್ಲಂಘಿಸುತ್ತಿರುವೆ. ಆದುದರಿಂದ ನೀನು ಬಹಳ ಬೇಗ ಸಂಪತ್ತಿನಿಂದ ಭ್ರಷ್ಟನಾಗುವೆ."

ಬಲಿಯು ಮಹಾತ್ಮರಲ್ಲಿಯೇ ಶ್ರೇಷ್ಠನಾದವನು. ಗುರುಗಳು ಶಾಪವಿತ್ತರೂ ಸತ್ಯದಿಂದ ಭ್ರಷ್ಟನಾಗಲಿಲ್ಲ. ಅವನು ತನ್ನ ಪತ್ನಿಯೊಡನೆ ಶ್ರೀವಾಮನಮೂರ್ತಿಯನ್ನು ಅರ್ಘ್ಯ-ಪಾದ್ಯಾದಿಗಳ ಮೂಲಕವಾಗಿ ವಿಧಿವತ್ತಾಗಿ ಅರ್ಚಿಸಿ ಅವನ ಇಷ್ಟಾನುಸಾರವಾಗಿ ಅವನಿಗೆ ಮೂರು ಹೆಜ್ಜೆ ಭೂಮಿಯನ್ನು ದಾನಮಾಡಿದನು. ಮುಕ್ತಾಹಾರಗಳಿಂದ ಸಮಲಂಕೃತಳಾಗಿದ್ದ ಬಲಿಯ ಪತ್ನಿಯಾದ ವಿಂಧ್ಯಾವಲಿಯು ಶ್ರೀವಾಮನಮೂರ್ತಿಯ ದಿವ್ಯಪಾದಗಳನ್ನು ತೊಳೆಯುವ ಸಲುವಾಗಿ ನೀರಿನಿಂದ ತುಂಬಿದ ಚಿನ್ನದ ಕಲಶವನ್ನು ತಂದಳು. ಬಳಿಕ ಯಜಮಾನನಾದ ಬಲಿಯು ತಾನೇ ಶ್ರೀವಾಮನಮೂರ್ತಿಯ ದಿವ್ಯವಾದ ಪಾದಪದ್ಮಯುಗಳವನ್ನು ಪರಮಾನಂದಭರಿತನಾಗಿ ತೊಳೆದು, ಗಂಗಾಜಲಕ್ಕೆ ಸಮಾನವಾದ ಭಗವಂತನ ಚರಣತೀರ್ಥವನ್ನು ಭಕ್ತಿಭಾವದಿಂದ ತಲೆಯಲ್ಲಿ ಧರಿಸಿದನು. ಆಗ ಅಂತರಿಕ್ಷದಲ್ಲಿ ಉಪಸ್ಥಿತರಾಗಿದ್ದ ಗಂಧರ್ವ-ವಿದ್ಯಾಧರ-ಸಿದ್ಧ-ಚಾರಣರೂ ಮತ್ತು ಸಮಸ್ತದೇವತೆಗಳೂ ಬಲಿಯ ಕಾರ್ಯವನ್ನು ಪ್ರಶಂಸಿಸುತ್ತಾ ಸಂತೋಷಭರಿತರಾಗಿ ಬಲಿಯ ಮೇಲೆ ಪುಷ್ಪಗಳ ಮಳೆಗರೆದರು. ದೇವದುಂದುಭಿಗಳು ಅಡಿಗಡಿಗೂ ಮೊಳಗುತ್ತಲೇ ಇದ್ದುವು. ಗಂಧರ್ವ-ಕಿನ್ನರ-ಕಿಂಪುರುಷರು ಅವನ ಕೀರ್ತಿಯನ್ನು ಹೊಗಳಿದರು. (ಶ್ಲೋಕ 16-19)

ಮನಸ್ವಿನಾನೇನ ಕೃತಂ ಸುದುಷ್ಕರಂ
ವಿದ್ವಾನದಾದ್ಯದ್ರಿಪವೇ ಜಗತ್ತ್ರಯಮ್ ॥೨೦॥

"ಉದಾರಶಿರೋಮಣಿಯಾದ ಬಲಿಚಕ್ರವರ್ತಿಯು ಇತರರಿಗೆ ಮಾಡಲು ಅಸಾಧ್ಯವಾದ ಅತ್ಯಂತ ದುಷ್ಕರವಾದ ಕಾರ್ಯವನ್ನೇ ಮಾಡಿದ್ದಾನೆ. ತಿಳಿದೂ ತಿಳಿದೂ ತನ್ನ ಶತ್ರುವಿಗೆ ಮೂರು ಲೋಕಗಳನ್ನೂ ದಾನವಾಗಿ ಕೊಟ್ಟುಬಿಟ್ಟನಲ್ಲವೇ! ಇಂತಹ ಔದಾರ್ಯವನ್ನು ಬಲಿಯ ಹೊರತಾಗಿ ಬೇರೆ ಯಾರು ತಾನೇ ತೋರಬಲ್ಲರು?"

ಪರೀಕ್ಷಿತನೇ! ಆ ಸಮಯಕ್ಕೆ ಸರಿಯಾಗಿ ಅಲ್ಲಿ ಒಂದು ಅದ್ಭುತವಾದ ಘಟನೆಯು ನಡೆಯಿತು. ಅಂತವೇ ಇಲ್ಲದಿರುವ ಶ್ರೀಹರಿಯ ತ್ರಿಗುಣಮಯವಾದ ವಾಮನರೂಪವು ಇದ್ದಕ್ಕಿದ್ದಂತೆಯೇ ಅದ್ಭುತವಾಗಿ ಬೆಳೆಯ

ತೊಡಗಿತು. ಅದು ಬೆಳೆಯುತ್ತಾ ಬೆಳೆಯುತ್ತಾ ಎಷ್ಟು ದೊಡ್ಡದಾಯಿತೆಂದರೆ ಭೂಮಿ, ಆಕಾಶ, ದಿಕ್ಕುಗಳು, ಸ್ವರ್ಗ-ಪಾತಾಳಗಳು, ಸಮುದ್ರಗಳು, ತಿರ್ಯಗ್ಜಂತುಗಳು, ಮನುಷ್ಯರು, ದೇವತೆಗಳು, ಮುನಿಗಳು—ಎಲ್ಲರೂ ಮಹಾವಿಷ್ಣುವಿನ ಆ ಬೃಹದಾಕಾರದಲ್ಲಿಯೇ ಸೇರಿಹೋದರು. ಋತ್ವಿಜ ರಿಂದಲೂ, ಆಚಾರ್ಯರಿಂದಲೂ ಸಭಾಸದರಿಂದಲೂ ಕೂಡಿದ ಆ ಬಲಿ ಚಕ್ರವರ್ತಿಯು ಮಹಾಮಹಿಮನಾದ ಆ ವಾಮನನ ತ್ರಿಗುಣಾತ್ಮಕವಾದ ಶರೀರದಲ್ಲಿ ಪಂಚಭೂತಗಳನ್ನೂ, ಪಂಚೇಂದ್ರಿಯಗಳನ್ನೂ, ಶಬ್ದ-ಸ್ಪರ್ಶಾದಿ ವಿಷಯಗಳನ್ನೂ, ಮನಸ್ಸು-ಜೀವರಿಂದ ಕೂಡಿದ ಗುಣತ್ರಯರೂಪವಾದ ಈ ಜಗತ್ತನ್ನೂ ನೋಡಿದನು. ಇಂದ್ರನಂತೆ ಸೈನ್ಯದಿಂದ ಸಮಾವೃತನಾಗಿದ್ದ ಬಲಿಚಕ್ರವರ್ತಿಯು ವಿಶ್ವರೂಪನಾದ ಪರಮಾತ್ಮನ ಅಂಗಾಲಿನಲ್ಲಿ ಪಾತಾಳವನ್ನೂ, ಹೆಜ್ಜೆಗಳಲ್ಲಿ ಭೂಮಿಯನ್ನೂ, ಕಣಕಾಲುಗಳಲ್ಲಿ ಬೆಟ್ಟಗಳನ್ನೂ, ಮೊಣಕಾಲುಗಳಲ್ಲಿ ಪಕ್ಷಿಗಳನ್ನೂ, ತೊಡೆಗಳಲ್ಲಿ ಮರುದ್ಗಣ ಗಳನ್ನೂ ನೋಡಿದನು. ಭಗವಂತನ ವಸ್ತ್ರದಲ್ಲಿ ಸಂಧ್ಯೆಯನ್ನೂ, ಮೇಢ್ರದಲ್ಲಿ ನವಪ್ರಜಾಪತಿಗಳನ್ನೂ, ನಡುವಿನ ಕೆಳಭಾಗದಲ್ಲಿ ತನ್ನ ಮುಂದಾಳುತನ ದಲ್ಲಿರುವ ರಾಕ್ಷಸರನ್ನೂ, ಹೊಕ್ಕಳಿನಲ್ಲಿ ಆಕಾಶವನ್ನೂ, ಹೊಟ್ಟೆಯಲ್ಲಿ ಏಳು ಸಮುದ್ರಗಳನ್ನೂ, ಭಗವಂತನ ಎದೆಯಲ್ಲಿ ನಕ್ಷತ್ರಮಂಡಲವನ್ನೂ ಕಂಡನು.
(ಶ್ಲೋಕ 21-24)

ಪರೀಕ್ಷಿತನೇ! ಬಲಿಯು ಮುರಾರಿಯ ಹೃದಯದಲ್ಲಿ ಧರ್ಮವನ್ನೂ, ಸ್ತನಗಳಲ್ಲಿ ಋತ ಮತ್ತು ಸತ್ಯಗಳನ್ನೂ, ಮನಸ್ಸಿನಲ್ಲಿ ಚಂದ್ರನನ್ನೂ, ಎದೆಯಲ್ಲಿ ಕಮಲಹಸ್ತಳಾದ ಶ್ರೀಲಕ್ಷ್ಮಿಯನ್ನೂ, ಕೊರಳಿನಲ್ಲಿ ಸಾಮವೇದವೇ ಮೊದಲಾದ ಸಮಸ್ತವೇದಗಳನ್ನೂ ನೋಡಿದನು. ಭುಜಗಳಲ್ಲಿ ಇಂದ್ರ ಪ್ರಮುಖರಾದ ದೇವತೆಗಳನ್ನೂ, ಕಿವಿಗಳಲ್ಲಿ ದಿಕ್ಕುಗಳನ್ನೂ, ತಲೆಯಲ್ಲಿ ಸ್ವರ್ಗವನ್ನೂ, ಕೂದಲುಗಳಲ್ಲಿ ಮೇಘಗಳನ್ನೂ, ಮೂಗಿನ ಹೊಳ್ಳೆಗಳಲ್ಲಿ ವಾಯುದೇವನನ್ನೂ, ಕಣ್ಣುಗಳಲ್ಲಿ ಸೂರ್ಯನನ್ನೂ, ಮುಖದಲ್ಲಿ ಅಗ್ನಿ ಯನ್ನೂ, ದೇವದೇವನ ವಾಣಿಯಲ್ಲಿ ವೇದಗಳನ್ನೂ, ನಾಲಿಗೆಯಲ್ಲಿ ವರುಣ ನನ್ನೂ, ಹುಬ್ಬುಗಳಲ್ಲಿ ವಿಧಿ-ನಿಷೇಧಗಳನ್ನೂ, ರೆಪ್ಪೆಗಳಲ್ಲಿ ಅಹೋರಾತ್ರಿ ಗಳನ್ನೂ, ಪರಮಾತ್ಮನ ಹಣೆಯಲ್ಲಿ ಕೋಪವನ್ನೂ, ಕೆಳತುಟಿಯಲ್ಲಿ ಲೋಭ

ವನ್ನೂ, ಸ್ಪರ್ಶದಲ್ಲಿ ಕಾಮದೇವನನ್ನೂ, ವೀರ್ಯದಲ್ಲಿ ನೀರನ್ನೂ, ಬೆನ್ನಿನಲ್ಲಿ ಅಧರ್ಮವನ್ನೂ, ಹೆಜ್ಜೆಗಳಲ್ಲಿ ಯಜ್ಞವನ್ನೂ, ನೆರಳಿನಲ್ಲಿ ಮೃತ್ಯುವನ್ನೂ, ನಗುವಿನಲ್ಲಿ ಮಾಯೆಯನ್ನೂ, ಮೈಗೂದಲುಗಳಲ್ಲಿ ಸಸ್ಯಜಾತಿಗಳನ್ನೂ, ನರಗಳಲ್ಲಿ ನದಿಗಳನ್ನೂ, ಉಗುರುಗಳಲ್ಲಿ ಕಲ್ಲುಗಳನ್ನೂ, ಬುದ್ಧಿಯಲ್ಲಿ ಬ್ರಹ್ಮನನ್ನೂ, ಪ್ರಾಣಗಳಲ್ಲಿ ದೇವತೆಗಳ ಸಮೂಹಗಳನ್ನೂ ಮತ್ತು ಋಷಿಗಳ ಸಮೂಹಗಳನ್ನೂ, ಶರೀರದಲ್ಲಿ ಸ್ಥಾವರ-ಜಂಗಮ ಗಳನ್ನೂ ಮತ್ತು ಸಮಸ್ತಪ್ರಾಣಿಗಳನ್ನೂ ಆ ಭವ್ಯವಾದ ವಿಶ್ವರೂಪದಲ್ಲಿ ಬಲಿಚಕ್ರವರ್ತಿಯು ನೋಡಿದನು. (ಶ್ಲೋಕ 25-29)

ಪರೀಕ್ಷಿತಮಹಾರಾಜ! ಬಲಿಪ್ರಮುಖರಾದ ರಾಕ್ಷಸರೆಲ್ಲರೂ ಸರ್ವಾತ್ಮನಾದ ಶ್ರೀವಾಮನಮೂರ್ತಿಯಲ್ಲಿ ಈ ಜಗತ್ತನ್ನು ಕಂಡು ಭಯಭ್ರಾಂತರಾದರು. ಆ ಸಮಯದಲ್ಲಿ ಸಹಿಸಲಾಗದ ಮಹಾತೇಜಸ್ಸಿನಿಂದ ಕೂಡಿದ ಸುದರ್ಶನಚಕ್ರವೂ, ಮೇಘದಂತೆ ಟೇಂಕಾರಶಬ್ದವಿದ್ದ ಶಾರ್ಙ್ಗ ವೆಂಬ ಮಹಾಧನುಸ್ಸೂ, ಮೇಘದಂತೆ ಗಂಭೀರವಾದ ಶಬ್ದದಿಂದ ಕೂಡಿದ್ದ ಪಾಂಚಜನ್ಯವೆಂಬ ಶಂಖವೂ, ವೇಗವುಳ್ಳ ಕೌಮೋದಕೀ ಎಂಬ ವಿಷ್ಣುವಿನ ಗದೆಯೂ, ವಿದ್ಯಾಧರವೆಂಬ ಕತ್ತಿಯೂ, ಶತಚಂದ್ರಗಳ ಚಿಹ್ನೆಯಿದ್ದ ಗುರಾಣಿಯೂ, ಎರಡು ಅಕ್ಷಯ ಬತ್ತಳಿಕೆಗಳೂ, ಭಗವಂತನ ಬಳಿ ಮೂರ್ತಿಮತ್ತಾಗಿ ನಿಂತಿದ್ದುವು. ಸನಕ-ಸನಂದನರೇ ಮೊದಲಾದ ಭಕ್ತೋತ್ತಮರು ಲೋಕಪಾಲರೊಡನೆ ಭಗವಂತನನ್ನು ಸೇವಿಸುತ್ತಿದ್ದರು. ಆ ಸಮಯದಲ್ಲಿ ಉರುಕ್ರಮಭಗವಂತನು ತಲೆಯಲ್ಲಿ ಕಿರೀಟವನ್ನೂ, ತೋಳುಗಳಲ್ಲಿ ಅಂಗದ ಕೇಯೂರಗಳನ್ನೂ, ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳನ್ನೂ, ವಕ್ಷಃಸ್ಥಳದಲ್ಲಿ ಶ್ರೀವತ್ಸಚಿಹ್ನೆಯನ್ನೂ, ಕುತ್ತಿಗೆಯಲ್ಲಿ ಕೌಸ್ತುಭಮಣಿಯನ್ನೂ, ಸೊಂಟದಲ್ಲಿ ಸುವರ್ಣಮಯವಾದ ಉಡಿದಾರವನ್ನೂ, ದುಂಬಿಗಳ ಸಮೂಹಗಳಿಂದ ಕೂಡಿದ ವನಮಾಲೆಯನ್ನೂ ಧರಿಸಿ ಪೀತಾಂಬರವನ್ನುಟ್ಟು ಅತ್ಯಂತಶೋಭಾಯಮಾನವಾಗಿ ಕಾಣುತ್ತಿದ್ದನು.

ಪರೀಕ್ಷಿತನೇ! ಉರುಕ್ರಮನು* ತನ್ನ ಒಂದು ಹೆಜ್ಜೆಯಿಂದ

---

* ಉರುಕ್ರಮ : ವಾಮನಾವತಾರವನ್ನೆತ್ತಿದ್ದ ಮಹಾವಿಷ್ಣು. ಉರವಃ ವಿಸ್ತಾರಾಃ

ಬಲಿಗೆ ಸೇರಿದ ಭೂಮಂಡಲವನ್ನೂ, ಶರೀರದಿಂದ ಅಂತರಿಕ್ಷವನ್ನೂ ತೋಳುಗಳಿಂದ ದಿಕ್ಕುಗಳನ್ನೂ ಆಕ್ರಮಿಸಿದನು. ಎರಡನೆಯ ಹೆಜ್ಜೆಯಿಂದ ಸ್ವರ್ಗವನ್ನು ಆಕ್ರಮಿಸಿದನು. ಮೂರನೆಯ ಹೆಜ್ಜೆಯನ್ನಿಡಲು ಬಲಿಗೆ ಸಂಬಂಧಿಸಿದ ಯಾವ ವಸ್ತುವೂ ಉಳಿಯಲಿಲ್ಲ. ತ್ರಿವಿಕ್ರಮಮೂರ್ತಿಯ ಹೆಜ್ಜೆಯು ಮೇಲೆ ಮೇಲೆ ಬೆಳೆಯುತ್ತಾ ಹೋಗಿ ಮಹರ್ಲೋಕ-ಜನೋಲೋಕ ತಪೋಲೋಕಗಳನ್ನು ದಾಟಿ ಎಲ್ಲಕ್ಕಿಂತಲೂ ಮೇಲ್ಭಾಗ ದಲ್ಲಿರುವ ಸತ್ಯಲೋಕವನ್ನು ಸೇರಿತು. (ಶ್ಲೋಕ 30-34)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಅಷ್ಟಮಸ್ಕಂಧದ ೨೦ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೨೧ನೆಯ ಅಧ್ಯಾಯ

ಬಲಿಯ ಬಂಧನ

ಶ್ರೀಶುಕರು ಹೇಳುತ್ತಾರೆ :

ಸತ್ಯಂ ಸಮೀಕ್ಷ್ಯಾಬ್ಜಭವೋ ನಖೇನ್ದುಭಿ-
ರ್ಹತಸ್ವಧಾಮದ್ಯುತಿರಾವೃತೋಽಭ್ಯಗಾತ್ ।
ಮರೀಚಿಮಿಶ್ರಾ ಋಷಯೋ ಬೃಹದ್ವ್ರತಾಃ
ಸನನ್ದನಾದ್ಯಾ ನರದೇವ ಯೋಗಿನಃ ॥೧॥

ಪರೀಕ್ಷಿತನೇ! ನಾನು ಈ ಹಿಂದೆ ಹೇಳಿದಂತೆ ಭಗವಂತನ ದಿವ್ಯ ಪಾದವು ಸತ್ಯಲೋಕಕ್ಕೂ ವ್ಯಾಪಿಸಿತು. ಭಗವಂತನ–ಚಂದ್ರನಕಾಂತಿಗೆ ಸಮಾನ ವಾದ ಕಾಂತಿಯನ್ನು ಹೊಂದಿದ್ದ ಉಗುರುಗಳ ದಿವ್ಯಕಾಂತಿಯಿಂದಾಗಿ ಸತ್ಯಲೋಕದ ಕಾಂತಿಯು ಮಸುಕಾಗಿ ಹೋಯಿತು. ಬ್ರಹ್ಮನೂ ಕೂಡ ಆ ದಿವ್ಯಕಾಂತಿಯಲ್ಲಿ ಮುಳುಗಿಹೋದನು. ಮರೀಚಿಯೇ ಮೊದಲಾದ ಋಷಿ ಗಳೂ, ಸನಂದಾದಿಗಳೂ, ನೈಷ್ಠಿಕಬ್ರಹ್ಮಚಾರಿಗಳೂ, ಇವರಲ್ಲದೇ ಇತರ ಮಹಾಮಹಾಯೋಗಿಗಳೂ ಭಗವಂತನ ಚರಣಕಮಲವನ್ನು ಭಕ್ತಿಭಾವ

ಕ್ರಮಾಃ ಪಾದವಿಕ್ಷೇಪಾಃ ಅಸ್ಯ. ವಿಸ್ತಾರವಾದ ಪಾದವಿಕ್ಷೇಪಗಳಿರತಕ್ಕವನು. ಯಸ್ಯೋರುಷು ತ್ರಿಷು ವಿಕ್ರಮಣೇಷು । ಅಧಿಕ್ಷಯನ್ತಿ ಭುವನಾನಿ ವಿಶ್ವಾ (ಶ್ರುತಿ)

ದಿಂದ ಸ್ವಾಗತಿಸಿದರು. ಬ್ರಹ್ಮಲೋಕದಲ್ಲಿ ಮೂರ್ತಿಮತ್ತಾಗಿ ನೆಲೆಸಿದ್ದ ವೇದಗಳು, ಉಪವೇದಗಳು, ನಿಯಮಗಳು, ಯಮಗಳು, ತರ್ಕ, ಇತಿಹಾಸ, ವೇದಾಂಗಗಳು, ಪುರಾಣಗಳು, ಸಂಹಿತೆಗಳು–ಎಲ್ಲವೂ ಪರಮಪುರುಷನ ಚರಣಾರವಿಂದವನ್ನು ಸ್ವಾಗತಿಸಲು ಬಂದುವು. ಯೋಗರೂಪವಾದ ವಾಯುವಿನಿಂದ ಜ್ಞಾನಾಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿ ಕರ್ಮವೆಂಬ ಮಲವನ್ನು ಭಸ್ಮಗೊಳಿಸಿದ್ದ ಮಹಾತ್ಮರೂ ಭಗವಂತನ ಪಾದಕ್ಕೆ ವಂದಿಸಿದರು. ಸಮಸ್ತಕರ್ಮಗಳಿಂದಲೂ ಹೊಂದಲು ಸಾಧ್ಯವಾಗದೇ ಇರುವ ಬ್ರಹ್ಮಲೋಕಕ್ಕೆ ಭಗವಂತನ ಚರಣಕಮಲದ ಸ್ಮರಣೆಯ ಮಹಿಮೆ ಯಿಂದಾಗಿ, ಇವರೆಲ್ಲರೂ ಬಂದು ಭಗವಂತನ ಪಾದಕ್ಕೆ ನಮಸ್ಕರಿಸಿದರು. ಬ್ರಹ್ಮದೇವನು ಪರಿಶುದ್ಧವಾದ ಕೀರ್ತಿಯುಳ್ಳವನು. ಭಗವಂತನಾದ ಮಹಾ ವಿಷ್ಣುವಿನ ನಾಭಿಕಮಲದಿಂದಲೇ ಹುಟ್ಟಿದವನಾಗಿದ್ದನು. ತನ್ನ ಲೋಕಕ್ಕೆ ಆಗಮಿಸಿದ ಭಗವಂತನ ಅಡಿದಾವರೆಗೆ ಸ್ವಾಗತವಿತ್ತನಂತರ ಬ್ರಹ್ಮನು ಅರ್ಘ್ಯ-ಪಾದ್ಯಾದಿಗಳಿಂದ ಚರಣಕಮಲವನ್ನು ಸಂಪೂಜಿಸಿ ದಿವ್ಯವಾಗಿದ್ದ ಆ ಪಾದಪದ್ಮವನ್ನು ತೊಳೆದನು. ಹೀಗೆ ಯಥೋಕ್ತವಾಗಿ ಅರ್ಚಿಸಿದನಂತರ ಪ್ರೇಮದಿಂದಲೂ, ಭಕ್ತಿಭಾವದಿಂದಲೂ ಭಗವಂತನನ್ನು ಸ್ತುತಿಸಿದನು.

ಪರೀಕ್ಷಿತನೇ! ಬ್ರಹ್ಮನ ಕಮಂಡಲುವಿನಲ್ಲಿದ್ದ ಆ ತೀರ್ಥವು ತ್ರಿವಿಕ್ರಮಮೂರ್ತಿಯ ಪಾದವನ್ನು ತೊಳೆದನಂತರ ಪರಮಪವಿತ್ರವಾಗಿ ಆಕಾಶದ ಗಂಗೆಯಾಗಿ ಪರಿಣಮಿಸಿತು. ಭಗವಂತನ ನಿರ್ಮಲವಾದ ಕೀರ್ತಿಯ ಕೀರ್ತನವು ಸಕಲರನ್ನೂ ಪಾವನಗೊಳಿಸುವಂತೆ ವಿಷ್ಣು ಪಾದೋದ್ಭವಳಾದ ಪವಿತ್ರಗಂಗೆಯು ಮೂರು ಲೋಕಗಳನ್ನೂ ಪಾವನಗೊಳಿಸುತ್ತಿದೆ. (ಶ್ಲೋಕ 2-4)

ಪರೀಕ್ಷಿತನೇ! ಭಕ್ತರ ಅನುಕೂಲಕ್ಕಾಗಿ ತನ್ನ ವಿಶ್ವರೂಪವನ್ನು ಸಂಕೋಚಿಸಿಕೊಂಡು ಪುನಃ ವಾಮನನೇ ಆದ ಮಹಾಪ್ರಭುವಿಗೆ ಬ್ರಹ್ಮನೇ ಮೊದಲಾದ ಲೋಕಪಾಲಕರು ತಮ್ಮ ಅನುಯಾಯಿಗಳೊಡನೆ ಆದರಪೂರ್ವಕವಾಗಿ ಪೂಜೆಯನ್ನು ಸಮರ್ಪಿಸಿದರು. ಅರ್ಘ್ಯ-ಪಾದ್ಯಾಚಮನೀಯ-ಮಧುಪರ್ಕಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ದಿವ್ಯವಾದ ಗಂಧದ ಲೇಪನದಿಂದಲೂ, ಸುವಾಸನೆಯುಳ್ಳ ಧೂಪ-ದೀಪಗಳಿಂದಲೂ,

ಅರಳುಗಳಿಂದಲೂ, ಅಕ್ಷತೆಗಳಿಂದಲೂ, ಹಣ್ಣುಗಳಿಂದಲೂ, ಭಗವಂತನ ಪರಾಕ್ರಮದ ವರ್ಣನೆಯಿಂದ ಕೂಡಿದ ಪವಿತ್ರಸ್ತೋತ್ರಗಳಿಂದಲೂ, ಜಯ-ಜಯಘೋಷಗಳಿಂದಲೂ, ನಾಟ್ಯ-ವಾದ್ಯ-ಸಂಗೀತಗಳಿಂದಲೂ, ಶಂಖ-ದುಂದುಭಿಗಳ ಧ್ವನಿಯಿಂದಲೂ ಮಹಾಮಹಿಮನಾದ ಶ್ರೀಭಗವಂತನನ್ನು ಬ್ರಹ್ಮನೇ ಮೊದಲಾದವರು ಸಂಪೂಜಿಸಿದರು.

ಆ ಸಮಯದಲ್ಲಿ ಕರಡಿಗಳಿಗೆ ರಾಜನಾದ ಜಾಂಬವಂತನು ಮನೋವೇಗಕ್ಕೆ ಸಮಾನವಾದ ವೇಗದಿಂದ ಎಲ್ಲ ದಿಕ್ಕುಗಳಲ್ಲಿಯೂ ಓಡಾಡುತ್ತಾ ಭೇರಿಯ ಶಬ್ದದೊಡನೆ ಭಗವಂತನ ವಿಜಯೋತ್ಸವದ ವಾರ್ತೆಯನ್ನು ಸಾರಿದನು. ಮೂರು ಅಡಿಗಳಷ್ಟು ಭೂಮಿಯನ್ನು ಬೇಡಿ ವಾಮನನು ಮೂರು ಲೋಕಗಳನ್ನೂ ತಮ್ಮಿಂದ ಅಪಹರಿಸಿದುದನ್ನು ನೋಡಿ ಅಸುರರು ಅತ್ಯಂತ ಕ್ರುದ್ಧರಾದರು. ಅವರು ತಮ್ಮ-ತಮ್ಮಲ್ಲಿಯೇ ಯೋಚಿಸತೊಡಗಿದರು : "ನಮ್ಮ ಒಡೆಯನು ಈ ಸಮಯದಲ್ಲಿ ಯಜ್ಞದೀಕ್ಷಿತನಾಗಿದ್ದಾನೆ. ಆದುದರಿಂದ ಅವನು ಈ ವಿಷಯವಾಗಿ ಮಾತನಾಡುವುದೇ ಇಲ್ಲ. ಮೂರು ಅಡಿ ಭೂಮಿಯನ್ನು ನಮ್ಮ ಸ್ವಾಮಿಯಿಂದ ಬೇಡಿದವನು ನಿಶ್ಚಯವಾಗಿಯೂ ಬ್ರಾಹ್ಮಣನಲ್ಲ. ಮಹಾಮಾಯಾವಿಯಾದ ವಿಷ್ಣುವೇ ಆಗಿದ್ದಾನೆ. ಬ್ರಾಹ್ಮಣನ ರೂಪವನ್ನು ಧರಿಸಿ ದೇವತೆಗಳಿಗೆ ಅನುಕೂಲಮಾಡಿಕೊಡಲಪೇಕ್ಷಿಸಿದ್ದಾನೆ. ನಮ್ಮ ಒಡೆಯನು ಯಜ್ಞದ ಯಜಮಾನನಾಗಿರುವಾಗ ಯಾರಿಗೂ ಯಾವ ವಿಧವಾದ ಶಿಕ್ಷೆಯನ್ನೂ ಕೊಡಲಾರನು. ಇಂತಹ ಸಮಯದಲ್ಲಿಯೇ ಈ ನಮ್ಮ ಶತ್ರುವು ಬ್ರಹ್ಮಚಾರಿಯ ವೇಷವನ್ನು ಧರಿಸಿ ಮೊದಲು ಮೂರಡಿ ಭೂಮಿಯನ್ನು ಯಾಚಿಸಿ ಅನಂತರದಲ್ಲಿ ನಮ್ಮ ಸಕಲ ಸರ್ವಸ್ವವನ್ನೂ ಅಪಹರಿಸಿಬಿಟ್ಟನು. ನಮ್ಮ ಸ್ವಾಮಿಯಾದರೋ ಸತ್ಯದಲ್ಲಿಯೇ ಪರಮನಿಷ್ಠೆಯುಳ್ಳವನು. ಅದರಲ್ಲಿಯೂ ವಿಶೇಷವಾಗಿ ಯಜ್ಞದ ದೀಕ್ಷಿತನಾಗಿದ್ದಾನೆ. ಬ್ರಾಹ್ಮಣಪ್ರಿಯನೂ ದಯಾಳುವೂ ಆಗಿರುವ ನಮ್ಮ ರಾಜನಿಗೆ ಸುಳ್ಳುಹೇಳಲು ಸಾಧ್ಯವಾಗುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಶತ್ರುವನ್ನು ವಧಿಸುವುದು ನಮ್ಮ ಧರ್ಮವೂ ಮತ್ತು ಕರ್ತವ್ಯವೂ ಆಗಿರುತ್ತದೆ. ಇದೇ ನಾವು ನಮ್ಮ ಒಡೆಯನಾದ ಬಲಿರಾಜನಿಗೆ ಮಾಡುವ ಸೇವೆಯಾಗಿದೆ." (ಶ್ಲೋಕ 5-13)

ಪರೀಕ್ಷಿತ! ಹೀಗೆ ನಿರ್ಧರಿಸಿ ಬಲಿಯ ಅನುಚರರಾದ ಅಸುರ ನಾಯಕರು ಆಯುಧಗಳನ್ನು ಹಿಡಿದು ಮೇಲೆದ್ದರು. ಬಲಿಯ ಅನು ಯಾಯಿಗಳು ರಾಜನ ಅಭಿಪ್ರಾಯವನ್ನಾಗಲೀ ಅನುಮತಿಯನ್ನಾಗಲೀ ಕೇಳದೆಯೇ ಪರಮಕ್ರುದ್ಧರಾಗಿ ಶೂಲ-ಪಟ್ಟಿಶ–ಇವೇ ಮೊದಲಾದ ಆಯುಧಗಳನ್ನು ಹಿಡಿದು ಶ್ರೀವಾಮನಮೂರ್ತಿಯನ್ನು ಸಂಹರಿಸುವ ಸಲುವಾಗಿ ಹೊರಟೇಬಿಟ್ಟರು.

ದೈತ್ಯಸೇನಾಪತಿಗಳು ತಮ್ಮನ್ನು ಆಕ್ರಮಿಸುವ ಸಲುವಾಗಿ ಆಯುಧ ಗಳನ್ನು ಹಿಡಿದು ಬರುತ್ತಿರುವುದನ್ನು ನೋಡಿ ವಿಷ್ಣುಭಗವಂತನ ಪಾರ್ಷದರು ಗಹಗಹಿಸಿ ನಗುತ್ತಾ ಆಯುಧಗಳನ್ನು ಹಿಡಿದು ದೈತ್ಯಸೈನಿಕರನ್ನು ತಡೆದು ನಿಲ್ಲಿಸಿದರು. ಮಹಾವಿಷ್ಣುವಿನ ಪಾರ್ಷದರಾದ ನಂದ, ಸುನಂದ, ಜಯ, ವಿಜಯ, ಪ್ರಬಲ, ಬಲ, ಕುಮುದ, ಕುಮುದಾಕ್ಷ, ವಿಷ್ವಕ್ಸೇನ, ಗರುಡ, ಜಯಂತ, ಶ್ರುತದೇವ, ಪುಷ್ಪದಂತ ಮತ್ತು ಸಾತ್ವತರು ರಾಕ್ಷಸರನ್ನು ಎದುರಿಸಿದರು. ಇವರಲ್ಲಿ ಪ್ರತಿಯೊಬ್ಬರೂ ಹತ್ತುಸಾವಿರ ಆನೆಗಳ ಬಲವುಳ್ಳವರಾಗಿದ್ದರು. ಅವರೆಲ್ಲರೂ ಸೇರಿ ದೈತ್ಯಸೇನೆಯನ್ನು ಧ್ವಂಸಮಾಡ ತೊಡಗಿದರು. ತನ್ನ ಕಡೆಯ ಸೈನ್ಯವನ್ನು ವಿಷ್ಣುವಿನ ಪಾರ್ಷದರು ಸಂಹರಿಸುತ್ತಿರುವುದನ್ನು ಬಲಿಯು ನೋಡಿದನು. ಆದರೂ ತನ್ನ ಕಡೆಯ ಸೈನಿಕರು ಕ್ರುದ್ಧರಾಗಿ ಯುದ್ಧಮಾಡುತ್ತಿರುವುದನ್ನು ಗಮನಿಸಿ ಶುಕ್ರಾ ಚಾರ್ಯರ ಶಾಪವನ್ನು ಸ್ಮರಿಸುತ್ತಾ ತನ್ನವರನ್ನು ಯುದ್ಧಮಾಡದಂತೆ ತಡೆದನು.

(ಶ್ಲೋಕ 14-18)

ಹೇ ವಿಪ್ರಚಿತ್ತೇ ಹೇ ರಾಹೋ ಹೇ ನೇಮೇ ಶ್ರೂಯತಾಂ ವಚಃ ।
ಮಾ ಯುಧ್ಯತ ನಿವರ್ತಧ್ವಂ ನ ನಃ ಕಾಲೋಽಯಮರ್ಥಕೃತ್ ॥

"ಹೇ ವಿಪ್ರಚಿತ್ತಿಯೇ! ರಾಹುವೇ! ನೇಮಿಯೇ! ನನ್ನ ಇತರ ಸೇನಾನಾಯಕರೇ! ನನ್ನ ಮಾತನ್ನು ಕೇಳಿರಿ. ವಿಷ್ಣುವಿನ ಪಾರ್ಷದರೊಡನೆ ಯುದ್ಧಮಾಡಬೇಡಿರಿ. ಎಲ್ಲರೂ ಹಿಂದಿರುಗಿರಿ. ಈ ಕಾಲವು ನಮಗೆ ಅನುಕೂಲವಾಗಿಲ್ಲ.

ಯಃ ಪ್ರಭುಃ ಸರ್ವಭೂತಾನಾಂ ಸುಖದುಃಖೋಪಪತ್ತಯೇ ।
ತಂ ನಾತಿವರ್ತಿತುಂ ದೈತ್ಯಾಃ ಪೌರುಷೈರೀಶ್ವರಃ ಪುಮಾನ್ ॥೨೦॥

ದೈತ್ಯರೇ! ಯಾವ ಕಾಲವು ಸಕಲಪ್ರಾಣಿಗಳಿಗೂ ಸುಖ-ದುಃಖ ಗಳನ್ನುಂಟುಮಾಡುವುದಕ್ಕೆ ಸಮರ್ಥವಾಗಿರುವುದೋ ಅಂತಹ ಕಾಲವನ್ನು ಮನುಷ್ಯನು ಕೇವಲ ತನ್ನ ಪೌರುಷದಿಂದ ಅತಿಕ್ರಮಿಸಲು ಸಮರ್ಥ ನಾಗುವುದಿಲ್ಲ.

ಯೋ ನೋ ಭವಾಯ ಪ್ರಾಗಾಸೀದಭವಾಯ ದಿವೌಕಸಾಮ್ ।
ಸ ಏವ ಭಗವಾನದ್ಯ ವರ್ತತೇ ತದ್ವಿಪರ್ಯಯಮ್ ॥೨೧॥

ಯಾವ ಕಾಲಪುರುಷನು ಈ ಹಿಂದೆ ನಮ್ಮ ಉನ್ನತಿಗೂ ದೇವತೆಗಳ ಅವನತಿಗೂ ಕಾರಣನಾಗಿದ್ದನೋ ಅದೇ ಕಾಲಪುರುಷನೇ ಈಗ ನಮ್ಮ ಅವನತಿಗೂ ದೇವತೆಗಳ ಉನ್ನತಿಗೂ ಕಾರಣನಾಗಿದ್ದಾನೆ.

ಬಲೇನ ಸಚಿವೈರ್ಬುದ್ಧ್ಯಾ ದುರ್ಗೈರ್ಮನ್ತ್ರೌಷದಾದಿಭಿಃ ।
ಸಾಮಾದಿಭಿರುಪಾಯೈಶ್ಚ ಕಾಲಂ ನಾತ್ಯೇತಿ ವೈ ಜನಃ ॥೨೨॥

ಜನರು ಬಲದಿಂದಾಗಲೀ, ಮಂತ್ರಿಗಳಿಂದಾಗಲೀ, ಬುದ್ಧಿಯಿಂದಾ ಗಲೀ, ಕೋಟೆ-ಕೊತ್ತಲುಗಳಿಂದಾಗಲೀ, ಮಂತ್ರ-ಔಷಧ–ಇವೇ ಮೊದ ಲಾದುವುಗಳಿಂದಾಗಲೀ, ಸಾಮ-ದಾನ ಇವೇ ಮೊದಲಾದ ಉಪಾಯ ಗಳಿಂದಾಗಲೀ ಕಾಲಪುರುಷನನ್ನು ಅತಿಕ್ರಮಿಸಲಾರರು.

ಭವದ್ಭಿರ್ನಿರ್ಜಿತಾ ಹ್ಯೇತೇ ಬಹುಶೋಽನುಚರಾ ಹರೇಃ ।
ದೈವೇನರ್ದ್ಧೈಸ್ತ ಏವಾದ್ಯ ಯುಧಿ ಜಿತ್ವಾ ನದನ್ತಿ ನಃ ॥೨೩॥

ಯಾವಾಗ ನಿಮಗೆ ದೈವಾನುಕೂಲವಿದ್ದಿತೋ ಆಗ ನೀವು ಹಲವಾರು ಬಾರಿ ಈ ವಿಷ್ಣುಪಾರ್ಷದರನ್ನೇ ಪರಾಜಯಗೊಳಿಸಿರುವಿರಿ. ಆದರೆ ಕಾಲದ ವೈಪರೀತ್ಯದಿಂದಾಗಿ ಈಗ ಅದೇ ವಿಷ್ಣುಪಾರ್ಷದರು ನಮ್ಮಮೇಲೆ ಜಯಗಳಿಸಿ ಸಿಂಹನಾದಮಾಡುತ್ತಿದ್ದಾರೆ.

ಏತಾನ್ವಯಂ ವಿಜೇಷ್ಯಾಮೋ ಯದಿ ದೈವಂ ಪ್ರಸೀದತಿ ।
ತಸ್ಮಾತ್ಕಾಲಂ ಪ್ರತೀಕ್ಷಧ್ವಂ ಯೋ ನೋಽರ್ಥತ್ವಾಯ ಕಲ್ಪತೇ ॥೨೪॥

ಮುಂದೆ ದೈವಾನುಕೂಲವು ಒದಗಿಬಂದಾಗ ಪುನಃ ಅವರನ್ನು ನಾವು ಜಯಿಸಿಯೇ ಜಯಿಸುತ್ತೇವೆ. ಆದುದರಿಂದ ನೀವೆಲ್ಲರೂ ಯುದ್ಧವನ್ನು

ನಿಲ್ಲಿಸಿ ನಮ್ಮ ಕಾರ್ಯಸಿದ್ಧಿಗೆ ಅನುಕೂಲವಾಗುವಂತಹ ಕಾಲವನ್ನು ಪ್ರತೀಕ್ಷಿಸುತ್ತಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಹೀಗೆ ದೈತ್ಯಸೇನಾನಾಯಕರು ತಮ್ಮ ರಾಜನು ಹೇಳಿದ ಮಾತುಗಳನ್ನು ಕೇಳಿ ವಿಷ್ಣುವಿನ ಪಾರ್ಷದರಿಂದ ಪರಾಜಿತರೂ ಆಗಿ ರಸಾತಲಕ್ಕೆ ಹೊರಟುಹೋದರು. ರಾಕ್ಷಸನಾಯಕರೆಲ್ಲರೂ ರಸಾತಲಕ್ಕೆ ಹೊರಟುಹೋದನಂತರ ಪಕ್ಷಿಶ್ರೇಷ್ಠನಾದ ಗರುಡನು ಶ್ರೀವಾಮನ ಮೂರ್ತಿಯ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ತಿಳಿದು, ಬಲಿಯು ಪ್ರಾರಂಭಿಸಿದ್ದ ಅಶ್ವಮೇಧಯಾಗದಲ್ಲಿ ಸೋಮಾಭಿಷವದ ಸೋಮಪಾನ ವಾಗಬೇಕಾಗಿದ್ದ ಆ ದಿವಸದಲ್ಲಿ ವರುಣನ ಪಾಶಗಳಿಂದ ಬಲಿಯನ್ನು ಬಂಧಿಸಿದನು.* ಸರ್ವಶಕ್ತಿವಂತನಾದ, ಭಗವಂತನಾದ ಮಹಾವಿಷ್ಣುವು ಬಲಿಯನ್ನು ಬಂಧಿಸುತ್ತಿದ್ದಂತೆಯೇ ಭೂಮ್ಯಂತರಿಕ್ಷಗಳಲ್ಲಿಯೂ ಮತ್ತು ಸಮಸ್ತದಿಕ್ಕುಗಳಲ್ಲಿಯೂ ದೊಡ್ಡದಾದ ಹಾಹಾಕಾರವೇ ಉಂಟಾಯಿತು. ಭಗವಂತನಾದ ಶ್ರೀವಾಮನಮೂರ್ತಿಯು ವರುಣಪಾಶಗಳಿಂದ ಬಂಧಿಸ ಲ್ಪಟ್ಟಿದ್ದ, ಐಶ್ವರ್ಯದಿಂದ ಭ್ರಷ್ಟನಾಗಿದ್ದರೂ ಸ್ಥಿತಪ್ರಜ್ಞನಾಗಿದ್ದ, ಶ್ರೇಷ್ಠವಾದ ಯಶಸ್ಸನ್ನು ಗಳಿಸಿದ್ದ ಬಲಿಚಕ್ರವರ್ತಿಗೆ ಹೇಳಿದನು :

ಪದಾನಿ ತ್ರೀಣಿ ದತ್ತಾನಿ ಭೂಮೇರ್ಮಹ್ಯಂ ತ್ವಯಾಸುರ ।
ದ್ವಾಭ್ಯಾಂ ಕ್ರಾನ್ತಾ ಮಹೀ ಸರ್ವಾ ತೃತೀಯಮುಪಕಲ್ಪಯ ॥೨೯॥

"ರಾಕ್ಷಸೇಶ್ವರ! ನೀನು ನನಗೆ ಮೂರು ಹೆಜ್ಜೆಯಷ್ಟು ಭೂಮಿ ಯನ್ನು ದಾನಮಾಡಿದೆ. ಎರಡು ಹೆಜ್ಜೆಗಳಿಂದ ಸಮಸ್ತಭೂಮಂಡಲವೂ

---

* 'ಸರ್ವಸ್ವವನ್ನೂ ಅಪಹರಿಸಿ ಈತನಿಗಿದ್ದ 'ನನ್ನದು-ತನ್ನದು'–ಎಂಬ ಅಭಿಮಾನವನ್ನು ಹೋಗಲಾಡಿಸಿದೆನು. ಇನ್ನು ಶರೀರವನ್ನೂ ವಶಪಡಿಸಿಕೊಂಡು 'ನಾನು'–ಎಂಬ ಅಹಂಕಾರವನ್ನು ಕೂಡ ತೊಲಗಿಸಿ ಪರಮಾನುಗ್ರಹವನ್ನು ಮಾಡುವೆನು. ಈತನಿಗೆ ಸಮಾನನಾದ ಧೀರನಾಗಲೀ, ಸತ್ಯಸಂಧನಾಗಲೀ, ಮತ್ತಾವನೂ ಇಲ್ಲ. ಆದುದರಿಂದ ಇವನನ್ನು ಬಗೆ-ಬಗೆಯಾಗಿ ಹಿಂಸಿಸಿ ಈತನ ಕೀರ್ತಿಯನ್ನು ಲೋಕದಲ್ಲಿ ಹರಡುವೆನು'–ಎಂಬ ವಾಮನಮೂರ್ತಿಯ ಅಭಿಪ್ರಾಯವನ್ನು ತಿಳಿದು ಗರುಡನು ಬಲಿಯನ್ನು ವರುಣಪಾಶಗಳಿಂದ ಬಂಧಿಸಿದನು.

ಸ್ವರ್ಗ-ಪಾತಾಳಗಳೂ, ದಶದಿಕ್ಕುಗಳೂ ಆಕ್ರಮಿಸಲ್ಪಟ್ಟುವು. ಈಗ ನನಗೆ ಕೊಡಬೇಕಾಗಿರುವ ಮೂರನೆಯ ಹೆಜ್ಜೆಗೆ ಸ್ಥಳಾವಕಾಶವನ್ನು ಮಾಡಿಕೊಡು.

ಸೂರ್ಯನ ಕಿರಣಗಳು ಎಲ್ಲಿಯವರೆಗೆ ಪ್ರಸರಿಸಿವೆಯೋ ಚಂದ್ರನ ಮತ್ತು ನಕ್ಷತ್ರಗಳ ಕಿರಣಗಳು ಎಲ್ಲಿಯವರೆಗೆ ಪ್ರಸರಿಸಿವೆಯೋ, ಎಲ್ಲಿಯ ವರೆಗೆ ಮೋಡಗಳು ಹೋಗಿ ಮಳೆಗರೆಯುತ್ತವೆಯೋ ಅಲ್ಲಿಯವರೆಗಿನ ಭೂಮಂಡಲವೆಲ್ಲವೂ ನಿನ್ನ ಅಧೀನದಲ್ಲಿದ್ದಿತು. ನೀನು ನೋಡುತ್ತಿದ್ದಂತೆಯೇ ನಾನು ನನ್ನ ಒಂದು ಹೆಜ್ಜೆಯಿಂದ ಭೂಲೋಕಗಳನ್ನೂ ಶರೀರದಿಂದ ಆಕಾಶವನ್ನೂ ಮತ್ತು ದಿಕ್ಕುಗಳನ್ನೂ ಎರಡನೆಯ ಹೆಜ್ಜೆಯಿಂದ ಸ್ವರ್ಗ ಲೋಕಗಳನ್ನೂ ಅಳೆದುಕೊಂಡೆನು. ಈ ಎರಡು ಹೆಜ್ಜೆಗಳ ಅಳತೆಯಿಂದಲೇ ನಿನ್ನದೆಲ್ಲವೂ ನನ್ನದಾಗಿ ಹೋಗಿದೆ. ನೀನು ಯಾವ ಪ್ರತಿಜ್ಞೆಯನ್ನು ಮಾಡಿದ್ದೆಯೋ ಆ ಪ್ರತಿಜ್ಞೆಗೆ ಅನುಸಾರವಾಗಿ ನೀನು ನಡೆದುಕೊಳ್ಳಲು ಸಾಧ್ಯವಾಗದೇ ಇರುವುದರಿಂದ ನೀನೀಗ ನರಕಕ್ಕೆ ಹೋಗಬೇಕಾಗಿದೆ. ಆದುದರಿಂದ ನಿನ್ನ ಗುರುಗಳಾದ ಶುಕ್ರಾಚಾರ್ಯರ ಅನುಮತಿಯನ್ನು ಪಡೆದು ನೀನೀಗಲೇ ನರಕವನ್ನು ಪ್ರವೇಶಿಸು.

ವೃಥಾ ಮನೋರಥಸ್ತಸ್ಯ ದೂರೇ ಸ್ವರ್ಗಃ ಪತತ್ಯಧಃ ।
ಪ್ರತಿಶ್ರುತಸ್ಯಾದಾನೇನ ಯೋऽರ್ಥಿನಂ ವಿಪ್ರಲಮ್ಭತೇ ॥೩೩॥

ಯಾವನು ಯಾಚಕನಿಗೆ ದಾನಕೊಡುವೆನೆಂದು ಪ್ರತಿಜ್ಞೆಯನ್ನು ಮಾಡಿ ಆಸೆಯನ್ನು ಹುಟ್ಟಿಸಿ ಅದನ್ನು ಮಾಡುವುದಕ್ಕೆ ಸಮರ್ಥನಾಗುವುದಿಲ್ಲವೋ– ಅಂತಹವನ ಮನೋರಥಗಳೆಲ್ಲವೂ ವ್ಯರ್ಥವಾಗಿ ಹೋಗುವುವು. ಪ್ರತಿಜ್ಞಾಭಂಗದ ಫಲವಾಗಿ ಅವನು ನರಕದಲ್ಲಿ ಬೀಳುವನು. ಆಢ್ಯನೆಂಬ ಅಭಿಮಾನದಿಂದ ಕೂಡಿರುವ ನೀನು ದಾನಮಾಡುವೆನೆಂದು ಹೇಳಿ ದಾನವನ್ನು ಪೂರ್ಣಗೊಳಿಸದೆ ನನ್ನನ್ನು ವಂಚಿಸಿದೆ. ಆದುದರಿಂದ ನೀನು ಕೆಲವು ಸಂವತ್ಸರಗಳಾದರೂ ನರಕದಲ್ಲಿದ್ದು ಈ ಪಾಪದ ಫಲವನ್ನು ಅನುಭವಿಸು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೨೧ನೆಯ ಅಧ್ಯಾಯವು ಮುಗಿಯಿತು.

ಬಲಿಯು ಭಗವಂತನನ್ನು ಸ್ತೋತ್ರಮಾಡಿದುದು : ಭಗವಂತನು ಬಲಿಗೆ ಪ್ರಸನ್ನನಾದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಏವಂ ವಿಪ್ರಕೃತೋ ರಾಜನ್ಬಲಿರ್ಭಗವತಾಸುರಃ ।
ಭಿದ್ಯಮಾನೋಽಪ್ಯಭಿನ್ನಾತ್ಮಾ ಪ್ರತ್ಯಾಹಾವಿಕ್ಲವಂ ವಚಃ ॥೧॥

ಪರೀಕ್ಷಿತನೇ! ಹೀಗೆ ಭಗವಂತನು ಬಲಿಯನ್ನು ಬಹಳವಾಗಿ ತಿರಸ್ಕರಿಸಿ ಮಾತನಾಡಿದರೂ ಬಲಿಯು ಧೈರ್ಯದಿಂದ ಕದಲಲಿಲ್ಲ. ಸ್ವಲ್ಪವಾದರೂ ಎದೆಗುಂದದೆ ನಿರ್ಭಯನಾಗಿ ಈ ಮಾತನ್ನು ಶ್ರೀವಾಮನ ಮೂರ್ತಿಗೆ ಹೇಳಿದನು :

ಯದ್ಯುತ್ತಮಶ್ಲೋಕ ಭವಾನ್ಮಮೇರಿತಂ
ವಚೋ ವ್ಯಲೀಕಂ ಸುರವರ್ಯ ಮನ್ಯತೇ ।
ಕರೋಮ್ಯೃತಂ ತನ್ನ ಭವೇತ್ಪ್ರಲಮ್ಭನಂ
ಪದಂ ತೃತೀಯಂ ಕುರು ಶೀರ್ಷ್ಣಿ ಮೇ ನಿಜಮ್ ॥೨॥

"ಸುರಶ್ರೇಷ್ಠನೇ! ಪುಣ್ಯಶ್ಲೋಕನೇ! ನಾನು ಕೊಟ್ಟಮಾತು ಅಸತ್ಯವಾಯಿತೆಂದು ಭಾವಿಸುವೆಯಾ? ಹಾಗೆಂದಿಗೂ ಆಗಲಾರದು. ನಾನು ಮಾಡಿಕೊಟ್ಟ ಪ್ರತಿಜ್ಞೆಯನ್ನು ಸತ್ಯಪ್ರತಿಜ್ಞೆಯನ್ನಾಗಿ ಮಾಡಿಕೊಡುತ್ತೇನೆ. ನಿನ್ನನ್ನೆಂದಿಗೂ ವಂಚಿಸುವುದಿಲ್ಲ. ನಿನ್ನ ಮೂರನೆಯ ಹೆಜ್ಜೆಯನ್ನಿಡಲು ಸ್ಥಳಾವಕಾಶವನ್ನು ಕೇಳಿದೆಯಲ್ಲವೆ? ಇದೋ ನನ್ನ ಈ ತಲೆಯ ಮೇಲೆ ನಿನ್ನ ಮೂರನೆಯ ಹೆಜ್ಜೆಯನ್ನಿಡು.

ಬಿಭೇಮಿ ನಾಹಂ ನಿರಯಾತ್ಪದಚ್ಯುತೋ
ನ ಪಾಶಬನ್ಧಾದ್ವ್ಯಸನಾದ್ದುರತ್ಯಯಾತ್ ।
ನೈವಾರ್ಥಕೃಚ್ಛ್ರಾದ್ಭವತೋ ವಿನಿಗ್ರಹಾ-
ದಸಾಧುವಾದಾದ್ಭೃಶಮುದ್ವಿಜೇ ಯಥಾ ॥೩॥

ದೇವದೇವ! ನನಗೆ ನರಕಕ್ಕೆ ಹೋಗುವುದಾಗಲೀ, ರಾಜ್ಯದಿಂದ

ಭ್ರಷ್ಟನಾದುದಕ್ಕಾಗಲೀ ಭಯವಿಲ್ಲ. ವರುಣಪಾಶದ ಬಂಧನದಿಂದಲೂ ನನಗೆ ಭಯವುಂಟಾಗಿಲ್ಲ. ಅಪಾರವಾದ ದುಃಖಸಾಗರದಲ್ಲಿ ಮುಳುಗಿದರೂ ನನಗೆ ಭಯವಿಲ್ಲ. ಅರ್ಥವೆಲ್ಲವೂ ಹೋಗಿ ದಟ್ಟದಾರಿದ್ರ್ಯವನ್ನು ಅನುಭವಿಸುವುದಕ್ಕೂ ನಾನು ಭಯಪಡುವುದಿಲ್ಲ. ನೀನು ನನ್ನನ್ನು ಶಿಕ್ಷಿಸುವೆಯೆಂದೂ ನಾನು ಭಯಪಡುವುದಿಲ್ಲ. ನಾನು ಭಯಪಡುವುದು ಕೇವಲ ಅಪಯಶಸ್ಸಿಗೆ ಮಾತ್ರ.

ಪುಂಸಾಂ ಶ್ಲಾಘ್ಯತಮಂ ಮನ್ಯೇ ದಣ್ಡಮರ್ಹತ್ತಮಾರ್ಪಿತಮ್ ।
ಯಂ ನ ಮಾತಾ ಪಿತಾ ಭ್ರಾತಾ ಸುಹೃದಶ್ಚಾದಿಶನ್ತಿ ಹಿ ॥೪॥

ಪೂಜ್ಯತಮನಾದ ಭಗವಂತನು ಕೊಡುವ ಶಿಕ್ಷೆಯು ಪುರುಷರಿಗೆ ಶ್ರೇಯಸ್ಕರವಾದುದೆಂದು ನಾನು ಭಾವಿಸುತ್ತೇನೆ. ಏಕೆಂದರೆ : ಅಂತಹ ಶಿಕ್ಷೆಯನ್ನು ಮೋಹಪರವಶರಾದ ಮಾತಾ-ಪಿತೃಗಳಾಗಲೀ, ಸಹೋದರ-ಸಹೃದಯರಾಗಲೀ ಕೊಡಲಾರರು.

ತ್ವಂ ನೂನಮಸುರಾಣಾಂ ನಃ ಪಾರೋಕ್ಷ್ಯಃ ಪರಮೋ ಗುರುಃ ।
ಯೋ ನೋಽನೇಕಮದಾನ್ಧಾನಾಂ ವಿಭ್ರಂಶಂ ಚಕ್ಷುರಾದಿಶತ್ ॥೫॥

ಅನೇಕವಾದ ಧನಮದ-ಶೌರ್ಯಮದ–ಇವೇ ಮೊದಲಾದ ಮದಗಳಿಂದ ಕುರುಡರಾಗಿಹೋಗಿದ್ದ ನಮಗೆ–ಯಾವನು ಆ ಮದವನ್ನು ಹೋಗಲಾಡಿಸುವ ಜ್ಞಾನದೃಷ್ಟಿಯನ್ನು ದಯಪಾಲಿಸಿದನೋ–ಅಂತಹ ನೀನೇ ಅಸುರರಾದ ನಮಗೆ ಶತ್ರುವ್ಯಾಜದಿಂದ ಪರಮಗುರುವಾಗಿರುವೆ. ಇದು ಸತ್ಯ.

ಯಸ್ಮಿನ್ವೈರಾನುಬನ್ಧೇನ ರೂಢೇನ ವಿಬುಧೇತರಾಃ ।
ಬಹವೋ ಲೇಭಿರೇ ಸಿದ್ಧಿಂ ಯಾಮು ಹೈಕಾನ್ತಯೋಗಿನಃ ॥೬॥

ನಿನ್ನಿಂದ ರಾಕ್ಷಸರಾದ ನಮಗೆ ಎಷ್ಟು ಉಪಕಾರವಾಗುತ್ತಿದೆಯೆಂಬುದನ್ನು ಎಷ್ಟು ಬಗೆಯಲ್ಲಿ ವರ್ಣಿಸಿದರೂ ಸಾಲದು. ಪ್ರಭುವೇ! ಏಕಾಂತ ಯೋಗಿಗಳು ಅನನ್ಯಭಕ್ತಿಯಿಂದ ಯೋಗಾಭ್ಯಾಸವನ್ನು ಮಾಡುತ್ತಾ ಯಾವ ಪರಮಪದದ ಪ್ರಾಪ್ತಿಯೆಂಬ ಸಿದ್ಧಿಯನ್ನು ಪಡೆಯುವರೋ ಅಂತಹ ಸಿದ್ಧಿ

ಯನ್ನು ನಿನ್ನಲ್ಲಿ ರೂಢಮೂಲವಾದ ವೈರವನ್ನಿಟ್ಟುಕೊಂಡೇ ನಮ್ಮವರು ಪಡೆದುಕೊಳ್ಳುತ್ತಾರೆ.

ತೇನಾಹಂ ನಿಗೃಹೀತೋಽಸ್ಮಿ ಭವತಾ ಭೂರಿಕರ್ಮಣಾ ।
ಬದ್ಧಶ್ಚ ವಾರುಣೈಃ ಪಾಶೈರ್ನಾತಿವ್ರೀಡೇ ನ ಚ ವ್ಯಥೇ ॥೭॥

ಇಂತಹ ಅಪಾರಮಹಿಮೆಯೂ ಅನಂತವಾದ ಲೀಲೆಯೂ ಯಾವನಲ್ಲಿವೆಯೋ ಅಂತಹ ಪರಮಪುರುಷಪರಮಾತ್ಮನಿಂದ ನಾನು ಶಿಕ್ಷಿಸಲ್ಪಟ್ಟಿದ್ದೇನೆ ಮತ್ತು ವರುಣನ ಪಾಶಗಳಿಂದ ಬಂಧಿಸಲ್ಪಟ್ಟಿದ್ದೇನೆ. ಇದರಿಂದ ನನಗೆ ಯಾವ ವಿಧವಾದ ನಾಚಿಕೆಯೂ ಇಲ್ಲ ; ವ್ಯಥೆಯೂ ಇಲ್ಲ.

ಪಿತಾಮಹೋ ಮೇ ಭವದೀಯಸಂಮತಃ ।
ಪ್ರಹ್ಲಾದ ಆವಿಷ್ಕೃತ ಸಾಧುವಾದಃ ।
ಭವದ್ವಿಪಕ್ಷೇಣ ವಿಚಿತ್ರವೈಶಸಂ
ಸಂಪ್ರಾಪಿತಸ್ತ್ವತ್ಪರಮಃ ಸ್ವಪಿತ್ರಾ ॥೮॥

ಪ್ರಭುವೇ! ನನ್ನ ಪಿತಾಮಹನಾದ ಪ್ರಹ್ಲಾದನ ಕೀರ್ತಿಯು ಜಗತ್ಪ್ರಸಿದ್ಧವಾಗಿದೆ. ಅವನು ನಿನ್ನ ಭಕ್ತರಲ್ಲಿ ಶ್ರೇಷ್ಠನಾದವನೆಂದು ಪರಿಗಣಿಸಲ್ಪಟ್ಟಿದ್ದಾನೆ. ಅವನ ತಂದೆಯಾದ ಹಿರಣ್ಯಕಶಿಪುವು ನಿನ್ನ ಮೇಲಿದ್ದ ದ್ವೇಷದ ಕಾರಣದಿಂದಾಗಿ ಮಗನಾದ ಪ್ರಹ್ಲಾದನಿಗೆ ಹಲವು ಬಗೆಯಾದ ಶಿಕ್ಷೆಗಳನ್ನು ಕೊಟ್ಟು ಚಿತ್ರಹಿಂಸೆಮಾಡಿದನು. ಆದರೂ ನಮ್ಮ ಪಿತಾಮಹನು ನಿನ್ನನ್ನೇ ಪರಮಾಶ್ರಯವನ್ನಾಗಿ ಭಾವಿಸಿದನು. ತನ್ನ ಜೀವನವನ್ನೇ ಅವನು ಸಂಪೂರ್ಣವಾಗಿ ನಿನಗೆ ಒಪ್ಪಿಸಿಬಿಟ್ಟನು.

ಕಿಮಾತ್ಮನಾನೇನ ಜಹಾತಿ ಯೋಽನ್ತತಃ
ಕಿಂ ರಿಕ್ಥಹಾರೈಃ ಸ್ವಜನಾಖ್ಯದಸ್ಯುಭಿಃ ।
ಕಿಂ ಜಾಯಯಾ ಸಂಸೃತಿಹೇತುಭೂತಯಾ
ಮರ್ತ್ಯಸ್ಯ ಗೇಹೈಃ ಕಿಮಿಹಾಯುಷೋ ವ್ಯಯಃ ॥೯॥

ನಮ್ಮ ತಾತನಾದ ಪ್ರಹ್ಲಾದನ ಅಭಿಪ್ರಾಯವು ಹೀಗಿದ್ದಿತು. “ಎಂದಾದರೊಂದು ದಿನ ಕಳಚಿಬಿದ್ದು ಹೋಗುವ ಶರೀರದಿಂದ ಯಾವ ಪ್ರಯೋಜನವಿದೆ? ಇಂತಹ ನಶ್ವರವಾದ ಶರೀರದ ಮೇಲೆ ಅಭಿಮಾನ

ವನ್ನು ಏಕೆ ಇಟ್ಟುಕೊಳ್ಳಬೇಕು? ಧನ-ಕನಕ-ವಸ್ತು-ವಾಹನಾದಿ ಸಂಪತ್ತುಗಳನ್ನು ಅಪಹರಿಸುವ ತಮ್ಮ ಮಗ-ಮಾವ–ಇತ್ಯಾದಿ ಹೆಸರುಗಳನ್ನು ಪಡೆದಿರುವ ಕಳ್ಳರಿಂದೇನು ಪ್ರಯೋಜನ? ಸಂಸಾರಕ್ಕೆ ಮೂಲಕಾರಣಳಾದ ಹೆಂಡತಿಯಿಂದೇನು ಪ್ರಯೋಜನ? ಮನೆ-ಮಠಗಳಿಂದಲೂ ಏನಾಗಬೇಕಾಗಿದೆ? ಇವೆಲ್ಲವೂ ಕೇವಲ ಆಯುಷ್ಯದ ವ್ಯಯಕ್ಕಾಗಿಯೇ ಹೊರತು ಇವುಗಳಿಂದ ಯಾವುದೂ ಸಿದ್ಧಿಸುವುದಿಲ್ಲ. ಆತ್ಮಸಾಕ್ಷಾತ್ಕಾರವಂತೂ ಬಹಳ ದೂರದಲ್ಲಿಯೇ ಉಳಿಯುತ್ತದೆ."

ಪ್ರಭುವೇ! ನನ್ನ ಪಿತಾಮಹನು ಮಹಾಜ್ಞಾನಿಯು. ಸಾಧುಶ್ರೇಷ್ಠನು. ಅಂತಹ ಮಹಾತ್ಮನು ಹೀಗೆ ನಿಶ್ಚಯಿಸಿ ಸಂಸಾರಿಗಳಾದ ಜನರಿಗೆ ಹೆದರಿ, ತನ್ನ ಕುಲವನ್ನೇ ನಾಶಗೊಳಿಸಿದರೂ ನಿನ್ನ ವಿಷಯದಲ್ಲಿ ಸ್ವಲ್ಪವಾದರೂ ಭಯವಿಲ್ಲದವನಾಗಿ ನಿನ್ನ ಪಾದಕಮಲಗಳನ್ನೇ ದೃಢವಾಗಿ ಹಿಡಿದುಕೊಂಡುಬಿಟ್ಟನು. ಮೂಢಮತಿಗಳು ಐಶ್ವರ್ಯದ ಮದದಿಂದ ಈ ಜೀವನವು ಯಮನಿಗೆ ವಶವಾಗಿರುವುದೆಂಬುದನ್ನಾಗಲೀ ಈ ಬಾಳು ನಶ್ವರವಾದುದೆಂಬುದನ್ನಾಗಲೀ ತಿಳಿದೇ ಇರುವುದಿಲ್ಲ. ನನ್ನ ವಿಷಯದಲ್ಲಿ ಪರಮ ದಯಾಳುವಾಗಿರುವ ಆ ದೈವವು ಅಹಂಕಾರಕ್ಕೆ ಕಾರಣವಾದ ಸಂಪತ್ತನ್ನೂ ಬಲತ್ಕಾರವಾಗಿ ಅಪಹರಿಸಿ ಶತ್ರುವಾದ ನಿನ್ನ ಬಳಿಗೇ ನನ್ನನ್ನು ದೂಡಿಬಿಟ್ಟಿದೆ. ಇದರಿಂದ ನಾನು ಧನ್ಯನಾಗಿದ್ದೇನೆ."

ಪರೀಕ್ಷಿತನೇ! ಹೀಗೆ ಆ ಬಲಿಯು ಶ್ರೀವಾಮನಮೂರ್ತಿಯೊಡನೆ ಮಾತನಾಡುತ್ತಿರುವಾಗಲೇ–ಆಗತಾನೇ ಉದಯಿಸಿದ ಚಂದ್ರನಂತೆ ಪ್ರಕಾಶಮಾನನಾಗಿದ್ದ, ಭಗವಂತನಿಗೆ ಪರಮಪ್ರಿಯನಾದ ಪ್ರಹ್ಲಾದನು ಆಗಮಿಸಿದನು. ಕಾಂತಿಯಿಂದ ವಿರಾಜಿಸುವ ಕಮಲದಂತೆ ವಿಶಾಲವಾದ ಕಣ್ಣುಗಳನ್ನು ಹೊಂದಿದ್ದ, ಉನ್ನತನಾಗಿದ್ದ, ಹಳದಿಯ ಬಣ್ಣದ ವಸ್ತ್ರವನ್ನುಟ್ಟಿದ್ದ, ಕಾಡಿಗೆಯ ಬಣ್ಣವುಳ್ಳ, ಆಜಾನುಬಾಹುವಾಗಿದ್ದ, ಸುಂದರನಾಗಿದ್ದ ತನ್ನ ಪಿತಾಮಹನಾದ ಪ್ರಹ್ಲಾದನನ್ನು ಬಲಿಯು ನೋಡಿದನು. ವರುಣನ ಪಾಶಗಳಿಂದ ಬಂಧಿಸಲ್ಪಟ್ಟಿದ್ದ ಬಲಿಗೆ ಪಿತಾಮಹನನ್ನು ಹಿಂದಿನಂತೆ ಸತ್ಕರಿಸಲು ಸಾಧ್ಯವಾಗಲಿಲ್ಲ. ಕಂಬನಿತುಂಬಿದ ಕಣ್ಣುಗಳಿಂದ ಕೂಡಿ ಕೇವಲ

ತಲೆಯನ್ನು ತಗ್ಗಿಸುವುದರಿಂದಲೇ ಪ್ರಹ್ಲಾದನನ್ನು ವಂದಿಸಿ ಪುನಃ ನಾಚಿಕೆ ಯಿಂದ ತಲೆತಗ್ಗಿಸಿಕೊಂಡೇ ಕುಳಿತನು.

ಮಹಾತ್ಮನಾದ ಪ್ರಹ್ಲಾದನು, ಸುನಂದನೇ ಮೊದಲಾದ ಭಕ್ತರಿಂದ ಸೇವಿಸಲ್ಪಡುತ್ತಿದ್ದ, ಸತ್ಪುರುಷರಿಗೆ ಒಡೆಯನಾದ ಶ್ರೀಹರಿಯನ್ನು ನೋಡಿ ಪುಲಕಿತನಾಗಿ, ಆನಂದಬಾಷ್ಪವನ್ನು ಸುರಿಸುತ್ತಾ ಶ್ರೀಹರಿಯ ಬಳಿಗೆ ಹೋಗಿ ದೀರ್ಘದಂಡನಮಸ್ಕಾರವನ್ನು ಮಾಡಿ ಕೈಜೋಡಿಸಿಕೊಂಡು ಹೇಳಿದನು :

(ಶ್ಲೋಕ 10-15)

ತ್ವಯೈವ ದತ್ತಂ ಪರಮೈನ್ದ್ರಮೂರ್ಜಿತಂ
ಹೃತಂ ತದೇವಾದ್ಯ ತಥೈವ ಶೋಭನಮ್ ।
ಮನ್ಯೇ ಮಹಾನದ್ಯ ಕೃತೋ ಹ್ಯನುಗ್ರಹೋ
ವಿಭ್ರಂಶಿತೋ ಯಚ್ಛ್ರಿಯ ಆತ್ಮಮೋಹನಾತ್ ॥೧೬॥

“ಭಗವಂತ! ಈ ಬಲಿಗೆ ಐಶ್ವರ್ಯಪೂರ್ಣವಾದ ಇಂದ್ರಪದವಿ ಯನ್ನು ಕೊಟ್ಟವನೂ ನೀನೇ. ಈಗ ಅದೇ ಸಾರ್ವಭೌಮತ್ವವನ್ನು ಅಪಹರಿಸುತ್ತಿರುವವನೂ ನೀನೇ. ಈಗ ಇವನ ಸಂಪತ್ತನ್ನು ಅಪಹರಿಸಿದ್ದು ಇವನಿಗೆ ಶ್ರೇಯಸ್ಕರವೇ ಆಗಿದೆ. ಮನಸ್ಸನ್ನು ಮರುಳುಗೊಳಿಸುವ ಸಂಪತ್ತಿನಿಂದ ಜಾರಿಸಿದ್ದು ಇವನ ಮೇಲೆ ನೀನು ತೋರಿರುವ ಪರಮಾನುಗ್ರಹವೆಂದೇ ನಾನು ಭಾವಿಸುತ್ತೇನೆ.

ಯಯಾ ಹಿ ವಿದ್ವಾನಪಿ ಮುಹ್ಯತೇ ಯತ-
ಸ್ತತ್ಕೋ ವಿಚಷ್ಟೇ ಗತಿಮಾತ್ಮನೋ ಯಥಾ ।
ತಸ್ಮೈ ನಮಸ್ತೇ ಜಗದೀಶ್ವರಾಯ ವೈ
ನಾರಾಯಣಾಯಾಖಿಲಲೋಕಸಾಕ್ಷಿಣೇ ॥೧೭॥

ಐಶ್ವರ್ಯಮದವು ವಿದ್ವಾಂಸನನ್ನಾದರೂ ಮರುಳುಗೊಳಿಸುತ್ತದೆ. ಧನಮದವಿರುವಾಗ ಯಾವನಿಗೆ ತಾನೇ ಸ್ವ-ಸ್ವರೂಪವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ? ಆತ್ಮೋದ್ಧಾರಕ್ಕೆ ತಡೆಯನ್ನುಂಟುಮಾಡುವ ಅಂತಹ ಐಶ್ವರ್ಯವನ್ನು ಕಸಿದುಕೊಂಡು ಮಹೋಪಕಾರಮಾಡುವ, ಸಮಸ್ತ ಜಗತ್ತಿಗೂ ಈಶ್ವರನಾದ, ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ವಿರಾಜ

ಮಾನನಾಗಿರುವ, ಪ್ರಾಣಿಗಳು ಮಾಡುವ ಸಮಸ್ತಕರ್ಮಗಳಿಗೂ ಸಾಕ್ಷೀಭೂತನಾಗಿರುವ ಶ್ರೀಮನ್ನಾರಾಯಣನಿಗೆ ನಮಸ್ಕರಿಸುತ್ತೇನೆ.''

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಶ್ರೀವಾಮನಮೂರ್ತಿಯ ಮುಂದೆ ಪ್ರಹ್ಲಾದನು ಕೈಮುಗಿದುಕೊಂಡು ನಿಂತಿದ್ದನು. ಅವನಿಗೆ ಕೇಳಿಸುವಂತೆಯೇ ಪೂಜ್ಯನಾದ ಬ್ರಹ್ಮದೇವನು ವಾಮನಮೂರ್ತಿಗೆ ಹೇಳತೊಡಗಿದನು. ಅಷ್ಟರಲ್ಲಿ ಬಲಿಯ ಪತ್ನಿಯಾದ ಸಾಧ್ವೀಮಣಿಯಾದ ವಿಂಧ್ಯಾವಲಿಯು ವರುಣನ ಪಾಶಗಳಿಂದ ಬಂಧಿಸಲ್ಪಟ್ಟಿದ್ದ ತನ್ನ ಪತಿಯನ್ನು ನೋಡಿ ಭಯದಿಂದ ಗಾಬರಿಗೊಂಡವಳಾಗಿ ಕೈಜೋಡಿಸಿಕೊಂಡು ಕಂಬನಿಗರೆಯುತ್ತಾ ಶ್ರೀವಾಮನಮೂರ್ತಿಗೆ ನಮಸ್ಕರಿಸಿ ಪ್ರಾರ್ಥಿಸಿಕೊಂಡಳು :

ಕ್ರೀಡಾರ್ಥಮಾತ್ಮನ ಇದಂ ತ್ರಿಜಗತ್ಕೃತಂ ತೇ
ಸ್ವಾಮ್ಯಂ ತು ತತ್ರ ಕುಧಿಯೋಽಪರ ಈಶ ಕುರ್ಯುಃ ।
ಕರ್ತುಃ ಪ್ರಭೋಸ್ತವ ಕಿಮಸ್ಯತ ಆವಹನ್ತಿ
ತ್ಯಕ್ತಹ್ರಿಯಸ್ತ್ವದವರೋಪಿತಕರ್ತೃವಾದಾಃ ॥೨೦॥

``ಸ್ವಾಮಿಯೇ! ನಿನ್ನ ಆಟಕ್ಕಾಗಿಯೇ ಈ ಮೂರು ಲೋಕಗಳೂ ನಿನ್ನಿಂದಲೇ ಸೃಷ್ಟಿಸಲ್ಪಟ್ಟಿವೆ. ಸೃಷ್ಟಿ-ಸ್ಥಿತಿ-ಲಯಗಳಿಗೂ ನೀನೇ ಕಾರಣನಾಗಿರುವೆ. ಸಾಮ್ರಾಜ್ಯಗಳನ್ನು ನಿನ್ನ ಅನುಗ್ರಹದಿಂದಲೇ ಪಡೆದ ಕೆಲವು ಬುದ್ಧಿಹೀನರು ಸಾಮ್ರಾಜ್ಯವು ತಮ್ಮದೇ ಎಂದೂ ಭುಜಬಲಪರಾಕ್ರಮದಿಂದ ತಾವೇ ಸಂಪಾದಿಸಿದುದೆಂದೂ ಭಾವಿಸಿಕೊಳ್ಳುತ್ತಾರೆ. ಹೀಗಿರುವಾಗ ನಿನ್ನ ಮಾಯೆಯಿಂದ ವಿಮೋಹಿತರಾಗಿ ಐಶ್ವರ್ಯವನ್ನು ತಮ್ಮದೆಂದೇ ಭಾವಿಸಿಕೊಳ್ಳುವ ನಾಚಿಕೆಗೆಟ್ಟ ಜನರು ನಿನಗೆ ಯಾವುದನ್ನು ತಾನೇ ಸಮರ್ಪಿಸುವರು?''*

---

* `ನಾನು ಮಾಡಿದ ಪ್ರತಿಜ್ಞೆಯಂತೆ ನಾನು ನಡೆದುಕೊಳ್ಳುತ್ತೇನೆ. ಅಪಕೀರ್ತಿಯನ್ನು ನಾನೆಂದಿಗೂ ಸಹಿಸೆನು. ಮೂರನೆಯ ಕಾಲನ್ನು ನನ್ನ ತಲೆಯ ಮೇಲಿಡು'– ಎಂದು ಬಲಿಯು ಹೇಳಿದ್ದೂ, `ನಾನು-ನನ್ನದು'–ಎಂಬ ಭಾವನೆಯಿಂದಲೇ. ಪರಮಾತ್ಮದತ್ತವಾದ ದೇಹಕ್ಕಾದರೂ ಸ್ವತಂತ್ರವೆಲ್ಲಿಬಂತು? ದೇವದತ್ತವಾದ ಶರೀರ

ವಿಂಧ್ಯಾವಲಿಯು ಹೀಗೆ ಹೇಳಿದನಂತರ ಬ್ರಹ್ಮನು ಹೇಳುತ್ತಾನೆ :

ಭೂತಭಾವನ ಭೂತೇಶ ದೇವದೇವ ಜಗನ್ಮಯ ।
ಮುಞ್ಚೈನಂ ಹೃತಸರ್ವಸ್ವಂ ನಾಯಮರ್ಹತಿ ನಿಗ್ರಹಮ್ ॥೨೧॥

"ಸಕಲಪ್ರಾಣಿಗಳನ್ನೂ ಸಲಹತಕ್ಕವನೇ! ಎಲ್ಲ ಪ್ರಾಣಿಗಳಿಗೂ ಒಡೆಯನೇ! ದೇವಶ್ರೇಷ್ಠನೇ! ಪ್ರಪಂಚಸ್ವರೂಪನೇ! ಎಲ್ಲವನ್ನೂ ಕಳೆದುಕೊಂಡಿರುವ ಈ ಬಲಿಯನ್ನು ಬಿಟ್ಟುಬಿಡು. ಪರಮಭಕ್ತನಾಗಿರುವ ಇವನು ಶಿಕ್ಷೆಗೆ ಅರ್ಹನಲ್ಲ.

ಕೃತ್ಸ್ನಾ ತೇಽನೇನ ದತ್ತಾ ಭೂರ್ಲೋಕಾಃ ಕರ್ಮಾರ್ಜಿತಾಶ್ಚ ಯೇ ।
ನಿವೇದಿತಂ ಚ ಸರ್ವಸ್ವಮಾತ್ಮಾವಿಕ್ಲವಯಾ ಧಿಯಾ ॥೨೨॥

ಇವನು ಸಮಗ್ರವಾದ ಭೂಮಂಡಲವನ್ನೂ ನಿನಗೆ ಅರ್ಪಿಸಿಬಿಟ್ಟಿದ್ದಾನೆ. ಸತ್ಕರ್ಮಗಳಿಂದ ಸಂಪಾದಿಸಲ್ಪಟ್ಟಿದ್ದ ಪುಣ್ಯಲೋಕಗಳನ್ನೂ ನಿನಗೆ ಅರ್ಪಿಸಿಬಿಟ್ಟಿದ್ದಾನೆ. ಎಲ್ಲಕ್ಕಿಂತಲೂ ಮಿಗಿಲಾಗಿ ನಿಶ್ಚಿತವಾದ ಬುದ್ಧಿಯಿಂದ ತನ್ನ ಆತ್ಮವನ್ನೇ (ಶರೀರವನ್ನೇ) ನಿನಗೆ ಸಮರ್ಪಿಸಿಬಿಟ್ಟಿದ್ದಾನೆ.

ಯತ್ಪಾದಯೋರಶಠಧೀಃ ಸಲಿಲಂ ಪ್ರದಾಯ
ದೂರ್ವಾಙ್ಕುರೈರಪಿ ವಿಧಾಯ ಸತೀಂ ಸಪರ್ಯಾಮ್ ।
ಅಪ್ಯುತ್ತಮಾಂ ಗತಿಮಸೌ ಭಜತೇ ತ್ರಿಲೋಕೀಂ
ದಾಶ್ವಾನವಿಕ್ಲವಮನಾಃ ಕಥಮಾರ್ತಿಮೃಚ್ಛೇತ್ ॥೨೩॥

ಪ್ರಭುವೇ! ಯಾವ ಮನುಷ್ಯನು ಶುದ್ಧಹೃದಯನಾಗಿ ಲೋಭವಿಲ್ಲದೆ, ನಿನ್ನ ಚರಣಕಮಲಗಳಲ್ಲಿ ಅರ್ಘ್ಯ-ಪಾದ್ಯಾದಿಗಳನ್ನು ಸಮರ್ಪಿಸಿ ಕೇವಲ ಗರಿಕೆಹುಲ್ಲಿನಿಂದ ನಿನಗೆ ಉತ್ತಮವಾದ ಪೂಜೆಯನ್ನು ಸಲ್ಲಿಸುವನೋ

ವನ್ನು ನನ್ನದು–ಎಂದು ಹೇಳಿಕೊಂಡು 'ನನ್ನ ತಲೆಯ ಮೇಲೆ ಕಾಲಿಡು'–ಎಂದು ಹೇಳುವುದೂ ನಾಚಿಕೆಗೇಡಲ್ಲವೇ? ಎಲ್ಲವೂ ನಿನ್ನದೇ ಆಗಿರುವಾಗ ಕೊಡುವುದೇನಿದೆ? ತೆಗೆದುಕೊಳ್ಳುವುದೇನಿದೆ? 'ನನ್ನದು ತಲೆ' 'ನನ್ನ ಕೀರ್ತಿ'–ಎಂದು ಹೇಳಿಕೊಂಡ ಈ ಬಲಿಯು ಬುದ್ಧಿಹೀನನೂ ನಾಚಿಕೆಗೆಟ್ಟವನೂ ಆಗಿಬಿಟ್ಟಿದ್ದಾನೆ. ಆದುದರಿಂದ ಅಹಂಭಾವವು ಇವನಿಂದ ತೊಲಗುವಂತೆ ಮಾಡಿ ಅಹಂಭಾವರೂಪವಾದ ವರುಣಪಾಶದಿಂದಲೂ ವಿಮುಕ್ತಿಗೊಳಿಸು'–ಎಂಬುದು ವ್ಯಾಖ್ಯಾನಕಾರರ ವಿವರಣೆಯಾಗಿದೆ.

ಅಂತಹವನೂ ಕೂಡ ಉತ್ತಮವಾದ ಗತಿಯನ್ನು ಹೊಂದುತ್ತಾನೆ. ಹೀಗಿರುವಾಗ ಆದರಪೂರ್ವಕವಾಗಿಯೂ ನಿಶ್ಚಲವಾದ ಬುದ್ಧಿಯಿಂದಲೂ ಮೂರು ಲೋಕಗಳನ್ನೇ ನಿನ್ನ ಪಾದಾರವಿಂದಗಳಲ್ಲಿ ಸಮರ್ಪಿಸಿರುವ ಈ ಬಲಿಯು ಹೇಗೆತಾನೇ ದುಃಖಕ್ಕೆ ಭಾಗಿಯಾಗುತ್ತಾನೆ?"

ಬ್ರಹ್ಮನ ಈ ಮಾತುಗಳನ್ನು ಕೇಳಿ ಶ್ರೀಭಗವಂತನು ಹೇಳುತ್ತಾನೆ :

ಬ್ರಹ್ಮನ್ಯಮನುಗೃಹ್ಣಾಮಿ ತದ್ವಿಶೋ ವಿಧುನೋಮ್ಯಹಮ್ ।
ಯನ್ಮದಃ ಪುರುಷಃ ಸ್ತಬ್ಧೋ ಲೋಕಂ ಮಾಂ ಚಾವಮನ್ಯತೇ ॥೨೪॥

"ಬ್ರಹ್ಮನೇ! ನಾನು ಯಾರ ಮೇಲೆ ಕೃಪೆದೋರಲು ಅಪೇಕ್ಷಿಸುವೆನೋ ಅಂತಹವನ ಸರ್ವಸ್ವವನ್ನೂ ಮೊದಲು ಅಪಹರಿಸಿಬಿಡುತ್ತೇನೆ. ಏಕೆಂದರೆ ಯಾವಾಗ ಮನುಷ್ಯನು ಧನಮದದಿಂದ ಅಧಿಕಾರಮದದಿಂದ ಮೆರೆದುಹೋಗುವನೋ ಆಗ ಅವನು ನನ್ನನ್ನೂ, ಲೋಕವನ್ನೂ (ಜನರನ್ನೂ) ತಿರಸ್ಕಾರಬುದ್ಧಿಯಿಂದ ಕಾಣುತ್ತಾನೆ.

ಯದಾ ಕದಾಚಿಜ್ಜೀವಾತ್ಮಾ ಸಂಸರನ್ನಿಜಕರ್ಮಭಿಃ ।
ನಾನಾಯೋನಿಷ್ವನೀಶೋಽಯಂ ಪೌರುಷೀಂ ಗತಿಮಾವ್ರಜೇತ್ ॥೨೫॥

ಜೀವನು ತಾನು ಮಾಡಿದ ಹಲವಾರು ಶುಭಾಶುಭಕರ್ಮಗಳ ಫಲವಾಗಿ ನಾನಾಯೋನಿಗಳಲ್ಲಿ ಹುಟ್ಟುತ್ತಾ, ಸಾಯುತ್ತಾ, ಅಸ್ವತಂತ್ರನಾಗಿ ಯಾವಾಗಲೋ ಒಮ್ಮೆ ಪುರುಷಜನ್ಮವನ್ನು ಪಡೆಯುತ್ತಾನೆ.

ಜನ್ಮಕರ್ಮವಯೋರೂಪವಿದ್ಯೈಶ್ವರ್ಯಧನಾದಿಭಿಃ ।
ಯದ್ಯಸ್ಯ ನ ಭವೇತ್ಸ್ತಮ್ಭಸ್ತತ್ರಾಯಂ ಮದನುಗ್ರಹಃ ॥೨೬॥

ಮನುಷ್ಯಯೋನಿಯಲ್ಲಿ ಜನ್ಮವನ್ನು ತಾಳಿದನಂತರ ಅವನು ಕುಲೀನತೆ, ಯೌವನ, ರೂಪ, ಐಶ್ವರ್ಯ, ಸಂಪತ್ತು ಇತ್ಯಾದಿಗಳಿಂದ ಮದಮತ್ತನಾಗದಿದ್ದರೆ ಅಂತಹವನು ನನ್ನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

ಮಾನಸ್ತಮ್ಭನಿಮಿತ್ತಾನಾಂ ಜನ್ಮಾದೀನಾಂ ಸಮನ್ತತಃ ।
ಸರ್ವಶ್ರೇಯಃ ಪ್ರತೀಪಾನಾಂ ಹನ್ತ ಮುಹ್ಯೇನ್ನ ಮತ್ಪರಃ ॥೨೭॥

ಕುಲೀನತೆ-ವಿದ್ಯೆ-ಸಂಪತ್ತು ಇವೇ ಮೊದಲಾದುವುಗಳು ಅಹಂಕಾರ-ಜಡತೆಗಳನ್ನುಂಟುಮಾಡುವುದಾದರೂ, ಮನುಷ್ಯನ ಶ್ರೇಯಸ್ಸಿಗೆ ಪ್ರತಿಬಂಧಕಗಳಾದರೂ ನನಗೆ ಶರಣಾಗತರಾದವರು ಧನ-ವಿದ್ಯೆ-ಕುಲ-ಸಂಪತ್ತು ಇತ್ಯಾದಿಗಳಿಂದ ವಿಮೋಹಿತರಾಗುವುದಿಲ್ಲ.

ದೈತ್ಯ-ದಾನವವಂಶಗಳೆರಡಕ್ಕೂ ಅಗ್ರಗಣ್ಯನಾಗಿರುವ ಈ ಬಲಿಯು ಆ ವಂಶಗಳ ಕೀರ್ತಿಯನ್ನು ಹೆಚ್ಚಿಸುವವನಾಗಿದ್ದಾನೆ. ಸಾಧಾರಣರಿಂದ ಜಯಿಸಲು ಅಸಾಧ್ಯವಾದ ನನ್ನ ವಿಷ್ಣುಮಾಯೆಯನ್ನು ಈತನು ಜಯಿಸಿಬಿಟ್ಟಿದ್ದಾನೆ. ನೀನೇ ನೋಡುತ್ತಿರುವಂತೆ ಇವನು ಕಷ್ಟಪಡುತ್ತಿದ್ದರೂ ವಿಮೋಹಿತನಾಗಿಲ್ಲ. ಇವನ ಗುರುವಾದ ಶುಕ್ರಾಚಾರ್ಯನೇ ಇವನನ್ನು ಗದರಿಸಿದನು. ಶಾಪವನ್ನೂ ಕೊಟ್ಟನು. ಆದರೂ ಸತ್ಯವ್ರತನಾದ ಇವನು ಸತ್ಯವನ್ನು ಬಿಡಲಿಲ್ಲ. ನಾನು ವಂಚಿಸಬೇಕೆಂತಲೇ ಇವನಿಗೆ ಧರ್ಮೋಪದೇಶ ಮಾಡಿದೆನು. ಆದರೂ ಇವನು ತನ್ನ ಸನ್ಮಾರ್ಗವನ್ನು ಪರಿತ್ಯಜಿಸಲಿಲ್ಲ. ಆದುದರಿಂದ ಇವನು ದೇವತೆಗಳಿಂದಲೂ ಹೊಂದಲು ಅಸಾಧ್ಯವಾದ ಸ್ಥಾನವನ್ನು ಪಡೆಯುತ್ತಾನೆ. ಸಾವರ್ಣಿಮನ್ವಂತರದಲ್ಲಿ ಇವನು ನನ್ನ ಆಶ್ರಯವನ್ನು ಪಡೆದು ಇಂದ್ರನಾಗುತ್ತಾನೆ. ಎಲ್ಲಿ ವಾಸಮಾಡುವವರಿಗೆ ನನ್ನ ಅನುಗ್ರಹದಿಂದ ಮಾನಸಿಕರೋಗಗಳಾಗಲೀ, ಶಾರೀರಿಕರೋಗಗಳಾಗಲೀ, ಬಳಲಿಕೆಯಾಗಲೀ, ಸೋಮಾರಿತನವಾಗಲೀ ಉಂಟಾಗುವುದಿಲ್ಲವೋ ಅವಮಾನವೂ ಈತಿ-ಬಾಧೆಗಳೂ ಉಂಟಾಗುವುದಿಲ್ಲವೋ–ಅಂತಹ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿರುವ ಸುತಲಲೋಕದಲ್ಲಿ ಈ ಬಲಿಯು ಇಂದ್ರಪದವಿಯನ್ನು ಪಡೆದುಕೊಳ್ಳುವವರೆಗೂ ವಾಸಮಾಡಿಕೊಂಡಿರುತ್ತಾನೆ."–ಹೀಗೆ ಚತುರ್ಮುಖನಿಗೆ ಹೇಳಿ ಶ್ರೀವಾಮನಮೂರ್ತಿಯು ಬಲಿಗೆ ಹೇಳುತ್ತಾನೆ : (ಶ್ಲೋಕ 28-32)

ಇನ್ದ್ರಸೇನ ಮಹಾರಾಜ ಯಾಹಿ ಭೋ ಭದ್ರಮಸ್ತು ತೇ ।
ಸುತಲಂ ಸ್ವರ್ಗಿಭಿಃ ಪ್ರಾರ್ಥ್ಯಂ ಜ್ಞಾತಿಭಿಃ ಪರಿವಾರಿತಃ ॥೩೩॥

"ಇಂದ್ರಸೇನನೇ! ಮಹಾರಾಜ! ಸ್ವರ್ಗವಾಸಿಗಳಿಗೂ ಬಯಸಲು ಯೋಗ್ಯವಾದ, ಸುತಲಲೋಕಕ್ಕೆ ನೀನು ನಿನ್ನ ಪರಿವಾರದವರೊಡನೆ ಹೋಗಿ ನೆಲೆಸು. ನಿನಗೆ ಮಂಗಳವಾಗಲಿ.

ನ ತ್ವಾಮಭಿಭವಿಷ್ಯನ್ತಿ ಲೋಕೇಶಾಃ ಕಿಮುತಾಪರೇ ।
ತ್ವಚ್ಛಾಸನಾತಿಗಾನ್ದೈತ್ಯಾಂಶ್ಚಕ್ರಂ ಮೇ ಸೂದಯಿಷ್ಯತಿ ॥೩೪॥

ಅಲ್ಲಿ ವಾಸವಾಗಿರುವ ನಿನ್ನನ್ನು ಲೋಕಪಾಲಕರು ಕೂಡ ತಿರಸ್ಕರಿಸ ಲಾರರು. ಉಳಿದವರ ವಿಷಯವಾಗಿ ಹೇಳುವುದೇನಿದೆ? ನಿನ್ನ ಆಜ್ಞೆಯನ್ನು ಮೀರಿ ನಡೆಯುವ ದೈತ್ಯರನ್ನು ನನ್ನ ಸುದರ್ಶನಚಕ್ರವೇ ನಾಶಗೊಳಿಸುತ್ತದೆ.

ರಕ್ಷಿಷ್ಯೇ ಸರ್ವತೋಽಹಂ ತ್ವಾಂ ಸಾನುಗಂ ಸಪರಿಚ್ಛದಮ್ ।
ಸದಾ ಸನ್ನಿಹಿತಂ ವೀರ ತತ್ರ ಮಾಂ ದ್ರಕ್ಷ್ಯತೇ ಭವಾನ್ ॥೩೫॥

ವೀರವರೇಣ್ಯನೇ! ಅನುಯಾಯಿಗಳಿಂದಲೂ ಮತ್ತು ಪರಿವಾರದವ ರಿಂದಲೂ ಕೂಡಿರುವ ನಿನ್ನನ್ನು ನಾನು ಎಲ್ಲ ಕಡೆಗಳಿಂದಲೂ ರಕ್ಷಿಸುತ್ತೇನೆ. ಆ ಸುತಲಲೋಕದಲ್ಲಿ ಯಾವಾಗಲೂ ಸನ್ನಿಹಿತನಾಗಿರುವ ನನ್ನನ್ನು ನೀನು ಸಂದರ್ಶಿಸುವೆ.

ತತ್ರ ದಾನವದೈತ್ಯಾನಾಂ ಸಙ್ಗಾತ್ತೇ ಭಾವ ಆಸುರಃ ।
ದೃಷ್ಟ್ವಾ ಮದನುಭಾವಂ ವೈ ಸದ್ಯಃ ಕುಣ್ಠೋ ವಿನಂಕ್ಷ್ಯತಿ ॥೩೬॥

ದಾನವ-ದೈತ್ಯರ ಸಂಬಂಧದಿಂದುಂಟಾಗಿರುವ ನಿನ್ನ ರಾಕ್ಷಸಭಾವವು ಆ ಸುತಲಲೋಕದಲ್ಲಿ ನನ್ನ ಮಹಿಮೆಯಿಂದಾಗಿ, ನನ್ನ ಸ್ಥಿರವಾದ ಸಾನ್ನಿಧ್ಯ ವಿರುವುದರಿಂದ ಒಡನೆಯೇ ಕುಗ್ಗಿಹೋಗಿ ವಿನಾಶಹೊಂದುತ್ತದೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಅಷ್ಟಮಸ್ಕಂಧದ ೨೨ನೆಯ ಅಧ್ಯಾಯವು ಮುಗಿಯಿತು.

ಬಲಿಯು ಬಂಧನದಿಂದ ಬಿಡುಗಡೆಯನ್ನು ಹೊಂದಿ ಸುತಲಲೋಕಕ್ಕೆ ಹೋದುದು

ಶ್ರೀಶುಕರು ಹೇಳುತ್ತಾರೆ :

ಇತ್ಯುಕ್ತವನ್ತಂ ಪುರುಷಂ ಪುರಾತನಂ
ಮಹಾನುಭಾವೋಽಖಿಲಸಾಧುಸಂಮತಃ ।
ಬದ್ಧಾಞ್ಜಲಿರ್ಬಾಷ್ಪಕಲಾಕುಲೇಕ್ಷಣೋ
ಭಕ್ತ್ಯುದ್ಗಲೋ ಗದ್ಗದಯಾ ಗಿರಾಬ್ರವೀತ್ ॥೧॥

ಪರೀಕ್ಷಿತ! ಪುರಾಣಪುರುಷನಾದ ಭಗವಂತನು ಹೀಗೆ ಹೇಳುತ್ತಲೇ ಸಾಧುಸಮ್ಮತ್ರನಾದ, ಮಹಾನುಭಾವನಾದ ದೈತ್ಯರಾಜನ ಕಣ್ಣುಗಳಿಂದ ಆನಂದಬಾಷ್ಪಗಳು ಧಾರಾಕಾರವಾಗಿ ಸುರಿದುಹೋದುವು. ಪ್ರೇಮದ ಉದ್ರೇಕದಿಂದ ಅವನ ಕಂಠವು ಬಿಗಿಯಿತು. ಕೈಮುಗಿದುಕೊಂಡು ಗದ್ಗದ ಧ್ವನಿಯಿಂದಲೇ ಬಲಿಯು ಶ್ರೀಭಗವಂತನಿಗೆ ಹೇಳಿದನು :

ಅಹೋ ಪ್ರಣಾಮಾಯ ಕೃತಃ ಸಮುದ್ಯಮಃ
ಪ್ರಪನ್ನ ಭಕ್ತಾರ್ಥವಿಧೌ ಸಮಾಹಿತಃ ।
ಯಲ್ಲೋಕಪಾಲೈಸ್ತ್ವದನುಗ್ರಹೋಽಮರೈ-
ರಲಬ್ಧಪೂರ್ವೋಽಪಸದೇಽಸುರೇಽರ್ಪಿತಃ ॥೨॥

“ಪ್ರಭುವೇ! ನಾನು ನಿನಗೆ ಪೂರ್ಣವಾಗಿ ಪ್ರಣಾಮವನ್ನು ಮಾಡಲಿಲ್ಲ. ಪ್ರಣಾಮಮಾಡಲು ಪ್ರಯತ್ನಿಸಿದೆನು ; ಅಷ್ಟೇ. ಇದರಿಂದಲೇ ನಿನ್ನ ಚರಣಕಮಲಗಳಲ್ಲಿ ಶರಣಾಗತರಾದ ಏಕಾಂತಭಕ್ತರಿಗೆ ಸಿಕ್ಕುವ ಫಲವು ನನಗೆ ಸಿಕ್ಕಿಬಿಟ್ಟಿದೆ. ಲೋಕಪಾಲಕರಿಗಾಗಲೀ, ದೇವತೆಗಳಿಗಾಗಲೀ ಅಲಭ್ಯವಾದ ಅನುಗ್ರಹವನ್ನು ನೀನು ನೀಚನಾದ, ರಾಕ್ಷಸನಾದ ನನ್ನಲ್ಲಿ ತೋರಿರುವೆ. ನಿಜಕ್ಕೂ ಇದು ಆಶ್ಚರ್ಯವೇ ಸರಿ. ಪರಮಕರುಣಾಶಾಲಿ ಯಾದ ನಿನಗೆ ನಮೋ ನಮಃ”

ಪರೀಕ್ಷಿತ! ಪರಮಸಂತುಷ್ಟನಾದ ಬಲಿಯು ಹೀಗೆ ಹೇಳಿ ವರುಣ

ಪಾಶದಿಂದ ಬಿಡುಗಡೆಯನ್ನು ಹೊಂದಿ ಶ್ರೀಹರಿಯನ್ನೂ, ಬ್ರಹ್ಮನನ್ನೂ, ರುದ್ರನನ್ನೂ ನಮಸ್ಕರಿಸಿ ತನ್ನ ಪರಿವಾರದೊಡನೆ ಸುತಲಲೋಕಕ್ಕೆ ಪ್ರವೇಶಿಸಿದನು. ಹೀಗೆ ಶ್ರೀಭಗವಂತನು ಬಲಿಯಿಂದ ಸ್ವರ್ಗವನ್ನು ಕಿತ್ತು ಕೊಂಡು ಇಂದ್ರನಿಗೆ ಕೊಟ್ಟನು. ಅದಿತಿಯ ಆಶಯವನ್ನು ಪೂರ್ಣಗೊಳಿಸಿ ಕೊಟ್ಟು ಉಪೇಂದ್ರನಾಗಿ (ಇಂದ್ರನ ತಮ್ಮನಾಗಿ) ಸಮಸ್ತಜಗತ್ತನ್ನೂ ಶಾಸನಮಾಡತೊಡಗಿದನು. ತನ್ನ ಮೊಮ್ಮಗನಾದ ಬಲಿಯು ವರುಣನ ಪಾಶದಿಂದ ಮುಕ್ತನಾದುದನ್ನೂ ಮತ್ತು ಭಗವಂತನ ಪೂರ್ಣಾನುಗ್ರಹ ವನ್ನು ಪಡೆದುಕೊಂಡುದನ್ನೂ ಭಕ್ತಾಗ್ರೇಸರನಾದ ಪ್ರಹ್ಲಾದನು ನೋಡಿ ಸಂತೋಷವು ಉಕ್ಕಿಬಂದು ಭಕ್ತಿಭಾವದಿಂದ ಭಗವಂತನನ್ನು ಪ್ರಾರ್ಥಿಸಿ ದನು : (ಶ್ಲೋಕ 3-5)

ನೇಮಂ ವಿರಿಞ್ಚೋ ಲಭತೇ ಪ್ರಸಾದಂ
ನ ಶ್ರೀರ್ನ ಶರ್ವಃ ಕಿಮುತಾಪರೇ ತೇ ।
ಯನ್ನೋಽಸುರಾಣಾಮಸಿ ದುರ್ಗಪಾಲೋ
ವಿಶ್ವಾಭಿವನ್ದ್ಯೈರಪಿ ವನ್ದಿತಾಙ್ಘ್ರಿಃ ॥೬॥

"ಎಂತಹ ಆಚ್ಚರಿ! ವಿಶ್ವವಂದ್ಯರಾದ ಬ್ರಹ್ಮ-ಭವ–ಇವರೇ ಮೊದ ಲಾದವರು ಯಾವನ ಚರಣಾರವಿಂದಗಳಿಗೆ ನಮಸ್ಕರಿಸುವರೋ ಅಂತಹ ಪರಮದಯಾಳುವಾದ ನೀನು ರಾಕ್ಷಸರ ಜಾತಿಯಲ್ಲಿ ಹುಟ್ಟಿರುವ ನಮ್ಮ ಮನೆಯ ಬಾಗಿಲನ್ನು ಕಾಯುವವನಾದೆ. ದ್ವಾರಪಾಲಕನಾದೆ. ಇಂತಹ ಪರಮಾನುಗ್ರಹವನ್ನು ಬ್ರಹ್ಮನಾಗಲೀ ನಿನ್ನ ಪ್ರೇಯಸಿಯಾದ ಲಕ್ಷ್ಮಿಯಾಗಲೀ, ರುದ್ರನಾಗಲೀ ಪಡೆದುಕೊಳ್ಳಲಿಲ್ಲ. ಬೇರೆಯವರ ವಿಷಯವಾಗಿ ಹೇಳುವುದೇನಿದೆ?

ಯತ್ಪಾದಪದ್ಮಮಕರನ್ದನಿಷೇವಣೇನ
ಬ್ರಹ್ಮಾದಯಃ ಶರಣದಾಶ್ನುವತೇ ವಿಭೂತೀಃ ।
ಕಸ್ಮಾದ್ವಯಂ ಕುಸೃತಯಃ ಖಲಯೋನಯಸ್ತೇ
ದಾಕ್ಷಿಣ್ಯದೃಷ್ಟಿಪದವೀಂ ಭವತಃ ಪ್ರಣೀತಾಃ ॥೭॥

ಶರಣಾಗತವತ್ಸಲನೇ! ಪ್ರಭುವೇ! ಬ್ರಹ್ಮನೇ ಮೊದಲಾದ ಲೋಕ ಪಾಲರು ನಿನ್ನ ಚರಣಾರವಿಂದಮಕರಂದವನ್ನು ಸೇವನೆಮಾಡುವುದರಿಂದ

ಸೃಷ್ಟಿಯೇ ಮೊದಲಾದ ಅನೇಕವಿಧವಾದ ಅಧಿಕಾರವನ್ನು ಪಡೆದು ಕೊಂಡಿರುತ್ತಾರೆ. ಇದು ಸಮುಚಿತವಾಗಿದೆ. ನಾವಾದರೋ ಜನ್ಮದಿಂದಲೇ ಖಲರು ; ಕುಮಾರ್ಗಿಗಳು. ಇಂತಹ ನಮ್ಮ ಮೇಲೆ ನಿನ್ನ ದಾಕ್ಷಿಣ್ಯದಿಂದ ಕೂಡಿದ ಅನುಗ್ರಹದೃಷ್ಟಿಯು ಹೇಗೆ ತಾನೇ ಬಿದ್ದಿತು? ಇಂತಹ ಪರಮಾನು ಗ್ರಹದಿಂದಾಗಿ ನೀನು ನಮ್ಮ ಮನೆಯ ದ್ವಾರಪಾಲಕನೇ ಆಗಿಬಿಟ್ಟೆಯಲ್ಲವೇ!

ಚಿತ್ರಂ ತವೇಹಿತಮಹೋಽಮಿತಯೋಗಮಾಯಾ-
ಲೀಲಾವಿಸೃಷ್ಟಭುವನಸ್ಯ ವಿಶಾರದಸ್ಯ ।
ಸರ್ವಾತ್ಮನಃ ಸಮದೃಶೋ ವಿಷಮಃ ಸ್ವಭಾವೋ
ಭಕ್ತಪ್ರಿಯೋ ಯದಸಿ ಕಲ್ಪತರುಸ್ವಭಾವಃ ॥೮॥

ಸ್ವಾಮಿಯೇ! ಅಪಾರವಾದ ಯೋಗಮಾಯೆಯಿಂದ ನೀನು ತ್ರಿಭುವನಗಳನ್ನೂ ಲೀಲೆಯಿಂದಲೇ ರಚಿಸಿರುವೆ. ಸರ್ವಜ್ಞನೂ, ಸರ್ವಾತ್ಮನೂ, ಎಲ್ಲರಲ್ಲಿಯೂ ಸಮದೃಷ್ಟಿಯುಳ್ಳವನೂ ಆಗಿರುವೆ. ನಿನ್ನ ಸಂಕಲ್ಪವು ಆಶ್ಚರ್ಯಕರವಾದುದು. ಭಕ್ತಪ್ರಿಯನಾದ ನೀನು ಕಲ್ಪತರು ಸ್ವಭಾವದವನಾಗಿರುವೆ. ಭಕ್ತರ ಎಲ್ಲ ಪ್ರಾರ್ಥನೆಗಳನ್ನೂ ಈಡೇರಿಸಿಕೊಡುವೆ. ಕಲ್ಪತರುವು ಅದನ್ನು ಆಶ್ರಯಿಸಿದವರಿಗೆ ಮಾತ್ರ ಕೇಳಿದ ಫಲಗಳನ್ನು ಕೊಡು ವಂತೆ ನಿನ್ನನ್ನು ಆಶ್ರಯಿಸಿದ ಭಕ್ತರಿಗೆ ಬೇಕಾದ ಫಲಗಳನ್ನು ಕೊಡುವೆ. ಆದರೂ ನಿನ್ನಲ್ಲಿ ಯಾವ ವಿಧವಾದ ವೈಷಮ್ಯವೂ ಇಲ್ಲ."

ಪ್ರಹ್ಲಾದನ ಈ ಪ್ರಾರ್ಥನೆಯನ್ನು ಕೇಳಿದನಂತರ ಶ್ರೀಭಗವಂತನು ಹೇಳುತ್ತಾನೆ :

ವತ್ಸ ಪ್ರಹ್ಲಾದ ಭದ್ರಂ ತೇ ಪ್ರಯಾಹಿ ಸುತಲಾಲಯಮ್ ।
ಮೋದಮಾನಃ ಸ್ವಪೌತ್ರೇಣ ಜ್ಞಾತೀನಾಂ ಸುಖಮಾವಹ ॥೯॥

ನಿತ್ಯಂ ದ್ರಷ್ಟಾಸಿ ಮಾಂ ತತ್ರ ಗದಾಪಾಣಿಮವಸ್ಥಿತಮ್ ।
ಮದ್ದರ್ಶನಮಹಾಹ್ಲಾದಧ್ವಸ್ತಕರ್ಮನಿಬನ್ಧನಃ ॥೧೦॥

"ವತ್ಸ! ಪ್ರಹ್ಲಾದ! ನಿನಗೆ ಮಂಗಳವಾಗಲಿ. ಈಗ ನೀನು ಕೂಡ ಸುತಲಲೋಕಕ್ಕೆ ಹೋಗು. ಅಲ್ಲಿ ನಿನ್ನ ಮೊಮ್ಮಗನಾದ ಬಲಿಯೊಡನೆ ಆನಂದದಿಂದಿರು. ನಿನ್ನ ಜ್ಞಾತಿ-ಬಾಂಧವರಿಗೆ ಸುಖದಾಯಕನಾಗು. ಗದಾಧರ

ನಾದ ನನ್ನ ದರ್ಶನದಿಂದ ಪರಮಾನಂದಸಾಗರದಲ್ಲಿ ಮುಳುಗುವ ನೀನು ಸಕಲವಿಧವಾದ ಕರ್ಮಬಂಧನಗಳಿಂದಲೂ ಬಿಡುಗಡೆಹೊಂದುವೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಸಮಸ್ತದೈತ್ಯಸೈನ್ಯಗಳಿಗೂ ಸ್ವಾಮಿಯಾಗಿದ್ದ, ವಿಶುದ್ಧ ಬುದ್ಧಿಯವನಾದ ಪ್ರಹ್ಲಾದನು ಹಾಗೆಯೇ ಆಗಲೆಂದು ಹೇಳಿ ಭಗವಂತನ ಆಜ್ಞೆಯನ್ನು ಶಿರಸಾವಹಿಸಿ, ಕೈಜೋಡಿಸಿಕೊಂಡು ನಮಸ್ಕರಿಸಿ, ಭಗವಂತನ ಅನುಜ್ಞೆಯನ್ನು ಪಡೆದುಕೊಂಡು ಬಲಿಯೊಡನೆ ಸುತಲಲೋಕವನ್ನು ಪ್ರವೇಶಿಸಿದನು. ಬಳಿಕ ಭಗವಂತನಾದ ಶ್ರೀಹರಿಯು ಬ್ರಹ್ಮಾದಿಗಳಾದ ಋತ್ವಿಜರ ಸಭೆಯಲ್ಲಿ ತನ್ನ ಸಮೀಪದಲ್ಲಿಯೇ ಕುಳಿತಿದ್ದ ಶುಕ್ರಾಚಾರ್ಯರಿಗೆ ಹೇಳಿದನು : (ಶ್ಲೋಕ 11-13)

ಬ್ರಹ್ಮನ್ಸಂತನು ಶಿಷ್ಯಸ್ಯ ಕರ್ಮಚ್ಛಿದ್ರಂ ವಿತನ್ವತಃ ।
ಯತ್ತತ್ಕರ್ಮಸು ವೈಷಮ್ಯಂ ಬ್ರಹ್ಮದೃಷ್ಟಂ ಸಮಂ ಭವೇತ್ ॥೧೪॥

"ಬ್ರಾಹ್ಮಣಶ್ರೇಷ್ಠರೇ! ನಿಮ್ಮ ಶಿಷ್ಯನು ಯಜ್ಞವನ್ನು ಮಾಡುತ್ತಿದ್ದನು. ಯಜ್ಞದಲ್ಲಿ ವಿಚ್ಛಿತ್ತಿಯಾಗದಂತೆ ನೀವು ಯಜ್ಞಕರ್ಮವನ್ನು ಪೂರ್ಣಗೊಳಿಸಿರಿ. ಕರ್ಮಗಳಲ್ಲೇನಾದರೂ ನ್ಯೂನಾತಿರೇಕಗಳುಂಟಾದರೆ ಅವೆಲ್ಲವೂ ಕೇವಲ ಬ್ರಾಹ್ಮಣದೃಷ್ಟಿಯಿಂದಲೇ ಪರಿಹಾರವಾಗುವುದೆಂದು ಹೇಳುತ್ತಾರೆ."

ಭಗವಂತನ ಈ ಮಾತನ್ನು ಕೇಳಿ ಶುಕ್ರಾಚಾರ್ಯರು ಹೇಳುತ್ತಾರೆ :

ಕುತಸ್ತತ್ಕರ್ಮವೈಷಮ್ಯಂ ಯಸ್ಯ ಕರ್ಮೇಶ್ವರೋ ಭವಾನ್ ।
ಯಜ್ಞೇಶೋ ಯಜ್ಞಪುರುಷಃ ಸರ್ವಭಾವೇನ ಪೂಜಿತಃ ॥೧೫॥

ಮನ್ತ್ರತಸ್ತನ್ತ್ರತಶ್ಛಿದ್ರಂ ದೇಶಕಾಲಾರ್ಹವಸ್ತುತಃ ।
ಸರ್ವಂ ಕರೋತಿ ನಿಶ್ಛಿದ್ರಂ ನಾಮಸಂಕೀರ್ತನಂ ತವ ॥೧೬॥

ತಥಾಪಿ ವದತೋ ಭೂಮನ್ಕರಿಷ್ಯಾಮ್ಯನುಶಾಸನಮ್ ।
ಏತಚ್ಛ್ರೇಯಃ ಪರಂ ಪುಂಸಾಂ ಯತ್ತವಾಜ್ಞಾನುಪಾಲನಮ್ ॥೧೭॥

"ಯಾವನು ತನ್ನ ಸಮಸ್ತಕರ್ಮಗಳನ್ನೂ ಕರ್ಮೇಶ್ವರನಾದ ನಿನಗೇ ಸಮರ್ಪಿಸಿ ಯಜ್ಞೇಶ್ವರನೂ ಯಜ್ಞಪುರುಷನೂ ಆದ ನಿನ್ನನ್ನು ಆರಾಧಿಸಿರು

ವನೋ ಅಂತಹವನು ಮಾಡಿದ ಕರ್ಮದಲ್ಲಿ ನ್ಯೂನಾತಿರೇಕಗಳು ಹೇಗೆ ತಾನೇ ಉಂಟಾದಾವು? ಮಂತ್ರ-ತಂತ್ರ-ಸ್ವರ-ವರ್ಣ-ನ್ಯೂನಾತಿರಿಕ್ತ ಲೋಪದೋಷ ಗಳೂ ಕಾಲ-ದೇಶ-ಪಾತ್ರ-ಪದಾರ್ಥ ಇವುಗಳಿಂದಾದ ಲೋಪದೋಷ ಗಳೂ– ಅಚ್ಯುತಾಯನಮಃ- ಅನಂತಾಯನಮಃ - ಗೋವಿಂದಾಯನಮಃ– ಎಂಬ ನಿನ್ನ ಅಮೋಘವಾದ ನಾಮಸಂಕೀರ್ತನ ದಿಂದಲೇ ಪರಿಹಾರ ವಾಗುತ್ತವೆ. ಆದರೂ ಮಹಾತ್ಮನೇ! ನಿನ್ನ ಆಜ್ಞೆಯನ್ನು ಶಿರಸಾವಹಿಸಿ ಮಾಡುತ್ತೇನೆ. ಪುರುಷರಿಗೆ ನಿನ್ನ ಆಜ್ಞೆಯನ್ನು ಪರಿಪಾಲಿಸು ವುದರಿಂದಲೇ ಶ್ರೇಯಸ್ಸುಂಟಾಗುತ್ತದೆ.”

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಹೀಗೆ ಶುಕ್ರಾಚಾರ್ಯರು ಭಗವಂತನ ಆಜ್ಞೆಯನ್ನು ಶಿರಸಾವಹಿಸಿ ಇತರ ಬ್ರಹ್ಮರ್ಷಿಗಳೊಡನೆ ಯಜಮಾನನಿಲ್ಲದೇ ವಿಚ್ಛಿತ್ತಿ ಗೊಂಡಿದ್ದ ಯಜ್ಞವನ್ನು ವಿಧಿವತ್ತಾಗಿ ಪೂರ್ಣಗೊಳಿಸಿದರು.

ಹೀಗೆ ಶ್ರೀವಾಮನಮೂರ್ತಿಯು ಬಲಿಯಿಂದ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ದಾನವಾಗಿ ಕೇಳಿ, ಎರಡು ಹೆಜ್ಜೆಗಳಿಂದಲೇ ಬಲಿಯಿಂದ ಎಲ್ಲವನ್ನೂ ಕಿತ್ತುಕೊಂಡು ಶತ್ರುಗಳು ಅಪಹರಿಸಿದ್ದ ರಾಜ್ಯವನ್ನು ತನ್ನ ಅಣ್ಣನಾದ ಇಂದ್ರನಿಗೆ ಕೊಟ್ಟುಬಿಟ್ಟನು. ಬಳಿಕ ಪ್ರಜಾಪತಿಗಳಿಗೆ ಒಡೆಯ ನಾದ ಚತುರ್ಮುಖನು ದೇವತೆಗಳು, ಪಿತೃಗಳು, ಋಷಿಗಳು, ರಾಜರು, ದಕ್ಷ, ಭೃಗು, ಅಂಗಿರಸ್ಸು, ಕುಮಾರಸ್ವಾಮಿ, ರುದ್ರದೇವರು–ಇವರೊಡನೆ ಕೂಡಿಕೊಂಡು ಅದಿತಿ ಮತ್ತು ಕಶ್ಯಪರನ್ನು ಪ್ರಸನ್ನಗೊಳಿಸುವ ಸಲುವಾಗಿಯೂ ಸಮಸ್ತಪ್ರಾಣಿಗಳ ಸುಖಕ್ಕಾಗಿಯೂ ಸಮಸ್ತಲೋಕ ಗಳಿಗೂ ಮತ್ತು ಲೋಕಪಾಲಕರಿಗೂ ಶ್ರೀವಾಮನಮೂರ್ತಿಯನ್ನು ಒಡೆಯನನ್ನಾಗಿ ಮಾಡಿದನು. ವೇದಗಳು, ಸಮಸ್ತದೇವತೆಗಳು, ಧರ್ಮ, ಯಶಸ್ಸು, ಲಕ್ಷ್ಮಿ, ಮಂಗಳ, ವ್ರತ, ಸ್ವರ್ಗ ಮತ್ತು ಅಪವರ್ಗ ಇವೆಲ್ಲಕ್ಕೂ ರಕ್ಷಕನ ರೂಪದಲ್ಲಿ ಸಮಸ್ತರ ಕಲ್ಯಾಣಕ್ಕಾಗಿ ಸರ್ವಶಕ್ತಿವಂತನಾದ ಶ್ರೀವಾಮನಮೂರ್ತಿಯನ್ನು ಬ್ರಹ್ಮದೇವನು ಉಪೇಂದ್ರನ ಪದವಿಯಲ್ಲಿ ಕೂರಿಸಿ ಪಟ್ಟಾಭಿಷೇಕಮಾಡಿದನು. ಇದನ್ನು ನೋಡಿ ಎಲ್ಲ ಪ್ರಾಣಿಗಳಿಗೂ ಮಹಾನಂದವಾಯಿತು. ಬಳಿಕ ಇಂದ್ರನು ಬ್ರಹ್ಮನ ಅನುಮತಿಯನ್ನು

ಪಡೆದು ಶ್ರೀವಾಮನಮೂರ್ತಿಯನ್ನು ಮುಂದೆಮಾಡಿಕೊಂಡು ಲೋಕ ಪಾಲಕರೊಡನೆ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಪ್ರಯಾಣಮಾಡಿದನು. ಸ್ವರ್ಗವನ್ನು ಸೇರಿ ದೇವೇಂದ್ರನು ಉಪೇಂದ್ರನ ಭುಜಬಲಪರಾಕ್ರಮಗಳಿಂದ ರಕ್ಷಿಸಲ್ಪಡುತ್ತಾ, ಮೂಜಗಕ್ಕೂ ಅಧಿಪತಿಯಾಗಿ ನಿರತಿಶಯವಾದ ಸಂಪತ್ತಿ ನಿಂದ ಕೂಡಿ ಯಾವ ವಿಧವಾದ ಭಯವೂ ಇಲ್ಲದವನಾಗಿ ಆನಂದಭರಿತ ನಾಗಿದ್ದನು. ಬ್ರಹ್ಮ-ಮಹೇಶ್ವರರೂ, ಕುಮಾರಸ್ವಾಮಿಯೂ, ಭೃಗುವೇ ಮೊದಲಾದ ಮುನಿಗಳೂ, ಪಿತೃದೇವತೆಗಳೂ, ಸಿದ್ಧರೂ, ದೇವತೆಗಳೂ, ಸಕಲ ಪ್ರಾಣಿಗಳೂ ಮಹಾವಿಷ್ಣುವಿನ ಪರಮಾದ್ಭುತವಾದ ಸುಮಹತ್ತರ ವಾದ ಆ ಕಾರ್ಯವನ್ನು ಹೊಗಳುತ್ತಾ ಅದಿತಿದೇವಿಯನ್ನೂ ಶ್ಲಾಘಿಸುತ್ತಾ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ಕುರುನಂದನನೇ! ಕೇಳಿದವರ ಸಮಸ್ತ ಪಾಪಗಳನ್ನೂ ಪರಿಹರಿಸುವ ಮಹಾವಿಷ್ಣುವಿನ ಅದ್ಭುತವಾದ ಈ ಚರಿತ್ರೆಯನ್ನು ನಾನು ನಿನಗೆ ಹೇಳಿರುತ್ತೇನೆ. (ಶ್ಲೋಕ 18-28)

ಪಾರಂ ಮಹಿಮ್ನ ಉರುವಿಕ್ರಮತೋ ಗೃಣಾನೋ
ಯಃ ಪಾರ್ಥಿವಾನಿ ವಿಮಮೇ ಸ ರಜಾಂಸಿ ಮರ್ತ್ಯಃ ।
ಕಿಂ ಜಾಯಮಾನ ಉತ ಜಾತ ಉಪೈತಿ ಮರ್ತ್ಯ
ಇತ್ಯಾಹ ಮನ್ತ್ರದೃಗೃಷಿಃ ಪುರುಷಸ್ಯ ಯಸ್ಯ ॥೨೯॥

ಭಗವಂತನ ಲೀಲೆಗಳು ಅನಂತವಾಗಿವೆ. ಅವನ ಮಹಿಮೆಯು ಅಪಾರವಾಗಿದೆ. ಅವನ ಮಹಿಮೆಯ ಪಾರವನ್ನು ಯಾವನು ಕಾಣಲಿಚ್ಛಿಸುವನೋ ಅಂತಹವನು ಭೂಮಿಯಲ್ಲಿರುವ ಧೂಳಿಯನ್ನು ಎಣಿಸಬಲ್ಲನು. ಭೂಮಿಯಲ್ಲಿರುವ ಧೂಳಿಯನ್ನು ಎಣಿಸಲು ಸಾಧ್ಯ ವಾಗದು. ಅಂತೆಯೇ ಭಗವಂತನ ಮಹಿಮೆಯ ಪಾರವನ್ನು ಕಂಡವರು ಇದುವರೆಗೂ ಹುಟ್ಟಿಲ್ಲ ; ಈಗ ಯಾರೂ ಇರುವುದಿಲ್ಲ ; ಮುಂದೆಯೂ ಹುಟ್ಟುವುದಿಲ್ಲ–ಎಂಬ ವೇದೋಪಬೃಂಹಿತವಾದ ವಾಕ್ಯವನ್ನು ಮಂತ್ರ ದ್ರಷ್ಟಾರರಾದ ವಸಿಷ್ಠ ಮಹರ್ಷಿಗಳು ಹೇಳಿರುತ್ತಾರೆ.*

---

* ಈ ಅರ್ಥವನ್ನು ಕೊಡುವ ವೇದಮಂತ್ರವು ಹೀಗಿದೆ :

ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮನ್ತಮಾಪ ॥

ಯ ಇದಂ ದೇವದೇವಸ್ಯ ಹರೇರದ್ಭುತಕರ್ಮಣಃ ।
ಅವತಾರಾನುಚರಿತಂ ಶೃಣ್ವನ್ಯಾತಿ ಪರಾಂ ಗತಿಮ್ ॥೩೦॥

ಕ್ರಿಯಮಾಣೇ ಕರ್ಮಣೀದಂ ದೈವೇ ಪಿತ್ರ್ಯೇಽಥ ಮಾನುಷೇ ।
ಯತ್ರ ಯತ್ರಾನುಕೀರ್ತ್ಯೇತ ತತ್ತೇಷಾಂ ಸುಕೃತಂ ವಿದುಃ ॥೩೧॥

ಯಾವ ಮನುಷ್ಯನು ದೇವತೆಗಳಿಗೂ ದೇವತೆಯಾದ, ಅದ್ಭುತಕರ್ಮನಾದ ಮಹಾವಿಷ್ಣುವಿನ ಈ ವಾಮನಾವತಾರದ ಚರಿತ್ರೆಯನ್ನು ಕೇಳುವನೋ ಅಂತಹವನು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. ದೇವತಾ ಸಂಬಂಧವಾದ, ಪಿತೃಸಂಬಂಧವಾದ, ಮನುಷ್ಯಸಂಬಂಧವಾದ ಕಾರ್ಯಗಳು ನಡೆಯುವಾಗ ಈ ವಾಮನಾವತಾರದ ಚರಿತ್ರೆಯನ್ನು ಪಾರಾಯಣ ಮಾಡಿದರೆ ಆ ಕರ್ಮವು ಸುಷ್ಠುವಾಗಿ ಮಾಡಲ್ಪಟ್ಟದ್ದಾಗುವುದೆಂದು ವಿದ್ವಾಂಸರು ಹೇಳುತ್ತಾರೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೨೩ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧ ೨೪ನೆಯ ಅಧ್ಯಾಯ

ಮತ್ಸ್ಯಾವತಾರದ ಕಥೆ

ಪರೀಕ್ಷಿತನು ಪ್ರಶ್ನಿಸುತ್ತಾನೆ :

ಭಗವನ್ ಶ್ರೋತುಮಿಚ್ಛಾಮಿ ಹರೇರದ್ಭುತಕರ್ಮಣಃ ।
ಅವತಾರಕಥಾಮಾದ್ಯಾಂ ಮಾಯಾಮತ್ಸ್ಯವಿಡಮ್ಬನಮ್ ॥೧॥

"ಪೂಜ್ಯರೇ! ಭಗವಂತನ ಕರ್ಮಗಳು ಪರಮಾದ್ಭುತವಾದುವುಗಳು. ಅವನೊಮ್ಮೆ ತನ್ನ ಯೋಗಮಾಯೆಯಿಂದ ಮತ್ಸ್ಯಾವತಾರಮಾಡಿ ಸುಂದರವಾದ ಲೀಲೆಗಳನ್ನು ತೋರಿಸಿದನು. ನಾನು ಭಗವಂತನ ಮೊದಲನೆಯ ಅವತಾರವಾದ ಈ ಮತ್ಸ್ಯಾವತಾರದ ಕಥೆಯನ್ನು ಕೇಳಬೇಕೆಂದಿರುತ್ತೇನೆ.

ಭಗವಂತನು ಕರ್ಮದಿಂದ ಬಂಧಿಸಲ್ಪಟ್ಟವನಂತೆ ತಮಸ್ಸಿನ ಪ್ರಕೃತಿ

ಯುಳ್ಳವರಿಗೂ ಸೈರಿಸಲಾಗದ, ಜನರ ದೃಷ್ಟಿಯಿಂದಲೂ ಜುಗುಪ್ಸಿತವಾದ ಮೀನಿನ ರೂಪವನ್ನು ಯಾವ ಕಾರಣದಿಂದ ಹೊಂದಿದನು? ಪೂಜ್ಯರೇ! ಸಮಸ್ತ ಜನಗಳಿಗೂ ಸುಖದಾಯಕನಾದ ಉತ್ತಮಶ್ಲೋಕನಾದ ಶ್ರೀಹರಿಯ ಈ ಮತ್ಸ್ಯಾವತಾರದ ಚರಿತ್ರೆಯನ್ನು ನಮಗೆ ಯಥಾವತ್ತಾಗಿ ಹೇಳಿರಿ.”

ಸೂತಪುರಾಣಿಕರು ಹೇಳುತ್ತಾರೆ :

“ಶೌನಕಾದಿ ಮಹರ್ಷಿಗಳೇ! ಪರೀಕ್ಷಿತನು ಶುಕಮಹಾಮುನಿಗಳನ್ನು ಹೀಗೆ ಪ್ರಶ್ನಿಸಲು ಶುಕಮುನಿಗಳು ಮತ್ಸ್ಯಾವತಾರವನ್ನೆತ್ತಿ ಮಹಾವಿಷ್ಣುವು ಮಾಡಿದ ಅದ್ಭುತಕರ್ಮಗಳನ್ನು ವರ್ಣಿಸಲು ಪ್ರಾರಂಭಿಸಿದರು.

ಪರೀಕ್ಷಿತಮಹಾರಾಜ! ಭಗವಂತನು ಗೋ-ಬ್ರಾಹ್ಮಣರ, ದೇವತೆಗಳ, ಸಾಧುಗಳ, ವೇದಗಳ, ಧರ್ಮಾರ್ಥಗಳ ರಕ್ಷಣೆಗಾಗಿ ಆಗಿಂದಾಗ್ಗೆ ನಾನಾವಿಧವಾದ ಶರೀರಗಳನ್ನು ಧರಿಸಿ ಅವತರಿಸುತ್ತಿರುತ್ತಾನೆ. ಸರ್ವಶಕ್ತನಾದ ಪ್ರಭುವು ಉಚ್ಚ-ನೀಚಪ್ರಾಣಿಗಳಲ್ಲಿಯೂ, ಸೂಕ್ಷ್ಮವಾದ ಪ್ರಾಣಿಗಳಲ್ಲಿಯೂ ಬೃಹತ್ತಾದ ಪ್ರಾಣಿಗಳಲ್ಲಿಯೂ ವಾಯುವಿನಂತೆ ಅಂತರ್ಯಾಮಿಯಾಗಿರುತ್ತಾನೆ. ಬುದ್ಧಿಯ ಗುಣಗಳಾದ ಸತ್ತ್ವ-ರಜಸ್ತಮೋಗುಣಗಳಿಂದ ಅವನು ಹಲವು ಬಗೆಯಾಗಿ ಕಂಡುಬಂದರೂ ಅವನು ನಿರ್ಗುಣನಾಗಿರುವುದರಿಂದ ಯಾವ ವಿಧವಾದ ವಿಕಾರವನ್ನೂ ಹೊಂದುವುದಿಲ್ಲ.

ಮಹಾರಾಜ! ಹಿಂದಿನ ಕಲ್ಪದ ಕಡೆಯಭಾಗದಲ್ಲಿ ಬ್ರಹ್ಮನ ಹಗಲು ಮುಗಿದು ಬ್ರಾಹ್ಮಣವೆಂಬ ಹೆಸರಿನ ನೈಮಿತ್ತಿಕವಾದ ಪ್ರಲಯವಾಯಿತು. ಆ ಸಮಯದಲ್ಲಿ ಭೂಲೋಕವೇ ಮೊದಲಾದ ಸಮಸ್ತಲೋಕಗಳೂ ಸಮುದ್ರದಲ್ಲಿ ಮುಳುಗಿಹೋದುವು. ಹಗಲು ಕಳೆದು ಹೋಗಿ ರಾತ್ರಿಯು ಪ್ರಾರಂಭವಾದ ಕಾರಣ ಬ್ರಹ್ಮನು ನಿದ್ರಾಪರವಶನಾದನು. ಆ ಸಮಯದಲ್ಲಿ ವೇದಗಳು ಅವನ ಮುಖದಿಂದ ಹೊರಬಂದುವು. ಆಗ ಅವನ ಸಮೀಪದಲ್ಲಿಯೇ ಇದ್ದ ಹಯಗ್ರೀವನೆಂಬ ಹೆಸರಿನ ದೈತ್ಯನು ಯೋಗಬಲ

ದಿಂದ, ಬ್ರಹ್ಮನ ಮುಖದಿಂದ ಹೊರಟ ಎಲ್ಲ ವೇದಗಳನ್ನೂ ಅಪಹರಿಸಿ ಬಿಟ್ಟನು. ಸರ್ವಶಕ್ತನಾದ ಶ್ರೀಹರಿಗೆ ದಾನವರಾಜನಾದ ಹಯಗ್ರೀವನು ಮಾಡಿದ ಕಾರ್ಯವು ತಿಳಿದುಹೋಯಿತು. ವೇದಗಳನ್ನು ಉದ್ಧರಿಸುವುದ ಕ್ಕಾಗಿಯೇ ಶ್ರೀಹರಿಯು ಹೆಣ್ಣು ಮೀನಾಗಿ ಅವತರಿಸಿದನು. ಆ ಸಮಯದಲ್ಲಿ ಸತ್ಯವ್ರತನೆಂಬ ಹೆಸರಿನ ಉದಾರಿಯಾದ, ನಾರಾಯಣಪರಾಯಣನಾದ ರಾಜರ್ಷಿಯು ಕೇವಲ ನೀರನ್ನೇ ಆಹಾರವಾಗಿ ಸೇವಿಸುತ್ತಾ ತಪಸ್ಸನ್ನು ಮಾಡುತ್ತಿದ್ದನು. ಆ ಸತ್ಯವ್ರತನೇ ಪ್ರಸಕ್ತ ಶ್ವೇತವರಾಹ ಮಹಾಕಲ್ಪದಲ್ಲಿ ಸೂರ್ಯದೇವನ ಮಗನಾಗಿ ಶ್ರಾದ್ಧದೇವನೆಂಬ ಹೆಸರಿನಿಂದ ವಿಖ್ಯಾತ ನಾಗಿದ್ದಾನೆ. ಅವನನ್ನೇ ಶ್ರೀಭಗವಂತನು ಈ ಮನ್ವಂತರದ ಮನುವನ್ನಾಗಿಯೂ ಮಾಡಿರುತ್ತಾನೆ. (ಶ್ಲೋಕ 4-11)

ಒಮ್ಮೆ ರಾಜರ್ಷಿಯಾದ ಸತ್ಯವ್ರತನು ಕೃತಮಾಲಾ ಎಂಬ ನದಿಯ ನೀರಿನಲ್ಲಿ ದೇವ-ಪಿತೃಗಳಿಗೆ ತರ್ಪಣಕೊಡುತ್ತಿದ್ದನು. ಬೊಗಸೆಯಿಂದ ನೀರನ್ನು ತೆಗೆದುಕೊಂಡಾಗ ನೀರಿನ ಜೊತೆಯಲ್ಲಿ ಒಂದು ಚಿಕ್ಕ ಮೀನೂ ಬಂದುಬಿಟ್ಟಿತು. ದ್ರಾವಿಡದೇಶದ ರಾಜನಾದ ಆ ಸತ್ಯವ್ರತನು ಬೊಗಸೆಯಲ್ಲಿ ನೀರಿನೊಡನೆ ಬಂದ ಮೀನನ್ನು ನದಿಯ ನೀರಿನಲ್ಲಿ ಬಿಟ್ಟುಬಿಟ್ಟನು. ನೀರಿಗೆ ಬಿಟ್ಟೊಡನೆಯೇ ಆ ಮೀನು ಕರುಣಾಜನಕವಾದ ರೀತಿಯಲ್ಲಿ ಪರಮ ದಯಾಳುವಾದ ರಾಜನಿಗೆ ಹೇಳಿತು :

"ಮಹಾರಾಜ! ನೀನು ದೀನವತ್ಸಲನಾಗಿರುವೆ. ನೀರಿನಲ್ಲಿ ವಾಸ ಮಾಡುವ ಮೀನೇ ಮೊದಲಾದುವುಗಳು ತಮ್ಮ ಜಾತಿಗೇ ಸೇರಿದ ಮೀನು ಗಳನ್ನೂ ತಿನ್ನುವುವೆಂಬುದನ್ನು ನೀನು ಕೇಳಿರುವೆ. ಚಿಕ್ಕ ಮೀನುಗಳನ್ನು ದೊಡ್ಡ ಮೀನುಗಳು ತಿಂದುಹಾಕುತ್ತವೆ. ಆ ಭಯದಿಂದಲೇ ನಾನು ಅತ್ಯಂತ ವ್ಯಾಕುಲಳಾಗಿದ್ದೇನೆ. ಭಯಗ್ರಸ್ತಳಾಗಿರುವ ನನ್ನನ್ನು ಪುನಃ ನದಿಗೇಕೆ ತಂದುಬಿಟ್ಟೆ?"

ತನ್ನನ್ನು ಅನುಗ್ರಹಿಸಲೆಂದೇ ದಯಾಮಯನಾದ ಭಗವಂತನು ಹೆಣ್ಣು ಮೀನಿನ ರೂಪವನ್ನು ಧರಿಸಿ ಬಂದಿರುವನೆಂಬುವುದು ಸತ್ಯವ್ರತನಿಗೆ ತಿಳಿಯಲಿಲ್ಲ. ಮೀನಿನ ಪ್ರಾರ್ಥನೆಯಂತೆ ಅದನ್ನು ಹೇಗಾದರೂ ಮಾಡಿ

ರಕ್ಷಿಸಬೇಕೆಂದು ರಾಜನು ನಿಶ್ಚಯಿಸಿದನು. ಸತ್ಯವ್ರತನು ಮೀನಿನ ಅತ್ಯಂತ ದೈನ್ಯದ ಮಾತನ್ನು ಕೇಳಿ ದಯಾರ್ದ್ರಹೃದಯನಾಗಿ ಅದನ್ನು ತನ್ನ ನೀರು ತುಂಬಿದ ಕಮಂಡಲುವಿನಲ್ಲಿಟ್ಟುಕೊಂಡು ಆಶ್ರಮಕ್ಕೆ ಹೋದನು. ಆಶ್ರಮಕ್ಕೆ ತೆಗೆದುಕೊಂಡು ಹೋದನಂತರ ಆ ಮೀನು ಒಂದೇ ರಾತ್ರಿಯಲ್ಲಿ ಬಹಳ ದೊಡ್ಡದಾಗಿಬಿಟ್ಟಿತು. ಕಮಂಡಲುವಿನಲ್ಲಿ ಅದಕ್ಕೆ ಹಿಂದು-ಮುಂದಾಗಲೂ ಅವಕಾಶವಿರಲಿಲ್ಲ. ಅಲುಗಾಡುವುದಕ್ಕೂ ಅದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆಗ ಮೀನು ರಾಜನಿಗೆ ಹೇಳಿತು : (ಶ್ಲೋಕ 21-17)

"ಮಹಾರಾಜ! ಈ ಕಮಂಡಲುವಿನಲ್ಲಿ ನಾನು ಕಷ್ಟಪಟ್ಟುಕೊಂಡಾದರೂ ಇರಲು ಸಾಧ್ಯವಿಲ್ಲ. ಇದು ನನಗೆ ಅಷ್ಟು ಚಿಕ್ಕದಾಗಿಬಿಟ್ಟಿದೆ. ನಾನು ಸುಖವಾಗಿ ಓಡಾಡಿಕೊಂಡಿರಲು ಸಾಧ್ಯವಾಗುವಂತೆ ಬೇರೆ ಯಾವುದಾದರೂ ದೊಡ್ಡ ಪಾತ್ರೆಯಲ್ಲಿಡು. ವಿಸ್ತಾರವಾದ ಸ್ಥಾನವನ್ನು ಕಲ್ಪಿಸಿಕೊಡು."

ಸತ್ಯವ್ರತನು ಮೀನು ಹೇಳಿದ ಮಾತನ್ನು ಕೇಳಿ ಸಹಜವಾಗಿಯೇ ಅದು ದಪ್ಪವಾಗಿರುವುದನ್ನು ಕಂಡು ದೊಡ್ಡದಾದೊಂದು ಕಡಾಯಿಯ ನೀರಿನಲ್ಲಿ ಆ ಮೀನನ್ನು ಬಿಟ್ಟನು. ಆದರೆ ಒಂದು ಮುಹೂರ್ತಮಾತ್ರದಲ್ಲಿ ಆ ಮೀನು ಮೂರು ಮೊಳಗಳಷ್ಟು ದೊಡ್ಡದಾಗಿಬಿಟ್ಟಿತು. ಪುನಃ ಅದು ರಾಜನಿಗೆ ಹೇಳಿತು:

"ಮಹಾರಾಜ! ಈ ಕಡಾಯಿಯಲ್ಲಿಯೂ ನಾನು ಸುಖವಾಗಿರಲಾರೆನು. ನಾನು ನಿನ್ನನ್ನೇ ಮೊರೆಹೊಕ್ಕಿದ್ದೇನೆ. ಆದುದರಿಂದ ಈ ಕಡಾಯಿಗಿಂತಲೂ ದೊಡ್ಡದಾದ ಸ್ಥಾನವನ್ನು ನನಗೆ ಕಲ್ಪಿಸಿಕೊಡು."

ಪರೀಕ್ಷಿತನೇ! ಮೀನಿನ ಈ ಮಾತನ್ನು ಕೇಳಿ ಮತ್ತು ಅದು ಮುಹೂರ್ತಮಾತ್ರದಲ್ಲಿ ದೊಡ್ಡದಾಗಿರುವುದನ್ನೂ ಕಂಡು ಅದನ್ನು ಕಡಾಯಿಯಿಂದ ತೆಗೆದು ಸರೋವರಕ್ಕೆ ಬಿಟ್ಟನು. ಸ್ವಲ್ಪಹೊತ್ತಿನಲ್ಲಿಯೇ ಆ ಮೀನು ಅತಿದೊಡ್ಡದಾಗಿ ಬೆಳೆದು ತನ್ನ ಶರೀರದಿಂದ ಆ ಸರೋವರವನ್ನೆಲ್ಲಾ ಆಕ್ರಮಿಸಿ ಪುನಃ ಸತ್ಯವ್ರತನಿಗೆ ಹೇಳಿತು :

"ಮಹಾರಾಜ! ನಾನು ಜಲಚರಪ್ರಾಣಿಯಾಗಿದ್ದೇನೆ. ಈ ಸರೋವರವೂ ನಾನು ಸುಖವಾಗಿ ವಾಸಮಾಡಿಕೊಂಡಿರಲು ಸಾಕಾಗುವು

ದಿಲ್ಲ. ಆದುದರಿಂದ ಬೇರಾವುದಾದರೂ ದೊಡ್ಡ ಸರೋವರಕ್ಕೊಯ್ದು ನನ್ನನ್ನು ರಕ್ಷಿಸು." ಮತ್ಸ್ಯವು ಹೀಗೆ ಹೇಳಲು ರಾಜನು ಅದನ್ನು ಅದಕ್ಕಿಂತಲೂ ದೊಡ್ಡ ಸರೋವರದಲ್ಲಿ ಬಿಟ್ಟನು. ಪುನಃ ಮೀನು ದೊಡ್ಡದಾಯಿತು. ಪುನಃ ಅದಕ್ಕಿಂತಲೂ ದೊಡ್ಡ ಸರೋವರದಲ್ಲಿ ಸ್ಥಾನ. ಪುನಃ ಮೀನು ದೊಡ್ಡದಾಗುವುದು–ಹೀಗಾಗುತ್ತಿರುವುದನ್ನು ಗಮನಿಸಿ ಕಡೆಗೆ ಸತ್ಯವ್ರತಮಹಾರಾಜನು ಈ ಮತ್ಸ್ಯಮೂರ್ತಿಯನ್ನು ಸಮುದ್ರಕ್ಕೆ ಬಿಟ್ಟು ಬಿಟ್ಟನು. ಸಮುದ್ರಕ್ಕೆ ಹಾಕುವ ಸಮಯದಲ್ಲಿ ಆ ಮೀನು ಪುನಃ ಹೇಳಿತು :

"ವೀರಾಧಿವೀರನೇ! ಸಮುದ್ರದಲ್ಲಿ ದೊಡ್ಡ-ದೊಡ್ಡ ತಿಮಿ-ತಿಮಿಂಗಿಲಗಳಿವೆ. ಅವುಗಳು ನನ್ನನ್ನು ಖಂಡಿತವಾಗಿಯೂ ನುಂಗಿಹಾಕುತ್ತವೆ. ಆದುದರಿಂದ ನೀನು ನನ್ನನ್ನು ಸಮುದ್ರದಲ್ಲಿ ಬಿಡಬೇಡ." ಮತ್ಸ್ಯ ಮೂರ್ತಿಯ ಸುಮಧುರವಾದ ಈ ಮಾತನ್ನು ಕೇಳಿ ಮೋಹಮುಗ್ಧನಾದ ಸತ್ಯವ್ರತರಾಜನು ಹೇಳಿದನು :

"ಮತ್ಸ್ಯದ ರೂಪವನ್ನು ಧರಿಸಿ ನನ್ನನ್ನು ಹೀಗೆ ವಿಮೋಹಗೊಳಿಸು ತ್ತಿರುವ ನೀನು ಯಾರು? (ಶ್ಲೋಕ 18-25)

ನೈವಂವೀರ್ಯೋ ಜಲಚರೋ ದೃಷ್ಟೋಽಸ್ಮಾಭಿಃ ಶ್ರುತೋಽಪಿ ಚ ।
ಯೋ ಭವಾನ್ಯೋಜನಶತಮಹ್ನಾಭಿರ್ವ್ಯಾನಶೇ ಸರಃ ॥೨೬॥

ಮಹಾನುಭಾವನೇ! ನೀನು ಕೇವಲ ಎರಡು ದಿವಸಗಳ ಅಂತರದಲ್ಲಿ ನೂರು ಯೋಜನ ವಿಸ್ತಾರವುಳ್ಳ ಈ ಸರೋವರವನ್ನೂ ವ್ಯಾಪಿಸಿಕೊಂಡು ಬಿಟ್ಟಿರುವೆ. ಇಂತಹ ಅಮೋಘಶಕ್ತಿಯುಳ್ಳ ಜಲಚರವನ್ನು ನಾವು ಇದುವರೆಗೆ ಕಂಡೂ ಇಲ್ಲ ; ಕೇಳಿಯೂ ಇಲ್ಲ.

ನೂನಂ ತ್ವಂ ಭಗವಾನ್ಸಾಕ್ಷಾದ್ಧರಿರ್ನಾರಾಯಣೋಽವ್ಯಯಃ ।
ಅನುಗ್ರಹಾಯ ಭೂತಾನಾಂ ಧತ್ಸೇ ರೂಪಂ ಜಲೌಕಸಾಮ್ ॥೨೭॥

ನಿಶ್ಚಯವಾಗಿಯೂ, ನೀನು ಶಾಶ್ವತನಾದ, ಭಕ್ತಜನರ ಪಾಪಗಳನ್ನು ಪರಿಹರಿಸುವ, ಷಡ್ಗುಣಸಂಪೂರ್ಣನಾದ ಸಾಕ್ಷಾತ್ ನಾರಾಯಣನೇ ಆಗಿರುವೆ. ಪ್ರಾಣಿಗಳಿಗೆ ಅನುಗ್ರಹಮಾಡುವ ಸಲುವಾಗಿಯೇ ಈ ಜಲಚರದ ರೂಪವನ್ನು ಧರಿಸಿರುವೆ.

ನಮಸ್ತೇ ಪುರುಷಶ್ರೇಷ್ಠ ಸ್ಥಿತ್ಯುತ್ಪತ್ತ್ಯಪ್ಯಯೇಶ್ವರ ।
ಭಕ್ತಾನಾಂ ನಃ ಪ್ರಪನ್ನಾನಾಂ ಮುಖ್ಯೋ ಹ್ಯಾತ್ಮಗತಿರ್ವಿಭೋ ॥

ಪುರುಷಶ್ರೇಷ್ಠನೇ! ಸೃಷ್ಟಿ-ಸ್ಥಿತಿ-ಲಯಗಳಿಗೂ ಈಶ್ವರನಾದವನೇ! ನಿನಗೆ ನಮಸ್ಕಾರಮಾಡುತ್ತೇನೆ. ವಿಭುವೇ! ಭಕ್ತರಾಗಿಯೂ ಶರಣಾಗತರಾಗಿಯೂ ಇರುವ ನಮಗೆ ಪಾಲಕನಾಗಿಯೂ, ಆತ್ಮಸ್ವರೂಪನಾಗಿಯೂ, ಪರಮಾಶ್ರಯನಾಗಿಯೂ ಇರುವೆಯಲ್ಲವೇ?

ಸರ್ವೇ ಲೀಲಾವತಾರಾಸ್ತೇ ಭೂತಾನಾಂ ಭೂತಿಹೇತವಃ ।
ಜ್ಞಾತುಮಿಚ್ಛಾಮ್ಯದೋ ರೂಪಂ ಯದರ್ಥಂ ಭವತಾ ಧೃತಮ್ ॥

ಸ್ವಾಮಿಯೇ! ನಿನ್ನ ಎಲ್ಲಾ ಲೀಲಾವತಾರಗಳೂ ಪ್ರಾಣಿಗಳ ಶ್ರೇಯಸ್ಸಿಗಾಗಿಯೇ ಮಾಡಲ್ಪಟ್ಟಿವೆ. ಆದರೆ ಯಾವ ಪ್ರಯೋಜನಕ್ಕಾಗಿ ಈ ಮತ್ಸ್ಯದ ರೂಪವನ್ನು ಧರಿಸಿರುವೆ–ಎಂಬುದನ್ನು ತಿಳಿಯಲು ಅಪೇಕ್ಷಿಸುತ್ತೇನೆ.

ನ ತೇಽರವಿನ್ದಾಕ್ಷ ಪದೋಪಸರ್ಪಣಂ
ಮೃಷಾ ಭವೇತ್ಸರ್ವಸುಹೃತ್ಪ್ರಿಯಾತ್ಮನಃ ।
ಯಥೇತರೇಷಾಂ ಪೃಥಗಾತ್ಮನಾಂ ಸತಾ-
ಮದೀದೃಶೋ ಯದ್ವಪುರದ್ಭುತಂ ಹಿ ನಃ ॥೩೦॥

ಭಗವಂತ! ಇತರ ಪರಮಾದ್ಭುತವಾದ ರೂಪವನ್ನು ತೋರಿಸಿ ನಮ್ಮನ್ನು ಅನುಗ್ರಹಿಸಿರುವೆ. ಅರವಿಂದಾಕ್ಷನೇ! ಸಮಸ್ತರಿಗೂ ಹಿತೈಷಿಯಾಗಿಯೂ, ಮಿತ್ರನಾಗಿಯೂ, ಆತ್ಮಸ್ವರೂಪನಾಗಿಯೂ ಇರುವ ನಿನ್ನ ಸೇವೆಯು ಪ್ರತ್ಯೇಕವಾದ ಸ್ವರೂಪವುಳ್ಳ, ಗೌರವಾರ್ಹರಾದ ಇತರ ದೇವತೆಗಳಿಗೆ ಮಾಡಿದ ಪೂಜೆಯಂತೆ ವ್ಯರ್ಥವಾಗುವುದಿಲ್ಲ."*

---

* ಒಬ್ಬನು ಪೂಜಿಸಬೇಕಾದರೆ ನೇರವಾಗಿ ಪರಬ್ರಹ್ಮಪರಮಾತ್ಮನನ್ನೇ ಪೂಜಿಸಬೇಕು. 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್'। ಪರಮಾತ್ಮನನ್ನು ಸ್ವಲ್ಪವೇ ಪೂಜಿಸಿದರೂ ಮಹಾಭಯದಿಂದ ಪಾರಾಗಬಹುದು. ಇತರ ದೇವತೆಗಳಿಗೆ ಮಾಡುವ ಪೂಜೆಯು ಅಲ್ಪ ಫಲಕೊಡತಕ್ಕದ್ದು. 'ಅನ್ತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಮ್'॥ (ಗೀತಾ) ಶ್ರೀಕೃಷ್ಣನು ಗೀತೆಯಲ್ಲಿಯೇ

ಶ್ರೀಶುಕಮುನಿಗಳು ಹೇಳುತ್ತಾರೆ :

ಭಕ್ತಪ್ರಿಯನಾದ, ಜಗತ್ಪತಿಯಾದ ಭಗವಂತನು ಮತ್ಸ್ಯರೂಪ ವನ್ನು ಧರಿಸಿ ಪ್ರಲಯಕಾಲದಲ್ಲಿ ಸಮುದ್ರದಲ್ಲಿ ವಿಹರಿಸಬೇಕೆಂಬ ಇಚ್ಛೆಯಿಂದ ಕೂಡಿದ್ದನು. ತನ್ನನ್ನು ನಾನಾಪ್ರಕಾರವಾಗಿ ಸ್ತೋತ್ರಮಾಡುತ್ತಿದ್ದ ಪ್ರಿಯವ್ರತನಿಗೆ ಪ್ರಿಯವನ್ನುಂಟುಮಾಡಬೇಕೆಂದು ಬಯಸಿ ಹೀಗೆ ಹೇಳಿ ದನು :

"ಶತ್ರುಗಳನ್ನು ದಮನಮಾಡುವ ಪ್ರಿಯವ್ರತಮಹಾರಾಜನೇ! ಇಂದಿಗೆ ಏಳನೆಯ ದಿವಸದಲ್ಲಿ ಭೂಲೋಕವೇ ಮೊದಲಾದ ಮೂರು ಲೋಕಗಳೂ ಪ್ರಲಯಸಮುದ್ರದಲ್ಲಿ ಮುಳುಗಿಹೋದನಂತರ ನನ್ನಿಂದ ಕಳುಹಿಸಲ್ಪಡುವ ವಿಶಾಲವಾದ ಒಂದು ನೌಕೆಯು ನಿನ್ನ ಬಳಿಗೆ ಬರುತ್ತದೆ. ಆ ಸಮಯದಲ್ಲಿ ನೀನು ಸಮಸ್ತಪ್ರಾಣಿಗಳ ಸೂಕ್ಷ್ಮಶರೀರಗಳನ್ನೂ ತೆಗೆದುಕೊಂಡು ಸಪ್ತರ್ಷಿಗಳೊಡನೆ ಆ ನೌಕೆಯನ್ನು ಹತ್ತಬೇಕು. ಸಮಸ್ತ ಮೂಲಿಕೆಗಳನ್ನೂ ಬಗೆ-ಬಗೆಯ ಬೀಜಗಳನ್ನೂ ನೀನು ಆ ನೌಕೆಯಲ್ಲಿ ಇಟ್ಟುಕೊಳ್ಳಬೇಕು. ಆ ಸಮಯದಲ್ಲಿ ಎಲ್ಲ ಕಡೆಗಳಲ್ಲಿಯೂ ನೀರು ಮಾತ್ರವೇ ಕಾಣುತ್ತಿರುತ್ತದೆ. ಬೆಳಕೂ ಇರುವುದಿಲ್ಲ. ಸಪ್ತರ್ಷಿಗಳ ದಿವ್ಯ ತೇಜಸ್ಸೇ ನಿನಗೆ ಬೆಳಕಾಗಿ ಪರಿಣಮಿಸುತ್ತದೆ. ಅದರಿಂದಲೇ ನೀನು ವ್ಯವಹರಿಸಬೇಕು. ಸ್ವಲ್ಪವೂ ಹೆದರಿಕೆಯಿಲ್ಲದೇ ನೀನು ಆ ನೌಕೆಯಲ್ಲಿ ಸಪ್ತರ್ಷಿಗಳೊಡನೆ ಅಗಾಧವಾದ ಆ ನೀರಿನಲ್ಲಿ ಸಂಚರಿಸುತ್ತಿರು. ಹಾಗೆ ನೀರಿನಲ್ಲಿ ಸಂಚರಿಸುತ್ತಿರುವಾಗ ಇದ್ದಕ್ಕಿದ್ದಂತೆಯೇ ಬಿರುಗಾಳಿಯೆದ್ದು ನೌಕೆ ಯನ್ನೇ ಅಲುಗಾಡಿಸಿಬಿಡುತ್ತದೆ. ಆ ಸಮಯದಲ್ಲಿ ನಾನು ಇದೇ ಮತ್ಸ್ಯ ಮೂರ್ತಿಯರೂಪದಲ್ಲಿ ಅಲ್ಲಿಗೆ ಬರುತ್ತೇನೆ. ಆಗ ಸರ್ಪರಾಜನಾದ ವಾಸುಕಿ ಯನ್ನು ಹಗ್ಗವನ್ನಾಗಿ ಮಾಡಿಕೊಂಡು ನೌಕೆಯನ್ನು ನನ್ನ ಕೊಂಬಿಗೆ ಕಟ್ಟಿ

ಮತ್ತೊಂದು ಕಡೆ : ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯನ್ತೇಽನ್ಯ ದೇವತಾಃ II ಕಾಮ್ಯಫಲಗಳಲ್ಲಿ ಆಸೆಯನ್ನಿಟ್ಟುಕೊಂಡಿರುವ ಅಲ್ಪಬುದ್ಧಿಯುಳ್ಳವರು ಇತರ ದೇವತೆ ಗಳನ್ನು ಆಶ್ರಯಿಸುತ್ತಾರೆ. ಶಾಶ್ವತವಾದ ಫಲವನ್ನು ಈ ದೇವತೆಗಳು ಕೊಡಲಾರರು. ಅವರು ಕೊಡುವುದು ತಾತ್ಕಾಲಿಕಫಲ—ಈ ಅಭಿಪ್ರಾಯವು ಈ ಶ್ಲೋಕದಲ್ಲಿ ಮೂಡಿಬಂದಿದೆ.

ಹಾಕು. ಸತ್ಯವ್ರತನೇ! ಬಳಿಕ ನಾನು ಸಪ್ತರ್ಷಿಗಳಿಂದಲೂ ನಿನ್ನಿಂದಲೂ ಕೂಡಿರುವ ಆ ನೌಕೆಯನ್ನು ಎಳೆದುಕೊಂಡು ಬ್ರಹ್ಮನ ಸಂಬಂಧವಾದ ಆ ರಾತ್ರಿಯು ಕಳೆಯುವವರೆಗೂ ಸಮುದ್ರದಲ್ಲಿ ಸಂಚರಿಸುತ್ತಿರುತ್ತೇನೆ.* ಆ ಸಮಯದಲ್ಲಿ ನೀನು ನನ್ನನ್ನು ಪ್ರಶ್ನೆಗಳನ್ನು ಕೇಳುವೆ. ಆಗ ನಾನು ನಿನಗೆ ಉಪದೇಶಮಾಡುತ್ತೇನೆ. ನನ್ನ ಅನುಗ್ರಹದಿಂದಾಗಿ, ಪರಬ್ರಹ್ಮವೆಂಬ ಹೆಸರಿನಿಂದ ಕರೆಯಲ್ಪಡುವ ನನ್ನನ್ನು ನಿನ್ನ ಹೃದಯದಲ್ಲಿ ಕಂಡುಕೊಳ್ಳುವೆ. ಹಾಗೆಯೇ ನನ್ನ ಮಹಿಮೆಯನ್ನೂ ತಿಳಿಯುವೆ."

ಪರೀಕ್ಷಿತನೇ! ಮತ್ಸ್ಯಮೂರ್ತಿಯು ರಾಜನಿಗೆ ಹೀಗೆ ಆದೇಶವನ್ನಿತ್ತು ಮಾಯವಾದನು. ಹೃಷೀಕೇಶನು ನಿರ್ದೇಶಿಸಿದ್ದ ಆ ಕಾಲವನ್ನು ಸತ್ಯವ್ರತನು ನಿರೀಕ್ಷಿಸುತ್ತಲೇ ಇದ್ದನು. (ಶ್ಲೋಕ 31-39)

ಆಸ್ತೀರ್ಯ ದರ್ಭಾನ್ಪ್ರಾಕ್ಕೂಲಾನ್ರಾಜರ್ಷಿಃ ಪ್ರಾಗುದಙ್ಮುಖಃ ।
ನಿಷಸಾದ ಹರೇಃ ಪಾದೌ ಚಿನ್ತಯನ್ಮತ್ಸ್ಯರೂಪಿಣಃ ॥೪೦॥

ಬಳಿಕ ರಾಜರ್ಷಿಯಾದ ಸತ್ಯವ್ರತನು ಪೂರ್ವಾಗ್ರಗಳಾಗಿ ದರ್ಭೆಗಳನ್ನು ಹಾಸಿ ಈಶಾನ್ಯದಿಕ್ಕಿಗೆ ಅಭಿಮುಖವಾಗಿ ಕುಳಿತು, ಮತ್ಸ್ಯರೂಪವುಳ್ಳ ಹರಿಯ ದಿವ್ಯಪಾದಗಳನ್ನೇ ಧ್ಯಾನಿಸುತ್ತಿದ್ದನು.

ಅನಂತರ ಮಳೆಗರೆಯುತ್ತಿರುವ ಮಹಾಮೇಘಗಳಿಂದ ಕ್ಷಣ-ಕ್ಷಣಕ್ಕೂ ಉಕ್ಕೇರುತ್ತಿದ್ದ ಸಮುದ್ರವು ಎಲ್ಲೆಯನ್ನೂ ಮೀರಿ ಎಲ್ಲ ಕಡೆಗಳಿಂದಲೂ ಭೂಮಂಡಲವನ್ನು ಮುಳುಗಿಸುತ್ತಿದ್ದುದು ಕಂಡುಬಂದಿತು. ಭಗವಂತನ ಆದೇಶವನ್ನೇ ಸ್ಮರಿಸಿಕೊಳ್ಳುತ್ತಿದ್ದ ಸತ್ಯವ್ರತನು, ನೌಕೆಯೊಂದು ತನ್ನ ಬಳಿಗೆ

---

* **ಆಸೀದತೀತಕಲ್ಪಾನ್ತೇ ಬ್ರಾಹ್ಮೋ ನೈಮಿತ್ತಿಕೋ ಲಯಃ** (ಶ್ಲೋಕ 7-24) ಎಂಬ ವಚನದಿಂದ ಇದು ಮಹಾಪ್ರಲಯವೆಂದು ಹೇಳಬಹುದು. ಆದರೆ ಮಹಾಪ್ರಲಯದಲ್ಲಿ ಪೃಥಿವ್ಯಾದಿ ಪಂಚಭೂತಗಳಿರುವುದಿಲ್ಲ. ಬ್ರಹ್ಮನೂ ಇರುವುದಿಲ್ಲ. **ಯಾವದ್ಬ್ರಾಹ್ಮೀನಿಶಾಪ್ರಭೋ** (ಶ್ಲೋಕ 37-24) ಎಂಬ ವಾಕ್ಯದಿಂದ ಬ್ರಹ್ಮನು ನಿದ್ರಿಸುತ್ತಿರುವನೆಂದು ತಿಳಿದುಬರುತ್ತದೆ. ಈ ಕಾರಣಗಳಿಂದ ಇದು ಮಹಾಪ್ರಲಯವಲ್ಲ. ಹಾಗಾದರೆ ಬ್ರಹ್ಮನ ದೈನಂದಿನಪ್ರಲಯವೇ?–ಎಂದು ಪ್ರಶ್ನಿಸಬಹುದು. ಆದರೆ ದೈನಂದಿನಪ್ರಲಯದಲ್ಲಿ ಲಯಸೂಚಕಗಳಾದ ಅನಾವೃಷ್ಟಿ ಮುಂತಾದುವು ಆಗಬೇಕು. ಅದೊಂದೂ ಇಲ್ಲದೆ **ಸಪ್ತಮೇಹನಿತ್ರೈಲೋಕ್ಯಂ ನಿಮಂಕ್ಷ್ಯತಿ** (ಶ್ಲೋಕ 32-24)

ಬಂದುದನ್ನು ಕಂಡನು. ಒಡನೆಯೇ ಬಳ್ಳಿ-ಬೇರುಗಳನ್ನೂ ಬೀಜಗಳನ್ನೂ ತೆಗೆದುಕೊಂಡು ಬ್ರಾಹ್ಮಣಶ್ರೇಷ್ಠರಾದ ಸಪ್ತರ್ಷಿಗಳೊಡನೆ ಆ ನೌಕೆಯನ್ನು ಹತ್ತಿದನು. ರಾಜನ ನಿಷ್ಠೆಯಿಂದ ಸಂತುಷ್ಟರಾದ ಸಪ್ತರ್ಷಿಗಳು ಹೇಳಿದರು :

"ಮಹಾರಾಜ! ಹರಿಯನ್ನು ಧ್ಯಾನಮಾಡು. ಅವನೇ ನಮ್ಮನ್ನು ಈ ಸಂಕಟದಿಂದ ಕಾಪಾಡುವನು ಮತ್ತು ಪರಮಸುಖವನ್ನೂ ಅನುಗ್ರಹಿಸುವನು."

ಋಷಿಗಳ ಆದೇಶದಂತೆ ಸತ್ಯವ್ರತನು ತದೇಕಚಿತ್ತನಾಗಿ ಶ್ರೀಹರಿಯನ್ನು ಧ್ಯಾನಮಾಡುತ್ತಿರಲಾಗಿ ನೂರು ಯೋಜನ ವಿಸ್ತಾರವಿದ್ದ, ಹೊಂಬಣ್ಣದ ಮತ್ತು ಒಂದೇ ಕೊಂಬಿನಿಂದ ಕೂಡಿದ್ದ ಮೀನೊಂದು ಮಹಾಸಾಗರದಲ್ಲಿ ಕಾಣಿಸಿಕೊಂಡಿತು. ಹಿಂದೆಯೇ ಶ್ರೀಭಗವಂತನು ಹೇಳಿದ್ದಂತೆ ಸತ್ಯವ್ರತನು ವಾಸುಕಿಯನ್ನು ಹಗ್ಗವನ್ನಾಗಿ ಮಾಡಿಕೊಂಡು ಹಡಗಿಗೂ–ಮೀನಿನ ಕೊಂಬಿಗೂ ಬಿಗಿದು ಕಟ್ಟಿ ಪರಮಸಂತುಷ್ಟನಾಗಿ ಶ್ರೀಹರಿಯನ್ನು ಸ್ತೋತ್ರ ಮಾಡತೊಡಗಿದನು : (ಶ್ಲೋಕ 41-45)

ಅನಾದ್ಯವಿದ್ಯೋಪಹತಾತ್ಮಸಂವಿದ–
ಸ್ತನ್ಮೂಲಸಂಸಾರಪರಿಶ್ರಮಾತುರಾಃ ।
ಯದೃಚ್ಛಯೇಹೋಪಸೃತಾ ಯಮಾಪ್ನುಯು–
ರ್ವಿಮುಕ್ತಿದೋ ನಃ ಪರಮೋ ಗುರುರ್ಭವಾನ್ ॥೪೬॥

"ಪ್ರಭುವೇ! ಪ್ರಪಂಚದಲ್ಲಿರುವ ಜೀವಿಗಳ ಆತ್ಮಜ್ಞಾನವು ಅನಾದಿ

ಎಂಬ ವಾಕ್ಯದಂತೆ ಅಕಸ್ಮಾತ್ತಾಗಿ ಲಯವು ಉಂಟಾಗುವುದರಿಂದ ಇದು ದೈನಂದಿನಪ್ರಲಯವೂ ಅಲ್ಲ. ಈ ಎರಡು ಪ್ರಲಯಗಳಲ್ಲಿಯೂ ವೈವಸ್ವತನು (ಸತ್ಯವ್ರತನು) ಭೂರೂಪವಾದ ಹಡಗಿನಲ್ಲಿ ಕುಳಿತು ಸಂಚರಿಸಿದನೆಂಬುವ ಸಂಭವವಿಲ್ಲ ಮತ್ತು ಚಾಕ್ಷುಷಮನ್ವಂತರದಲ್ಲಿ ಪ್ರಲಯವೂ ಇಲ್ಲ. ಆದುದರಿಂದ ಭಗವಂತನು ಸತ್ಯವ್ರತನಿಗೆ ಜ್ಞಾನವನ್ನು ಉಪದೇಶಿಸುವುದಕ್ಕಾಗಿ ವೈರಾಗ್ಯವುಂಟಾಗಲೆಂದು ಅಕಸ್ಮಾತ್ತಾಗಿ ಪ್ರಲಯವಾದಂತೆ ತೋರಿಸಿದನೇ ಹೊರತು ನಿಜವಾಗಿ ಆ ಸಮಯದಲ್ಲಿ ಯಾವ ಪ್ರಲಯವೂ ಆಗಲಿಲ್ಲ. ವೈವಸ್ವತಮನ್ವಂತರದಲ್ಲಿ ಮಾರ್ಕಂಡೇಯ ಮುನಿಗೆ ಆಕಸ್ಮಿಕವಾಗಿ ಪ್ರಲಯವನ್ನು ತೋರಿಸಿದಂತೆ ಸತ್ಯವ್ರತನಿಗೂ ತೋರಿಸಿದನೆಂದು ಭಾವಿಸಬಹುದು.

(ಭಾವಾರ್ಥದೀಪಿಕಾ)

ಯಾದ ಅಜ್ಞಾನದಿಂದ ಮುಚ್ಚಿಹೋಗಿದೆ. ಈ ಕಾರಣದಿಂದಲೇ ಅವರು ಸಂಸಾರದ ಹಲವು ಕ್ಲೇಶಗಳಿಂದ ಬಿಡುಗಡೆ ಹೊಂದಿ ನಿನ್ನನ್ನು ಪಡೆಯುವ ಸಲುವಾಗಿ ನಿನ್ನ ಬಳಿಗೆ ಬಂದುಬಿಟ್ಟಿದ್ದಾರೆ. ಅಂತಹ ನಮಗೆ ನೀನು ಮೋಕ್ಷವನ್ನು ದಯಪಾಲಿಸುವ ಪರಮಗುರುವಾಗು.

ಜನೋಽಬುಧೋಽಯಂ ನಿಜಕರ್ಮಬನ್ಧನಃ
ಸುಖೇಚ್ಛಯಾ ಕರ್ಮ ಸಮೀಹತೇಽಸುಖಮ್ ।
ಯತ್ಸೇವಯಾ ತಾಂ ವಿಧುನೋತ್ಯಸನ್ಮತಿಂ
ಗ್ರನ್ಥಿಂ ಸ ಭಿನ್ದ್ಯಾದ್ಧೃದಯಂ ಸ ನೋ ಗುರುಃ ॥೪೭॥

ಈ ಜೀವನು ಅಜ್ಞಾನಿಯಾಗಿದ್ದಾನೆ. ತನ್ನ ಪೂರ್ವಾರ್ಜಿತವಾದ ಕರ್ಮಗಳಿಂದಲೇ ಬಂಧಿಸಲ್ಪಟ್ಟಿದ್ದಾನೆ. ವಿಷಯಸುಖಗಳನ್ನು ಬಯಸಿ ಕಷ್ಟಕರವಾದ ಕರ್ಮಾನುಷ್ಠಾನಗಳನ್ನು ಮಾಡುತ್ತಾನೆ. ಯಾವನ ಸೇವೆ ಯಿಂದ ಇಂತಹ ಅಜ್ಞಾನವು ನಷ್ಟವಾಗಿ ಹೋಗುವುದೋ ಅವನೇ ನನ್ನ ಪರಮಗುರುವು. ಅವನೇ ನನ್ನ ಹೃದಯದಲ್ಲಿರುವ ಅಹಂಕಾರವೆಂಬ ಗಂಟನ್ನು ಭೇದಿಸುತ್ತಾನೆ.

ಯತ್ಸೇವಯಾಗ್ನೇರಿವ ರುದ್ರರೋದನಂ*
ಪುಮಾನ್ವಿಜಹ್ಯಾನ್ಮಲಮಾತ್ಮನಸ್ತಮಃ ।
ಭಜೇತ ವರ್ಣಂ ನಿಜಮೇಷ ಸೋಽವ್ಯಯೋ
ಭೂಯಾತ್ಸ ಈಶಃ ಪರಮೋ ಗುರೋರ್ಗುರುಃ ॥೪೮॥

ಅಗ್ನಿಯಲ್ಲಿ ಕಾಯಿಸುವುದರಿಂದ (ಪುಟಕ್ಕೆ ಹಾಕುವುದರಿಂದ) ಚಿನ್ನ-ಬೆಳ್ಳಿಗಳು ಕೊಳೆಯನ್ನು ನೀಗಿಕೊಂಡು ಹೇಗೆ ಶುದ್ಧವಾಗುವುವೋ ಹಾಗೆಯೇ ನಿನ್ನ ಸೇವೆಯಿಂದ ಜೀವನು ತನ್ನ ಅಂತಃಕರಣದಲ್ಲಿರುವ ಅಜ್ಞಾನ ರೂಪವಾದ ಕೊಳೆಯನ್ನು ತೊಳೆದುಕೊಂಡು ತನ್ನ ನಿಜಸ್ವರೂಪವನ್ನು ಹೊಂದುವನು. (ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವನು.) ಸರ್ವಶಕ್ತ ನಾದ, ಅವಿನಾಶಿಯಾದ, ಪ್ರಭುವಾದ ನೀನು ನಮ್ಮ ಗುರುಜನರಿಗೂ ಪರಮ ಗುರುವಾಗಿರುವೆ. ಆದುದರಿಂದ ಈಶನಾದ ನೀನೇ ನನಗೆ ಗುರುವಾಗು.

---

* ರುದ್ರರೋದನ = ರಜತ = ಬೆಳ್ಳಿ. ಯದರೋದೀತ್ತದ್ರುದ್ರಸ್ಯ ರುದ್ರತ್ವಂ ಯದಶ್ರ್ವ ಶೀಯತ ತದ್ರಜತಗ್ಂ ಹಿರಣ್ಯಮಭವತ್ (ಯಾಜುಷಶ್ರುತಿಃ)

ನ ಯತ್ಪ್ರಸಾದಾಯುತಭಾಗಲೇಶ-
ಮನ್ಯೇ ಚ ದೇವಾ ಗುರವೋ ಜನಾಃ ಸ್ವಯಮ್ ।
ಕರ್ತುಂ ಸಮೇತಾಃ ಪ್ರಭವನ್ತಿ ಪುಂಸ-
ಸ್ತಮೀಶ್ವರಂ ತ್ವಾಂ ಶರಣಂ ಪ್ರಪದ್ಯೇ ॥೪೯॥

ಪ್ರಪಂಚದಲ್ಲಿ ಎಷ್ಟು ದೇವತೆಗಳಿರುವರೋ, ಎಷ್ಟು ಗುರುಜನಗಳಿರುವರೋ, ಎಷ್ಟು ಸಾಧುಪುರುಷರಿರುವರೋ ಅವರೆಲ್ಲರೂ ಒಟ್ಟಾಗಿ ಸೇರಿಕೊಂಡು ಕೃಪೆದೋರಿದರೂ ಅವರೆಲ್ಲರ ಕೃಪೆಯೂ ಕೃಪಾಸಾಗರನಾದ ನಿನ್ನ ಕೃಪೆಯ ಹತ್ತು ಸಾವಿರದಲ್ಲಿ ಒಂದೇ ಒಂದು ಅಂಶಕ್ಕೂ ಸಾಟಿಯಾಗ ಲಾರದು. ಪ್ರಭುವೇ! ನೀನು ಸರ್ವಶಕ್ತನಾಗಿರುವೆ. ನಿನ್ನನ್ನೇ ಶರಣು ಹೊಂದುತ್ತೇನೆ.

ಅಚಕ್ಷುರನ್ಧಸ್ಯ ಯಥಾಗ್ರಣೀಃ ಕೃತ-
ಸ್ತಥಾ ಜನಸ್ಯಾವಿದುಷೋಽಬುಧೋ ಗುರುಃ ।
ತ್ವಮರ್ಕದೃಕ್ಸರ್ವದೃಶಾಂ ಸಮೀಕ್ಷಣೋ
ಕೃತೋ ಗುರುರ್ನಃ ಸ್ವಗತಿಂ ಬುಭುತ್ಸತಾಮ್ ॥೫೦॥

ಕಣ್ಣಿಲ್ಲದವನಿಗೆ ಕಣ್ಣಿಲ್ಲದವನೇ ದಾರಿ ನಡೆಸುವವನಾದರೆ ಎಷ್ಟು ಪ್ರಯೋಜನವಾಗುವುದೋ ಅಜ್ಞಾನಿಯಾದ ಗುರುವಿನ ಉಪದೇಶವು ಅಜ್ಞಾನಿಗಳ ವಿಷಯದಲ್ಲಿ ಅಷ್ಟೇ ಪ್ರಯೋಜನವಾಗುತ್ತದೆ.* ಕುರುಡನು ಮುಂದೆ ಹೋಗಲಾಗದೆ ನಿಂತುಬಿಡುತ್ತಾನೆ. ಅಜ್ಞಾನಿಯು ಅಜ್ಞಾನಿಯಾಗಿಯೇ ಉಳಿಯುತ್ತಾನೆ. ಆದುದರಿಂದ ಸೂರ್ಯಪ್ರಕಾಶದಂತೆ ಸ್ವತಃಸಿದ್ಧವಾದ ಪ್ರಕಾಶವುಳ್ಳ ಸರ್ವೇಂದ್ರಿಯಗಳನ್ನೂ ಪ್ರಕಾಶಗೊಳಿಸುವ ನಿನ್ನನ್ನು, ಆತ್ಮತತ್ತ್ವವನ್ನು ತಿಳಿಯಲು ಬಯಸಿರುವ ನಾವು ಗುರುವಾಗಿ ಪರಿಗ್ರಹಿಸಿದ್ದೇವೆ.

ಜನೋ ಜನಸ್ಯಾದಿಶತೇಽಸತೀಂ ಮತಿಂ
ಯಯಾ ಪ್ರಪದ್ಯೇತ ದುರತ್ಯಯಂ ತಮಃ ।

---

* ಸ್ವಯಂ ತರಿತುಮಕ್ಷಮಃ ಪರಾನ್ನಿಸ್ತಾರಯೇತ್ಕಥಂ ದೂರೇ ತಂ ವರ್ಜಯೇತ್ ಪ್ರಾಜ್ಞೋ ಧೀರಮೇವ ಸಮಾಶ್ರಯೇತ್ ॥ (ಗುರುಗೀತೆ)

ತ್ವಂ ತ್ವವ್ಯಯಂ ಜ್ಞಾನಮಮೋಘಮಞ್ಜಸಾ
ಪ್ರಪದ್ಯತೇ ಯೇ ನ ಜನೋ ನಿಜಂ ಪದಮ್ ॥೫೧॥

ಸಂಸಾರಸಾಗರವನ್ನು ದಾಟಲಾಗದವರೇ ಗುರುಗಳೆಂಬ ಸೋಗು ಹಾಕಿಕೊಂಡು ಅಜ್ಞಜನಕ್ಕೆ ಅಪಾರವಾದ ದುರ್ಗತಿಯನ್ನು ಹೊಂದಿಸುವ ದುಷ್ಟವಾದ ಜ್ಞಾನವನ್ನೇ ಉಪದೇಶಿಸುತ್ತಾರೆ. ಆದರೆ ನೀನಾದರೋ ಅನಾಯಾಸವಾಗಿ ಸ್ವಸ್ವರೂಪವನ್ನು ತಿಳಿಯಬಹುದಾದ ಅವಿನಾಶಿಯಾದ ಅಮೋಘವಾದ ಆತ್ಮತತ್ತ್ವವನ್ನೇ ಉಪದೇಶಿಸುವೆ.

ತ್ವಂ ಸರ್ವಲೋಕಸ್ಯ ಸುಹೃತ್ಪ್ರಿಯೇಶ್ವರೋ
ಹ್ಯಾತ್ಮಾ ಗುರುರ್ಜ್ಞಾನಮಭೀಷ್ಟಸಿದ್ಧಿಃ ।
ತಥಾಪಿ ಲೋಕೋ ನ ಭವನ್ತಮನ್ಧಧೀ-
ರ್ಜಾನಾತಿ ಸನ್ತಂ ಹೃದಿ ಬದ್ಧಕಾಮಃ ॥೫೨॥

ಮಹಾನುಭಾವನೇ! ನೀನು ಸಮಸ್ತಜನರಿಗೂ ಹಿತೈಷಿಯಾಗಿರುವೆ. ಪ್ರಿಯತಮನಾಗಿರುವೆ. ಒಡೆಯನಾಗಿರುವೆ. ಆತ್ಮಸ್ವರೂಪನಾಗಿರುವೆ. ಅಜ್ಞಾನವನ್ನು ಹೋಗಲಾಡಿಸುವ ಗುರುವೂ ಆಗಿರುವೆ. ಜ್ಞಾನಸ್ವರೂಪ ನಾಗಿರುವೆ. ಜನರಿಗೆ ಅಭೀಷ್ಟವಾದ ಆತ್ಮಸಿದ್ಧಿಯನ್ನೂ ಮಾಡಿಕೊಡುವವ ನಾಗಿರುವೆ. ಆದರೂ ಕಾಮನೆಗಳ ಬಂಧನದಿಂದ ಬಿಗಿಯಲ್ಪಟ್ಟಿರುವ ಮನುಷ್ಯರು ಕುರುಡುಬುದ್ಧಿಯವರಾಗಿಬಿಟ್ಟಿದ್ದಾರೆ. ನೀನು ಅವರ ಹೃದಯ ಕಮಲಗಳಲ್ಲಿ ವಿರಾಜಿಸುತ್ತಿರುವೆಯೆಂಬುದೂ ಅವರಿಗೆ ತಿಳಿಯದು.

ತಂ ತ್ವಾಮಹಂ ದೇವವರಂ ವರೇಣ್ಯಂ
ಪ್ರಪದ್ಯ ಈಶಂ ಪ್ರತಿಬೋಧನಾಯ ।
ಛಿನ್ಧ್ಯರ್ಥದೀಪೈರ್ಭಗವನ್ವಚೋಭಿ-
ರ್ಗ್ರನ್ಥೀನ್ ಹೃದಯ್ಯಾನ್ವಿವೃಣು ಸ್ವಮೋಕಃ ॥೫೩॥

ಮತ್ಸ್ಯಮೂರ್ತಿಯೇ! ನಾನಾದರೋ ತತ್ತ್ವೋಪದೇಶಕ್ಕಾಗಿ ಶ್ರೇಷ್ಠನೂ, ದೇವೋತ್ತಮನೂ, ನಿಯಾಮಕನೂ ಆದ ನಿನ್ನನ್ನೇ ಮೊರೆ ಹೋಗುವೆನು. ಪರಮಾರ್ಥವನ್ನು ಪ್ರಕಾಶಗೊಳಿಸುವ ವಚನಗಳಿಂದ

ಹೃದಯದಲ್ಲಡಗಿರುವ ಅಹಂಕಾರವೇ ಮೊದಲಾದ ಗಂಟುಗಳನ್ನು ಕತ್ತರಿಸಿ ನಿನ್ನ ನಿಜಸ್ವರೂಪವನ್ನು ಪ್ರಕಾಶಗೊಳಿಸು.”

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಹೀಗೆ ಪ್ರಾರ್ಥಿಸಿದ ರಾಜನಿಗೆ ಮಹಾಸಮುದ್ರದಲ್ಲಿ ಕ್ರೀಡಿಸುತ್ತಿದ್ದ ಮತ್ಸ್ಯರೂಪಿಯಾದ, ಪುರಾಣಪುರುಷನಾದ, ಭಗವಂತನು ನಿಜಸಂಗತಿಯನ್ನು ಹೇಳಿದನು. ರಾಜರ್ಷಿಯಾದ ಸತ್ಯವ್ರತನಿಗೆ ಜ್ಞಾನ ಯೋಗ, ಭಕ್ತಿಯೋಗ, ಕರ್ಮಯೋಗಗಳಿಂದ ಕೂಡಿದ ದಿವ್ಯವಾದ ತನ್ನ ರಹಸ್ಯವನ್ನು ಹೊರಪಡಿಸುವ ಮತ್ಸ್ಯಪುರಾಣಸಂಹಿತೆಯನ್ನು ಆಮೂಲಾಗ್ರವಾಗಿ ಹೇಳಿದನು. ಆ ಸತ್ಯವ್ರತನು ಋಷಿಗಳೊಡನೆ ನಾವೆಯಲ್ಲಿ ಕುಳಿತುಕೊಂಡು, ಭಗವಂತನಿಂದ ಹೇಳಲ್ಪಟ್ಟ ಶಾಶ್ವತವಾದ, ಬ್ರಹ್ಮಸ್ವರೂಪವನ್ನು ತಿಳಿಸುವ ಆತ್ಮತತ್ತ್ವವನ್ನು ಸ್ವಲ್ಪವೂ ಸಂದೇಹಕ್ಕೆ ಎಡೆಯಿಲ್ಲದಂತೆ ಕೇಳಿದನು. ಮತ್ಸ್ಯಮೂರ್ತಿಯಾದ ಶ್ರೀಹರಿಯು ವೇದಗಳನ್ನು ಅಪಹರಿಸಿದ್ದ ಹಯಗ್ರೀವನೆಂಬ ರಾಕ್ಷಸನನ್ನು ಕೊಂದು, ಕಳೆದುಹೋದ ಪ್ರಲಯದ ಕಡೆಯಲ್ಲಿ ಎಚ್ಚರಗೊಂಡ ಚತುರ್ಮುಖನಿಗೆ ಆ ವೇದಗಳನ್ನು ಹಿಂದಿರುಗಿಸಿಕೊಟ್ಟನು. ಸತ್ಯವ್ರತರಾಜನಾದರೋ ಮಹಾ ವಿಷ್ಣುವಿನ ಪ್ರಸಾದದಿಂದ ಶಾಸ್ತ್ರಜ್ಞಾನದಿಂದಲೂ ಅಪರೋಕ್ಷಜ್ಞಾನದಿಂದಲೂ ಸಂಪನ್ನನಾಗಿ, ಈ ಮನ್ವಂತರದಲ್ಲಿ ವೈವಸ್ವತಮನುವಾಗಿ ಭಗವಂತನಿಂದ ನಿಯಮಿಸಲ್ಪಟ್ಟನು. (ಶ್ಲೋಕ 54-58)

ಸತ್ಯವ್ರತಸ್ಯ ರಾಜರ್ಷೇರ್ಮಾಯಾಮತ್ಸ್ಯಸ್ಯ ಶಾರ್ಙ್ಗಿಣಃ ।
ಸಂವಾದಂ ಮಹದಾಖ್ಯಾನಂ ಶ್ರುತ್ವಾ ಮುಚ್ಯೇತ ಕಿಲ್ಬಿಷಾತ್ ॥೫೯॥

ರಾಜರ್ಷಿಯಾದ ಸತ್ಯವ್ರತನಿಗೂ ಮಾಯಾಮತ್ಸ್ಯಸ್ವರೂಪವನ್ನು ಹೊಂದಿದ್ದ ಮಹಾವಿಷ್ಣುವಿಗೂ ನಡೆದ ಸಂವಾದರೂಪವಾದ ಈ ಆಖ್ಯಾನ ವನ್ನು ಯಾವನು ಕೇಳುವನೋ ಅವನು ಸಮಸ್ತಪಾಪಗಳಿಂದಲೂ ವಿಮುಕ್ತನಾಗುವನು.

ಅವತಾರೋ ಹರೇರ್ಯೋಽಯಂ ಕೀರ್ತಯೇದನ್ವಹಂ ನರಃ ।
ಸಙ್ಕಲ್ಪಾಸ್ತಸ್ಯ ಸಿಧ್ಯನ್ತಿ ಸ ಯಾತಿ ಪರಮಾಂ ಗತಿಮ್ ॥೬೦॥

ಯಾವ ಮನುಷ್ಯನು ಪ್ರತಿನಿತ್ಯವೂ ಶ್ರೀಹರಿಯ ಈ ಅವತಾರಕಥೆಯನ್ನು ಸಂಕೀರ್ತನಮಾಡುವನೋ ಅವನ ಸಂಕಲ್ಪಗಳೆಲ್ಲವೂ ಸಿದ್ಧಿಸುತ್ತವೆ. ಅವನು ಅವಸಾನಾನಂತರದಲ್ಲಿ ಉತ್ತಮವಾದ ಗತಿಯನ್ನು ಹೊಂದುತ್ತಾನೆ.

ಪ್ರಲಯಪಯಸಿ ಧಾತುಃ ಸುಪ್ತಶಕ್ತೇರ್ಮುಖೇಭ್ಯಃ
ಶ್ರುತಿಗಣಮಪನೀತಂ ಪ್ರತ್ಯುಪಾದತ್ತ ಹತ್ವಾ ।
ದಿತಿಜಮಕಥಯದ್ಯೋ ಬ್ರಹ್ಮ ಸತ್ಯವ್ರತಾನಾಂ
ತಮಹಮಖಿಲಹೇತುಂ ಜಿಹ್ಮಮೀನಂ ನತೋಽಸ್ಮಿ ॥೬೧॥

ಪ್ರಲಯಕಾಲದ ಸಮುದ್ರದಲ್ಲಿ ಬ್ರಹ್ಮನು ಮಲಗಿದ್ದಾಗ ಅವನ ಸೃಷ್ಟಿಮಾಡುವ ಶಕ್ತಿಯು ಲುಪ್ತವಾಗಿ ಹೋಗಿದ್ದಿತು. ಆ ಸಮಯದಲ್ಲಿ ಅವನ ಮುಖದಿಂದ ಚ್ಯುತವಾದ ವೇದಗಳನ್ನು ಹಯಗ್ರೀವನೆಂಬ ರಾಕ್ಷಸನು ಅಪಹರಿಸಿ ಪಾತಾಲಕ್ಕೊಯ್ದನು. ಪ್ರಲಯಕಾಲದ ಅಂತ್ಯದಲ್ಲಿ ಭಗವಂತನು ಆ ರಾಕ್ಷಸನನ್ನು ಸಂಹರಿಸಿ ವೇದಗಳನ್ನು ಬ್ರಹ್ಮನಿಗೆ ಹಿಂದಿರುಗಿಸಿ ಕೊಟ್ಟನು. ಅದೇ ಭಗವಂತನು ಸತ್ಯವ್ರತನಿಗೂ ಮತ್ತು ನೌಕೆಯಲ್ಲಿ ಅವನ ಜೊತೆಯಲ್ಲಿದ್ದ ಸಪ್ತರ್ಷಿಗಳಿಗೂ ಬ್ರಹ್ಮತತ್ತ್ವವನ್ನು ಉಪದೇಶಿಸಿದನು. ಸಮಸ್ತಜಗತ್ತಿಗೂ ಮೂಲಕಾರಣನಾದ ಅಂತಹ ಮಾಯಾಮತ್ಸ್ಯಮೂರ್ತಿಯನ್ನು ನಾನು ನಮಸ್ಕರಿಸುತ್ತೇನೆ.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಅಷ್ಟಮಸ್ಕಂಧದ ೨೪ನೆಯ ಅಧ್ಯಾಯವು ಮುಗಿಯಿತು.

ಅಷ್ಟಮಸ್ಕಂಧವು ಮುಗಿಯಿತು.

ಶ್ರೀಮಹಾಗಣಪತಯೇ ನಮಃ   ಶ್ರೀಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ



ಶ್ರೀಮದ್ಭಾಗವತ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ನವಮಸ್ಕಂಧ   ೧ನೆಯ ಅಧ್ಯಾಯ

ವೈವಸ್ವತಮನುವಿನ ಮಗನಾದ ಸುದ್ಯುಮ್ನರಾಜನ ಕಥೆ

ವಿಷ್ಣುರಾತನು ಹೇಳುತ್ತಾನೆ :

ಮನ್ವನ್ತರಾಣಿ ಸರ್ವಾಣಿ ತ್ವಯೋಕ್ತಾನಿ ಶ್ರುತಾನಿ ಮೇ ।
ವೀರ್ಯಾಣ್ಯನನ್ತವೀರ್ಯಸ್ಯ ಹರೇಸ್ತತ್ರ ಕೃತಾನಿ ಚ ॥೧॥

"ಪೂಜ್ಯರೇ! ತಾವು ಇದುವರೆಗೆ ಹೇಳಿದ ಎಲ್ಲ ಮನ್ವಂತರಗಳ ಮತ್ತು ಆ ಮನ್ವಂತರಗಳಲ್ಲಿ ನಡೆದ ಅನಂತವೀರ್ಯನಾದ, ಅಪ್ರಮೇಯನಾದ ಶ್ರೀಹರಿಯ ವೀರ್ಯವತ್ತಾದ ಪರಮಾದ್ಭುತವಾದ ಕಾರ್ಯಗಳೆಲ್ಲವನ್ನೂ ನಾನು ಕೇಳಿ ಧನ್ಯನಾಗಿರುವೆನು.

ಹಿಂದಿನ ಕಲ್ಪದ ಕಡೆಯಭಾಗದಲ್ಲಿ ದ್ರಾವಿಡದೇಶದರಸನಾದ ರಾಜರ್ಷಿಯಾದ ಸತ್ಯವ್ರತನು ಅನನ್ಯಭಕ್ತಿಯಿಂದ ಭಗವಂತನ ಸೇವೆಯನ್ನು ಮಾಡಿ ಅಪಾರವಾದ ಜ್ಞಾನವನ್ನು ಪಡೆದುಕೊಂಡನೆಂಬುದನ್ನು ಹೇಳಿದಿರಿ. ಪುನಃ ಸತ್ಯವ್ರತನೇ ಈ ಕಲ್ಪದಲ್ಲಿ ವೈವಸ್ವತನ ಮಗನಾದ ಮನುವಾಗಿ ಹುಟ್ಟಿದನೆಂದು ಹೇಳಿದಿರಿ. ಅವನ ಮಕ್ಕಳಾದ ಇಕ್ಷ್ವಾಕುವೇ ಮೊದಲಾದ ರಾಜರ ಪರಿಚಯವನ್ನೂ ಮಾಡಿಕೊಟ್ಟಿರುವಿರಿ. ಈಗ ತಾವು ಅವರ ಪ್ರತ್ಯೇಕವಾದ ವಂಶಗಳನ್ನೂ ಮತ್ತು ಒಂದೊಂದು ವಂಶದಲ್ಲಿಯೂ ಹುಟ್ಟಿದ ಮಹಾನುಭಾವರ ಸಚ್ಚರಿತ್ರೆಗಳನ್ನೂ ದಯಮಾಡಿ ಹೇಳಿರಿ. ನನ್ನ

ಮನಸ್ಸು ಇಂತಹ ಪುಣ್ಯಪುರುಷರ ಸತ್ಕಥೆಗಳನ್ನು ಕೇಳಲು ಅತ್ಯಂತ ಉತ್ಸುಕವಾಗಿದೆ. ವೈವಸ್ವತಮನುವಿನ ವಂಶದಲ್ಲಿ ಇದುವರೆಗೆ ಎಷ್ಟು ಮಂದಿ ರಾಜರು ಆಗಿ ಹೋದರು? ಈಗ ಯಾವ ರಾಜರು ರಾಜ್ಯಗಳನ್ನಾಳುತ್ತಿದ್ದಾರೆ? ಮುಂದೆ ಆ ಪವಿತ್ರವಂಶದಲ್ಲಿ ಎಂತಹ ಮಹಾಪುರುಷರು ಹುಟ್ಟುವವರಿದ್ದಾರೆ? ಈ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ಹೇಳುವ ಕೃಪೆ ಮಾಡಿರಿ."

ಸೂತಪುರಾಣಿಕರು ಶೌನಕಾದಿ ಮಹರ್ಷಿಗಳಿಗೆ ಹೇಳುತ್ತಾರೆ :

ಋಷಿಪುಂಗವರೇ! ಬ್ರಹ್ಮಿಷ್ಠರಿಂದ ತುಂಬಿ ಹೋಗಿದ್ದ ಆ ಸದಸ್ಸಿನಲ್ಲಿ ಪರೀಕ್ಷಿದ್ರಾಜನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಮಹಾಧರ್ಮಿಷ್ಠರಾದ ಶ್ರೀಶುಕರು ಉತ್ತರಿಸಿದರು : (ಶ್ಲೋಕ 2-6)

ಶ್ರೂಯತಾಂ ಮಾನವೋ ವಂಶಃ ಪ್ರಾಚುರ್ಯೇಣ ಪರಂತಪ ।
ನ ಶಕ್ಯತೇ ವಿಸ್ತರತೋ ವಕ್ತುಂ ವರ್ಷಶತೈರಪಿ ॥೭॥

"ಮಹಾರಾಜ! ಮನುವಂಶದವರ ಚರಿತ್ರೆಯನ್ನು ಸಮೃದ್ಧವಾಗಿ ಕೇಳು. ಆದರೆ ಆ ವಂಶದವರ ಚರಿತ್ರೆಯನ್ನು ವಿಸ್ತಾರವಾಗಿ ಹೇಳಲು ನೂರು ವರ್ಷಗಳೂ ಸಾಕಾಗುವುದಿಲ್ಲ.

ಪ್ರಪಂಚದಲ್ಲಿರುವ ಸೂಕ್ಷ್ಮಾತಿಸೂಕ್ಷ್ಮವಾದ ಪ್ರಾಣಿಗಳಿಗೂ ಮತ್ತು ಮಹಾ-ಮಹಾಪ್ರಾಣಿಗಳಿಗೂ ಯಾವನು ಆತ್ಮಸ್ವರೂಪವಾಗಿರುವನೋ ಅಂತಹ ಪುರುಷನೊಬ್ಬನು ಮಾತ್ರವೇ ಪ್ರಲಯಕಾಲದಲ್ಲಿದ್ದನು. ಕಲ್ಪಾಂತರದಲ್ಲಿ ಬೇರೆ ಯಾವುದೇ ಪ್ರಾಣಿಯೂ ಆ ಸಮಯದಲ್ಲಿರಲಿಲ್ಲ.

ಅಂತಹ ಪರಮಪುರುಷನ ಹೊಕ್ಕಳಿನಿಂದ ಸುವರ್ಣಕಮಲವೊಂದು ಹುಟ್ಟಿಕೊಂಡಿತು. ಆ ನಾಭಿಕಮಲದಿಂದಲೇ ಚತುರ್ಮುಖಬ್ರಹ್ಮನು ಪ್ರಾದುರ್ಭವಿಸಿದನು. ಬ್ರಹ್ಮನ ಮಾನಸಪುತ್ರನಾಗಿ ಮರೀಚಿಯು ಹುಟ್ಟಿದನು. ಮರೀಚಿಯ ಮಗನೇ ಕಶ್ಯಪಬ್ರಹ್ಮನು. ಕಶ್ಯಪನ ಧರ್ಮಪತ್ನಿಯಾದ ದಕ್ಷನ ಮಗಳಾದ ಅದಿತಿಯಲ್ಲಿ ವಿವಸ್ವತನು (ಸೂರ್ಯನು) ಜನ್ಮತಾಳಿದನು. ಸೂರ್ಯನಿಗೆ ಸಂಜ್ಞಾ–ಎಂಬ ಹೆಸರಿನ ಪತ್ನಿಯಲ್ಲಿ ಶ್ರಾದ್ಧದೇವ

ಮನುವು ಹುಟ್ಟಿದನು. ಆತ್ಮಜ್ಞಾನಿಯಾದ ಶ್ರಾದ್ಧದೇವನು ತನ್ನ ಪತ್ನಿಯಾದ ಶ್ರದ್ಧೆಯ ಗರ್ಭದಲ್ಲಿ ಹತ್ತು ಮಕ್ಕಳನ್ನು ಪಡೆದುಕೊಂಡನು. ಇಕ್ಷ್ವಾಕು, ನೃಗ, ಶರ್ಯಾತಿ, ದಿಷ್ಟ, ಧೃಷ್ಟ, ಕರೂಷ, ನರಿಷ್ಯಂತ, ಪೃಷಧ್ರ, ನಭಗ ಮತ್ತು ಕವಿ ಇವರೇ ಆ ಹತ್ತು ಮಕ್ಕಳು. ವೈವಸ್ವತಮನುವಿಗೆ ಮಕ್ಕಳಿರಲಿಲ್ಲ. ಆ ಸಮಯದಲ್ಲಿ ಸರ್ವಸಮರ್ಥರಾದ, ಪೂಜ್ಯರಾದ ವಸಿಷ್ಠರು ಸಂತಾನ ಪ್ರಾಪ್ತಿಗಾಗಿ ವೈವಸ್ವತಮನುವಿನಿಂದ ಮೈತ್ರಾವರುಣೇಷ್ಟಿಯನ್ನು ಮಾಡಿಸಿದರು. ಯಜ್ಞಾನುಷ್ಠಾನಸಮಯದಲ್ಲಿ ಪಯೋವ್ರತಳಾಗಿದ್ದ (ಕೇವಲ ಹಾಲನ್ನು ಮಾತ್ರವೇ ಕುಡಿಯುತ್ತಿದ್ದ) ವೈವಸ್ವತಮನುವಿನ ಧರ್ಮಪತ್ನಿಯಾದ ಶ್ರದ್ಧಾದೇವಿಯು ಹೋತೃವಿನ ಬಳಿಗೆ ಹೋಗಿ ವಿನಯಪೂರ್ವಕವಾಗಿ ನಮಸ್ಕರಿಸಿ ತನಗೆ ಹೆಣ್ಣು ಶಿಶುವು ಹುಟ್ಟುವಂತೆ ಅನುಗ್ರಹಿಸಬೇಕೆಂದು ಕೇಳಿಕೊಂಡಳು. ಅಧ್ವರ್ಯುವಿನ ಪ್ರೇರಣೆಯಂತೆ ಯಜ್ಞಕುಂಡದಲ್ಲಿ ಆಹುತಿಯನ್ನು ಹಾಕಬೇಕಾದ ಸಮಯವು ಸನ್ನಿಹಿತವಾದಾಗ ಹೋತೃವು ಶ್ರದ್ಧಾದೇವಿಯ ಪ್ರಾರ್ಥನೆಯನ್ನು ಸ್ಮರಿಸಿಕೊಂಡು ಹೆಣ್ಣು ಶಿಶುವಾಗಬೇಕೆಂಬ ಸಂಕಲ್ಪಮಾಡಿ ವಷಟ್ಕಾರವನ್ನು ಹೇಳುತ್ತಾ ಯಜ್ಞೇಶ್ವರನಲ್ಲಿ ಹವಿಸ್ಸನ್ನು ಹೋಮಮಾಡಿದನು. ಹೋತೃವಿನ ಈ ಕರ್ಮವೈಪರೀತ್ಯದಿಂದಾಗಿ ಪುತ್ರಕಾಮನಾಗಿದ್ದ ವೈವಸ್ವತಮನುವಿಗೆ 'ಇಲಾ'–ಎಂಬ ಹೆಸರಿನ ಪುತ್ರಿಯು ಹುಟ್ಟಿದಳು. ಇದರಿಂದ ವೈವಸ್ವತಮನುವಿಗೆ ಅಷ್ಟು ಸಂತೋಷವಾಗಲಿಲ್ಲ. ಅಸಂತುಷ್ಟನಾದ ಮನುವು ಗುರುಗಳಿಗೆ ಹೇಳಿದನು :

(ಶ್ಲೋಕ 8-16)

ಭಗವನ್ಕಿಮಿದಂ ಜಾತಂ ಕರ್ಮ ವೋ ಬ್ರಹ್ಮವಾದಿನಾಮ್ ।
ವಿಪರ್ಯಯಮಹೋ ಕಷ್ಟಂ ಮೈವಂ ಸ್ಯಾದ್ಬ್ರಹ್ಮವಿಕ್ರಿಯಾ ॥

"ಪೂಜ್ಯರೇ! ನೀವು ಬ್ರಹ್ಮವಾದಿಗಳಾಗಿರುವಿರಿ. ನಿಮ್ಮಂತಹವರು ಮಾಡಿಸಿರುವ ಈ ಕರ್ಮಕ್ಕೆ ವಿಪರೀತವಾದ ಫಲವು ಸಿಕ್ಕಿಬಿಟ್ಟಿತಲ್ಲವೇ! ಅದು ಹೇಗಾಯಿತು? ಕಷ್ಟ ; ಕಷ್ಟ. ನಿಮ್ಮಂತಹ ಬ್ರಹ್ಮವಾದಿಗಳೇ ಮಾಡಿಸಿರುವ ಈ ವೈದಿಕಕರ್ಮಕ್ಕೆ ಇಂತಹ ವಿಪರೀತವಾದ ಫಲವು ಸಿಕ್ಕಬಾರದಾಗಿತ್ತು.

ಯೂಯಂ ಮನ್ತ್ರವಿದೋ ಯುಕ್ತಾಸ್ತಪಸಾ ದಗ್ಧಕಿಲ್ಬಿಷಾಃ ।
ಕುತಃ ಸಂಕಲ್ಪವೈಷಮ್ಯಮನೃತಂ ವಿಬುಧೇಷ್ವಿವ ॥೧೮॥

ನೀವಾದರೋ ಮಂತ್ರಜ್ಞಾನದಿಂದ ಪೂರ್ಣರಾಗಿರುವಿರಿ. ಯಾವ ಮಂತ್ರದ ಪುನಶ್ಚರಣೆಯಿಂದ ಮತ್ತು ಯಾವ ಮಂತ್ರದ ಮೂಲಕವಾಗಿ ಯಜ್ಞೇಶ್ವರನಲ್ಲಿ ಆಹುತಿಯನ್ನು ಸಮರ್ಪಿಸುವುದರಿಂದ ಯಾವ ಫಲವು ಸಿಕ್ಕುವುದೆಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ಮೇಲಾಗಿ ನೀವು ಜಿತೇಂದ್ರಿಯರಾಗಿರುವಿರಿ. ನೀವು ಕಠೋರವಾದ ತಪಸ್ಸುಗಳನ್ನು ಮಾಡಿ ನಿಮ್ಮ ಪಾಪಗಳೆಲ್ಲವನ್ನೂ ಸಂಪೂರ್ಣವಾಗಿ ತೊಳೆದುಕೊಂಡಿರುವಿರಿ. ದೇವತೆಗಳಲ್ಲಿ ಸುಳ್ಳಿರುವಂತೆ (ದೇವತೆಗಳು ಕೊಟ್ಟ ವರವು ಸುಳ್ಳಾದಂತೆ) ಮಹಾವಿದ್ವಾಂಸರಾದ ನೀವು ಮಾಡಿದ ಕರ್ಮದಲ್ಲಿಯೂ ಸಂಕಲ್ಪಕ್ಕೆ ವಿರುದ್ಧವಾದ ಫಲವು ಹೇಗೆ ಉಂಟಾಯಿತು?"

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತ! ಸೂರ್ಯಪುತ್ರನಾದ ಮನುವು ಹೀಗೆ ಹೇಳಿದುದನ್ನು ಕೇಳಿ ನನ್ನ ಮುತ್ತಾತಂದಿರಾದ, ಪೂಜ್ಯರಾದ ವಸಿಷ್ಠರು ಅಂತರ್ಮುಖರಾಗಿ ಹೋತೃವು ಶ್ರದ್ಧಾದೇವಿಯ ಪ್ರೇರಣೆಯಂತೆ ಯಜ್ಞೇಶ್ವರನಿಗೆ ಆಹುತಿ ಯನ್ನು ಅರ್ಪಿಸುವ ಕಾಲದಲ್ಲಿ ಮಾಡಿದ ವ್ಯತಿಕ್ರಮವನ್ನು ತಿಳಿದು ರವಿಕುಮಾರನಿಗೆ ಹೇಳಿದರು :

"ವೈವಸ್ವತ! ಮಾಡಿಸಿದ ಸಂಕಲ್ಪದಲ್ಲಿ ಹೆಚ್ಚು-ಕಡಿಮೆ ಆದದ್ದು ಅಥವಾ ವಿಪರೀತವಾದದ್ದು ನಿನ್ನ ಹೋತೃವು ತಪ್ಪುಮಾರ್ಗದಲ್ಲಿ ನಡೆದ ಕಾರಣದಿಂದ. ಆದರೂ ಚಿಂತಿಸಬೇಡ. ನನ್ನ ಪ್ರಭಾವದಿಂದಲೇ ನಿನ್ನನ್ನು ಸುಪುತ್ರವಂತನನ್ನಾಗಿ ಮಾಡುತ್ತೇನೆ."

ಪರೀಕ್ಷಿತನೇ! ಮಹಾಯಶೋವಂತರಾದ ಪರಮಪೂಜ್ಯರಾದ ವಸಿಷ್ಠರು ರವಿಕುಮಾರನಿಗೆ ಹೀಗೆ ಆಶ್ವಾಸನೆಯನ್ನಿತ್ತು, ಇಲೆಯನ್ನು ಪುರುಷನನ್ನಾಗಿ ಪರಿವರ್ತಿಸಬೇಕೆಂದು ನಿಶ್ಚಯಿಸಿ, ಅದೇ ಕಾಮನೆಯಿಂದ ಆದಿಪುರುಷನಾದ, ಪುರುಷೋತ್ತಮನಾದ ನಾರಾಯಣನನ್ನು ಸ್ತೋತ್ರ

ಮಾಡಿದರು. ವಸಿಷ್ಠರು ಮಾಡಿದ ಸ್ತೋತ್ರದಿಂದ ಪ್ರಸನ್ನನಾದ ಸರ್ವೇಶ್ವರನಾದ, ಭಗವಂತನಾದ ಶ್ರೀಹರಿಯು ಸಂತುಷ್ಟನಾಗಿ ಮಹರ್ಷಿಗಳು ಅಪೇಕ್ಷಿಸಿದ್ದ ವರವನ್ನು ದಯಪಾಲಿಸಿದನು. ಇದರ ಪರಿಣಾಮವಾಗಿ ರವಿಕುಮಾರನ ಮಗಳಾದ ಇಲೆಯು ಪುರುಷತ್ವವನ್ನು ಪಡೆದು ಸುದ್ಯುಮ್ನನೆಂಬ ಹೆಸರಿನಿಂದ ಪ್ರಸಿದ್ಧಳಾದಳು. (ಶ್ಲೋಕ 19-22)

ಮಹಾರಾಜ! ಪುರುಷಶ್ರೇಷ್ಠನಾದ ಸುದ್ಯುಮ್ನನು ಬೇಟೆಯಾಡುವ ಸಲುವಾಗಿ ಸಿಂಧೂದೇಶದ ಕುದುರೆಯ ಮೇಲೆ ಕುಳಿತು ತನ್ನ ಕೆಲವು ಮಂತ್ರಿಗಳೊಡನೆ ಅರಣ್ಯಕ್ಕೆ ಹೊರಟನು. ಸುಂದರವಾದ ಧನುಸ್ಸನ್ನೂ ಪರಮಾದ್ಭುತವಾದ ಬಾಣಗಳನ್ನೂ ಹಿಡಿದು ಕವಚವನ್ನು ಧರಿಸಿದ್ದ ವೀರನಾದ ಸುದ್ಯುಮ್ನನು ಜಿಂಕೆಯೊಂದನ್ನು ಹಿಂಬಾಲಿಸುತ್ತಾ ಉತ್ತರದಿಕ್ಕಿನ ಕಡೆಗೆ ಬಹಳ ದೂರದವರೆಗೆ ಧಾವಿಸಿದನು. ಹೀಗೆಯೇ ಜಿಂಕೆಯನ್ನು ಹಿಂಬಾಲಿಸುತ್ತಾ ಮುನ್ನಡೆಯುತ್ತಿದ್ದ ಸುದ್ಯುಮ್ನನು ಕಟ್ಟಕಡೆಗೆ ಮೇರುಪರ್ವತದ ಕೆಳಭಾಗದಲ್ಲಿದ್ದ ಸುಂದರವಾದ ವನವನ್ನು ಸೇರಿದನು. ಅದೇ ವನದಲ್ಲಿಯೇ ಭಗವಾನ್ ಶಂಕರನು ಉಮಾದೇವಿಯೊಡನೆ ಕ್ರೀಡೆಯಾಡುತ್ತಿದ್ದನು. ಆ ವನವನ್ನು ಪ್ರವೇಶಿಸಿದೊಡನೆಯೇ ಶತ್ರುಹಂತಕ ನಾದ ಸುದ್ಯುಮ್ನನು ತನಗೆ ಸ್ತ್ರೀತ್ವವು ಉಂಟಾಗಿಬಿಟ್ಟಿದೆಯೆಂಬುದನ್ನು ಅರಿತುಕೊಂಡನು. ಅವನು ಕುಳಿತಿದ್ದ ಗಂಡುಕುದುರೆಯೂ ಹೆಣ್ಣುಕುದುರೆ ಯಾಗಿ ಪರಿವರ್ತನೆ ಹೊಂದಿತು. ಕೇವಲ ರಾಜಕುಮಾರ ಮತ್ತು ಅವನ ಕುದುರೆಯು ಮಾತ್ರವಲ್ಲ. ರಾಜಕುಮಾರನನ್ನು ಅನುಸರಿಸಿ ಹೋಗಿದ್ದವ ರೆಲ್ಲರೂ ಹೆಂಗಸರಾಗಿಬಿಟ್ಟರು. ತಮ್ಮೆಲ್ಲಾದ ಈ ಪರಿವರ್ತನೆಯನ್ನು ಅರಿತು ಪರಸ್ಪರವಾಗಿ ಒಬ್ಬರು ಮತ್ತೊಬ್ಬರ ಮುಖವನ್ನು ನೋಡಿದರು. ಎಲ್ಲರ ಮುಖಗಳೂ ಪೆಚ್ಚಾಗಿದ್ದುವು."

(ಶ್ಲೋಕ 23-27)

ಪರೀಕ್ಷಿತನು ಪ್ರಶ್ನಿಸುತ್ತಾನೆ :

ಕಥಮೇವಂಗುಣೋ ದೇಶಃ ಕೇನ ವಾ ಭಗವನ್ಕೃತಃ ।
ಪ್ರಶ್ನಮೇನಂ ಸಮಾಚಕ್ಷ್ವ ಪರಂ ಕೌತೂಹಲಂ ಹಿ ನಃ ॥೨೮॥

"ಪೂಜ್ಯರೇ! ಈ ಭೂಮಂಡಲದಲ್ಲಿ ಇಂತಹ ವಿಚಿತ್ರವಾದ ಗುಣವು

ಆ ಪ್ರದೇಶಕ್ಕೆ ಮಾತ್ರ ಹೇಗೆ ಬಂದಿತು? ಯಾರ ಪ್ರಭಾವದಿಂದ ಆ ಪ್ರದೇಶವು ಹೀಗೆ ಮಾಡಲ್ಪಟ್ಟಿತು? ದಯಮಾಡಿ ತಾವು ನನ್ನ ಈ ಪ್ರಶ್ನೆಗಳಿಗೆ ಉತ್ತರಿಸಿರಿ."

ಶ್ರೀಶುಕರು ಹೇಳುತ್ತಾರೆ :

"ಮಹಾರಾಜ! ಒಮ್ಮೆ ವ್ರತನಿಷ್ಠರಾದ ಮಹರ್ಷಿಗಳು ತಮ್ಮ ದಿವ್ಯ ವಾದ ತೇಜಸ್ಸಿನಿಂದ ಎಲ್ಲ ದಿಕ್ಕುಗಳನ್ನೂ ಪ್ರಕಾಶಗೊಳಿಸುತ್ತಾ ಭಗವಾನ್ ಶಂಕರನನ್ನು ಸಂದರ್ಶಿಸುವ ಸಲುವಾಗಿ ಆ ವನಪ್ರದೇಶಕ್ಕೆ ಆಗಮಿಸಿದರು. ಆ ಸಮಯದಲ್ಲಿ ಶಂಕರನೊಡನೆ ಕ್ರೀಡೆಯಾಡುತ್ತಾ ವಿವಸ್ತ್ರಳಾಗಿದ್ದ ಪಾರ್ವತೀದೇವಿಯು, ಋಷಿಗಳು ಬಂದುದನ್ನು ನೋಡಿ ಬಹಳವಾಗಿ ನಾಚಿಕೊಂಡಳು. ಒಡನೆಯೇ ಅವಳು ಶ್ರೀಶಂಕರನ ತೊಡೆಯ ಮೇಲಿಂದ ಎದ್ದು ಸೀರೆಯನ್ನುಟ್ಟುಕೊಂಡಳು. ಮಹರ್ಷಿಗಳು ಕೂಡ ಶ್ರೀಶಂಕರನು ಉಮಾದೇವಿಯೊಡನೆ ವಿಹರಿಸುತ್ತಿರುವುದನ್ನು ಕಂಡು ಒಡನೆಯೇ ಅಲ್ಲಿಂದ ಹಿಂದಿರುಗಿ ನರ-ನಾರಾಯಣಾಶ್ರಮವನ್ನು ಸೇರಿದರು. (ಶ್ಲೋಕ 29-31)

ಆ ಸಮಯದಲ್ಲಿ ಭಗವಂತನಾದ ಶ್ರೀಶಂಕರನು ಪಾರ್ವತಿಯನ್ನು ಪ್ರಸನ್ನಗೊಳಿಸುವ ಸಲುವಾಗಿ ಈ ಮಾತನ್ನು ಹೇಳಿದನು :

ಸ್ಥಾನಂ ಯಃ ಪ್ರವಿಶೇದೇತತ್ಸ ವೈ ಯೋಷಿದ್ಭವೇದಿತಿ ॥೩೨॥

"ಈ ಪ್ರದೇಶವನ್ನು ಯಾವನು ಪ್ರವೇಶಿಸುವನೋ ಅವನು ಒಡನೆಯೇ ಹೆಣ್ಣಾಗಲಿ."

ಅಂದು ಮೊದಲ್ಗೊಂಡು ಯಾವ ಪುರುಷರೂ ಆ ಪ್ರದೇಶಕ್ಕೆ ಹೋಗುತ್ತಿರಲಿಲ್ಲ. ಆ ಪ್ರದೇಶಕ್ಕೆ ಬಂದು ಈಶ್ವರನ ಆಗ್ರಹದಂತೆ ಪುನಃ ಹೆಣ್ಣಾಗಿ ಪರಿವರ್ತಿತಳಾದ ಇಲಾದೇವಿಯು ತನ್ನ ಸಖಿಯರೊಡನೆ ಅರಣ್ಯದಿಂದ ಅರಣ್ಯಕ್ಕೆ ಸಂಚರಿಸುತ್ತಿದ್ದಳು. ತನ್ನ ಆಶ್ರಮದ ಸಮೀಪ ದಲ್ಲಿಯೇ ಸಂಚರಿಸುತ್ತಿದ್ದ, ಹಲವಾರು ಸ್ತ್ರೀಯರಿಂದ ಪರಿವೃತಳಾಗಿದ್ದ ಸ್ತ್ರೀರತ್ನವನ್ನು ಸುರಶ್ರೇಷ್ಠನಾದ ಬುಧನು ನೋಡಿದನು ಮತ್ತು ಅವಳ ಸೌಂದರ್ಯದಿಂದ ಆಕರ್ಷಿತನಾದ ಅವನು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದೂ ಬಯಸಿದನು. ಇದಕ್ಕೆ ಅನುಕೂಲವಾಗಿ ಸುಂದರಾಂಗಿಯಾದ, ಸುಂದರವಾದ ಹುಬ್ಬುಗಳನ್ನು ಹೊಂದಿದ್ದ ಇಲಾ

ದೇವಿಯೂ ಚಂದ್ರನ ಮಗನಾದ ಬುಧನನ್ನು ಪತಿಯನ್ನಾಗಿ ವರಿಸಲು ಬಯಸಿದಳು. ಇಬ್ಬರ ಮನಸ್ಸೂ ಒಂದಾಗಿ ಗಾಂಧರ್ವರೀತಿಯಿಂದ ವಿವಾಹ ವಾಯಿತು. ಸಮಾನಮನಸ್ಕರಾಗಿದ್ದ ಇಲಾ-ಬುಧರ ಸಮಾಗಮದ ಫಲವಾಗಿ ಬುಧನಿಗೆ ಇಲಾದೇವಿಯ ಗರ್ಭದಲ್ಲಿ ಪುರೂರವಸನೆಂಬ ಪುತ್ರನು ಹುಟ್ಟಿದನು.

ಪರೀಕ್ಷಿತ! ಹೀಗೆ ಮನುವಿನ ಮಗನಾದ ಸುದ್ಯುಮ್ನನು ಸ್ತ್ರೀಯಾಗಿ ಪರಿವರ್ತನೆಹೊಂದಿದನು. ಸುದ್ಯುಮ್ನನು ಸ್ತ್ರೀಯೇ ಆಗಿ ಆತನ ಸ್ವಭಾವ-ಗುಣಗಳು ಹೆಂಗಸರದೇ ಆಗಿದ್ದರೂ ತಾನು ರಾಜಕುಮಾರನಾಗಿದ್ದ ನೆಂಬುದು ಅವನ ಸ್ಮೃತಿಪಥದಿಂದ ಅಳಿಸಿಹೋಗಿರಲಿಲ್ಲ. ಹೀಗೆಯೇ ಇರುತ್ತಿರಲಾಗಿ ಸುದ್ಯುಮ್ನನೊಮ್ಮೆ ತನ್ನ ಕುಲಕ್ಕೆ ಆಚಾರ್ಯರಾದ ವಸಿಷ್ಠರನ್ನು ಸ್ಮರಿಸಿಕೊಂಡನು. ರಾಜಕುಮಾರನ ಆ ಅವಸ್ಥೆಯನ್ನು ಕಂಡು ಕೃಪಾವಿಷ್ಟರಾಗಿದ್ದ ಕುಲಾಚಾರ್ಯರಿಗೆ ಬಹಳ ಸಂಕಟವಾಯಿತು. ರಾಜಕುಮಾರನಾದ ಸುದ್ಯುಮ್ನನಿಗೆ ಪುನಃ ಪುರುಷತ್ವವು ಪ್ರಾಪ್ತವಾಗ ಬೇಕೆಂಬ ಆಶಯದಿಂದ ವಸಿಷ್ಠರು ಶಂಕರನನ್ನು ಆರಾಧಿಸಿದರು. ವಸಿಷ್ಠರ ಪೂಜೆಯಿಂದ ಸಂತುಷ್ಟನಾದ ಶ್ರೀಶಂಕರನು ವಸಿಷ್ಠಮಹರ್ಷಿಗಳಿಗೆ ಪ್ರಿಯವನ್ನುಂಟುಮಾಡುತ್ತಾ ತನ್ನ ಮಾತೂ ಸುಳ್ಳಾಗದ ರೀತಿಯಲ್ಲಿ ಮಹರ್ಷಿಗಳನ್ನು ಕುರಿತು ಈ ಮಾತನ್ನು ಹೇಳಿದನು : (ಶ್ಲೋಕ 33-38)

ಮಾಸಂ ಪುಮಾನ್ಸ ಭವಿತಾ ಮಾಸಂ ಸ್ತ್ರೀ ತವ ಗೋತ್ರಜಃ ।
ಇತ್ಥಂ ವ್ಯವಸ್ಥಯಾ ಕಾಮಂ ಸುದ್ಯುಮ್ನೋಽವತು ಮೇದಿನೀಮ್ ॥

"ವಸಿಷ್ಠ! ಸುದ್ಯುಮ್ನನು ಒಂದು ತಿಂಗಳು ಗಂಡಸಾಗಿರುತ್ತಾನೆ. ಮತ್ತೊಂದು ತಿಂಗಳು ಹೆಂಗಸಾಗಿರುತ್ತಾನೆ. ಹೆಂಗಸಾಗಿದ್ದಾಗ ಅವನು ವಸಿಷ್ಠಗೋತ್ರದವಳೆಂದು ಪರಿಗಣಿಸಲ್ಪಡುತ್ತಾನೆ. ಇದಕ್ಕೆ ತಕ್ಕುದಾದ ವ್ಯವಸ್ಥೆಯನ್ನು ಮಾಡಿಕೊಂಡು ಸುದ್ಯುಮ್ನನು ಭೂಮಂಡಲದ ಪಾಲನ-ಪೋಷಣಗಳನ್ನು ಮಾಡಲಿ."

ಹೀಗೆ ಈಶ್ವರನ ಅನುಗ್ರಹದಿಂದಲೂ, ಆಚಾರ್ಯರ ಅನುಗ್ರಹ ದಿಂದಲೂ ಸುದ್ಯುಮ್ನನು ತನಗೆ ಅಭಿಲಷಿತವಾಗಿದ್ದ ಪುರುಷತ್ವವನ್ನು ಪಡೆದುಕೊಂಡು ಅದಕ್ಕೆ ತಕ್ಕುದಾದ ವ್ಯವಸ್ಥೆಯನ್ನೂ ಮಾಡಿಕೊಂಡು

ಭೂಮಂಡಲವನ್ನು ಆಳತೊಡಗಿದನು. ಆದರೆ ಪ್ರಜೆಗಳು ಅವನನ್ನು ವಿಶೇಷವಾಗಿ ಗೌರವಿಸುತ್ತಿರಲಿಲ್ಲ.

ಸುದ್ಯುಮ್ನನಿಗೆ ಉತ್ಕಲ, ಗಯ ಮತ್ತು ವಿಮಲ–ಎಂಬ ಮೂವರು ಮಕ್ಕಳು ಹುಟ್ಟಿದರು. ಧರ್ಮವತ್ಸಲರಾಗಿದ್ದ ಅವರೆಲ್ಲರೂ * ದಕ್ಷಿಣಾಪಥಕ್ಕೆ ರಾಜರಾಗಿ ರಾಜ್ಯವನ್ನಾಳುತ್ತಿದ್ದರು. ಹಲವಾರು ವರ್ಷಗಳು ಕಳೆದ ನಂತರ ವೃದ್ಧನಾಗಿದ್ದ, ಪ್ರತಿಷ್ಠಾನಗರಕ್ಕೆ ಅಧಿಪತಿಯಾಗಿದ್ದ ಸುದ್ಯುಮ್ನನು ಹೆಂಗಸಾಗಿದ್ದಾಗ ಬುಧನಿಂದ ತಾನು ಪಡೆದುಕೊಂಡಿದ್ದ ಪುರೂರವಸನಿಗೆ ರಾಜ್ಯದ ಪಟ್ಟಗಟ್ಟಿ ತಪಸ್ಸುಮಾಡುವ ಸಲುವಾಗಿ ಅರಣ್ಯಕ್ಕೆ ಹೊರಟು ಹೋದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೨ನೆಯ ಅಧ್ಯಾಯ

ವೈವಸ್ವತಮನುವಿನ ಕರೂಷನೇ ಮೊದಲಾದ ಐವರು ಮಕ್ಕಳ ವಂಶವರ್ಣನೆ

ಶ್ರೀಶುಕರು ಹೇಳುತ್ತಾರೆ :

ಏವಂ ಗತೇಽಥ ಸುದ್ಯುಮ್ನೇ ಮನುರ್ವೈವಸ್ವತಃ ಸುತೇ ।
ಪುತ್ರಕಾಮಸ್ತಪಸ್ತೇಪೇ ಯಮುನಾಯಾಂ ಶತಂ ಸಮಾಃ ॥೧॥

ಮಹಾರಾಜ! ಹೀಗೆ ವೃದ್ಧನಾದ ಸುದ್ಯುಮ್ನನು ತಪಸ್ಸುಮಾಡಲು ಕಾಡಿಗೆ ಹೊರಟುಹೋದನಂತರ ವೈವಸ್ವತಮನುವು ಪುತ್ರಕಾಮನಾಗಿ ಯಮುನಾನದಿಯ ತೀರದಲ್ಲಿ ನೂರು ವರ್ಷಗಳ ಪರ್ಯಂತವಾಗಿ ತಪಸ್ಸು ಮಾಡಿದನು.

---

* ದಕ್ಷಿಣಾಪಥ : ನರ್ಮದಾನದಿಗೆ ದಕ್ಷಿಣಭಾಗದಲ್ಲಿರುವ ಭಾರತದೇಶದ ಭಾಗ. ಉತ್ತರಾಪಥರಾಜಾನೋ ಬಭೂವುಃ –ಎಂದೂ ಪಾಠವಿದೆ. ಉತ್ತರಾಪಥ ಉತ್ತರದಲ್ಲಿರುವ ರಾಜ್ಯಗಳು.

ಅನಂತರ ವೈವಸ್ವತಮನುವು ಸಂತಾನಾರ್ಥವಾಗಿ ಪ್ರಭುವಾದ, ದೇವ ದೇವನಾದ ಶ್ರೀಹರಿಯನ್ನು ಆರಾಧಿಸಿ ತನಗೆ ಸಮಾನರಾದ ಇಕ್ಷ್ವಾಕುವೇ ಮೊದಲಾದ ಹತ್ತುಮಂದಿ ಪುತ್ರರನ್ನು ಪಡೆದುಕೊಂಡನು.

ಮನುವಿನ ಹತ್ತುಮಂದಿ ಮಕ್ಕಳಲ್ಲಿ ಒಬ್ಬನ ಹೆಸರು ಪೃಷಧ್ರ. ಗುರುಗಳಾದ ವಸಿಷ್ಠರು ಪೃಷಧ್ರನನ್ನು ದನಗಳನ್ನು ಕಾಯಲು ನಿಯಮಿಸಿ ದ್ದರು. ರಾತ್ರಿಯಲ್ಲೂ ಪೃಷಧ್ರನು ವೀರಾಸನದಲ್ಲಿ ಕುಳಿತು ಹಸುಗಳನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸುತ್ತಿದ್ದನು. ಒಂದು ದಿನ ರಾತ್ರಿ ಮಳೆಯು ಸುರಿಯುತ್ತಿದ್ದಿತು. ಅದೇ ಸಮಯಕ್ಕೆ ಸರಿಯಾಗಿ ಹುಲಿಯೊಂದು ದನಗಳ ಕೊಟ್ಟಿಗೆಗೆ ನುಗ್ಗಿತು. ಮಲಗಿದ್ದ ಹಸುಗಳು ಭಯದಿಂದ ಮೇಲೆದ್ದು ಗಾಬರಿಯಾಗಿ ಅತ್ತಲಿತ್ತ ಓಡಾಡತೊಡಗಿದುವು. ಬಲಶಾಲಿಯಾಗಿದ್ದ ಆ ಹುಲಿಯು ಒಂದು ಹಸುವನ್ನು ಹಿಡಿದುಕೊಂಡಿತು. ಆ ಹಸುವು ಬಹಳವಾಗಿ ಭಯಗೊಂಡು 'ಅಂಬಾ'-ಎಂದು ಗಟ್ಟಿಯಾಗಿ ಅರಚತೊಡಗಿತು. ಹಸುವು ಅರಚುತ್ತಿರುವುದನ್ನು ಕೇಳಿ ಪೃಷಧ್ರನು ಅದರ ಬಳಿಗೆ ಓಡಿಹೋದನು. ರಾತ್ರಿಯಾಗಿದ್ದುದರಿಂದಲೂ ಮೋಡಕವಿದು ನಕ್ಷತ್ರಗಳ ಬೆಳಕು ಕೂಡ ಕಾಣದೇ ಇದ್ದುದರಿಂದಲೂ ಪೃಷಧ್ರನಿಗೆ ಹಸು ಯಾವುದು? ಹುಲಿ ಯಾವುದು?-ಎಂಬುದು ತಿಳಿಯಲೇ ಇಲ್ಲ. ಝಳಪಿಸುತ್ತಿದ್ದ ಕತ್ತಿಯನ್ನೆತ್ತಿ ಹುಲಿಯೆಂಬ ಭ್ರಾಂತಿಯಿಂದ ಹಸುವಿನ ತಲೆಯನ್ನೇ ಪೃಷಧ್ರನು ಕತ್ತರಿಸಿ ಬಿಟ್ಟನು. ಹಸುವಿನ ತಲೆಯ ಜೊತೆಯಲ್ಲಿಯೇ ಆ ಹಸುವನ್ನು ಹಿಡಿದಿದ್ದ ಹುಲಿಯ ಕಿವಿಯೂ ಕತ್ತರಿಸಿಹೋಯಿತು. ಇದರಿಂದ ಭಯಗೊಂಡ ಹುಲಿಯು ಕೂಡ ದಾರಿಯುದ್ದಕ್ಕೂ ರಕ್ತವನ್ನು ಸುರಿಸುತ್ತಾ ದಿಕ್ಕಾಪಾಲಾಗಿ ಓಡಿಹೋಯಿತು. ಹುಲಿಯನ್ನೇ ಕೊಂದೆನೆಂದು ಶತ್ರುದಮನನಾದ ಪೃಷಧ್ರನು ಭಾವಿಸಿದನು. ಆದರೆ ರಾತ್ರಿಯು ಕಳೆದು ಬೆಳಗಾಗುತ್ತಿದ್ದಂತೆ ತಾನು ಕತ್ತರಿಸಿದ್ದು ಹಸುವಿನ ಕುತ್ತಿಗೆಯೆಂಬುದು ಪೃಷಧ್ರನಿಗೆ ತಿಳಿದು ಅವನು ಬಹಳವಾಗಿ ದುಃಖಿಸಿದನು. ವಾಸ್ತವವಾಗಿ ಪೃಷಧ್ರನು ಆ ಪಾಪಕಾರ್ಯವನ್ನು ತಿಳಿಯದೇ ಮಾಡಿದ್ದನು. ಆದರೂ ಕುಲಾಚಾರ್ಯರಾದ ವಸಿಷ್ಠರು ಅವನಿಗೆ ಈ ಶಾಪವನ್ನಿತ್ತರು : (ಶ್ಲೋಕ 2-8)

ನ ಕ್ಷತ್ರಬನ್ಧುಃ ಶೂದ್ರಸ್ತ್ವಂ ಕರ್ಮಣಾ ಭವಿತಾಮುನಾ ॥೯॥

"ಪೃಷಧ್ರನೇ! ನೀನು ಈ ಗೋವಧೆಯಿಂದಾಗಿ ಕ್ಷತ್ರಿಯನಾಗಿ ಉಳಿಯಲಾರೆ. ಇಲ್ಲಿಂದ ಮುಂದಕ್ಕೆ ನೀನು ಶೂದ್ರನಾಗಿ ಬಾಳುವೆ."

ಗುರುಗಳ ಈ ಶಾಪವನ್ನು ಪೃಷಧ್ರನು ಬದ್ಧಾಂಜಲಿಯಾಗಿ ಸ್ವೀಕರಿಸಿದನು. ಅನಂತರ ಅವನು ಮುನಿಜನರಿಗೆ ಅತ್ಯಂತಪ್ರಿಯವಾದ ನೈಷ್ಠಿಕ ಬ್ರಹ್ಮಚರ್ಯವ್ರತವನ್ನು ಕೈಗೊಂಡನು. ಸಮಸ್ತಪ್ರಾಣಿಗಳಿಗೂ ಹಿತೈಷಿಯಾಗಿ, ಸಮಸ್ತಪ್ರಾಣಿಗಳನ್ನೂ ಸಮಭಾವದಿಂದ ಕಾಣುತ್ತಾ ಪರಿಶುದ್ಧಾತ್ಮನಾದ, ಸರ್ವಾತ್ಮನಾದ, ವಾಸುದೇವಪರಮಾತ್ಮನಲ್ಲಿ ಅನನ್ಯವಾದ ಭಕ್ತಿಭಾವವನ್ನು ಹೊಂದಿದನು.

ಪೃಷಧ್ರನು ಸಂಗರಹಿತನಾಗಿದ್ದನು. ಯಾರ ಗೊಡವೆಗೂ ಹೋಗುತ್ತಿರಲಿಲ್ಲ. ಯಾರೊಡನೆಯೂ ಸೇರುತ್ತಿರಲಿಲ್ಲ. ಯಾವುದೇ ವಿಧವಾದ ಆಸಕ್ತಿಯೂ ಅವನಿಗಿರಲಿಲ್ಲ. ಇದರಿಂದಲೇ ಅವನು ಶಾಂತವಾದ ಮನಸ್ಸಿನಿಂದ ಕೂಡಿದ್ದನು. ಜಿತೇಂದ್ರಿಯನಾಗಿದ್ದನು. ಯಾವ ವಸ್ತುವನ್ನೂ ಪರಿಗ್ರಹಿಸುತ್ತಿರಲಿಲ್ಲ. ದೈವೇಚ್ಛೆಯಿಂದ ಎಷ್ಟು ದೊರಕುತ್ತಿದ್ದಿತೋ ಅಷ್ಟರಿಂದಲೇ ಅವನು ತನ್ನ ಜೀವನವನ್ನು ನಿರ್ವಹಿಸುತ್ತಿದ್ದನು. ಮನಸ್ಸನ್ನು ಅಂತರ್ಯಾಮಿಯಾದ ಜ್ಯೋತಿಃಸ್ವರೂಪನಾದ ಪರಮಾತ್ಮನಲ್ಲಿ ಲೀನ ಗೊಳಿಸಿ ಇದರಿಂದಾದ ಬ್ರಹ್ಮಜ್ಞಾನದಿಂದ ಅಥವಾ ಬ್ರಹ್ಮಾನಂದದಿಂದ ತೃಪ್ತನಾಗಿ ಸ್ಥಿರಚಿತ್ತನಾಗಿರುತ್ತಾ–ಕೆಲವು ಸಮಯಗಳಲ್ಲಿ ಕುರುಡನಂತೆಯೂ, ಕಿವುಡನಂತೆಯೂ, ಜಡನಂತೆಯೂ ಇರುತ್ತಾ ಪ್ರಪಂಚದಲ್ಲಿ ಪರ್ಯಟನೆ ಮಾಡುತ್ತಿದ್ದನು. ಹೀಗೆಯೇ ತನ್ನ ಜೀವನವನ್ನು ಕಳೆಯುತ್ತಿದ್ದ ಪೃಷಧ್ರನು ಒಮ್ಮೆ ಕಾಡಿನಲ್ಲಿ ಧಗ-ಧಗನೆ ಉರಿಯುತ್ತಿದ್ದ ಕಾಡುಗಿಚ್ಚನ್ನು ನೋಡಿದನು. ಮನನಶೀಲನಾದ ಪೃಷಧ್ರನು ತನ್ನ ಇಂದ್ರಿಯಗಳೆಲ್ಲವನ್ನೂ ಅಗ್ನಿಗೆ ಸಮರ್ಪಿಸಿ ಪರಬ್ರಹ್ಮಪರಮಾತ್ಮನಲ್ಲಿ ಸೇರಿಹೋದನು. (ಶ್ಲೋಕ 10-14)

ಮನುವಿನ ಕಿರಿಯಮಗ ಕವಿ ಎಂಬುವನು ವಿಷಯಸುಖಗಳಲ್ಲಿ ನಿಸ್ಪೃಹನಾಗಿದ್ದನು. ವಿಷಯಸುಖಗಳನ್ನು ಅನುಭವಿಸಬೇಕೆಂಬ ಆಶೆಯೇ ಅವನಿಗಿರಲಿಲ್ಲ. ಅವನು ಬಂಧುಗಳನ್ನೂ ರಾಜ್ಯವನ್ನೂ ಪರಿತ್ಯಜಿಸಿ ಅರಣ್ಯಕ್ಕೆ ಹೊರಟುಹೋದನು. ಮನಸ್ಸಿನಲ್ಲಿ ಸ್ವಯಂಪ್ರಕಾಶನಾದ

ಪರಮಾತ್ಮನನ್ನೇ ಧ್ಯಾನಮಾಡುತ್ತಾ ಕಿಶೋರಾವಸ್ಥೆಯಲ್ಲಿಯೇ ಪರಮಪದವನ್ನು ಸೇರಿದನು.

ಮನುವಿನ ಮತ್ತೊಬ್ಬ ಮಗನಾದ ಕರೂಷ ಎಂಬುವನಿಂದ ಕಾರೂಷರೆಂಬ ಕ್ಷತ್ರಿಯರು ಜನಿಸಿದರು. ಧರ್ಮಪ್ರೇಮಿಗಳೂ ಬ್ರಾಹ್ಮಣಭಕ್ತರೂ ಆಗಿದ್ದ ಕಾರೂಷಕ್ಷತ್ರಿಯರು ಉತ್ತರದಿಕ್ಕಿನ ದೇಶಗಳನ್ನು ಆಳುತ್ತಿದ್ದರು.

ಮನುವಿನ ಮತ್ತೊಬ್ಬ ಮಗನಾದ ಧೃಷ್ಟನಿಂದ ಧಾರ್ಷ್ಟ–ಎಂಬ ಹೆಸರಿನ ಕ್ಷತ್ರಿಯರು ಹುಟ್ಟಿದರು. ಆದರೆ ಇವರೆಲ್ಲರೂ ತಮ್ಮ ಸತ್ಕರ್ಮ ಗಳಿಂದ ಭೂಮಂಡಲದಲ್ಲಿ ಬ್ರಾಹ್ಮಣರಾಗಿ ಪರಿವರ್ತನೆಯನ್ನು ಹೊಂದಿ ದರು. ಮನುವಿನ ಮತ್ತೊಬ್ಬ ಪುತ್ರನ ಹೆಸರು ನೃಗ–ಎಂದು. ನೃಗನ ಮಗ ಸುಮತಿ. ಸುಮತಿಯ ಮಗ ಭೂತಜ್ಯೋತಿ. ಭೂತಜ್ಯೋತಿಯ ಮಗ ವಸು–ಎಂಬುವನು. ವಸುವಿನ ಮಗ ಪ್ರತೀಕ. ಓಘವಂತನು ಪ್ರತೀಕನ ಮಗನು. ಓಘವಂತನ ಮಗನ ಹೆಸರೂ ಓಘವಂತ–ಎಂದೇ ಆಗಿದ್ದಿತು. ಓಘವಂತನಿಗೆ ಓಘವತೀ–ಎಂಬ ಕನ್ಯೆಯೂ ಇದ್ದಳು. ಸುದರ್ಶನನೆಂಬುವನೊಡನೆ ಅವಳ ವಿವಾಹವಾಯಿತು.

ಮನುವಿನ ಮತ್ತೊಬ್ಬ ಮಗನಾದ ನರಿಷ್ಯಂತನಿಗೆ ಚಿತ್ರಸೇನನೆಂಬ ಮಗನಿದ್ದನು. ಋಕ್ಷನೆಂಬುವನು ಚಿತ್ರಸೇನನ ಮಗ. ಋಕ್ಷನಿಗೆ ಮೀಢ್ವಂತ* ನೆಂಬ ಮಗನಿದ್ದನು. [1]ಕೂರ್ಚನೆಂಬುವನು ಮೀಢ್ವಂತನ ಮಗನು. ಕೂರ್ಚನಿಗೆ ಇಂದ್ರಸೇನನೆಂಬ ಮಗನಿದ್ದನು. ವೀತಿಹೋತ್ರನು ಇಂದ್ರಸೇನನ ಮಗನು. ವೀತಿಹೋತ್ರನಿಗೆ ಸತ್ಯಶ್ರವನೆಂಬ ಮಗನಿದ್ದನು. ಉರುಶ್ರವಸನೆಂಬುವನು ಸತ್ಯಶ್ರವಸನ ಮಗನು. ಉರುಶ್ರವಸನಿಗೆ ದೇವದತ್ತನೆಂಬ ಮಗನಿದ್ದನು. ದೇವದತ್ತನಿಗೆ ಅಗ್ನಿವೇಶ್ಯನೆಂಬ ಮಗನಿದ್ದನು.[2] ಅಗ್ನಿವೇಶ್ಯನು ಸಾಕ್ಷಾತ್ ಅಗ್ನಿದೇವನೇ ಆಗಿದ್ದನು. ಮುಂದೆ ಆ ಅಗ್ನಿವೇಶ್ಯನೇ ಕಾನೀನ ಎಂಬ ಹೆಸರಿನಿಂದಲೂ ಮಹರ್ಷಿ ಜಾತೂಕರ್ಣ–ಎಂಬ ಹೆಸರಿ

---

* ಕೆಲವು ಪಾಠಗಳಲ್ಲಿ 'ದಕ್ಷ'–ಎಂದಿದೆ. [1] ಪಾಠಾಂತರಗಳಲ್ಲಿ 'ಕೂರ್ಚ'–ಎಂಬುದಕ್ಕೆ ಬದಲಾಗಿ ಶರ್ವ–ಎಂದೂ 'ಪೂರ್ಣ'–ಎಂದೂ ಇದೆ. [2]ಕೆಲವು ಪಾಠಗಳಲ್ಲಿ 'ಅಗ್ನಿವೇಶ'–ಎಂದಿದೆ.

ನಿಂದಲೂ ಪ್ರಸಿದ್ಧನಾಗಿದ್ದನು. ಬ್ರಾಹ್ಮಣರಲ್ಲಿ 'ಅಗ್ನಿವೇಶ್ಯಾಯನ' ಎಂಬ ಗೋತ್ರವು ಇವನಿಂದಲೇ ಪ್ರವರ್ತಿತವಾಯಿತು.

ಮಹಾರಾಜ! ಹೀಗೆ ನಾನು ನಿನಗೆ ನರಿಷ್ಯಂತನ ವಂಶಾವಳಿಯನ್ನು ಹೇಳಿರುತ್ತೇನೆ. ಮುಂದೆ ನಾನು ದಿಷ್ಟನ ವಂಶಾವಳಿಯನ್ನು ಹೇಳುತ್ತೇನೆ.

(ಶ್ಲೋಕ 15-22)

ನಾಭಾಗನೆಂಬುವನು ದಿಷ್ಟನ ಮಗನು. ಮುಂದೆ ಹೇಳಿರುವ ನಾಭಾಗನು ಇವನಿಗಿಂತಲೂ ಬೇರೆಯಾದ ನಾಭಾಗನು. ಈತನು ತನ್ನ ಕರ್ಮಾನುಸಾರವಾಗಿ ವೈಶ್ಯನಾದನು. ಭಲಂದನನೆಂಬುವನು ನಾಭಾಗನ ಪುತ್ರನು. ಭಲಂದನನಿಗೆ ವತ್ಸಪ್ರೀತಿ–ಎಂಬ ಮಗನಿದ್ದನು. ವತ್ಸಪ್ರೀತಿಯ ಮಗ ಪ್ರಾಂಶು. ಪ್ರಾಂಶುವಿನ ಮಗ ಪ್ರಮತಿ. ಪ್ರಮತಿಗೆ ಖನಿತ್ರನೆಂಬ ಮಗನಿದ್ದನು. ಖನಿತ್ರನ ಮಗ ಚಾಕ್ಷುಷ. ಚಾಕ್ಷುಷನ ಮಗ ವಿವಿಂಶತಿ. ರಂಭನೆಂಬುವನು ವಿವಿಂಶತಿಯ ಮಗನು. ರಂಭನ ಮಗ ಖನಿನೇತ್ರ. ಇವನು ಬಹಳ ಧಾರ್ಮಿಕನಾಗಿದ್ದನು. ಖನಿನೇತ್ರನ ಮಗ ಕರಂಧಮ. ಕರಂಧಮನ ಮಗ ಅವೀಕ್ಷಿತ. ಅವೀಕ್ಷಿತನ ಮಗ ಮರುತ್ತ. ಮರುತ್ತನು ಅಖಂಡಭೂಮಂಡಲಕ್ಕೂ ಚಕ್ರವರ್ತಿಯಾಗಿದ್ದನು. ಅಂಗಿರಸನ ಮಗನಾದ, ಮಹಾಯೋಗಿಯಾದ ಸಂವರ್ತನು ಮರುತ್ತನಿಂದ ಯಜ್ಞವನ್ನು ಮಾಡಿ ಸಿದನು. ಮರುತ್ತನ ಯಜ್ಞದಂತೆ ಬೇರೆ ಯಾವ ಯಜ್ಞವೂ ನಡೆದಿರಲಿಲ್ಲ.

ಸರ್ವಂ ಹಿರಣ್ಮಯಂ ತ್ವಾಸೀದ್ಯತ್ಕಿಂಚಿಚ್ಚಾಸ್ಯ ಶೋಭನಮ್ ॥೨೭॥

ಅಮಾದ್ಯದಿನ್ದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ।
ಮರುತಃ ಪರಿವೇಷ್ಟಾರೋ ವಿಶ್ವೇದೇವಾಃ ಸಭಾಸದಃ ॥೨೮॥

ಆತನು ಯಜ್ಞದಲ್ಲಿ ಉಪಯೋಗಿಸುತ್ತಿದ್ದ ಸಮಸ್ತಪಾತ್ರೆಗಳೂ ಸುಂದರವಾಗಿಯೂ ಸುವರ್ಣಮಯವಾಗಿಯೂ ಇದ್ದುವು. ಸುಪ್ರಸಿದ್ಧವಾದ ಆ ಯಜ್ಞದಲ್ಲಿ ಇಂದ್ರನು ಸೋಮಪಾನಮಾಡಿ ಮತ್ತನಾಗಿಬಿಟ್ಟನು. ದಕ್ಷಿಣೆಗಳಿಂದ ಬ್ರಾಹ್ಮಣರು ತೃಪ್ತರಾಗಿದ್ದರು. ಮರುದ್ಗಣಗಳು–ಮಾಡಿದ ಅಡಿಗೆಯನ್ನು ಬಡಿಸುವವರಾಗಿದ್ದರು. ವಿಶ್ವೇದೇವತೆಗಳು ಆ ಯಜ್ಞಕ್ಕೆ ಸಭಾ ಸದರಾಗಿದ್ದರು. ಈ ರೀತಿಯಲ್ಲಿ ಪರಮಾದ್ಭುತವಾಗಿ ಮರುತ್ತನ ಆ ಯಜ್ಞವು

ಸಂಪನ್ನವಾಯಿತು. ಮರುತ್ತನಿಗೆ ದಮನೆಂಬ ಮಗನಿದ್ದನು. ದಮನ ಮಗ ರಾಜ್ಯವರ್ಧನ. ಸುಧೃತಿಯು ರಾಜ್ಯವರ್ಧನನ ಪುತ್ರನು. ಸುಧೃತಿಯ ಮಗನು ನರ–ಎಂಬುವನು. ನರನ ಮಗ ಕೇವಲ. ಕೇವಲನ ಮಗ ಬಂಧುಮಂತ. ಬಂಧುಮಂತನ ಮಗ ವೇಗವಂತ. ವೇಗವಂತನ ಮಗ ಬಂಧು. ಬಂಧು ವಿನ ಮಗ ತೃಣಬಿಂದು. ಪ್ರಶಂಸನೀಯವಾದ ಗುಣಗಳಿಗೆ ಸಮುದ್ರ ಪ್ರಾಯನಾಗಿದ್ದ ತೃಣಬಿಂದುವನ್ನು ಅಪ್ಸರೆಯರಲ್ಲಿ ಶ್ರೇಷ್ಠಳಾದ ಅಲಂಬುಷಾ ದೇವಿಯು ವರಿಸಿದಳು. ತೃಣಬಿಂದುವಿಗೆ ಅಲಂಬುಷೆಯಲ್ಲಿ ಹಲವಾರು ಪುತ್ರರೂ ಇಡವಿಡಾ* ಎಂಬ ಕನ್ಯೆಯೂ ಜನಿಸಿದರು. ವಿಶ್ರವಸನು ಯೋಗೇಶ್ವರನಾದ ತನ್ನ ತಂದೆಯಿಂದ (ಪುಲಸ್ತ್ಯನಿಂದ) ಶ್ರೇಷ್ಠವಾದ ವಿದ್ಯೆಯನ್ನು ಪಡೆದು ಇಡವಿಡೆಯನ್ನು ಮದುವೆಯಾಗಿ ಅವಳಲ್ಲಿ ಲೋಕಪಾಲನಾದ ಕುಬೇರನನ್ನು ಮಗನನ್ನಾಗಿ ಪಡೆದುಕೊಂಡನು. ತೃಣಬಿಂದುಮಹಾರಾಜನಿಗೆ ಅವನ ಧರ್ಮಪತ್ನಿಯಲ್ಲಿ ವಿಶಾಲ, ಶೂನ್ಯ ಬಂಧು ಮತ್ತು ಧೂಮ್ರಕೇತು–ಎಂಬ ಮೂವರು ಮಕ್ಕಳು ಹುಟ್ಟಿದರು. ಇವರಲ್ಲಿ ಹಿರಿಯನಾದ ವಿಶಾಲನು ವಂಶವರ್ಧಕನಾದನು ಮತ್ತು ವಿಶಾಲೀ–ಎಂಬ ರಾಜಧಾನಿಯನ್ನೂ ನಿರ್ಮಿಸಿದನು. ವಿಶಾಲನ ಮಗ ಹೇಮಚಂದ್ರ. ಹೇಮಚಂದ್ರನ ಮಗ ಧೂಮ್ರಾಕ್ಷ. ಧೂಮ್ರಾಕ್ಷನ ಮಗ ಸಂಯಮ. ಸಂಯಮನಿಗೆ ಕೃಶಾಶ್ವ ಮತ್ತು ದೇವಜರೆಂಬ ಇಬ್ಬರು ಮಕ್ಕಳಿದ್ದರು. ಕೃಶಾಶ್ವನ ಮಗ ಸೋಮದತ್ತ. ಸೋಮದತ್ತನು ಹಲವಾರು ಅಶ್ವಮೇಧಯಾಗಗಳಿಂದ ಜಗತ್ಪತಿಯಾದ ಭಗವಂತನನ್ನು ಆರಾಧಿಸಿ ಯೋಗೇಶ್ವರರಾದ ಸಂತರ ಆಶ್ರಯವನ್ನು ಪಡೆದು ಶ್ರೇಷ್ಠವಾದ ಗತಿಯನ್ನು ಹೊಂದಿದನು. ಸೋಮದತ್ತನ ಮಗ ಸುಮತಿ. ಸುಮತಿಯ ಮಗ ಜನಮೇಜಯ. ಇವರೆಲ್ಲರೂ ತೃಣಬಿಂದುವಿನ ಯಶಸ್ಸನ್ನು ವೃದ್ಧಿಗೊಳಿಸಿದ ವಿಶಾಲವಂಶೀಯ ರಾಜರು. (ಶ್ಲೋಕ 29-36)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೨ನೆಯ ಅಧ್ಯಾಯವು ಮುಗಿಯಿತು.

---

* ಇಲವಿಲಾ–ಎಂಬ ಪಾಠಾಂತರವೂ ಇದೆ.

ನವಮಸ್ಕಂಧ ೩ನೆಯ ಅಧ್ಯಾಯ

ಚ್ಯವನ-ಸುಕನ್ಯೆಯರ ಚರಿತ್ರೆ : ಶರ್ಯಾತಿರಾಜನ ವಂಶವರ್ಣನೆ

ಶ್ರೀಶುಕರು ಹೇಳುತ್ತಾರೆ :

ಶರ್ಯಾತಿರ್ಮಾನವೋ ರಾಜಾ ಬ್ರಹ್ಮಿಷ್ಠಃ ಸ ಬಭೂವ ಹ ।
ಯೋ ವಾ ಅಙ್ಗಿರಸಾಂ ಸತ್ರೇ ದ್ವಿತೀಯಮಹ ಊಚಿವಾನ್ ॥೧॥

ಪರೀಕ್ಷಿತಮಹಾರಾಜ! ಮನುವಿನ ಮತ್ತೊಬ್ಬ ಮಗನಾದ ಶರ್ಯಾತಿಯು ವೇದ-ವೇದಾರ್ಥಗಳನ್ನು ಸಂಪೂರ್ಣವಾಗಿ ತಿಳಿದವನಾಗಿದ್ದನು. ಅವನು ಬ್ರಹ್ಮಿಷ್ಠನಾಗಿದ್ದುದರಿಂದಲೇ ಅಂಗಿರಸನು ಮಾಡುತ್ತಿದ್ದ ಸತ್ರಯಾಗದಲ್ಲಿ ಎರಡನೆಯ ದಿವಸದ ಕರ್ಮಗಳೇನೆಂಬುದನ್ನು ವಿಧಿವತ್ತಾಗಿ ತಿಳಿಯಪಡಿಸಿದನು.

ಶರ್ಯಾತಿಗೆ ಕಮಲದಂತೆ ವಿಶಾಲವಾದ ಕಣ್ಣುಗಳನ್ನು ಹೊಂದಿದ್ದ ಸುಕನ್ಯಾ ಎಂಬ ಹೆಸರಿನ ಮಗಳಿದ್ದಳು. ಒಮ್ಮೆ ಶರ್ಯಾತಿಯು ಮಗಳೊಡನೆ ಅರಣ್ಯಕ್ಕೆ ಹೋದನು. ಅತ್ತಲಿತ್ತ ಮಗಳೊಡನೆ ಸಂಚರಿಸುತ್ತಾ ಚ್ಯವನ ಮಹರ್ಷಿಗಳ ಆಶ್ರಮಕ್ಕೂ ಹೋದನು. ಸುಕನ್ಯೆಯು ತನ್ನ ಸಖಿಯರೊಡನೆ ಸಂಚರಿಸುತ್ತಾ ವನದಲ್ಲಿದ್ದ ವೃಕ್ಷಗಳ ಶೋಭೆಯನ್ನು ನೋಡಿ ಆನಂದಿಸುತ್ತಿದ್ದಳು. ವೃಕ್ಷದ ಬುಡದಲ್ಲಿದ್ದ ಒಂದು ಹುತ್ತದಲ್ಲಿ ಸುಕನ್ಯೆಯು ಮಿಣುಕುಹುಳುಗಳಂತೆ ಮಿನುಗುಟ್ಟುತ್ತಿದ್ದ ಬೆಳಕನ್ನು ನೋಡಿದಳು. ದೈವಪ್ರೇರಣೆಯಿಂದಾಗಿ ಅರಿವಿಲ್ಲದ ಆ ಬಾಲೆಯು ಹುಡುಗಾಟಕ್ಕಾಗಿ ಮಿನುಗುಟ್ಟುತ್ತಿದ್ದ ಆ ಎರಡು ಬೆಳಕುಗಳನ್ನೂ ಮುಳ್ಳಿನಿಂದ ತಿವಿದಳು. ಮರುಕ್ಷಣದಲ್ಲಿಯೇ ಬೆಳಕಿದ್ದ ಸ್ಥಳದಿಂದ ರಕ್ತವು ಹರಿಯತೊಡಗಿತು. ಅದರ ಪರಿಣಾಮವಾಗಿ ಅಲ್ಲಿದ್ದ ಸೈನಿಕರ ಮಲ-ಮೂತ್ರವಿಸರ್ಜನೆಯು ಆ ಕ್ಷಣದಿಂದಲೇ ನಿಂತುಹೋಯಿತು. ರಾಜರ್ಷಿಯಾದ ಶರ್ಯಾತಿಯು ಇದನ್ನು ನೋಡಿ ವಿಸ್ಮಿತನಾಗಿ ಸೈನಿಕರಿಗೆ ಹೇಳಿದನು : (ಶ್ಲೋಕ 2-5)

“ಸೈನಿಕರೇ! ನೀವೇನಾದರೂ ಚ್ಯವನಮಹರ್ಷಿಯ ವಿಷಯದಲ್ಲಿ ಅನುಚಿತವಾಗಿ ವ್ಯವಹರಿಸಿರುವಿರಾ? ನಮ್ಮಲ್ಲಿ ಯಾರಾದರೂ ಈ ಆಶ್ರಮ

ದಲ್ಲಿ ದುಷ್ಕಾರ್ಯವನ್ನು ಮಾಡಿರಬಹುದೆಂದು ನನಗೆ ಸ್ಪಷ್ಟವಾಗಿ ಕಾಣುತ್ತಿದೆ."

ರಾಜನ ಈ ಮಾತನ್ನು ಕೇಳಿ ಸುಕನ್ಯೆಯು ಭೀತಭೀತಳಾಗಿ ರಾಜನಿಗೆ ಹೇಳಿದಳು :

"ತಂದೆಯೇ! ನಾನೇ ಸ್ವಲ್ಪ ಅಪರಾಧವನ್ನು ಮಾಡಿಬಿಟ್ಟಿದ್ದೇನೆ. ನಾನು ಅರಿವಿಲ್ಲದೆ ಕುಚೇಷ್ಟೆಯಿಂದ ಹುತ್ತದಲ್ಲಿ ಫಳ-ಫಳಿಸುತ್ತಿದ್ದ ಆ ಎರಡು ಬೆಳಕುಗಳನ್ನು ಮುಳ್ಳಿನಿಂದ ತಿವಿದೆನು."

ಮಗಳ ಈ ಮಾತನ್ನು ಕೇಳಿ ಶರ್ಯಾತಿಗೆ ಬಹಳ ಭಯವಾಯಿತು. ಹುತ್ತದಲ್ಲಿದ್ದ ಚ್ಯವನಮಹರ್ಷಿಯನ್ನು ಶರ್ಯಾತಿಯು ಸ್ತೋತ್ರಮಾಡುತ್ತಾ ಸ್ವಲ್ಪ-ಸ್ವಲ್ಪವಾಗಿ ಅವನನ್ನು ಸಮಾಧಾನಗೊಳಿಸಿದನು. ಚ್ಯವನನ ಅಭಿಪ್ರಾಯವನ್ನು ತಿಳಿದು ಶರ್ಯಾತಿಯು ತನ್ನ ಮಗಳಾದ ಸುಕನ್ಯೆಯನ್ನು ಮಹರ್ಷಿಗೆ ಮದುವೆಮಾಡಿಕೊಟ್ಟನು. ಚ್ಯವನನ ಅನುಗ್ರಹದಿಂದಾಗಿ ಸೈನಿಕರಿಗೊದಗಿದ್ದ ಸಂಕಟವು ಪರಿಹಾರವಾಯಿತು. ಇದರಿಂದ ಸಮಾಧಾನ ಹೊಂದಿದ್ದ ಶರ್ಯಾತಿಯು ಮಹರ್ಷಿಯ ಅನುಮತಿಯನ್ನು ಪಡೆದು ನಗರಕ್ಕೆ ಹಿಂದಿರುಗಿದನು.

ಹೀಗೆ ಸುಕನ್ಯೆಯು ಮಹಾಕೋಪಿಷ್ಠನಾದ ಚ್ಯವನನನ್ನು ತನ್ನ ಪತಿಯನ್ನಾಗಿ ಪಡೆದುಕೊಂಡಳು. ಅಪ್ರಮತ್ತಳಾಗಿದ್ದು ಮಹರ್ಷಿಯ ಮನಸ್ಸಿನಲ್ಲೇನಿರುವುದೆಂಬುದನ್ನು ತಿಳಿದು ಅವನ ಸೇವೆಯನ್ನು ಮಾಡುತ್ತಿದ್ದ ಸುಕನ್ಯೆಯು ಚ್ಯವನನನ್ನು ಪ್ರಸನ್ನಗೊಳಿಸಿದಳು.

ಹೀಗೆಯೇ ಕೆಲವು ಸಂವತ್ಸರಗಳು ಕಳೆದನಂತರ ಒಮ್ಮೆ ಅಶ್ವಿನೀ ದೇವತೆಗಳು ಆಕಸ್ಮಿಕವಾಗಿ ಚ್ಯವನನ ಆಶ್ರಮಕ್ಕೆ ಆಗಮಿಸಿದರು. ಚ್ಯವನ ಮಹರ್ಷಿಯು ಅಶ್ವಿನೀಕುಮಾರರನ್ನು ಯಥೋಚಿತವಾಗಿ ಸತ್ಕರಿಸಿ ಹೇಳಿದನು: "ನಾಸತ್ಯರೇ! ಸಮರ್ಥರಾಗಿರುವ ನೀವು ನನಗೆ ಯೌವನವನ್ನು ದಯಪಾಲಿಸಿರಿ. ಇದಕ್ಕೆ ಪ್ರತಿಯಾಗಿ ನಾನು, ಸೋಮಪಾನಕ್ಕೆ ಅನಧಿಕಾರಿಗಳಾಗಿರುವ ನಿಮಗೆ ಯಜ್ಞದಲ್ಲಿ ಸೋಮರಸದಿಂದ ತುಂಬಿದ ಪಾತ್ರೆಯನ್ನು ಅನುಗ್ರಹಿಸಿಕೊಡುತ್ತೇನೆ. ಪ್ರಮದೆಯರು ಕಾಮಿಸುವಂತಹ ಕಡುಚೆಲುವಿನ ರೂಪವನ್ನೂ ನನಗೆ ನೀವು ದಯಪಾಲಿಸಿರಿ." (ಶ್ಲೋಕ 6-12)

ಚ್ಯವನಮಹರ್ಷಿಯು ಹೀಗೆ ಹೇಳಿದೊಡನೆಯೇ ಅಶ್ವಿನೀದೇವತೆಗಳು 'ಬಾಢಂ' 'ಹಾಗೆಯೇ ಆಗಲಿ'–ಎಂದು ಉತ್ತರಿಸುತ್ತಾ ಹೇಳಿದರು :

"ಮಹರ್ಷಿಯೇ! ಇದು ಸಿದ್ಧರು ನಿರ್ಮಿಸಿರುವ ಒಂದು ಪವಿತ್ರಕುಂಡವಾಗಿದೆ. ನೀನು ಇದರಲ್ಲಿ ಸ್ನಾನಮಾಡು."

ಚ್ಯವನಮಹರ್ಷಿಯ ದೇಹವು ಮುಪ್ಪಿನಿಂದ ಆವೃತವಾಗಿದ್ದಿತು. ಮೂಳೆ-ನರಗಳು ಮಾತ್ರವೇ ಶರೀರದಲ್ಲಿ ಕಾಣುತ್ತಿದ್ದುವು. ಸುಕ್ಕಿದ ಚರ್ಮ ದಿಂದಲೂ ಬಿಳುಪಾದ ಕೂದಲಿನಿಂದಲೂ ಆವೃತನಾಗಿದ್ದನು. ಇಂತಹ ಹಣ್ಣು-ಹಣ್ಣು ಮುದುಕನಾಗಿದ್ದ ಚ್ಯವನನನ್ನು ನೋಡಲು ಯಾರಿಗೂ ಇಷ್ಟವಾಗುತ್ತಿರಲಿಲ್ಲ. ಪ್ರಮದೆಯರಿಗಂತೂ ಅವನು ಬಹಳ ವಿಕಾರ ವಾಗಿಯೇ ಕಾಣುತ್ತಿದ್ದನು. 'ಸಿದ್ಧರಸಸರೋವರದಲ್ಲಿ ಮುಳುಗಿರಿ'–ಎಂದು ಹೇಳಿದ ಅಶ್ವಿನೀದೇವತೆಗಳೇ ಚ್ಯವನನನ್ನು ಕರೆದೊಯ್ದು ಸಿದ್ಧರಸ ಸರೋವರದಲ್ಲಿ ಮುಳುಗಿಸಿ ತಾವೂ ಮುಳುಗಿದರು. ಮುಳುಗಿ ಮೇಲೆದ್ದಾಗ ಮೂವರೂ ಸಮಾನರೂಪ-ಸೌಂದರ್ಯಗಳಿಂದ ಯುವಕರಾಗಿ ಕಾಣಿಸಿ ಕೊಂಡರು. ಮೂವರೂ ಮನೋಹರವಾದ ರೂಪವುಳ್ಳವರಾಗಿದ್ದರು. ಮೂವರೂ ಕಮಲಗಳ ಮಾಲೆಗಳನ್ನು ಧರಿಸಿದ್ದರು. ಕುಂಡಲಗಳಿಂದಲೂ ಸುಂದರವಾದ ವಸ್ತ್ರಗಳಿಂದಲೂ ಸಮಲಂಕೃತರಾಗಿದ್ದರು. ಮೂವರೂ ವನಿತೆಯರಿಗೆ ಪ್ರಿಯದರ್ಶನರಾಗಿದ್ದರು.

ಸಮಾನವಾದ ರೂಪುಗಳಿಂದ ಕೂಡಿದ್ದ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಆ ಮೂವರನ್ನೂ ನೋಡಿ ಸುಂದರಾಂಗಿಯಾದ ಸುಕನ್ಯೆಯು ಆ ಮೂವರಲ್ಲಿ ತನ್ನ ಪತಿಯು ಯಾರೆಂಬುದನ್ನು ತಿಳಿಯಲಾಗದೇ ಅಶ್ವಿನೀದೇವತೆಗಳನ್ನೇ ಶರಣುಹೊಂದಿ ದಳು. ಸುಕನ್ಯೆಯ ಪಾತಿವ್ರತ್ಯದಿಂದ ಸಂತುಷ್ಟರಾದ ಅಶ್ವಿನೀದೇವತೆಗಳು ಸುಕನ್ಯೆಗೆ ಅವಳ ಪತಿಯನ್ನು ತೋರಿಸಿಕೊಟ್ಟು ಚ್ಯವನಮಹರ್ಷಿಗಳಿಂದ ಅನುಮತಿಯನ್ನು ಪಡೆದು ವಿಮಾನದ ಮೂಲಕವಾಗಿ ಸ್ವರ್ಗಕ್ಕೆ ತೆರಳಿದರು. ಒಮ್ಮೆ ಯಜ್ಞಮಾಡಲು ಉದ್ದೇಶಿಸಿದ್ದ ಶರ್ಯಾತಿಯು ಚ್ಯವನನನ್ನು ಯಜ್ಞಕ್ಕೆ ಆಹ್ವಾನಿಸುವ ಸಲುವಾಗಿ ಅವನ ಆಶ್ರಮಕ್ಕೆ ಆಗಮಿಸಿದನು.

ಆದರೆ ಆಶ್ರಮದಲ್ಲಿ ಸುಕನ್ಯೆಯು ವೃದ್ಧನಾದ ಚ್ಯವನನೊಡನೆ ಇರುವುದಕ್ಕೆ ಬದಲಾಗಿ ಸೂರ್ಯಸಮಾನವರ್ಚಸ್ಕನಾದ ಯುವಕನೊಡನೆ ಇದ್ದುದನ್ನು ಕಂಡನು. ತಂದೆಯನ್ನು ಕಂಡೊಡನೆಯೇ ಸುಕನ್ಯೆಯು ತಂದೆಯ ಪಾದಾರ ವಿಂದಗಳಿಗೆ ನಮಸ್ಕರಿಸಿದಳು. ಶರ್ಯಾತಿಯು ಮಗಳಿಗೆ ಆಶೀರ್ವಾದವನ್ನು ಮಾಡಲಿಲ್ಲ. ಮಗಳ ನಡತೆಯ ವಿಷಯದಲ್ಲಿ ತನ್ನ ಅಸಂತೋಷವನ್ನು ವ್ಯಕ್ತಪಡಿಸುತ್ತಾ ಹೇಳಿದನು : (ಶ್ಲೋಕ 13-19)

ಚಿಕೀರ್ಷಿತಂ ತೇ ಕಿಮಿದಂ ಪತಿಸ್ತ್ವಯಾ
ಪ್ರಲಮ್ಭಿತೋ ಲೋಕನಮಸ್ಕೃತೋ ಮುನಿಃ ।
ಯತ್ತ್ವಂ ಜರಾಗ್ರಸ್ತಮಸತ್ಯಸಮ್ಮತಂ
ವಿಹಾಯ ಜಾರಂ ಭಜಸೇಽಮುಮಧ್ವಗಮ್ ॥೨೦॥

"ಎಲೈ ದುಷ್ಟಳೇ! ನಿಶ್ಚಯವಾಗಿಯೂ ನೀನು ಏನು ಮಾಡಿಬಿಟ್ಟೆ? ಲೋಕನಮಸ್ಕೃತನಾದ ಮಹರ್ಷಿಯನ್ನೇ ನೀನು ವಂಚಿಸಿಬಿಟ್ಟೆಯಾ? ಮುದುಕನಾಗಿ, ಕಾಮುಕಿಯರಿಗೆ ಅಸಮ್ಮತನಾಗಿದ್ದ ಪತಿಯನ್ನು ಪರಿತ್ಯಜಿಸಿ ದಾರಿಹೋಕನಾದ ಜಾರಪುರುಷನನ್ನು ನೀನು ಸೇವಿಸುತ್ತಿರುವೆ ಯಲ್ಲವೇ?

ಕಥಂ ಮತಿಸ್ತೇಽವಗತಾನ್ಯಥಾ ಸತಾಂ
ಕುಲಪ್ರಸೂತೇ ಕುಲದೂಷಣಂ ತ್ವಿದಮ್ ।
ಬಿಭರ್ಷಿ ಜಾರಂ ಯದಪತ್ರಪಾ ಕುಲಂ
ಪಿತುಶ್ಚ ಭರ್ತುಶ್ಚ ನಯಸ್ಯಧಸ್ತಮಃ ॥೨೧॥

ನೀನು ಸತ್ಕುಲದಲ್ಲಿ ಜನಿಸಿರುವೆ. ಹೀಗಿದ್ದರೂ ಸತ್ಪುರುಷರಿಗೆ ತಕ್ಕುದಲ್ಲದ ಇಂತಹ ದುರ್ಬುದ್ಧಿಯು ಹೇಗೆತಾನೇ ನಿನಗೆ ಉಂಟಾಯಿತು? ನಿನ್ನ ಈ ವ್ಯವಹಾರವು ನಮ್ಮ ಕುಲಕ್ಕೇ ಕಳಂಕವನ್ನುಂಟುಮಾಡುವು ದಾಗಿದೆ. ನಾಚಿಕೆಗೆಟ್ಟಿರುವ ನೀನು ಮಿಂಡನನ್ನೇ ಸೇವಿಸುತ್ತಿರುವೆ. ಇದರಿಂದಾಗಿ ನಿನ್ನ ಪತಿಯ ಕುಲವನ್ನೂ ಮತ್ತು ನಿನ್ನ ತಂದೆಯ ಕುಲವನ್ನೂ ಘೋರವಾದ ನರಕಕ್ಕೆ ತಳ್ಳಿಬಿಟ್ಟಿರುವೆ."

ಶುಚಿಸ್ಮಿತೆಯಾದ ಸುಕನ್ಯೆಯು ಮುಗುಳ್ನಗುತ್ತಾ ತನ್ನನ್ನು ನಿಂದಿಸುತ್ತಿದ್ದ ತಂದೆಯಾದ ಶರ್ಯಾತಿಗೆ ಹೇಳಿದಳು :

"ತಂದೆಯೇ! ನಿನ್ನ ಅಳಿಯನಾದ ಚ್ಯವನಮಹರ್ಷಿಯು ಇವನೇ ಆಗಿದ್ದಾನೆ"–ಎಂಬುದಾಗಿ ಹೇಳಿ ಚ್ಯವನನು ಯೌವನವನ್ನೂ ಮತ್ತು ರೂಪವನ್ನೂ ಪಡೆದುಕೊಂಡ ವಿಧಾನವನ್ನು ಯಥಾವತ್ತಾಗಿ ತಂದೆಗೆ ಹೇಳಿದಳು. ಅಚ್ಚರಿಗೊಂಡ ಶರ್ಯಾತಿಯು ಸುಕನ್ಯೆಯ ವಿಷಯದಲ್ಲಿ ಪರಮಪ್ರೀತನಾಗಿ ಮಗಳನ್ನು ಬಾಚಿ ತಬ್ಬಿಕೊಂಡನು.

ಬಳಿಕ ಶರ್ಯಾತಿಯ ಅಪೇಕ್ಷೆಯಂತೆ ಚ್ಯವನನು ರಾಜನಿಂದ ಸೋಮ ಯಾಗವನ್ನು ಮಾಡಿಸಿದನು. ಅಶ್ವಿನೀದೇವತೆಗಳು ಸೋಮಪಾನಕ್ಕೆ ಅನರ್ಹರಾಗಿದ್ದರೂ ಚ್ಯವನನು ತನ್ನ ತೇಜಸ್ಸಿನ ಪ್ರಭಾವದಿಂದಲೇ ಆ ನಾಸತ್ಯರಿಗೂ ಸೋಮಪಾನವನ್ನು ಮಾಡಿಸಿದನು. ಇದನ್ನು ಸಹಿಸಿಕೊಳ್ಳ ಲಾರದೆ ಇಂದ್ರನು ಪರಮಕ್ರುದ್ಧನಾದನು. ಶರ್ಯಾತಿಯನ್ನು ಸಂಹರಿಸುವ ಸಲುವಾಗಿ ವಜ್ರಾಯುಧವನ್ನೇ ಮೇಲೆತ್ತಿದನು. ಇದಕ್ಕೆ ಪ್ರತಿಯಾಗಿ ಚ್ಯವನನು ವಜ್ರಾಯುಧಸಹಿತವಾಗಿದ್ದ ಇಂದ್ರನ ಭುಜವನ್ನೇ ಸ್ತಂಭಿಸಿ ಬಿಟ್ಟನು. ವಜ್ರಾಯುಧವನ್ನು ಪ್ರಯೋಗಿಸುವುದಿರಲಿ ; ತನ್ನ ತೋಳನ್ನೇ ಅಲುಗಾಡಿಸಲು ಇಂದ್ರನಿಗೆ ಸಾಧ್ಯವಾಗಲಿಲ್ಲ. ಆ ಸಮಯದಲ್ಲಿ ದೇವತೆಗಳೆಲ್ಲರೂ ಸೇರಿ ಅಶ್ವಿನೀದೇವತೆಗಳಿಗೂ ಸೋಮರಸವನ್ನು ಆಹುತಿಯ ಮೂಲಕವಾಗಿ ಹಂಚಿಕೊಡಲು ಒಪ್ಪಿಕೊಂಡರು. ಅವರು ವೈದ್ಯರೆಂಬ ಕಾರಣದಿಂದ ಹಿಂದೆ ಅವರಿಗೆ ಯಜ್ಞದಲ್ಲಿ ಸೋಮರಸವನ್ನು ಆಹುತಿಯ ಮೂಲಕವಾಗಿ ಹಂಚಿಕೊಡಲಾಗುತ್ತಿರಲಿಲ್ಲ. ಮಹರ್ಷಿಯಾದ ಚ್ಯವನನ ತೇಜಸ್ಸಿನ ಪ್ರಭಾವದಿಂದ ಅಶ್ವಿನೀದೇವತೆಗಳಿಗೂ ಸೋಮಾಹುತಿಯು ಲಭಿಸುವಂತಾಯಿತು.

ಪರೀಕ್ಷಿತನೇ! ಶರ್ಯಾತಿಗೆ ಉತ್ತಾನಬರ್ಹಿ, ಆನರ್ತ ಮತ್ತು ಭೂರಿಸೇನ–ಎಂಬ ಮೂವರು ಮಕ್ಕಳಿದ್ದರು. ಆನರ್ತನಿಗೆ ರೇವತನೆಂಬ ಮಗನಿದ್ದನು. ರೇವತನು ಸಮುದ್ರದ ಮಧ್ಯದಲ್ಲಿ ಕುಶಸ್ಥಲೀ ಎಂಬ ಹೆಸರಿನ ಪಟ್ಟಣವನ್ನು ನಿರ್ಮಿಸಿದನು. (ಶ್ಲೋಕ 22-28)

ರೇವತನು ಸಮುದ್ರದ ಮಧ್ಯದಲ್ಲಿದ್ದ ಕುಶಸ್ಥಲಿಯಲ್ಲೇ ಇದ್ದುಕೊಂಡು ಆನರ್ತವೇ ಮೊದಲಾದ ದೇಶಗಳನ್ನೂ ಆಳುತ್ತಿದ್ದನು. ರೇವತನಿಗೆ ನೂರು ಮಂದಿ ಮಕ್ಕಳಿದ್ದರು. ಹಿರಿಯನ ಹೆಸರು ಕಕುದ್ಮೀ. ಕಕುದ್ಮಿಯು ತನ್ನ ಮಗಳಾದ ರೇವತಿಯನ್ನು ಕರೆದುಕೊಂಡು ಅವಳಿಗೆ ಅನುರೂಪನಾದ ವರನು ಯಾರೆಂಬುದನ್ನು ತಿಳಿಯುವ ಸಲುವಾಗಿ ಬ್ರಹ್ಮನಲ್ಲಿಗೆ ಹೋದನು. ಆ ಸಮಯದಲ್ಲಿ ಬ್ರಹ್ಮಲೋಕಕ್ಕೆ ಹೋಗಲು ಯಾವ ನಿರ್ಬಂಧವೂ ಇರಲಿಲ್ಲ. ಆದರೆ ಆ ಸಮಯದಲ್ಲಿ ಬ್ರಹ್ಮನ ಸಭೆಯಲ್ಲಿ ಸಂಗೀತೋತ್ಸವವು ನಡೆಯುತ್ತಿದ್ದಿತು. ಆದುದರಿಂದ ಕಕುದ್ಮಿಗೆ ಬ್ರಹ್ಮಲೋಕಕ್ಕೆ ಹೋದೊಡನೆಯೇ ಬ್ರಹ್ಮನೊಡನೆ ಮಾತನಾಡಲು ಸಾಧ್ಯವಾಗಲಿಲ್ಲ. ಸ್ವಲ್ಪ ಹೊತ್ತು ಕಾಯಬೇಕಾಯಿತು. ಸಂಗೀತೋತ್ಸವವು ಮುಗಿದನಂತರ ಕಕುದ್ಮಿಯು ಬ್ರಹ್ಮನಿಗೆ ನಮಸ್ಕಾರಮಾಡಿ ತನ್ನ ಅಭಿಪ್ರಾಯವನ್ನು ನಿವೇದಿಸಿದನು. ಕಕುದ್ಮಿಯ ಮಾತನ್ನು ಕೇಳಿ ಬ್ರಹ್ಮನು ಗಹ-ಗಹಿಸಿ ನಗುತ್ತಾ ಹೇಳಿದನು :

(ಶ್ಲೋಕ 29-31)

ಅಹೋ ರಾಜನ್ನಿರುದ್ಧಾಸ್ತೇ ಕಾಲೇನ ಹೃದಿ ಯೇ ಕೃತಾಃ ।
ತತ್ಪುತ್ರಪೌತ್ರನಪ್ತ್ರ್ಯಣಾಂ ಗೋತ್ರಾಣಿ ಚ ನ ಶೃಣ್ಮಹೇ ॥೩೨॥
ಕಾಲೋಽಭಿಯಾತಸ್ತ್ರಿಣವಚತುರ್ಯುಗವಿಕಲ್ಪಿತಃ ।

"ಮಹಾರಾಜ! ನೀನು ನಿನ್ನ ಮನಸ್ಸಿನಲ್ಲಿ ಯಾವ ಯಾವ ರಾಜಕುಮಾರರು ನಿನ್ನ ಕನ್ಯೆಗೆ ಅನುರೂಪರಾದವರೆಂದು ಭಾವಿಸಿಕೊಂಡು ಅವರಲ್ಲಿ ಯಾರು ಉತ್ತಮರೆಂದು ಕೇಳುವ ಸಲುವಾಗಿ ನನ್ನ ಬಳಿಗೆ ಬಂದಿರುವೆಯೋ ಆ ರಾಜಕುಮಾರರೆಲ್ಲರೂ ಈ ವೇಳೆಗೆ ಕಾಲವಶರಾಗಿ ಹೋಗಿದ್ದಾರೆ. ಅವರು ಮಾತ್ರವಲ್ಲ. ಅವರ ಮಕ್ಕಳು, ಮೊಮ್ಮಕ್ಕಳು-ಮರಿ ಮಕ್ಕಳು–ಎಲ್ಲರೂ ಆಗಿಹೋಗಿದ್ದಾರೆ. ಈಗ ಅವರ ಗೋತ್ರಗಳನ್ನೂ ನಾವು ಕೇಳುವಂತಿಲ್ಲ. ನೀನಿಲ್ಲಿಗೆ ಬಂದಾಗಿನಿಂದ ಇದುವರೆಗೆ ಮನುಷ್ಯಮಾನದಲ್ಲಿ ಇಪ್ಪತ್ತೇಳು ಚತುರ್ಯುಗಗಳು ಕಳೆದುಹೋಗಿವೆ. ಆದುದರಿಂದ ನೀನೀಗಲೇ ಮನುಷ್ಯಲೋಕಕ್ಕೆ ಹೋಗು. ಈ ಸಮಯದಲ್ಲಿ ದೇವತೆಗಳಿಗೂ ದೇವನಾದ ಶ್ರೀಹರಿಯ ಅಂಶಸಂಭೂತನಾದ, ಮಹಾಬಲಿಷ್ಠನಾದ ಬಲರಾಮನು ಭೂಲೋಕದಲ್ಲಿದ್ದಾನೆ. ಈ ಕನ್ಯಾರತ್ನವನ್ನು ನರಶ್ರೇಷ್ಠನಾದ ಬಲರಾಮ

ನಿಗೆ ಮದುವೆಮಾಡಿಕೊಡು. ಪ್ರಾಣಿಗಳ ಧಾರಕನೂ ಮತ್ತು ನಿಯಾಮಕನೂ ಆಗಿ, ನಾಮಶ್ರವಣ ಮತ್ತು ಕೀರ್ತನಗಳಿಂದ ಪುಣ್ಯಪ್ರದನಾಗಿರುವ ಭಗವಾನ್ ಶ್ರೀಮನ್ನಾರಾಯಣನು ಭೂಭಾರವನ್ನು ಹೋಗಲಾಡಿಸುವುದಕ್ಕಾಗಿ ತನ್ನ ಅಂಶವಾದ ಬಲರಾಮನೊಡನೆ ಅವತರಿಸಿದ್ದಾನೆ."

ಬ್ರಹ್ಮದೇವನಿಂದ ಹೀಗೆ ನಿರ್ದೇಶಿತನಾದ ಕಕುದ್ಮಿಯು ಬ್ರಹ್ಮದೇವನಿಗೆ ಪುನಃ ನಮಸ್ಕರಿಸಿ ತನ್ನ ನಗರಿಗೆ ಹಿಂದಿರುಗಿದನು. ಅವನ ವಂಶಜರೆಲ್ಲರೂ ರಾಕ್ಷಸರ ಭಯದಿಂದಾಗಿ ಪಟ್ಟಣವನ್ನು ತ್ಯಜಿಸಿ ದಿಕ್ಕಾಪಾಲಾಗಿ ಹೊರಟುಹೋಗಿದ್ದರು. ಪಟ್ಟಣವು ನಿರ್ಜನವಾಗಿದ್ದಿತು. ಕೆಲವರು ಎಲ್ಲೆಲ್ಲೋ ಹೋಗಿ ವಾಸಮಾಡುತ್ತಿದ್ದರು. ಕಕುದ್ಮಿಯು ಸರ್ವಾಂಗಸುಂದರಿಯಾದ ತನ್ನ ಪುತ್ರಿಯಾದ ರೇವತಿಯನ್ನು ಬ್ರಹ್ಮನ ನಿರ್ದೇಶನದಂತೆ ಮಹಾಬಲಿಷ್ಠನಾದ ಬಲರಾಮನಿಗೆ ಮದುವೆಮಾಡಿಕೊಟ್ಟು ತಪಸ್ಸು ಮಾಡಲು ನರ-ನಾರಾಯಣಾಶ್ರಮದಿಂದ ಅಲಂಕೃತವಾಗಿರುವ ಬದರಿಕಾ ಶ್ರಮಕ್ಕೆ ಹೊರಟುಹೋದನು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

---

* ಕಕುದ್ಮಿಯು ಬ್ರಹ್ಮಲೋಕಕ್ಕೆ ಹೋಗುವ ವೇಳೆಗೆ ಅಲ್ಲಿ ಸಂಗೀತೋತ್ಸವವು ನಡೆಯುತ್ತಿತ್ತು. ಸಂಗೀತೋತ್ಸವವು ಮುಗಿದೊಡನೆಯೇ ಕಕುದ್ಮಿಯು ಬ್ರಹ್ಮನನ್ನು ಸಂದರ್ಶಿಸಿದನು. ಅಷ್ಟು ವೇಳೆಗೆ ಭೂಲೋಕದಲ್ಲಿ ಇಪ್ಪತ್ತೇಳು ಚತುರ್ಯುಗಗಳು ಮುಗಿದುಹೋಗಿದ್ದುವು. ಬ್ರಹ್ಮನ ಕಾಲಪರಿಮಾಣವೆಷ್ಟು? ಮನುಷ್ಯನ 365 ದಿವಸಗಳು ದೇವತೆಗಳಿಗೆ ಒಂದು ದಿನ. ಮನುಷ್ಯನ 360 ವರ್ಷಗಳು ದೇವತೆಗಳಿಗೆ ಒಂದು ವರ್ಷ. ಈ ಲೆಕ್ಕದಲ್ಲಿ 12,000 ದೇವವರ್ಷಗಳು ಅಥವಾ 43,20,000 ಮಾನುಷವರ್ಷಗಳು ಒಂದು ಚತುರ್ಯುಗ. ಕೃತ, ತ್ರೇತಾ, ದ್ವಾಪರ, ಕಲಿ–ಇವೇ ಚತುರ್ಯುಗಗಳು. 1,000 ಚತುರ್ಯುಗಗಳು = ದೇವವರ್ಷಗಳು 1,20,00,000 ಅಥವಾ ಮಾನುಷವರ್ಷಗಳು 4, 32, 00, 00, 000 ಬ್ರಹ್ಮನಿಗೆ ಒಂದು ಹಗಲು ಮತ್ತು 1, 000 ಚತುರ್ಯುಗಗಳು ಬ್ರಹ್ಮನಿಗೆ ಒಂದು ರಾತ್ರಿ. ಈ ಲೆಕ್ಕದಲ್ಲಿ

ನಾಭಾಗ ಮತ್ತು ಅಂಬರೀಷರ ಕಥೆ

ಶ್ರೀಶುಕರು ಹೇಳುತ್ತಾರೆ :

ನಾಭಾಗೋ ನಭಗಾಪತ್ಯಂ ಯಂ ತತಂ ಭ್ರಾತರಃ ಕವಿಮ್ ।
ಯವಿಷ್ಠಂ ವ್ಯಭಜನ್ದಾಯಂ ಬ್ರಹ್ಮಚಾರಿಣಮಾಗತಮ್ ॥೧॥

ಪರೀಕ್ಷಿತನೇ! ಮನುವಿನ ಮಗನಾದ ನಭಗನಿಗೆ ನಾಭಾಗನೆಂಬ ಕಿರಿಯಮಗನಿದ್ದನು. ಅವನು ಬಹಳ ಕಾಲದವರೆಗೆ ಬ್ರಹ್ಮಚರ್ಯವ್ರತ ದಿಂದಿದ್ದು ವಿದ್ಯಾಭ್ಯಾಸವನ್ನು ಮುಗಿಸಿ ಅರಮನೆಗೆ ಹಿಂದಿರುಗಿದನು. ಅವನು ಬರುವ ವೇಳೆಗೆ ನಭಗನ ಇತರ ಮಕ್ಕಳು ತಂದೆಯ ಆಸ್ತಿ ಎಲ್ಲವನ್ನೂ ಹಂಚಿಕೊಂಡುಬಿಟ್ಟಿದ್ದರು. ತಂದೆಯು ಮಾತ್ರ ನಾಭಾಗನ ಭಾಗದ ಆಸ್ತಿಯಾಗಿ ಉಳಿದಿದ್ದನು. ನಾಭಾಗನು ಬಂದೊಡನೆಯೇ ತನ್ನ ಅಣ್ಣಂದಿರನ್ನು ಕೇಳಿದನು:

"ಸಹೋದರರರೇ! ನನ್ನ ಭಾಗದ ಆಸ್ತಿಯನ್ನಾಗಿ ಯಾವುದನ್ನಿಟ್ಟಿರುವಿರಿ?" ಸಹೋದರರು ಉತ್ತರಿಸಿದರು. "ನಮ್ಮ ತಂದೆಯನ್ನೇ ನಿನ್ನ ಭಾಗಕ್ಕೆ ಬಿಟ್ಟುಬಿಟ್ಟಿದ್ದೇವೆ."

ನಾಭಾಗನು ತಂದೆಯ ಬಳಿಗೆ ಹೋಗಿ ಹೇಳಿದನು :

"ತಂದೆಯೇ! ನಿನ್ನನ್ನೇ ನನ್ನ ಪಾಲಿನ ಆಸ್ತಿಯ ಭಾಗವನ್ನಾಗಿ ಬಿಟ್ಟಿರುವೆವೆಂದು ನನ್ನ ಅಣ್ಣಂದಿರು ಹೇಳಿದರು."

"ನಾಭಾಗ! ಅವರ ಮಾತಿನಲ್ಲಿ ವಿಶ್ವಾಸವಿಡಬೇಡ. ತಂದೆಯು ಯಾವ ಮಗನಿಗೂ ಆಸ್ತಿಯ ಭಾಗವಾಗುವುದಿಲ್ಲ. ಆದರೂ ಜೀವನೋಪಾಯಕ್ಕೆ ನಿನಗೊಂದು ಮಾರ್ಗವನ್ನು ನಾನೇ ಸೂಚಿಸುವೆನು. ಒಳ್ಳೆಯ

ಕಕುದ್ಮಿಯು ಸಭೆಯಲ್ಲಿದ್ದ ಕಾಲ–ಬ್ರಹ್ಮನ ಕಾಲದ ಗಣನೆಯಂತೆ 19 ನಿಮಿಷಗಳು ಮತ್ತು $26\frac{2}{5}$ ಸೆಕೆಂಡುಗಳು. ಮಾನುಷವರ್ಷದ 27 ಚತುರ್ಯುಗಗಳು ಅಥವಾ 11, 66, 40, 000 ವರ್ಷಗಳು ಬ್ರಹ್ಮನ ಕಾಲದ 19 ನಿಮಿಷ $26\frac{2}{5}$ ಸೆಕೆಂಡುಗಳಿಗೆ ಸಮ.

ಮೇಧಾವಂತರಾದ ಅಂಗಿರಸರು ಈಗ ಒಂದು ದೊಡ್ಡ ಸತ್ರವನ್ನು ಪ್ರಾರಂಭಿಸಿರುತ್ತಾರೆ. ಅವರು ವಿದ್ವಾಂಸರೆಂಬುದು ಸತ್ಯ. ಅವರು ಎಷ್ಟೇ ಮೇಧಾವಿಗಳಾಗಿದ್ದರೂ ಆರನೆಯ ದಿವಸದಲ್ಲಿ ಯಜ್ಞಕರ್ಮವನ್ನು ಆರಂಭಿಸುವಾಗ ಅವರಿಗೆ ಮಂಕುಕವಿಯುತ್ತದೆ. ಮುಂದೇನು ಮಾಡ ಬೇಕೆಂಬುದೇ ತಿಳಿಯುವುದಿಲ್ಲ. ಆ ಸಮಯದಲ್ಲಿ ನೀನು ಆ ವಿದ್ವಾಂಸರ ಬಳಿಗೆ ಹೋಗಿ ವಿಶ್ವೇದೇವತೆಗಳಿಗೆ ಸಂಬಂಧಿಸಿದ ಎರಡು ಸೂಕ್ತಗಳನ್ನು ಉಪದೇಶಿಸು. ಆ ಸೂಕ್ತಗಳನ್ನು ಪುನಶ್ಚರಣೆಮಾಡಿದೊಡನೆಯೇ ಅವರು ಸ್ವರ್ಗಕ್ಕೆ ಹೊರಟುಬಿಡುತ್ತಾರೆ. ಹಾಗೆ ಸ್ವರ್ಗಕ್ಕೆ ಹೋಗುವ ಸಮಯದಲ್ಲಿ ಯಜ್ಞಶಿಷ್ಟವಾದ ಸಂಪತ್ತೆಲ್ಲವನ್ನೂ ನಿನಗೆ ಕೊಟ್ಟುಹೋಗುತ್ತಾರೆ. ಆದುದ ರಿಂದ ನೀನು ಈಗಲೇ ಅವರ ಬಳಿಗೆ ಹೋಗು."

ನಾಭಾಗನು ತಂದೆಯು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು. ತಂದೆಯು ಹೇಳಿದ್ದಂತೆಯೇ ಅಂಗಿರಸರು ಯಜ್ಞದಲ್ಲಿ ಉಳಿದಿದ್ದ ಸಕಲೈಶ್ವರ್ಯವನ್ನೂ ನಾಭಾಗನಿಗೆ ಕೊಟ್ಟು ಸ್ವರ್ಗಕ್ಕೆ ಹೊರಟುಹೋದರು. (ಶ್ಲೋಕ 2-5)

ನಾಭಾಗನು ಐಶ್ವರ್ಯವನ್ನು ಸಂಗ್ರಹಿಸಿಕೊಳ್ಳುತ್ತಿರುವ ಸಮಯಕ್ಕೆ ಸರಿಯಾಗಿ ಉತ್ತರದಿಕ್ಕಿನಿಂದ ಕಪ್ಪಾಗಿದ್ದ ಒಬ್ಬ ಮನುಷ್ಯನು ಆಗಮಿಸಿ ಹೇಳಿದನು :

"ವಿಪ್ರೋತ್ತಮನೇ! **'ಮಮೇದಂ ವಾಸ್ತುಕಂ ವಸು'** ಈ ಯಜ್ಞಮಂಟಪದಲ್ಲಿ ಯಾವ ಯಾವ ವಸ್ತುಗಳು ಉಳಿದಿವೆಯೋ ಅವೆಲ್ಲವೂ ಶ್ರುತಿವಚನಪ್ರಮಾಣದಂತೆ ನನಗೆ ಸೇರಿದುವುಗಳಾಗಿವೆ."*

ಒಡನೆಯೇ ಮನುವಿನ ಮೊಮ್ಮಗನಾದ ನಾಭಾಗನು ಹೇಳಿದನು :

"**ಮಮೇದಮೃಷಿಭಿರ್ದತ್ತಂ**–ಈ ಎಲ್ಲವೂ ನನಗೆ ಅಂಗಿರಸ ಋಷಿಗಳಿಂದಲೇ ಕೊಡಲ್ಪಟ್ಟಿವೆ."

"**ಸ್ಯಾನ್ನೌ ತೇ ಪಿತರಿ ಪ್ರಶ್ನಃ** –ಈ ನಮ್ಮ ವಿವಾದವು ನಿನ್ನ ತಂದೆಯ

---

* ಯಜ್ಞಶೇಷವೆಲ್ಲವೂ ರುದ್ರನದು ಎಂಬುದಕ್ಕೆ ಶ್ರುತಿವಾಕ್ಯವು ಹೀಗಿದೆ :

'ಉಚ್ಛೇಷಣ ಭಾಗೋ ವೈ ರುದ್ರಃ' –ಯಜ್ಞಶಾಲೆಯಲ್ಲಿ ಉಳಿದುದು ರುದ್ರನ ಭಾಗವೆನಿಸುವುದು.

ಮುಂದೆಯೇ ಇತ್ಯರ್ಥಕ್ಕಾಗಿ ಇಡಲ್ಪಡಲಿ"–ಎಂದು ಕಾಲಪುರುಷನು ಹೇಳಿದನು.

ಕಾಲಪುರುಷನ ಮಾತಿನಂತೆ ನಾಭಾಗನು ತನ್ನ ತಂದೆಯನ್ನೇ ಪ್ರಶ್ನಿಸಿದನು:

"ಅಪ್ಪ! ಯಜ್ಞಶಿಷ್ಟವಾಗಿರುವ ಸಂಪತ್ತು ಯಾರಿಗೆ ಸೇರುತ್ತದೆ?"

ತಂದೆಯು ಕಾಲಪುರುಷನ ಪರವಾಗಿಯೇ ತೀರ್ಪನ್ನಿತ್ತನು.

ಯಜ್ಞವಾಸ್ತುಗತಂ ಸರ್ವಮುಚ್ಛಿಷ್ಟಮೃಷಯಃ ಕ್ವಚಿತ್ ।
ಚಕ್ರುರ್ವಿಭಾಗಂ ರುದ್ರಾಯ ಸ ದೇವಃ ಸರ್ವಮರ್ಹತಿ ॥೮॥

"ಪುತ್ರ! ಒಮ್ಮೆ ದಕ್ಷಪ್ರಜಾಪತಿಯು ಯಜ್ಞಮಾಡುತ್ತಿದ್ದಾಗ ಋಷಿಗಳೆಲ್ಲರೂ ಸೇರಿ ಯಜ್ಞಭೂಮಿಯಲ್ಲಿ ಯಜ್ಞವು ಮುಗಿದನಂತರ ಕಡೆಯಲ್ಲಿ ಉಳಿಯುವ ಸಮಸ್ತವಸ್ತುಗಳೂ ಶ್ರೀರುದ್ರನ ಭಾಗವೆಂದೂ ಅವು ರುದ್ರನಿಗೆ ಸೇರತಕ್ಕುವುಗಳೆಂದೂ ನಿರ್ಣಯಿಸಿದರು. ಆದುದರಿಂದ ರುದ್ರದೇವನೇ ಅಂಗಿರಸನ ಯಜ್ಞಭೂಮಿಯಲ್ಲಿ ಉಳಿದಿರುವ ಸಮಸ್ತವಾದ ಐಶ್ವರ್ಯವನ್ನೂ ಪಡೆಯಲು ಅರ್ಹನಾಗಿರುತ್ತಾನೆ."

ತಂದೆಯ ಮಾತನ್ನು ಕೇಳುತ್ತಲೇ ನಾಭಾಗನು ಕಾಲಪುರುಷನ (ರುದ್ರನ) ಬಳಿಗೆ ಹೋಗಿ ಅವನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಹೇಳಿದನು:

"ಪ್ರಭುವೇ! ಯಜ್ಞಭೂಮಿಯಲ್ಲಿ ಉಳಿದಿರುವ ಸಮಸ್ತವಸ್ತುಗಳೂ ನಿನಗೇ ಸೇರಿದ್ದಾಗಿವೆ. ನನ್ನ ತಂದೆಯೂ ಹೀಗೆಯೇ ಹೇಳಿರುವನು. ನನ್ನದಲ್ಲದೇ ಇರುವುದನ್ನು ನನ್ನದೆಂದು ಹೇಳಿ ಅಪರಾಧಮಾಡಿದ್ದೇನೆ. ತಲೆಬಾಗಿ ನಾನು ನಿನ್ನಿಂದ ಕ್ಷಮೆಯನ್ನು ಬೇಡುತ್ತೇನೆ."

"ನಾಭಾಗ! ನಿಮ್ಮ ತಂದೆಯು ಧರ್ಮಾನುಕೂಲವಾದ ನಿರ್ಣಯ ವನ್ನೇ ಹೇಳಿದ್ದಾನೆ. ನೀನೂ ಕೂಡ ಸತ್ಯವನ್ನೇ ಹೇಳಿರುವೆ. ಇದರಿಂದ ನಾನು ಸುಪ್ರೀತನಾಗಿದ್ದೇನೆ. ಮಂತ್ರದ್ರಷ್ಟೃವಾದ ನಿನಗೆ ಸನಾತನಬ್ರಹ್ಮ ತತ್ತ್ವದ ಜ್ಞಾನವನ್ನು ಉಪದೇಶಿಸುತ್ತೇನೆ. ಈ ಯಾಗಭೂಮಿಯಲ್ಲಿ

ಯಜ್ಞವು ಮುಗಿದನಂತರ ಯಾವ ಐಶ್ವರ್ಯಗಳು ಉಳಿದಿವೆಯೋ ಅವೆಲ್ಲವನ್ನೂ ನಾನು ನಿನಗೇ ಕೊಟ್ಟುಬಿಡುತ್ತೇನೆ. ಎಲ್ಲವನ್ನೂ ಸ್ವೀಕರಿಸು."

ಹೀಗೆ ಹೇಳಿ ಸತ್ಯಪ್ರೇಮಿಯಾದ ಭಗವಾನ್ ರುದ್ರದೇವನು ಐಶ್ವರ್ಯವೆಲ್ಲವನ್ನೂ ನಾಭಾಗನಿಗೆ ಕೊಟ್ಟು ಅಂತರ್ಧಾನಹೊಂದಿದನು.

ಯ ಏತತ್ಸಂಸ್ಮರೇತ್ಪ್ರಾತಃ ಸಾಯಂ ಚ ಸುಸಮಾಹಿತಃ ।
ಕವಿರ್ಭವತಿ ಮನ್ತ್ರಜ್ಞೋ ಗತಿಂ ಚೈವ ತಥಾತ್ಮನಃ ॥೧೨॥

ಯಾವ ಮನುಷ್ಯನು ಪ್ರಾತಃಕಾಲ-ಸಾಯಂಕಾಲಗಳಲ್ಲಿ ಏಕಾಗ್ರಚಿತ್ತನಾಗಿ ಪವಿತ್ರವಾದ ಈ ಉಪಾಖ್ಯಾನವನ್ನು ಸ್ಮರಿಸುವನೋ ಅವನು ಕವಿಯಾಗುತ್ತಾನೆ. (ಪ್ರತಿಭಾಶಾಲಿಯಾಗುತ್ತಾನೆ.) ಮಂತ್ರಜ್ಞನಾಗುತ್ತಾನೆ. ಕಡೆಯಲ್ಲಿ ಆತ್ಮಜ್ಞಾನಿಯೂ ಆಗುತ್ತಾನೆ.

ನಾಭಾಗನ ಮಗನಾದ ಅಂಬರೀಷನು ಪರಮಭಾಗವತೋತ್ತಮನು, ಉದಾರಿಯು, ಧರ್ಮಾತ್ಮನು. ಯಾರಿಂದಲೂ ತಡೆಯಲ್ಪಡದಿರುವ ಅಪ್ರತಿಹತವಾದ ಬ್ರಹ್ಮಶಾಪವು ಕೂಡ ಅಂಬರೀಷನನ್ನು ಒಮ್ಮೆಯಾದರೂ ಮುಟ್ಟಲಿಲ್ಲ."

ಶುಕಮಹರ್ಷಿಗಳು ಹೇಳಿದ ಈ ಮಾತನ್ನು ಕೇಳಿ ಪರೀಕ್ಷಿತನು ಪ್ರಶ್ನಿಸುತ್ತಾನೆ :

ಭಗವನ್ ಶ್ರೋತುಮಿಚ್ಛಾಮಿ ರಾಜರ್ಷೇಸ್ತಸ್ಯ ಧೀಮತಃ ।
ನ ಪ್ರಾಭೂದ್ಯತ್ರ ನಿರ್ಮುಕ್ತೋ ಬ್ರಹ್ಮದಣ್ಡೋ ದುರತ್ಯಯಃ ॥೧೪॥

"ಮಹರ್ಷಿಗಳೇ! ನಾನು ಧೀಮಂತನಾದ ಆ ರಾಜರ್ಷಿ ಅಂಬರೀಷನ ಚರಿತ್ರೆಯನ್ನು ಕೇಳಬೇಕೆಂದಿರುತ್ತೇನೆ. ಕ್ರುದ್ಧನಾದ ಬ್ರಾಹ್ಮಣನು ಪ್ರಯೋಗಿಸಿದ, ಎದುರಿಸಲು ಅಸಾಧ್ಯವಾದ ಬ್ರಹ್ಮದಂಡವು ಕೂಡ ಮಹಾಭಕ್ತನಾದ ಅಂಬರೀಷನ ಮೇಲೆ ಯಾವ ವಿಧವಾದ ಪರಿಣಾಮವನ್ನೂ ಉಂಟುಮಾಡಲಿಲ್ಲವಲ್ಲವೇ! ಅದ್ಭುತ! ಮಹಾಶ್ಚರ್ಯ! ಅಂತಹ ಮಹಾನುಭಾವನ ಚರಿತ್ರೆಯನ್ನು ದಯಮಾಡಿ ಹೇಳಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ಅಂಬರೀಷನು ಮಹಾಭಾಗ್ಯಶಾಲಿಯಾಗಿ

ದ್ದನು. ಏಳು ದ್ವೀಪಗಳಿಂದ ಕೂಡಿದ ಅಖಂಡಭೂಮಂಡಲಕ್ಕೂ ಅವನು ಒಡೆಯನಾಗಿದ್ದನು. ಎಷ್ಟು ವೆಚ್ಚಮಾಡಿದರೂ ಮುಗಿಯದಿದ್ದ ಅಪಾರವಾದ ಐಶ್ವರ್ಯವನ್ನೂ ಎಣೆಯಿಲ್ಲದ ವೈಭವವನ್ನೂ ಅಂಬರೀಷನು ಹೊಂದಿದ್ದನು. ಸಾಮಾನ್ಯಮನುಷ್ಯರಿಗೆ ಅತಿದುರ್ಲಭವೆನಿಸಿದ್ದ ಅತುಲೈಶ್ವರ್ಯವನ್ನೂ ಅಪಾರವಾದ ಭೋಗಸಾಮಗ್ರಿಗಳನ್ನೂ ಹೊಂದಿದ್ದರೂ ಕೂಡ ರಾಜನು ಅವೆಲ್ಲವನ್ನೂ ಕನಸಿನಂತೆ ಭಾವಿಸಿದ್ದನು. ಯಾವ ವೈಭವದಿಂದ ಮತ್ತು ಸಂಪತ್ತಿನಿಂದ ಮನುಷ್ಯನು ತಮೋಗುಣದಲ್ಲಿ ಮುಳುಗಿ ಅಹಂಕಾರ-ಮಮಕಾರಗಳನ್ನು ಹೊಂದುವನೋ ಅಂತಹ ವೈಭವವೂ ಒಂದು ದಿನ ನಾಶವಾಗುವುದೆಂಬುದನ್ನು ಅಂಬರೀಷನು ತಿಳಿದಿದ್ದನು. ಭಗವಂತನಾದ ವಾಸುದೇವನಲ್ಲಿಯೂ ಮತ್ತು ಅವನ ಭಕ್ತರಲ್ಲಿಯೂ ಅಂಬರೀಷನಿಗೆ ಅತ್ಯಾದರವಿದ್ದಿತು. ಭಗವಂತನಲ್ಲಿ ಅನನ್ಯಭಕ್ತಿಯನ್ನೂ ಅವನ ಭಕ್ತರಲ್ಲಿ ಅತ್ಯಾದರವನ್ನೂ ಅಂಬರೀಷನು ಹೊಂದಿದನಂತರ ಅತುಲೈಶ್ವರ್ಯಗಳಿಂದಲೂ ಭೋಗವೈಭವಗಳಿಂದಲೂ ಕೂಡಿರುವ ಈ ವಿಶ್ವವನ್ನು ಒಂದು ಮಣ್ಣುಹೆಂಟೆಗೆ ಸಮಾನವಾಗಿ ಕಂಡನು. (ಶ್ಲೋಕ 15-17)

ಸ ವೈ ಮನಃ ಕೃಷ್ಣಪದಾರವಿನ್ದಯೋ-
ರ್ವಚಾಂಸಿ ವೈಕುಣ್ಠಗುಣಾನುವರ್ಣನೇ
ಕರೌ ಹರೇರ್ಮನ್ದಿರಮಾರ್ಜನಾದಿಷು
ಶ್ರುತಿಂ ಚಕಾರಾಚ್ಯುತಸತ್ಕಥೋದಯೇ ॥೧೮॥

ಪರಮಭಾಗವತನಾದ ಅಂಬರೀಷನು ತನ್ನ ಮನಸ್ಸನ್ನು ಭಗವಂತನಾದ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಲೀನಗೊಳಿಸಿದ್ದನು. ಅವನ ಮಾತುಗಳೆಲ್ಲವೂ ವೈಕುಂಠನ ಅನಂತಗುಣಗಳ ವರ್ಣನೆಯೇ ಆಗಿದ್ದುವು. ಶ್ರೀಕೃಷ್ಣನ ದಿವ್ಯಚರಿತ್ರೆಯ ಕೀರ್ತನೆಯನ್ನು ಬಿಟ್ಟು ಅವನು ಬೇರೆ ಮಾತುಗಳನ್ನೇ ಆಡುತ್ತಿರಲಿಲ್ಲ. ಕೈಗಳನ್ನು ಶ್ರೀಹರಿಯ ಮಂದಿರಗಳನ್ನು ಗುಡಿಸಲು ಮತ್ತು ತೊಳೆಯಲು ಮೀಸಲಾಗಿಟ್ಟಿದ್ದನು. ಅಚ್ಯುತನ ಮಂಗಳಮಯವಾದ ಕಥೆಗಳನ್ನೂ ಕೀರ್ತನಗಳನ್ನೂ ಕೇಳಲು ಕಿವಿಗಳನ್ನು ಮೀಸಲಾಗಿಟ್ಟಿದ್ದನು.

ಮುಕುನ್ದಲಿಙ್ಗಾಲಯದರ್ಶನೇ ದೃಶೌ
ತದ್ಭೃತ್ಯಗಾತ್ರಸ್ಪರ್ಶೇಽಙ್ಗಸಙ್ಗಮಮ್ ।
ಘ್ರಾಣಂ ಚ ತತ್ಪಾದಸರೋಜಸೌರಭೇ
ಶ್ರೀಮತ್ತುಲಸ್ಯಾ ರಸನಾಂ ತದರ್ಪಿತೇ ॥೧೯॥

ಮುಕುಂದನ ವಿಗ್ರಹಗಳನ್ನೂ ದೇವಸ್ಥಾನಗಳನ್ನೂ ನೋಡುವ ಸಲುವಾಗಿ ಕಣ್ಣುಗಳನ್ನು ಮೀಸಲಾಗಿಟ್ಟಿದ್ದನು. ಭಗವದ್ಭಕ್ತರಾದ ಸಾಧುಗಳ ಅಂಗಸ್ಪರ್ಶಕ್ಕಾಗಿ ಸ್ಪರ್ಶಸುಖವನ್ನು ಕೊಡುವ ಚರ್ಮವನ್ನು ಮೀಸಲಾಗಿಟ್ಟಿದ್ದನು. ದಯಾಮಯನಾದ ಭಗವಂತನ ಚರಣಕಮಲಗಳಲ್ಲಿ ಬಿದ್ದಿರುವ ತುಳಸಿಯನ್ನು ಆಘ್ರಾಣಿಸಲು ಮೂಗನ್ನು ಮೀಸಲಾಗಿಟ್ಟಿದ್ದನು. ಭಗವಂತನಿಗೆ ಅರ್ಪಿಸಿದ ಪ್ರಸಾದಸೇವನೆಗಾಗಿ ನಾಲಿಗೆಯನ್ನು ಮೀಸಲಾಗಿಟ್ಟಿದ್ದನು.

ಪಾದೌ ಹರೇಃ ಕ್ಷೇತ್ರಪದಾನುಸರ್ಪಣೇ
ಶಿರೋ ಹೃಷೀಕೇಶಪದಾಭಿವನ್ದನೇ ।
ಕಾಮಂ ಚ ದಾಸ್ಯೇ ನ ತು ಕಾಮಕಾಮ್ಯಯಾ
ಯಥೋತ್ತಮಶ್ಲೋಕಜನಾಶ್ರಯಾ ರತಿಃ ॥೨೦॥

ಭಗವಂತನ ದಿವ್ಯಕ್ಷೇತ್ರಗಳ ಯಾತ್ರೆಯನ್ನು ಮಾಡುವ ಸಲುವಾಗಿ ಅಂಬರೀಷನ ಪಾದಗಳು ಮೀಸಲಾಗಿದ್ದುವು. ಹೃಷೀಕೇಶನ ದಿವ್ಯಪಾದ ಗಳನ್ನು ವಂದಿಸುವುದಕ್ಕಾಗಿ ಶಿರಸ್ಸು ಮೀಸಲಾಗಿ ಇಡಲ್ಪಟ್ಟಿದ್ದಿತು. ಭಗವಂತನ ದಾಸ್ಯಮಾಡಬೇಕೆಂಬುದೇ ಅವನ ಮುಖ್ಯಕಾಮನೆಯಾಗಿ ದ್ದಿತು. ಆ ದಾಸ್ಯವೂ ಯಾವುದಾದರೂ ಕಾಮ್ಯವಸ್ತುಗಳನ್ನು ಪಡೆದು ಕೊಳ್ಳುವುದಕ್ಕಾಗಿ ಅಲ್ಲ. ಅದು ನಿಷ್ಕಾಮದಾಸ್ಯ. ಭಗವಂತನ ಪ್ರೀತ್ಯರ್ಥವಾಗಿ ದಾಸ್ಯಕಾಮನೆ. ಉತ್ತಮಕೀರ್ತಿಯುಳ್ಳ ಭಗವದ್ಭಕ್ತರನ್ನು ಅವನ ಪ್ರೀತಿಯು ಆಶ್ರಯಿಸಿದ್ದಿತು. ಶ್ರೀಕೃಷ್ಣನ ಭಕ್ತರಲ್ಲಿ ಅಂಬರೀಷನಿಗೆ ಅಪಾರವಾದ ಪ್ರೀತಿಯಿದ್ದಿತು.

ಹೀಗೆ ಅಂಬರೀಷನು ತನ್ನ ಸಕಲಕರ್ಮಕಲಾಪಗಳನ್ನೂ ಯಜ್ಞ ಪುರುಷನಾದ, ಇಂದ್ರಿಯಾತೀತನಾದ ಭಗವಂತನ ಸೇವೆಯಲ್ಲಿ ತೊಡಗಿಸಿ

ಭಗವಂತನನ್ನೇ ಸರ್ವಸ್ವರೂಪನೆಂದೂ ಸರ್ವಾತ್ಮನೆಂದೂ ಭಾವಿಸಿ, ಬ್ರಾಹ್ಮಣರ ಆಜ್ಞೆಗೆ ಅನುಸಾರವಾಗಿ ಈ ಭೂಮಂಡಲವನ್ನು ಶಾಸನ ಮಾಡುತ್ತಿದ್ದನು.

ಅಂಬರೀಷನು ಸರಸ್ವತೀನದಿಯ ಪ್ರವಾಹಕ್ಕೆ ಎದುರಾಗಿದ್ದ ಮರುಭೂಮಿಯಲ್ಲಿ ವಸಿಷ್ಠ, ಅಸಿತ, ಗೌತಮ–ಇವರೇ ಮೊದಲಾದ ಋತ್ವಿಜರ ಸಮ್ಮುಖದಲ್ಲಿ ಬಹುದಕ್ಷಿಣೆಗಳುಳ್ಳ, ಸರ್ವಾಂಗಪರಿಪೂರ್ಣವಾದ ಹಲವಾರು ಅಶ್ವಮೇಧಯಾಗಗಳನ್ನು ಮಾಡಿ ಯಜ್ಞಪುರುಷನಾದ ಶ್ರೀಕೃಷ್ಣನನ್ನು ಆರಾಧಿಸಿದನು. ಅಂಬರೀಷನು ಮಾಡಿದ ಯಜ್ಞದಲ್ಲಿ ದೇವತೆಗಳೊಡನೆ ಸದಸ್ಯರೂ ಋತ್ವಿಜರೂ ಮತ್ತು ಜನಗಳೂ ಕುಳಿತಿದ್ದರು. ಎಲ್ಲರೂ ಸುಂದರವಾದ ವಸ್ತ್ರಗಳನ್ನು ಧರಿಸಿದ್ದರಿಂದಲೂ, ಸುಂದರವಾದ ರೂಪವುಳ್ಳವರಾಗಿದ್ದುದರಿಂದಲೂ, ರೆಪ್ಪೆಯಾಡದಿದ್ದ ಸಮಯದಲ್ಲಿ ದೇವತೆಗಳಂತೆಯೇ ಸಮಾನರೂಪರಾಗಿ ಪ್ರಕಾಶಿಸುತ್ತಿದ್ದರು. ಅಂಬರೀಷನ ಪ್ರಜೆಗಳು, ಮಹಾತ್ಮರು ಹಾಡುತ್ತಿದ್ದ ಭಗವಂತನ ಉತ್ತಮಚರಿತ್ರೆಗಳನ್ನು ಭಕ್ತಿ ಭಾವದಿಂದ ಕೇಳುತ್ತಿದ್ದರು ಮತ್ತು ಶ್ರೀಹರಿಯ ಅನಂತಾನಂತಗುಣಗಳನ್ನು ಗಾನಮಾಡುತ್ತಿದ್ದರು. ಹೀಗೆ ಭಗವದ್ಭಕ್ತಿಯಲ್ಲಿ ಮುಳುಗಿಹೋಗಿದ್ದ ಅವರಿಗೆ ದೇವತೆಗಳಿಗೆ ಅತ್ಯಂತಪ್ರಿಯವಾದ ಸ್ವರ್ಗಸುಖವೂ ಬೇಕಾಗಲಿಲ್ಲ. ಅಂಬರೀಷನ ಪ್ರಜೆಗಳು ನಿತ್ಯ-ನಿರಂತರವಾಗಿ ತಮ್ಮ ಹೃದಯಗುಹೆಯಲ್ಲಿ ಶ್ರೀಕೃಷ್ಣನನ್ನು ಕಾಣುತ್ತಿದ್ದರು. ಆದುದರಿಂದಲೇ ಅವರಿಗೆ ಸಿದ್ಧರಿಗೂ ದುರ್ಲಭವಾದ ಅಣಿಮಾದಿ ಅಷ್ಟೈಶ್ವರ್ಯಗಳೂ ಹರ್ಷವನ್ನುಂಟುಮಾಡುತ್ತಿರಲಿಲ್ಲ. ಆತ್ಮಾನಂದದ ಮುಂದೆ ಎಲ್ಲ ವಸ್ತುಗಳೂ ಅವರಿಗೆ ತುಚ್ಛವಾಗಿ ಕಾಣುತ್ತಿದ್ದುವು.

ಹೀಗೆ ಅಂಬರೀಷಮಹಾರಾಜನು ಭಕ್ತಿಯೋಗದಿಂದ ಕೂಡಿದ ತಪಸ್ಸಿನಿಂದಲೂ, ಸ್ವಧರ್ಮವಾದ ಪ್ರಜಾಪಾಲನೆಯಿಂದಲೂ, ಶ್ರೀಹರಿಯನ್ನು ಆರಾಧಿಸುತ್ತಿದ್ದನು. ಹರಿಯಲ್ಲಿಯೇ ಮನಸ್ಸನ್ನು ಸಂಪೂರ್ಣವಾಗಿ ನೆಲೆಗೊಳಿಸಿದ್ದ ಅಂಬರೀಷನು ಮೆಲ್ಲ-ಮೆಲ್ಲಗೆ ಸಮಸ್ತವಾದ ಸಂಗಗಳನ್ನೂ ದೂರೀಕರಿಸಿದನು. ಅರಮನೆಗಳು, ಪತ್ನೀ-ಪುತ್ರ-ಬಂಧುಗಳು, ಶ್ರೇಷ್ಠವಾದ ಆನೆಗಳು, ರಥ-ಕುದುರೆ-ಕಾಲಾಳುಗಳು, ಅಕ್ಷಯವಾದ ರತ್ನಾಭರಣಗಳು,

ಆಯುಧಗಳು, ಅನಂತವಾದ ಭಂಡಾರಗಳು–ಇವುಗಳೆಲ್ಲವೂ ಅನಿತ್ಯವಾದು ವುಗಳೆಂದು ಭಾವಿಸಿ ಇವುಗಳೆಲ್ಲದರಿಂದಲೂ ವಿರಕ್ತನಾದನು.

(ಶ್ಲೋಕ 21-27)

ಅಂಬರೀಷನ ಅನನ್ಯವಾದ ಮತ್ತು ಪ್ರೇಮಮಯವಾದ ಭಕ್ತಿಯಿಂದ ಸುಪ್ರೀತನಾದ ಶ್ರೀಹರಿಯು, ರಾಜನ ರಕ್ಷಣೆಗಾಗಿ–ವಿರೋಧಿಗಳಿಗೆ ಭಯಂಕರವಾದ, ಭೃತ್ಯರಿಗೆ ರಕ್ಷಕವಾಗಿದ್ದ ಸುದರ್ಶನಚಕ್ರವನ್ನು ದಯ ಪಾಲಿಸಿದನು. ಅಂಬರೀಷಮಹಾರಾಜನ ಪತ್ನಿಯು ಕೂಡ ರಾಜನಂತೆಯೇ ಧರ್ಮಶೀಲಳಾಗಿಯೂ, ಸಂಸಾರದಿಂದ ವಿರಕ್ತಳಾಗಿಯೂ, ಭಕ್ತಿಪರಾಯಣೆ ಯಾಗಿಯೂ ಇದ್ದಳು.

ಒಮ್ಮೆ ಮಹಾರಾಜನು ತನ್ನ ಪತ್ನಿಯೊಡನೆ ಶ್ರೀಕೃಷ್ಣನನ್ನು ಆರಾಧಿಸುವ ಸಲುವಾಗಿ ದ್ವಾದಶೀಪ್ರಧಾನವಾದ ಏಕಾದಶೀವ್ರತವನ್ನು ವರ್ಷಪರ್ಯಂತವಾಗಿ ಕೈಗೊಂಡನು. ವ್ರತವು ಪೂರ್ಣವಾದನಂತರ ಕಾರ್ತಿಕ ಮಾಸದಲ್ಲಿ ರಾಜನು ಮೂರು ರಾತ್ರಿಗಳು ಉಪವಾಸವಿದ್ದು, ಯಮುನಾ ನದಿಯಲ್ಲಿ ಸ್ನಾನಮಾಡಿ, ಮಧುವನದಲ್ಲಿ ಭಗವಂತನಾದ ಶ್ರೀಹರಿಯನ್ನು ಪೂಜಿಸಿದನು. ರಾಜನು ಮಹಾಭಿಷೇಕವಿಧಿಯಿಂದ ಸಮಸ್ತವಾದ ಪರಿಕರ ಗಳಿಂದಲೂ (ಪಂಚಾಮೃತವೇ ಮೊದಲಾದುವುಗಳಿಂದ) ಶ್ರೀಕೇಶವನನ್ನು ಅಭಿಷೇಚಿಸಿ ಕೇಶವನಲ್ಲಿಯೇ ಮನಸ್ಸನ್ನು ಲೀನಗೊಳಿಸಿ, ವಸ್ತ್ರಾಭರಣ-ಚಂದನಮಾಲೆಗಳಿಂದಲೂ, ಅರ್ಘ್ಯ-ಪಾದ್ಯಾದಿಗಳಿಂದಲೂ ಶ್ರೀಭಗವಂತ ನನ್ನು ಪೂಜಿಸಿದನು. ಅಂತೆಯೇ ಮಹಾಭಾಗ್ಯಶಾಲಿಗಳಾದ ಸಿದ್ಧಾರ್ಥರಾದ ಬ್ರಾಹ್ಮಣಶ್ರೇಷ್ಠರನ್ನೂ ಭಕ್ತಿಪೂರ್ವಕವಾಗಿ ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿದನು. ಬಳಿಕ ರಾಜನು ಬ್ರಾಹ್ಮಣರಿಗೆ ರುಚಿಕರವಾದ ಮತ್ತು ಗುಣವತ್ತರವಾದ ಭೋಜನವನ್ನು ಮಾಡಿಸಿ, ಸಮಲಂಕೃತವಾದ ಆರು ಕೋಟಿ ಗೋವುಗಳನ್ನು ಬ್ರಾಹ್ಮಣರಿಗೆ ದಾನವಾಗಿಕೊಟ್ಟನು. ಆ ಗೋವುಗಳ ಕೊಂಬುಗಳು ಸುವರ್ಣದಿಂದಲೂ ಕಾಲುಗಳು ಬೆಳ್ಳಿಯಿಂದಲೂ ಸಮಲಂಕೃತವಾಗಿದ್ದುವು. ಅವುಗಳಿಗೆ ಸುಂದರವಾದ ವಸ್ತ್ರಗಳನ್ನು ಹೊದ್ದಿಸಿದ್ದರು. ಅವೆಲ್ಲವೂ ಹೇರಳವಾಗಿ ಹಾಲುಕೊಡುತ್ತಿದ್ದುವು. ಒಳ್ಳೆಯ ಸ್ವಭಾವದುವುಗಳಾಗಿದ್ದುವು. ಪಡ್ಡೇ ಹಸುಗಳಾಗಿದ್ದುವು. ಸುಂದರವಾಗಿ ದ್ದುವು. ಕರುಗಳ ಸಮೇತವಾಗಿದ್ದುವು . ಹಸುಗಳೊಡನೆ ಹಾಲುಕರೆಯುವ

ಪಾತ್ರೆಗಳನ್ನೂ ರಾಜನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಇಂತಹ ಸುಂದರವಾದ ಅಸಂಖ್ಯಾತವಾದ ಗೋವುಗಳನ್ನು ಪಡೆದು ತಮ್ಮ ಕಾಮನೆಗಳನ್ನು ಪೂರೈಸಿಕೊಂಡ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು ಅಂಬರೀಷಮಹಾರಾಜನು ವ್ರತದ ಪಾರಣೆಗೆ ಸಿದ್ಧನಾಗುತ್ತಿದ್ದನು.

ಇದೇ ಸಮಯಕ್ಕೆ ಸರಿಯಾಗಿ ಶಾಪಕೊಡುವುದರಲ್ಲಿಯೂ ಮತ್ತು ವರಕೊಡುವುದರಲ್ಲಿಯೂ ಸಮರ್ಥರಾದ *ದುರ್ವಾಸರು ಅತಿಥಿಯ ರೂಪದಲ್ಲಿ ರಾಜನ ಅರಮನೆಗೆ ಬಂದರು. ಅಂಬರೀಷಮಹಾರಾಜನು ಮಹರ್ಷಿಗಳು ಬಂದೊಡನೆಯೇ ಮೇಲೆದ್ದು ನಿಂತು ಅವರಿಗೆ ಆಸನವನ್ನಿತ್ತು ಕುಳ್ಳಿರಿಸಿ ವಿಧ-ವಿಧವಾದ ಸಾಮಗ್ರಿಗಳಿಂದ ಅತಿಥಿಯ ರೂಪದಲ್ಲಿ ಆಗಮಿಸಿದ್ದ ಅವರನ್ನು ಸತ್ಕರಿಸಿದನು. ದುರ್ವಾಸಮಹರ್ಷಿಗಳ ಪಾದಾರವಿಂದಗಳಲ್ಲಿ ನಮಸ್ಕರಿಸಿ ಅಂಬರೀಷನು ಭೋಜನಮಾಡಬೇಕೆಂದು ಮಹರ್ಷಿಗಳನ್ನು ಪ್ರಾರ್ಥಿಸಿದನು. ದುರ್ವಾಸರು ರಾಜನ ಪ್ರಾರ್ಥನೆಯನ್ನು ಅಂಗೀಕರಿಸಿ ಆವಶ್ಯಕವಾದ ಕರ್ಮಗಳನ್ನು ಮಾಡುವ ಸಲುವಾಗಿ ನದಿಗೆ ಹೋದರು. ಬ್ರಹ್ಮವಸ್ತುವನ್ನೇ ಕುರಿತು ಧ್ಯಾನಮಾಡುತ್ತಾ ಶುಭಾವಹವಾದ ಯಮುನಾ ನದಿಯಲ್ಲಿ ಮುಳುಗಿ ಸ್ನಾನಮಾಡಿದರು. ರಾಜನು ಕೈಗೊಂಡಿದ್ದ ವ್ರತ ನಿಯಮದಂತೆ ದ್ವಾದಶಿಯು ಕಳೆಯುವುದರೊಳಗಾಗಿ ಪಾರಣೆಮಾಡಬೇಕಾಗಿದ್ದಿತು. ದುರ್ವಾಸರು ಬಂದ ವೇಳೆಗೆ ದ್ವಾದಶಿಯಲ್ಲಿ ಅರ್ಧಮುಹೂರ್ತ ಕಾಲವು ಮಾತ್ರವೇ ಉಳಿದಿದ್ದಿತು. ಆ ಅರ್ಧಮುಹೂರ್ತದೊಳಗಾಗಿ ದುರ್ವಾಸರು ಕರ್ತವ್ಯಕರ್ಮಗಳನ್ನು ಮುಗಿಸಿಕೊಂಡು ಬರುವ ನಿರೀಕ್ಷೆಯಿರಲಿಲ್ಲ. ಇಂತಹ ಧರ್ಮಸಂಕಟದ ಸಂದರ್ಭದಲ್ಲಿ ಧರ್ಮಜ್ಞನಾದ ರಾಜನು ಬ್ರಾಹ್ಮಣರೊಡನೆ ಕುಳಿತು ಚಿಂತಿಸತೊಡಗಿದನು :

(ಶ್ಲೋಕ 28-38)

ಬ್ರಾಹ್ಮಣಾತಿಕ್ರಮೇ ದೋಷೋ
ದ್ವಾದಶ್ಯಾಂ ಯದಪಾರಣೇ ।

---

* ದುರ್ವಾಸ ಎಂಬುದಕ್ಕೆ 'ದುಷ್ಟಾನಿ ವಾಸಾಂಸಿ ಯಸ್ಯ'–ಮಲಿನವಾದ ಬಟ್ಟೆಗಳು ಯಾವನಿಗೆ ಇವೆಯೋ ಅವನು ದುರ್ವಾಸ. ಅವಧೂತಶಿಖಾಮಣಿಗಳಾಗಿದ್ದುದರಿಂದ ಬಟ್ಟೆಗಳ ಶುಚಿತ್ವದ ಕಡೆಗೆ ಗಮನಕೊಡದೆ ಕೊಳಕುಬಟ್ಟೆಗಳನ್ನೇ ಅವರು ಉಡುತ್ತಿದ್ದರು.

ಯತ್ಕೃತ್ವಾ ಸಾಧು ಮೇ ಭೂಯಾ-
ದಧರ್ಮೋ ವಾ ನ ಮಾಂ ಸ್ಪೃಶೇತ್ ॥೩೯॥

"ಬ್ರಾಹ್ಮಣೋತ್ತಮರೇ! ಬ್ರಾಹ್ಮಣನನ್ನು ಅತಿಕ್ರಮಿಸುವುದರಿಂದಲೂ ಆತನನ್ನು ಬಿಟ್ಟು ಪಾರಣೆಮಾಡುವುದರಿಂದಲೂ ದೋಷವಿದೆ. ದ್ವಾದಶಿಯು ಕಳೆದುಹೋಗುವುದರೊಳಗಾಗಿ ಪಾರಣೆಮಾಡದಿದ್ದರೂ ದೋಷವಿದೆ. ಈ ಸಮಯದಲ್ಲಿ ಯಾವುದನ್ನು ಮಾಡಿದರೆ ನನಗೆ ಒಳ್ಳೆಯದಾಗುತ್ತದೆ ಮತ್ತು ಅಧರ್ಮವು ನನ್ನನ್ನು ಸ್ಪರ್ಶಿಸುವುದಿಲ್ಲ?–ಇದನ್ನು ನನಗೆ ಹೇಳಿರಿ."

ಬ್ರಾಹ್ಮಣರೊಡನೆ ಸ್ವಲ್ಪ ಹೊತ್ತಿನವರೆಗೆ ವಿಚಾರವಿನಿಮಯವಾದ ನಂತರ ರಾಜನೇ ಬ್ರಾಹ್ಮಣರಿಗೆ ತನ್ನ ನಿರ್ಣಯವನ್ನು ಹೇಳಿದನು :

ಅಮ್ಭಸಾ ಕೇವಲೇನಾಥ ಕರಿಷ್ಯೇ ವ್ರತಪಾರಣಮ್ ।
ಪ್ರಾಹುರಬ್ಭಕ್ಷಣಂ ವಿಪ್ರಾ ಹ್ಯಶಿತಂ ನಾಶಿತಂ ಚ ತತ್ ॥೪೦॥

"ಬ್ರಾಹ್ಮಣರೇ! ನೀರನ್ನು ಪ್ರಾಶನಮಾಡುವುದು ಭೋಜನ ಮಾಡಿದಂತೆಯೂ ಆಗುತ್ತದೆ, ಭೋಜನಮಾಡದೇ ಇದ್ದಂತೆಯೂ ಆಗುತ್ತದೆ–ಎಂಬ ಶ್ರುತಿವಚನದಂತೆ ನಾನು ಕೇವಲ ಜಲಪ್ರಾಶನಮಾಡಿ ಪಾರಣೆಯನ್ನು ಮುಗಿಸುತ್ತೇನೆ."

ಹೀಗೆ ಹೇಳಿ ಅಂಬರೀಷನು ಬ್ರಾಹ್ಮಣರ ಅನುಮತಿಯನ್ನು ಪಡೆದು ಜಲಪ್ರಾಶನಮಾಡಿ, ಪರಮಕಾರುಣಿಕನಾದ ಅಚ್ಯುತನನ್ನೇ ಧ್ಯಾನಮಾಡುತ್ತಾ ದುರ್ವಾಸರ ಆಗಮನವನ್ನೇ ಎದುರುನೋಡುತ್ತಿದ್ದನು. ಮಾಡಬೇಕಾಗಿದ್ದ ಆವಶ್ಯಕಕರ್ಮಗಳನ್ನು ಮುಗಿಸಿ ದುರ್ವಾಸರು ಯಮುನಾನದಿಯ ತೀರದಿಂದ ಹಿಂದಿರುಗಿದರು. ರಾಜನು ಮುಂದೆ ಬಂದು ಅಭಿವಾದನ ಮಾಡುತ್ತಲೇ ದುರ್ವಾಸರಿಗೆ ರಾಜನು ಜಲಪ್ರಾಶನದ ಮೂಲಕವಾಗಿ ಪಾರಣೆಯನ್ನು ಮುಗಿಸಿದ್ದ ವಿಷಯವು ತಿಳಿದುಹೋಯಿತು. ಅವರ ಶರೀರವೆಲ್ಲವೂ ಕೋಪದಿಂದ ನಡುಗುತ್ತಿದ್ದಿತು. ಹುಬ್ಬುಗಳು ಗಂಟಿಕ್ಕಿ ದ್ದುವು. ಇದಲ್ಲದೇ ಅವರು ಹಸಿವಿನಿಂದ ಬಹಳವಾಗಿ ಬಳಲಿದ್ದರು. ಕೈಮುಗಿದುಕೊಂಡು ವಿನಮ್ರನಾಗಿ ನಿಂತಿದ್ದ ಅಂಬರೀಷರಾಜನಿಗೆ ಕಡುಕೋಪದಿಂದ ಅವರು ಹೇಳಿದರು :

"ಏನನ್ಯಾಯ! ಕ್ರೂರಿಯಾದ, ಸಂಪತ್ತಿನಿಂದ ಮದಿಸಿರುವ, ವಿಷ್ಣುವಿನ ಭಕ್ತನಲ್ಲದ, ತಾನೇ ಸರ್ವೇಶ್ವರನೆಂದು ಭಾವಿಸಿಕೊಂಡಿರುವ ಈ ರಾಜನ ಧರ್ಮೋಲ್ಲಂಘನೆಯನ್ನು ಎಲ್ಲರೂ ನೋಡಿರಿ. ನಾನು ಅತಿಥಿಯಾಗಿ ಇವನ ಅರಮನೆಗೆ ಬಂದೆನು. ಅತಿಥಿಸತ್ಕಾರಮಾಡಲು ರಾಜನು ನನಗೆ ಆಮಂತ್ರಣವನ್ನೂ ಕೊಟ್ಟಿದ್ದನು. ಆದರೆ ಅತಿಥಿಯಾದ ನನಗೆ ಭೋಜನವನ್ನು ಮಾಡಿಸದೆಯೇ ಇವನು ಭೋಜನಮಾಡಿಬಿಟ್ಟಿದ್ದಾನೆ. ಇಂತಹ ಧರ್ಮವ್ಯತಿಕ್ರಮಕ್ಕೆ ಸಿಗುವ ಫಲವೇನೆಂಬುದನ್ನು ನಾನೀಗಲೇ ತೋರಿಸಿಕೊಡುತ್ತೇನೆ." (ಶ್ಲೋಕ 41-45)

ರೋಷದಿಂದ ಉರಿದುಹೋಗುತ್ತಿದ್ದ ದುರ್ವಾಸರು ಹೀಗೆ ಹೇಳಿ ತಮ್ಮ ಜಟೆಯಿಂದ ಒಂದು ಕೂದಲನ್ನು ಕಿತ್ತರು. ಅಂಬರೀಷನನ್ನು ಸಂಹರಿಸುವ ಸಲುವಾಗಿ ಆ ಕೂದಲಿನಿಂದ ಒಂದು ಮಾಟದ ಭೂತವನ್ನು ನಿರ್ಮಿಸಿದರು. ಆ ಭೂತವು ಪ್ರಲಯಕಾಲದ ಅಗ್ನಿಯಂತೆ ಧಗ-ಧಗಿಸುತ್ತಿದ್ದಿತು. ಪ್ರಜ್ವಲಿಸುತ್ತಿದ್ದ ಪಾದಗಳ ಸಂಘಟ್ಟನದಿಂದ ಭೂಮಿಯನ್ನೇ ನಡುಗಿಸುತ್ತಿದ್ದ ಆ ಶೂನ್ಯದೇವತೆಯು ಕತ್ತಿಯನ್ನು ಹಿಡಿದು ತನ್ನ ಮೇಲೆ ರಭಸದಿಂದ ಬೀಳುತ್ತಿರುವುದನ್ನು ನೋಡಿಯೂ ಅಂಬರೀಷಮಹಾರಾಜನು ನಿಂತ ಜಾಗದಿಂದ ಕದಲಲೇ ಇಲ್ಲ. ಪರಮಪುರುಷನಾದ, ಪರಮಕಾರುಣಿಕನಾದ, ಮಹಾತ್ಮನಾದ ಶ್ರೀಮನ್ನಾರಾಯಣನು ತನ್ನ ಸೇವಕನ ರಕ್ಷಣೆಗಾಗಿ ಈ ಮೊದಲೇ ಸುದರ್ಶನಚಕ್ರವನ್ನು ಅಂಬರೀಷನಿಗೆ ದಯಪಾಲಿಸಿದ್ದನು. ಕೋಪಗೊಂಡಿರುವ ಘಟಸರ್ಪವನ್ನು ದಾವಾಗ್ನಿಯು ಕ್ಷಣಮಾತ್ರದಲ್ಲಿ ಭಸ್ಮಮಾಡಿಬಿಡುವಂತೆ–ದುರ್ವಾಸರು ಅಂಬರೀಷನ ಸಂಹಾರಕ್ಕಾಗಿ ಸೃಷ್ಟಿಸಿದ್ದ ಶೂನ್ಯದೇವತೆಯನ್ನು ಸುದರ್ಶನಚಕ್ರವು ಕ್ಷಣಮಾತ್ರದಲ್ಲಿ ಭಸ್ಮಮಾಡಿಬಿಟ್ಟಿತು. ತಾವು ಸೃಷ್ಟಿಸಿದ್ದ ಶೂನ್ಯದೇವತೆಯು ಭಸ್ಮವಾದುದನ್ನೂ, ಇದರಿಂದ ತಮ್ಮ ಪ್ರಯತ್ನವು ನಿಷ್ಫಲವಾದುದನ್ನೂ ಮತ್ತು ಅನಂತರ ಆ ಚಕ್ರವು ತಮ್ಮ ಕಡೆಗೇ ಬರುತ್ತಿರುವುದನ್ನೂ ಕಂಡು ದುರ್ವಾಸರು ಭಯಗೊಂಡವರಾಗಿ ಚಕ್ರದಿಂದ ಪ್ರಾಣಗಳನ್ನುಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿಹೋದರು. ಎತ್ತರವಾದ ಜ್ವಾಲೆಗಳಿಂದ ಕೂಡಿದ ಕಾಡುಗಿಚ್ಚು ಸರ್ಪವನ್ನು ಹಿಂಬಾಲಿಸಿ ಹೋಗುವಂತೆ–ಶ್ರೀಭಗವಂತನ ಚಕ್ರವು ದುರ್ವಾಸರನ್ನು ಅಟ್ಟಿಸಿಕೊಂಡು

ಹೋಯಿತು. ಅಂಟಿಕೊಂಡಿರುವಂತೆಯೇ ತಮ್ಮನ್ನು ಹಿಂಬಾಲಿಸಿ ಬರುತ್ತಿದ್ದ ವಿಷ್ಣುಚಕ್ರವನ್ನು ನೋಡಿ ಭಯಗೊಂಡ ದುರ್ವಾಸರು ಗುಹೆಯಲ್ಲಾದರೂ ರಕ್ಷಣೆಯನ್ನು ಪಡೆಯಲು ಮೇರುಪರ್ವತದ ಕಡೆಗೆ ಧಾವಿಸಿದರು. ಅಲ್ಲಿಯೂ ಸುದರ್ಶನಚಕ್ರವು ಅವರ ಬೆನ್ನು ಬಿಡಲಿಲ್ಲ. ಮುಂದೆ ದುರ್ವಾಸರು ಎಲ್ಲ ದಿಕ್ಕುಗಳಿಗೂ ಓಡಿಹೋದರು. ಆಕಾಶಕ್ಕೆ ಹಾರಿದರು. ಭೂಮಂಡಲದಲ್ಲೆಲ್ಲಾ ಓಡಾಡಿದರು. ಅತಲ-ವಿತಲವೇ ಮೊದಲಾದ ಪಾತಾಳಲೋಕಗಳಿಗೂ ಹೋದರು. ಸಮುದ್ರಗಳ ಮೇಲೂ ಹರಿದಾಡಿ ದರು. ಲೋಕಪಾಲಕರ ಲೋಕಗಳಿಗೂ ಹೋದರು. ಕಡೆಗೆ ಸ್ವರ್ಗಕ್ಕೂ ಹಾರಿದರು. ಅವರೆಲ್ಲಿಗೇ ಹೋದರೂ ಸಹಿಸಲು ಅಸಾಧ್ಯವಾದ ತೇಜಸ್ಸಿನಿಂದ ಕೂಡಿದ್ದ ಸುದರ್ಶನಚಕ್ರವು ಅವರ ಬೆನ್ನು ಬಿಡಲೇ ಇಲ್ಲ. ಅನವರತವಾಗಿ ಹಿಂಬಾಲಿಸುತ್ತಿದ್ದುದನ್ನು ಕಂಡು ಮತ್ತೂ ಭಯಗ್ರಸ್ತರಾದ ಮಹರ್ಷಿಗಳು ಎಲ್ಲಿಯೂ ರಕ್ಷಕರನ್ನು ಕಾಣದೆ ಯಾರ ರಕ್ಷಣೆಯನ್ನಾದರೂ ಪಡೆಯ ಬೇಕೆಂಬ ಧಾವಂತದಿಂದ ಬ್ರಹ್ಮನ ಬಳಿಗೆ ಹೋಗಿ ಬೇಡಿಕೊಂಡರು :

"ಬ್ರಹ್ಮದೇವ! ಸ್ವಯಂಭುವನೇ! ನನ್ನನ್ನು ಈ ತೇಜೋಮಯವಾದ ವಿಷ್ಣುಚಕ್ರದಿಂದ ಪಾರುಮಾಡು." (ಶ್ಲೋಕ 46-52)

ಬ್ರಹ್ಮನು ಹೇಳುತ್ತಾನೆ :

ಸ್ಥಾನಂ ಮದೀಯಂ ಸಹವಿಶ್ವಮೇತ-
ತ್ಕ್ರೀಡಾವಸಾನೇ ದ್ವಿಪರಾರ್ಧಸಂಜ್ಞೇ ।
ಭ್ರೂಭಙ್ಗಮಾತ್ರೇಣ ಹಿ ಸಂದಿಧಕ್ಷೋಃ
ಕಾಲಾತ್ಮನೋ ಯಸ್ಯ ತಿರೋಭವಿಷ್ಯತಿ ॥೫೩॥

ಅಹಂ ಭವೋ ದಕ್ಷಭೃಗುಪ್ರಧಾನಾಃ
ಪ್ರಜೇಶಭೂತೇಶಸುರೇಶಮುಖ್ಯಾಃ ।
ಸರ್ವೇ ವಯಂ ಯನ್ನಿಯಮಂ ಪ್ರಪನ್ನಾ
ಮೂರ್ಧ್ನ್ಯರ್ಪಿತಂ ಲೋಕಹಿತಂ ವಹಾಮಃ ॥೫೪॥

"ಮಹರ್ಷಿಯೇ! ಯಾವಾಗ ನನ್ನ ಎರಡು ಪರಾರ್ಧಮಿತವಾದ ಆಯುಷ್ಯವು ಮುಗಿದುಹೋಗುವುದೋ ಆಗ ಕಾಲರೂಪಿಯಾದ ಭಗವಾನ್

ವಾಸುದೇವನು ತನ್ನ ಈ ಲೀಲಾರೂಪವಾದ ಸೃಷ್ಟಿಯನ್ನು ಸಮಾಪ್ತಿಗೊಳಿಸಲು ಬಯಸಿ ಕೇವಲ ಹುಬ್ಬನ್ನು ಹಾರಿಸಿ ಬ್ರಹ್ಮಾಂಡವನ್ನೇ ಭಸ್ಮಮಾಡಿಬಿಡುತ್ತಾನೆ. ಆ ಸಮಯದಲ್ಲಿ ನಾನಾಗಲೀ, ನನ್ನ ಸ್ಥಾನವಾಗಲೀ, ಈ ವಿಶ್ವವಾಗಲೀ ಯಾವುದೂ ಇರುವುದಿಲ್ಲ. ಎಲ್ಲವೂ ಅದೃಶ್ಯವಾಗಿ ಹೋಗುತ್ತದೆ. ನಾನು, ಶಂಕರನು, ಭೃಗು-ದಕ್ಷ ಇವರೇ ಮೊದಲಾದ ಪ್ರಜಾಪತಿಗಳು, ಭೂತೇಶರು, ಸುರೇಶಮುಖ್ಯರು–ಇವರೆಲ್ಲರೂ ಭಗವಾನ್ ವಾಸುದೇವನೇ ಮಾಡಿರುವ ನಿಯಮಗಳಿಗೆ ಬದ್ಧರಾಗಿದ್ದುಕೊಂಡು ಅವನ ಆಜ್ಞೆಯನ್ನು ಶಿರಸಾವಹಿಸಿ ಲೋಕಕ್ಕೆ ಹಿತವನ್ನುಂಟುಮಾಡುತ್ತಿದ್ದೇವೆ. ಅಂತಹ ಮಹಾಮಹಿಮನಾದ ವಿಷ್ಣುವಿನ ಭಕ್ತನಿಗೆ ದ್ರೋಹವೆಸಗಿರುವ ನಿನಗೆ ರಕ್ಷಣೆಯನ್ನೀಯಲು ನನಗೆ ಸಾಧ್ಯವಿಲ್ಲ."

ಬ್ರಹ್ಮನು ಹೀಗೆ ಹೇಳಿ ತಿರಸ್ಕರಿಸಿಬಿಟ್ಟನು. ವಿಷ್ಣುಚಕ್ರದ ಬೇಗೆಯು ಕ್ಷಣ-ಕ್ಷಣಕ್ಕೂ ಹೆಚ್ಚುತ್ತಿದ್ದಿತು. ಕಂಗೆಟ್ಟಿದ್ದ ದುರ್ವಾಸರು ಕೈಲಾಸವಾಸಿಯಾದ ಶಿವನಿಗೆ ಶರಣುಹೊಂದಿದರು.

"ಪಾರ್ವತೀಪತಿಯೇ! ಪರಮೇಶ್ವರ! ನನ್ನನ್ನು ಈ ವಿಷ್ಣುಚಕ್ರದಿಂದ ರಕ್ಷಿಸು."

ರುದ್ರನು ಹೇಳುತ್ತಾನೆ :

ವಯಂ ನ ತಾತ ಪ್ರಭವಾಮ ಭೂಮ್ನಿ
ಯಸ್ಮಿನ್ಪರೇಽನ್ಯೇಽಪ್ಯಜಜೀವಕೋಶಾಃ ।
ಭವನ್ತಿ ಕಾಲೇ ನ ಭವನ್ತಿ ಹೀದೃಶಾಃ
ಸಹಸ್ರಶೋ ಯತ್ರ ವಯಂ ಭ್ರಮಾಮಃ ॥೫೬॥

"ದುರ್ವಾಸನೇ! ಯಾವ ಅಪಾರಮಹಿಮನಾದ ಪರಮಾತ್ಮನಲ್ಲಿ ಕೇವಲ ಈ ಬ್ರಹ್ಮ, ಈ ಜೀವರು ಮಾತ್ರವಲ್ಲದೇ ಅನೇಕ ಬ್ರಹ್ಮರು ಅನೇಕ ಬ್ರಹ್ಮಾಂಡಗಳು ಹುಟ್ಟುತ್ತಿರುತ್ತವೆಯೋ ಮತ್ತು ಲೀನವಾಗುತ್ತಿರುತ್ತವೆಯೋ–ಅಂತಹ ಅನೇಕ ಕೋಟಿಬ್ರಹ್ಮಾಂಡಗಳಲ್ಲಿ ನಾವೂ ಕೂಡ ಸಾವಿರಾರು ಬಾರಿ ಹುಟ್ಟಿ ಅವನಲ್ಲಿಯೇ ಲೀನವಾಗುತ್ತಿರುತ್ತೇವೆಯೋ

ಅಂತಹ ಪ್ರಭುವಿನ ಆಜ್ಞೆಯನ್ನು ಮೀರಿ ನಾವು ಯಾವುದೇ ಕಾರ್ಯವನ್ನೂ ಮಾಡಲು ಸಮರ್ಥರಲ್ಲ.

ನಾನಾಗಲೀ, ಸನತ್ಕುಮಾರ-ನಾರದ-ಬ್ರಹ್ಮರಾಗಲೀ, ಕಪಿಲ-ಅಪಾಂತರತಮ-ದೇವಲರಾಗಲೀ, ಧರ್ಮ-ಆಸುರಿ-ಮರೀಚಿಯೇ ಮೊದಲಾದ ಸರ್ವಜ್ಞರಾದ ಸಿದ್ಧೇಶ್ವರರಾಗಲೀ ಭಗವಂತನ ಮಾಯೆಯನ್ನು ಅರಿಯೆವು. ಏಕೆಂದರೆ ನಾವೆಲ್ಲರೂ ಅವನ ಮಾಯೆಯಿಂದಲೇ ಆವೃತರಾಗಿಬಿಟ್ಟಿದ್ದೇವೆ. ನಿನ್ನನ್ನು ಅಟ್ಟಿಸಿಕೊಂಡು ಬರುತ್ತಿರುವ ಚಕ್ರವು ವಿಶ್ವೇಶ್ವರನಾದ ಮಹಾವಿಷ್ಣುವಿನ ಸುದರ್ಶನಚಕ್ರವಾಗಿದೆ. ಇದರ ಉಜ್ಜ್ವಲವಾದ ಪ್ರಭೆಯನ್ನು ನಾವೂ ಸಹಿಸಲಾರೆವು. ಆದುದರಿಂದ ಈ ಸಮಯದಲ್ಲಿ ನೀನು ಶ್ರೀಹರಿಯನ್ನೇ ಶರಣುಹೋಗು. ಅವನೇ ನಿನಗೆ ಮಂಗಳವನ್ನುಂಟು ಮಾಡುತ್ತಾನೆ."

ಶ್ರೀಶಂಕರನ ಮಾತಿನಿಂದ ಅತ್ಯಂತನಿರಾಶರಾದ ದುರ್ವಾಸರು ಲಕ್ಷ್ಮೀಪತಿಯಾದ ಶ್ರೀನಿವಾಸನು ಲಕ್ಷ್ಮಿಯೊಡನೆ ವಾಸಿಸುವ ವೈಕುಂಠ ಲೋಕಕ್ಕೆ ಧಾವಿಸಿದರು.

ಬೆನ್ನಟ್ಟಿ ಬರುತ್ತಿದ್ದ ಸುದರ್ಶನಚಕ್ರದ ಜ್ವಾಲೆಯಿಂದ ದುರ್ವಾಸರು ಸುಟ್ಟುಹೋಗುತ್ತಿದ್ದರು. ತರ-ತರನೆ ನಡುಗುತ್ತಾ ಮಹರ್ಷಿಗಳು ಶ್ರೀನಿವಾಸನ ಪಾದಾರವಿಂದಗಳಲ್ಲಿ ಅಡ್ಡಬಿದ್ದರು. "ಅಚ್ಯುತ! ಅನಂತ! ಸತ್ಪುರುಷರಿಗೆ ಬೇಕಾದವನೇ! ಪ್ರಭುವೇ! ಲೋಕರಕ್ಷಕನೇ! ಅಪರಾಧಿಯಾದ ನನ್ನನ್ನು ರಕ್ಷಿಸು-ಕಾಪಾಡು"–ಎಂದು ಅಂಗಲಾಚಿಬೇಡಿದರು. "ನಿನ್ನ ಪರಮಾದ್ಭುತವಾದ ಪ್ರಭಾವವನ್ನು ಕಂಡರಿಯದ ನಾನು ನಿನ್ನ ಪ್ರಿಯಭಕ್ತರಿಗೆ ಅಪರಾಧಮಾಡಿಬಿಟ್ಟೆನು. ಪ್ರಭುವೇ! ನನ್ನನ್ನು ಈ ಸುದರ್ಶನಚಕ್ರದಿಂದ ಪಾರುಮಾಡು. ನಿನ್ನ ನಾಮೋಚ್ಚಾರಣಮಾತ್ರದಿಂದಲೇ ನರಕದಲ್ಲಿರುವ ಜೀವಿಗಳೂ ಮುಕ್ತರಾಗಿಬಿಡುವರು. ಅಂತಹ ಮಹಾನುಭಾವನು ನೀನು. ದಯಮಾಡಿ ನನ್ನನ್ನು ರಕ್ಷಿಸು." (ಶ್ಲೋಕ 57-62)

ಶ್ರೀಭಗವಂತನು ಹೇಳುತ್ತಾನೆ :

ಅಹಂ ಭಕ್ತಪರಾಧೀನೋ ಹ್ಯಸ್ವತನ್ತ್ರ ಇವ ದ್ವಿಜ ।
ಸಾಧುಭಿರ್ಗ್ರಸ್ತಹೃದಯೋ ಭಕ್ತೈರ್ಭಕ್ತಜನಪ್ರಿಯಃ ॥೬೩॥

"ದುರ್ವಾಸ! ನಾನು ಅಸ್ವತಂತ್ರನಪ್ಪ! ನನಗೆ ಯಾವ ವಿಧವಾದ ಸ್ವಾತಂತ್ರ್ಯವೂ ಇಲ್ಲ. ನಾನು ಸರ್ವಥಾ ಭಕ್ತಜನರಿಗೆ ಅಧೀನನಾಗಿ ಬಿಟ್ಟಿದ್ದೇನೆ. ಸಾಧುಗಳಾದ ನನ್ನ ಭಕ್ತರೇ ನನ್ನ ಹೃದಯವನ್ನು ಕಿತ್ತಿಟ್ಟುಕೊಂಡುಬಿಟ್ಟಿದ್ದಾರೆ. ಭಕ್ತರು ನನ್ನನ್ನು ಪ್ರೀತಿಸುವಂತೆಯೇ ನಾನೂ ನನ್ನ ಭಕ್ತರನ್ನು ಬಹಳವಾಗಿ ಪ್ರೀತಿಸುತ್ತೇನೆ.

ನಾಹಮಾತ್ಮಾನಮಾಶಾಸೇ ಮದ್ಭಕ್ತೈಃ ಸಾಧುಭಿರ್ವಿನಾ ।
ಶ್ರಿಯಂ ಚಾತ್ಯನ್ತಿಕೀಂ ಬ್ರಹ್ಮನ್ಯೇಷಾಂ ಗತಿರಹಂ ಪರಾ ॥೬೪॥

ಬ್ರಾಹ್ಮಣೋತ್ತಮನೇ! ಯಾರು ನನ್ನನ್ನು ಪರಮಾಶ್ರಯನೆಂದು ಭಾವಿಸಿರುವರೋ ಅಂತಹ ಪರಮಸಾಧುಗಳಾದ ನನ್ನ ಭಕ್ತರನ್ನು ಬಿಟ್ಟು ನಾನೇ ಇರಬಯಸುವುದಿಲ್ಲ. ಅತಿಶಯವಾದ ಪ್ರೀತಿಯಿಂದಿರುವ, ನನ್ನ ಹೃದಯಕಮಲದಲ್ಲಿಯೇ ನೆಲೆಸಿರುವ ಲಕ್ಷ್ಮಿಯನ್ನೂ ನಾನು ಬಯಸು ವುದಿಲ್ಲ. ನನ್ನ ಪ್ರಾಣಗಳಿಗಿಂತಲೂ, ನನ್ನ ಪ್ರೇಯಸಿಗಿಂತಲೂ ಭಕ್ತರೇ ನನಗೆ ಪರಮಪ್ರಿಯರು.

ಯೇ ದಾರಾಗಾರಪುತ್ರಾಪ್ತಾನ್ಪ್ರಾಣಾನ್ವಿತ್ತಮಿಮಂ ಪರಮ್ ।
ಹಿತ್ವಾ ಮಾಂ ಶರಣಂ ಯಾತಾಃ ಕಥಂ ತಾಂಸ್ತ್ಯಕ್ತುಮುತ್ಸಹೇ ॥

ಯಾವ ನನ್ನ ಭಕ್ತರು ಪತ್ನೀ-ಪುತ್ರ-ಗೃಹ-ಗುರುಜನರು-ಪ್ರಾಣ-ಧನ-ಇಹಲೋಕ-ಪರಲೋಕಗಳೆಲ್ಲವನ್ನೂ ಪರಿತ್ಯಜಿಸಿ ನನ್ನನ್ನೇ ಪರಮಾಶ್ರಯನೆಂದು ಭಾವಿಸಿ ಶರಣುಹೊಂದಿರುವರೋ ಅಂತಹವರನ್ನು ನಾನು ಹೇಗೆ ತಾನೇ ಪರಿತ್ಯಜಿಸಲಿ?

ಮಯಿ ನಿರ್ಬದ್ಧಹೃದಯಾಃ ಸಾಧವಃ ಸಮದರ್ಶನಾಃ ।
ವಶೀಕುರ್ವನ್ತಿ ಮಾಂ ಭಕ್ತ್ಯಾ ಸತ್ಸ್ತ್ರಿಯಃ ಸತ್ಪತಿಂ ಯಥಾ ॥೬೬॥

ಸತೀಸಾಧ್ವಿಯು ಯಾವ ರೀತಿಯಲ್ಲಿ ತನ್ನ ಪಾತಿವ್ರತ್ಯದಿಂದ ಸದಾಚಾರಿಯಾದ ತನ್ನ ಪತಿಯನ್ನು ವಶಪಡಿಸಿಕೊಳ್ಳುವಳೋ—ಅದೇ ರೀತಿಯಲ್ಲಿ ಮನಸ್ಸನ್ನು ನನ್ನಲ್ಲಿಯೇ ನೆಲೆಗೊಳಿಸಿರುವ ಸಮದರ್ಶಿಗಳಾದ ಸಾಧುಗಳು ಭಕ್ತಿಯ ಮೂಲಕವಾಗಿ ನನ್ನನ್ನು ವಶಪಡಿಸಿಕೊಳ್ಳುತ್ತಾರೆ.

ಮತ್ಸೇವಯಾ ಪ್ರತೀತಂ ಚ ಸಾಲೋಕ್ಯಾದಿಚತುಷ್ಟಯಮ್ ।
ನೇಚ್ಛನ್ತಿ ಸೇವಯಾ ಪೂರ್ಣಾಃ ಕುತೋಽನ್ಯತ್ಕಾಲವಿದ್ರುತಮ್ ॥

ನನ್ನ ಅನನ್ಯಪ್ರೇಮಿಗಳಾದ ಭಕ್ತರು ನನ್ನ ಸೇವೆಮಾಡುವುದರಿಂದಲೇ ಕೃತಕೃತ್ಯರಾದೆವೆಂದೂ, ಪರಿಪೂರ್ಣರಾದೆವೆಂದೂ ಭಾವಿಸಿಕೊಳ್ಳುತ್ತಾರೆ. ನನ್ನ ಸೇವೆಯಿಂದ ದೊರಕುವ ಸಾಲೋಕ್ಯ-ಸಾಯುಜ್ಯ-ಸಾಮೀಪ್ಯ-ಸಾರೂಪ್ಯಗಳೆಂಬ ನಾಲ್ಕು ವಿಧವಾದ ಮೋಕ್ಷಗಳನ್ನು ಕೂಡ ಅವರು ಬಯಸುವುದಿಲ್ಲ. ಹೀಗಿರುವಾಗ ಕಾಲವು ಕಳೆದಂತೆ ನಷ್ಟವಾಗಿ ಹೋಗುವ ವಸ್ತುಗಳ ಬಗೆಗೆ ಹೇಳುವುದೇನಿದೆ?

ಸಾಧವೋ ಹೃದಯಂ ಮಹ್ಯಂ ಸಾಧೂನಾಂ ಹೃದಯಂ ತ್ವಹಮ್ ।
ಮದನ್ಯತ್ತೇ ನ ಜಾನನ್ತಿ ನಾಹಂ ತೇಭ್ಯೋ ಮನಾಗಪಿ ॥೬೮॥

ಮಹರ್ಷಿಯೇ! ಹೆಚ್ಚೇನು ಹೇಳಲಿ! ಸಾಧುಗಳೇ ನನ್ನ ಹೃದಯಸ್ವರೂಪರಾಗಿರುತ್ತಾರೆ. ಸಾಧುಗಳಿಗೆ ನಾನೇ ಹೃದಯಸ್ವರೂಪನಾಗಿರುತ್ತೇನೆ. ನನ್ನನ್ನು ಬಿಟ್ಟು ಅವರಿಗೆ ಬೇರೆ ಯಾರ ಪರಿಚಯವೂ ಇರುವುದಿಲ್ಲ. ಅಂತೆಯೇ ನನಗೂ ನನ್ನ ಪ್ರಿಯಭಕ್ತರನ್ನು ಬಿಟ್ಟು ಬೇರೆಯವರ ವಿಷಯವು ಕಿಂಚಿತ್ತಾದರೂ ಗೊತ್ತಿಲ್ಲ.

ಆದರೂ ವಿಪ್ರನೇ! ಈ ಸುದರ್ಶನಚಕ್ರದಿಂದ ತಪ್ಪಿಸಿಕೊಳ್ಳಲು ಒಂದು ಉಪಾಯವನ್ನು ಹೇಳಿಕೊಡುತ್ತೇನೆ ; ಸಾವಧಾನಚಿತ್ತನಾಗಿ ಕೇಳು.

ಅಯಂ ಹ್ಯಾತ್ಮಾಭಿಚಾರಸ್ತೇ ಯತಸ್ತಂ ಯಾತು ವೈ ಭವಾನ್ ।
ಸಾಧುಷು ಪ್ರಹಿತಂ ತೇಜಃ ಪ್ರಹರ್ತುಃ ಕುರುತೇಽಶಿವಮ್ ॥೬೯॥

ಯಾವನಿಗೆ ಕೆಟ್ಟದು ಬಗೆದ ಕಾರಣದಿಂದಾಗಿ ನಿನಗೆ ಇಂತಹ ಆತ್ಮಘಾತವಾಗಿರುವುದೋ ಅವನ ಬಳಿಗೇ ನೀನು ಪುನಃ ಹೋಗು. ಸತ್ಪುರುಷರಲ್ಲಿ ಪ್ರಯೋಗಿಸಿದ ಆಭಿಚಾರಿಕವಾದ ತೇಜಸ್ಸು ಪ್ರಯೋಗಿಸಿದವನಿಗೇ ಅಮಂಗಳವನ್ನುಂಟುಮಾಡುತ್ತದೆ.

ತಪೋ ವಿದ್ಯಾ ಚ ವಿಪ್ರಾಣಾಂ ನಿಃಶ್ರೇಯಸಕರೇ ಉಭೇ ।
ತೇ ಏವ ದುರ್ವಿನೀತಸ್ಯ ಕಲ್ಪೇತೇ ಕರ್ತುರನ್ಯಥಾ ॥೭೦॥

ಬ್ರಾಹ್ಮಣನಿಗೆ ವಿದ್ಯೆ ಮತ್ತು ತಪಸ್ಸುಗಳು ಪರಮಕಲ್ಯಾಣವನ್ನೇನೋ

ಉಂಟುಮಾಡುತ್ತವೆ. ಇದರಲ್ಲಿ ಸಂಶಯವೇ ಇಲ್ಲ. ಆದರೆ ಬ್ರಾಹ್ಮಣನು ಉದ್ಧತನಾಗಿ ಸಾಧು-ಸತ್ಪುರುಷರಿಗೆ ತೊಂದರೆಕೊಡುವ ಸ್ವಭಾವದವ ನಾದರೆ ಅದೇ ವಿದ್ಯೆ ಮತ್ತು ತಪಸ್ಸುಗಳೇ ಆತನಿಗೆ ವಿಪರೀತವಾದ ಫಲಗಳನ್ನು ಕೊಡುತ್ತವೆ.

ಬ್ರಹ್ಮಂಸ್ತದ್ಗಚ್ಛ ಭದ್ರಂ ತೇ ನಾಭಾಗತನಯಂ ನೃಪಮ್ ।
ಕ್ಷಮಾಪಯ ಮಹಾಭಾಗಂ ತತಃ ಶಾನ್ತಿರ್ಭವಿಷ್ಯತಿ ॥೭೧॥

ಬ್ರಾಹ್ಮಣನೇ! ಆದುದರಿಂದ ನಾಭಾಗನ ಮಗನಾದ ಅಂಬರೀಷನ ಬಳಿಗೆ ನೀನು ಈಗಲೇ ಹೋಗು. ನಿನಗೆ ಮಂಗಳವಾಗಲಿ. ಮಹಾಭಾಗನಾದ ಆ ರಾಜನ ಕ್ಷಮೆಯನ್ನು ಯಾಚಿಸು. ನಿನಗೆ ಶಾಂತಿಯು ಲಭಿಸುತ್ತದೆ.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೪ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೫ನೆಯ ಅಧ್ಯಾಯ

ದುರ್ವಾಸರು ದುಃಖದಿಂದ ಪಾರಾದುದು

ಶ್ರೀಶುಕರು ಹೇಳುತ್ತಾರೆ :

ಏವಂ ಭಗವತಾದಿಷ್ಟೋ ದುರ್ವಾಸಾಶ್ಚಕ್ರತಾಪಿತಃ ।
ಅಮ್ಬರೀಷಮುಪಾವೃತ್ಯ ತತ್ಪಾದೌ ದುಃಖಿತೋಽಗ್ರಹೀತ್ ॥೧॥

ಪರೀಕ್ಷಿತನೇ! ಹೀಗೆ ಶ್ರೀಭಗವಂತನಿಂದ ನಿರ್ದೇಶಿಸಲ್ಪಟ್ಟ, ಸುದರ್ಶನಚಕ್ರದ ತಾಪದಿಂದ ಪರಿತಪಿಸುತ್ತಿದ್ದ ದುರ್ವಾಸಮಹರ್ಷಿಗಳು, ಅಂಬರೀಷಮಹಾರಾಜನ ಬಳಿಗೆ ಹೋಗಿ ಅತ್ಯಂತದುಃಖಿತರಾಗಿ ಅವನ ಎರಡು ಪಾದಗಳನ್ನೂ ಗಟ್ಟಿಯಾಗಿ ಹಿಡಿದುಕೊಂಡರು.

ದುರ್ವಾಸಮಹರ್ಷಿಗಳ ಈ ಕಾರ್ಯವನ್ನು ಕಂಡು, ಅಂಬರೀಷ ಮಹಾರಾಜನು ಕಡುನಾಚಿಕೆಗೊಂಡು, ದಯಾರಸದಿಂದ ಕರಗಿದ ಹೃದಯ ವುಳ್ಳವನಾಗಿ ಶ್ರೀಹರಿಯ ಅಸ್ತ್ರವಾದ ಸುದರ್ಶನಚಕ್ರವನ್ನು ಕುರಿತು ಹೀಗೆ ಸ್ತೋತ್ರಮಾಡಿದನು :

ಅಂಬರೀಷನು ಸುದರ್ಶನಚಕ್ರವನ್ನು ಪ್ರಾರ್ಥಿಸುತ್ತಾನೆ :

ತ್ವಮಗ್ನಿರ್ಭಗವಾನ್ಸೂರ್ಯಸ್ತ್ವಂ ಸೋಮೋ ಜ್ಯೋತಿಷಾಂಪತಿಃ ।
ತ್ವಮಾಪಸ್ತ್ವಂ ಕ್ಷಿತಿರ್ವ್ಯೋಮ ವಾಯುರ್ಮಾತ್ರೇನ್ದ್ರಿಯಾಣಿ ಚ ॥೩॥

"ಸುದರ್ಶನಚಕ್ರವೇ! ಚಕ್ರಾಧಿದೇವತೆಯೇ! ನೀನೇ ಅಗ್ನಿಯು. ಸರ್ವಸಮರ್ಥನಾದ ಸೂರ್ಯನೂ ನೀನೇ ಆಗಿರುವೆ. ನಕ್ಷತ್ರಗಳ ಒಡೆಯನಾದ ಚಂದ್ರನೂ ನೀನೇ. ಜಲ, ಪೃಥ್ವೀ, ಆಕಾಶ, ವಾಯು, ಐದು ತನ್ಮಾತ್ರೆಗಳು ಮತ್ತು ಇಂದ್ರಿಯಗಳು–ಈ ಎಲ್ಲವೂ ನೀನೇ ಆಗಿರುವೆ.

ಸುದರ್ಶನ ನಮಸ್ತುಭ್ಯಂ ಸಹಸ್ರಾರಾಚ್ಯುತಪ್ರಿಯ ।
ಸರ್ವಾಸ್ತ್ರಘಾತಿನ್ವಿಪ್ರಾಯ ಸ್ವಸ್ತಿ ಭೂಯಾ ಇಡಸ್ಪತೇ ॥೪॥

ಓ ಸುದರ್ಶನಚಕ್ರಾಧಿದೇವತೆಯೇ! ನಿನಗೆ ನಮಸ್ಕರಿಸುತ್ತೇನೆ. ಸಾವಿರ ಅರೆಕಾಲುಗಳಿಂದ ಕೂಡಿರುವವನೇ! ಅಚ್ಯುತನಿಗೆ ಪ್ರಿಯನಾದ ವನೇ! ಸಮಸ್ತವಾದ ಅಸ್ತ್ರ-ಶಸ್ತ್ರಗಳನ್ನೂ ವಿನಾಶಗೊಳಿಸುವ ಸಾಮರ್ಥ್ಯವನ್ನು ಹೊಂದಿರುವವನೇ! ಭೂಮಂಡಲಕ್ಕೆ ಒಡೆಯನೇ! ದಯಮಾಡಿ ಈ ಬ್ರಾಹ್ಮಣನಿಗೆ ಮಂಗಳವನ್ನುಂಟುಮಾಡು.

ತ್ವಂ ಧರ್ಮಸ್ತ್ವಮೃತಂ ಸತ್ಯಂ ತ್ವಂ ಯಜ್ಞೋಽಖಿಲಯಜ್ಞಭುಕ್ ।
ತ್ವಂ ಲೋಕಪಾಲಃ ಸರ್ವಾತ್ಮಾ ತ್ವಂ ತೇಜಃ ಪೌರುಷಂ ಪರಮ್ ॥೫॥

ನೀನೇ ಧರ್ಮಸ್ವರೂಪನಾಗಿರುವೆ. ಅಮೃತಸ್ವರೂಪನಾಗಿರುವೆ. ಸತ್ಯಸ್ವರೂಪನಾಗಿರುವೆ. ಸಮಸ್ತವಾದ ಯಜ್ಞಗಳೂ ನೀನೇ ಆಗಿರುವೆ. ಯಜ್ಞದ ಭೋಕ್ತೃವೂ ನೀನೇ. ಸಮಸ್ತಲೋಕಗಳ ರಕ್ಷಕನು ನೀನು. ಸರ್ವಾತ್ಮನು ನೀನು. ಪರಮಪುರುಷಪರಮಾತ್ಮನಿಗೆ ನೀನು ದಿವ್ಯವಾದ ತೇಜಸ್ಸಿನ ರೂಪದಲ್ಲಿರುವೆ. ಶ್ರೇಷ್ಠವಾದ ತೇಜಸ್ಸು ಮತ್ತು ಪೌರುಷವು ನೀನೇ.

ನಮಃ ಸುನಾಭಾಖಿಲಧರ್ಮಸೇತವೇ
ಹ್ಯಧರ್ಮಶೀಲಾಸುರಧೂಮಕೇತವೇ ।
ತ್ರೈಲೋಕ್ಯಗೋಪಾಯ ವಿಶುದ್ಧವರ್ಚಸೇ
ಮನೋಜವಾಯಾದ್ಭುತಕರ್ಮಣೇ ಗೃಣೇ ॥೬॥

ಸುಂದರವಾದ ಮಧ್ಯಭಾಗವುಳ್ಳ ಸುದರ್ಶನಚಕ್ರವೇ! ಸಮಸ್ತಧರ್ಮಗಳ ಮರ್ಯಾದೆಯನ್ನೂ ರಕ್ಷಿಸುವವನೇ! ಅಧರ್ಮಶೀಲರಾದ ಅಸುರರಿಗೆ ಅಗ್ನಿಪ್ರಾಯನಾಗಿರತಕ್ಕವನೇ! ಮೂರು ಲೋಕಗಳ ರಕ್ಷಕನೇ! ವಿಶುದ್ಧವಾದ ವರ್ಚಸ್ಸಿನಿಂದ ಕೂಡಿರುವವನೇ! ಮನಸ್ಸಿಗೆ ಸಮಾನವಾದ ವೇಗದಿಂದ ಕೂಡಿರುವವನೇ! ಅದ್ಭುತವಾದ ಕಾರ್ಯಗಳನ್ನು ಮಾಡುವವನೇ! ನಿನಗೆ ನಮಸ್ಕಾರಮಾಡಿ ಸ್ತೋತ್ರಮಾಡುತ್ತಿದ್ದೇನೆ.

ತ್ವತ್ತೇಜಸಾ ಧರ್ಮಮಯೇನ ಸಂಹೃತಂ
ತಮಃ ಪ್ರಕಾಶಶ್ಚ ಧೃತೋ ಮಹಾತ್ಮನಾಮ್ ।
ದುರತ್ಯಯಸ್ತೇ ಮಹಿಮಾ ಗಿರಾಂ ಪತೇ
ತ್ವದ್ರೂಪಮೇತತ್ಸದಸತ್ಪರಾವರಮ್ ॥೭॥

ವೇದವಾಣಿಗಳಿಗೆ ಅಧೀಶ್ವರನೇ! ನಿನ್ನ ಧರ್ಮಮಯವಾದ ತೇಜಸ್ಸಿನಿಂದ ಅಂಧಕಾರದ ನಾಶವಾಗುತ್ತದೆ. ಸೂರ್ಯನೇ ಮೊದಲಾದ ಮಹಾಪುರುಷರ ಪ್ರಕಾಶಕ್ಕೆ ರಕ್ಷಣೆಯು ಸಿಕ್ಕುತ್ತದೆ. ನಿನ್ನ ಮಹಿಮೆಯ ಪಾರವನ್ನು ತಿಳಿಯಲು ಯಾರಿಗೂ ಶಕ್ಯವಿಲ್ಲ. ಸದಸದ್ರೂಪವಾದ ಉಚ್ಚ-ನೀಚಭಾವನೆಗಳಿಂದ ಕೂಡಿರುವ ಸಮಸ್ತಕಾರ್ಯಕಾರಣಾತ್ಮಕವಾದ ಪ್ರಪಂಚವೂ ನಿನ್ನ ಸ್ವರೂಪವೇ ಆಗಿದೆ.

ಯದಾ ವಿಸೃಷ್ಟಸ್ತ್ವಮನಞ್ಜನೇನ ವೈ
ಬಲಂ ಪ್ರವಿಷ್ಟೋಽಜಿತ ದೈತ್ಯದಾನವಮ್ ।
ಬಾಹೂದರೋರ್ವಙ್ಘ್ರಿಶಿರೋಧರಾಣಿ
ವೃಕ್ಣನ್ನಜಸ್ರಂ ಪ್ರಧನೇ ವಿರಾಜಸೇ ॥೮॥

ಯಾರಿಂದಲೂ ಜಯಿಸಲ್ಪಡದೇ ಇರುವ ಸುದರ್ಶನಚಕ್ರಾಧಿದೇವತೆಯೇ! ಅಜ್ಞಾನಶೂನ್ಯನಾದ, ಪರಾತ್ಪರನಾದ ಪರಮಾತ್ಮನಿಂದ ನೀನು ಪ್ರಯೋಗಿಸಲ್ಪಟ್ಟೊಡನೆಯೇ ದೈತ್ಯ-ದಾನವರ ಸೈನ್ಯವನ್ನು ಪ್ರವೇಶಿಸಿ ಶತ್ರುಗಳ ತೋಳುಗಳನ್ನೂ, ಹೊಟ್ಟೆಗಳನ್ನೂ, ಕಾಲುಗಳನ್ನೂ, ಶಿರಸ್ಸುಗಳನ್ನೂ ಅನವರತವಾಗಿ ಕತ್ತರಿಸುತ್ತಾ ರಣಾಂಗಣದಲ್ಲಿ ತೊಳ-ತೊಳಗಿ ಬೆಳಗುವೆ.

ಸ ತ್ವಂ ಜಗತ್ತ್ರಾಣ ಖಲಪ್ರಹಾಣಯೇ
ನಿರೂಪಿತಃ ಸರ್ವಸಹೋ ಗದಾಭೃತಾ ।
ವಿಪ್ರಸ್ಯ ಚಾಸ್ಮತ್ಕುಲದೈವಹೇತವೇ
ವಿಧೇಹಿ ಭದ್ರಂ ತದನುಗ್ರಹೋ ಹಿ ನಃ ॥೯॥

ಜಗದ್ರಕ್ಷಕನೇ! ನೀನು ಎಲ್ಲವನ್ನೂ ಸಹಿಸುವ ಸಾಮರ್ಥ್ಯವುಳ್ಳವನು. ನಿನ್ನೆದುರಾಗಿ ಬರುವ ಶತ್ರುಗಳ ಅಸ್ತ್ರಗಳ ಪ್ರಭಾವವನ್ನು ತಡೆದುಕೊಳ್ಳಲು ಸಮರ್ಥನಾಗಿರುವೆ. ಗದಾಧರನಾದ ಶ್ರೀಮನ್ನಾರಾಯಣನು ದುಷ್ಟರ ನಿಗ್ರಹಾರ್ಥವಾಗಿಯೇ ನಿನ್ನನ್ನು ನಿಯೋಜಿಸಿದ್ದಾನೆ. ಆದುದರಿಂದ ನೀನು ದಯಮಾಡಿ ನಮ್ಮ ಕುಲದ ಭಾಗ್ಯೋದಯಕ್ಕಾಗಿ ಬ್ರಾಹ್ಮಣಶ್ರೇಷ್ಠರಾದ ದುರ್ವಾಸಮಹರ್ಷಿಗಳಿಗೆ ಮಂಗಳವನ್ನುಂಟುಮಾಡು. ಇದೇ ನಮಗೆ ಪರಮಾನುಗ್ರಹವಾಗಿದೆ.

ಯದ್ಯಸ್ತಿ ದತ್ತಮಿಷ್ಟಂ ವಾ ಸ್ವಧರ್ಮೋ ವಾ ಸ್ವನುಷ್ಠಿತಃ ।
ಕುಲಂ ನೋ ವಿಪ್ರದೈವಂ ಚೇದ್ದ್ವಿಜೋ ಭವತು ವಿಜ್ವರಃ ॥೧೦॥

ನಾನೇನಾದರೂ ಅಲ್ಪ-ಸ್ವಲ್ಪ ದಾನಮಾಡಿದ ಫಲವೇನಾದರೂ ಇದ್ದರೆ, ಯಜ್ಞಮಾಡಿದ ಫಲವೇನಾದರೂ ಇದ್ದರೆ, ಸ್ವಧರ್ಮವನ್ನು ಪರಿಪಾಲಿಸಿದ ಫಲವೇನಾದರೂ ಇದ್ದರೆ, ನನ್ನ ವಂಶೀಯರೆಲ್ಲರೂ ಬ್ರಾಹ್ಮಣರನ್ನೇ ತಮ್ಮ ಆರಾಧ್ಯದೇವತೆಗಳನ್ನಾಗಿ ಮಾಡಿಕೊಂಡಿರುವುದು ನಿಜವಾದರೆ ಈ ದುರ್ವಾಸಮುನಿಗಳು ಈಗಲೇ ತಾಪದಿಂದ ರಹಿತರಾಗಲಿ.

ಯದಿ ನೋ ಭಗವಾನ್ಪ್ರೀತ ಏಕಃ ಸರ್ವಗುಣಾಶ್ರಯಃ ।
ಸರ್ವಭೂತಾತ್ಮಭಾವೇನ ದ್ವಿಜೋ ಭವತು ವಿಜ್ವರಃ ॥೧೧॥

ಸಮಸ್ತಗುಣಗಳಿಗೂ ಏಕಮಾತ್ರ ಪರಮಾಶ್ರಯನಾಗಿರುವ, ದಯಾ ಮಯನಾದ ಪರಮಾತ್ಮನನ್ನು ನಾನು ಸರ್ವಪ್ರಾಣಿಗಳಲ್ಲಿಯೂ ಆತ್ಮಭಾವ ದಿಂದ ಇರುವವನನ್ನಾಗಿ ತಿಳಿದಿರುವುದು ಸತ್ಯವಾದರೆ ಮತ್ತು ಹೀಗೆ ತಿಳಿದಿರುವುದರಿಂದ ಪರಮಾತ್ಮನು ನನ್ನಲ್ಲಿ ಸುಪ್ರೀತನಾಗಿದ್ದರೆ, ಈ ಬ್ರಾಹ್ಮಣರು ತಾಪವಿಲ್ಲದವರಾಗಲಿ."

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತ! ದುರ್ವಾಸಮುನಿಗಳನ್ನು ಎಲ್ಲ ಕಡೆಗಳಿಂದಲೂ ಪರಿತಾಪ

ಗೋಳಿಸುತ್ತಿದ್ದ ಸುದರ್ಶನಚಕ್ರವನ್ನು ಅಂಬರೀಷಮಹಾರಾಜನು ಹೀಗೆ ಪ್ರಾರ್ಥಿಸಲಾಗಿ ಸುದರ್ಶನಚಕ್ರವು ಶಾಂತವಾಯಿತು. ಸುದರ್ಶನಚಕ್ರದ ತಾಪದಿಂದ ವಿಮುಕ್ತರಾದೊಡನೆಯೇ ದುರ್ವಾಸರು ನೆಮ್ಮದಿಯನ್ನು ಹೊಂದಿದರು. ಶ್ರೇಷ್ಠವಾದ ಆಶೀರ್ವಾದಗಳಿಂದ ರಾಜನನ್ನು ಹಾರೈಸುತ್ತಾ ಅವನನ್ನು ಬಹಳವಾಗಿ ಪ್ರಶಂಸಿಸಿದರು.

"ಆಹಾ! ಪರಮಾತ್ಮನ ಅನನ್ಯಭಕ್ತರ ಮಹತ್ತ್ವವೆಷ್ಟೆಂಬುದನ್ನು ನಾನಿಂದು ಕಂಡುಕೊಂಡೆನು. ನಾನು ನಿನಗೆ ಅಪರಾಧವನ್ನೇ ಮಾಡಿದೆನು. ಆದರೂ ನೀನು ನನಗೆ ಶುಭವನ್ನೇ ಕೋರುತ್ತಿರುವೆಯಲ್ಲವೇ? ಯಾರು ಭಕ್ತವತ್ಸಲನಾದ ಶ್ರೀಹರಿಯ ಪಾದಪದ್ಮಗಳನ್ನು ಪ್ರೇಮಭಾವದಿಂದ ಬಲವಾಗಿ ಹಿಡಿದಿರುತ್ತಾರೆಯೋ ಅಂತಹ ಸಾಧುಪುರುಷರಿಗೆ ಸಾಧಿಸಲು ಸಾಧ್ಯವಾಗದೇ ಇರುವ ಕಾರ್ಯವು ಯಾವುದಿದೆ? ಆ ಮಹಾತ್ಮರು ತ್ಯಜಿಸಲು ಅಸಾಧ್ಯವಾದ ವಸ್ತುವು ತಾನೇ ಯಾವುದಿದೆ? ಭಗವಂತನ ಸಲುವಾಗಿ ಅವರು ಸಮಸ್ತವನ್ನೂ ಪರಿತ್ಯಾಗಮಾಡಲು ಸಿದ್ಧರಾಗಿರುತ್ತಾರೆ. ಯಾವನ ಶುಭನಾಮಗಳನ್ನು ಕೇಳುವ ಮಾತ್ರದಿಂದಲೇ ಮಾನವನು ಪರಿಶುದ್ಧನಾಗು ವನೋ ಅಂತಹ ತೀರ್ಥಪಾದನಾದ ಶ್ರೀಭಗವಂತನ ಚರಣಕಮಲದಾಸ ರಾದ ಭಕ್ತರಿಗೆ ಯಾವ ಕರ್ತವ್ಯಗಳು ತಾನೇ ಮಾಡಲು ಉಳಿದಿರುತ್ತವೆ?

ಅಂಬರೀಷಮಹಾರಾಜ! ನಾನು ನಿನ್ನಿಂದ ಅನುಗ್ರಹಿಸಲ್ಪಟ್ಟಿದ್ದೇನೆ. ಪರಮಕಾರುಣಿಕನಾದ ನೀನು ನನ್ನ ಅಪರಾಧವನ್ನೂ ಲೆಕ್ಕಿಸದೆ ನನ್ನ ಪ್ರಾಣಗಳನ್ನು ರಕ್ಷಿಸಿರುವೆ."

ಪರೀಕ್ಷಿತ! ದುರ್ವಾಸರು ಸುದರ್ಶನಚಕ್ರದಿಂದ ಹಿಂಬಾಲಿಸಲ್ಪಟ್ಟವ ರಾಗಿ ಓಡಿಹೋದನಂತರ ಅಂಬರೀಷಮಹಾರಾಜನು ಮಹರ್ಷಿಗಾಗಿಯೇ ಕಾದಿದ್ದನು. ಭೋಜನಮಾಡಿಯೇ ಇರಲಿಲ್ಲ. ದುರ್ವಾಸರು ಬಂದು ಪಶ್ಚಾತ್ತಾಪದ ಮಾತುಗಳನ್ನಾಡಿದನಂತರ ರಾಜನು ಮಹರ್ಷಿಗಳ ಕಾಲು ಗಳನ್ನು ಹಿಡಿದುಕೊಂಡು ಅವರನ್ನು ಪ್ರಸನ್ನಗೊಳಿಸಿ ವಿಧಿಪೂರ್ವಕವಾಗಿ ಭೋಜನಮಾಡಿಸಿದನು. ಅಂಬರೀಷನು ಆದರಪೂರ್ವಕವಾಗಿ, ಅತಿಥಿಗೆ ಬಡಿಸಲು ಯೋಗ್ಯವಾದ ಷಡ್ರಸೋಪೇತವಾದ ಎಲ್ಲ ರೀತಿಯ ಭೋಜನ ಸಾಮಗ್ರಿಗಳನ್ನೂ ತಂದು ಅತಿಥಿಗಳಿಗೆ ಬಡಿಸಿದನು. ಇದರಿಂದ ಸಂತುಷ್ಟರಾದ

ದುರ್ವಾಸರು ತಮ್ಮ ಭೋಜನವಾದನಂತರ ರಾಜನಿಗೆ ಆದರಪೂರ್ವಕವಾಗಿ 'ಭುಜ್ಯತಾಂ' 'ಮಹಾರಾಜ! ನೀನಿನ್ನು ಭೋಜನಮಾಡಬಹುದು'–ಎಂದು ಹೇಳಿದರು. (ಶ್ಲೋಕ 12-19)

ಪ್ರೀತೋಽಸ್ಮ್ಯನುಗೃಹೀತೋಽಸ್ಮಿ ತವ ಭಾಗವತಸ್ಯ ವೈ ।
ದರ್ಶನಸ್ಪರ್ಶನಾಲಾಪೈರಾತಿಥ್ಯೇನಾತ್ಮಮೇಧಸಾ ॥೨೦॥

"ಮಹಾರಾಜ! ನೀನು ಭಗವಂತನಿಗೆ ಪರಮಭಕ್ತನಾಗಿರುವೆ. ನಿನ್ನ ದರ್ಶನದಿಂದಲೂ, ಸ್ಪರ್ಶದಿಂದಲೂ, ನಿನ್ನೊಡನೆ ಮಾತನಾಡುವುದ ರಿಂದಲೂ, ಬುದ್ಧಿಯನ್ನು ಪರಮಾತ್ಮನ ಕಡೆಗೆ ಒಯ್ಯುವ ಮಹಿಮೆಯಿಂದ ಕೂಡಿರುವ ನೀನು ಮಾಡಿದ ಆತಿಥ್ಯದಿಂದಲೂ ನಾನು ಅತ್ಯಂತಪ್ರಸನ್ನ ನಾಗಿದ್ದೇನೆ ಮತ್ತು ನಿನ್ನಿಂದ ನಾನು ಅನುಗೃಹೀತನಾಗಿದ್ದೇನೆ.

ಕರ್ಮಾವದಾತಮೇತತ್ತೇ ಗಾಯನ್ತಿ ಸ್ವಃಸ್ತ್ರಿಯೋ ಮುಹುಃ ।
ಕೀರ್ತಿಂ ಪರಮಪುಣ್ಯಾಂ ಚ ಕೀರ್ತಯಿಷ್ಯತಿ ಭೂರಿಯಮ್ ॥೨೧॥

ಈ ನಿನ್ನ ಉಜ್ಜ್ವಲವಾದ ಚರಿತ್ರೆಯನ್ನು ಸ್ವರ್ಗದಲ್ಲಿರುವ ದೇವಾಂಗನೆಯರು ಪದೇ-ಪದೇ ಗಾನಮಾಡುತ್ತಲೇ ಇರುತ್ತಾರೆ. ಈ ಭೂಮಂಡಲದಲ್ಲಿರುವ ಜನರೂ ಕೂಡ ಅತ್ಯಂತಪುಣ್ಯಕರವಾದ ನಿನ್ನ ಕೀರ್ತಿಯನ್ನು ಸಂಕೀರ್ತನಮಾಡುತ್ತಲೇ ಇರುತ್ತಾರೆ."

ಶ್ರೀಶುಕದೇವರು ಹೇಳುತ್ತಾರೆ :

ಪರೀಕ್ಷಿತ! ಹೀಗೆ ದುರ್ವಾಸರು ಅತ್ಯಂತಸಂತುಷ್ಟರಾಗಿ ಅಂಬರೀಷ ಮಹಾರಾಜನ ಗುಣಗಾನಮಾಡಿದರು. ಬಳಿಕ ರಾಜನ ಅನುಮತಿಯನ್ನು ಪಡೆದು ನಿಷ್ಕಾಮಕರ್ಮದಿಂದಲೇ ಪಡೆಯಲು ಸಾಧ್ಯವಾಗುವ ಬ್ರಹ್ಮಲೋಕ ವನ್ನು ಕುರಿತು ಆಕಾಶಮಾರ್ಗದ ಮೂಲಕವಾಗಿ ಪ್ರಯಾಣಮಾಡಿದರು.

ಪರೀಕ್ಷಿತ! ಸುದರ್ಶನಚಕ್ರದಿಂದ ಭಯಗೊಂಡ ದುರ್ವಾಸರು ಅಖಂಡಬ್ರಹ್ಮಾಂಡವನ್ನೂ ತ್ರಿಮೂರ್ತಿಗಳನ್ನೂ ಸಂದರ್ಶಿಸಿಕೊಂಡು ಪುನಃ ಅಂಬರೀಷಮಹಾರಾಜನ ಬಳಿಗೆ ಬರಲು ಒಂದು ವರ್ಷವೇ ಬೇಕಾಯಿತು. ಅಂಬರೀಷನು ದುರ್ವಾಸರ ಪುನರಾಗಮನವನ್ನೇ ನಿರೀಕ್ಷಿಸುತ್ತಿದ್ದು ಕೇವಲ

ನೀರನ್ನೇ ಕುಡಿಯುತ್ತಾ ಒಂದು ವರ್ಷವನ್ನು ಕಳೆದನು. ದುರ್ವಾಸ ಮುನಿಗಳು ಹೊರಟುಹೋದನಂತರ ಮಹರ್ಷಿಗಳು ಭೋಜನಮಾಡಿ ಮಿಕ್ಕುಳಿದಿದ್ದ ಪವಿತ್ರವಾದ ಅನ್ನವನ್ನು ಪ್ರಸಾದರೂಪವಾಗಿ ರಾಜನು ಸ್ವೀಕರಿಸಿದನು. ದುರ್ವಾಸರು ಸಂಕಟದಲ್ಲಿ ಸಿಕ್ಕಿಹಾಕಿಕೊಂಡುದಕ್ಕೂ ಮತ್ತು ಸಂಕಟದಿಂದ ಮುಕ್ತರಾದುದಕ್ಕೂ ಯದ್ಯಪಿ ತಾನೇ ಕಾರಣನಾದರೂ ಅಂಬರೀಷಮಹಾರಾಜನು ಭಗವಂತನ ಮಹಿಮೆಯಿಂದ ಎಲ್ಲವೂ ಆಯಿತೆಂದು ಭಾವಿಸಿದನೇ ಹೊರತು ತನ್ನಿಂದ ಹೀಗಾಯಿತೆಂದು ಕ್ಷಣಮಾತ್ರವೂ ಅವನು ಭಾವಿಸಿಕೊಳ್ಳಲಿಲ್ಲ. ಇಂತಹ ಸದ್ಗುಣಗಳ ಮೂಲಕವಾಗಿ ಪರಬ್ರಹ್ಮ ಪರಮಾತ್ಮನಾದ ವಾಸುದೇವನಲ್ಲಿ ತನ್ನ ಭಕ್ತಿಭಾವವನ್ನು ಬಹಳವಾಗಿ ವೃದ್ಧಿಪಡಿಸಿಕೊಂಡನು. ಆತನು ಭಕ್ತಿಭಾವದ ಪರಾಕಾಷ್ಠೆಯಿಂದಾಗಿ ಬ್ರಹ್ಮಲೋಕದ ಪರ್ಯಂತವಾಗಿರುವ ಸಮಸ್ತಭೋಗಪ್ರದವಾದ ಲೋಕಗಳನ್ನೂ ನರಕಲೋಕಗಳೆಂದೇ ಭಾವಿಸಿದನು. ಬಳಿಕ ಅಂಬರೀಷಮಹಾರಾಜನು ತನಗೆ ಸಮಾನಗುಣಶೀಲರಾಗಿದ್ದ ಮಕ್ಕಳಿಗೆ ರಾಜ್ಯಭಾರವನ್ನು ಒಪ್ಪಿಸಿ ಕಾಡಿಗೆ ಹೊರಟುಹೋದನು. ಅಲ್ಲಿ ಧೀರನಾದ ಅಂಬರೀಷ ಮಹಾರಾಜನು ಶ್ರೀಭಗವಂತನಾದ ವಾಸುದೇವನಲ್ಲಿ ತನ್ನ ಮನಸ್ಸನ್ನು ಲೀನಗೊಳಿಸಿ ಗುಣತ್ರಯಗಳ ಪ್ರವಾಹರೂಪವಾದ ಸಂಸಾರದಿಂದ ಬಿಡುಗಡೆ ಹೊಂದಿದನು. (ಶ್ಲೋಕ 22-26)

ಇತ್ಯೇತತ್ಪುಣ್ಯಮಾಖ್ಯಾನಮಮ್ಬರೀಷಸ್ಯ ಭೂಪತೇಃ ।
ಸಂಕೀರ್ತಯನ್ನನುಧ್ಯಾಯನ್ಭಕ್ತೋ ಭಗವತೋ ಭವೇತ್ ॥೨೭॥

ಪರೀಕ್ಷಿತಮಹಾರಾಜ! ಇದು ಅಂಬರೀಷಮಹಾರಾಜನ ಪುಣ್ಯತಮವಾದ ಆಖ್ಯಾನವಾಗಿದೆ. ಈ ಆಖ್ಯಾನವನ್ನು ಸಂಕೀರ್ತನಮಾಡುವವರೂ ಸ್ಮರಿಸುವವರೂ ಅಂಬರೀಷನಂತೆ ಭಗವದ್ಭಕ್ತರೇ ಆಗುತ್ತಾರೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ನವಮಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೬ನೆಯ ಅಧ್ಯಾಯ

ಇಕ್ಷ್ವಾಕುವಂಶದ ವರ್ಣನೆ: ಮಾಂಧಾತ ಮತ್ತು ಸೌಭರೀ ಋಷಿಗಳ ಕಥೆ

ಶ್ರೀಶುಕರು ಹೇಳುತ್ತಾರೆ :

ವಿರೂಪಃ ಕೇತುಮಾಞ್ಛಮ್ಭುರಮ್ಬರೀಷಸುತಾಸ್ತ್ರಯಃ ।
ವಿರೂಪಾತ್ಪೃಷದಶ್ವೋಽಭೂತ್ತತ್ಪುತ್ರಸ್ತು ರಥೀತರಃ ॥೧॥

ಪರೀಕ್ಷಿತಮಹಾರಾಜ! ಅಂಬರೀಷಮಹಾರಾಜನಿಗೆ ವಿರೂಪ, ಕೇತುಮಂತ ಮತ್ತು ಶಂಭು–ಎಂಬ ಮೂವರು ಮಕ್ಕಳಿದ್ದರು. ಜ್ಯೇಷ್ಠನಾದ ವಿರೂಪನಿಗೆ ಪೃಷದಶ್ವನೆಂಬ ಮಗನಿದ್ದನು. ರಥೀತರನು ಪೃಷದಶ್ವನ ಮಗ.

ರಥೀತರನಿಗೆ ಮಕ್ಕಳಾಗಲಿಲ್ಲ. ವಂಶಾಭಿವೃದ್ಧಿಗಾಗಿ ರಥೀತರನು ಅಂಗಿರಸಮಹರ್ಷಿಯನ್ನು ಪ್ರಾರ್ಥಿಸಿದನು. ರಥೀತರನ ಪ್ರಾರ್ಥನೆಯಂತೆ ಅಂಗಿರಸನು ರಥೀತರನ ಕ್ಷೇತ್ರದಲ್ಲಿ ಬ್ರಹ್ಮವರ್ಚಸ್ವಿಗಳಾದ ಹಲವಾರು ಮಕ್ಕಳನ್ನು ಪಡೆದನು.

ಇವರು ಯದ್ಯಪಿ ಕ್ಷತ್ರಿಯಕ್ಷೇತ್ರದಲ್ಲಿ ಹುಟ್ಟಿದವರಾದರೂ ಅಂಗಿರಸನಿಂದ ಹುಟ್ಟಿದ ಕಾರಣ ಆಂಗಿರಸರೆಂದೇ ಪ್ರಸಿದ್ಧರಾದರು. ರಥೀತರನ ಕ್ಷೇತ್ರಜರಾದುದರಿಂದ ರಥೀತರಪ್ರವರರೆಂದೂ ಪ್ರಸಿದ್ಧರಾದರು. ಇವರು ಕ್ಷತ್ರಿಯತ್ವಸಹಿತರಾದ ಬ್ರಾಹ್ಮಣರಾಗಿದ್ದರು. ಬ್ರಹ್ಮ-ಕ್ಷತ್ರರಿಬ್ಬರಲ್ಲಿಯೂ ಇವರಿಗೆ ಗೋತ್ರದ ಸಂಬಂಧವಿದ್ದಿತು.

ಪರೀಕ್ಷಿತನೇ! ಒಮ್ಮೆ ಮನುವು ಸೀನಿದಾಗ ಅವನ ಮೂಗಿನಿಂದ ಇಕ್ಷ್ವಾಕುವೆಂಬ ಮಗನು ಹುಟ್ಟಿದನು. ಇಕ್ಷ್ವಾಕುವಿಗೆ ನೂರು ಮಂದಿ ಮಕ್ಕಳಾದರು. ವಿಕುಕ್ಷಿ, ನಿಮಿ ಮತ್ತು ದಂಡಕರೆಂಬುವರು ಇಕ್ಷ್ವಾಕುವಿನ ನೂರು ಮಂದಿ ಮಕ್ಕಳಲ್ಲಿ ಹಿರಿಯರು. ಆ ನೂರು ಮಂದಿ ಮಕ್ಕಳಲ್ಲಿ ಇಪ್ಪತ್ತೈದು ಮಂದಿ ಆರ್ಯಾವರ್ತದ ಪೂರ್ವಭಾಗಕ್ಕೂ ಇಪ್ಪತ್ತೈದು ಮಂದಿ ಪುತ್ರರು ಆರ್ಯಾವರ್ತದ ಉತ್ತರಭಾಗಕ್ಕೂ ಅಧಿಪತಿಗಳಾಗಿದ್ದರು. ಮಧ್ಯಭಾಗವನ್ನು ವಿಕುಕ್ಷಿಯೇ ಮೊದಲಾದ ಮೂವರು ಆಳುತ್ತಿದ್ದರು. ದಕ್ಷಿಣೋ

ತ್ತರದೇಶಗಳನ್ನು ಇಕ್ಷ್ವಾಕುವು ಉಳಿದ ನಲವತ್ತೇಳು ಮಂದಿ ಮಕ್ಕಳಿಗೆ ಹಂಚಿಕೊಟ್ಟಿದ್ದನು.

ಒಮ್ಮೆ ಇಕ್ಷ್ವಾಕುವು ಅಷ್ಟಕಾಶ್ರಾದ್ಧವನ್ನು ಮಾಡಲು ಉದ್ಯುಕ್ತನಾಗಿ ತನ್ನ ಹಿರಿಯ ಮಗನಾದ ವಿಕುಕ್ಷಿಗೆ ಹೇಳಿದನು :

"ವಿಕುಕ್ಷಿಯೇ! ಪವಿತ್ರವಾದ, ಶ್ರಾದ್ಧಯೋಗ್ಯವಾದ ಮಾಂಸವನ್ನು ಶೀಘ್ರವಾಗಿ ತೆಗೆದುಕೊಂಡು ಬಾ."

ವಿಕುಕ್ಷಿಯು ಹಾಗೆಯೇ ಆಗಲೆಂದು ಹೇಳಿ ಮಾಂಸವನ್ನು ತರಲು ಅರಣ್ಯಕ್ಕೆ ಹೋದನು. ಅಲ್ಲವನು ಶ್ರಾದ್ಧಕ್ಕೆ ಯೋಗ್ಯವಾದ ಹಲವಾರು ಪ್ರಾಣಿಗಳನ್ನು ಕೊಂದನು. ಆ ಸಮಯದಲ್ಲಿ ಅವನು ಬಹಳವಾಗಿ ಬಳಲಿ ದ್ದನು. ಹಸಿವು-ಬಾಯಾರಿಕೆಗಳಿಂದ ಪೀಡಿತನಾಗಿದ್ದನು. ಶ್ರಾದ್ಧಕ್ಕಾಗಿ ಸಿದ್ಧಪಡಿಸಿದ ಮಾಂಸವನ್ನು ತಿನ್ನಬಾರದೆಂಬ ಪರಿಜ್ಞಾನವಿಲ್ಲದೆ, ಹೊಟ್ಟೆಯ ಹಸಿವನ್ನು ತೀರಿಸಿಕೊಳ್ಳುವುದಕ್ಕಾಗಿ ತಾನು ಶ್ರಾದ್ಧಕ್ಕಾಗಿ ಕೊಂದಿದ್ದ ಪ್ರಾಣಿ ಗಳಲ್ಲಿ ಮೊಲದ ಮಾಂಸವನ್ನು ತಿಂದು ಹಸಿವನ್ನು ನಿವಾರಿಸಿಕೊಂಡನು. ಉಳಿದುದನ್ನು ತಂದು ತನ್ನ ತಂದೆಗೊಪ್ಪಿಸಿದನು. ಇಕ್ಷ್ವಾಕುವು, ಮಾಂಸವು ಶ್ರಾದ್ಧಯೋಗ್ಯವಾಗಿರುವುದೇ?–ಎಂಬುದನ್ನು ಪರೀಕ್ಷಿಸಲು ಗುರುಗಳನ್ನು ಪ್ರಾರ್ಥಿಸಿಕೊಂಡನು. ಮಾಂಸವನ್ನು ನೋಡಿದ ಅವನ ಗುರುಗಳು ಅದು ದೂಷಿತವಾಗಿರುವುದೆಂದೂ ಶ್ರಾದ್ಧಕ್ಕೆ ಯೋಗ್ಯವಾಗಿಲ್ಲವೆಂದೂ ಹೇಳಿಬಿಟ್ಟರು. ಗುರುಗಳು ಹೀಗೆ ಹೇಳಲು ತನ್ನ ಮಗನು ಏನು ಮಾಡಿದ ನೆಂಬುದನ್ನು ಅವನನ್ನೇ ಕೇಳಿ ತಿಳಿದುಕೊಂಡ ರಾಜನಿಗೆ ತನ್ನ ಮಗನು ವಿಧಿ-ನಿಯಮಗಳಿಗೆ ವಿರೋಧವಾಗಿ ವರ್ತಿಸಿದನೆಂಬುದನ್ನು ತಿಳಿದು ಕೋಪಗೊಂಡನು. ಹಾಗೆ ಅಪರಾಧಮಾಡಿದ ಮಗನನ್ನು ದೇಶದಿಂದಲೇ ಓಡಿಸಿಬಿಟ್ಟನು. ಬಳಿಕ ರಾಜನು ತನ್ನ ಗುರುಗಳಾದ ವಸಿಷ್ಠರೊಡನೆ ಜ್ಞಾನದ ವಿಷಯವಾಗಿ ಚರ್ಚಿಸಿ ಜ್ಞಾನಯೋಗವನ್ನು ತಿಳಿದುಕೊಂಡನು. ಯೋಗಿಯಾಗಿ ಇಕ್ಷ್ವಾಕುವು ಶರೀರವನ್ನು ಪರಿತ್ಯಜಿಸಿ ಯೋಗಮಾರ್ಗದಿಂದ ಪರಮಪದವನ್ನು ಸೇರಿದನು. (ಶ್ಲೋಕ 2-10)

ತಂದೆಯು ಮರಣಹೊಂದಿದ ವಾರ್ತೆಯನ್ನು ಕೇಳಿ ದೇಶಾಂತರಕ್ಕೆ ಹೋಗಿದ್ದ ವಿಕುಕ್ಷಿಯು ತನ್ನ ರಾಜಧಾನಿಗೆ ಹಿಂದಿರುಗಿ ರಾಜ್ಯಾಧಿಕಾರವನ್ನು

ವಹಿಸಿಕೊಂಡನು. ವಿಕುಕ್ಷಿಯು ಹಲವಾರು ಯಜ್ಞಗಳಿಂದ ಶ್ರೀಹರಿಯನ್ನು ಆರಾಧಿಸಿದನು. ಹಸಿವನ್ನು ತಡೆಯಲಾರದೆ ಮೊಲದ ಮಾಂಸವನ್ನು ತಿಂದ ನಾದ ಕಾರಣ ವಿಕುಕ್ಷಿಯು ಶಶಾದನೆಂಬ ಹೆಸರಿನಿಂದಲೂ ಪ್ರಸಿದ್ಧನಾದನು.

ವಿಕುಕ್ಷಿಗೆ ಪುರಂಜಯನೆಂಬ ಮಗನಿದ್ದನು. ಪುರಂಜಯನನ್ನು ಕೆಲವರು ಇಂದ್ರವಾಹನೆಂದೂ, ಕೆಲವರು ಕಕುತ್ಥನೆಂದೂ ಕರೆಯುತ್ತಿದ್ದರು. ಯಾವ ಕಾರ್ಯವನ್ನು ಮಾಡಿದುದರಿಂದ ಪುರಂಜಯನಿಗೆ ಈ ಅನ್ವರ್ಥ ನಾಮಗಳು ಬಂದುವೆಂಬುದನ್ನು ಹೇಳುವೆನು ; ಕೇಳು :

ಸತ್ಯಯುಗದ ಕಡೆಯಲ್ಲಿ ದೇವತೆಗಳಿಗೂ ಮತ್ತು ದಾನವರಿಗೂ ಘೋರವಾದ ಯುದ್ಧವಾಯಿತು. ಆ ಮಹಾಸಂಗ್ರಾಮದಲ್ಲಿ ದೇವತೆ ಗಳೆಲ್ಲರೂ ದಾನವರಿಂದ ಪರಾಜಿತರಾದರು. ಆಗ ದೇವತೆಗಳು ತಮ್ಮ ಸಹಾಯಕ್ಕಾಗಿ ಪುರಂಜಯನನ್ನು ತಮ್ಮ ಮಿತ್ರನನ್ನಾಗಿ ಮಾಡಿಕೊಂಡರು. ದೇವರಾಜನು ತನಗೆ ವಾಹನವಾಗುವುದಾದರೆ ತಾನು ದಾನವರೊಡನೆ ಯುದ್ಧಮಾಡುವೆನೆಂದು ಪುರಂಜಯನು ಹೇಳಿದನು. ಇದಕ್ಕೆ ಇಂದ್ರನು ಒಪ್ಪಲಿಲ್ಲ. ಆದರೆ ದೇವತೆಗಳಿಗೂ ಆರಾಧ್ಯದೇವನಾದ, ವಿಶ್ವಾತ್ಮನಾದ, ಪ್ರಭುವಾದ ಭಗವಂತನ ಮಾತನ್ನು ಗೌರವಿಸುತ್ತಾ ಇಂದ್ರನು ಪುರಂಜಯ ನಿಗೆ ವಾಹನವಾಗಲು ಒಪ್ಪಿ, ದೊಡ್ಡ ಎತ್ತಾಗಿ ಪರಿವರ್ತನೆ ಹೊಂದಿದನು. ಸರ್ವಾಂತರ್ಯಾಮಿಯಾದ ಮಹಾವಿಷ್ಣುವು ಪುರಂಜಯನಲ್ಲಿ ತನ್ನ ಶಕ್ತಿಯೆಲ್ಲವನ್ನೂ ತುಂಬಿದನು. ವಿಷ್ಣುವಿನ ದಿವ್ಯತೇಜಸ್ಸಿನಿಂದಲೂ ಸಂಪನ್ನನಾಗಿದ್ದ ಪುರಂಜಯನು ಕವಚವನ್ನು ಧರಿಸಿ, ದಿವ್ಯವಾದ ಧನುಸ್ಸನ್ನೂ ತೀಕ್ಷ್ಣವಾದ ಬಾಣಗಳನ್ನೂ ಹಿಡಿದು, ಹೋರಿಯ ಮೇಲೇರಿ ಅದರ ಹಿಳಿಲಿನ ಹತ್ತಿರ ಕುಳಿತನು. ಹೀಗೆ ಪುರಂಜಯನು ದಾನವರೊಡನೆ ಯುದ್ಧಕ್ಕೆ ಸಿದ್ಧನಾಗಿ ನಿಂತೊಡನೆಯೇ ದೇವತೆಗಳು ಅವನನ್ನು ನಾನಾಪ್ರಕಾರವಾಗಿ ಸ್ತೋತ್ರಮಾಡಿದರು. ದೇವತೆಗಳನ್ನೂ ಜೊತೆಯಲ್ಲಿ ಕರೆದುಕೊಂಡು ಪುರಂಜಯನು ಪಶ್ಚಿಮದ ಕಡೆಯಿಂದ ದಾನವರ ಪಟ್ಟಣಕ್ಕೆ ಮುತ್ತಿಗೆಹಾಕಿ ದನು. ಪುರಂಜಯನಿಗೂ ದಾನವಶಿರೋಮಣಿಗಳಿಗೂ ರೋಮಾಂಚಕರ ವಾದ ಮತ್ತು ಘೋರವಾದ ಯುದ್ಧವು ಪ್ರಾರಂಭವಾಯಿತು. ಯುದ್ಧದಲ್ಲಿ ಯಾವ ಯಾವ ಪ್ರಮುಖರು ಯುದ್ಧಮಾಡಲು ಪುರಂಜಯನಿಗೆ ಎದುರಾಗಿ

ಬರುತ್ತಿದ್ದರೋ ಅವರೆಲ್ಲರನ್ನೂ ವೀರನಾದ ಪುರಂಜಯನು ನಿಶಿತವಾದ ಬಾಣಗಳ ಮೂಲಕವಾಗಿ ಯಮರಾಜನ ಅರಮನೆಗೆ ಕಳುಹಿಸಿಬಿಡು ತ್ತಿದ್ದನು. ಅವನ ಬಾಣವರ್ಷವು ಪ್ರಳಯಕಾಲದಲ್ಲಾಗುವ ಭಯಂಕರವಾದ ಅಗ್ನಿವರ್ಷವೇ ಆಗಿದ್ದಿತು. ಪುರಂಜಯನನ್ನು ಎದುರಿಸಿ ಯುದ್ಧಮಾಡಲು ಹೋದ ದಾನವರೆಲ್ಲರೂ ಛಿನ್ನ-ಭಿನ್ನರಾಗಿ ಹೋದರು. ಹೀಗೆ ಅನವರತ ವಾಗಿ ಪುರಂಜಯನಿಂದ ಸಂಹರಿಸಲ್ಪಡುತ್ತಿದ್ದ ದೈತ್ಯರಲ್ಲಿ ಅಳಿದುಳಿದವರು ಭಯಭೀತರಾಗಿ ಯುದ್ಧವನ್ನು ಪರಿತ್ಯಜಿಸಿ ತಮ್ಮ-ತಮ್ಮ ಮನೆಗಳಿಗೆ ಓಡಿಹೋದರು. ಹೀಗೆ ಪುರಂಜಯನು ದಾನವರನ್ನು ಪರಾಜಯಗೊಳಿಸಿ ಅವರ ಪಟ್ಟಣವನ್ನೂ ಅಪಾರವಾದ ಧನವನ್ನೂ, ಐಶ್ವರ್ಯವನ್ನೂ ಅವರ ಲ್ಲಿದ್ದ ಸಮಸ್ತವಸ್ತುಗಳನ್ನೂ ಇಂದ್ರನಿಗೆ ಸಮರ್ಪಿಸಿದನು. ದೈತ್ಯರ ಪುರವನ್ನು ಇಂದ್ರನಿಗೆ ಜಯಿಸಿಕೊಟ್ಟ ಕಾರಣದಿಂದ ರಾಜರ್ಷಿಗೆ ಪುರಂಜಯನೆಂಬ ಹೆಸರು ಸಾರ್ಥಕವಾಯಿತು. ಯುದ್ಧದಲ್ಲಿ ಇಂದ್ರನನ್ನು ವಾಹನವನ್ನಾಗಿ ಮಾಡಿಕೊಂಡಿದ್ದ ಕಾರಣ ಇಂದ್ರವಾಹ–ಎಂಬ ಅನ್ವರ್ಥನಾಮವನ್ನೂ ಪುರಂಜಯನು ಪಡೆದುಕೊಂಡನು. ಹೋರಿಯ ಹಿಳಿಲಿನ ಮೇಲೆ ಕುಳಿತು ಯುದ್ಧಮಾಡುತ್ತಿದ್ದುದರಿಂದ 'ಕಕುತ್ಸ್ಥ'–ಎಂಬ ಹೆಸರನ್ನೂ ಪುರಂಜಯನು ಪಡೆದುಕೊಂಡನು. ಹೀಗೆ ಪುರಂಜಯನು ಇಂದ್ರವಾಹ ಮತ್ತು ಕಕುತ್ಸ್ಥ ಎಂಬ ಅನ್ವರ್ಥನಾಮಗಳಿಂದಲೂ ಪ್ರಸಿದ್ಧನಾದನು. (ಶ್ಲೋಕ 11-19)

ಅನೇನಸನೆಂಬುವನು ಪುರಂಜಯನ ಪುತ್ರ. ಅನೇನಸನ ಮಗ ಪೃಥು ಎಂಬುವನು. ಪೃಥುವಿಗೆ ವಿಶ್ವರಂಧಿ ಎಂಬ ಮಗನಿದ್ದನು. ಚಂದ್ರನು ವಿಶ್ವರಂಧಿಯ ಪುತ್ರ. ಚಂದ್ರನ ಮಗ ಯುವನಾಶ್ವ. ಯುವನಾಶ್ವನ ಮಗ ಶಾಬಸ್ತ. ಶಾಬಸ್ತೀ ಎಂಬ ಪಟ್ಟಣವನ್ನು ಶಾಬಸ್ತನು ನಿರ್ಮಿಸಿದನು. ಶಾಬಸ್ತನಿಗೆ ಬೃಹದಶ್ವನೆಂಬ ಮಗನಿದ್ದನು. ಬೃಹದಶ್ವನ ಮಗ ಕುವಲ ಯಾಶ್ವ. ಕುವಲಯಾಶ್ವನು ಅತ್ಯಂತ ಬಲಿಷ್ಠನಾಗಿದ್ದನು. ಕುವಲ ಯಾಶ್ವನು ಉತ್ತಂಕಮಹರ್ಷಿಗೆ ಪ್ರಿಯವನ್ನುಂಟುಮಾಡುವುದಕ್ಕಾಗಿ ಇಪ್ಪ ತ್ತೊಂದು ಸಾವಿರ ಮಂದಿ ಮಕ್ಕಳಿಂದ ಪರಿವೃತನಾಗಿ ಯುದ್ಧದಲ್ಲಿ ದುಂಧು ಎಂಬ ರಾಕ್ಷಸನನ್ನು ಸಂಹರಿಸಿದನು. ದುಂಧುವನ್ನು ಸಂಹರಿಸಿದ್ದರಿಂದ

ಕುವಲಯಾಶ್ವನಿಗೆ ದುಂಧುಮಾರನೆಂಬ ಅನ್ವರ್ಥನಾಮವಾಯಿತು. ದುಂಧು ದೈತ್ಯನ ಮುಖದಿಂದ ಹೊರಟ ಅಗ್ನಿಯಿಂದ ಕುವಲಯಾಶ್ವನ ಮೂರು ಮಕ್ಕಳನ್ನುಳಿದು ಉಳಿದೆಲ್ಲ ಮಕ್ಕಳೂ ಭಸ್ಮವಾಗಿ ಹೋದರು. ದೃಢಾಶ್ವ, ಕಪಿಲಾಶ್ವ ಮತ್ತು ಭದ್ರಾಶ್ವ ಎಂಬ ಮೂವರು ಮಕ್ಕಳು ಮಾತ್ರ ಉಳಿದುಕೊಂಡರು. ದೃಢಾಶ್ವನಿಗೆ ಹರ್ಯಶ್ವನೆಂಬ ಮಗನು ಹುಟ್ಟಿದನು. ಹರ್ಯಶ್ವನ ಮಗ ನಿಕುಂಭ. ನಿಕುಂಭನ ಮಗ ಬರ್ಹಣಾಶ್ವ. ಬರ್ಹಣಾಶ್ವನ ಮಗ ಕೃಶಾಶ್ವ. ಕೃಶಾಶ್ವನ ಮಗ ಸೇನಜಿತ್. ಸೇನಜಿತನ ಮಗ ಯುವನಾಶ್ವ. ಯುವನಾಶ್ವನಿಗೆ ಮಕ್ಕಳಾಗಲಿಲ್ಲ. ಸಂತಾನವಿಲ್ಲದೆ ಅತ್ಯಂತದುಃಖಿತನಾದ ಯುವನಾಶ್ವನು ತನ್ನ ನೂರು ಮಂದಿ ಪತ್ನಿಯರೊಡನೆ ಕಾಡಿಗೆ ಹೊರಟುಹೋದನು. ಅರಣ್ಯದಲ್ಲಿದ್ದ ಕೃಪಾಳುಗಳಾದ ಶಾಂತಮನಸ್ಕರಾದ ಮಹರ್ಷಿಗಳು ಯುವನಾಶ್ವನ ಮೇಲೆ ದಯೆತೋರಿ ಸಂತಾನಪ್ರಾಪ್ತಿಗಾಗಿ, ಇಂದ್ರದೇವತಾಕವಾದ ಐಂದ್ರೀ ಎಂಬ ಯಜ್ಞವನ್ನು ಯುವನಾಶ್ವನಿಂದ ಮಾಡಿಸಿದರು. ಒಂದು ದಿನ ರಾತ್ರಿ ಯುವನಾಶ್ವನಿಗೆ ಬಹಳ ಬಾಯಾರಿಕೆ ಯಾಯಿತು. ರಾಜನು ಯಜ್ಞಶಾಲೆಗೆ ಹೋದನು. ಅಲ್ಲಿ ಋಷಿಗಳೆಲ್ಲರೂ ಮಲಗಿದ್ದರು. ಅವನಿಗೆ ಬೇರೆಲ್ಲೂ ಕುಡಿಯಲು ನೀರು ಸಿಕ್ಕಲಿಲ್ಲ. ಋಷಿಗಳು ಅಭಿಮಂತ್ರಿಸಿಟ್ಟಿದ್ದ ಮಂತ್ರಪೂತವಾದ ನೀರನ್ನೇ ಯುವನಾಶ್ವನು ಕುಡಿದು ಬಿಟ್ಟನು. ಬೆಳಗಾದೊಡನೆಯೇ ಋಷಿಗಳು ಎಚ್ಚರಗೊಂಡರು. ನಿತ್ಯಕ್ರಿಯೆ ಗಳನ್ನು ಮುಗಿಸಿ ಯಜ್ಞಶಾಲೆಗೆ ಬಂದು ಅಭಿಮಂತ್ರಿತವಾಗಿದ್ದ ಕಲಶವನ್ನು ನೋಡಿದರು. ಅದರಲ್ಲಿ ತೀರ್ಥವೇ ಇರಲಿಲ್ಲ. ಪರಸ್ಪರವಾಗಿ ಪ್ರಶ್ನಿಸಿದರು. **'ಕಸ್ಯ ಕರ್ಮೇದಂ ಪೀತಂ ಪುಂಸವನಂ ಜಲಮ್'**–"ಯಾವನೋ ಕಲಶದಲ್ಲಿದ್ದ ಪುತ್ರೋತ್ಪನ್ನಕರವಾದ ತೀರ್ಥವನ್ನು ಕುಡಿದುಬಿಟ್ಟಿದ್ದಾನೆ. ಈ ಕೆಲಸವನ್ನು ಮಾಡಿದವರಾರು?" ಈಶ್ವರನ ಪ್ರೇರಣೆಯಿಂದಾಗಿ ರಾಜನೇ ಈ ಕಾರ್ಯವನ್ನು ಮಾಡಿಬಿಟ್ಟಿರುವನೆಂದು ತಿಳಿದನಂತರ ಋಷಿಗಳೆಲ್ಲರೂ ಭಗವಂತನ ಪಾದಾರವಿಂದಗಳಿಗೆ ನಮಸ್ಕರಿಸಿ ಹೇಳಿದರು : (ಶ್ಲೋಕ 20-29)

"ಅಹೋ ದೈವಬಲಂ ಬಲಮ್" "ಆಶ್ಚರ್ಯ! ಮನುಷ್ಯ ಪ್ರಯತ್ನಕ್ಕಿಂತಲೂ ದೈವಬಲವೇ ಅತ್ಯಂತ ಬಲಿಷ್ಠವಾದುದು."

ಪ್ರಸವದ ಸಮಯವು ಬಂದಾಗ ಯುವನಾಶ್ವನ ಬಲಗಡೆಯ

ಹೊಟ್ಟೆಯನ್ನು ಭೇದಿಸಿಕೊಂಡು ಚಕ್ರವರ್ತಿಯಾಗಲಿದ್ದ ಗಂಡು ಶಿಶುವು ಹೊರಬಂದಿತು. ಅದು ಅಳುತ್ತಿರುವುದನ್ನು ಕಂಡು ಋಷಿಗಳು ಹೇಳಿದರು :

"**ಕಂ ಧಾಸ್ಯತಿ ಕುಮಾರೋಽಯಂ ಸ್ತನ್ಯಂ ರೋರೂಯತೇ ಭೃಶಮ್ ॥** ಈ ಮಗುವು ಮೊಲೆಹಾಲಿಗಾಗಿ ಬಹಳವಾಗಿ ರೋದನ ಮಾಡುತ್ತಿದೆ. ಈ ಶಿಶುವು ಯಾರ ಹಾಲನ್ನು ಕುಡಿದು ಅಳುವುದನ್ನು ನಿಲ್ಲಿಸುತ್ತದೆ?"

ಯಜ್ಞಪತಿಯಾದ ಇಂದ್ರದೇವನು '**ಮಾಂ ಧಾತಾ**' 'ಈ ಶಿಶುವು ನನ್ನಲ್ಲಿರುವ ಅಮೃತವನ್ನೇ ಕುಡಿಯುತ್ತದೆ'–ಎಂದು ಋಷಿಗಳಿಗೆ ಉತ್ತರಿಸಿ, '**ವತ್ಸ! ಮಾ ರೋದೀಃ**' 'ಅಳಬೇಡ, ಮಗು!'–ಎಂದು ಶಿಶುವನ್ನು ಸಮಾಧಾನಗೊಳಿಸುತ್ತಾ ಅಮೃತಮಯವಾದ ತನ್ನ ತೋರುಬೆರಳನ್ನೇ ಮಗುವಿನ ಬಾಯಿಗಿಟ್ಟನು. ಬ್ರಾಹ್ಮಣರ ಮತ್ತು ದೇವತೆಗಳ ವರಪ್ರಸಾದ ದಿಂದಾಗಿ ಹೊಟ್ಟೆಯು ಸೀಳಿಹೋಗಿದ್ದರೂ ಯುವನಾಶ್ವನು ಮರಣ ಹೊಂದಲಿಲ್ಲ. ಅವನು ಆ ಅರಣ್ಯದಲ್ಲೇ ಸ್ವಲ್ಪಕಾಲದವರೆಗೆ ತಪಸ್ಸು ಮಾಡುತ್ತಿದ್ದು ಪರಮಪದವನ್ನು ಹೊಂದಿದನು. ಇಂದ್ರನು ಯುವನಾಶ್ವನ ಆ ಶಿಶುವಿಗೆ ತ್ರಸದ್ದಸ್ಯು–ಎಂದು ಹೆಸರಿಟ್ಟನು. ರಾವಣನೇ ಮೊದಲಾದ ದುಷ್ಟರು ಯುವನಾಶ್ವನ ಮಗನು ಬಂದನೆಂದರೆ ಭಯದಿಂದ ನಡುಗು ತ್ತಿದ್ದರು. ಮುಂದೆ ತ್ರಸದ್ದಸ್ಯುವು '**ಮಾಂಧಾತಾ**'–ಎಂಬ ಹೆಸರಿನಿಂದ ಚಕ್ರವರ್ತಿಯಾಗಿ ಭೂಮಂಡಲವನ್ನಾಳುತ್ತಿದ್ದನು. ಅಚ್ಯುತನ ತೇಜಸ್ಸಿನಿಂದ ಸಂಪನ್ನನಾಗಿದ್ದ ಮಾಂಧಾತನು ಏಕಾಕಿಯಾಗಿ ಸಪ್ತದ್ವೀಪಗಳಿಂದ ಯುಕ್ತ ವಾದ ಭೂಮಂಡಲವನ್ನು ಶಾಸನಮಾಡುತ್ತಿದ್ದನು. ಆತ್ಮವಿದನಾದ ಮಾಂಧಾತನು ಬಹುದಕ್ಷಿಣಾಕವಾದ ಯಜ್ಞಗಳಿಂದ ಯಜ್ಞಸ್ವರೂಪನಾದ, ಸ್ವಯಂಪ್ರಕಾಶನಾದ, ಸರ್ವದೇವತಾಸ್ವರೂಪನಾದ, ಸರ್ವಾತ್ಮಕನಾದ, ಇಂದ್ರಿಯಾತೀತನಾದ ಪರಮಾತ್ಮನನ್ನು ಆರಾಧಿಸಿದನು. ಭಗವಂತನಿಂದ ಬೇರೆಯಾದುದು ಪ್ರಪಂಚದಲ್ಲಿಯೇ ಯಾವುದೂ ಇರುವುದಿಲ್ಲ. ಯಜ್ಞಸಾಮಗ್ರಿಗಳು, ಮಂತ್ರವಿಧಿ-ವಿಧಾನಗಳು, ಯಜಮಾನ, ಋತ್ವಿಜರು, ಧರ್ಮ, ದೇಶ ಮತ್ತು ಕಾಲ–ಇವೆಲ್ಲವೂ ಪರಮಾತ್ಮನ ಸ್ವರೂಪಗಳೇ ಆಗಿವೆ. ಸೂರ್ಯನು ಉದಯಿಸುವ ಉದಯಾಚಲದಿಂದ ಹಿಡಿದು

ಸೂರ್ಯನು ಅಸ್ತಮನಹೊಂದುವ ಅಸ್ತಾಚಲದವರೆಗಿನ ಭೂಭಾಗವೆಲ್ಲವೂ ಮಾಂಧಾತನ ಆಧಿಪತ್ಯಕ್ಕೆ ಒಳಪಟ್ಟಿದ್ದಿತು. ಶಶಬಿಂದುವಿನ ಪುತ್ರಿಯಾದ ಬಿಂದುಮತಿಯು ಮಾಂಧಾತನ ಪತ್ನಿಯಾಗಿದ್ದಳು. ಬಿಂದುಮತಿಯ ಗರ್ಭದಲ್ಲಿ ಮಾಂಧಾತನು ಪುರುಕುತ್ಸ, ಅಂಬರೀಷ ಮತ್ತು ಯೋಗಿಯಾದ ಮುಚುಕುಂದ ಎಂಬ ಮೂವರು ಮಕ್ಕಳನ್ನು ಪಡೆದನು. ಪುರುಕುತ್ಸನೇ ಮೊದಲಾದ ಮಾಂಧಾತನ ಪುತ್ರರಿಗೆ ಐವತ್ತು ಮಂದಿ ತಂಗಿಯರಿದ್ದರು. ಅವರೆಲ್ಲರೂ ಸೌಭರಿಯೊಬ್ಬನನ್ನೇ ಮದುವೆಯಾದರು. ಒಮ್ಮೆ ಮಹಾ ತಪಸ್ವಿಯಾದ ಸೌಭರಿಯು ಯಮುನಾನದಿಯಲ್ಲಿ ಮುಳುಗಿಕೊಂಡು ತಪಸ್ಸುಮಾಡುತ್ತಿದ್ದನು. ಮಹರ್ಷಿಯು ತಪಸ್ಸುಮಾಡುತ್ತಿದ್ದ ಸ್ಥಳದಲ್ಲಿಯೇ ಗಂಡು ಮೀನೊಂದು ಹಲವಾರು ಹೆಣ್ಣು ಮೀನುಗಳೊಡನೆ ಕೂಡಿಕೊಂಡು ರತಿಸುಖವನ್ನನುಭವಿಸುತ್ತಿದ್ದುದನ್ನು ಸೌಭರಿಯು ಒಮ್ಮೆ ವೀಕ್ಷಿಸಿದನು. ಮಹರ್ಷಿಯ ಮನಸ್ಸಿನಲ್ಲಿಯೂ ಸಂಸಾರಸುಖವನ್ನನುಭವಿಸಬೇಕೆಂಬ ಆಸೆಯುಂಟಾಯಿತು. ಆತನು ಮಾಂಧಾತನ ಬಳಿಗೆ ಹೋಗಿ ಅವನ ಐವತ್ತು ಕನ್ಯೆಯರಲ್ಲಿ ಒಬ್ಬಳನ್ನು ವಿವಾಹಮಾಡಿಕೊಡುವಂತೆ ಪ್ರಾರ್ಥಿಸಿದನು. ರಾಜನು ಯಥೋಚಿತವಾಗಿ ಉತ್ತರಿಸಿದನು :

"ಮಹರ್ಷಿಯೇ! ಕ್ಷತ್ರಿಯಸಂಪ್ರದಾಯದಂತೆ ನನ್ನ ಯಾವಳಾದರೂ ಕನ್ಯೆಯು ನಿನ್ನನ್ನು ವರಿಸಿ ಸ್ವಯಂವರಮಾಲೆಯನ್ನು ನಿನ್ನ ಕೊರಳಿಗೆ ಹಾಕಿದರೆ ನೀನವಳನ್ನು ಪ್ರತಿಗ್ರಹಿಸಬಹುದಾಗಿದೆ." (ಶ್ಲೋಕ 30-40)

ರಾಜನ ಈ ಮಾತನ್ನು ಕೇಳಿ ಸೌಭರಿಋಷಿಯು ರಾಜನ ಮನೋಗತವಾಗಿದ್ದ ಅಭಿಪ್ರಾಯವನ್ನು ತಿಳಿದುಕೊಂಡನು. "ಈ ಮಹರ್ಷಿಯು ಮುದುಕನಾಗಿದ್ದಾನೆ. ಕೂದಲು ನರೆತಿದೆ. ಚರ್ಮವೆಲ್ಲವೂ ಸುಕ್ಕಿಹೋಗಿದೆ. ತಲೆಯು ನಡುಗುತ್ತಿದೆ. ಇಂತಹ ಹಣ್ಣು-ಹಣ್ಣು ಮುದುಕನನ್ನು ಯಾವ ಕನ್ಯೆಯು ತಾನೇ ಮದುವೆಯಾದಾಳು?"–ಎಂದು ಭಾವಿಸಿ ರಾಜನು ಈ ವಿಧವಾದ ತಿರಸ್ಕಾರಪೂರ್ವಕವಾದ ಉತ್ತರವನ್ನು ಕೊಟ್ಟಿರುತ್ತಾನೆ. ಇದಕ್ಕೆ ತಕ್ಕುದಾದ ಕಾರ್ಯವನ್ನು ಮಾಡಿ ನಾನು ಈ ರಾಜನಿಗೆ ನನ್ನ ಪ್ರಭಾವವನ್ನು ತೋರಿಸಿಕೊಡುತ್ತೇನೆ. ದೇವಕನ್ಯೆಯರೂ ಮೋಹಗೊಳ್ಳುವಂತಹ ಅತ್ಯಂತಸುಂದರವಾದ ಶರೀರವನ್ನು ನಾನು ಧಾರಣೆಮಾಡು

ತ್ತೇನೆ. ನನ್ನ ಶರೀರದ ಸೌಂದರ್ಯವನ್ನೂ ಕಾಂತಿಯನ್ನೂ ನೋಡಿ ದೇವಕನ್ಯೆಯರೇ ಮೋಹಿಸುತ್ತಾರೆಂದ ಮೇಲೆ ರಾಜಕನ್ಯೆಯರ ವಿಷಯವಾಗಿ ಹೇಳುವುದೇನಿದೆ?"–ಹೀಗೆ ನಿಶ್ಚಯಿಸಿದ ಸೌಭರಿಯು ಕ್ಷಣಮಾತ್ರದಲ್ಲಿ ತನ್ನ ತಪಸ್ಸಿನ ಪ್ರಭಾವದಿಂದ ಕಡುಚೆಲುವನಾದ ಯುವಕನಾದನು. ರಾಜನ ಆಜ್ಞೆಯಂತೆ ಅಂತಃಪುರದ ರಕ್ಷಕರು ಸೌಭರಿಯನ್ನು ಪುಷ್ಪಮಾಲಿಕೆಗಳಿಂದಲೂ, ಚಂದನಾಗರುಗಳಿಂದಲೂ ಸಮಲಂಕೃತವಾಗಿದ್ದ ಕನ್ಯಾಂತಃಪುರಕ್ಕೆ ಕರೆದೊಯ್ದರು. ಐವತ್ತು ಮಂದಿ ಕನ್ಯೆಯರಿಂದ ಸಮಲಂಕೃತವಾಗಿದ್ದ ಆ ಅಂತಃಪುರದಲ್ಲಿ ಕೇವಲ ಒಬ್ಬ ಕನ್ಯೆಯು ಮಾತ್ರವಲ್ಲ; ಸೌಭರಿಯ ಸೌಂದರ್ಯಕ್ಕೆ ಮನಸೋತು ಐವತ್ತು ಮಂದಿ ರಾಜಕನ್ಯೆಯರೂ ಸೌಭರಿಯೊಬ್ಬನನ್ನೇ ಮದುವೆಯಾದರು. ಎಲ್ಲ ರಾಜಕುಮಾರಿಯರ ಮನಸ್ಸೂ ಸೌಭರಿಯೊಬ್ಬನಲ್ಲಿಯೇ ಆಸಕ್ತವಾಗಿಬಿಟ್ಟಿತು. ಸೌಭರಿಯಲ್ಲಿ ಅವರೆಲ್ಲರೂ ಇಟ್ಟಿದ್ದ ಅನ್ಯಾದೃಶವಾದ ಪ್ರೇಮದ ಪರಿಣಾಮವಾಗಿ ಅವರಲ್ಲಿಯೇ ಪರಸ್ಪರ ವೈಶಮ್ಯವುಂಟಾಯಿತು. ಒಬ್ಬಳು ಮತ್ತೊಬ್ಬಳನ್ನು ನೋಡಿ ಅಸೂಯೆಪಡತೊಡಗಿದಳು. "ಮನ್ಮಥಾಕಾರನಾಗಿರುವ ಕಡು ಚೆಲುವನಾಗಿರುವ ಈ ಯುವಕನಿಗೆ ನಾನೇ ಅನುರೂಪಳಾದ ಕನ್ಯೆ. ನೀನು ಇವನ ಸಮೀಪಕ್ಕೂ ಬರಲು ಯೋಗ್ಯಳಾಗಿಲ್ಲ"–ಹೀಗೆ ಒಬ್ಬೊಬ್ಬರೂ ಪರಸ್ಪರವಾಗಿ ಹೇಳತೊಡಗಿದರು. ಋಗ್ವೇದಿಯಾದ ಸೌಭರಿಯು ಮಾಂಧಾತನ ಐವತ್ತು ಕನ್ಯೆಯರನ್ನೂ ಪಾಣಿಗ್ರಹಣಮಾಡಿಕೊಂಡನು. ಅವನು ತನ್ನ ಅಪಾರವಾದ ತಪಸ್ಸಿನ ಪ್ರಭಾವದಿಂದ ಬಹುಮುಖ್ಯವಾದ ಸಾಮಗ್ರಿಗಳಿಂದ ಸುಸಜ್ಜಿತವಾದ, ಅನೇಕವಾದ ಉಪವನಗಳಿಂದಲೂ, ನಿರ್ಮಲವಾದ ಸರೋವರಗಳಿಂದಲೂ, ಸೌಗಂಧಿಕಾಪುಷ್ಪಗಳ ವನಗಳಿಂದಲೂ ಪರಿವೃತವಾಗಿದ್ದ ಅರಮನೆಗಳನ್ನು ತನ್ನ ಪತ್ನಿಯರಿಗಾಗಿ ನಿರ್ಮಿಸಿದನು. ಆ ಅರಮನೆಗಳಲ್ಲಿ ಬಹುಮೂಲ್ಯವಾದ ಹಂಸತೂಲಿಕಾತಲ್ಪಗಳೂ, ಸುಂದರವಾದ ಆಸನಗಳೂ, ವಸ್ತ್ರಗಳೂ, ಒಡವೆ-ವಸ್ತುಗಳೂ, ಸ್ನಾನಗೃಹಗಳೂ, ಅನುಲೇಪನಯೋಗ್ಯವಾದ ದಿವ್ಯಗಂಧಗಳೂ, ರುಚಿಯಾದ ಭೋಜನ ಸಾಮಗ್ರಿಗಳೂ, ಪುಷ್ಪಮಾಲಿಕೆಗಳೂ ಸದಾಕಾಲದಲ್ಲಿಯೂ ಸಿದ್ಧವಾಗಿರುತ್ತಿದ್ದುವು. ಈ ಎಲ್ಲ ಭೋಗವಸ್ತುಗಳೊಡನೆ ಸೌಭರೀಮುನಿಯು ತನ್ನ

ಪತ್ನಿಯರೊಡನೆ ಪ್ರತ್ಯೇಕ-ಪ್ರತ್ಯೇಕವಾದ ಶರೀರಗಳನ್ನು ಧರಿಸಿ ಪ್ರತ್ಯೇಕ-ಪ್ರತ್ಯೇಕವಾಗಿಯೇ ಆ ಎಲ್ಲ ಐವತ್ತು ಮಂದಿ ರಾಜಕನ್ಯೆಯರೊಡನೆಯೂ ವಿಹರಿಸುತ್ತಿದ್ದನು. ಸುಂದರವಾದ ವಸ್ತ್ರಾಭರಣಗಳನ್ನು ಧರಿಸಿದ್ದ ಸ್ತ್ರೀ-ಪುರುಷರು ಸೌಭರಿಯನ್ನೂ ಮತ್ತು ಅವನ ಪತ್ನಿಯರನ್ನೂ ಸದಾ ಕಾಲದಲ್ಲಿಯೂ ಸೇವಿಸುತ್ತಿದ್ದರು. ಅರಮನೆಗಳ ಸುತ್ತಲೂ ಇದ್ದ ಉಪವನಗಳಲ್ಲಿ ಪಕ್ಷಿಗಳು ಕಲ-ಕಲನಿನಾದಮಾಡುತ್ತಿದ್ದುವು. ದುಂಬಿಗಳು ಝೇಂಕರಿಸುತ್ತಿದ್ದುವು. ಏಳು ದ್ವೀಪಗಳಿಗೂ ಅಧಿಪತಿಯಾಗಿ ಚಕ್ರವರ್ತಿ ಎನಿಸಿಕೊಂಡಿದ್ದ ಮಾಂಧಾತನು-ಸೌಭರೀಮುನಿಯು ಅನಿರ್ವಚನೀಯವಾದ ರೀತಿಯಲ್ಲಿ ತನ್ನ ಹೆಣ್ಣುಮಕ್ಕಳೊಡನೆ ಗೃಹಸ್ಥಾಶ್ರಮದಲ್ಲಿ ಅನುಭವಿಸುತ್ತಿದ್ದ ಸುಖವನ್ನು ನೋಡಿ ಅಚ್ಚರಿಗೊಂಡನು. ಸಾರ್ವಭೌಮಸಂಪತ್ತಿನಿಂದ ಸಂಪನ್ನನಾಗಿರುವೆನೆಂಬ ಮಾಂಧಾತನ ಗರ್ವವು ಉಡುಗಿಹೋಯಿತು.

ಪರೀಕ್ಷಿತ! ಹೀಗೆ ಸೌಭರೀಮುನಿಯು ಗೃಹಸ್ಥಾಶ್ರಮಿಯಾಗಿ ವಿಷಯಸುಖಗಳನ್ನು ನಾನಾಪ್ರಕಾರವಾಗಿ ಅನುಭವಿಸುತ್ತಿದ್ದನು. ತುಪ್ಪದ ಧಾರೆಯನ್ನು ಎಷ್ಟು ಸ್ವೀಕರಿಸಿದರೂ ಅಗ್ನಿಗೆ ತೃಪ್ತಿಯೇ ಉಂಟಾಗುವುದಿಲ್ಲ ವಷ್ಟೇ! ಹಾಗೆಯೇ ನಿರಂತರವಾಗಿ ಕಾಮೋಪಭೋಗಸುಖಗಳನ್ನು ಅನುಭವಿಸುತ್ತಿದ್ದರೂ ಸೌಭರಿಗೆ ತೃಪ್ತಿಯೇ ಉಂಟಾಗಲಿಲ್ಲ. ಆದರೆ ಕಾಲಕ್ರಮದಲ್ಲಿ ಆತನಿಗೆ ವಿಷಯಸುಖಗಳಿಂದ ಸಂತೋಷವಾಗುವುದಕ್ಕೆ ಬದಲಾಗಿ ಅಸಂತೋಷವೇ ಆಗತೊಡಗಿತು.

ಒಂದು ದಿನ ಋಗ್ವೇದಾಚಾರ್ಯನು ಸ್ವಸ್ಥಚಿತ್ತನಾಗಿ ಕುಳಿತಿದ್ದನು. ಯಮುನಾನದಿಯ ನೀರಿನಲ್ಲಿ ಮುಳುಗಿ ತಪಸ್ಸುಮಾಡುತ್ತಿದ್ದಾಗ ಮೀನುಗಳ ಕಾಮಕೇಳಿಯನ್ನು ನೋಡಿ ತನ್ನ ಮನಸ್ಸು ಆಕರ್ಷಿತವಾದುದು ಆತನ ಸ್ಮರಣೆಗೆ ಬಂದಿತು. ಅಲ್ಲಿಂದ ಮುಂದೆ ವಿಷಯಗಳ ತೃಪ್ತಿಗಾಗಿ ತನ್ನ ತಪಸ್ಸಿನ ಫಲವೆಲ್ಲವೂ ವ್ಯಯಿಸಿಹೋದುದನ್ನು ಜ್ಞಾಪಿಸಿಕೊಂಡು ಆತನು ಹೀಗೆ ಉದ್ಗರಿಸಿದನು : (ಶ್ಲೋಕ 41-49)

ಅಹೋ ಇಮಂ ಪಶ್ಯತ ಮೇ ವಿನಾಶಂ
ತಪಸ್ವಿನಃ ಸಚ್ಚರಿತವ್ರತಸ್ಯ ।

ಅನ್ತರ್ಜಲೇ ವಾರಿಚರಪ್ರಸಙ್ಗಾ-
ತ್ಪ್ರಚ್ಯಾವಿತಂ ಬ್ರಹ್ಮ ಚಿರಂ ಧೃತಂ ಯತ್ ||೫೦||

"ಅಯ್ಯೋ! ನನ್ನ ಹಣೆಬರಹವನ್ನಾದರೂ ನೋಡಿರಿ! ನಾನು ದೊಡ್ಡ ತಪಸ್ವಿಯಾಗಿದ್ದೆನು. ನಿಯಮಪೂರ್ವಕವಾಗಿ ವ್ರತಾನುಷ್ಠಾನಗಳನ್ನು ಮಾಡುತ್ತಿದ್ದೆನು. ಈಗ ನೋಡಿರಿ! ನನ್ನ ಅಧಃಪತನವಾಗಿ ಹೋಗಿದೆ. ನಾನು ಬಹಳಕಾಲದಿಂದಲೂ ನನ್ನ ಬ್ರಹ್ಮತೇಜಸ್ಸನ್ನು ಕಾಪಾಡಿಕೊಂಡು ಬಂದಿದ್ದೆನು. ಆದರೆ ನೀರಿನಲ್ಲಿ ವಿಹರಿಸುತ್ತಿದ್ದ ಮತ್ಸ್ಯದಂಪತಿಗಳ ಸಂಸರ್ಗದಿಂದಾಗಿ ನನ್ನ ಬ್ರಹ್ಮತೇಜಸ್ಸೆಲ್ಲವೂ ನಷ್ಟವಾಗಿ ಹೋಯಿತು.

ಸಙ್ಗಂ ತ್ಯಜೇತ ಮಿಥುನವ್ರತಿನಾಂ ಮುಮುಕ್ಷುಃ
ಸರ್ವಾತ್ಮನಾ ನ ವಿಸೃಜೇದ್ಬಹಿರಿನ್ದ್ರಿಯಾಣಿ ।
ಏಕಶ್ಚರನ್ರಹಸಿ ಚಿತ್ತಮನನ್ತ ಈಶೇ
ಯುಞ್ಜೀತ ತದ್ವ್ರತಿಷು ಸಾಧುಷು ಚೇತ್ಪ್ರಸಙ್ಗಃ ||

ಮೋಕ್ಷದ ಇಚ್ಛೆ ಇರುವವರು ಮಿಥುನವ್ರತಿಗಳಾದ ಸಂಸಾರಿಗಳ ಸಹವಾಸವನ್ನು ಖಂಡಿತವಾಗಿಯೂ ಬಿಟ್ಟುಬಿಡಬೇಕು. ಸರ್ವಪ್ರಕಾರ ದಿಂದಲೂ ಮುಮುಕ್ಷುಗಳು ಇಂದ್ರಿಯಗಳನ್ನು ಒಂದು ಕ್ಷಣವಾದರೂ ಹೊರಮುಖಗಳನ್ನಾಗಿ ಮಾಡಲೇಬಾರದು. ಯಾವಾಗಲೂ ಏಕಾಕಿಗಳಾಗಿರ ಬೇಕು ಮತ್ತು ಏಕಾಂತದಲ್ಲಿ ತಮ್ಮ ಮನಸ್ಸನ್ನು ಸರ್ವಶಕ್ತನಾದ ಭಗವಂತನಲ್ಲಿ ಲೀನಗೊಳಿಸಬೇಕು. ಸಂಗವನ್ನು ಮಾಡಬೇಕಾದ ಅಪೇಕ್ಷೆಯಿದ್ದರೆ ಭಗವಂತನಲ್ಲಿ ಅನನ್ಯಪ್ರೇಮಿಗಳಾದ, ನಿಷ್ಠಾವಂತರಾದ ಸಾಧು-ಸತ್ಪುರುಷರ ಸಂಗವನ್ನು ಮಾಡಬೇಕು.

ಏಕಸ್ತಪಸ್ವ್ಯಹಮಥಾಮ್ಭಸಿ ಮತ್ಸ್ಯಸಙ್ಗಾ-
ತ್ಪಞ್ಚಾಶದಾಸಮುತ ಪಞ್ಚಸಹಸ್ರಸರ್ಗಃ ।
ನಾನ್ತಂ ವ್ರಜಾಮ್ಯುಭಯಕೃತ್ಯಮನೋರಥಾನಾಂ
ಮಾಯಾಗುಣೈರ್ಹೃತಮತಿರ್ವಿಷಯೇಽರ್ಥಭಾವಃ ||೫೨||

ನಾನು ಹಿಂದೆ ಏಕಾಂತದಲ್ಲಿ ಏಕಾಕಿಯಾಗಿಯೇ ತಪಸ್ಸು ಮಾಡು ತ್ತಿದ್ದೆನು. ಮೀನುಗಳ ಸಹವಾಸದಿಂದಾಗಿ ಐವತ್ತು ರೂಪಗಳನ್ನು ಧರಿಸಿ

ಐವತ್ತು ಕನ್ಯೆಯರನ್ನು ವಿವಾಹವಾದೆನು. ಐದು ಸಾವಿರ ಮಕ್ಕಳನ್ನು ಪಡೆದೆನು. ಸತ್ವಾದಿಗುಣಗಳ ಹಿಡಿತಕ್ಕೆ ಸಿಕ್ಕಿ ಬುದ್ಧಿಗೆಟ್ಟಿರುವ ನಾನು ವಿಷಯಸುಖಗಳಲ್ಲಿ ಪುರುಷಾರ್ಥದ ಭಾವವನ್ನು ಇಟ್ಟುಕೊಂಡಿರುತ್ತೇನೆ. ಇದರಿಂದಾಗಿ ನಾನು ಮೋಕ್ಷಸಾಧನೆಯ ಅಂತವನ್ನೂ ಕಾಣುತ್ತಿಲ್ಲ. ಸ್ತ್ರೀಭೋಗಾದಿ ಮನೋರಥದ ಅಂತವನ್ನೂ ಕಾಣುತ್ತಿಲ್ಲ."

ಹೀಗೆ ವಿಚಾರಮಾಡಿದ ಸೌಭರೀಮುನಿಯು ಸ್ವಲ್ಪ ದಿವಸಗಳವರೆಗೆ ಮಾತ್ರವೇ ಅರಮನೆಯಲ್ಲಿದ್ದನು. ಬಳಿಕ ಅವನು ವಿರಕ್ತನಾಗಿ ಮನಸ್ಸನ್ನು ಪರಮಾತ್ಮನಲ್ಲಿರಿಸಿ ಕಾಡಿಗೆ ಹೊರಟುಹೋದನು. ಪತಿಯೇ ಸರ್ವಸ್ವವೆಂದು ಭಾವಿಸಿದ್ದ ಅವನ ಐವತ್ತು ಮಂದಿ ಪತ್ನಿಯರೂ ಕೂಡ ಅವನ ಜೊತೆಯಲ್ಲಿಯೇ ಅರಣ್ಯಕ್ಕೆ ಹೊರಟುಹೋದರು. ಅರಣ್ಯಕ್ಕೆ ಹೋದ ಆತ್ಮವಿದನಾದ ಸೌಭರಿಯು ಘೋರವಾದ ತಪಸ್ಸನ್ನು ಮಾಡುತ್ತಾ ಶರೀರವನ್ನು ಶೋಷಿಸಿಬಿಟ್ಟನು. ಆಹವನೀಯಾದಿ ಅಗ್ನಿಗಳಲ್ಲಿ ಶರೀರವನ್ನೂ ಪರಮಾತ್ಮನಲ್ಲಿ ಮನಸ್ಸನ್ನೂ ಲೀನಗೊಳಿಸಿ ಮುಕ್ತಿಯನ್ನು ಪಡೆದನು.

ಪರೀಕ್ಷಿತಮಹಾರಾಜ! ಸೌಭರಿಯ ಪತ್ನಿಯರು ತಮ್ಮ ಪತಿಯು ಆಧ್ಯಾತ್ಮಿಕಗತಿಯನ್ನು ಹೊಂದಿದುದನ್ನು ಕಂಡು, ಮುನಿಯ ಪ್ರಭಾವದಿಂದ ಅವರೆಲ್ಲರೂ–ಶಾಂತವಾದ ಅಗ್ನಿಯ ಜ್ವಾಲೆಗಳು ಅಗ್ನಿಯಲ್ಲಿಯೇ ಲೀನವಾಗಿ ಹೋಗುವಂತೆ–ಮಹರ್ಷಿಯಲ್ಲಿಯೇ ಲೀನರಾಗಿಹೋದರು.

(ಶ್ಲೋಕ 53-55)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ನವಮಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೭ನೆಯ ಅಧ್ಯಾಯ

ತ್ರಿಶಂಕು ಮತ್ತು ಹರಿಶ್ಚಂದ್ರರ ಕಥೆ

ಶ್ರೀಶುಕಮುನಿಗಳು ಹೇಳುತ್ತಾರೆ :

ಮಾನ್ಧಾತುಃ ಪುತ್ರಪ್ರವರೋ ಯೋಽಮ್ಬರೀಷಃ ಪ್ರಕೀರ್ತಿತಃ ।
ಪಿತಾಮಹೇನ ಪ್ರವೃತೋ ಯೌವನಾಶ್ವಶ್ಚ ತತ್ಸುತಃ ॥೧॥

ಪರೀಕ್ಷಿತಮಹಾರಾಜ! ಮಾಂಧಾತನ ಪುತ್ರರಲ್ಲಿ ಎರಡನೆಯ ಮಗ

ನಾದ ಶ್ರೇಷ್ಠನಾದ ಅಂಬರೀಷನ ವಿಷಯವನ್ನು ಹೇಳಿದ್ದೆನಲ್ಲವೇ? ಅಂಬರೀಷನನ್ನು ಅಜ್ಜನಾದ (ಮಾಂಧಾತನ ತಂದೆಯಾದ) ಯುವನಾಶ್ವನು ಪುತ್ರನನ್ನಾಗಿ ಸ್ವೀಕರಿಸಿದನು.

ಅಂಬರೀಷನ ಮಗನು ಯೌವನಾಶ್ವನೆಂಬ ಹೆಸರಿನಿಂದ ವಿಖ್ಯಾತನಾದನು. ಯೌವನಾಶ್ವನ ಮಗ ಹಾರೀತನು. ಮಾಂಧಾತೃವಿನ ವಂಶದಲ್ಲಿ ಅಂಬರೀಷ, ಯೌವನಾಶ್ವ, ಹಾರೀತ ಈ ಮೂವರೂ ಅವಾಂತರಗೋತ್ರಗಳ ಪ್ರವರ್ತಕರಾದರು.

ಪರೀಕ್ಷಿತನೇ! ಮಾಂಧಾತೃವಿನ ಜ್ಯೇಷ್ಠಪುತ್ರನಾದ ಪುರುಕುತ್ಸನ ವಂಶಾನುವರ್ಣನೆಯನ್ನು ಮಾಡುವೆನು ; ಕೇಳು :

ನರ್ಮದಾ ಎಂಬುವಳು ನಾಗಕನ್ಯೆ. ಅವಳ ಸಹೋದರರು ಅವಳನ್ನು ಪುರುಕುತ್ಸನಿಗೆ ಕೊಟ್ಟು ಮದುವೆಮಾಡಿದರು. ನಾಗರಾಜನಾದ ವಾಸುಕಿಯ ಆಜ್ಞೆಯಂತೆ ನರ್ಮದೆಯು ತನ್ನ ಪತಿಯನ್ನು ರಸಾತಲಕ್ಕೆ ಕರೆದೊಯ್ದಳು. ವಿಷ್ಣುಶಕ್ತಿಯಿಂದ ಸಂಪನ್ನನಾಗಿದ್ದ ಪುರುಕುತ್ಸನು ನಾಗಗಳಿಗೆ ಉಪಟಳವನ್ನುಂಟುಮಾಡುತ್ತಿದ್ದ, ವಧಿಸಲು ಯೋಗ್ಯರಾಗಿದ್ದ ಗಂಧರ್ವರನ್ನು ಸಂಹರಿಸಿದನು. ಇದರಿಂದ ನಾಗರಾಜನಾದ ವಾಸುಕಿಯು ಸಂತುಷ್ಟನಾಗಿ–ಈ ಪ್ರಸಂಗವನ್ನು ಸ್ಮರಣೆಮಾಡಿದವರಿಗೆ ಸರ್ಪಗಳಿಂದ ಭಯವಿರದೆಂಬ ವರವನ್ನು ಪುರುಕುತ್ಸನಿಗೆ ಕೊಟ್ಟನು. ಪುರುಕುತ್ಸರಾಜನ ಮಗ ತ್ರಸದಸ್ಯು.* ತ್ರಸದಸ್ಯುವಿನ ಮಗ ಅನರಣ್ಯ. ಅನರಣ್ಯನ ಮಗ ಹರ್ಯಶ್ವ. ಅರುಣನೆಂಬುವನು ಹರ್ಯಶ್ವನ ಪುತ್ರ. ಅರುಣನ ಮಗ ತ್ರಿಬಂಧನ. ತ್ರಿಬಂಧನನ ಮಗ ಸತ್ಯವ್ರತ. ಸತ್ಯವ್ರತನು ತ್ರಿಶಂಕುವೆಂಬ ಹೆಸರಿನಿಂದ ವಿಖ್ಯಾತನಾದನು. ಯದ್ಯಪಿ ತ್ರಿಶಂಕುವು ತನ್ನ ತಂದೆಯ ಮತ್ತು ಗುರುವಿನ ಶಾಪದಿಂದ ಚಂಡಾಲನಾಗಿದ್ದರೂ ವಿಶ್ವಾಮಿತ್ರನ ಪ್ರಭಾವದಿಂದಾಗಿ ಅವನು ಸಶರೀರನಾಗಿಯೇ ಸ್ವರ್ಗಕ್ಕೆ ಹೋದನು. ದೇವತೆಗಳು ಅವನನ್ನು ಅಲ್ಲಿಂದಲೂ ಕೆಳಕ್ಕೆ ತಳ್ಳಿಬಿಟ್ಟರು. ತಲೆಕೆಳಗಾಗಿ ಅವನು ಕೆಳಕ್ಕೆ ಬೀಳುವುದರಲ್ಲಿದ್ದಾಗ ವಿಶ್ವಾಮಿತ್ರನು ತನ್ನ ತಪೋಬಲದಿಂದ ತ್ರಿಶಂಕುವನ್ನು ಆಕಾಶ

* ತ್ರಸದಸ್ಯುಃ ಪೌರಕುತ್ಸ್ಯಃ (ಶ್ರುತಿ)

ದಲ್ಲಿಯೇ ನಿಲ್ಲುವಂತೆ ಸ್ತಂಭಿಸಿದನು. ಅವನು ಈಗಲೂ ಅಲ್ಲಿಯೇ ಇದ್ದಾನೆ.* ತ್ರಿಶಂಕುವಿನ ಮಗ ಹರಿಶ್ಚಂದ್ರ. ಹರಿಶ್ಚಂದ್ರನ ಸಲುವಾಗಿ ವಸಿಷ್ಠ-ವಿಶ್ವಾಮಿತ್ರರು ಪರಸ್ಪರವಾಗಿ ಶಾಪಕೊಟ್ಟುಕೊಂಡು ಪಕ್ಷಿಗಳಾಗಿ ಹಲವಾರು ವರ್ಷಗಳವರೆಗೆ ಕಾದಾಡಿದರು.[1] ಹರಿಶ್ಚಂದ್ರನಿಗೆ ಮಕ್ಕಳಿರಲಿಲ್ಲ. ಇದರಿಂದ ಅವನು ಬಹಳ ದುಃಖಿತನಾದನು. ನಾರದರ ಉಪದೇಶದಂತೆ ಹರಿಶ್ಚಂದ್ರನು ವರುಣದೇವನಿಗೆ ಶರಣಾಗಿ ಹೇಳಿದನು : "**ಪುತ್ರೋ ಮೇ ಜಾಯತಾಂ ಪ್ರಭೋ! ಯದಿ ವೀರೋ ಮಹಾರಾಜ ತೇನೈವ ತ್ವಾಂ ಯಜೇ ।** ಪ್ರಭುವೇ! ನನಗೊಬ್ಬ ಪುತ್ರನು ಹುಟ್ಟುವಂತೆ ಅನುಗ್ರಹಿಸು. ನಿನ್ನ

---

* ತ್ರಿಶಂಕು–ಗೂಟಗಳಂತೆ ದುಃಖಹೇತುಗಳಾದ ಮೂರು ದೋಷಗಳುಳ್ಳವನಾದುದರಿಂದ ತ್ರಿಶಂಕುವೆಂಬ ಹೆಸರಾಯಿತು. **ಪಿತುಶ್ಚಾ ಪರಿತೋಷೇಣ ಗುರೋರ್ದೋಗ್ಧ್ರೀ ವಧೇನ ಚ । ಅಪ್ರೋಕ್ಷಿತೋಪಯೋಗಾಚ್ಚ ತ್ರಿವಿಧಸ್ತೇ ವ್ಯತಿಕ್ರಮಃ ।** ತ್ರಿಶಂಕುವು ಒಬ್ಬ ವಿವಾಹವಾಗಿದ್ದ ಹೆಂಗಸನ್ನು ಅಪಹರಿಸಿಕೊಂಡು ಬಂದುದನ್ನು ಕಂಡು ಇವನ ತಂದೆ ತ್ರಿಬಂಧನನು–'ನೀನು ಚಂಡಾಲರ ಸಂಪರ್ಕವನ್ನು ಹೊಂದು'–ಎಂದು ಶಪಿಸಿದನು. ಅನಂತರ ಶ್ವಪಾಕರ ಗುಂಪಿನಲ್ಲಿ ತ್ರಿಶಂಕುವು ಅಲೆದಾಡುತ್ತಿರಲು ರಾಜನು ಸರಿಯಾದ ಮಗನನ್ನು ಪಡೆಯಲು ತಪಸ್ಸಿಗಾಗಿ ಅರಣ್ಯಕ್ಕೆ ಹೋದನು. ರಾಜ್ಯವು ಅರಾಜಕವಾಯಿತು. ಅನಾವೃಷ್ಟಿಯಿಂದ ಪ್ರಜೆಗಳು ತತ್ತರಿಸಿದರು. ತಂದೆಯು ತನ್ನನ್ನು ಮನೆಬಿಟ್ಟು ಓಡಿಸಿದಾಗ ವಸಿಷ್ಠರೂ ಅದಕ್ಕೆ ಸಮ್ಮತಿಯಿತ್ತಿದ್ದರಿಂದ ಅವರ ಮೇಲಿನ ಕೋಪದಿಂದ ತ್ರಿಶಂಕುವು ವಿಶ್ವಾಮಿತ್ರರನ್ನು ಆಶ್ರಯಿಸಿದನು. ವಸಿಷ್ಠರ ಧೇನುವನ್ನು ಕೊಂದು ಅದರ ಮಾಂಸವನ್ನು ತಿಂದನು. ತಂದೆಗೆ ಸಮ್ಮತವಲ್ಲದ ಕಾರ್ಯವನ್ನು ಮಾಡಿದುದು ಒಂದು. ಆಚಾರ್ಯರ ಧೇನುವನ್ನು ಕೊಂದುದು ಒಂದು. ಅದರ ಮಾಂಸವನ್ನು ಸಂಸ್ಕರಿಸದೇ ಹಸಿಯಾಗಿಯೇ ತಿಂದುದು ಒಂದು. ಈ ಮೂರು ಪಾಪಕಾರ್ಯಗಳನ್ನು ಮಾಡಿದ್ದರಿಂದ ಪತಿತನಾದ ಇವನಿಗೆ ತ್ರಿಶಂಕು–ಎಂದು ಹೆಸರಾಯಿತು.

1 ವಿಶ್ವಾಮಿತ್ರರು ಹರಿಶ್ಚಂದ್ರನಿಂದ ಸುಳ್ಳುಹೇಳಿಸುವುದಾಗಿ ಪ್ರತಿಜ್ಞೆಮಾಡಿ ಯಜ್ಞದಕ್ಷಿಣೆಯನ್ನು ಬೇಡುವ ನೆಪದಿಂದ ರಾಜನನ್ನು ರಾಜ್ಯದಿಂದಲೇ ಓಡಿಸಿಬಿಟ್ಟರು. ಅದಕ್ಕಾಗಿ ಹರಿಶ್ಚಂದ್ರನ ಗುರುಗಳಾದ ವಸಿಷ್ಠರು ಕೋಪಗೊಂಡು ವಿಶ್ವಾಮಿತ್ರರನ್ನು ನೀರುಕೋಳಿಯಾಗುವಂತೆ ಶಪಿಸಿದರು. ಇದಕ್ಕೆ ಪ್ರತಿಯಾಗಿ ವಿಶ್ವಾಮಿತ್ರರು ವಸಿಷ್ಠರನ್ನು ಕೊಕ್ಕರೆಯಾಗುವಂತೆ ಶಪಿಸಿದರು. ಹೀಗೆ ಇಬ್ಬರೂ ಪರಸ್ಪರ ಶಾಪದಿಂದ ಪಕ್ಷಿಜನ್ಮವನ್ನು ಹೊಂದಿ ಅನೇಕ ವರ್ಷಗಳವರೆಗೆ ಕಾದಾಡುತ್ತಲೇ ಇದ್ದರು.

ಅನುಗ್ರಹದಿಂದ ನನಗೆ ವೀರಪುತ್ರನು ಹುಟ್ಟಿದರೆ ಅವನನ್ನೇ ಯಜ್ಞಪಶು ವನ್ನಾಗಿ ಮಾಡಿಕೊಂಡು ನಿನ್ನ ಪ್ರೀತ್ಯರ್ಥವಾಗಿ ಯಜ್ಞಮಾಡುತ್ತೇನೆ."

ವರುಣನು ಹಾಗೆಯೇ ಆಗಲೆಂದನು. ವರುಣದೇವನ ಕೃಪೆಯಿಂದ ಹರಿಶ್ಚಂದ್ರನಿಗೆ ರೋಹಿತನೆಂಬ ಮಗನು ಹುಟ್ಟಿದನು. ಮಗುವು ಹುಟ್ಟಿ ದೊಡನೆಯೇ ವರುಣನು ಹರಿಶ್ಚಂದ್ರನ ಬಳಿಗೆ ಹೋಗಿ ಹೇಳಿದನು :

"ಹರಿಶ್ಚಂದ್ರ! ನಿನಗೆ ಪುತ್ರನು ಹುಟ್ಟಿದ್ದಾನೆ. ನೀನು ಹೇಳಿದಂತೆ ಅವನನ್ನು ಪಶುವನ್ನಾಗಿಟ್ಟುಕೊಂಡು ನೀನೀಗಲೇ ವರುಣಯಜ್ಞವನ್ನು ಮಾಡು."

"ವರುಣದೇವ! ಯಜ್ಞಪಶುವಾಗಲಿರುವ ಈ ರೋಹಿತನಿಗೆ ಹತ್ತು ದಿವಸಗಳು ತುಂಬಿದರೆ ಇವನು ಯಜ್ಞಪಶುವಾಗಲು ಯೋಗ್ಯನಾಗುತ್ತಾನೆ."

ಹತ್ತು ದಿವಸಗಳು ಕಳೆದೊಡನೆಯೇ ಪುನಃ ವರುಣನು ಬಂದು ಹರಿಶ್ಚಂದ್ರನಿಗೆ ಹೇಳಿದನು :

"ಹರಿಶ್ಚಂದ್ರ! ನೀನು ಹೇಳಿದ್ದಂತೆ ರೋಹಿತನಿಗೆ ಹತ್ತು ದಿವಸಗಳು ತುಂಬಿವೆ. ಈಗಲೇ ಯಜ್ಞಮಾಡು."

"ವರುಣದೇವ! ಈ ವಿಷಯವು ನಿನಗೆ ತಿಳಿಯದೇ? ಯಜ್ಞಪಶು ವಿಗೆ ಹಲ್ಲುಗಳಿರಬೇಕು. ಹಲ್ಲುಗಳಿರುವ ಪಶುಗಳೇ ಯಜ್ಞದ ಪಶುಗಳಾಗಲು ಯೋಗ್ಯವಾಗಿರುತ್ತವೆ. ರೋಹಿತನಿಗೆ ಇನ್ನೂ ಹಲ್ಲುಗಳು ಹುಟ್ಟಿರುವುದಿಲ್ಲ. ಹಲ್ಲುಗಳು ಹುಟ್ಟಿದೊಡನೆಯೇ ಇವನನ್ನು ಯಜ್ಞಪಶುವನ್ನಾಗಿ ಮಾಡಿ ಕೊಂಡು ನಾನು ವರುಣಯಾಗವನ್ನು ಮಾಡುವೆನು." (ಶ್ಲೋಕ 2-11)

ರೋಹಿತನಿಗೆ ಹಲ್ಲುಗಳು ಹುಟ್ಟಿವೆಯೆಂಬುದನ್ನು ತಿಳಿದು ವರುಣನು ಹರಿಶ್ಚಂದ್ರನ ಬಳಿಗೆ ಬಂದು ಹೇಳಿದನು :

"ಹರಿಶ್ಚಂದ್ರ! ರೋಹಿತನಿಗೆ ಹಲ್ಲುಗಳು ಹುಟ್ಟಿವೆ. ಈಗಲಾದರೂ ಯಾಗವನ್ನು ಮಾಡು."

"ವರುಣದೇವ! ಹಾಲುಹಲ್ಲುಗಳು ಬಿದ್ದನಂತರ ಪಶುವು ಯಜ್ಞ ಯೋಗ್ಯವಾಗುತ್ತದೆ. ಆದುದರಿಂದ ರೋಹಿತನ ಹಾಲುಹಲ್ಲುಗಳು ಬಿದ್ದು ಹೋಗಲಿ."

ರೋಹಿತನ ಹಾಲುಹಲ್ಲುಗಳು ಬಿದ್ದುಹೋದನಂತರ ವರುಣನು ಹರಿಶ್ಚಂದ್ರನ ಬಳಿಗೆ ಬಂದು ಹೇಳಿದನು :

"ಹರಿಶ್ಚಂದ್ರ! ರೋಹಿತನ ಹಾಲುಹಲ್ಲುಗಳು ಬಿದ್ದುಹೋಗಿವೆ. ಈಗಲಾದರೂ ವರುಣಯಜ್ಞವನ್ನು ಮಾಡು."

"ವರುಣದೇವ! ಹಲ್ಲುಗಳಿಲ್ಲದ ಪಶುಗಳನ್ನು ಯಜ್ಞಪಶುವನ್ನಾಗಿ ಉಪಯೋಗಿಸಬಾರದು. ಆದುದರಿಂದ ರೋಹಿತನಿಗೆ ಎರಡನೆಯ ಬಾರಿ ಹಲ್ಲುಗಳು ಹುಟ್ಟಲಿ."

ರೋಹಿತನಿಗೆ ಎರಡನೆಯ ಬಾರಿ ಹಲ್ಲುಗಳು ಹುಟ್ಟಿದನಂತರ ವರುಣನು ಬಂದು ಹೇಳಿದನು :

"ಹರಿಶ್ಚಂದ್ರ! ರೋಹಿತನಿಗೆ ಎರಡನೆಯ ಬಾರಿಗೆ ಎಲ್ಲ ಹಲ್ಲುಗಳೂ ಹುಟ್ಟಿಕೊಂಡಿವೆ. ಈಗಲಾದರೂ ವರುಣಯಜ್ಞವನ್ನು ಮಾಡು."

"ವರುಣದೇವ! ಕ್ಷತ್ರಿಯಬಾಲಕನು ಕವಚವನ್ನು ತೊಡಲು ಸಮರ್ಥನಾದಾಗ ಯಜ್ಞಪಶುವಾಗಲು ಯೋಗ್ಯನಾಗುತ್ತಾನೆ. ಆದುದರಿಂದ ರೋಹಿತನಿಗೆ ಕವಚವನ್ನು ಧರಿಸುವ ಯೌವನವು ಪ್ರಾಪ್ತವಾಗಲಿ."

ಪರೀಕ್ಷಿತ! ಹೀಗೆ ಹರಿಶ್ಚಂದ್ರನು ಪುತ್ರವ್ಯಾಮೋಹದಿಂದ ನಿಯಂತ್ರಿತವಾದ ಬುದ್ಧಿಯಿಂದ ಇಲ್ಲಸಲ್ಲದ ಕುಂಟುನೆಪಗಳನ್ನು ಹೇಳುತ್ತಾ ಕಾಲವನ್ನು ತಳ್ಳುತ್ತಿದ್ದನು. ವರುಣನೂ ಅವನು ಹೇಳಿದಂತೆಯೇ ಮಾಡುತ್ತಾ ಹರಿಶ್ಚಂದ್ರನ ವರುಣಯಾಗದ ಕಾಲವನ್ನು ಎದುರುನೋಡುತ್ತಲೇ ಇದ್ದನು. ಆ ವೇಳೆಗೆ ರೋಹಿತನಿಗೆ ತನ್ನ ತಂದೆಯು ತನ್ನನ್ನು ಯಜ್ಞಪಶುವನ್ನಾಗಿ ಮಾಡಿ ವರುಣಯಾಗವನ್ನು ಮಾಡಲಿರುವನೆಂಬ ವಿಷಯವು ತಿಳಿದುಹೋಯಿತು. ಆಗ ಅವನು ತನ್ನ ಆತ್ಮರಕ್ಷಣೆಗಾಗಿ ಧನುರ್ಬಾಣಗಳನ್ನು ಹಿಡಿದು ಅರಣ್ಯಕ್ಕೆ ಹೊರಟುಹೋದನು. ಕೆಲವು ದಿವಸಗಳ ನಂತರ ರೋಹಿತನಿಗೆ–ತನ್ನ ತಂದೆಯ ವಂಚನೆಯಿಂದ ಕುಪಿತನಾದ ವರುಣನು ಆತನನ್ನು ಆಕ್ರಮಣಮಾಡಿರುವನೆಂಬ ಮತ್ತು ಇದರ ಪರಿಣಾಮವಾಗಿ ತನ್ನ ತಂದೆಯು ಮಹೋದರರೋಗದಿಂದ ನರಳುತ್ತಿರುವನೆಂಬ ಸಮಾಚಾರವು ತಿಳಿಯಿತು. ಒಡನೆಯೇ ರೋಹಿತನು ನಗರಕ್ಕೆ ಹಿಂದಿರುಗಿ

ದನು. ಆದರೆ ನಗರಕ್ಕೆ ಬರುವುದರೊಳಗಾಗಿಯೇ ಇಂದ್ರನು ಬಂದು ರೋಹಿತನನ್ನು ತಡೆಯುತ್ತಾ ಹೇಳಿದನು :

"ರೋಹಿತನೇ! ಯಜ್ಞಪಶುವಾಗಿ ಮರಣಹೊಂದುವುದಕ್ಕಿಂತಲೂ ಪವಿತ್ರವಾದ ತೀರ್ಥಕ್ಷೇತ್ರಗಳ ಯಾತ್ರೆಮಾಡುತ್ತಾ ಪ್ರಪಂಚಪರ್ಯಟನ ಮಾಡುತ್ತಿದ್ದರೆ ಕೀರ್ತಿಯೂ ಉಂಟಾಗುವುದು ; ಪುಣ್ಯವೂ ದೊರೆಯು ವುದು." (ಶ್ಲೋಕ 12-18)

ಇಂದ್ರನ ಮಾತಿನಂತೆ ರೋಹಿತನು ಒಂದು ವರ್ಷದವರೆಗೆ ತೀರ್ಥಕ್ಷೇತ್ರಗಳ ಯಾತ್ರೆಯನ್ನು ಮಾಡುತ್ತಿದ್ದು ಪಟ್ಟಣಕ್ಕೆ ಹಿಂದಿರುಗಿದನು. ಆ ವೇಳೆಗೆ ಪುನಃ ಇಂದ್ರನು ಅಡ್ಡವಾದನು. ಹೀಗೆ ಐದು ಬಾರಿಯೂ ತೀರ್ಥ ಯಾತ್ರೆಗಳನ್ನು ಮುಗಿಸಿಕೊಂಡು ಬಂದ ರೋಹಿತನನ್ನು ವೃದ್ಧಬ್ರಾಹ್ಮಣ ವೇಷದಲ್ಲಿ ಆಗಮಿಸುತ್ತಿದ್ದ ಇಂದ್ರನು ತಡೆದು ಹಿಂದಿರುಗಿಸಿಬಿಟ್ಟನು. ಆರನೆಯ ಬಾರಿಯೂ ರೋಹಿತನು ಯಾತ್ರೆಯನ್ನು ಮುಗಿಸಿ ಹಿಂದಿರುಗಿ ದನು. ಆಗಲೂ ಅವನಿಗೆ ನಗರಪ್ರವೇಶಮಾಡಲು ಸಾಧ್ಯವಾಗಲಿಲ್ಲ. ಇಂದ್ರನ ನಿರ್ದೇಶನದಂತೆ ಹಿಂದಿರುಗಬೇಕಾಯಿತು. ಹೀಗೆ ರೋಹಿತನು ಆರು ವರ್ಷ ಗಳ ಕಾಲ ತೀರ್ಥಯಾತ್ರೆಗಳನ್ನು ಮಾಡುತ್ತಾ ಅರಣ್ಯದಲ್ಲಿಯೇ ಕಳೆದನು. ಏಳನೆಯ ಬಾರಿಗೆ ನಗರಿಗೆ ಹಿಂದಿರುಗುವಾಗ ರೋಹಿತನು ಅಜೀಗರ್ತನೆಂಬ ಬ್ರಾಹ್ಮಣನಿಂದ ಅವನ ನಡುಮಗನಾದ ಶುನಶ್ಶೇಪನನ್ನು ಬೆಲೆಗೆ ಕೊಂಡು ತನ್ನ ಜೊತೆಯಲ್ಲಿ ಕರೆತಂದನು. ಆಗ ಇಂದ್ರನು ಅವನನ್ನು ತಡೆಯಲಿಲ್ಲ. ರೋಹಿತನು ನೇರವಾಗಿ ತಂದೆಯ ಬಳಿಗೆ ಹೋಗಿ ಯಜ್ಞಪಶುವಾಗಿ ಕರೆ ತಂದಿದ್ದ ಶುನಃಶೇಪನನ್ನು ತಂದೆಗೊಪ್ಪಿಸಿ ನಮಸ್ಕರಿಸಿದನು. ಯಶೋವಂತ ನಾದ ಮತ್ತು ಅದ್ಭುತಚಾರಿತ್ರ್ಯನಾದ ಹರಿಶ್ಚಂದ್ರನು ಪುರುಷಮೇಧದ ಮೂಲಕವಾಗಿ ವರುಣನೇ ಮೊದಲಾದ ದೇವತೆಗಳನ್ನು ಆರಾಧಿಸಿ ಮಹೋದರರೋಗದಿಂದ ಮುಕ್ತನಾದನು.

ಆ ಮಹಾಯಜ್ಞದಲ್ಲಿ ವಿಶ್ವಾಮಿತ್ರನೇ ಹೋತೃವಾಗಿದ್ದನು. ಪರಮ ಸಂಯಮಿಯಾದ ಜಮದಗ್ನಿಯೇ ಅಧ್ವರ್ಯುವಾಗಿದ್ದನು. ವಸಿಷ್ಠನೇ ಬ್ರಹ್ಮ ನಾಗಿದ್ದನು. ಅಯಾಸ್ಯಮುನಿಯು ಸಾಮಗಾನಮಾಡುವ ಉದ್ಗಾತೃವಾಗಿ ದ್ದನು. ಇಂತಹ ಅದ್ಭುತವಾದ ಮಹಾಯಜ್ಞದಿಂದ ಪ್ರಸನ್ನನಾದ ಇಂದ್ರನು

ಹರಿಶ್ಚಂದ್ರನಿಗೆ ಸುವರ್ಣಮಯವಾದ ರಥವನ್ನು ಅನುಗ್ರಹಿಸಿ ಕೊಟ್ಟನು. ಶುನಃಶೇಪನೂ ಯೂಪಸ್ತಂಭದ ಕಟ್ಟಿನಿಂದ ಬಿಡುಗಡೆಹೊಂದಿದನು.

ಪರೀಕ್ಷಿತನೇ! ಮುಂದೆ ನಾನು ನಿನಗೆ ಶುನಃಶೇಪನ ಮಾಹಾತ್ಮ್ಯೆಯನ್ನು ಹೇಳುತ್ತೇನೆ.

ಹರಿಶ್ಚಂದ್ರನು ತನ್ನ ಪತ್ನಿಯೊಡನೆ ದೃಢವಾದ ಸತ್ಯನಿಷ್ಠೆಯಲ್ಲಿದ್ದುದನ್ನು ಕಂಡು ವಿಶ್ವಾಮಿತ್ರನಿಗೆ ಆನಂದವಾಯಿತು. ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ಶಾಶ್ವತವಾದ ಜ್ಞಾನಮಾರ್ಗವನ್ನು ಉಪದೇಶಿಸಿದನು. ಹರಿಶ್ಚಂದ್ರಮಹಾರಾಜನು ಧರ್ಮದಿಂದ ರಾಜ್ಯವನ್ನಾಳಿ ಕೀರ್ತಿಯನ್ನು ಗಳಿಸಿ ಕಡೆಗೆ ವಿಶ್ವಾಮಿತ್ರನ ಉಪದೇಶದಂತೆ ಯೋಗಬಲದಿಂದ ಮನಸ್ಸನ್ನು ಪೃಥ್ವಿಯಲ್ಲಿಯೂ, ಪೃಥ್ವಿಯನ್ನು ಜಲತತ್ತ್ವದಲ್ಲಿಯೂ, ಜಲತತ್ತ್ವವನ್ನು ತೇಜಸ್ತತ್ತ್ವದಲ್ಲಿಯೂ, ತೇಜಸ್ತತ್ತ್ವವನ್ನು ವಾಯುತತ್ತ್ವದಲ್ಲಿಯೂ, ವಾಯುತತ್ತ್ವವನ್ನು ಆಕಾಶತತ್ತ್ವದಲ್ಲಿಯೂ, ಆಕಾಶತತ್ತ್ವವನ್ನು ಅಹಂಕಾರ ತತ್ತ್ವದಲ್ಲಿಯೂ, ಅಹಂಕಾರವನ್ನು ಮಹತ್ತತ್ತ್ವದಲ್ಲಿಯೂ, ಮಹತ್ತತ್ತ್ವವನ್ನು ಜ್ಞಾನಕಲೆಯಲ್ಲಿಯೂ ಲೀನಗೊಳಿಸಿ, ಅದರಿಂದ ಅಜ್ಞಾನವನ್ನು ಭಸ್ಮೀಕರಿಸಿ, ಅಜ್ಞಾನಕಲೆಯನ್ನು ತೊರೆದು, ಕರ್ಮಬಂಧನದಿಂದ ಬಿಡುಗಡೆಹೊಂದಿ ನಿರ್ದೇಶಿಸುವುದಕ್ಕಾಗಲೀ, ಊಹಿಸುವುದಕ್ಕಾಗಲೀ ಸಾಧ್ಯವಾಗದ ಪರಮಾನಂದಮಯವಾದ ಸ್ವಸ್ವರೂಪದಲ್ಲಿ ನೆಲೆಗೊಂಡನು. (ಶ್ಲೋಕ 19-27)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೮ನೆಯ ಅಧ್ಯಾಯ

ಸಗರನ ಚರಿತ್ರೆ

ಶ್ರೀಶುಕದೇವರು ಹೇಳುತ್ತಾರೆ :

ಹರಿತೋ ರೋಹಿತಸುತಶ್ಚಮ್ಪಸ್ತಸ್ಮಾದ್ವಿನಿರ್ಮಿತಾ ।
ಚಮ್ಪಾಪುರೀ ಸುದೇವೋಽತೋ ವಿಜಯೋ ಯಸ್ಯ ಚಾತ್ಮಜಃ ॥೧॥

ಪರೀಕ್ಷಿತ! ಹರಿಶ್ಚಂದ್ರನ ಮಗನಾದ ರೋಹಿತನಿಗೆ ಹರಿತನೆಂಬ

ಮಗನಿದ್ದನು. ಹರಿತನ ಮಗ ಚಂಪ. ಇವನೇ ಚಂಪಾಪುರಿಯನ್ನು ನಿರ್ಮಿಸಿದವನು. ಚಂಪನ ಮಗ ಸುದೇವ. ಸುದೇವನ ಮಗ ವಿಜಯ. ಭರುಕ–ಎಂಬುವನು ವಿಜಯನ ಮಗ.

ಭರುಕನಿಗೆ ವೃಕನೆಂಬ ಮಗನಿದ್ದನು. ವೃಕನ ಮಗ ಬಾಹುಕ. ಶತ್ರುಗಳು ಬಾಹುಕನ ರಾಜ್ಯವನ್ನು ಅಪಹರಿಸಿಬಿಟ್ಟರು. ಆಗ ಬಾಹುಕನು ತನ್ನ ಪತ್ನಿಯೊಡನೆ ಕಾಡಿಗೆ ಓಡಿಹೋದನು. ಹಲವಾರು ವರ್ಷಗಳು ಕಳೆದನಂತರ ವೃದ್ಧನಾಗಿದ್ದ ಬಾಹುಕನು ಮರಣಹೊಂದಿದನು. ಅವನ ಪತ್ನಿಯೂ ಅವನೊಡನೆ ಸಹಗಮನಕ್ಕೆ ಸಿದ್ಧಳಾದಳು. ಮಹರ್ಷಿಯಾದ ಔರ್ವನಿಗೆ ಬಾಹುಕನ ಪತ್ನಿಯು ಗರ್ಭವತಿಯಾಗಿರುವಳೆಂಬ ವಿಷಯವು ಜ್ಞಾನದೃಷ್ಟಿಯಿಂದ ತಿಳಿಯಿತು. ಇದರಿಂದ ಔರ್ವನು ಅವಳು ಸಹಗಮನ ಮಾಡುವುದನ್ನು ತಡೆದನು. ಬಾಹುಕನ ಪಟ್ಟಮಹಿಷಿಯ ಸವತಿಯರಿಗೆ ಈ ವಿಷಯವು ತಿಳಿಯಿತು. ಅವರು ಅಸೂಯೆಯಿಂದಾಗಿ ಅನ್ನದಲ್ಲಿ ವಿಷವನ್ನು ಬೆರೆಸಿ ಬಾಹುಕನ ಪಟ್ಟಮಹಿಷಿಗೆ ತಿನ್ನಲು ಕೊಟ್ಟರು. ಆದರೆ ದೈವವಶಾತ್ ಸವತಿಯರ ಸಂಕಲ್ಪವು ಫಲಿಸಲಿಲ್ಲ. ವಿಷವು ಗರ್ಭದ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಗರ (ವಿಷ) ದೊಡನೆಯೇ ಶಿಶುವು ಹುಟ್ಟಿ-ಸಗರ (ವಿಷದೊಡನೆ ಇರುವವನು) ಎಂಬ ಹೆಸರಿನಿಂದಲೇ ಅದು ವಿಖ್ಯಾತವಾಯಿತು. ಸಗರನು ಮುಂದೆ ಮಹಾಯಶೋವಂತನಾದ ರಾಜನಾದನು. ಅವನು ಚಕ್ರವರ್ತಿಯೂ ಆದನು. ಸಗರನ ಮಕ್ಕಳು ಭೂಮಿಯನ್ನು ಅಗೆದು ಸಾಗರಗಳನ್ನು ನಿರ್ಮಿಸಿದರು. ಸಗರನು ತನ್ನ ಗುರುವಾದ ಔರ್ವನ ಆಜ್ಞೆಯನ್ನು ಗೌರವಿಸಿ ತಾಲಜಂಘ, ಯವನ, ಶಶ, ಹೈಹಯ ಮತ್ತು ಬರ್ಬರಜಾತೀಯರನ್ನು ಸಂಹರಿಸಲಿಲ್ಲ. ಅವರ ರೂಪ ವನ್ನು ವಿರೂಪಗೊಳಿಸಿದನು. ಸಗರನ ಆಜ್ಞೆಯಂತೆ ಕೆಲವರು ತಲೆಗಳನ್ನೂ, ಗಡ್ಡ-ಮೀಸೆಗಳನ್ನೂ ಬೋಳಿಸಿಕೊಂಡರು. ಕೆಲವರು ತಲೆಯನ್ನು ಮಾತ್ರ ಬೋಳಿಸಿಕೊಂಡು ಗಡ್ಡ-ಮೀಸೆಗಳನ್ನು ಹಾಗೆಯೇ ಬಿಟ್ಟುಕೊಂಡರು. ಕೆಲವರು ಅರ್ಧಮುಂಡನ ಮಾಡಿಸಿಕೊಂಡರು. ಕೆಲವರು ಕೇವಲ ಕೌಪೀನ ಧಾರಿಗಳಾದರು. ಕೆಲವರಿಗೆ ಕೆಳ ವಸ್ತ್ರಗಳಿದ್ದರೂ ಮೇಲು ವಸ್ತ್ರಗಳಿರಲಿಲ್ಲ. (ಹೊದೆಯಲು ವಸ್ತ್ರಗಳಿರಲಿಲ್ಲ.) ಹೀಗೆ ಅವರು ಸಗರನ ಆಜ್ಞೆಯಂತೆ

ವಿಕಾರವಾದ ರೂಪಗಳನ್ನು ಧರಿಸಿದರು. ಹೀಗೆ ಸಗರನು ವಿಶ್ವವೆಲ್ಲವನ್ನೂ ಜಯಿಸಿದನಂತರ ಔರ್ವಮಹರ್ಷಿಗಳ ಉಪದೇಶದಂತೆ ಅಶ್ವಮೇಧಯಜ್ಞದ ಮೂಲಕವಾಗಿ ಸರ್ವವೇದಾತ್ಮನೂ ದೇವಾತ್ಮನೂ ಆದ, ಆತ್ಮಸ್ವರೂಪನಾದ, ಸರ್ವಶಕ್ತನಾದ ಶ್ರೀಹರಿಯನ್ನು ಆರಾಧಿಸಿದನು. (ಶ್ಲೋಕ 2-7)

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಸಗರನು ಅಶ್ವಮೇಧಯಾಗಕ್ಕೆ ಸಂಕಲ್ಪಿಸಿ ಅಶ್ವಮೇಧಾಶ್ವವನ್ನು ಭೂಮಿಯಲ್ಲಿ ಸಂಚರಿಸಲು ಬಿಟ್ಟಾಗ ಆ ಕುದುರೆಯನ್ನು ಇಂದ್ರನು ಅಪಹರಿಸಿಬಿಟ್ಟನು. ಆ ಸಮಯದಲ್ಲಿ ಮಹಾರಾಣಿಯಾದ ಸುಮತಿಯ ಗರ್ಭಸಂಭೂತರಾಗಿದ್ದ ಅರುವತ್ತು ಸಾವಿರ ಸಗರನ ಮಕ್ಕಳೂ ಸಗರನ ಆಜ್ಞೆಯಂತೆ ಕುದುರೆಗಾಗಿ ಭೂಮಂಡಲದಲ್ಲೆಲ್ಲಾ ಅಡ್ಡಾಡಿದರು. ಅಶ್ವಮೇಧಾಶ್ವವು ಅವರಿಗೆ ಭೂಮಂಡಲದಲ್ಲೆಲ್ಲೂ ಸಿಕ್ಕದಿರಲು ಗರ್ವಿಷ್ಠರಾಗಿದ್ದ ಅವರು ಭೂಮಿಯನ್ನೇ ಅಗೆಯಲು ಪ್ರಾರಂಭಿಸಿದರು. ಹಾಗೆ ಅಗೆಯುತ್ತಿದ್ದಾಗ ಅವರು ಭೂಮಂಡಲದ ಈಶಾನ್ಯದಿಕ್ಕಿನಲ್ಲಿ ತಪಸ್ಸುಮಾಡುತ್ತಿದ್ದ ಕಪಿಲಮಹರ್ಷಿಗಳ ಸಮೀಪದಲ್ಲಿ ಅಶ್ವಮೇಧಾಶ್ವವು ಇರುವುದನ್ನು ಕಂಡರು. ಕಪಿಲಮಹರ್ಷಿಗಳು ಕಣ್ಣು ಮುಚ್ಚಿ ಕುಳಿತಿರುವುದನ್ನು ನೋಡಿ ಸಗರನ ಮಕ್ಕಳು ಅಬ್ಬರಿಸತೊಡಗಿದರು :

"ಕುದುರೇ ಕಳ್ಳ! ಇಲ್ಲೇ ಕಣ್ಣುಮುಚ್ಚಿ ಕುಳಿತಿದ್ದಾನೆ. ಸಿಕ್ಕಿಬಿದ್ದ. ಈ ಪಾಪಿಯನ್ನು ಈಗಲೇ ಕೊಂದುಹಾಕಿರಿ. ಹಿಡಿಯಿರಿ ಇವನನ್ನು"–ಎಂದು ಅಬ್ಬರಿಸುತ್ತಾ ಆಯುಧಗಳನ್ನೆತ್ತಿಕೊಂಡು ಕಪಿಲಮಹರ್ಷಿಗಳನ್ನು ಕೊಲ್ಲಲು ಮುನ್ನುಗ್ಗಿದರು. ಆ ಸಮಯಕ್ಕೆ ಸರಿಯಾಗಿ ಮಹರ್ಷಿಗಳು ಕಣ್ತೆರೆದರು. ಇಂದ್ರನ ಪ್ರಭಾವದಿಂದಾಗಿ ರಾಜಕುಮಾರರು ಬುದ್ಧಿಗೆಟ್ಟಿದ್ದರು. ಈ ಕಾರಣದಿಂದಲೇ ಅವರು ವಿವೇಚನೆಯಿಲ್ಲದೆ ಕಪಿಲರಂತಹ ಮಹರ್ಷಿಗಳನ್ನು ಕಳ್ಳರೆಂದು ಭಾವಿಸಿ ಸಂಹರಿಸಲು ಹೋದರು. ಇಂತಹ ವ್ಯತಿಕ್ರಮದಿಂದಾಗಿ ಅವರ ಶರೀರಗಳಲ್ಲಿಯೇ ಅಗ್ನಿಯು ಹುಟ್ಟಿಕೊಂಡಿತು. ಮಹರ್ಷಿಗಳು ಕಣ್ಣುಬಿಟ್ಟ ವ್ಯಾಜದಿಂದ ಕ್ಷಣಮಾತ್ರದಲ್ಲಿ ಅರುವತ್ತು ಸಾವಿರ ಸಗರನ ಮಕ್ಕಳೂ ಭಸ್ಮವಾಗಿಹೋದರು. (ಶ್ಲೋಕ 8-12)

ನ ಸಾಧುವಾದೋ ಮುನಿಕೋಪಭರ್ಜಿತಾ
ನೃಪೇನ್ದ್ರಪುತ್ರಾ ಇತಿ ಸತ್ತ್ವಧಾಮನಿ ।

ಕಥಂ ತಮೋ ರೋಷಮಯಂ ವಿಭಾವ್ಯತೇ
ಜಗತ್ಪವಿತ್ರಾತ್ಮನಿ ಖೇ ರಜೋ ಭುವಃ ॥೧೩॥

ಪರೀಕ್ಷಿತನೇ! ಸಗರನ ಮಕ್ಕಳು ಕಪಿಲಮಹರ್ಷಿಯ ಕ್ರೋಧಾಗ್ನಿಗೆ ಸಿಕ್ಕಿ ಭಸ್ಮವಾಗಿಹೋದರೆಂದು ಹೇಳುವುದು ಸರಿಯಲ್ಲ. ಕಪಿಲರಾದರೋ ಶುದ್ಧಸತ್ತ್ವಗುಣಕ್ಕೆ ಪರಮಾಶ್ರಯರಾಗಿದ್ದಾರೆ. ಅವರ ಶರೀರವು ಪ್ರಪಂಚ ವನ್ನೇ ಪವಿತ್ರೀಗೊಳಿಸುವುದಾಗಿದೆ. ಅಂತಹವರಲ್ಲಿ ತಮೋಭೂತವಾದ ಕ್ರೋಧವಿರುವುದೆಂದು ಭಾವಿಸಲು ತಾನೇ ಹೇಗೆ ಸಾಧ್ಯವಾಗುತ್ತದೆ? ಭೂಮಿಯಲ್ಲಿರುವ ಧೂಳಿನೊಡನೆ ಆಕಾಶದ ಸಂಬಂಧವೇನಾದರೂ ಇರುತ್ತದೆಯೇ?

ಯಸ್ಯೇರಿತಾ ಸಾಂಖ್ಯಮಯೀ ದೃಢೇಹ ನೌ-
ರ್ಯಯಾ ಮುಮುಕ್ಷುಸ್ತರತೇ ದುರತ್ಯಯಮ್ ।
ಭವಾರ್ಣವಂ ಮೃತ್ಯುಪಥಂ ವಿಪಶ್ಚಿತಃ
ಪರಾತ್ಮಭೂತಸ್ಯ ಕಥಂ ಪೃಥಙ್ಮತಿಃ ॥೧೪॥

ಈ ಸಂಸಾರಸಾಗರವು ಮೃತ್ಯುವಿನ ಮಾರ್ಗವಾಗಿದೆ. ಇದನ್ನು ದಾಟಿ ಹೋಗುವುದು ಅತ್ಯಂತ ದುಸ್ತರವೇ ಸರಿ. ಆದರೆ ಕಪಿಲಮಹರ್ಷಿಗಳು ಸಾಂಖ್ಯಶಾಸ್ತ್ರವೆಂಬ ನಾವೆಯನ್ನು ಮುಮುಕ್ಷುಗಳಿಗೆ ಸಿದ್ಧಮಾಡಿಕೊಟ್ಟಿರು ತ್ತಾರೆ. ಇದರಿಂದ ಯಾವುದೇ ವ್ಯಕ್ತಿಯಾದರೂ ಸಂಸಾರಸಾಗರದಿಂದ ಪಾರಾಗಲು ಶಕ್ಯವಿದೆ. ಕಪಿಲರು ಕೇವಲ ಜ್ಞಾನಿಗಳು ಮಾತ್ರವಲ್ಲ. ಪರಮಾತ್ಮನ ಅವತಾರವೇ ಆಗಿದ್ದಾರೆ. ಅಂತಹವರಿಗೆ ಶತ್ರು-ಮಿತ್ರರೆಂಬ ಭೇದಭಾವವಿರಲು ಹೇಗೆತಾನೇ ಸಾಧ್ಯವಾಗುತ್ತದೆ?

ಪರೀಕ್ಷಿತ! ಸುಮತಿಯ ಹೊಟ್ಟೆಯಲ್ಲಿ ಹುಟ್ಟಿದ್ದ ಸಗರನ ಅರುವತ್ತು ಸಾವಿರ ಮಕ್ಕಳೂ ಹೀಗೆ ಹತರಾದರು. ಸಗರನಿಗೆ ಕೇಶಿನೀ ಎಂಬ ಪತ್ನಿ ಯಿದ್ದಳು. ಅವಳಲ್ಲಿ ಸಗರನಿಗೆ ಅಸಮಂಜಸನೆಂಬ ಮಗನು ಹುಟ್ಟಿದನು. ಅಸಮಂಜಸನ ಮಗ ಅಂಶುಮಂತ. ಇವನು ಸಗರಚಕ್ರವರ್ತಿಯ ಆಜ್ಞಾಧಾರಕನಾಗಿ ಅವನ ಸೇವೆಯಲ್ಲಿಯೇ ನಿರತನಾಗಿರುತ್ತಿದ್ದನು.

ಸಗರನ ಮಗನಾದ ಅಸಮಂಜಸನು ತನ್ನ ಹಿಂದಿನ ಜನ್ಮದಲ್ಲಿ ಮಹಾಯೋಗಿಯಾಗಿದ್ದನು. ಕೆಟ್ಟಸಹವಾಸದ ಕಾರಣದಿಂದಾಗಿ ಯೋಗಭ್ರಷ್ಟ

ನಾದನು. ಸಗರನ ಮಗನಾಗಿ ಹುಟ್ಟಿದನಂತರವೂ ಅವನಿಗೆ ತನ್ನ ಹಿಂದಿನ ಜನ್ಮದ ಸ್ಮರಣೆಯಿದ್ದಿತು. ಸಂಸಾರಬಂಧನದಿಂದ ಅಥವಾ ರಾಜ್ಯಬಂಧನ ದಿಂದ ತಪ್ಪಿಸಿಕೊಳ್ಳಲು ಅವನು ವಿಶೇಷವಾದ ಮಾರ್ಗವನ್ನೇ ಹಿಡಿದನು. ಯಾವಾಗಲೂ ನಿಂದ್ಯವಾದ ಕಾರ್ಯಗಳನ್ನೇ ಮಾಡುತ್ತಿದ್ದನು. ಬಂಧು-ಬಳಗದವರಿಗೆ ವಿರೋಧವಾಗಿ ಕಾಣುವ ಕಾರ್ಯಗಳನ್ನೇ ಮಾಡುತ್ತಿದ್ದನು. ಹುಚ್ಚನಂತೆಯೇ ವರ್ತಿಸುತ್ತಿದ್ದನು. ಆಡುತ್ತಿದ್ದ ಬಾಲಕರನ್ನು ಎತ್ತಿಕೊಂಡು ಹೋಗಿ ಸರಯೂನದಿಯಲ್ಲಿ ಹಾಕುತ್ತಿದ್ದನು. ಇದರಿಂದ ಪ್ರಜೆಗಳು ಬಹಳವಾಗಿ ಉದ್ವೇಗಗೊಂಡರು. ಇವನ ಉಪಟಳವನ್ನು ತಡೆದುಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ರಾಜನಿಗೆ ದೂರಿತ್ತರು. ಸಗರನ ಸದುಪದೇಶ ಗಳೆಲ್ಲವೂ ಅಸಮಂಜಸನಲ್ಲಿ ವ್ಯರ್ಥವಾದುವು. ಕಟ್ಟಕಡೆಗೆ ಸಗರನು ಪುತ್ರ ವ್ಯಾಮೋಹವನ್ನು ತೊರೆದು ಅವನನ್ನು ಕಾಡಿಗಟ್ಟಿದನು. ಅಸಮಂಜಸನು ತಂದೆಯ ಆಜ್ಞೆಯಂತೆ ಅರಣ್ಯಕ್ಕೆ ಹೊರಡುವುದರಲ್ಲಿದ್ದಾಗ ತನ್ನ ಯೋಗಶಕ್ತಿ ಯಿಂದ ಸರಯೂನದಿಯಲ್ಲಿ ಹಾಕಿದ ಬಾಲಕರೆಲ್ಲರನ್ನೂ ಬದುಕಿಸಿ ಅವರೆಲ್ಲರನ್ನೂ ತನ್ನ ತಂದೆಗೆ ತೋರಿಸಿ ಅರಣ್ಯಕ್ಕೆ ಪ್ರಯಾಣಮಾಡಿದನು. ತಮ್ಮ ಮಕ್ಕಳೆಲ್ಲರೂ ಹಿಂದಿರುಗಿಬಂದುದನ್ನು ಕಂಡು ಅಯೋಧ್ಯಾವಾಸಿ ಗಳೆಲ್ಲರಿಗೂ ಪರಮಾಶ್ಚರ್ಯವಾಯಿತು. ಅಂತಹ ಯೋಗಿಯಾದ ಮಗ ನನ್ನು ಕಳೆದುಕೊಂಡುದಕ್ಕಾಗಿ ಸಗರನಿಗೆ ಪಶ್ಚಾತ್ತಾಪವೂ ಆಯಿತು. ಇತ್ತಲಾಗಿ ಕುದುರೆಯನ್ನು ಹುಡುಕಲು ಹೊರಟಿದ್ದ ತನ್ನ ಮಕ್ಕಳು ಹಿಂದಿರುಗದಿರಲು ಖಿನ್ನನಾದ ಸಗರನು ಕುದುರೆಯನ್ನು ಹುಡುಕಿ ಕರೆತರಲು ಅಸಮಂಜಸನ ಮಗನಾದ ಅಂಶುಮಂತನನ್ನು ಕಳುಹಿಸಿದನು. ಅಂಶುಮಂತನು ಕುದುರೆಯನ್ನು ಹುಡುಕುತ್ತಾ ಕಡೆಗೆ ತನ್ನ ಚಿಕ್ಕಪ್ಪಂದಿರು ಭೂಮಿಯನ್ನು ಅಗೆದಿದ್ದ ಸ್ಥಳಕ್ಕೆ ಹೋದನು. ಅವರು ಅಗೆದಿದ್ದ ಮಾರ್ಗವನ್ನೇ ಅನುಸರಿಸಿ ಮುಂದೆ ಹೋಗಿ ಚಿಕ್ಕಪ್ಪಂದಿರ ಭಸ್ಮರಾಶಿಯನ್ನೂ ಕುದುರೆಯನ್ನೂ ನೋಡಿದನು. ಅಲ್ಲಿಯೇ ಸ್ವಲ್ಪದೂರದಲ್ಲಿ ಕುಳಿತಿದ್ದ ಅಧೋಕ್ಷಜನಾದ (ವಿಷ್ಣುಸ್ವರೂಪನಾದ) ಕಪಿಲಮುನಿಯನ್ನು ನೋಡಿ ಏಕಾಗ್ರಚಿತ್ತನಾಗಿ ಕೈಮುಗಿದುಕೊಂಡು ಅವನನ್ನು ನಮಸ್ಕರಿಸುತ್ತಾ ಸ್ತೋತ್ರಮಾಡಿದನು :

(ಶ್ಲೋಕ 15-21)

ನ ಪಶ್ಯತಿ ತ್ವಾಂ ಪರಮಾತ್ಮನೋऽಜನೋ
ನ ಬುಧ್ಯತೇऽದ್ಯಾಪಿ ಸಮಾಧಿಯುಕ್ತಿಭಿಃ ।
ಕುತೋऽಪರೇ ತಸ್ಯ ಮನಃಶರೀರಧೀ-
ವಿಸರ್ಗಸೃಷ್ಟಾ ವಯಮಪ್ರಕಾಶಾಃ ॥೨೨॥

“ಕಪಿಲದೇವ! ನೀನು ಅಜನ್ಮನಾದ ಬ್ರಹ್ಮನಿಗಿಂತಲೂ ಶ್ರೇಷ್ಠನಾಗಿರುವೆ. ಈ ಕಾರಣದಿಂದಲೇ ಬ್ರಹ್ಮನು ನಿನ್ನನ್ನು ಪ್ರತ್ಯಕ್ಷವಾಗಿ ಕಂಡಿಲ್ಲ. ಪ್ರತ್ಯಕ್ಷವಾಗಿ ಕಾಣುವುದಿರಲಿ ; ಸಮಾಧಿಯೋಗದಿಂದಲೂ, ಯೋಗವೇ ಮೊದಲಾದ ಉಪಾಯಗಳಿಂದಲೂ ಬ್ರಹ್ಮನು ನಿನ್ನನ್ನು ಇದುವರೆಗೂ ಕಂಡಿಲ್ಲ. ನಾವಾದರೋ ಅಂತಹ ಬ್ರಹ್ಮನ ಮನಸ್ಸು-ಶರೀರ-ಬುದ್ಧಿಗಳಿಂದ ಸೃಷ್ಟವಾದ ದೇವ-ಮನುಷ್ಯ-ತಿರ್ಯಗ್ಜಾತಿಗಳಿಗೆ ಸೇರಿದವರು. ನಮ್ಮನ್ನು ಸೃಷ್ಟಿಮಾಡಿದವನೇ ನಿನ್ನನ್ನು ಪ್ರತ್ಯಕ್ಷವಾಗಿಯೇ ಆಗಲೀ ಪರೋಕ್ಷವಾಗಿಯೇ ಆಗಲೀ ಕಾಣಲಿಲ್ಲವೆಂದಮೇಲೆ ನಾವು ಹೇಗೆತಾನೇ ನಿನ್ನ ನಿಜಸ್ವರೂಪವನ್ನು ತಿಳಿದೇವು?

ಯೇ ದೇಹಭಾಜಸ್ತ್ರಿಗುಣಪ್ರಧಾನಾ
ಗುಣಾನ್ವಿಪಶ್ಯನ್ತ್ಯುತ ವಾ ತಮಶ್ಚ ।
ಯನ್ಮಾಯಯಾ ಮೋಹಿತಚೇತಸಸ್ತೇ
ವಿದುಃ ಸ್ವಸಂಸ್ಥಂ ನ ಬಹಿಃಪ್ರಕಾಶಾಃ ॥೨೩॥

ಈ ಪ್ರಪಂಚದಲ್ಲಿರುವ ಶರೀರಧಾರಿಗಳೆಲ್ಲರೂ ಸತ್ತ್ವಗುಣ, ರಜೋಗುಣ ಅಥವಾ ತಮೋಗುಣಪ್ರಧಾನರಾಗಿರುತ್ತಾರೆ. ಅವರೆಲ್ಲರೂ ಜಾಗ್ರತ್ ಮತ್ತು ಸ್ವಪ್ನ-ಸುಷುಪ್ತ್ಯಾವಸ್ಥೆಗಳಲ್ಲಿ ಕೇವಲ ಗುಣಮಯವಾದ ಪದಾರ್ಥಗಳನ್ನೂ ವಿಷಯಗಳನ್ನೂ ನೋಡುತ್ತಾರೆ. ತಮೋಮಯವಾದ ಅಜ್ಞಾನವನ್ನೂ ಕಾಣುತ್ತಾರೆ. ನಿನ್ನ ಮಾಯೆಯಿಂದ ವಿಮೋಹಿತರಾಗಿರುವುದೇ ಇದಕ್ಕೆ ಕಾರಣವಾಗಿದೆ. ಜೀವಿಗಳು ಯಾವಾಗಲೂ ಬಹಿರ್ಮುಖರಾಗಿರುವುದರಿಂದ ಹೊರಗಿನ ವಸ್ತುಗಳನ್ನು ಕಾಣುವರೇ ಹೊರತು ಅವರ ಹೃದಯದಲ್ಲಿಯೇ ಪ್ರಕಾಶಿಸುವ ನಿನ್ನನ್ನು ಅವರು ಅಂತರ್ಮುಖರಾಗಿ ಕಾಣುವುದಿಲ್ಲ.

ತಂ ತ್ವಾಮಹಂ ಜ್ಞಾನಧನಂ ಸ್ವಭಾವ-
ಪ್ರಧ್ವಸ್ತಮಾಯಾಗುಣಭೇದಮೋಹೈಃ ।

ಸನನ್ದನಾದ್ಯೈರ್ಮುನಿಭಿರ್ವಿಭಾವ್ಯಂ
ಕಥಂ ಹಿ ಮೂಢಃ ಪರಿಭಾವಯಾಮಿ ॥೨೪॥

ಜ್ಞಾನಸ್ವರೂಪನಾದ ನಿನ್ನನ್ನು ನಾನು ನಮಸ್ಕರಿಸುತ್ತೇನೆ. ಮಾಯೆಯ ಸತ್ತ್ವಾದಿಗುಣಗಳಿಂದ ಉಂಟಾಗುವ ಭೇದಭಾವವನ್ನೂ ಮತ್ತು ಅದರಿಂದ ಉಂಟಾದ ಅಜ್ಞಾನವನ್ನೂ ಹೋಗಲಾಡಿಸಿಕೊಂಡಿರುವ ಗುಣಾತೀತರಾದ ಸನಕ-ಸನಂದನಾದಿ ಮುನಿಗಳು ನಿನ್ನನ್ನು ನಿರಂತರವಾಗಿ ಧ್ಯಾನಮಾಡುತ್ತಲೇ ಇರುತ್ತಾರೆ. ಮೂಢನಾಗಿರುವ ಮತ್ತು ಸತ್ತ್ವಾದಿಗುಣಗಳಿಗೆ ವಶನಾಗಿರುವ ನಾನು ನಿನ್ನನ್ನು ಹೇಗೆ ತಾನೇ ಏಕಾಗ್ರಚಿತ್ತನಾಗಿ ಧ್ಯಾನಿಸಲಿ?

ಪ್ರಶಾನ್ತಮಾಯಾಗುಣಕರ್ಮಲಿಙ್ಗ-
ಮನಾಮರೂಪಂ ಸದಸದ್ವಿಮುಕ್ತಮ್ ।
ಜ್ಞಾನೋಪದೇಶಾಯ ಗೃಹೀತದೇಹಂ
ನಮಾಮಹೇ ತ್ವಾಂ ಪುರುಷಂ ಪುರಾಣಮ್ ॥೨೫॥

ಯಾವನಲ್ಲಿ ಮಾಯೆಯೂ ಅದರ ಗುಣಗಳಾದ ಸತ್ತ್ವರಜಸ್ತಮ ಗಳೂ, ಗುಣಗಳ ಪರಿಣಾಮಗಳಾದ ಕರ್ಮಗಳೂ, ಶುಭಾಶುಭಕರ್ಮ ಗಳಿಂದ ಉಂಟಾಗುವ ಶರೀರಗಳೂ ಪ್ರಶಾಂತವಾಗಿರುವುವೋ, ಯಾವನಿಗೆ ನಾಮವಾಗಲೀ ರೂಪವಾಗಲೀ ಇಲ್ಲವೋ, ಯಾವನು ಪುಣ್ಯಾಪುಣ್ಯ ಗಳಿಂದಲೂ ವಿಮುಕ್ತನಾಗಿರುವನೋ, ಅಜ್ಞಾನಿಗಳಿಗೆ ಜ್ಞಾನೋಪದೇಶವನ್ನು ಮಾಡುವ ಸಲುವಾಗಿಯೇ ಶರೀರಧಾರಣೆ ಮಾಡಿರುವನೋ (ಮನುಷ್ಯನಾಗಿ ಅವತರಿಸಿರುವನೋ) ಅಂತಹ ಪುರಾಣಪುರುಷನಾದ ನಿನಗೆ ನಮಸ್ಕರಿಸು ತ್ತೇನೆ.

ತ್ವನ್ಮಾಯಾರಚಿತೇ ಲೋಕೇ ವಸ್ತುಬುದ್ಧ್ಯಾ ಗೃಹಾದಿಷು ।
ಭ್ರಮನ್ತಿ ಕಾಮಲೋಭೇರ್ಷ್ಯಾಮೋಹವಿಭ್ರಾನ್ತಚೇತಸಃ ॥೨೬॥

ನಿನ್ನ ಮಾಯೆಯಿಂದ ಸೃಷ್ಟಿಯಾಗಿರುವ ಈ ಲೋಕದಲ್ಲಿ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಾದಿಗಳಿಂದ ಬುದ್ಧಿಗೆಟ್ಟಿರುವ ಜನರು ಮಡದಿ-ಮಕ್ಕಳು ಮತ್ತು ಮನೆ-ಮಠಗಳೇ ಶಾಶ್ವತವಾದುವುಗಳೆಂಬ ಬುದ್ಧಿಯನ್ನು ತಳೆದು ಪ್ರಪಂಚದಲ್ಲಿ ಅಲೆಯುತ್ತಿರುತ್ತಾರೆ.

ಅದ್ಯ ನಃ ಸರ್ವಭೂತಾತ್ಮನ್ಕಾಮಕರ್ಮೇನ್ದ್ರಿಯಾಶಯಃ ।
ಮೋಹಪಾಶೋ ದೃಢಶ್ಛಿನ್ನೋ ಭಗವಂಸ್ತವ ದರ್ಶನಾತ್ ॥೨೭॥

ಸಮಸ್ತಪ್ರಾಣಿಗಳಿಗೂ ಆತ್ಮನಾಗಿರುವವನೇ! ಪ್ರಭುವೇ! ಇಂದು ನಿನ್ನ ದಿವ್ಯದರ್ಶನದಿಂದ ನನ್ನಲ್ಲಿದ್ದ (ಕಾಮ-ಕರ್ಮೇಂದ್ರಿಯಗಳಿಗೆ ಆಶ್ರಯ ಭೂತವಾಗಿರುವ) ಮೋಹಪಾಶವು ದೃಢವಾಗಿ ಕತ್ತರಿಸಲ್ಪಟ್ಟಿತು."

ಪರೀಕ್ಷಿತ! ಹೀಗೆ ಅಂಶುಮಂತನು ಕಪಿಲಮುನಿಯ ಪ್ರಭಾವವನ್ನು ಸಂಕೀರ್ತನ ಮಾಡಿದನಂತರ ಸಂತುಷ್ಟನಾದ ಕಪಿಲಮುನಿಯು ಅಂಶುಮಂತನನ್ನು ಮನಸ್ಸಿನಿಂದಲೇ ಅನುಗ್ರಹಿಸುತ್ತಾ ಹೇಳಿದನು :

"ವತ್ಸ! ಈ ಕುದುರೆಯು ನಿನ್ನ ತಾತನ ಯಜ್ಞಪಶುವಾಗಿದೆ. ಇದನ್ನು ನೀನು ಕರೆದುಕೊಂಡು ಹೋಗಬಹುದು. ಇಲ್ಲಿ ಭಸ್ಮೀಭೂತರಾಗಿ ಬಿದ್ದಿರುವ ನಿನ್ನ ಚಿಕ್ಕಪ್ಪಂದಿರ ಉದ್ಧಾರವು ಕೇವಲ ಗಂಗಾಜಲದಿಂದಲೇ ಸಾಧ್ಯ ವಾಗುವುದು. ಇವರು ಸದ್ಗತಿಯನ್ನು ಹೊಂದಲು ಅನ್ಯಮಾರ್ಗವೇ ಇಲ್ಲ."

ಕಪಿಲಮುನಿಯು ಹೇಳಿದ ಈ ಮಾತನ್ನು ಕೇಳಿ ಅಂಶುಮಂತನು ಮಹರ್ಷಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿ, ಅವನನ್ನು ಪ್ರಸನ್ನಗೊಳಿಸಿ ಕುದುರೆಯನ್ನು ರಾಜಧಾನಿಗೆ ಕರೆತಂದನು. ಸಗರನು ಆ ಯಜ್ಞಪಶುವಿನ ಮೂಲಕವಾಗಿ ಯಜ್ಞಶೇಷವನ್ನು ಪರಿಸಮಾಪ್ತಿಗೊಳಿಸಿದನು.

ಬಳಿಕ ಸಗರಚಕ್ರವರ್ತಿಯು ಅಂಶುಮಂತನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ವಿಷಯಗಳಲ್ಲಿ ನಿಃಸ್ಪೃಹನಾಗಿ ಸಮಸ್ತವಾದ ಬಂಧನ ಗಳಿಂದಲೂ ಮುಕ್ತನಾದನು. ಔರ್ವಮಹರ್ಷಿಯು ಉಪದೇಶಿಸಿದ ಮಾರ್ಗ ದಿಂದ ಶಾಶ್ವತವಾದ ಪರಮಪದವನ್ನೂ ಸಗರನು ಪಡೆದುಕೊಂಡನು.

(ಶ್ಲೋಕ 28-31)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ನವಮಸ್ಕಂಧದ ೮ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೯ನೆಯ ಅಧ್ಯಾಯ

ಭಗೀರಥನ ಚರಿತ್ರೆ ಮತ್ತು ಗಂಗಾವತರಣ

ಶ್ರೀಶುಕರು ಹೇಳುತ್ತಾರೆ :

ಅಂಶುಮಾಂಶ್ಚ ತಪಸ್ತೇಪೇ ಗಜ್ಗಾನಯನಕಾಮ್ಯಯಾ ।
ಕಾಲಂ ಮಹಾನ್ತಂ ನಾಶಕ್ನೋತ್ತತಃ ಕಾಲೇನ ಸಂಸ್ಥಿತಃ ॥೧॥

ಪರೀಕ್ಷಿತಮಹಾರಾಜ! ಅಂಶುಮಂತನು ಗಂಗೆಯನ್ನು ಕರೆತರುವ ಆಶಯದಿಂದ ಅನೇಕ ವರ್ಷಗಳವರೆಗೆ ತಪಸ್ಸನ್ನು ಮಾಡಿದನು. ಆದರೆ ಅವನು ಅದರಲ್ಲಿ ಸಫಲನಾಗಲಿಲ್ಲ. ಕಾಲವು ಸನ್ನಿಹಿತವಾಗಲು ಮೃತ್ಯು ವಶನಾದನು.

ಅಂಶುಮಂತನ ಮಗ ದಿಲೀಪ. ಅವನೂ ಕೂಡ ಗಂಗಾವತರಣಕ್ಕಾಗಿ ತಪಸ್ಸುಮಾಡಿದನು. ಆದರೆ ಅವನೂ ಸಫಲನಾಗದೆ ಕಾಲಧರ್ಮವನ್ನೈದಿದನು. ದಿಲೀಪನ ಮಗ ಭಗೀರಥ. ಅವನೂ ಸುಘೋರವಾದ ಮಹಾತಪಸ್ಸನ್ನೇ ಮಾಡಿದನು. ಅವನ ತಪಸ್ಸಿನಿಂದ ಪ್ರಸನ್ನಳಾದ ಗಂಗಾದೇವಿಯು ಪ್ರತ್ಯಕ್ಷವಾಗಿ ಬಂದು ಹೇಳಿದಳು :

"ಭಗೀರಥ! ನಾನು ನಿನಗೆ ವರವನ್ನು ಕೊಡಲು ಬಂದಿದ್ದೇನೆ."

ಗಂಗೆಯು ಹೀಗೆ ಹೇಳಲು ಸಂತುಷ್ಟನಾದ ಭಗೀರಥನು ವಿನಮ್ರನಾಗಿ ತನ್ನ ಮನೋರಥವನ್ನು ಗಂಗಾದೇವಿಗೆ ತಿಳಿಸಿದನು.

"ತಾಯೇ! ಭೂಲೋಕಕ್ಕೆ ಆಗಮಿಸು."

"ವತ್ಸ! ರಭಸದಿಂದ ಕೆಳಗಿಳಿದು ಬರುವ ನನ್ನ ವೇಗವನ್ನು ಧರಿಸುವವರು ಭೂಲೋಕದಲ್ಲಿ ಯಾರಿದ್ದಾರೆ? ಹಾಗೇನಾದರೂ ನನ್ನನ್ನು ಧರಿಸುವವರು ಯಾರೂ ಇಲ್ಲದಿದ್ದರೆ ಭೂಲೋಕವನ್ನೇ ಭೇದಿಸಿಕೊಂಡು ನಾನು ರಸಾತಲಕ್ಕೆ ಹೋಗಿಬಿಡುತ್ತೇನೆ. ಮೇಲಾಗಿ ನನಗೆ ಭೂಲೋಕಕ್ಕೆ ಬರಲೂ ಇಷ್ಟವಿಲ್ಲ. ಏಕೆಂದರೆ : ಮನುಷ್ಯರೆಲ್ಲರೂ ನನ್ನಲ್ಲಿ ಮಿಂದು ತಮ್ಮ ಪಾಪಗಳನ್ನು ತೊಳೆದುಕೊಂಡುಬಿಡುತ್ತಾರೆ. ಅವರೆಲ್ಲರ ಪಾಪಗಳನ್ನು ತೊಳೆದು

ಕೊಳ್ಳಲು ನಾನೆಲ್ಲಿಗೆ ಹೋಗಲಿ? ಈ ವಿಷಯದಲ್ಲಿ ನೀನು ದೀರ್ಘವಾಗಿ ಚಿಂತಿಸು." (ಶ್ಲೋಕ 2-5)

ಭಗೀರಥನು ಹೇಳುತ್ತಾನೆ :

ಸಾಧವೋ ನ್ಯಾಸಿನಃ ಶಾನ್ತಾ ಬ್ರಹ್ಮಿಷ್ಠಾ ಲೋಕಪಾವನಾಃ ।
ಹರನ್ತ್ಯಘಂ ತೇಽಙ್ಗಸಙ್ಗಾತ್ತೇಷ್ವಾಸ್ತೇ ಹ್ಯಘಭಿದ್ಧರಿಃ ॥೬॥

"ತಾಯೇ! ಸರ್ವಸಂಗಪರಿತ್ಯಾಗಮಾಡಿರುವ, ಶಾಂತರಾದ, ಬ್ರಹ್ಮನಿಷ್ಠರಾದ, ಲೋಕಪಾವನರಾದ ಸಾಧು-ಸಂನ್ಯಾಸಿಗಳು ತಮ್ಮ ಸ್ಪರ್ಶದಿಂದ ನಿನ್ನ ಪಾಪವನ್ನು ತೊಳೆದುಹಾಕುತ್ತಾರೆ. ಏಕೆಂದರೆ : ಅವರ ಹೃದಯ ಕಮಲದಲ್ಲಿ ಅಘರೂಪನಾದ ಅಘಾಸುರನ ಹಂತಕನಾದ, ಪಾಪನಾಶಕನಾದ ಶ್ರೀಹರಿಯು ಸರ್ವದಾ ನೆಲೆಸಿರುತ್ತಾನೆ.

ಸಮಸ್ತಪ್ರಾಣಿಗಳಿಗೂ ಆತ್ಮಸ್ವರೂಪನಾಗಿರುವ ರುದ್ರದೇವನು ನಿನ್ನ ವೇಗವನ್ನು ಧರಿಸುತ್ತಾನೆ. ಬಟ್ಟೆಯಲ್ಲಿ ದಾರಗಳು ಹೇಗೋ ಹಾಗೆ ಸಮಸ್ತಜಗತ್ತೂ ಆ ರುದ್ರದೇವನಲ್ಲಿ ಹಾಸುಹೊಕ್ಕಾಗಿದೆ."

ಪರೀಕ್ಷಿತ! ಭಗೀರಥನು ಗಂಗಾಮಾತೆಗೆ ಹೀಗೆ ಹೇಳಿ ಅವಳ ಮನ ಒಲಿಸಿ ರುದ್ರನನ್ನು ಕುರಿತು ತಪಸ್ಸುಮಾಡಿದನು. ಆಶುತೋಷನಾದ ಪರಶಿವನು ಅತ್ಯಲ್ಪಕಾಲದಲ್ಲಿಯೇ ಭಗೀರಥನ ತಪಸ್ಸಿಗೆ ಮೆಚ್ಚಿದನು. ಸರ್ವಲೋಕಹಿತೈಷಿಯಾದ ಆ ಪರಮೇಶ್ವರನು ಭಗೀರಥನ ಪ್ರಾರ್ಥನೆ ಯನ್ನು ಅಂಗೀಕರಿಸಿ ಆಕಾಶದ ಕಡೆಯಿಂದ ಭೋರ್ಗರೆಯುತ್ತಾ ಬಂದ, ವಿಷ್ಣುವಿನ ಪಾದಸ್ಪರ್ಶದಿಂದ ಪಾವನವಾದ ಜಲಪ್ರವಾಹದಿಂದ ಕೂಡಿದ್ದ ಗಂಗಾದೇವಿಯನ್ನು ಜಾಗರೂಕತೆಯಿಂದ ತನ್ನ ಶಿರಸ್ಸಿನಲ್ಲಿ ಧರಿಸಿದನು.

ಬಳಿಕ ರಾಜರ್ಷಿಯಾದ ಭಗೀರಥನು ಗಂಗೆಯನ್ನು ಬಿಡುಗಡೆಮಾಡುವಂತೆ ಶಿವನನ್ನು ಪ್ರಾರ್ಥಿಸಿಕೊಂಡು, ಶಿವನ ಜಟಾಜೂಟದಿಂದ ಹರಿದು ಬಂದ ಆ ಗಂಗಾನದಿಯನ್ನು ತನ್ನ ಪಿತೃಗಳ ಭಸ್ಮೀಭೂತವಾದ ಶರೀರಗಳಿದ್ದ ಸ್ಥಳಕ್ಕೆ ಕರೆದುಕೊಂಡು ಹೋದನು. ವಾಯುವೇಗಕ್ಕೆ ಸಮಾನವಾದ

ವೇಗದಿಂದ ಕೂಡಿದ್ದ ರಥದಲ್ಲಿ ಕುಳಿತು ಭಗೀರಥನು ಮುಂದೆ ಹೋಗುತ್ತಿದ್ದನು. ಹಲವಾರು ದೇಶಗಳನ್ನು ತನ್ನ ಶುಭಜಲಪ್ರವಾಹದಿಂದ ಪಾವನಗೊಳಿಸುತ್ತಾ ಗಂಗಾದೇವಿಯು ಭಗೀರಥನ ಹಿಂದೆಯೇ ಹೋಗುತ್ತಿದ್ದಳು. ಕಟ್ಟಕಡೆಗೆ ಭಸ್ಮೀಭೂತರಾಗಿದ್ದ ಸಗರನ ಅರುವತ್ತು ಸಾವಿರ ಮಕ್ಕಳನ್ನೂ ತನ್ನ ಶುಭಜಲದಿಂದ ಮುಳುಗಿಸಿಬಿಟ್ಟಳು. ಸಗರನ ಮಕ್ಕಳು ಮಹಾತಪಸ್ವಿ ಯಾದ ಬ್ರಾಹ್ಮಣನನ್ನು ತಿರಸ್ಕಾರಮಾಡಿದ ಕಾರಣದಿಂದ ಬ್ರಹ್ಮದಂಡದಿಂದ ಹತರಾಗಿ ಭಸ್ಮೀಭೂತರಾಗಿದ್ದರು. ಬ್ರಹ್ಮದಂಡದಿಂದ ಹತರಾದವರಿಗೆ ಅಥವಾ ಬ್ರಾಹ್ಮಣನ ಶಾಪಕ್ಕೊಳಗಾದವರಿಗೆ ಪ್ರಾಯಶ್ಚಿತ್ತವೇ ಇಲ್ಲ. ಹೀಗಿ ದ್ದರೂ ಗಂಗಾದೇವಿಯ ಪವಿತ್ರಜಲವು ಸಗರಪುತ್ರರ ಭಸ್ಮವನ್ನು ಸ್ಪರ್ಶಿಸಿದ ಮಾತ್ರದಿಂದಲೇ ಅವರೆಲ್ಲರೂ ಸ್ವರ್ಗಕ್ಕೆ ಹೋದರು. (ಶ್ಲೋಕ 7-12)

ಪರೀಕ್ಷಿತನೇ! ಪವಿತ್ರವಾದ ಗಂಗಾಜಲವು ಸಗರನ ಮಕ್ಕಳ ಶರೀರದ ಭಸ್ಮವನ್ನು ಸ್ಪರ್ಶಿಸಿದ್ದರಿಂದಲೇ ಅವರೆಲ್ಲರೂ ಸ್ವರ್ಗಕ್ಕೆ ಹೋದರೆಂದ ಮೇಲೆ ಶ್ರದ್ಧೆಯಿಂದ ವ್ರತಾನುಷ್ಠಾನಗಳನ್ನು ಮಾಡುತ್ತಾ ಗಂಗಾದೇವಿಯನ್ನು ಸೇವಿಸುವವರ ವಿಷಯದಲ್ಲಿ ಹೇಳುವುದೇನಿದೆ? ಗಂಗಾಜಲದ ಪಾವಿತ್ರ್ಯದ ವಿಷಯವಾಗಿ ನಾನು ಹೇಳಿರುವುದರಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲ.

ಶ್ರದ್ಧಾಪೂರ್ವಕವಾಗಿ ಮನಸ್ಸನ್ನು ಭಗವಂತನಲ್ಲಿ ಲೀನಗೊಳಿಸುವ ಶುದ್ಧಾತ್ಮರಾದ ಮುನಿಗಳು, ಪರಿತ್ಯಜಿಸಲು ಅತಿಕಷ್ಟವಾದ ಸತ್ತ್ವಾದಿ ಮೂರು ಗುಣಗಳನ್ನೂ ಪರಿತ್ಯಜಿಸಿ, ಸಂಸಾರಬಂಧನಗಳನ್ನು ಕತ್ತರಿಸಿ ಕೊಂಡು ತತ್ಕ್ಷಣದಲ್ಲಿಯೇ ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಹೊಂದುತ್ತಾರೆ. ಅಂತಹ ಪರಮಪುರುಷಪರಮಾತ್ಮನ ಪಾದಾರವಿಂದಗಳಿಂದ ಹೊರಟು ಪವಿತ್ರಳಾದ ಗಂಗಾನದಿಯು ಎಲ್ಲರನ್ನೂ ಪಾವನಗೊಳಿಸುವಳೆಂಬ ವಿಷಯದಲ್ಲಿ ಆಶ್ಚರ್ಯವೇನಿದೆ?

ಪರೀಕ್ಷಿತ! ಮುಂದೆ ನಾನು ಭಗೀರಥನ ವಂಶಾವಳಿಯನ್ನು ವಿಸ್ತರಿಸಿ ಹೇಳುತ್ತೇನೆ. ಭಗೀರಥನ ಮಗ ಶ್ರುತ. ಶ್ರುತನ ಮಗ ನಾಭ. ಈ ನಾಭನು ಹಿಂದೆ ಹೇಳಿದ ನಾಭನಿಗಿಂತಲೂ ಬೇರೆಯಾದವನು. ನಾಭನ ಮಗ ಸಿಂಧುದ್ವೀಪ. ಸಿಂಧುದ್ವೀಪನ ಮಗ ಅಯುತಾಯು. ಋತುಪರ್ಣನು

ಅಯುತಾಯುವಿನ ಪುತ್ರನು. ಇವನು ನಲಚಕ್ರವರ್ತಿಗೆ ಮಿತ್ರನಾಗಿದ್ದನು. ಋತುಪರ್ಣನು ನಲನಿಂದ ಅಶ್ವವಿದ್ಯೆಯನ್ನು ಕಲಿತು, ವಿನಿಮಯರೂಪ ವಾಗಿ ನಲನಿಗೆ ಅಕ್ಷಹೃದಯವನ್ನು ಹೇಳಿಕೊಟ್ಟನು. ಸರ್ವಕಾಮನೆಂಬುವನು ಋತುಪರ್ಣನ ಮಗನು. ಸರ್ವಕಾಮನ ಮಗನ ಹೆಸರು ಸುದಾಸ. ಸೌದಾಸನು ಸುದಾಸನ ಮಗ. ಸೌದಾಸನ ಪತ್ನಿ ಮದಯಂತಿ. ಸೌದಾಸನನ್ನು ಕೆಲವರು ಮಿತ್ರಸಹನೆಂಬ ಹೆಸರಿನಿಂದಲೂ, ಕೆಲವರು ಕಲ್ಮಾಷಪಾದ-ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಸೌದಾಸನು ವಸಿಷ್ಠರ ಶಾಪದಿಂದ ರಾಕ್ಷಸನಾದನು. ತಾನೇ ಮಾಡಿದ ಕರ್ಮದ ಫಲವಾಗಿ ಸಂತಾನರಹಿತನೂ ಆದನು." (ಶ್ಲೋಕ 13-18)

ಪರೀಕ್ಷಿತನು ಪ್ರಶ್ನಿಸುತ್ತಾನೆ :

ಕಿಂನಿಮಿತ್ತೋ ಗುರೋಃ ಶಾಪಃ ಸೌದಾಸಸ್ಯ ಮಹಾತ್ಮನಃ ।
ಏತದ್ವೇದಿತುಮಿಚ್ಛಾಮಃ ಕಥ್ಯತಾಂ ನ ರಹೋ ಯದಿ ॥೧೯॥

"ಪೂಜ್ಯರೇ! ಮಹಾತ್ಮನಾದ ಸೌದಾಸನಿಗೆ ಗುರುಗಳಾದ ವಸಿಷ್ಠರು ಏಕೆ ಶಾಪ ಕೊಟ್ಟರೆಂಬುದನ್ನು ತಿಳಿಯಲು ನಾವೆಲ್ಲರೂ ಅಪೇಕ್ಷಿಸಿದ್ದೇವೆ. ಆ ಸಮಾಚಾರವು ಹೇಳಬಾರದ ರಹಸ್ಯವಾಗಿಲ್ಲದಿದ್ದರೆ ದಯಮಾಡಿ ಹೇಳಿರಿ."

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

"ಮಹಾರಾಜ! ವಸಿಷ್ಠರು ಸೌದಾಸನಿಗೆ ಏಕೆ ಶಾಪಕೊಟ್ಟರೆಂಬುದನ್ನು ಸವಿಸ್ತರವಾಗಿ ಹೇಳುತ್ತೇನೆ. ಒಮ್ಮೆ ಸೌದಾಸನು ಬೇಟೆಯಾಡಲು ಕಾಡಿಗೆ ಹೋದನು. ಅಲ್ಲವನು ಕಾಲಕರ್ಮವಶಾತ್ ಒಬ್ಬ ರಾಕ್ಷಸನನ್ನು ಸಂಹರಿಸಿದನು. ಆದರೆ ಅವನ ಸಹೋದರನನ್ನು ಸಂಹರಿಸದೆ ಬಿಟ್ಟುಬಿಟ್ಟನು. ತನ್ನನ್ನು ಪ್ರಾಣಸಹಿತವಾಗಿ ಬಿಟ್ಟನೆಂಬ ಕೃತಜ್ಞತೆಯು ಅವನಲ್ಲಿ ಉಳಿಯ ಲಿಲ್ಲ. ಅದಕ್ಕೆ ಬದಲಾಗಿ ತನ್ನ ಅಣ್ಣನನ್ನು ಕೊಂದ ಸೌದಾಸನಿಗೆ ಪ್ರತೀಕಾರ ಮಾಡಲು ಆತನು ನಿಶ್ಚಯಿಸಿದನು. ಸೌದಾಸನನ್ನು ಎದುರಿಸಿ ಯುದ್ಧ ಮಾಡಲು ಅವನಿಗೆ ಶಕ್ಯವಿರಲಿಲ್ಲ. ಆದುದರಿಂದ ವಂಚನೆಯನ್ನಾಶ್ರಯಿಸಿ ಅವನಿಗೆ ಪ್ರತೀಕಾರಮಾಡಬೇಕಾಗಿದ್ದಿತು. ಅಡಿಗೆಯವನ ವೇಷವನ್ನು ಧರಿಸಿ ಆ ರಾಕ್ಷಸನು ಸೌದಾಸನ ಪಾಕಶಾಲೆಯನ್ನು ಪ್ರವೇಶಿಸಿದನು.

ಒಂದು ದಿನ ರಾಜಗುರುಗಳಾದ ವಸಿಷ್ಠರು ಭೋಜನಕ್ಕಾಗಿ ರಾಜನ ಅರಮನೆಗೆ ಬಂದರು. ಅಡಿಗೆಯವನ ವೇಷದಲ್ಲಿದ್ದ ರಾಕ್ಷಸನು ಮಹರ್ಷಿಗಳಾದ ವಸಿಷ್ಠರಿಗೆ ಪಕ್ವಗೊಳಿಸಿದ ಮನುಷ್ಯರ ಮಾಂಸವನ್ನು ಬಡಿಸಿದನು. ತಮಗೆ ಬಡಿಸಿರುವ ವಸ್ತುವು ಸರ್ವಥಾ ಅಯೋಗ್ಯವಾದುದೆಂಬುದು ಸರ್ವಸಮರ್ಥರಾದ ವಸಿಷ್ಠರಿಗೆ ತಿಳಿಯಿತು. ಇದರಿಂದ ಕೋಪಗೊಂಡ ವಸಿಷ್ಠರು ರಾಕ್ಷಸನಾಗುವಂತೆ ಸೌದಾಸನಿಗೆ ಶಾಪವನ್ನಿತ್ತರು. ಅನಂತರ ಅವರಿಗೆ ರಾಜನು ಅಪರಾಧಿಯಲ್ಲವೆಂಬುದೂ ಅದು ಪ್ರತೀಕಾರಮಾಡುವ ಸಲುವಾಗಿಯೇ ಅಲ್ಲಿ ಸೇರಿಕೊಂಡಿದ್ದ ಅಡಿಗೆಯವನ ವೇಷವನ್ನು ಧರಿಸಿದ್ದ ರಾಕ್ಷಸನ ಕಾರ್ಯವೆಂಬುದೂ ತಿಳಿಯಿತು. ತಾವು ಶಾಪಕೊಟ್ಟುದಕ್ಕೆ ಉಪಶಾಪವಾಗಿ ವಸಿಷ್ಠರು ಆತನ ರಾಕ್ಷಸತ್ತ್ವವನ್ನು ಹನ್ನೆರಡು ವರ್ಷಗಳಿಗೆ ಮಿತಿಗೊಳಿಸಿದರು. ಆ ಸಮಯದಲ್ಲಿ ಖತಿಗೊಂಡ ಸೌದಾಸನೂ ಗುರುಗಳಿಗೆ ಶಾಪಕೊಡಲು ಗಿಂಡಿಯಿಂದ ನೀರನ್ನು ಕೈಗೆ ಬಗ್ಗಿಸಿಕೊಂಡನು. ಆದರೆ ಅವನ ಪತ್ನಿಯಾದ ಮದಯಂತಿಯು ಗುರುಗಳಿಗೆ ಶಾಪಕೊಡುವುದನ್ನು ಸವಿಮಾತುಗಳಿಂದಲೇ ವಿರೋಧಿಸಿದಳು. ಕೈಗೆ ಸುರಿದುಕೊಂಡಿದ್ದ ನೀರನ್ನು ಎಲ್ಲಿ ಬಿಡಬೇಕೆಂಬುದರ ಬಗೆಗೆ ಆತನು ವಿಚಾರಮಾಡತೊಡಗಿದನು. ದಿಕ್ಕುಗಳು, ಆಕಾಶ, ಭೂಮಿ-ಎಲ್ಲವೂ ಜೀವಮಯವಾಗಿಯೇ ಇರುವುದು ಅವನಿಗೆ ಕಂಡುಬಂದಿತು. ಎಲ್ಲಿಯೇ ಆ ನೀರನ್ನು ಬಿಟ್ಟರೂ ಪ್ರಾಣಿಗಳ ವಿನಾಶವಾಗುವುದೆಂದು ಭಾವಿಸಿದ ಅವನು ತನ್ನ ಕಾಲುಗಳ ಮೇಲೆಯೇ ತೀಕ್ಷ್ಣವಾಗಿದ್ದ ಆ ಕಲಶೋದಕವನ್ನು ಬಿಟ್ಟುಕೊಂಡನು. ಇದರಿಂದ ಸೌದಾಸನಿಗೆ ಮಿತ್ರಸಹನೆಂದು ಹೆಸರಾಯಿತು. ತೀಕ್ಷ್ಣವಾದ ನೀರನ್ನು ತನ್ನ ಕಾಲುಗಳ ಮೇಲೆಯೇ ಬಿಟ್ಟುಕೊಂಡ ಕಾರಣ ಅವನ ಕಾಲುಗಳು ಕಪ್ಪಾದುವು. ಇದರಿಂದ ಅವನು ಕಲ್ಮಾಷಪಾದನೂ ಆದನು. ವಸಿಷ್ಠರ ಶಾಪದಂತೆ ಸೌದಾಸನು ರಾಕ್ಷಸನಾಗಿಬಿಟ್ಟನು. ರಾಕ್ಷಸನಾಗಿ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಬ್ರಾಹ್ಮಣದಂಪತಿಗಳು ರತಿಸುಖದಲ್ಲಿದ್ದುದನ್ನು ನೋಡಿ ದನು. ಆ ಸಮಯದಲ್ಲಿ ರಾಕ್ಷಸರೂಪಿಯಾಗಿದ್ದ ರಾಜನಿಗೆ ಬಹಳ ಹಸಿವಾಗಿದ್ದಿತು. ಹಸಿವನ್ನು ನೀಗಿಸಿಕೊಳ್ಳಲು ಬ್ರಾಹ್ಮಣನನ್ನು ಹಿಡಿದು ಕೊಂಡನು. ಆಗ ಇನ್ನೂ ಬ್ರಾಹ್ಮಣಿಯ ಕಾಮನೆಯು ಪೂರ್ಣಗೊಂಡಿರಲಿಲ್ಲ. ಅವಳು ರಾಜನಿಗೆ ಹೇಳಿದಳು :

"ಮಹಾರಾಜ! ನೀನು ನಿಶ್ಚಯವಾಗಿಯೂ ರಾಕ್ಷಸನಲ್ಲ. ನೀನು ಸತೀ-ಸಾಧ್ವಿಯಾದ ಮದಯಂತಿಯ ಪತಿಯಾಗಿರುವೆ. ಇಕ್ಷ್ವಾಕುವಂಶದ ವೀರನಾಗಿರುವೆ. ಮಹಾರಥನಾಗಿರುವೆ. ನಿನ್ನಂತಹವನು ಅಧರ್ಮಕಾರ್ಯ ವನ್ನು ಮಾಡುವುದು ಯೋಗ್ಯವಲ್ಲ. ನಾನು ಸಂತಾನದ ಕಾಮನೆಯಿಂದ ನನ್ನ ಪತಿಯೊಡನೆ ಸೇರಿದ್ದೆನು. ನನ್ನ ಪತಿಯು ಪೂರ್ಣಕಾಮನಾಗಿರಲಿಲ್ಲ. ಆದುದರಿಂದ ದಯಮಾಡಿ ನನ್ನ ಪತಿಯನ್ನು ಬಿಟ್ಟುಬಿಡು. ಮಹಾರಾಜ! ಮನುಷ್ಯನ ಈ ದೇಹವು ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ವಿಧ ವಾದ ಪುರುಷಾರ್ಥಗಳನ್ನೂ ಸಾಧಿಸಿಕೊಳ್ಳುವ ಸಾಧನವಾಗಿದೆ. ವೀರನೇ! ಇವನ ವಧೆಯಿಂದಾಗಿ ಯಾವ ಪುರುಷಾರ್ಥದ ಸಾಧನೆಯೂ ಆಗುವುದಿಲ್ಲ. ಇವನ ವಧೆಯಿಂದ ಪುರುಷಾರ್ಥಗಳ ವಧೆಯೇ ಆಗುತ್ತದೆ. ಮಹಾರಾಜ! ಈ ಬ್ರಾಹ್ಮಣನಾದರೋ ವಿದ್ವಾಂಸನು. ತಪಸ್ಸಿನಿಂದಲೂ, ಸೌಶೀಲ್ಯದಿಂದಲೂ, ಉತ್ತಮಗುಣಗಳಿಂದಲೂ ಸಂಪನ್ನನಾಗಿದ್ದಾನೆ. ಇವನು ಪುರು ಷೋತ್ತಮಪರಬ್ರಹ್ಮನನ್ನು ಸಕಲಪ್ರಾಣಿಗಳಲ್ಲಿಯೂ ಇರುವ ಅಂತರಾತ್ಮನೆಂದು ಭಾವಿಸಿ ಆರಾಧಿಸುತ್ತಾನೆ. ಯದ್ಯಪಿ ಮಹಾಪುರುಷನಾದ ಆ ಪರ ಮಾತ್ಮನು ಸಮಸ್ತಪದಾರ್ಥಗಳಲ್ಲಿಯೂ ಇರುವವನಾದರೂ ಸತ್ತ್ವ-ರಾಜಸ-ತಾಮಸ ಗುಣಗಳ ಹಿಂದೆ ಅವನು ತನ್ನನ್ನು ಬಚ್ಚಿಟ್ಟುಕೊಂಡಿರುತ್ತಾನೆ.

ಮಹಾರಾಜ! ನೀನು ಶಕ್ತಿಶಾಲಿಯಾಗಿರುವೆ. ಧರ್ಮದ ರಹಸ್ಯವನ್ನು ಚೆನ್ನಾಗಿ ತಿಳಿದುಕೊಂಡಿರುವೆ. ತಂದೆಯಾದವನು ಪುತ್ರನನ್ನೇ ವಧಿಸುವಂತೆ ರಾಜನಾಗಿರುವ ನೀನು ಶ್ರೇಷ್ಠಬ್ರಹ್ಮರ್ಷಿಯಾಗಿರುವ ನನ್ನ ಪತಿಯನ್ನು ವಧಿಸುವುದು ಉಚಿತವಲ್ಲ.

ಮಹಾರಾಜ! ನೀನು ಸಾಧುಸಮ್ಮತನಾಗಿರುವೆ. ನನ್ನ ಪತಿಯು ನಿಷ್ಪಾಪನು. ಪರಮಸಾಧುವು. ಬ್ರಹ್ಮವಾದಿಯು. ಶ್ರೋತ್ರಿಯನು. ಭ್ರೂಣಹತ್ಯೆಗೆ ಅಥವಾ ಗೋವಧೆಗೆ ಸಮಾನವಾದ ನನ್ನ ಪತಿಯ ವಧೆಯನ್ನು ನೀನು ಸಮುಚಿತವಾದುದೆಂದು ಹೇಗೆ ಭಾವಿಸುವೆ? ನಾನಿಷ್ಟು ಬೇಡಿಕೊಂಡರೂ ನೀನು ಇವನನ್ನು ಭಕ್ಷಿಸಲು ನಿಶ್ಚಯಿಸಿರುವುದಾದರೆ ಮೊದಲು ನನ್ನನ್ನೇ ತಿಂದುಬಿಡು. ಜೀವವಿಲ್ಲದಿರುವ ಶರೀರದಂತೆ ನಾನು ಇವನನ್ನು ಬಿಟ್ಟು ಕ್ಷಣಕಾಲವಾದರೂ ಜೀವಿಸಿರಲಾರೆನು."

ಪರೀಕ್ಷಿತ! ಹೀಗೆ ಬ್ರಾಹ್ಮಣನ ಪತ್ನಿಯು ಕರುಣಾಪೂರ್ಣವಾದ ವಾಣಿಯಿಂದ ಬೇಡಿಕೊಳ್ಳುತ್ತಾ ಅನಾಥಳಂತೆ ರೋದನಮಾಡುತ್ತಿದ್ದಳು. ಆದರೆ ಸೌದಾಸನು ಶಾಪಾಭಿಭೂತನಾಗಿ ರಾಕ್ಷಸನಾಗಿದ್ದುದರಿಂದ ಬ್ರಾಹ್ಮಣಿಯ ಪ್ರಾರ್ಥನೆಗೆ ಕಿವಿಗೊಡಲೇ ಇಲ್ಲ. ಹುಲಿಯು ಹಸುವನ್ನು ಭಕ್ಷಿಸುವಂತೆ ಬ್ರಾಹ್ಮಣನನ್ನು ಸಂಪೂರ್ಣವಾಗಿ ಭಕ್ಷಿಸಿಯೇ ಬಿಟ್ಟನು. ಗರ್ಭಾಧಾನಮಾಡಲಿದ್ದ ಪತಿಯನ್ನು ರಾಕ್ಷಸರೂಪದಲ್ಲಿದ್ದ ರಾಜನು ತನ್ನ ಸಮಕ್ಷದಲ್ಲಿಯೇ ಭಕ್ಷಿಸಿದ್ದಕ್ಕಾಗಿ ಬ್ರಾಹ್ಮಣಿಗೆ ಅತಿದುಃಖವಾಯಿತು. ಮರುಕ್ಷಣದಲ್ಲಿಯೇ ತಡೆಯಲಾಗದ ಕೋಪವೂ ಬಂದು ಬ್ರಾಹ್ಮಣಿಯು ರಾಜನಿಗೆ ಶಾಪವನ್ನಿತ್ತಳು. (ಶ್ಲೋಕ 20-34)

ಯಸ್ಮಾನ್ಮೇ ಭಕ್ಷಿತಃ ಪಾಪ ಕಾಮಾರ್ತಾಯಾಃ ಪತಿಸ್ತ್ವಯಾ ।
ತವಾಪಿ ಮೃತ್ಯುರಾಧಾನಾದಕೃತಪ್ರಜ್ಞ ದರ್ಶಿತಃ ॥೩೫॥

"ಪಾಪಿಷ್ಠನೇ! ಮೂರ್ಖನೇ! ಕಾಮಪೀಡಿತಳಾಗಿದ್ದ ನನ್ನ ಮನೋರಥವು ಪೂರೈಸುವುದರೊಳಗಾಗಿ ನೀನು ನನ್ನ ಪತಿಯನ್ನು ಭಕ್ಷಿಸಿದೆಯಾದ ಕಾರಣ ನೀನು ಗರ್ಭಾಧಾನಕ್ಕಾಗಿ ಪತ್ನಿಯನ್ನು ಸಂಪರ್ಕಿಸಿದೊಡನೆಯೇ ನಿನಗೆ ಮೃತ್ಯುದೇವತೆಯು ಕಾಣಿಸಿಕೊಳ್ಳುತ್ತದೆ."

ಹೀಗೆ ಪತಿಲೋಕಪರಾಯಣೆಯಾದ ಬ್ರಾಹ್ಮಣಿಯು ಮಿತ್ರಸಹನಿಗೆ ಶಾಪವನ್ನಿತ್ತು ಪತಿಯ ಅಸ್ಥಿಗಳೆಲ್ಲವನ್ನೂ ಸಂಗ್ರಹಿಸಿ ಚಿತೆಯನ್ನು ಕಲ್ಪಿಸಿ ಅದರ ಮೇಲಿಟ್ಟು ಅಗ್ನಿಯನ್ನು ಸ್ಪರ್ಶಿಸಿ ಧಗ-ಧಗಿಸುತ್ತಿದ್ದ ಅಗ್ನಿಯಲ್ಲಿ ತಾನೂ ಧುಮುಕಿ ಪತಿಯೊಡನೆ ಸಹಗಮನಮಾಡಿ ಪತಿಯು ಪಡೆದ ಸದ್ಗತಿಯನ್ನೇ ತಾನೂ ಪಡೆದುಕೊಂಡಳು.

ಹನ್ನೆರಡು ವರ್ಷಗಳನಂತರ ಸೌದಾಸನು ಬ್ರಾಹ್ಮಣಶಾಪದಿಂದ ಬಿಡುಗಡೆಹೊಂದಿದನು. ಸಂತೋಷಭರಿತನಾಗಿದ್ದ ರಾಜನು ಮದಯಂತಿಯೊಡನೆ ಸಮಾಗಮಕ್ಕೆ ಹೋದಾಗ ಮದಯಂತಿಯು ಬ್ರಾಹ್ಮಣಿಯ ಶಾಪವನ್ನು ಜ್ಞಾಪಿಸುತ್ತಾ ರಾಜನನ್ನು ತಡೆದಳು. ಈ ಕಾರಣದಿಂದ ಅವನು ಮುಂದೆ ಸ್ತ್ರೀಸುಖವನ್ನೇ ಸಂಪೂರ್ಣವಾಗಿ ತ್ಯಜಿಸಬೇಕಾಯಿತು. ರಾಕ್ಷಸನಾಗಿದ್ದಾಗ ರಾಜನು ಮಾಡಿದ ದುಷ್ಕರ್ಮದ ಫಲವಾಗಿ ಅವನು ಸಂತಾನಹೀನನಾದನು.

ರಾಜನ ಅನುಮತಿಯನ್ನು ಪಡೆದ ವಸಿಷ್ಠರು ಮದಯಂತಿಗೆ ಗರ್ಭಾಧಾನ ಮಾಡಿದರು. ಮದಯಂತಿಯು ಏಳು ವರ್ಷಗಳವರೆಗೆ ಗರ್ಭವನ್ನು ಧರಿ ಸಿಯೇ ಇದ್ದಳು. ಆದರೂ ಪ್ರಸವಿಸಲೇ ಇಲ್ಲ. ಆ ಸಮಯದಲ್ಲಿ ವಸಿಷ್ಠರು ಕಲ್ಲಿನಿಂದ ಅವಳ ಹೊಟ್ಟೆಯನ್ನು ಕುಟ್ಟಿದರು. ಒಡನೆಯೇ ಶಿಶುವು ಹುಟ್ಟಿತು. ಕಲ್ಲಿನಿಂದ ಕುಟ್ಟಿದನಂತರವೇ ಶಿಶುವು ಹುಟ್ಟಿದಕಾರಣ ಶಿಶುವಿಗೆ ಅಶ್ಮಕ ನೆಂದೇ ಹೆಸರಿಟ್ಟರು. ಮೂಲಕನೆಂಬುವನು ಅಶ್ಮಕನ ಮಗ. ಪರಶುರಾಮನು ಭೂಮಂಡಲವನ್ನು ಕ್ಷತ್ರಿಯರಿಂದ ರಹಿತವನ್ನಾಗಿ ಮಾಡಲು ಸಂಚರಿಸುತ್ತಿದ್ದಾಗ ಸ್ತ್ರೀಯರೆಲ್ಲರೂ ಸೇರಿ ಮೂಲಕನನ್ನು ಮುಚ್ಚಿಟ್ಟು ರಕ್ಷಿಸಿದರು. ಈ ಕಾರಣದಿಂದ ಮೂಲಕನನ್ನು ನಾರೀಕವಚ–ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಭೂಮಂಡಲವು ಕ್ಷತ್ರಿಯರಿಂದ ರಹಿತವಾಗುವುದರಲ್ಲಿ ದ್ದಾಗ ಸ್ತ್ರೀಯರ ರಕ್ಷಣೆಯಿಂದ ಬದುಕಿಕೊಂಡ ಏಕಮಾತ್ರಕ್ಷತ್ರಿಯನು (ಮೂಲಕನು) ಕ್ಷತ್ರಿಯರ ಮೂಲಪುರುಷನೂ ಆದನು. ಮೂಲಕನ ಮಗ ದಶರಥ. ದಶರಥನ ಮಗ ಐಡವಿಡ ಅಥವಾ ಐಲವಿಲ. ಐಡವಿಡನ ಮಗ ವಿಶ್ವಸಹ. ವಿಶ್ವಸಹನ ಮಗ ಖಟ್ವಾಂಗ. ಇವನು ಚಕ್ರವರ್ತಿಯಾದನು. ಯುದ್ಧದಲ್ಲಿ ಅವನನ್ನು ಜಯಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ದೇವತೆಗಳ ಪ್ರಾರ್ಥನೆಯಂತೆ ಖಟ್ವಾಂಗನು ದೈತ್ಯರನ್ನು ಸಂಹರಿಸಿದನು. ತನ್ನ ಆಯುಷ್ಯವು ಕೇವಲ ಮುಹೂರ್ತಮಾತ್ರ ಇರುವುದೆಂದು ದೇವತೆಗಳಿಂದ ತಿಳಿದೊಡನೆಯೇ ಖಟ್ವಾಂಗನು ರಾಜಧಾನಿಗೆ ಹಿಂದಿರುಗಿ ಏಕಾಂತದಲ್ಲಿ ಕುಳಿತು ಮನಸ್ಸನ್ನು ಪರಮಾತ್ಮನಲ್ಲಿ ಲೀನಗೊಳಿಸಿದನು. ಆತ್ಮಾನುಸಂಧಾನ ಮಾಡುತ್ತಾ ಖಟ್ವಾಂಗನು ಪರಮಾತ್ಮನನ್ನು ಪರಿಪರಿಯಾಗಿ ಪ್ರಾರ್ಥಿಸಿದನು.

(ಶ್ಲೋಕ 36-42)

ನ ಮೇ ಬ್ರಹ್ಮಕುಲಾತ್ಪ್ರಾಣಾಃ ಕುಲದೈವಾನ್ನ ಚಾತ್ಮಜಾಃ ।
ನ ಶ್ರಿಯೋ ನ ಮಹೀ ರಾಜ್ಯಂ ನ ದಾರಾಶ್ಚಾತಿವಲ್ಲಭಾಃ ॥೪೩॥

“ನನಗೆ ಬ್ರಾಹ್ಮಣಕುಲಕ್ಕಿಂತಲೂ ಪ್ರಾಣಗಳು ಪ್ರಿಯವಾದುವಲ್ಲ. ನನ್ನ ಕುಲದೇವತೆಯಾದ ಶ್ರೀಹರಿಗಿಂತಲೂ ಪುತ್ರರಾಗಲೀ, ಸಂಪತ್ತಾಗಲೀ, ಭೂಮಿಯಾಗಲೀ, ರಾಜ್ಯವಾಗಲೀ, ಪತ್ನಿಯರಾಗಲೀ ಹೆಚ್ಚುಪ್ರಿಯರಲ್ಲ.

ನ ಬಾಲ್ಯೇಽಪಿ ಮತಿರ್ಮಹ್ಯಮಧರ್ಮೇ ರಮತೇ ಕ್ವಚಿತ್ ।
ನಾಪಶ್ಯಮುತ್ತಮಶ್ಲೋಕಾದನ್ಯತ್ಕಿಞ್ಚನ ವಸ್ತ್ವಹಮ್ ॥೪೪॥

ಬಾಲ್ಯದಲ್ಲಿ ಕೂಡ ನನ್ನ ಮನಸ್ಸು ಒಮ್ಮೆಯಾದರೂ ಅಧರ್ಮದ ಕಡೆಗೆ ಹೋಗುತ್ತಿರಲಿಲ್ಲ. ಪುಣ್ಯಶ್ಲೋಕನಾದ ಭಗವಂತನಿಗಿಂತಲೂ ಬೇರೆ ಯಾದ ಯಾವುದೇ ವಸ್ತುವನ್ನೂ ನಾನರಿಯೆನು.

ದೇವೈಃ ಕಾಮವರೋ ದತ್ತೋ ಮಹ್ಯಂ ತ್ರಿಭುವನೇಶ್ವರೈಃ ।
ನ ವೃಣೇ ತಮಹಂ ಕಾಮಂ ಭೂತಭಾವನಭಾವನಃ ॥೪೫॥

ಮೂರು ಲೋಕಗಳಿಗೂ ಈಶ್ವರರಾದ ದೇವತೆಗಳೇನೋ ನನಗೆ ಬೇಕು-ಬೇಕಾದ ವರಗಳನ್ನು ಕೊಡಲು ಮುಂದಾದರು. ಆದರೆ ನಾನು ಭೋಗಲಾಲಸೆಯಿಂದ ಕೂಡಿದ ಆ ವರಗಳನ್ನು ಪಡೆದುಕೊಳ್ಳಲಿಲ್ಲ. ಸಮಸ್ತ ಪ್ರಾಣಿಗಳಿಗೂ ಜೀವನಪ್ರದನಾದ ಶ್ರೀಹರಿಯ ಧ್ಯಾನದಲ್ಲಿಯೇ ನನ್ನ ಮನಸ್ಸು ಲೀನವಾಗಿಬಿಟ್ಟಿದ್ದಿತು.

ಯೇ ವಿಕ್ಷಿಪ್ತೇನ್ದ್ರಿಯಧಿಯೋ ದೇವಾಸ್ತೇ ಸ್ವಹೃದಿ ಸ್ಥಿತಮ್ ।
ನ ವಿನ್ದನ್ತಿ ಪ್ರಿಯಂ ಶಶ್ವದಾತ್ಮಾನಂ ಕಿಮುತಾಪರೇ ॥೪೬॥

ಮನುಷ್ಯರಿಂದ ಆರಾಧಿಸಲ್ಪಡುವ ದೇವತೆಗಳು ಕೂಡ ವಿಚಲಿತವಾದ ಇಂದ್ರಿಯಗಳಿಂದಲೂ ಮತ್ತು ಬುದ್ಧಿಯಿಂದಲೂ ಕೂಡಿದವರಾಗಿ, ತಮ್ಮ ಹೃದಯದಲ್ಲಿಯೇ ವಿರಾಜಮಾನನಾಗಿರುವ, ಸದಾ-ಸರ್ವದಾ ತಮ್ಮ ಪ್ರಿಯ ತಮನ ರೂಪದಲ್ಲಿ ಕಾಣಿಸಿಕೊಳ್ಳುವ ಆತ್ಮಸ್ವರೂಪನಾದ ಶ್ರೀಭಗವಂತನನ್ನೇ ತಿಳಿಯರೆಂದಮೇಲೆ ಬೇರೆಯವರ ವಿಷಯದಲ್ಲಿ ಹೇಳುವುದೇನಿದೆ?

ಅಥೇಶಮಾಯಾರಚಿತೇಷು ಸಙ್ಗಂ
ಗುಣೇಷು ಗನ್ಧರ್ವಪುರೋಪಮೇಷು ।
ರೂಢಂ ಪ್ರಕೃತ್ಯಾತ್ಮನಿ ವಿಶ್ವಕರ್ತು-
ರ್ಭಾವೇನ ಹಿತ್ವಾ ತಮಹಂ ಪ್ರಪದ್ಯೇ ॥೪೭॥

ಆದುದರಿಂದ ಈಶ್ವರನ ಮಾಯಾಕಲ್ಪಿತಗಳಾದ ಆಕಾಶದಲ್ಲಿ ಪ್ರಕಟವಾಗುವ ಗಂಧರ್ವನಗರಿಗಳಂತಿರುವ ಸತ್ತ್ವವೇ ಮೊದಲಾದ ಗುಣ ಗಳಲ್ಲಿಯೂ ಪ್ರಕೃತಿಯ ಪರಿಣಾಮವಾದ ಶರೀರದಲ್ಲಿಯೂ ರೂಢಮೂಲ ವಾಗಿರುವ ನಾನು-ನನ್ನದೆಂಬ ಸಂಗವನ್ನು ತೊರೆದು, ವಿಶ್ವಕರ್ತೃವಾದ

ಶ್ರೀಭಗವಂತನ ಭಾವನೆಯಲ್ಲಿಯೇ ಮನಸ್ಸನ್ನು ಲೀನಗೊಳಿಸಿ ಅವನಿಗೆ ಶರಣುಹೋಗುತ್ತೇನೆ.”

ನಾರಾಯಣಮಯವಾದ ಬುದ್ಧಿಯಿಂದ ಕೂಡಿದ್ದ ಖಟ್ವಾಂಗನು ಹೀಗೆ ನಿಶ್ಚಯಿಸಿ ದೇಹಾಭಿಮಾನರೂಪವಾದ ಅಜ್ಞಾನವನ್ನು ಪರಿತ್ಯಜಿಸಿ ಸ್ವಸ್ವರೂಪದಲ್ಲಿ ನೆಲೆಗೊಂಡನು.

ಪರಮಭಕ್ತರು ಯಾವನನ್ನು ಭಗವಾನ್ ವಾಸುದೇವನೆಂದು ಕರೆಯುವರೋ ಆ ಸ್ವರೂಪವು ಸಾಕ್ಷಾತ್ ಪರಬ್ರಹ್ಮವೇ ಆಗಿದೆ. ಅದು ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾದುದು. ಶೂನ್ಯಕ್ಕೆ ಸಮಾನವಾದುದು. ಆದರೆ ಅದು ಶೂನ್ಯವಲ್ಲ. ಪರಮಸತ್ಯವಾದುದು. ಅಂತಹ ಪರಬ್ರಹ್ಮಸ್ವರೂಪದಲ್ಲಿ ಖಟ್ವಾಂಗನು ಸೇರಿಹೋದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೦ನೆಯ ಅಧ್ಯಾಯ

ಶ್ರೀರಾಮನ ಲೀಲಾವರ್ಣನೆಗಳು

ಶ್ರೀಶುಕರು ಹೇಳುತ್ತಾರೆ :

ಖಟ್ವಾಙ್ಗಾದ್ದೀರ್ಘಬಾಹುಶ್ಚ ರಘುಸ್ತಸ್ಮಾತ್ಪೃಥುಶ್ರವಾಃ ।
ಅಜಸ್ತತೋ ಮಹಾರಾಜಸ್ತಸ್ಮಾದ್ದಶರಥೋಽಭವತ್ ॥೧॥

ಪರೀಕ್ಷಿತ! ಖಟ್ವಾಂಗನ ಪುಣ್ಯತಮವಾದ ಚರಿತ್ರೆಯನ್ನು ಹೇಳಿಯಾಯಿತಲ್ಲವೇ? ಮುಂದೆ ಅವನ ವಂಶಾವಳಿಯನ್ನು ವರ್ಣಿಸುತ್ತೇನೆ.

ಖಟ್ವಾಂಗನ ಮಗ ದೀರ್ಘಬಾಹು. ದೀರ್ಘಬಾಹುವಿನ ಮಗ ಮಹಾಯಶೋವಂತನಾದ ರಘು. ರಘುವಿನ ಮಗ ಅಜ. ಅಜನ ಮಗ ದಶರಥಮಹಾರಾಜ.

ದೇವತೆಗಳ ಪ್ರಾರ್ಥನೆಯಂತೆ ಸಾಕ್ಷಾತ್ ಪರಬ್ರಹ್ಮಪರಮಾತ್ಮನಾದ ಶ್ರೀಹರಿಯು ತನ್ನ ಅಂಶಗಳಿಂದ ನಾಲ್ಕು ರೂಪಗಳನ್ನು ಧರಿಸಿ ರಾಮ-ಲಕ್ಷ್ಮಣ-ಭರತ-ಶತ್ರುಘ್ನರೆಂಬ ಸಂಜ್ಞೆಯಿಂದ ದಶರಥರಾಜನ ಮಗನಾಗಿ

ಹುಟ್ಟಿದನು. ಸೀತಾಪತಿಯಾದ ಶ್ರೀರಾಮನ ಚರಿತ್ರೆಯನ್ನು ತತ್ತ್ವದರ್ಶಿಗಳಾದ ಮಹರ್ಷಿಗಳು ಬಹಳವಾಗಿ ವರ್ಣಿಸಿದ್ದಾರೆ. ನೀನೂ ಕೂಡ ಅವನ ಪುಣ್ಯಚರಿತ್ರೆಯನ್ನು ಹಲವಾರುಬಾರಿ ಕೇಳಿರುವೆ.

ಗುರ್ವರ್ಥೇ ತ್ಯಕ್ತರಾಜ್ಯೋ ವ್ಯಚರದನುವನಂ
ಪದ್ಮಪದ್ಭ್ಯಾಂ ಪ್ರಿಯಾಯಾಃ
ಪಾಣಿಸ್ಪರ್ಶಾಕ್ಷಮಾಭ್ಯಾಂ ಮೃಜಿತಪಥರುಜೋ
ಯೋ ಹರೀನ್ದ್ರಾನುಜಾಭ್ಯಾಮ್ ।
ವೈರೂಪ್ಯಾಚ್ಛೂರ್ಪಣಖ್ಯಾಃ ಪ್ರಿಯವಿರಹರುಷಾ-
ರೋಪಿತಭ್ರೂವಿಜೃಮ್ಭ-
ತ್ರಸ್ತಾಬ್ಧಿರ್ಬದ್ಧಸೇತುಃ ಖಲದವದಹನಃ
ಕೋಸಲೇನ್ದ್ರೋಽವತಾನ್ನಃ ॥೪॥

ಭಗವಂತನಾದ ಶ್ರೀರಾಮನು ತನ್ನ ತಂದೆಯ ಮಾತನ್ನು ಸತ್ಯವಾಗಿಸಲು ಸಿಂಹಾಸನವನ್ನು ಪರಿತ್ಯಜಿಸಿ ವನಗಳಲ್ಲಿ ಸಂಚರಿಸಿದನು. ಸುಕುಮಾರಿಯಾದ ಜಾನಕಿಯ ಕರಸ್ಪರ್ಶವನ್ನೂ ಸಹಿಸದಷ್ಟು ಶ್ರೀರಾಮಚಂದ್ರನ ಚರಣಕಮಲಗಳು ಸುಕೋಮಲವಾಗಿದ್ದುವು. ಹನುಮ-ಲಕ್ಷ್ಮಣರು ಸುಕೋಮಲವಾದ ಪಾದಪದ್ಮಗಳಿಗೆ ಆಗುತ್ತಿದ್ದ ಆಯಾಸವನ್ನು ಸೇವೆಯಿಂದ ಪರಿಹರಿಸುತ್ತಿದ್ದರು. ಶೂರ್ಪಣಖೆಯ ಕಿವಿ-ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದುದರಿಂದ ಪ್ರಿಯತಮೆಯಾದ ಸೀತೆಯ ವಿಯೋಗದುಃಖವನ್ನು ಶ್ರೀರಾಮನು ಸಹಿಸಬೇಕಾಯಿತು. ಸೀತಾ ವಿಯೋಗದ ಕಾರಣದಿಂದ ಕ್ರುದ್ಧನಾದ ಶ್ರೀರಾಮನ ಹುಬ್ಬುಗಳು ಗಂಟಿಕ್ಕಿದುವು. ಕ್ರುದ್ಧನಾಗಿದ್ದ ಶ್ರೀರಾಮನನ್ನು ನೋಡಿ ಸಮುದ್ರರಾಜನೂ ಭಯಗೊಂಡನು. ಬಳಿಕ ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ದುಷ್ಟರಾಕ್ಷಸರನ್ನು–ಕಾಡುಗಿಚ್ಚು ಅರಣ್ಯವನ್ನು ದಹಿಸುವಂತೆ–ಭಸ್ಮ ಮಾಡಿಬಿಟ್ಟನು. ಅಂತಹ ಕೋಸಲೇಂದ್ರನಾದ ಶ್ರೀರಾಮನು ನಮ್ಮನ್ನು ರಕ್ಷಿಸಲಿ.

ಪರೀಕ್ಷಿತ! ಭಗವಾನ್ ಶ್ರೀರಾಮನು ವಿಶ್ವಾಮಿತ್ರನ ಯಜ್ಞದಲ್ಲಿ

ಲಕ್ಷ್ಮಣನ ಸಮಕ್ಷದಲ್ಲಿಯೇ ಮಾರೀಚನೇ ಮೊದಲಾದ ರಾಕ್ಷಸಶ್ರೇಷ್ಠರನ್ನು ಸಂಹರಿಸಿದನು.

ಜನಕರಾಜನ ಪಟ್ಟಣದಲ್ಲಿ ಸೀತಾಸ್ವಯಂವರಕ್ಕೆ ಸಿದ್ಧತೆಗಳಾಗುತ್ತಿದ್ದುವು. ಭೂಮಂಡಲದಲ್ಲಿ ಮಹಾವೀರರೆನಿಸಿಕೊಂಡಿದ್ದವರೆಲ್ಲರೂ ಅಲ್ಲಿಗೆ ಆಗಮಿಸಿದ್ದರು. ಆ ಎಲ್ಲ ವೀರರ ಮಧ್ಯದಲ್ಲಿ ಭಯಂಕರವಾದ ಶೈವಧನುಸ್ಸು ಇಡಲ್ಪಟ್ಟಿದ್ದಿತು. ಆ ಶಿವಧನುಸ್ಸನ್ನು ಮುನ್ನೂರು ಮಂದಿ ವೀರಕ್ಷತ್ರಿಯರು ಬಹಳ ಕಷ್ಟಪಟ್ಟು ಸ್ವಯಂವರಸಭಾಮಂಟಪಕ್ಕೆ ತಂದಿದ್ದರು. ಅಂತಹ ಮಹಾಧನುಸ್ಸನ್ನು–ಆನೆಮರಿಯೊಂದು ಕಬ್ಬಿನ ಜಲ್ಲೆಯನ್ನು ಎತ್ತುವಂತೆ–ಶ್ರೀರಾಮನು ನಿರಾಯಾಸವಾಗಿ ಮೇಲಕ್ಕೆತ್ತಿದನು. ಕ್ಷಣಮಾತ್ರದಲ್ಲಿ ಶ್ರೀರಾಮನು ಹೆದೆಯನ್ನೇರಿಸಿ ನಾಣನ್ನು ಸೆಳೆದೊಡನೆಯೇ ಧನುಸ್ಸು ಮಧ್ಯದಲ್ಲಿ ಮುರಿದು ಎರಡು ಭಾಗಗಳಾಗಿ ಕೆಳಕ್ಕೆ ಬಿದ್ದಿತು.

ಭಗವಂತನಾದ ಶ್ರೀಹರಿಯು ಯಾವಳಿಗೆ ತನ್ನ ಹೃದಯಕಮಲದಲ್ಲಿ ಸ್ಥಾನವನ್ನಿತ್ತು ಸಮ್ಮಾನಿಸಿದನೋ ಆ ಮಹಾಲಕ್ಷ್ಮಿಯೇ ಸೀತೆಯಾಗಿ ಜನಕನ ಪಟ್ಟಣದಲ್ಲಿ ಅವತರಿಸಿದ್ದಳು. ಅವಳು ಗುಣ, ಶೀಲ, ವಯಸ್ಸು, ಆಕೃತಿ ಮತ್ತು ರೂಪಗಳಲ್ಲಿ ಶ್ರೀರಾಮನಿಗೆ ಅನುರೂಪಳಾದ ಪತ್ನಿಯಾಗಿದ್ದಳು. ಧನುಸ್ಸನ್ನು ಭಂಜಿಸಿ ಸೀತಾದೇವಿಯನ್ನು ಗೆದ್ದು ಅವಳನ್ನು ಕರೆದುಕೊಂಡು ಅಯೋಧ್ಯೆಗೆ ಹಿಂದಿರುಗುತ್ತಿದ್ದಾಗ ಎದುರಾಗಿ ಬಂದ, ಇಪ್ಪತ್ತೊಂದುಬಾರಿ ಭೂಮಂಡಲದ ಕ್ಷತ್ರಿಯರೆಲ್ಲರನ್ನೂ ಸಂಹರಿಸಿ ಗರ್ವಿಷ್ಠನಾಗಿದ್ದ ಪರಶು ರಾಮನ ಗರ್ವವನ್ನು ಅಡಗಿಸಿದನು.

ಬಳಿಕ ಶ್ರೀರಾಮನು ತಂದೆಯ ಮಾತನ್ನು ಸತ್ಯವನ್ನಾಗಿಸಲು ಅರಣ್ಯಕ್ಕೆ ಹೊರಟನು. ಹೆಂಡತಿಗೆ ಅಧೀನನಾಗಿ ರಾಜನು ಮಾತುಕೊಟ್ಟಿದ್ದ ನಾದರೂ ದಶರಥನು ಸತ್ಯವೆಂಬ ಪಾಶದಿಂದ ಕಟ್ಟಲ್ಪಟ್ಟಿದ್ದನು. ಆದರಿಂದ ತಂದೆಯನ್ನು ವಿಮುಕ್ತಿಗೊಳಿಸಲು ಶ್ರೀರಾಮನು ಆತನ ಆಜ್ಞೆಯನ್ನು ಶಿರಸಾವಹಿಸಿ ಪ್ರಾಣಪ್ರಿಯವಾದ ರಾಜ್ಯವನ್ನೂ, ಐಶ್ವರ್ಯವನ್ನೂ, ಪ್ರಿಯರನ್ನೂ, ಹಿತೈಷಿಗಳನ್ನೂ, ಮಿತ್ರರನ್ನೂ, ಅರಮನೆಯನ್ನೂ ಪರಿತ್ಯಜಿಸಿ ತನ್ನ ಪತ್ನಿಯೊಡನೆ ಅರಣ್ಯಕ್ಕೆ ಹೊರಟನು. ಸಂಗದಿಂದ ಮುಕ್ತನಾದವನು ಯಾವ ವಿಧವಾದ ಆತಂಕವೂ ಇಲ್ಲದೆ ಪ್ರಾಣಗಳನ್ನು ಬಿಡುವಂತೆ–ಮುಕ್ತ

ಸಂಗನಾದ ಶ್ರೀರಾಮನು ಯಾವ ವಿಧವಾದ ಆಸಕ್ತಿಯೂ ಇಲ್ಲದೆ ಸಂಕಟವನ್ನು ತೊರೆದು ಕಾಡಿಗೆ ತೆರಳಿದನು. ಅರಣ್ಯದಲ್ಲಿ ಹಲವಾರು ವರ್ಷಗಳು ಕಳೆದನಂತರ ಶ್ರೀರಾಮನು ವಿಧಿಪ್ರಚೋದಿತಳಾಗಿ ಆಗಮಿಸಿ ಸೀತಾದೇವಿಯನ್ನೇ ತಿನ್ನಲು ಮುನ್ನುಗ್ಗಿದ, ಅಶುದ್ಧವಾದ ಬುದ್ಧಿಯನ್ನು ಹೊಂದಿದ್ದ, ರಾವಣನ ತಂಗಿಯಾದ ಶೂರ್ಪಣಖೆಯ ಕಿವಿ-ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದನು. ಬಳಿಕ ಶೂರ್ಪಣಖೆಯ ಮುಖ್ಯಬಂಧುಗಳಾದ ಖರ-ತ್ರಿಶಿರ-ದೂಷಣರನ್ನೂ ಮತ್ತು ಹದಿನಾಲ್ಕು ಸಾವಿರ ರಾಕ್ಷಸರನ್ನೂ ಸಂಹರಿಸಿ, ಶತ್ರುಗಳಿಂದ ಎದುರಿಸಲು ಅಸಾಧ್ಯವಾದ ಕೋದಂಡವನ್ನು ಧರಿಸಿದ್ದ ಶ್ರೀರಾಮನು ಅರಣ್ಯದಲ್ಲಿ ಸಂಚರಿಸುತ್ತಾ ಬಹಳ ಕಷ್ಟದಿಂದ ಕಾಲಕಳೆಯುತ್ತಿದ್ದನು. (ಶ್ಲೋಕ 5-9)

ಸೀತಾದೇವಿಯ ರೂಪಲಾವಣ್ಯಗಳನ್ನು ಶೂರ್ಪಣಖೆಯಿಂದ ಕೇಳಿದ ರಾವಣನು ಕಾಮಾತುರನಾದನು. ಸೀತೆಯನ್ನು ಅಪಹರಿಸಲು ನಿಶ್ಚಯಿಸಿದ ರಾವಣನು ಮಾರೀಚನನ್ನು ಅದ್ಭುತವಾದ ಜಿಂಕೆಯ ವೇಷದಲ್ಲಿ ಶ್ರೀರಾಮನು ವಾಸಮಾಡುತ್ತಿದ್ದ ಪರ್ಣಶಾಲೆಯ ಬಳಿಗೆ ಕಳುಹಿಸಿದನು. ಸೀತಾದೇವಿಯು ಸ್ವರ್ಣಮೃಗಕ್ಕೆ ಆಸೆಪಟ್ಟಳು. ಆ ಬಂಗಾರದ ಜಿಂಕೆಯನ್ನು ತರಲು ಶ್ರೀರಾಮನು ಅದನ್ನು ಹಿಂಬಾಲಿಸಿದನು. ಮೆಲ್ಲ-ಮೆಲ್ಲಗೆ ಆ ಜಿಂಕೆಯು ಶ್ರೀರಾಮನನ್ನು ಬಹಳ ದೂರದವರೆಗೆ ಸೆಳೆದುಕೊಂಡುಹೋಯಿತು. ಕಟ್ಟ ಕಡೆಗೆ ಶ್ರೀರಾಮನು–ದಕ್ಷಪ್ರಜಾಪತಿಯನ್ನು ವೀರಭದ್ರನು ಸಂಹರಿಸಿದಂತೆ–ಕ್ಷಣಮಾತ್ರದಲ್ಲಿ ಜಿಂಕೆಯನ್ನು ಸಂಹರಿಸಿಬಿಟ್ಟನು. ಶ್ರೀರಾಮನು ಆಶ್ರಮ ದಿಂದ ಬಹಳ ದೂರದವರೆಗೆ ಹೋಗಿರಲಾಗಿ ಲಕ್ಷ್ಮಣನೂ ಆಶ್ರಮದಿಂದ ಹೊರಕ್ಕೆ ಬಂದುಬಿಟ್ಟಿರುವಾಗ ನೀಚನಾದ ರಾವಣರಾಕ್ಷಸನು–ತೋಳವು ನರಿಮರಿಯನ್ನು ಅಪಹರಿಸುವಂತೆ–ವಿದೇಹನಂದಿನಿಯಾದ, ಸುಕುಮಾರಿಯಾದ ಸೀತಾದೇವಿಯನ್ನು ಅಪಹರಿಸಿಕೊಂಡು ಹೋದನು. ಹೀಗೆ ಪ್ರಾಣಪ್ರಿಯಳಾದ ಸೀತೆಯಿಂದ ಅಗಲಿಕೆಯನ್ನು ಹೊಂದಿ ಶ್ರೀರಾಮನು ಲಕ್ಷ್ಮಣನೊಡನೆ ಕಾಡಿನಲ್ಲಿ ದೀನನಂತೆ ಅಲೆದಾಡುತ್ತಿದ್ದನು. ತನ್ನ ದುರವಸ್ಥೆಯಿಂದಾಗಿ ಶ್ರೀರಾಮನು ಸ್ತ್ರೀಸಂಗಿಗಳಾದ ಸಂಸಾರಿಗಳಿಗೆ ಇದೇ ವಿಧವಾದ ಪರಿಸ್ಥಿತಿಯುಂಟಾಗುವುದೆಂಬುದನ್ನು ಪ್ರಸಿದ್ಧಪಡಿಸುತ್ತಾ ಸಂಚರಿಸುತ್ತಿದ್ದನು.

ಬಳಿಕ ಶ್ರೀರಾಮನು, ಭಗವತ್ಸೇವಾರೂಪವಾದ ಕರ್ಮದಿಂದ ಮೊದಲೇ ಕರ್ಮಬಂಧನದಿಂದ ಮುಕ್ತನಾಗಿದ್ದ ಜಟಾಯುವಿಗೆ ದಹನ ಸಂಸ್ಕಾರಮಾಡಿದನು. ಅನಂತರ ಕಬಂಧನನ್ನು ಸಂಹರಿಸಿದನು. ಬಳಿಕ ಸುಗ್ರೀವನೇ ಮೊದಲಾದ ವಾನರರನ್ನು ಮಿತ್ರರನ್ನಾಗಿಮಾಡಿಕೊಂಡು ವಾಲಿ ಯನ್ನು ಸಂಹರಿಸಿದನು. ಅನಂತರ ವಾನರರ ಮೂಲಕವಾಗಿ ತನ್ನ ಪ್ರೇಯಸಿಯು ಎಲ್ಲಿರುವಳೆಂಬುದನ್ನು ತಿಳಿದುಕೊಂಡನು. ಬ್ರಹ್ಮೇಶರಿಂದ ಅರ್ಚಿಸಲ್ಪಡುವ ಪಾದಪದ್ಮಗಳುಳ್ಳ ಮಾನುಷವೇಷಧರನಾದ ಶ್ರೀರಾಮನು ಕಪಿಗಳ ಸೈನ್ಯದೊಡನೆ ಸಮುದ್ರತೀರಕ್ಕೆ ಹೋದನು. ಉಪವಾಸವ್ರತದಿಂದಾ ಗಲೀ ಪ್ರಾರ್ಥನೆಯಿಂದಾಗಲೀ ಸಮುದ್ರರಾಜನ ಮೇಲೆ ಯಾವ ವಿಧವಾದ ಪರಿಣಾಮವೂ ಆಗದಿರಲು ಶ್ರೀರಾಮನು ಕ್ರೋಧದ ಲೀಲೆಯನ್ನು ತೋರಿ ಸುತ್ತಾ ಅಗಲವಾದ ಮತ್ತು ಉಗ್ರವಾದ ದೃಷ್ಟಿಯಿಂದ ಸಮುದ್ರನನ್ನು ನೋಡಿ ದನು. ಶ್ರೀರಾಮನ ಕ್ರೂರವಾದ ದೃಷ್ಟಿಪಾತದಿಂದಾಗಿ ಸಮುದ್ರದಲ್ಲಿದ್ದ ಮೊಸಳೆ-ಮತ್ಸ್ಯ–ಇವೇ ಮುಂತಾದ ಪ್ರಾಣಿಗಳು ಭ್ರಾಂತವಾದುವು. ಸಮುದ್ರದ ಗರ್ಜನೆಯೂ ಉಡುಗಿಹೋಯಿತು. ಆಗ ಸಮುದ್ರರಾಜನು ಶರೀರವನ್ನು ಧರಿಸಿ ತಲೆಯ ಮೇಲೆ ಅರ್ಘ್ಯ-ಪಾದ್ಯಾದಿಗಳನ್ನು ಹೊತ್ತು ಕೊಂಡು ಭಗವಂತನ ಚರಣಾರವಿಂದಗಳ ಸಾನ್ನಿಧ್ಯಕ್ಕೆ ಆಗಮಿಸಿ ಹೇಳಿದನು :

"ಸ್ವಾಮಿಯೇ! ಅನಂತನೇ! ನಾವು ಮೂರ್ಖರಾಗಿರುವುದರಿಂದ ನಿನ್ನ ನಿಜಸ್ವರೂಪವನ್ನು ತಿಳಿಯೆವು. ನೀನು ಸಮಸ್ತಜಗತ್ತಿಗೂ ಏಕಮಾತ್ರ ಸ್ವಾಮಿಯಾಗಿರುವೆ. ಜಗತ್ತಿಗೆ ಆದಿಕಾರಣನಾಗಿರುವೆ. ನೀನು ಸಮಸ್ತಗುಣ ಗಳಿಗೂ ಸ್ವಾಮಿಯಾಗಿರುವೆ. ಆದುದರಿಂದಲೇ ನೀನು ಸತ್ತ್ವಗುಣವನ್ನು ಸ್ವೀಕರಿಸಿದಾಗ ದೇವತೆಗಳು ಆವಿರ್ಭವಿಸುತ್ತಾರೆ. ರಜೋಗುಣವನ್ನು ಸ್ವೀಕರಿಸಿದಾಗ ಪ್ರಜಾಪತಿಗಳು ಆವಿರ್ಭವಿಸುತ್ತಾರೆ. ತಮೋಗುಣವನ್ನು ಸ್ವೀಕರಿಸಿದಾಗ ನಿನ್ನ ಕೋಪದಿಂದ ರುದ್ರಗಣದ ಉತ್ಪತ್ತಿಯಾಗುತ್ತದೆ.

ವೀರಶಿರೋಮಣಿಯೇ! ನೀನು ನಿನ್ನ ಇಚ್ಛಾನುಸಾರವಾಗಿ ನನ್ನನ್ನು (ಸಮುದ್ರವನ್ನು) ದಾಟಿಕೊಂಡು ಹೋಗಬಹುದು. ಮೂರು ಲೋಕ ಗಳನ್ನೂ ಗೋಳಾಡಿಸುತ್ತಿರುವ ವಿಶ್ರವಸನ ಕುಪುತ್ರನಾದ ರಾವಣನನ್ನು ಸಂಹರಿಸಿ ನಿನ್ನ ಪತ್ನಿಯನ್ನು ಶೀಘ್ರವಾಗಿ ಪಡೆದುಕೋ. ವೀರನೇ! ನನ್ನ

ದೊಂದು ಪ್ರಾರ್ಥನೆಯಿದೆ. ಸೈನ್ಯಸಮೇತನಾಗಿ ನನ್ನನ್ನು ದಾಟಲು ನನ್ನ ಮೇಲೆ ಒಂದು ಸೇತುವೆಯನ್ನು ನಿರ್ಮಿಸು. ಇದರಿಂದ ನಿನ್ನ ಯಶಸ್ಸು ವೃದ್ಧಿಹೊಂದುತ್ತದೆ. ದಿಗ್ವಿಜಯಕ್ಕಾಗಿ ಬರುವ ನರಪತಿಗಳು ಇದನ್ನು ನೋಡಿ ನಿನ್ನನ್ನು ಕೊಂಡಾಡುತ್ತಾರೆ." (ಶ್ಲೋಕ 10-15)

ಸಮುದ್ರರಾಜನು ಹೀಗೆ ಹೇಳಿದನಂತರ ಭಗವಾನ್ ಶ್ರೀರಾಮನು ಅನೇಕಾನೇಕ ಪರ್ವತಗಳ ಶಿಖರಗಳಿಂದ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿಸಿದನು. ದೊಡ್ಡ-ದೊಡ್ಡ ವಾನರರು ತಮ್ಮ ಕೈಗಳಿಂದ ಪರ್ವತಶಿಖರ ಗಳನ್ನು ಕೀಳುವಾಗ ಅವುಗಳ ಮೇಲಿದ್ದ ವೃಕ್ಷಗಳೆಲ್ಲವೂ ತರ-ತರನೆ ನಡುಗು ತ್ತಿದ್ದುವು. ಹೀಗೆ ವಾನರರಿಂದ ಶ್ರೀರಾಮನು ಸಮುದ್ರದ ಮೇಲೆ ಸೇತುವೆ ಯನ್ನು ಕಟ್ಟಿಸಿ ವಿಭೀಷಣನ ಸಲಹೆಯಂತೆ ಸುಗ್ರೀವ-ನೀಲ-ಹನುಮಂತನೇ ಮೊದಲಾದ ವಾನರಪ್ರಮುಖರೊಡನೆಯೂ ವಾನರರ ಅಪಾರವಾದ ಸೈನ್ಯದೊಡನೆಯೂ ಈ ಮೊದಲೇ ಹನುಮಂತನಿಂದ ದಹಿಸಲ್ಪಟ್ಟಿದ್ದ ಲಂಕಾಪಟ್ಟಣವನ್ನು ಪ್ರವೇಶಿಸಿದನು.

ಆ ಸಮಯದಲ್ಲಿ ವಾನರಸೈನಿಕರು ಲಂಕೆಯಲ್ಲಿ ಅಡ್ಡಾಡುತ್ತಾ ವಿಹಾರಸ್ಥಾನಗಳನ್ನೂ, ಕಣಜಗಳನ್ನೂ, ಬಾಗಿಲುಗಳನ್ನೂ, ಮಹಾದ್ವಾರ ಗಳನ್ನೂ, ಸಭಾಭವನಗಳನ್ನೂ, ಮೊಗಸಾಲೆಗಳನ್ನೂ, ಪಕ್ಷಿಗಳ ಗೂಡು ಗಳನ್ನೂ ಆಕ್ರಮಿಸಿದರು. ವಾನರಸೈನಿಕರು ಅಲ್ಲಿದ್ದ ಜಗುಲಿಗಳನ್ನೂ, ಧ್ವಜ ಗಳನ್ನೂ, ಚಿನ್ನದ ಕಲಶಗಳಿಂದ ಸಮಲಂಕೃತವಾಗಿದ್ದ ಚೌಕಗಳನ್ನೂ ಧ್ವಂಸ ಮಾಡಿದರು. ಆ ಸಮಯದಲ್ಲಿ ಲಂಕಾಪಟ್ಟಣವು ಆನೆಯಿಂದ ವಿಧ್ವಸ್ತವಾದ ಸರೋವರದಂತೆಯೇ ಕಾಣುತ್ತಿದ್ದಿತು. ವಾನರಸೈನ್ಯದ ಉಪಟಳವನ್ನು ನೋಡಿದ ರಾಕ್ಷಸರಾಜನಾದ ರಾವಣನು ನಿಕುಂಭ, ಕುಂಭ, ಧೂಮ್ರಾಕ್ಷ, ದುರ್ಮುಖ, ಸುರಾಂತಕ, ನರಾಂತಕ, ಪ್ರಹಸ್ತ, ಅತಿಕಾಯ, ವಿಕಂಪನ– ಇವರೇ ಮೊದಲಾದ ತನ್ನ ಕಡೆಯ ಸೇನಾಪ್ರಮುಖರನ್ನೂ ಪುತ್ರನಾದ ಮೇಘನಾದನನ್ನೂ ಮತ್ತು ತಮ್ಮನಾದ ಕುಂಭಕರ್ಣನನ್ನೂ ಯುದ್ಧಕ್ಕೆ ಕಳುಹಿಸಿಕೊಟ್ಟನು.

ರಾಕ್ಷಸರ ಆ ವಿಶಾಲವಾದ ಸೈನ್ಯವು ಕತ್ತಿ, ತ್ರಿಶೂಲ, ಧನುಸ್ಸು, ಪ್ರಾಸ, ಯಷ್ಟಿ, ಶಕ್ತಿ, ಬಾಣ, ಕತ್ತಿ, ಗುರಾಣಿ ಇವೇ ಮೊದಲಾದ ಅಸ್ತ್ರ-

ಶಸ್ತ್ರಗಳಿಂದ ಸಜ್ಜಿತವಾಗಿದ್ದಿತು. ಭಗವಾನ್ ಶ್ರೀರಾಮನು ಸುಗ್ರೀವ, ಲಕ್ಷ್ಮಣ, ಹನುಮಂತ, ಗಂಧಮಾದನ, ನೀಲ, ಅಂಗದ, ಜಾಂಬವಂತ, ಪನಸ– ಇವರೇ ಮೊದಲಾದ ವಾನರಸೈನಿಕರೊಡನೆ ರಾಕ್ಷಸಸೈನಿಕರನ್ನು ಎದುರಿಸಿದನು. ರಘುವಂಶಶಿರೋಮಣಿಯಾದ ಆ ಭಗವಂತನ ಅಂಗದನೇ ಮೊದಲಾದ ಸೇನಾನಾಯಕರು ರಾಕ್ಷಸರ ರಥ-ಗಜಾಶ್ವ-ಪದಾತಿ ಸೈನಿಕರನ್ನು ದ್ವಂದ್ವಯುದ್ಧದ ಮೂಲಕವಾಗಿ ಎದುರಿಸಿದರು ಮತ್ತು ರಾಕ್ಷಸಸೈನಿಕರನ್ನು ವೃಕ್ಷಗಳಿಂದಲೂ, ಪರ್ವತಶಿಖರಗಳಿಂದಲೂ, ಗದೆಗಳಿಂದಲೂ, ಬಾಣಗಳಿಂದಲೂ ಪ್ರಹರಿಸಿದರು. ಮಂಗಳಮಯಿಯಾದ ಸೀತಾದೇವಿಯನ್ನು ದುರುದ್ದೇಶದಿಂದ ಸ್ಪರ್ಶಿಸಿದ ಕಾರಣದಿಂದಾಗಿ ಅಮಂಗಳನಾಗಿದ್ದ ರಾವಣನನ್ನು ಸ್ವಾಮಿಯನ್ನಾಗಿ ಹೊಂದಿದ್ದ ರಾಕ್ಷಸರಿಗೆ ವಿನಾಶವೆಂಬುದು ಮೊದಲೇ ಸಿದ್ಧವಾಗಿ ಹೋಗಿದ್ದಿತು. ರಾಕ್ಷಸರಾಜನಾದ ರಾವಣೇಶ್ವರನು ತನ್ನ ಸೈನ್ಯವು ದಿನದಿನಕ್ಕೂ ಕ್ಷಯಿಸುತ್ತಿರುವುದನ್ನು ನೋಡಿ ಅತ್ಯಂತಕ್ರುದ್ಧನಾಗಿ ಪುಷ್ಪಕ ವಿಮಾನವನ್ನೇರಿ ಬಂದು ಶ್ರೀರಾಮನಿಗೆ ಎದುರಾಗಿ ನಿಂತನು. ಆ ಸಮಯಕ್ಕೆ ಸರಿಯಾಗಿ ಇಂದ್ರನ ಸಾರಥಿಯಾದ ಮಾತಲಿಯು ತೇಜೋಮಯವಾದ ದಿವ್ಯರಥವನ್ನು ನಡೆಸಿಕೊಂಡು ಶ್ರೀರಾಮನ ಬಳಿಗೆ ಬಂದನು. ಮಂಗಳ ಮೂರ್ತಿಯಾದ ಶ್ರೀರಾಮನು ಆ ದಿವ್ಯರಥವನ್ನು ಹತ್ತಿಕುಳಿತನು. ಒಡನೆಯೇ ರಾಕ್ಷಸೇಶ್ವರನಾದ ರಾವಣನು ಶ್ರೀರಾಮನನ್ನು ತೀಕ್ಷ್ಣವಾದ ಬಾಣಗಳಿಂದ ಪ್ರಹರಿಸಿದನು. ಆ ಸಮಯದಲ್ಲಿ ಶ್ರೀರಾಮನು ರಾವಣನಿಗೆ ಹೇಳಿದನು :

(ಶ್ಲೋಕ 16-25)

"ನೀಚರಾಕ್ಷಸನೇ! ನೀನು ಹವಿಸ್ಸನ್ನು ಕದಿಯುವ ನಾಯಿಯಂತೆ– ನಾನು ಇಲ್ಲದಿರುವಾಗ ನನ್ನ ಪ್ರಾಣಪ್ರಿಯಳಾದ ಪತ್ನಿಯನ್ನು ಅಪಹರಿಸಿ ತಂದಿರುವೆ. ನಿನ್ನಂತಹ ನಿಂದ್ಯನೂ ನಾಚಿಕೆಗೆಟ್ಟವನೂ ಬೇರೆ ಯಾವನಿದ್ದಾನೆ? ಮೀರಿನಡೆಯಲು ಅಸಾಧ್ಯನಾದ ಕಾಲಪುರುಷನು ಅವುಗಳ ಕರ್ಮಾನುಸಾರವಾಗಿ ಪ್ರಾಣಿಗಳನ್ನು ಶಿಕ್ಷಿಸುವಂತೆ ನಿನ್ನ ಜುಗುಪ್ಸಿತವಾದ ಕಾರ್ಯಕ್ಕೆ ತಕ್ಕ ಫಲವನ್ನು ನಾನೀಗಲೇ ಕೊಡುತ್ತೇನೆ." ಹೀಗೆ ದುಷ್ಟನಾದ ರಾವಣನನ್ನು ನಿಂದಿಸುತ್ತಾ ಭಗವಾನ್ ಶ್ರೀರಾಮನು ಧನುಸ್ಸಿನಲ್ಲಿ ಜೋಡಿಸಿದ್ದ ಬಾಣವನ್ನು ರಾವಣನ ಮೇಲೆ ಪ್ರಯೋಗಿಸಿದನು. ವಜ್ರಾಯುಧಕ್ಕೆ

ಸಮಾನವಾಗಿದ್ದ ಆ ಬಾಣವು ರಾಕ್ಷಸೇಶ್ವರನಾದ ರಾವಣನ ವಕ್ಷಃಸ್ಥಳವನ್ನು ಭೇದಿಸಿಬಿಟ್ಟಿತು. ರಾವಣೇಶ್ವರನು ತನ್ನ ಹತ್ತು ಮುಖಗಳಿಂದಲೂ ರಕ್ತವನ್ನು ಕಕ್ಕುತ್ತಾ–ಪುಣ್ಯಫಲವು ಮುಗಿದನಂತರ ಸ್ವರ್ಗದಿಂದ ಕೆಳಕ್ಕೆ ಬೀಳುವವನಂತೆ–ಪುಷ್ಪಕವಿಮಾನದಿಂದ ಕೆಳಕ್ಕೆ ಬಿದ್ದನು. ಆ ಸಮಯದಲ್ಲಿ ರಾವಣನ ಪರಿಜನ-ಪುರಜನರೆಲ್ಲರೂ–'ಅಯ್ಯೋ! ಅಯ್ಯೋ!'–ಎಂದು ಕೂಗಿಕೊಂಡರು. ಬಳಿಕ ಸಾವಿರಾರು ರಾಕ್ಷಸಸ್ತ್ರೀಯರು ಮಂಡೋದರಿ ಯೊಡನೆ ಗೋಳಾಡುತ್ತಾ ಲಂಕೆಯಿಂದ ಹೊರಟು ಯುದ್ಧಭೂಮಿಗೆ ಬಂದರು. ಆ ರಾಕ್ಷಸಸ್ತ್ರೀಯರ ಪತಿ-ಪುತ್ರ-ಭ್ರಾತೃ-ಬಂಧುಗಳೆಲ್ಲರೂ ಲಕ್ಷ್ಮಣನ ಬಾಣಗಳಿಂದ ಛಿನ್ನ-ಭಿನ್ನರಾಗಿ ರಣರಂಗದಲ್ಲಿ ಬಿದ್ದಿದ್ದರು. ಅವರೆಲ್ಲರೂ ತಮ್ಮ ಎದೆಗಳನ್ನು ಬಡಿದುಕೊಳ್ಳುತ್ತಾ ತಮ್ಮ ಸಂಬಂಧಿ ಗಳನ್ನು ತಬ್ಬಿಕೊಳ್ಳುತ್ತಾ ಉಚ್ಚಸ್ವರದಿಂದ ವಿಲಪಿಸತೊಡಗಿದರು. "ಮೂರು ಲೋಕಗಳನ್ನೂ ಭಯದಿಂದ ತಲ್ಲಣಗೊಳಿಸುತ್ತಿದ್ದ ರಾವಣೇಶ್ವರನೇ! ನಾಥನೇ! ಇಂದು ನಾವೆಲ್ಲರೂ ಹಾಳಾಗಿಹೋದೆವು. ನೀನಿಲ್ಲದ ಕಾರಣದಿಂದಾಗಿ ಶತ್ರುಗಳಿಂದ ಈ ಲಂಕಾಪಟ್ಟಣವು ಧ್ವಂಸವಾಗಿ ಬಿಟ್ಟಿದೆ. ಈಗ ಲಂಕೆಯು ಯಾರ ಅಧೀನದಲ್ಲಿರುವುದೆಂಬುದೇ ಒಂದು ಪ್ರಶ್ನೆ ಯಾಗಿದೆ.

ಪ್ರಭುವೇ! ನೀನು ಸಕಲವಾದ ಸಂಪತ್ತಿನಿಂದಲೂ ಸಮೃದ್ಧನಾಗಿದ್ದೆ. ನಿನಗೆ ಯಾವುದರಲ್ಲಿಯೂ ನ್ಯೂನತೆಯಿರಲಿಲ್ಲ. ಆದರೆ ನೀನು ಕಾಮವಶನಾಗಿ ಬಿಟ್ಟೆ. ಸೀತಾದೇವಿಯು ಎಷ್ಟು ತೇಜಸ್ವಿನೀ ಎಂಬುದನ್ನಾಗಲೀ ಅವಳ ಪ್ರಭಾವವು ಎಷ್ಟಿರುವುದೆಂಬುದನ್ನಾಗಲೀ ನೀನು ಯೋಚಿಸಲೇ ಇಲ್ಲ. ಅದರಿಂದಲೇ ನಿನಗೆ ಇಂತಹ ದುರ್ದಶೆಯುಂಟಾಯಿತು. ನಮಗೂ ಮತ್ತು ರಾಕ್ಷಸಕುಲಕ್ಕೂ ಸದಾ ಆನಂದವನ್ನುಂಟುಮಾಡುತ್ತಿದ್ದ ಕುಲನಂದನನೇ! ರಾಕ್ಷಸೇಶ್ವರ! ನಿನ್ನ ಈ ಪರಸ್ತ್ರೀ ಅಪಹರಣದ ದೋಷದಿಂದಾಗಿ ಲಂಕೆಯು ಅನಾಥವಾಯಿತು. ನಾವೆಲ್ಲರೂ ವಿಧವೆಯರಾದೆವು. ನಿನ್ನ ದೇಹವು ರಣಹದ್ದೇ ಮೊದಲಾದ ಪಕ್ಷಿಗಳಿಗೆ ಆಹಾರವಾಗಿ ಪರಿಣಮಿಸಿತು. ನಿನ್ನ ಆತ್ಮವು ನರಕಭಾಜನವಾಗಿದೆ."

ಶ್ರೀಶುಕದೇವರು ಹೇಳುತ್ತಾರೆ :

ಪರೀಕ್ಷಿತ! ಕೋಸಲೇಶ್ವರನಾದ ಶ್ರೀರಾಮನ ಆಜ್ಞೆಯಂತೆ ವಿಭೀಷಣನು ಮರಣಹೊಂದಿದ್ದ ತನ್ನ ಸ್ವಜನರಿಗೂ, ಸಂಬಂಧಿಗಳಿಗೂ ಪಿತೃಮೇಧವಿಧಿಯನ್ನನುಸರಿಸಿ ಅಂತ್ಯೇಷ್ಟಿಗಳನ್ನು ಮಾಡಿದನು.

ಬಳಿಕ ಶ್ರೀರಾಮನು ಅಶೋಕವನದ ಆಶ್ರಮದಲ್ಲಿದ್ದ ಸೀತಾದೇವಿಯನ್ನು ನೋಡಿದನು. ವಿರಹವೇದನೆಯಿಂದ ಪೀಡಿತಳಾಗಿದ್ದ ಜಾನಕಿಯು ಅತಿದುರ್ಬಲಳಾಗಿದ್ದಳು. ಅತ್ಯಂತ ದೈನ್ಯಾವಸ್ಥೆಯಲ್ಲಿದ್ದ, ಪ್ರಿಯತಮೆಯಾದ ಅರ್ಧಾಂಗಿಯನ್ನು ನೋಡಿ ಶ್ರೀರಾಮನ ಹೃದಯವು ಪ್ರೇಮದಿಂದಲೂ, ಕೃಪಾರಸದಿಂದಲೂ ತುಂಬಿಹೋಯಿತು. ಭಗವಂತನನ್ನು ಸಂದರ್ಶಿಸಿದ ಸೀತಾದೇವಿಯ ಹೃದಯವು ಪ್ರೇಮದಿಂದಲೂ, ಆನಂದದಿಂದಲೂ ತುಂಬಿಹೋಯಿತು. ಅವಳ ಮುಖಕಮಲವು ವಿಕಸಿತವಾಯಿತು.

ಬಳಿಕ ಶ್ರೀರಾಮನು ವಿಭೀಷಣನಿಗೆ ಲಂಕಾರಾಜ್ಯದ ಪಟ್ಟವನ್ನು ಕಟ್ಟಿ, ಕಲ್ಪದವರೆಗೆ ಆಯುಷ್ಯವನ್ನು ಅನುಗ್ರಹಿಸಿ, ಹದಿನಾಲ್ಕು ವರ್ಷಗಳ ವನವಾಸವ್ರತವನ್ನು ಮುಗಿಸಿ ಅಯೋಧ್ಯೆಗೆ ಹೊರಡಲನುವಾದನು. ಪುಷ್ಪಕವಿಮಾನದಲ್ಲಿ ಮೊದಲು ಸೀತಾದೇವಿಯನ್ನು ಕುಳ್ಳಿರಿಸಿ ಅನಂತರ ಶತ್ರುಗಳ ಸಹೋದರರಾದ ವಿಭೀಷಣ-ಸುಗ್ರೀವರೊಡನೆಯೂ, ಸೇವಕ ಶ್ರೇಷ್ಠನಾದ ಹನುಮಂತನೊಡನೆಯೂ ಮತ್ತು ಇತರ ಕಪಿಮುಖ್ಯರೊಡನೆಯೂ ಲಕ್ಷ್ಮಣಸಹಿತನಾದ ಶ್ರೀರಾಮನು ಪುಷ್ಪಕವಿಮಾನವನ್ನೇರಿದನು. ಮಾರ್ಗದಲ್ಲಿ ಬರುತ್ತಿರುವಾಗ ಬ್ರಹ್ಮನೇ ಮೊದಲಾದ ಲೋಕಪಾಲರೆಲ್ಲರೂ ಶ್ರೀರಾಮನ ಮೇಲೆ ಪುಷ್ಪವೃಷ್ಟಿಗೈದರು ಮತ್ತು ಶ್ರೀರಾಮನ ಲೀಲಾ ಪ್ರಸಂಗಗಳನ್ನು ಆನಂದಭರಿತರಾಗಿ ಗಾನಮಾಡುತ್ತಿದ್ದರು. ಅತ್ತಲಾಗಿ ಶ್ರೀರಾಮನ ಆಗಮನದ ನಿರೀಕ್ಷಣೆಯಲ್ಲಿಯೇ ಕಾತರನಾಗಿದ್ದ ಭರತನು ಗೋಮೂತ್ರದಿಂದ ಬೇಯಿಸಿದ ಯವೆಯ ಗಂಜಿಯನ್ನು ಮಾತ್ರವೇ ಸೇವಿಸುತ್ತಿದ್ದನು. ಅಣ್ಣನಂತೆಯೇ ನಾರುಮಡಿಯನ್ನೇ ಉಡುತ್ತಿದ್ದನು. ಜಟಾಧಾರಿಯಾಗಿದ್ದನು. ನೆಲದಮೇಲೆ ದರ್ಭೆಯನ್ನು ಹಾಸಿಕೊಂಡು ಮಲಗುತ್ತಿದ್ದನು. ಈ ಸಮಾಚಾರವನ್ನು ಕೇಳಿದ ಪರಮಕಾರುಣಿಕನಾದ ಶ್ರೀರಾಮನು ಕಳವಳಗೊಂಡನು.

ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಶ್ರೀರಾಮನು ಅಯೋಧ್ಯೆಯ ಕಡೆಗೆ ಬರುತ್ತಿರುವನೆಂಬ ಸಮಾಚಾರವು ತಿಳಿದೊಡನೆಯೇ ಆನಂದಭರಿತನಾದ ಭರತನು, ಪುರವಾಸಿಗಳನ್ನೂ ಮಂತ್ರಿ-ಪುರೋಹಿತರನ್ನೂ ಜೊತೆಯಲ್ಲಿ ಕರೆದುಕೊಂಡು, ಭಗವಂತನ ಪಾದುಕೆಗಳನ್ನು ತಲೆಯ ಮೇಲಿರಿಸಿಕೊಂಡು ತಾಳ-ಮೇಳಗಳ ಸಮೇತವಾಗಿ ಎದುರ್ಗೊಳ್ಳಲು ಹೋದನು.

ನಂದೀಗ್ರಾಮದಲ್ಲಿದ್ದ ತನ್ನ ಶಿಬಿರದಿಂದ ಭರತನು ಶ್ರೀರಾಮನ ಪಾದುಕೆಗಳನ್ನು ತಲೆಯ ಮೇಲಿಟ್ಟುಕೊಂಡು ಹೊರಟನು. ಪ್ರಜೆಗಳು ಮಂಗಳಗಾನಮಾಡುತ್ತಿದ್ದರು. ವಾದ್ಯಘೋಷಗಳಾಗುತ್ತಿದ್ದುವು. ವೇದ ವಿದರಾದ ಬ್ರಾಹ್ಮಣರು ಸ್ವಸ್ತಿವಾಚನಮಾಡುತ್ತಿದ್ದರು. ವೇದಘೋಷದ ಧ್ವನಿಯು ನಾಲ್ಕು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುತ್ತಿದ್ದಿತು. ಸುವರ್ಣ ಮಯವಾದ ಪತಾಕೆಗಳು ಎಲ್ಲ ಕಡೆಗಳಲ್ಲಿಯೂ ಹಾರಾಡುತ್ತಿದ್ದುವು. ಚಿತ್ರ-ವಿಚಿತ್ರವಾದ ಧ್ವಜಗಳಿಂದ ಕೂಡಿದ ಸುವರ್ಣಮಯವಾದ ರಥಗಳೂ ಸುವರ್ಣಮಯವಾದ ಜೀನುಗಳಿಂದ ಸಮಲಂಕೃತವಾದ ಕುದುರೆಗಳೂ ಸುವರ್ಣಮಯವಾದ ಕವಚಗಳನ್ನು ಧರಿಸಿದ್ದ ಸೈನಿಕರೂ ಭರತನನ್ನು ಹಿಂಬಾಲಿಸಿ ಹೋಗುತ್ತಿದ್ದರು. ಸಾಲು-ಸಾಲಾಗಿ ಬರುತ್ತಿದ್ದ ವಾರಾಂಗನೆ ಯರೂ ಪದಾತಿಗಳಾದ ಸೇವಕರೂ ರಾಜಯೋಗ್ಯವಾದ, ಅತ್ಯಂತಶ್ರೇಷ್ಠ ವಾದ ಫಲ-ಪುಷ್ಪಗಳನ್ನೂ, ಸುಗಂಧದ್ರವ್ಯಗಳನ್ನೂ, ಮಂಗಳದ್ರವ್ಯಗಳನ್ನೂ ಸುವರ್ಣಮಯವಾದ ತಟ್ಟೆಗಳಲ್ಲಿಟ್ಟುಕೊಂಡು ಭರತನನ್ನು ಅನುಸರಿಸಿ ಶ್ರೀರಾಮನನ್ನು ಇದಿರ್ಗೊಳ್ಳಲು ಹೋಗುತ್ತಿದ್ದರು.

ಭಗವಂತನನ್ನು ನೋಡಿದೊಡನೆಯೇ ಪ್ರೇಮದ ಉದ್ವೇಗದಿಂದಾಗಿ ಭರತನ ಮಾತು ಗದ್ಗದವಾಯಿತು. ಕಣ್ಣುಗಳಲ್ಲಿ ಆನಂದಬಾಷ್ಪವು ತುಂಬಿಕೊಂಡಿತು. ಆತನು ತಲೆಯ ಮೇಲಿಟ್ಟುಕೊಂಡಿದ್ದ ಪಾದುಕೆಗಳನ್ನು ಶ್ರೀರಾಮನ ಮುಂದಿಟ್ಟು ಶ್ರೀರಾಮನಿಗೆ ದೀರ್ಘದಂಡನಮಸ್ಕಾರವನ್ನು ಮಾಡಿ ಕೈ ಜೋಡಿಸಿಕೊಂಡು ನಿಂತನು. ಅವನ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಸುರಿಯುತ್ತಿದ್ದಿತು. ಶ್ರೀರಾಮನು ಭರತನನ್ನು ತನ್ನೆರಡು

ತೋಳುಗಳಿಂದಲೂ ತಬ್ಬಿಕೊಂಡು ಆತನ ತಲೆಗೆ ಆನಂದಬಾಷ್ಪದಿಂದ ಸ್ನಾನಮಾಡಿಸಿದನು.

ಬಳಿಕ ಶ್ರೀರಾಮನು ಲಕ್ಷ್ಮಣ-ಸೀತೆಯರೊಡನೆ ಬ್ರಾಹ್ಮಣರಿಗೂ ಮತ್ತು ಪೂಜನೀಯರಾದ ಗುರು-ಹಿರಿಯರಿಗೂ ನಮಸ್ಕರಿಸಿದನು. ಸಮಸ್ತ ಪ್ರಜೆಗಳೂ ತಲೆತಗ್ಗಿಸಿ ಶ್ರೀರಾಮಪ್ರಭುವಿಗೆ ಪ್ರಣಾಮಮಾಡಿದರು.

ಆ ಸಮಯದಲ್ಲಿ ಉತ್ತರಕೋಸಲದೇಶದಲ್ಲಿ ವಾಸಮಾಡುತ್ತಿದ್ದ ಸಮಸ್ತಪ್ರಜೆಗಳೂ ತಮ್ಮ ಪ್ರಿಯಪ್ರಭುವಾದ ಶ್ರೀರಾಮಚಂದ್ರನು ಬಹಳ ಕಾಲಾನಂತರ ಅಯೋಧ್ಯೆಗೆ ಆಗಮಿಸಿದುದನ್ನು ಕಂಡು ಆನಂದತುಂದಿಲರಾಗಿ ತಮ್ಮ ಉತ್ತರೀಯಗಳನ್ನು ಹಾರಾಡಿಸುತ್ತಾ, ಶ್ರೀರಾಮನ ಮೇಲೆ ಹೂಗಳ ಮಳೆಗರೆಯುತ್ತಾ ಕುಣಿದಾಡಿದರು. ಬಳಿಕ ಶ್ರೀರಾಮನ ಮುಂದುಗಡೆಯಲ್ಲಿ ಭರತನು ಶ್ರೀರಾಮನ ಪಾದುಕೆಗಳನ್ನು ಎತ್ತಿಕೊಂಡು ಹೊರಟನು. ವಿಭೀಷಣನು ಶ್ರೇಷ್ಠವಾದ ಚಾಮರಗಳನ್ನೂ ಸುಗ್ರೀವನು ಬೀಸಣಿಗೆಯನ್ನೂ ಹಿಡಿದು ಹೊರಟರು. ಹನುಮಂತನು ಬೆಳ್ಗೊಡೆಯನ್ನು ಹಿಡಿದಿದ್ದನು. ಶತ್ರುಘ್ನನು ಶ್ರೀರಾಮನ ಧನುಸ್ಸನ್ನೂ ಬತ್ತಳಿಕೆಯನ್ನೂ ಹಿಡಿದಿದ್ದನು.

ಸೀತಾದೇವಿಯು ತೀರ್ಥದಿಂದ ತುಂಬಿದ್ದ ಕಮಂಡಲುವನ್ನು ಹಿಡಿದಿದ್ದಳು. ಅಂಗದನು ಸುವರ್ಣಮಯವಾದ ಖಡ್ಗವನ್ನೂ, ಜಾಂಬವಂತನು ಗುರಾಣಿಯನ್ನೂ ಹಿಡಿದಿದ್ದರು. ಇವರೆಲ್ಲರ ಮಧ್ಯದಲ್ಲಿ ಶ್ರೀರಾಮನು ಪುಷ್ಪಕವಿಮಾನದಲ್ಲಿ ಕುಳಿತು ವಿರಾಜಿಸುತ್ತಿದ್ದನು. ಸುಂದರವಾದ ಆಭರಣಗಳಿಂದಲೂ, ವಸ್ತ್ರಗಳಿಂದಲೂ ಸಮಲಂಕೃತರಾದ ಶುಭಾಂಗಿಯರಿಂದ ಪರಿವೃತನಾಗಿದ್ದನು. ವಂದಿ-ಮಾಗಧರು ಶ್ರೀರಾಮಚಂದ್ರನ ಗುಣಗಾನ ಮಾಡುತ್ತಿದ್ದರು. ಆ ಸಮಯದಲ್ಲಿ ಶ್ರೀರಾಮನು ಆಗತಾನೇ ಹುಟ್ಟಿದ ಗ್ರಹಗಳಿಂದ ಪರಿವೃತನಾದ ಪೂರ್ಣಚಂದ್ರನಂತೆಯೇ ಕಾಣುತ್ತಿದ್ದನು.

ಹೀಗೆ ಭಗವಂತನಾದ ಶ್ರೀರಾಮನು ತಮ್ಮಂದಿರಿಂದ ನಮಸ್ಕೃತನಾಗಿ ಅವರೊಡನೆ ಅಯೋಧ್ಯೆಯನ್ನು ಪ್ರವೇಶಿಸಿದನು. ಅಯೋಧ್ಯಾಪಟ್ಟಣವು ಆನಂದೋತ್ಸಾಹದಿಂದ ವಿಜೃಂಭಿಸುತ್ತಿದ್ದಿತು. ಅರಮನೆಯನ್ನು ಪ್ರವೇಶಿಸಿದ

ಶ್ರೀರಾಮನು ತನ್ನ ತಾಯಿಯಾದ ಕೌಸಲ್ಯಾದೇವಿಯನ್ನೂ, ಇತರ ಮಾತೃ ವರ್ಗದವರನ್ನೂ, ಗುರುಜನರನ್ನೂ ಯಥಾನುಕ್ರಮವಾಗಿ ಪೂಜಿಸಿ ಸತ್ಕರಿಸಿದನು. ಶ್ರೀರಾಮನ ಸಮವಯಸ್ಕರು ಮತ್ತು ಅವನಿಗಿಂತಲೂ ಕಿರಿಯರು ಶ್ರೀರಾಮನನ್ನು ಯಥಾಯೋಗ್ಯವಾಗಿ ಸಮಾದರಿಸಿ ಪುರಸ್ಕರಿಸಿದರು. ಸೀತಾ-ಲಕ್ಷ್ಮಣರು ಕೂಡ ಶ್ರೀರಾಮನನ್ನು ಅನುಸರಿಸಿ ಹೋದರು. ಮೃತ ಶರೀರದಲ್ಲಿ ಪ್ರಾಣಸಂಚಾರವಾದರೆ ಹತ್ತಿರದ ಬಂಧುವರ್ಗದವರಿಗೆ ಎಷ್ಟು ಸಂತೋಷವಾಗುತ್ತದೆಯೋ—ಅದೇ ರೀತಿಯಲ್ಲಿ ಶ್ರೀರಾಮನ ದರ್ಶನದಿಂದ ಅನಿರ್ವಚನೀಯವಾದ ಆನಂದವನ್ನು ಅನುಭವಿಸಿದ ರಾಮ-ಲಕ್ಷ್ಮಣರ ತಾಯಂದಿರು ಮಕ್ಕಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮುದ್ದಿಡುತ್ತಾ, ಧಾರಾಕಾರವಾಗಿ ಪ್ರವಹಿಸುತ್ತಿದ್ದ ಆನಂದಬಾಷ್ಪಗಳಿಂದ ಮಕ್ಕಳಿಗೆ ಅಭಿಷೇಕಮಾಡಿದರು. ಮಕ್ಕಳನ್ನು ಕಂಡ ತಾಯಂದಿರಿಗೆ ಅವರ ಶೋಕದ ನಿವಾರಣೆಯಾಯಿತು. ಬಳಿಕ ಕುಲಪುರೋಹಿತರಾದ ವಸಿಷ್ಠರು ಇತರ ಗುರುಜನರೊಡನೆ ಕೂಡಿಕೊಂಡು ಯಥಾವಿಧಿಯಾಗಿ ಶ್ರೀರಾಮನ ಜಟೆಯನ್ನು ತೆಗೆಸಿ—ಬೃಹಸ್ಪತಿಯು ಶತಕ್ರತುವನ್ನು ದೇವೇಂದ್ರಪದವಿಯಲ್ಲಿ ಕುಳ್ಳಿರಿಸಿ ಅಭಿಷೇಚಿಸಿದಂತೆ—ನಾಲ್ಕು ಸಮುದ್ರಗಳಿಂದಲೂ ಪುಣ್ಯೋದಕವನ್ನು ತರಿಸಿ ಶ್ರೀರಾಮನಿಗೆ ಪಟ್ಟಾಭಿಷೇಕಮಾಡಿದರು. ಹೀಗೆ ಮಂಗಳ ಮಯವಾದ, ಮಂತ್ರಪೂತವಾದ ಶುದ್ಧೋದಕದಿಂದ ತಲೆಗೆ ಸ್ನಾನಮಾಡಿದ ಶ್ರೀರಾಮನು ಸುಂದರವಾದ ವಸ್ತ್ರಾಭರಣಗಳಿಂದಲೂ, ಗಂಧಮಾಲ್ಯಾದಿಗಳಿಂದಲೂ ಸಮಲಂಕೃತನಾದನು. ಅಂತೆಯೇ ಶ್ರೀರಾಮನ ಎಲ್ಲ ಅನುಜರೂ ಸೀತಾದೇವಿಯೂ ವಸ್ತ್ರಾಭರಣಗಳಿಂದಲೂ ಗಂಧಮಾಲ್ಯಾದಿಗಳಿಂದಲೂ ಯಥಾಯೋಗ್ಯವಾಗಿ ಅಲಂಕಾರಮಾಡಿಕೊಂಡರು. ಅವರ ಮಧ್ಯದಲ್ಲಿ ಶ್ರೀರಾಮನು ಸರ್ವಾತಿಶಯವಾಗಿ ವಿಜೃಂಭಿಸಿದನು. ಭರತನು ಶ್ರೀರಾಮನ ಚರಣಕಮಲಗಳಿಗೆರಗಿ ಪ್ರಾರ್ಥನೆಮಾಡಿಕೊಳ್ಳಲು ದಯಾಳುವಾದ ಶ್ರೀರಾಮನು ರಾಜ್ಯಸಿಂಹಾಸನವನ್ನು ಪರಿಗ್ರಹಿಸಿದನು.

ಶ್ರೀರಾಮನು ತನ್ನ ಪ್ರಜೆಗಳನ್ನು ಸ್ವಂತಮಕ್ಕಳಂತೆಯೇ ಪಾಲಿಸಿ-ಪೋಷಿಸುತ್ತಿದ್ದನು. ಪ್ರಜೆಗಳು ಕೂಡ ಶ್ರೀರಾಮನನ್ನು ತಂದೆಯೆಂದೇ ಭಾವಿಸಿದ್ದರು. ಶ್ರೀರಾಮನ ರಾಜ್ಯದಲ್ಲಿ ಪ್ರಜೆಗಳೆಲ್ಲರೂ ಸ್ವಧರ್ಮನಿರತ

ರಾಗಿದ್ದರು. ವರ್ಣಾಶ್ರಮಧರ್ಮಗಳನ್ನು ಶ್ರದ್ಧೆಯಿಂದ ಪರಿಪಾಲಿಸುತ್ತಿದ್ದರು. ಸಮಸ್ತಪ್ರಾಣಿಗಳಿಗೂ ಸುಖದಾಯಕನಾಗಿದ್ದ, ಧರ್ಮಜ್ಞನಾದ ಶ್ರೀರಾಮನು ರಾಜನಾಗಿರಲಾಗಿ ಶ್ರೀರಾಮನಿದ್ದ ತ್ರೇತಾಯುಗವು ಸತ್ಯಯುಗವಾಗಿ ಪರಿಣಮಿಸಿತು. ಆ ಸತ್ಯಯುಗದ ಧರ್ಮಗಳು ನಡೆಯತೊಡಗಿದುವು. ಶ್ರೀರಾಮನು ರಾಜ್ಯವಾಳುತ್ತಿದ್ದ ಸಮಯದಲ್ಲಿ ವನ-ನದೀ-ಪರ್ವತ-ವರ್ಷ-ದ್ವೀಪ-ಸಮುದ್ರಗಳೆಲ್ಲವೂ ಪ್ರಜೆಗಳಿಗೆ ಬೇಕುಬೇಕಾದುದನ್ನು ಕೊಡುವ ಕಾಮಧೇನುಗಳಾಗಿದ್ದುವು.

ನಾಧಿವ್ಯಾಧಿಜರಾಗ್ಲಾನಿದುಃಖಶೋಕಭಯಕ್ಲಮಾಃ ।
ಮೃತ್ಯುಶ್ಚಾನಿಚ್ಛತಾಂ ನಾಸೀದ್ರಾಮೇ ರಾಜನ್ಯಧೋಕ್ಷಜೇ ॥೫೪॥

ಇಂದ್ರಿಯಾತೀತನಾದ ಶ್ರೀರಾಮನು ರಾಜ್ಯಭಾರಮಾಡುತ್ತಿರಲಾಗಿ ಪ್ರಜೆಗಳಿಗೆ ಮಾನಸಿಕವಾದ ಚಿಂತೆಯಾಗಲೀ, ಶಾರೀರಕವಾದ ರೋಗ-ರುಜಿನಾದಿಗಳಾಗಲೀ ಇರಲಿಲ್ಲ. ಮುಪ್ಪು-ದೌರ್ಬಲ್ಯ-ದುಃಖ-ಶೋಕ-ಭಯ-ಆಯಾಸಗಳು ಹೆಸರಿಗಾದರೂ ಇರಲಿಲ್ಲ. ಮರಣವನ್ನು ಅಪೇಕ್ಷಿಸದವರಿಗೆ ಮೃತ್ಯುಭಯವೂ ಇರಲಿಲ್ಲ. (ಎಲ್ಲರೂ ಇಚ್ಛಾಮರಣಿಗಳಾಗಿದ್ದರು.)

ಭಗವಾನ್ ಶ್ರೀರಾಮನು ಏಕಪತ್ನೀವ್ರತಸ್ಥನಾಗಿದ್ದನು. ಅವನ ಚರಿತ್ರೆಯು ರಾಜರ್ಷಿಗಳ ಚರಿತ್ರೆಯಂತೆ ಪರಮಪವಿತ್ರವಾಗಿದ್ದಿತು. ಗೃಹಸ್ಥೋಚಿತವಾದ ಸ್ವಧರ್ಮವನ್ನು ಪ್ರಜೆಗಳಿಗೆ ಉಪದೇಶಿಸುವ ಸಲುವಾಗಿ ತಾನೇ ಆ ಗೃಹಸ್ಥಧರ್ಮದ ಆಚರಣೆಯನ್ನು ಕಟ್ಟು-ನಿಟ್ಟಾಗಿ ಪಾಲಿಸುತ್ತಿದ್ದನು.

ಸತೀ-ಸಾಧ್ವಿಯಾದ ಸೀತಾದೇವಿಯು ಪತಿಯ ಭಾವವನ್ನರಿತು ವರ್ತಿಸುತ್ತಾ ಪ್ರೇಮದಿಂದಲೂ, ಅನುಸರಣೆಯಿಂದಲೂ, ಸೌಶೀಲ್ಯದಿಂದಲೂ, ವಿನಯದಿಂದಲೂ, ಬುದ್ಧಿಯಿಂದಲೂ ಮತ್ತು ಲಜ್ಜೆಯಿಂದಲೂ ಪತಿಯಾದ ಶ್ರೀರಾಮನ ಮನಸ್ಸನ್ನು ಗೆದ್ದಿದ್ದಳು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ಶ್ರೀರಾಮನ ಗುಣಗಣಗಳ ವರ್ಣನೆ

ಶ್ರೀಶುಕಮುನಿಗಳು ಹೇಳುತ್ತಾರೆ :

ಭಗವಾನಾತ್ಮನಾऽತ್ಮಾನಂ ರಾಮ ಉತ್ತಮಕಲ್ಪಕೈಃ ।
ಸರ್ವದೇವಮಯಂ ದೇವಮೀಜ ಆಚಾರ್ಯವಾನ್ಮಖೈಃ ॥೧॥

ಪರೀಕ್ಷಿತ! ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀರಾಮನು ಮಹರ್ಷಿಗಳಾದ ವಸಿಷ್ಠರನ್ನು ಆಚಾರ್ಯರನ್ನಾಗಿ ಇಟ್ಟುಕೊಂಡು ಶ್ರೇಷ್ಠವಾದ ಸಾಮಗ್ರಿಗಳಿಂದ ಕೂಡಿದ ಯಜ್ಞದ ಮೂಲಕವಾಗಿ ಸರ್ವದೇವಸ್ವರೂಪನಾದ, ಸ್ವಯಂಪ್ರಕಾಶನಾದ ಪರಮಾತ್ಮನನ್ನು ಆರಾಧಿಸಿದನು.

ಯಜ್ಞವು ಮುಗಿದನಂತರ ಶ್ರೀರಾಮನು ಹೋತೃವಿಗೆ ಪೂರ್ವ ದಿಕ್ಕನ್ನೂ, ಬ್ರಹ್ಮನಿಗೆ ದಕ್ಷಿಣದಿಕ್ಕನ್ನೂ, ಅಧ್ವರ್ಯುವಿಗೆ ಪಶ್ಚಿಮದಿಕ್ಕನ್ನೂ, ಉದ್ಗಾತೃವಿಗೆ ಉತ್ತರದಿಕ್ಕನ್ನೂ (ಈ ದಿಕ್ಕುಗಳಲ್ಲಿದ್ದ ರಾಜ್ಯಗಳನ್ನು) ದಕ್ಷಿಣೆಯ ರೂಪದಲ್ಲಿ ಕೊಟ್ಟನು.

ಇವುಗಳ ಮಧ್ಯಭಾಗದಲ್ಲಿದ್ದ ಭೂಭಾಗಗಳೆಲ್ಲವನ್ನೂ ಆಚಾರ್ಯರಾದ ವಸಿಷ್ಠರಿಗೆ ದಕ್ಷಿಣೆಯಾಗಿ ಕೊಟ್ಟನು. ಅಖಂಡಭೂಮಂಡಲಕ್ಕೂ ನಿಃಸ್ಪೃಹನಾದ ಬ್ರಾಹ್ಮಣನೊಬ್ಬನೇ ಅಧಿಕಾರಿಯಾಗಬಲ್ಲನೆಂಬುದು ಶ್ರೀರಾಮನ ನಿಶ್ಚಯವಾಗಿದ್ದಿತು. ಹೀಗೆ ಅಖಂಡಭೂಮಂಡಲವನ್ನೇ ಬ್ರಾಹ್ಮಣರಿಗೆ ದಾನಮಾಡಿದನಂತರ ಅವನ ಬಳಿಯಲ್ಲಿ ಉಟ್ಟ ವಸ್ತ್ರ ಮತ್ತು ಅಲಂಕಾರಾದಿಗಳು ಮಾತ್ರವೇ ಉಳಿದಿದ್ದುವು. ಅಂತೆಯೇ ಪಟ್ಟಮಹಿಷಿಯಾದ ಸೀತಾದೇವಿಯಲ್ಲಿಯೂ ಸ್ತ್ರೀಗೆ ಶೋಭಾಯಮಾನವಾದ ಮಾಂಗಲ್ಯವು ಮಾತ್ರವೇ ಉಳಿದಿದ್ದಿತು.

ಶ್ರೀರಾಮನು ಬ್ರಾಹ್ಮಣರನ್ನು ತನ್ನ ಇಷ್ಟದೇವತೆಗಳೆಂದೇ ಭಾವಿಸಿದ್ದನು. ಅವನಿಗೆ ಬ್ರಾಹ್ಮಣರ ವಿಷಯದಲ್ಲಿ ಅನಿರ್ವಚನೀಯವಾದ ವಾತ್ಸಲ್ಯವಿದ್ದಿತು. ಇದನ್ನು ಮನಗಂಡ ವಸಿಷ್ಠರೇ ಮೊದಲಾದ ಬ್ರಾಹ್ಮಣಶ್ರೇಷ್ಠರು ದಯಾರ್ದ್ರವಾದ ಮನಸ್ಸಿನಿಂದ ಕೂಡಿದವರಾಗಿ ಪರಮಪ್ರೀತಿಯಿಂದ

ಭೂಮಂಡಲವೆಲ್ಲವನ್ನೂ ಪುನಃ ಶ್ರೀರಾಮನಿಗೇ ಅರ್ಪಿಸಿ ವಿಜ್ಞಾಪಿಸಿಕೊಂಡರು:

ಅಪ್ರತ್ತಂ ನಸ್ತ್ವಯಾ ಕಿಂ ನು ಭಗವನ್ಭುವನೇಶ್ವರ ।
ಯನ್ನೋಽನ್ತರ್ಹೃದಯಂ ವಿಶ್ಯ ತಮೋ ಹಂಸಿ ಸ್ವರೋಚಿಷಾ ॥೬॥

"ಪ್ರಭುವೇ! ನೀನು ಭುವನಕ್ಕೇ ಈಶ್ವರನಾಗಿರುವೆ. ನೀನು ನಮ್ಮ ಹೃದಯದಲ್ಲಿರುತ್ತಾ ನಿನ್ನ ತೇಜಸ್ಸಿನಿಂದ ನಮ್ಮಲ್ಲಿರುವ ಅಜ್ಞಾನಾಂಧಕಾರ ವನ್ನು ತೊಡೆದುಹಾಕಿರುವೆ. ಹೀಗಿರುವಾಗ ನೀನು ನಮಗೆ ಕೊಡದಿರುವ ವಸ್ತುವು ಯಾವುದು ತಾನೇ ಇದೆ? (ಆತ್ಮವಸ್ತುವನ್ನೇ ನಮಗೆ ದರ್ಶನಮಾಡಿಸಿರುವಾಗ ಬೇರಾವುದನ್ನು ನಮಗೆ ಕೊಡಬೇಕಾಗಿದೆ?)

ನಮೋ ಬ್ರಹ್ಮಣ್ಯದೇವಾಯ ರಾಮಾಯಾಕುಣ್ಠಮೇಧಸೇ ।
ಉತ್ತಮಶ್ಲೋಕಧುರ್ಯಾಯ ನ್ಯಸ್ತದಣ್ಡಾರ್ಪಿತಾಙ್ಘ್ರಯೇ ॥೭॥

ಪ್ರಭುವೇ! ನಿನ್ನ ಜ್ಞಾನವು ಅನಂತವಾಗಿದೆ. ಪುಣ್ಯಶ್ಲೋಕರಲ್ಲಿ ನೀನು ಅಗ್ರಗಣ್ಯನಾಗಿರುವೆ. ಯಾರನ್ನೂ ಯಾವ ಕಾರಣದಿಂದಲೂ ಶಿಕ್ಷಿಸದ ಆತ್ಮಜ್ಞಾನಿಗಳಾದ ಮಹಾತ್ಮರಿಂದ ಆಶ್ರಯಿಸಲ್ಪಟ್ಟ ಚರಣಕಮಲಗಳುಳ್ಳವನಾಗಿರುವೆ. ಬ್ರಾಹ್ಮಣರನ್ನೇ ನೀನು ನಿನ್ನ ಇಷ್ಟದೇವತೆಗಳೆಂದು ಭಾವಿಸಿರುವೆ. ಅಂತಹ ನಿನಗೆ ನಮಸ್ಕಾರವು."

ಪರೀಕ್ಷಿತನೇ! ಒಮ್ಮೆ ಶ್ರೀರಾಮನು ತನ್ನ ಪ್ರಜೆಗಳ ಸ್ಥಿತಿಗತಿಗಳನ್ನು ತಿಳಿಯುವ ಸಲುವಾಗಿ ವೇಷವನ್ನು ಮರೆಸಿಕೊಂಡು ಯಾರಿಗೂ ತಿಳಿಯದಂತೆ ಪಟ್ಟಣದ ಬೀದಿಗಳಲ್ಲಿ ಅಡ್ಡಾಡುತ್ತಿದ್ದನು. ಹಾಗೆ ಸಂಚರಿಸುತ್ತಿದ್ದಾಗ ಯಾವನೋ ಒಬ್ಬನು ತನ್ನ ಹೆಂಡತಿಯನ್ನು ಉದ್ದೇಶಿಸಿ ಆಡುತ್ತಿದ್ದ ಮಾತುಗಳನ್ನು ಶ್ರೀರಾಮನು ಕೇಳಿಸಿಕೊಂಡನು.

ನಾಹಂ ಬಿಭರ್ಮಿ ತ್ವಾಂ ದುಷ್ಟಾಮಸತೀಂ ಪರವೇಶ್ಮಗಾಮ್ ।
ಸ್ತ್ರೀಲೋಭೀ ಬಿಭೃಯಾತ್ಸೀತಾಂ ರಾಮೋ ನಾಹಂ ಭಜೇ ಪುನಃ ॥೮॥

"ಮೂಢಳೇ! ದುಷ್ಟೆಯಾಗಿರುವ, ಕುಲಟೆಯಾಗಿರುವ, ಅನ್ಯರ ಮನೆಯಲ್ಲಿ ವಾಸಮಾಡುತ್ತಿದ್ದು ಇಲ್ಲಿಗೆ ಪುನಃ ಆಗಮಿಸಿರುವ ನಿನ್ನನ್ನು ಪುನಃ

ನನ್ನ ಮನೆಗೆ ಸೇರಿಸಿಕೊಳ್ಳುವುದಿಲ್ಲ. ಸ್ತ್ರೀಲೋಭಿಯಾದ ರಾಮನು ರಾಕ್ಷಸನ ಮನೆಯಲ್ಲಿ ವಾಸಮಾಡುತ್ತಿದ್ದ ಸೀತೆಯನ್ನು ಮನೆಗೆ ಸೇರಿಸಿ ಕೊಂಡಿರಬಹುದು. ಆದರೆ ನಾನು ಮಾತ್ರ ಹಾಗೆ ಮಾಡುವುದಿಲ್ಲ."

ನಿಜವನ್ನರಿಯದ, ನಿಜವನ್ನು ಹೇಳಿದರೂ ಒಪ್ಪದಿರುವ ಬಹುಜನರ ಬಾಯಿಂದ ಇಂತಹ ಮಾತುಗಳು ಬರುತ್ತಿದ್ದುದನ್ನು ಕೇಳಿ ಶ್ರೀರಾಮನು ಲೋಕಾಪವಾದಕ್ಕೆ ಹೆದರಿ ಸತೀ-ಸಾಧ್ವಿಯಾದ ಸೀತಾದೇವಿಯನ್ನು ತ್ಯಜಿಸಿಯೇ ಬಿಟ್ಟನು. ಸೀತಾದೇವಿಯು ವಾಲ್ಮೀಕಿಮಹರ್ಷಿಗಳ ಆಶ್ರಮವನ್ನು ಸೇರಿದಳು. ಆ ಸಮಯದಲ್ಲಿ ಅವಳು ಗರ್ಭವತಿಯೂ ಆಗಿದ್ದಳು. ದಿನ ತುಂಬುತ್ತಲೇ ಸೀತಾದೇವಿಯು ಅವಳೀ-ಜವಳೀ ಮಕ್ಕಳಿಗೆ ಜನ್ಮವನ್ನಿತ್ತಳು. ಲವ ಮತ್ತು ಕುಶ–ಎಂಬ ಶುಭನಾಮಗಳಿಂದ ಅವರು ಪ್ರಸಿದ್ಧರಾದರು. ವಾಲ್ಮೀಕಿಮಹರ್ಷಿಗಳೇ ಇಬ್ಬರು ಮಕ್ಕಳಿಗೂ ಜಾತಕರ್ಮಾದಿ ಸಂಸ್ಕಾರ ಗಳನ್ನು ಮಾಡಿದರು.

ಲಕ್ಷ್ಮಣನಿಗೂ ಅಂಗದ ಮತ್ತು ಚಿತ್ರಕೇತು–ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಅಂತೆಯೇ ಭರತನಿಗೂ ತಕ್ಷ-ಪುಷ್ಕಲರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಶತ್ರುಘ್ನನಿಗೂ ಸುಬಾಹು ಮತ್ತು ಶ್ರುತಸೇನರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಭರತನ ದಿಗ್ವಿಜಯಕಾಲದಲ್ಲಿ ಕೋಟಿ-ಕೋಟಿ ಗಂಧರ್ವರನ್ನು ಸಂಹರಿಸಿ ಅವರಲ್ಲಿದ್ದ ಅಪಾರವಾದ ಧನವನ್ನು ಸಂಗ್ರಹಿಸಿ ಅಣ್ಣನಾದ ಮತ್ತು ರಾಜನಾದ ಶ್ರೀರಾಮಪ್ರಭುವಿಗೆ ತಂದೊಪ್ಪಿಸಿದನು. ಶತ್ರುಘ್ನನು ಮಧುವನದಲ್ಲಿ ಮಧುವಿನ ಪುತ್ರನಾದ ಲವಣಾಸುರನನ್ನು ಸಂಹರಿಸಿ ಅಲ್ಲಿ 'ಮಧುರಾ'–ಎಂಬ ಹೆಸರಿನ ಪಟ್ಟಣವನ್ನು ನಿರ್ಮಿಸಿದನು. ಶ್ರೀರಾಮನಿಂದ ಪರಿತ್ಯಕ್ತಳಾದ ಸೀತಾದೇವಿಯು ಲವ-ಕುಶರನ್ನು ವಾಲ್ಮೀಕಿಗಳಿಗೊಪ್ಪಿಸಿ ಶ್ರೀರಾಮಚಂದ್ರನ ಚರಣಕಮಲಗಳನ್ನೇ ಧ್ಯಾನ ಮಾಡುತ್ತಾ ಭೂಮಿಯಲ್ಲುಂಟಾದ ರಂಧ್ರದಲ್ಲಿ ಸೇರಿಹೋದಳು.

ಸೀತಾದೇವಿಯು ನಿರ್ಗಮಿಸಿದ ವಾರ್ತೆಯನ್ನು ಕೇಳಿ ಸಮರ್ಥನಾದ ಶ್ರೀರಾಮನು ಶೋಕದ ಆವೇಶವನ್ನು ಬುದ್ಧಿಯ ಮೂಲಕವಾಗಿ ತಡೆಯಲು ಪ್ರಯತ್ನಿಸಿದರೂ ಸಾಧ್ವಿಯಾದ ಸೀತಾಮಾತೆಯ ಅನುಪಮವಾದ,

ಪವಿತ್ರವಾದ ಗುಣಗಣಗಳನ್ನು ಸ್ಮರಿಸುತ್ತಿದ್ದ ಅವನಿಗೆ ದುಃಖವನ್ನು ಸಹಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ.

ಸ್ತ್ರೀಪುಂಪ್ರಸಙ್ಗ ಏತಾದೃಕ್ಸರ್ವತ್ರ ತ್ರಾಸಮಾವಹಃ ।
ಅಪೀಶ್ವರಾಣಾಂ ಕಿಮುತ ಗ್ರಾಮ್ಯಸ್ಯ ಗೃಹಚೇತಸಃ ॥೧೭॥

ಪರೀಕ್ಷಿತ! ಸ್ತ್ರೀ-ಪುರುಷರ ಸಂಬಂಧವೆಂಬುದು (ಸಂಸಾರವೆಂಬುದು) ಶ್ರೀರಾಮನಂತಹ ಲೋಕೇಶ್ವರರಿಗೂ ದುಃಖದಾಯಕವಾಗಿರುವಾಗ ಸಂಸಾರದಲ್ಲಿಯೇ ಬುದ್ಧಿಯನ್ನು ಲೀನಗೊಳಿಸಿರುವ, ವಿಷಯಸುಖದಲ್ಲಿಯೇ ಆಸಕ್ತನಾದ ಮೂಢನ ವಿಷಯದಲ್ಲಿ ಹೇಳುವುದೇನಿದೆ?

ಬಳಿಕ ಶ್ರೀರಾಮನು ಬ್ರಹ್ಮಚರ್ಯವ್ರತವನ್ನು ಧಾರಣೆಮಾಡಿ ಹದಿಮೂರು ಸಾವಿರ ವರ್ಷಗಳ ಕಾಲ ಅಖಂಡವಾಗಿ ಅಗ್ನಿಹೋತ್ರವನ್ನು ಮಾಡಿದನು. ಅನಂತರ ಶ್ರೀರಾಮನು ದಂಡಕಾರಣ್ಯದಲ್ಲಿ ಮುಳ್ಳುಗಳಿಂದ ಚುಚ್ಚಲ್ಪಟ್ಟಿದ್ದ, ಚಿಗುರಿನಂತೆ ಸುಕೋಮಲವಾದ ತನ್ನ ಪಾದಪಂಕಜ ಗಳನ್ನು ತನ್ನ ಭಕ್ತರ ಹೃದಯಗಳಲ್ಲಿ ಸ್ಥಾಪಿಸಿ ಆತ್ಮಜ್ಯೋತಿಯಲ್ಲಿ ಸೇರಿಹೋದನು.

ಶ್ರೀರಾಮಪ್ರಭುವಿಗೆ ಸಮಾನರಾದ ಪ್ರತಾಪಶಾಲಿಗಳು ಯಾರೂ ಇರಲಿಲ್ಲವೆಂದಮೇಲೆ ಅವನಿಗಿಂತಲೂ ಅಧಿಕರಾದವರು ಇರಲಿಲ್ಲವೆಂಬುದನ್ನು ಹೇಳಬೇಕಾಗಿಲ್ಲ. ಅವನು ದೇವತೆಗಳ ಪ್ರಾರ್ಥನೆಯಂತೆ ಲೀಲಾವಿಗ್ರಹವನ್ನು ಧರಿಸಿ ಭೂಮಿಯಲ್ಲಿ ಅವತರಿಸಿದ್ದನು. ಅಂತಹ ಮಹಾಪ್ರಭುವಾದ, ರಘುವಂಶಶಿರೋಮಣಿಯಾದ ಶ್ರೀರಾಮನಿಗೆ ಅಸ್ತ್ರ-ಶಸ್ತ್ರಗಳಿಂದ ರಾಕ್ಷಸರನ್ನು ಸಂಹರಿಸಿದನೆಂಬ ವಿಷಯವಾಗಲೀ, ಸಮುದ್ರಕ್ಕೆ ಸೇತುವೆಯನ್ನು ಕಟ್ಟಿಸಿದನೆಂಬ ವಿಷಯವಾಗಲೀ ಹೆಚ್ಚಿನ ಗೌರವದ ಮಾತೇನಲ್ಲ. ಅವನ ಅತುಲಪರಾಕ್ರಮದ ದೃಷ್ಟಿಯಿಂದ ಈ ಕಾರ್ಯಗಳೆಲ್ಲವೂ ಕ್ಷುಲ್ಲಕವಾದುವುಗಳು. ಶತ್ರುಗಳನ್ನು ಸಂಹರಿಸಲು ಕಪಿಸೈನ್ಯದ ಸಹಾಯವನ್ನಾದರೂ ಪಡೆಯುವ ಅವಶ್ಯಕತೆಯೇನಿದ್ದಿತು? ತನ್ನ ಭಕ್ತರ ಕೀರ್ತಿಯನ್ನು ಹೆಚ್ಚಿಸಲು ಹೂಡಿರುವ ಆಟವಿದು. ಎಲ್ಲವೂ ಅವನ ಲೀಲೆ. ಶ್ರೀರಾಮಚಂದ್ರನ ನಿರ್ಮಲವಾದ ಯಶಸ್ಸು–ಅದನ್ನು ಗಾನಮಾಡುವವರ ಸಮಸ್ತಪಾಪ

ಗಳನ್ನೂ ಪರಿಹರಿಸುತ್ತದೆ. ದಿಗ್ಗಜಗಳಿಗೆ ಪಟ್ಟವಸ್ತ್ರದಂತಿರುವ ಶ್ರೀರಾಮ ಚಂದ್ರನ ಯಶಸ್ಸು ದಿಗಂತದವರೆಗೂ ಹರಡಿದೆ. ಇಂದೂ ಕೂಡ ಮಾರ್ಕಂಡೇಯನೇ ಮೊದಲಾದ ಮಹರ್ಷಿಗಳು ಯುಧಿಷ್ಠಿರನೇ ಮೊದ ಲಾದ ಸಾರ್ವಭೌಮರ ಸಭೆಯಲ್ಲಿ ಶ್ರೀರಾಮಚಂದ್ರನ ಗುಣಗಳನ್ನು ಗಾನ ಮಾಡುತ್ತಿರುತ್ತಾರೆ. ಸ್ವರ್ಗೀಯದೇವತೆಗಳು ಮತ್ತು ಭೂಮಂಡಲದಲ್ಲಿ ರುವ ರಾಜರು ತಮ್ಮ ಕಮನೀಯವಾದ ಕಿರೀಟಗಳಿಂದ ಶ್ರೀರಾಮನ ಚರಣ ಕಮಲಗಳ ಸೇವೆಯನ್ನು ಮಾಡುತ್ತಿರುತ್ತಾರೆ. ನಾನು ಅಂತಹ ರಘುಕುಲ ತಿಲಕನಾದ ಶ್ರೀರಾಮನ ಚರಣಕಮಲಗಳನ್ನು ಶರಣುಹೊಂದುತ್ತೇನೆ. ಯಾರು ಭಗವಂತನಾದ ಶ್ರೀರಾಮನ ದಿವ್ಯದರ್ಶನವನ್ನು ಮಾಡಿದ್ದರೋ, ಅವನ ಪಾದಸ್ಪರ್ಶಮಾಡಿದ್ದರೋ, ಅವನ ಸಹವಾಸಮಾಡಿದ್ದರೋ, ಅವನನ್ನು ಅನುಸರಿಸಿ ಹೋಗುತ್ತಿದ್ದರೋ, ಕೋಸಲದೇಶದಲ್ಲಿ ಯಾರು ವಾಸವಾಗಿದ್ದರೋ–ಅಂತಹವರೆಲ್ಲರೂ ದೊಡ್ಡ-ದೊಡ್ಡ ಯೋಗಿಗಳು ಯೋಗಸಾಧನೆಯಿಂದ ಪಡೆಯಬಹುದಾದ ಪರಂಧಾಮಕ್ಕೆ ಹೋಗಿರುತ್ತಾರೆ.

ಯಾವ ಪುರುಷನು ತನ್ನ ಕಿವಿಗಳಿಂದ ಶ್ರೀರಾಮನ ದಿವ್ಯಚರಿತಾಮೃತ ವನ್ನು ಕೇಳುವನೋ ಅವನಿಗೆ ಸರಳತೆ, ದಯಾಪರತೆ–ಇವೇ ಮುಂತಾದ ಕಲ್ಯಾಣಗುಣಗಳು ಮೈಗೂಡಿಬರುತ್ತವೆ. ಇಷ್ಟುಮಾತ್ರವಲ್ಲ ; ಶ್ರೀರಾಮನ ದಿವ್ಯಚರಿತ್ರೆಯನ್ನು ಕೇಳಿದವರು ಸಮಸ್ತವಾದ ಕರ್ಮಬಂಧನಗಳಿಂದಲೂ ಬಿಡುಗಡೆಹೊಂದುತ್ತಾರೆ.”

ಪರೀಕ್ಷಿತನು ಪ್ರಶ್ನಿಸುತ್ತಾನೆ :

“ಪೂಜ್ಯರೇ! ಭಗವಾನ್ ಶ್ರೀರಾಮಪ್ರಭುವು ತನ್ನ ಸಹೋದರ ರೊಡನೆ ಹೇಗೆ ವ್ಯವಹರಿಸುತ್ತಿದ್ದನು? ಭರತನೇ ಮೊದಲಾದ ಅವನ ಅನುಜರೂ ಪ್ರಜೆಗಳೂ ಮತ್ತು ಅಯೋಧ್ಯಾವಾಸಿಗಳೂ ಶ್ರೀರಾಮನ ವಿಷಯದಲ್ಲಿ ಹೇಗೆ ವ್ಯವಹರಿಸುತ್ತಿದ್ದರು? ಈ ವಿಷಯವನ್ನು ದಯಮಾಡಿ ಹೇಳಿರಿ.”

ಶ್ರೀಶುಕರು ಹೇಳುತ್ತಾರೆ :

“ಪರೀಕ್ಷಿತ! ತ್ರಿಭುವನೇಶ್ವರನಾದ, ಮಹಾರಾಜನಾದ ಶ್ರೀರಾಮನು

ರಾಜ್ಯಸಿಂಹಾಸನವನ್ನು ಸ್ವೀಕರಿಸಿದನಂತರ ತನ್ನ ಅನುಜರಿಗೆ ದಿಗ್ವಿಜಯ ಮಾಡಿಕೊಂಡು ಬರಲು ಆಜ್ಞೆಯನ್ನಿತ್ತು, ತಾನು ತನ್ನ ಬಂಧುವರ್ಗದವರಿಗೂ, ಹಿತೈಷಿಗಳಿಗೂ, ಪ್ರಜಾಪ್ರಮುಖರಿಗೂ, ಪ್ರಜೆಗಳಿಗೂ ದರ್ಶನವನ್ನೀಯುತ್ತಾ ತನ್ನ ಅನುಚರರೊಡನೆ ಅಯೋಧ್ಯಾಪಟ್ಟಣದ ಸೊಬಗನ್ನು ನೋಡಲು ಹೊರಟನು. ಆ ಸಮಯದಲ್ಲಿ ಅಯೋಧ್ಯಾಪಟ್ಟಣದ ಮಾರ್ಗವು ಸುಗಂಧಯುಕ್ತವಾದ ಜಲದಿಂದಲೂ, ಆನೆಗಳ ಮದೋದಕಗಳಿಂದಲೂ ನೆನೆದಿದ್ದಿತು. ಪ್ರಭುವಾದ ಶ್ರೀರಾಮಪ್ರಭುವನ್ನು ನೋಡಿದೊಡನೆಯೇ ಅಯೋಧ್ಯಾಪಟ್ಟಣವೇನಾದರೂ ಮದಿಸಿ ಮದೋದಕವನ್ನು ಸುರಿಸುತ್ತಿರುವುದೋ ಎಂಬಂತೆಯೇ ಕಾಣುತ್ತಿದ್ದಿತು. ಶ್ರೀರಾಮನು ನಗರ ದರ್ಶನಮಾಡಿಕೊಂಡು ಬರುತ್ತಿದ್ದಾಗ ಸುವರ್ಣಕಲಶಗಳಿಂದ ಯುಕ್ತವಾಗಿದ್ದ ಪ್ರಾಸಾದಗಳನ್ನೂ, ಗೋಪುರಗಳನ್ನೂ, ಸಭಾಭವನಗಳನ್ನೂ, ವಿಹಾರ ಸ್ಥಳಗಳನ್ನೂ, ದೇವಾಲಯಗಳನ್ನೂ ನೋಡಿದನು. ಆ ಸಮಯದಲ್ಲಿ ಅಯೋಧ್ಯಾಪಟ್ಟಣವು ಬಣ್ಣ-ಬಣ್ಣದ ಚಿತ್ರ-ವಿಚಿತ್ರವಾದ ಪತಾಕೆಗಳಿಂದ ಸಮಲಂಕೃತವಾಗಿದ್ದಿತು. ಸುಂದರವಾದ ವಸ್ತ್ರಗಳ ಪಟ್ಟಿಗಳಿಂದ ಸಮಲಂಕೃತ ವಾದ, ಹೊಂಬಾಳೆಗಳಿಂದ ಕೂಡಿದ ಅಡಿಕೆಮರಗಳಿಂದಲೂ, ಬಾಳೆಯ ಗಿಡಗಳಿಂದಲೂ, ಕನ್ನಡಿಗಳಿಂದಲೂ, ವಸ್ತ್ರಗಳಿಂದಲೂ, ಹೂವಿನ ಮಾಲೆ ಗಳಿಂದಲೂ, ಕೌತುಕವನ್ನುಂಟುಮಾಡುವ ಚಿತ್ರ-ವಿಚಿತ್ರವಾದ ತೋರಣ ಗಳಿಂದಲೂ ಸಮಲಂಕೃತವಾಗಿದ್ದ ಅಯೋಧ್ಯಾಪಟ್ಟಣವನ್ನು ಶ್ರೀರಾಮನು ವೀಕ್ಷಿಸಿದನು.

ಅಲ್ಲಲ್ಲಿ ನಾಗರಿಕನಾಯಕರು ತಟ್ಟೆಗಳಲ್ಲಿ ಕಾಣಿಕೆಗಳನ್ನಿಟ್ಟುಕೊಂಡು ಪುಷ್ಪಹಾರಗಳನ್ನಿಟ್ಟುಕೊಂಡು ಶ್ರೀರಾಮನನ್ನು ಇದಿರ್ಗೊಳ್ಳುತ್ತಾ ಅವನನ್ನು ಬಗೆ-ಬಗೆಯಾಗಿ ಪ್ರಾರ್ಥಿಸುತ್ತಿದ್ದರು.

"ದೇವದೇವನೇ! ನೀನು ನಿನ್ನ ಹಿಂದಿನ ವರಾಹಾವತಾರದಲ್ಲಿ ಈ ಭೂಮಿಯನ್ನು ಪಾತಾಳದಿಂದ ಮೇಲಕ್ಕೆತ್ತಿ ಉದ್ಧರಿಸಿದೆ. ಈಗ ಇದರ ಪಾಲನೆಯನ್ನು ಮಾಡು."

ಪರೀಕ್ಷಿತ! ಬಹಳ ಕಾಲಾನಂತರ ತಮ್ಮ ಪ್ರಭುವಾದ ಶ್ರೀರಾಮ ಚಂದ್ರನು ಬಂದುದನ್ನು ನೋಡಿ ಅವನನ್ನು ಬಹಳ ಹತ್ತಿರದಲ್ಲಿಯೇ ನೋಡ

ಬೇಕೆಂಬ ಆಶಯದಿಂದ ಅಯೋಧ್ಯಾಪಟ್ಟಣದ ಸ್ತ್ರೀ-ಪುರುಷರು ಮನೆಗಳನ್ನು ಬಿಟ್ಟು ಹೊರಬಂದು ಶ್ರೀರಾಘವನನ್ನು ಅತಿಹತ್ತಿರದಲ್ಲಿ ನೋಡಬಹುದಾದ ಉಪ್ಪರಿಗೆಗಳ ಮೇಲೆ ನಿಂತು ಕಮಲನಯನನಾದ ಆತನನ್ನು ನೋಡಿ ಅವನ ಮೇಲೆ ಪುಷ್ಪಗಳ ಮಳೆಗರೆದರು. ಪ್ರಿಯದರ್ಶನನಾದ ಶ್ರೀರಾಮನನ್ನು ಎಷ್ಟು ನೋಡಿದರೂ ಅವರ ಕಣ್ಣುಗಳಿಗೆ ತೃಪ್ತಿಯೆಂಬುದೇ ಇಲ್ಲವಾಯಿತು.

ಹೀಗೆ ಶ್ರೀರಾಮನು ತನ್ನ ಪ್ರಜೆಗಳನ್ನು ಸಂದರ್ಶಿಸಿ ನಯನ ಮನೋಹರವಾದ ಅಯೋಧ್ಯಾಪಟ್ಟಣವನ್ನು ಅವಲೋಕಿಸಿ ತನ್ನ ಹಿಂದಿನ ರಾಜರು ವಾಸಮಾಡುತ್ತಿದ್ದ, ದಿವ್ಯವಾದ ಅರಮನೆಗೆ ಹಿಂದಿರುಗಿದನು. ಆ ಅರಮನೆಯು ಅಪಾರವಾದ ಬಗೆ-ಬಗೆಯ ಅಕ್ಷಯವಾದ ಭಂಡಾರಗಳಿಂದ ಸಂಪನ್ನವಾಗಿದ್ದಿತು. ಬಹುಮೂಲ್ಯವಾದ ಅನೇಕ ಪ್ರಕಾರವಾದ ಸಾಮಗ್ರಿ ಗಳಿಂದ ಸಮೃದ್ಧವಾಗಿದ್ದಿತು. ಆ ಅರಮನೆಯು ಹವಳದಿಂದ ಮೆಟ್ಟಿದ ಅತ್ತೀಮರದ ದ್ವಾರಗಳಿಂದ ಕೂಡಿದ್ದಿತು. ವೈಡೂರ್ಯಮಯವಾದ ಕಂಬ ಗಳಿಂದ ಕಂಗೊಳಿಸುತ್ತಿದ್ದಿತು. ನೆಲವನ್ನು ಸ್ವಚ್ಛವಾದ ಮರಕತಮಣಿ ಗಳಿಂದ ಅಲಂಕರಿಸಿದ್ದರು. ಅರಮನೆಯ ಗೋಡೆಗಳನ್ನು ದಂತದಿಂದಲೂ ಸ್ಫಟಿಕಮಣಿಗಳಿಂದಲೂ ಸಿಂಗರಿಸಿದ್ದರು. ಚಿತ್ರ-ವಿಚಿತ್ರವಾದ ಹೂಮಾಲೆ ಗಳಿಂದಲೂ, ಪತಾಕೆಗಳಿಂದಲೂ, ವಸ್ತ್ರಗಳಿಂದಲೂ, ಜೀವಮಣಿಗಳಂತೆ ಪ್ರಕಾಶಮಾನವಾಗಿ ಕಾಣುತ್ತಿದ್ದ ಮುತ್ತುಗಳಿಂದಲೂ ಬೇಕು-ಬೇಕಾದ ಭೋಗ್ಯವಸ್ತುಗಳಿಂದಲೂ, ಸುಗಂಧಿತವಾದ ಧೂಪ-ದೀಪಗಳಿಂದಲೂ, ಪುಷ್ಪಗಳ ದಂಡೆಗಳಿಂದಲೂ ಸಮಲಂಕೃತವಾಗಿದ್ದ ದಿವ್ಯವಾದ ಅರಮನೆ ಯನ್ನು ಶ್ರೀರಾಮನು ಪ್ರವೇಶಿಸಿದನು. ಅಲಂಕಾರವಸ್ತುಗಳಿಂದ ಅಲಂಕಾರ ಪ್ರಾಯರಾಗಿದ್ದ ದೇವೋಪಮರಾದ ಸ್ತ್ರೀ-ಪುರುಷರು ಶ್ರೀರಾಮನ ಸೇವೆಯಲ್ಲಿ ಸರ್ವದಾ ನಿರತರಾಗಿರುತ್ತಿದ್ದರು.

ಪರೀಕ್ಷಿತನೇ! ಪ್ರಭುವಾದ ಶ್ರೀರಾಮಚಂದ್ರನು ಆತ್ಮಾರಾಮರಾದ, ಜಿತೇಂದ್ರಿಯರಾದ ಪುರುಷರೆಲ್ಲರಿಗೂ ಶ್ರೇಷ್ಠನಾಗಿದ್ದನು. ಆ ದಿವ್ಯವಾದ ಅರಮನೆಯಲ್ಲಿ ಶ್ರೀರಾಮನು ಸ್ನೇಹಶೀಲಳಾದ, ಇಷ್ಟಳಾದ, ಪ್ರಿಯತಮೆ ಯಾದ ಸೀತಾದೇವಿಯೊಡನೆ ಬಹಳ ಕಾಲದವರೆಗೆ ವಿಹರಿಸುತ್ತಿದ್ದನು.

ಚಿಗುರಿನಂತೆ ಸುಕೋಮಲವಾದ ಯಾವನ ಚರಣಕಮಲಗಳನ್ನು ಸಮಸ್ತ ಸ್ತ್ರೀ-ಪುರುಷರೂ ತಮ್ಮ ಹೃದಯಗುಹೆಗಳಲ್ಲಿ ಸರ್ವದಾ ಧ್ಯಾನಮಾಡುತ್ತಿದ್ದರೋ ಅಂತಹ ಶ್ರೀರಾಮನು ಬಹಳ ಕಾಲದವರೆಗೆ ಧರ್ಮಕ್ಕೆ ಅವಿರೋಧವಾಗಿ ಸುಖೋಪಭೋಗಗಳನ್ನು ಕಾಲೋಚಿತವಾಗಿ ಸೇವಿಸುತ್ತಾ ರಾಜ್ಯಭಾರಮಾಡುತ್ತಿದ್ದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ನವಮಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೨ನೆಯ ಅಧ್ಯಾಯ

ಉಳಿದ ಇಕ್ವಾಕುವಂಶದ ಅರಸರ ವರ್ಣನೆ

ಶ್ರೀಶುಕರು ಹೇಳುತ್ತಾರೆ :

ಕುಶಸ್ಯ ಚಾತಿಥಿಸ್ತಸ್ಮಾನ್ನಿಷಧಸ್ತತ್ಸುತೋ ನಭಃ ।
ಪುಣ್ಡರೀಕೋಽಥ ತತ್ಪುತ್ರಃ ಕ್ಷೇಮಧನ್ವಾಭವತ್ತತಃ ॥೧॥

ಪರೀಕ್ಷಿತ! ಶ್ರೀರಾಮನಿಗೆ ಕುಶ-ಲವರೆಂಬ ಯಮಳರು ಹುಟ್ಟಿದ್ದರೆಂದು ಹೇಳಿದ್ದೆನಲ್ಲವೆ? ಮುಂದೆ ಕುಶನ ಸಂತಾನವು ಬೆಳೆಯಿತು. ಕುಶನ ಮಗ ಅತಿಥಿ. ಅತಿಥಿಯ ಮಗ ನಿಷಧ. ನಿಷಧನ ಮಗ ನಭ. ನಭನ ಮಗ ಪುಂಡರೀಕ. ಪುಂಡರೀಕನ ಮಗ ಕ್ಷೇಮಧನ್ವಾ. ದೇವಾನೀಕನು ಕ್ಷೇಮಧನ್ವನ ಮಗನು. ದೇವಾನೀಕನಿಗೆ ಅನೀಹ ಎಂಬ ಮಗನು ಹುಟ್ಟಿದನು. ಅನೀಹನ ಮಗ ಪಾರಿಯಾತ್ರ. ಪಾರಿಯಾತ್ರನ ಮಗ ಬಲಸ್ಥಲ. ಬಲಸ್ಥಲನ ಮಗ ವಜ್ರನಾಭ. ವಜ್ರನಾಭನು ಸೂರ್ಯನ ಅಂಶದಿಂದ ಹುಟ್ಟಿದ್ದನು. ವಜ್ರನಾಭನ ಮಗ ಖಗಣ. ಖಗಣನ ಮಗ ವಿಧೃತಿ. ವಿಧೃತಿಯ ಮಗ ಹಿರಣ್ಯನಾಭ. ಜೈಮಿನಿಯ ಶಿಷ್ಯನಾಗಿದ್ದ ಇವನು ಯೋಗಾಚಾರ್ಯನೂ ಆಗಿದ್ದನು. ಕೋಸಲದೇಶವಾಸಿಯಾದ ಯಾಜ್ಞವಲ್ಕ್ಯಮಹರ್ಷಿಯು ಹಿರಣ್ಯನಾಭನ ಶಿಷ್ಯನಾಗಿ ಇವನಿಂದ ಅಧ್ಯಾತ್ಮಯೋಗದ ಶಿಕ್ಷಣವನ್ನು ಪಡೆದನು. ಈ ಅಧ್ಯಾತ್ಮಯೋಗವು ಹೃದಯದಲ್ಲಿನ ಅಜ್ಞಾನದ ಗಂಟನ್ನು

ಭೇದಿಸುವ ಮತ್ತು ಅಭ್ಯುದಯವನ್ನು ಉಂಟುಮಾಡುವ ಯೋಗ ವಾಗಿದ್ದಿತು. ಪುಷ್ಯನು ಯೋಗಾಚಾರ್ಯನಾದ ಹಿರಣ್ಯನಾಭನ ಮಗನು. ಪುಷ್ಯನ ಮಗ ಧ್ರುವಸಂಧಿ. ಧ್ರುವಸಂಧಿಯ ಮಗ ಸುದರ್ಶನ. ಸುದರ್ಶನನ ಮಗ ಅಗ್ನಿವರ್ಣ. ಅಗ್ನಿವರ್ಣನ ಮಗ ಶೀಘ್ರ. ಶೀಘ್ರನ ಮಗ ಮರು. ಮರುವು ಯೋಗಸಮಾಧಿಯಲ್ಲಿ ಸಿದ್ಧಿಯನ್ನು ಪಡೆದಿದ್ದನು. ಅವನು ಈಗಲೂ ಕಲಾಪವೆಂಬ ಗ್ರಾಮದಲ್ಲಿದ್ದಾನೆ. ಕಲಿಯುಗದ ಅಂತ್ಯದಲ್ಲಿ ಸೂರ್ಯವಂಶವು ನಷ್ಟವಾಗಿಹೋಗಲು ಪುನಃ ಮರುವು ಸೂರ್ಯ ವಂಶವನ್ನು ಬೆಳೆಸುವನು.

ಮರುವಿನ ಮಗ ಪ್ರಸುಶ್ರುತ. ಪ್ರಸುಶ್ರುತನ ಮಗ ಸಂಧಿ. ಸಂಧಿಯ ಮಗ ಅಮರ್ಷಣ. ಅಮರ್ಷಣನ ಮಗ ಮಹಸ್ವಂತ. ಮಹಸ್ವಂತನ ಮಗ ವಿಶ್ವಸಾಹ್ವ. ವಿಶ್ವಸಾಹ್ವನ ಮಗ ಪ್ರಸೇನಜಿತ್. ಪ್ರಸೇನಜಿತುವಿನ ಮಗ ತಕ್ಷಕ. ಬೃಹದ್ಬಲನು ತಕ್ಷಕನ ಮಗನು. ಪರೀಕ್ಷಿತನೇ! ತಕ್ಷಕನ ಮಗನಾದ ಈ ಬೃಹದ್ಬಲನನ್ನೇ ನಿನ್ನ ತಂದೆಯಾದ ಅಭಿಮನ್ಯುವು ಮಹಾಭಾರತ ಯುದ್ಧದಲ್ಲಿ ಸಂಹರಿಸಿದನು. ಇಕ್ಷ್ವಾಕುವಂಶದಲ್ಲಿ ಇದುವರೆಗೆ ಇಷ್ಟು ನರಪತಿಗಳು ಆಗಿ ಹೋದರು. ಮುಂದೆ ಇವರ ವಂಶವು ಹೇಗೆ ಬೆಳೆಯುತ್ತದೆಂಬುದನ್ನು ಹೇಳುವೆನು ಕೇಳು :

ಬೃಹದ್ಬಲನಿಗೆ ಬೃಹದ್ರಣನೆಂಬ ಮಗನಿದ್ದಾನೆ. ಉರುಕ್ರಿಯನು ಬೃಹದ್ರಣನಿಗೆ ಮಗನಾಗಿ ಹುಟ್ಟುತ್ತಾನೆ. ಉರುಕ್ರಿಯನಿಗೆ ಮಗನಾಗಿ ವತ್ಸವೃದ್ಧನು ಹುಟ್ಟುತ್ತಾನೆ. ವತ್ಸವೃದ್ಧನಿಗೆ ಪ್ರತಿವ್ಯೋಮನೆಂಬುವನು ಮಗನಾಗುತ್ತಾನೆ. ಭಾನು ಎಂಬುವನು ಪ್ರತಿವ್ಯೋಮನ ಮಗನಾಗಿ ಹುಟ್ಟುತ್ತಾನೆ. ಸೇನಾಪತಿಯಾದ ದಿವಾಕನು ಭಾನುವಿನ ಮಗನಾಗಿ ಹುಟ್ಟುತ್ತಾನೆ. ವೀರನಾದ ಸಹದೇವನು ದಿವಾಕನಿಗೆ ಮಗನಾಗುತ್ತಾನೆ. ಬೃಹದಶ್ವನು ಸಹದೇವನ ಮಗನಾಗಿ ಹುಟ್ಟುತ್ತಾನೆ. ಬೃಹದಶ್ವನಿಗೆ ಭಾನುಮಂತನೆಂಬುವನು ಮಗನಾಗಿ ಹುಟ್ಟುತ್ತಾನೆ. ಪ್ರತೀಕಾಶ್ವನು ಭಾನುಮಂತನಿಗೆ ಮಗನಾಗಿ ಹುಟ್ಟುತ್ತಾನೆ. ಪ್ರತೀಕಾಶ್ವನಿಗೆ ಸುಪ್ರತೀಕನೆಂಬುವನು ಮಗನಾಗಿ ಹುಟ್ಟುತ್ತಾನೆ. ಮರುದೇವನು ಸುಪ್ರತೀಕನಿಗೆ ಮಗನಾಗಿ ಹುಟ್ಟುತ್ತಾನೆ. ಮರುದೇವನಿಗೆ ಸುನಕ್ಷತ್ರನು ಮಗನಾಗುತ್ತಾನೆ. ಸುನಕ್ಷತ್ರನಿಗೆ ಪುಷ್ಕರನ ಮಗನಾಗಿ ಹುಟ್ಟುತ್ತಾನೆ. ಪುಷ್ಕರನಿಗೆ ಅಂತರಿಕ್ಷನೆಂಬು

ವನು ಮಗನಾಗಿ ಹುಟ್ಟುತ್ತಾನೆ. ಸುತಪಸನು ಅಂತರಿಕ್ಷನಿಗೆ ಮಗನಾಗಿ ಹುಟ್ಟುತ್ತಾನೆ. ಸುತಪಸನಿಗೆ ಅಮಿತ್ರಜಿತನು ಮಗನಾಗುತ್ತಾನೆ. ಬೃಹ ದ್ರಾಜನು ಅಮಿತ್ರಜಿತನಿಗೆ ಮಗನಾಗಿ ಹುಟ್ಟುತ್ತಾನೆ. ಬರ್ಹಿ ಎಂಬುವನು ಬೃಹದ್ರಾಜನಿಗೆ ಮಗನಾಗಿ ಹುಟ್ಟುತ್ತಾನೆ. ಬರ್ಹಿಗೆ ಕೃತಂಜಯನೆಂಬುವನು ಪುತ್ರನಾಗಿ ಹುಟ್ಟುತ್ತಾನೆ. ರಣಂಜಯನೆಂಬುವನು ಕೃತಂಜಯನಿಗೆ ಮಗನಾಗಿ ಹುಟ್ಟುತ್ತಾನೆ. ರಣಂಜಯನಿಗೆ ಸಂಜಯನೆಂಬುವನು ಮಗನಾಗಿ ಹುಟ್ಟುತ್ತಾನೆ. ಶಾಕ್ಯನೆಂಬುವನು ಸಂಜಯನಿಗೆ ಮಗನಾಗಿ ಹುಟ್ಟುತ್ತಾನೆ. ಶುದ್ಧೋದನನು ಶಾಕ್ಯನ ಮಗನಾಗಿ ಹುಟ್ಟುತ್ತಾನೆ. ಲಾಂಗಲನೆಂಬುವನು ಶುದ್ಧೋದನನ ಮಗನಾಗಿ ಹುಟ್ಟುತ್ತಾನೆ. ಪ್ರಸೇನಜಿತನು ಲಾಂಗಲನ ಮಗನಾಗಿ ಹುಟ್ಟುತ್ತಾನೆ. ಪ್ರಸೇನಜಿತನಿಗೆ ಕ್ಷುದ್ರಕನು ಮಗನಾಗಿ ಹುಟ್ಟುತ್ತಾನೆ. ಕ್ಷುದ್ರಕನಿಗೆ ರಣಕನು ಮಗನಾಗಿ ಹುಟ್ಟುತ್ತಾನೆ. ರಣಕನಿಗೆ ಸುರಥನು ಮಗನಾಗಿ ಹುಟ್ಟುತ್ತಾನೆ. ಸುರಥನಿಗೆ ಸೂರ್ಯವಂಶದ ಕಡೆಯ ರಾಜನಾದ ಸುಮಿತ್ರನು ಮಗನಾಗಿ ಹುಟ್ಟುತ್ತಾನೆ. ಇವರೆಲ್ಲರೂ ಬೃಹದ್ಬಲನ ವಂಶೀಯರು. ಇಕ್ಷ್ವಾಕುವಿನ ಈ ವಂಶವು ಸುಮಿತ್ರರಾಜನವರೆಗೂ ಮುಂದುವರಿಯುತ್ತದೆ. ಸುಮಿತ್ರನು ರಾಜನಾದ ನಂತರ ಕಲಿಯುಗದಲ್ಲಿ ಈ ವಂಶವು ನಶಿಸಿಹೋಗುತ್ತದೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೩ನೆಯ ಅಧ್ಯಾಯ

ನಿಮಿರಾಜನ ವಂಶದ ವರ್ಣನೆ

ಶ್ರೀಶುಕದೇವರು ಹೇಳುತ್ತಾರೆ :

ನಿಮಿರಿಕ್ಷ್ವಾಕುತನಯೋ ವಸಿಷ್ಠಮವೃತರ್ತ್ವಿಜಮ್ ।
ಆರಭ್ಯ ಸತ್ರ ಸೋಽಪ್ಯಾಹ ಶಕ್ರೇಣ ಪ್ರಾಗ್ವೃತೋಽಸ್ಮಿ ಭೋಃ ॥೧॥

ಪರೀಕ್ಷಿತನೇ! ನಿಮಿಯು ಇಕ್ಷ್ವಾಕುವಿನ ಮಗ. ಅವನು ಯಜ್ಞ ವನ್ನು ಮಾಡಲು ಮಹರ್ಷಿಗಳಾದ ವಸಿಷ್ಠರನ್ನು ಋತ್ವಿಜರನ್ನಾಗಿ ವರಣ

ಮಾಡಿದನು. ವಸಿಷ್ಠರು ಋತ್ವಿಜನ ಕಾರ್ಯವನ್ನು ನಿರ್ವಹಿಸಲು ಒಪ್ಪಿ ಈ ಮಾತನ್ನು ಹೇಳಿದರು :

"ಮಹಾರಾಜ! ಇಂದ್ರನು ತಾನು ಮಾಡಲಿರುವ ಯಜ್ಞಕ್ಕಾಗಿ ಈ ಮೊದಲೇ ಋತ್ವಿಜನಾಗಲು ನನ್ನನ್ನು ಆಹ್ವಾನಿಸಿದ್ದಾನೆ. ಅವನ ಯಜ್ಞವನ್ನು ಮುಗಿಸಿಕೊಂಡು ನಿನ್ನ ಬಳಿಗೆ ಬರುತ್ತೇನೆ. ನಾನು ಬರುವವರೆಗೂ ನೀನು ನನಗಾಗಿ ಪ್ರತೀಕ್ಷಿಸುತ್ತಿರು."

ವಸಿಷ್ಠರ ಈ ಮಾತನ್ನು ಕೇಳಿ ನಿಮಿಯು ಯಾವ ಮಾತನ್ನು ಆಡದೆ ಮೌನಿಯಾಗಿದ್ದನು. ವಸಿಷ್ಠರು ಇಂದ್ರನಿಂದ ಯಜ್ಞವನ್ನು ಮಾಡಿಸಲು ಹೋದರು. ಜೀವನವು ಕ್ಷಣಭಂಗುರವಾದುದರಿಂದ ವಸಿಷ್ಠರಿಗಾಗಿ ಕಾಯುವುದು ಉಚಿತವಲ್ಲವೆಂದು ಭಾವಿಸಿದ ನಿಮಿಯು ವಸಿಷ್ಠರು ಬರುವುದರೊಳಗಾಗಿಯೇ ಬೇರೆ ಋತ್ವಿಜರನ್ನು ಆಹ್ವಾನಿಸಿ ಯಜ್ಞವನ್ನು ಪ್ರಾರಂಭಿಸಿಯೇ ಬಿಟ್ಟನು. ಗುರುಗಳಾದ ವಸಿಷ್ಠರು ಇಂದ್ರನ ಯಜ್ಞವನ್ನು ಮುಗಿಸಿ ಹಿಂದಿರುಗಿದರು. ತಮ್ಮ ಶಿಷ್ಯನು ತಮ್ಮ ಮಾತನ್ನು ಅತಿಕ್ರಮಿಸಿ ಯಜ್ಞವನ್ನು ಪ್ರಾರಂಭಿಸಿರುವುದನ್ನು ವಸಿಷ್ಠರು ನೋಡಿದರು. ಅದರಿಂದ ಕಡುಕೋಪಗೊಂಡ ಅವರು–'ತನ್ನನ್ನೇ ಮಹಾಪಂಡಿತನೆಂದು ಭಾವಿಸಿ ಕೊಂಡಿರುವ ನಿನ್ನ ಶರೀರವು ಬಿದ್ದುಹೋಗಲಿ'–ಎಂದು ನಿಮಿಗೆ ಶಾಪವನ್ನಿತ್ತರು. ನಿಮಿಯ ದೃಷ್ಟಿಯಿಂದ ವಸಿಷ್ಠರಿತ್ತ ಶಾಪವು ಧರ್ಮಕ್ಕೆ ವಿರೋಧ ವಾಗಿದ್ದಿತು. ಈ ಕಾರಣದಿಂದ ಆತನು ವಸಿಷ್ಠರಿಗೂ ಶಾಪವನ್ನಿತ್ತನು :

ತವಾಪಿ ಪತತಾದ್ದೇಹೋ ಲೋಭಾದ್ಧರ್ಮಮಜಾನತಃ ॥೫॥

"ಲೋಭಪರವಶನಾಗಿ ಧರ್ಮವೇನೆಂಬುದನ್ನು ತಿಳಿಯದೇ ಇರುವ ನಿನ್ನ ಶರೀರವೂ ಬಿದ್ದುಹೋಗಲಿ"–ಹೀಗೆ ಶಾಪವಿತ್ತು ಆತ್ಮವಿದ್ಯಾನಿಪುಣನಾದ ನಿಮಿಯು ದೇಹತ್ಯಾಗಮಾಡಿದನು.

ಪರೀಕ್ಷಿತನೇ! ಇತ್ತಲಾಗಿ ನನ್ನ ವೃದ್ಧಪಿತಾಮಹರಾದ ವಸಿಷ್ಠರೂ ಕೂಡ ನಿಮಿಯಿತ್ತ ಶಾಪದ ಕಾರಣದಿಂದ ದೇಹವನ್ನು ಪರಿತ್ಯಜಿಸಿ ಮಿತ್ರಾ ವರುಣರ ಪುತ್ರರಾಗಿ ಉರ್ವಶಿಯ ಗರ್ಭದಲ್ಲಿ ಜನ್ಮತಾಳಿದರು.

ನಿಮಿಯ ಯಜ್ಞಕ್ಕೆ ಆಗಮಿಸಿದ್ದ ಶ್ರೇಷ್ಠರಾದ ಮುನಿಗಳು ರಾಜನ ಶರೀರವನ್ನು ಪರಿಮಳದ್ರವ್ಯಗಳಲ್ಲಿಟ್ಟು ಅದು ಕೆಡದಂತೆ ರಕ್ಷಿಸಿದ್ದರು. ಸತ್ರಯಾಗವು ಮುಗಿದು ದೇವತೆಗಳು ಆಗಮಿಸಿದಾಗ ಋತ್ವಿಜರೆಲ್ಲರೂ ಸೇರಿ ದೇವತೆಗಳನ್ನು ಪ್ರಾರ್ಥಿಸಿದರು :

ರಾಜ್ಞೋ ಜೀವತು ದೇಹೋಽಯಂ ಪ್ರಸನ್ನಾಃ ಪ್ರಭವೋ ಯದಿ ।

"ಮಹಾನುಭಾವರೇ! ದೇವಶ್ರೇಷ್ಠರೇ! ನೀವೆಲ್ಲರೂ ಸರ್ವಸಮರ್ಥರಾಗಿರುವಿರಿ. ನೀವು ಈ ಸತ್ರಯಾಗದಿಂದ ಪ್ರಸನ್ನರಾಗಿರುವಿರಾದರೆ ನಿಮಿರಾಜನ ಈ ಶರೀರವು ಪುನಃ ಜೀವಂತವಾಗಲಿ."

ಇದಕ್ಕೆ ಉತ್ತರವಾಗಿ ಸಂತೃಪ್ತರಾಗಿದ್ದ ದೇವತೆಗಳು ಹಾಗೆಯೇ ಆಗಲೆಂದರು. ಶಾಪವಿಮೋಚನೆಯನ್ನು ಹೊಂದಲಿದ್ದ ನಿಮಿಯು ಒಡನೆಯೇ ಹೇಳಿದನು :

" 'ಮಾ ಭೂನ್ಮೇ ದೇಹಬನ್ಧನಮ್' ನಾನು ಪುನಃ ಈ ದೇಹದಲ್ಲಿ ಕಟ್ಟಿಬೀಳುವುದು ಬೇಡ.

ವಿಚಾರಶೀಲರಾದ ಮುನಿಜನರು ತಮ್ಮ ಬುದ್ಧಿಯನ್ನು ಪ್ರಯತ್ನಪೂರ್ವಕವಾಗಿ ಭಗವಂತನಲ್ಲಿ ನೆಲೆಗೊಳಿಸಿರುತ್ತಾರೆ ಮತ್ತು ಅವನ ಚರಣಕಮಲಗಳನ್ನೇ ಯಾವಾಗಲೂ ಭಜಿಸುತ್ತಿರುತ್ತಾರೆ. ಈ ನಶ್ವರವಾದ ಶರೀರವು ಎಂದಾದರೊಂದು ದಿನ ಅವಶ್ಯವಾಗಿ ವಿನಾಶಹೊಂದುವುದೆಂಬುದನ್ನು ತಿಳಿದು ಭಯಗ್ರಸ್ತರಾಗಿ ಇಂತಹ ಶರೀರದ ಸಂಬಂಧವನ್ನು ಪುನಃ ಬಯಸದೆ ಮುಕ್ತಿಯನ್ನು ಪಡೆಯಲು ಇಚ್ಛಿಸುತ್ತಾರೆ. ಮತ್ತೆ ಮತ್ತೆ ಹುಟ್ಟುವುದನ್ನೂ ಮತ್ತೆ ಮತ್ತೆ ಸಾಯುವುದನ್ನೂ ಅವರು ಇಷ್ಟಪಡುವುದಿಲ್ಲ. ಆದುದರಿಂದ ದುಃಖ-ಶೋಕ-ಭಯಗಳಿಗೆ ಮೂಲಕಾರಣವಾಗಿರುವ ಈ ದೇಹವನ್ನು ಪುನಃ ಧರಿಸಲು ನಾನು ಇಷ್ಟಪಡುವುದಿಲ್ಲ. ನೀರಿನಲ್ಲಿರುವ ಮೀನುಗಳಿಗೆ ಸ್ವಜಾತೀಯ ಮೀನುಗಳಿಂದಲೂ, ಇತರ ಜಲಚರಗಳಿಂದಲೂ, ಬೆಸ್ತರಿಂದಲೂ ಅಂದರೆ ಎಲ್ಲ ಕಡೆಗಳಿಂದಲೂ ಮೃತ್ಯುಭಯವಿರುತ್ತದೆ. ಹೀಗೆ ಎಲ್ಲ ಕಡೆಗಳಲ್ಲೂ ಮೃತ್ಯುಭಯದಿಂದ ಕೂಡಿರುವ ನಶ್ವರವಾದ ಈ ಶರೀರವನ್ನು ಪುನಃ ಪಡೆದುಕೊಳ್ಳಲು ನಾನು ಇಷ್ಟಪಡುವುದಿಲ್ಲ."

ನಿಮಿರಾಜನ ಈ ಮಾತುಗಳನ್ನು ಕೇಳಿ ದೇವತೆಗಳು ಹೇಳುತ್ತಾರೆ :

ವಿದೇಹ ಉಷ್ಯತಾಂ ಕಾಮಂ ಲೋಚನೇಷು ಶರೀರಿಣಾಮ್ ।
ಉನ್ಮೇಷಣನಿಮೇಷಾಭ್ಯಾಂ ಲಕ್ಷಿತೋಽಧ್ಯಾತ್ಮಸಂಸ್ಥಿತಃ ॥೧॥

"ಮುನಿಗಳೇ! ನಿಮಿರಾಜನು ತನ್ನ ಇಚ್ಛೆಯಂತೆಯೇ ಶರೀರರಹಿತನಾಗಿ ಪ್ರಾಣಿಗಳ ಕಣ್ಣುಗಳಲ್ಲಿ ವಾಸಮಾಡಲಿ. ಅವನು ಅಲ್ಲಿದ್ದುಕೊಂಡು ಸೂಕ್ಷ್ಮಶರೀರದಿಂದ ಭಗವಂತನನ್ನು ಧ್ಯಾನಮಾಡಲಿ. ರೆಪ್ಪೆಗಳು ಮುಚ್ಚಿಕೊಳ್ಳುವುದರಿಂದಲೂ ಮತ್ತು ತೆರೆದುಕೊಳ್ಳುವುದರಿಂದಲೂ ಅವನ ಅಸ್ತಿತ್ವವು ತಿಳಿದುಬರುತ್ತದೆ. ನಿಮ್ಮ ಪ್ರಾರ್ಥನೆಯಂತೆ ನಿಮಿಯು ಜೀವಂತನೂ ಆಗುತ್ತಾನೆ. ಅವನ ಅಪೇಕ್ಷೆಯಂತೆ ವಿದೇಹಿಯೂ ಆಗು ತ್ತಾನೆ."

ಹೀಗೆ ಹೇಳಿ ದೇವತೆಗಳು ತಮ್ಮ-ತಮ್ಮ ಲೋಕಗಳಿಗೆ ಹೊರಟು ಹೋದರು. ಬಳಿಕ ಮುನಿಜನರು ರಾಜನಿಲ್ಲದಿದ್ದರೆ ಮನುಷ್ಯರಿಗೆ ಅರಾಜಕತೆಯ ಭಯವುಂಟಾಗುವುದೆಂದು ಭಾವಿಸಿ ನಿಮಿರಾಜನ ದೇಹವನ್ನೇ ಕಡೆದರು. ಹಾಗೆ ಕಡೆದುದರ ಪರಿಣಾಮವಾಗಿ ಆ ಶರೀರದಿಂದ ಒಬ್ಬ ಕುಮಾರನು ಹುಟ್ಟಿದನು. ಅಸಾಧಾರಣವಾದ ರೀತಿಯಲ್ಲಿ ಹುಟ್ಟಿದನಾದ ಕಾರಣ ಜನಕನೆಂದೂ ಪ್ರಾಣವಿಲ್ಲದ ದೇಹದಿಂದ ಹುಟ್ಟಿದನಾದ ಕಾರಣ ವಿದೇಹನೆಂದೂ ಶರೀರಮಥನದಿಂದ ಹುಟ್ಟಿದನಾದ ಕಾರಣ ಮಿಥಿಲನೆಂದೂ ಆ ಕುಮಾರನನ್ನು ಅನ್ವರ್ಥನಾಮಗಳಿಂದ ಜನರು ಕರೆದರು.

ಜನಕನ ಮಗ ಉದಾವಸು. ಉದಾವಸುವಿನ ಮಗ ನಂದಿವರ್ಧನ. ನಂದಿವರ್ಧನನ ಮಗ ಸುಕೇತು. ಸುಕೇತುವಿನ ಮಗ ದೇವರಾತ. ದೇವರಾತನ ಮಗ ಬೃಹದ್ರಥ. ಬೃಹದ್ರಥನ ಮಗ ಮಹಾವೀರ್ಯ. ಮಹಾವೀರ್ಯನ ಮಗ ಸುಧೃತಿ. ಸುಧೃತಿಯ ಮಗ ಧೃಷ್ಟಕೇತು. ಧೃಷ್ಟಕೇತುವಿನ ಮಗ ಹರ್ಯಶ್ವ. ಹರ್ಯಶ್ವನ ಮಗ ಮರು. ಪ್ರತೀಪಕನು ಅಥವಾ ಪ್ರತಿರಥನು ಮರುವಿನ ಮಗನು. ಪ್ರತೀಪಕನ ಮಗ ಕೃತಿರಥ. ಕೃತಿರಥನ ಮಗ ದೇವಮೀಢ. ದೇವಮೀಢನ ಮಗ ವಿಶ್ರುತ. ವಿಶ್ರುತನ ಮಗ ಮಹಾಧೃತಿ. ಮಹಾಧೃತಿಯ ಮಗ ಕೃತಿರಾತ. ಕೃತಿರಾತನ ಮಗ ಮಹಾ

ರೋಮಾ. ಮಹಾರೋಮನ ಮಗ ಸ್ವರ್ಣರೋಮಾ. ಸ್ವರ್ಣರೋಮನ ಮಗ ಹ್ರಸ್ವರೋಮಾ. ಮಹಾರಾಜನಾದ ಸೀರಧ್ವಜನು ಹ್ರಸ್ವರೋಮನ ಪುತ್ರನು. ಸೀರಧ್ವಜನು ಒಮ್ಮೆ ಯಜ್ಞಮಾಡುವ ಸಲುವಾಗಿ ಭೂಮಿಯನ್ನು ಶುದ್ಧಿಗೊಳಿಸಲು ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದನು. ಆಗ ನೇಗಿಲಿನ ತುದಿಯಿಂದ ಸೀತೆಯು ಜನ್ಮತಾಳಿದಳು. ನೇಗಿಲಿನ ತುದಿಗೆ ಮಹಾಮಾತೆಯಾದ ಸೀತಾದೇವಿಯು ಸಿಕ್ಕಿದ ಕಾರಣ ಜನಕಮಹಾರಾಜನು ಆ ಸೀರ (ನೇಗಿಲು) ವನ್ನೇ ಧ್ವಜದ ಚಿಹ್ನೆಯಾಗಿಟ್ಟುಕೊಂಡು ಸೀರಧ್ವಜ ನೆಂದೇ ಪ್ರಸಿದ್ಧನಾದನು. ಸೀರಧ್ವಜನ ಮಗ ಕುಶಧ್ವಜ. ಕುಶಧ್ವಜನ ಮಗ ಧರ್ಮಧ್ವಜ. ಧರ್ಮಧ್ವಜನಿಗೆ ಕೃತಧ್ವಜ ಮತ್ತು ಮಿತಧ್ವಜರೆಂಬ ಇಬ್ಬರು ಮಕ್ಕಳಿದ್ದರು. ಕೃತಧ್ವಜನಿಗೆ ಕೇಶಿಧ್ವಜನೆಂಬ ಮಗನೂ ಮಿತಧ್ವಜನಿಗೆ ಖಾಂಡೀಕ್ಯನೆಂಬ ಮಗನೂ ಹುಟ್ಟಿದರು. ಕೇಶಿಧ್ವಜನು ಆತ್ಮವಿದ್ಯೆಯಲ್ಲಿ ಪ್ರವೀಣನಾಗಿದ್ದನು. ಖಾಂಡೀಕ್ಯನು ಕರ್ಮಕಾಂಡದ ರಹಸ್ಯವನ್ನು ತಿಳಿದವನಾಗಿದ್ದನು. ಆತ್ಮಜ್ಞಾನಿಯಾದ ಕೇಶಿಧ್ವಜನಿಗೆ ಭಯಗೊಂಡು ಖಾಂಡೀಕ್ಯನು ಓಡಿಹೋದನು. ಕೇಶಿಧ್ವಜನ ಮಗ ಭಾನುಮಂತ. ಭಾನುಮಂತನ ಮಗ ಶತದ್ಯುಮ್ನ. ಶತದ್ಯುಮ್ನನ ಮಗ ಶುಚಿ. ಶುಚಿಯ ಮಗ ಸನದ್ವಾಜ. ಸನದ್ವಾಜನ ಮಗ ಊರ್ಧ್ವಕೇತು. ಊರ್ಧ್ವಕೇತುವಿನ ಮಗ ಅಜ. ಅಜನ ಮಗ ಪುರುಜಿತ. ಪುರುಜಿತನ ಮಗ ಅರಿಷ್ಟನೇಮಿ. ಅರಿಷ್ಟನೇಮಿಯ ಮಗ ಶ್ರುತಾಯುಷ. ಶ್ರುತಾಯುಷನ ಮಗ ಸುಪಾರ್ಶ್ವಕ. ಸುಪಾರ್ಶ್ವಕನ ಮಗ ಚಿತ್ರರಥ. ಚಿತ್ರರಥನ ಮಗ ಮಿಥಿಲಾಧಿಪತಿಯಾದ ಕ್ಷೇಮಧಿ. ಕ್ಷೇಮಧಿಯ ಮಗ ಸಮರಥ. ಸಮರಥನ ಮಗ ಸತ್ಯರಥ. ಸತ್ಯರಥನ ಮಗ ಉಪಗುರು. ಉಪಗುರುವಿನ ಮಗ ಉಪಗುಪ್ತ. ಉಪಗುಪ್ತನು ಅಗ್ನಿದೇವನ ಅಂಶದಿಂದ ಹುಟ್ಟಿದನು. ಉಪಗುಪ್ತನ ಮಗ ವಸ್ವನಂತ. ವಸ್ವನಂತನ ಮಗ ಯುಯುಧ. ಯುಯುಧನ ಮಗ ಸುಭಾಷಣ. ಸುಭಾಷಣನ ಮಗ ಶ್ರುತ. ಶ್ರುತನ ಮಗ ಜಯ. ಜಯನ ಮಗ ವಿಜಯ. ವಿಜಯನ ಮಗ ಋತ. ಋತನ ಮಗ ಶುನಕ. ಶುನಕನ ಮಗ ವೀತಹವ್ಯ. ವೀತಹವ್ಯನ ಮಗ ಧೃತಿ. ಧೃತಿಯ ಮಗ ಬಹುಲಾಶ್ವ. ಬಹುಲಾಶ್ವನ ಮಗ ಕೃತಿ. ಕೃತಿಯ ಮಗ ಮಹಾವಶೀ.

ಪರೀಕ್ಷಿತ! ಮಿಥಿಲನ ವಂಶದ ಈ ಭೂಪಾಲರೆಲ್ಲರೂ ಮೈಥಿಲರೆಂದು ಕರೆಯಲ್ಪಡುತ್ತಾರೆ. ಇವರೆಲ್ಲರೂ ಆತ್ಮವಿದ್ಯಾವಿಶಾರದರು. ಗೃಹಸ್ಥಾಶ್ರಮದಲ್ಲಿದ್ದರೂ ಯೋಗೇಶ್ವರರಾದ ಯಾಜ್ಞವಲ್ಕ್ಯರೇ ಮೊದಲಾದ ಮಹರ್ಷಿಗಳ ಅನುಗ್ರಹದಿಂದ ಸುಖ-ದುಃಖ, ಶೀತೋಷ್ಣಾದಿ ದ್ವಂದ್ವಗಳಿಂದ ಬಿಡುಗಡೆ ಹೊಂದಿದವರಾಗಿದ್ದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ನವಮಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೪ನೆಯ ಅಧ್ಯಾಯ

ಚಂದ್ರವಂಶದ ವರ್ಣನೆ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಅಥಾತಃ ಶ್ರೂಯತಾಂ ರಾಜನ್ವಂಶಃ ಸೋಮಸ್ಯ ಪಾವನಃ ।
ಯಸ್ಮಿನ್ನೈಲಾದಯೋ ಭೂಪಾಃ ಕೀರ್ತ್ಯನ್ತೇ ಪುಣ್ಯಕೀರ್ತಯಃ ॥೧॥

ಪರೀಕ್ಷಿತಮಹಾರಾಜ! ಈಗ ನಾನು ನಿನಗೆ ಪರಮಪವಿತ್ರವಾದ ಚಂದ್ರನ ವಂಶದ ಚರಿತ್ರೆಯನ್ನು ಹೇಳುತ್ತೇನೆ. ಈ ವಂಶದ ಚರಿತ್ರೆಯಲ್ಲಿ ಪುರೂರವನೇ ಮೊದಲಾದ ದೊಡ್ಡ-ದೊಡ್ಡ ರಾಜರ ಪವಿತ್ರವಾದ ಕೀರ್ತಿಯ ಸಂಕೀರ್ತನವಿದೆ.

ಹಿಂದೆಯೇ ಅನೇಕ ಬಾರಿ ಹೇಳಿರುವಂತೆ ಸಹಸ್ರಶೀರ್ಷನಾದ, ವಿರಾಟ್‌ಪುರುಷನಾದ ಶ್ರೀಮನ್ನಾರಾಯಣನ ನಾಭಿಕಮಲದಿಂದ ಬ್ರಹ್ಮನು ಹುಟ್ಟಿದನು. ಅತ್ರಿಯು ಬ್ರಹ್ಮನ ಮಗನು. ಅವನು ತನ್ನ ಸದ್ಗುಣಗಳಿಂದ ಬ್ರಹ್ಮನಿಗೆ ಸಮಾನನೇ ಆಗಿದ್ದನು. ಅತ್ರಿಮಹರ್ಷಿಯ ಕಣ್ಣುಗಳಿಂದ ಅಮೃತಮಯನಾದ ಚಂದ್ರನು ಹುಟ್ಟಿದನು. ಬ್ರಹ್ಮನು ಚಂದ್ರನನ್ನು ಬ್ರಾಹ್ಮಣರಿಗೂ ಔಷಧಿಗಳಿಗೂ ಮತ್ತು ನಕ್ಷತ್ರಗಳಿಗೂ ಅಧಿಪತಿಯನ್ನಾಗಿ ಮಾಡಿದನು. ಚಂದ್ರನು ತನ್ನ ಅತುಲವಾದ ಪರಾಕ್ರಮದಿಂದ ಮೂರುಲೋಕಗಳನ್ನೂ ಜಯಿಸಿ ರಾಜಸೂಯಯಜ್ಞವನ್ನು ಮಾಡಿದನು. ಇದರಿಂದ ಕೊಬ್ಬಿದ ಚಂದ್ರನು ಬೃಹಸ್ಪತಿಯ ಪತ್ನಿಯಾದ ತಾರಾದೇವಿ

ಯನ್ನು ಬಲಾತ್ಕಾರಪೂರ್ವಕವಾಗಿ ಸೆಳೆದೊಯ್ದನು. ದೇವಗುರುವಾದ ಬೃಹಸ್ಪತಿಯು ತನ್ನ ಪತ್ನಿಯನ್ನು ಕಳುಹಿಸಿಕೊಡುವಂತೆ ಹಲವಾರು ಬಾರಿ ಚಂದ್ರನಿಗೆ ಹೇಳಿದನು. ಆದರೆ ಮದದಿಂದ ಕೊಬ್ಬಿಹೋಗಿದ್ದ ಚಂದ್ರನು ಆಕೆಯನ್ನು ಹಿಂದಕ್ಕೆ ಕಳುಹಿಸಲೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಇದೇ ಕಾರಣದಿಂದಲೇ ದೇವತೆಗಳಿಗೂ ದಾನವರಿಗೂ ಯುದ್ಧವು ಪ್ರಾರಂಭ ವಾಯಿತು. ಶುಕ್ರಾಚಾರ್ಯರು ಬೃಹಸ್ಪತಿಯ ಮೇಲಿನ ದ್ವೇಷದಿಂದಾಗಿ ಅಸುರರೊಡನೆ ಚಂದ್ರನ ಪಕ್ಷವನ್ನು ಸೇರಿದರು. ಮಹಾದೇವನು ಸ್ನೇಹ ವಶನಾಗಿ ಸಮಸ್ತವಾದ ಭೂತಗಣಗಳೊಡನೆ ತನ್ನ ವಿದ್ಯಾಗುರುವಾದ ಅಂಗಿರಸನ ಪುತ್ರ ಬೃಹಸ್ಪತಿಯ ಪಕ್ಷಕ್ಕೆ ಸೇರಿದನು. ದೇವರಾಜನಾದ ಇಂದ್ರನು ಕೂಡ ಸಮಸ್ತದೇವತೆಗಳೊಡನೆ ತನ್ನ ಗುರುವಾದ ಬೃಹಸ್ಪತಿಯ ಪಕ್ಷಕ್ಕೆ ಸೇರಿದನು. ಹೀಗೆ ತಾರೆಯ ನಿಮಿತ್ತವಾಗಿ ದೇವತೆಗಳಿಗೂ ಮತ್ತು ದಾನವರಿಗೂ ಸುರಾಸುರರ ವಿನಾಶಕ್ಕೆ ಕಾರಣವಾಗಬಹುದಾಗಿದ್ದ, ಘೋರ ವಾದ ಯುದ್ಧವು ಪ್ರಾರಂಭವಾಯಿತು.

ಬಳಿಕ ಅಂಗಿರಸಮಹರ್ಷಿಯು ಬ್ರಹ್ಮನ ಬಳಿಗೆ ಹೋಗಿ ಸರ್ವ ವಿನಾಶಕವಾದ ದೇವಾಸುರರ ಯುದ್ಧವನ್ನು ನಿಲ್ಲಿಸುವಂತೆ ಪ್ರಾರ್ಥಿಸಿ ಕೊಂಡನು. ವಿಶ್ವಕರ್ತೃವಾದ ಬ್ರಹ್ಮನು ಚಂದ್ರನನ್ನು ಗದರಿಸಿ ತಾರಾದೇವಿ ಯನ್ನು ಆಕೆಯ ಪತಿಯಾದ ಬೃಹಸ್ಪತಿಗೆ ಒಪ್ಪಿಸುವಂತೆ ಮಾಡಿದನು. ಪರ ಪುರುಷನ ಮನೆಯಲ್ಲಿದ್ದ ತನ್ನ ಪತ್ನಿಯು ಗರ್ಭವತಿಯಾಗಿರುವಳೆಂಬುದು ಬೃಹಸ್ಪತಿಗೆ ತಿಳಿದೊಡನೆಯೇ ಅವನು ತನ್ನ ಪತ್ನಿಗೆ ಹೇಳಿದನು :

"ಕೆಟ್ಟಬುದ್ಧಿಯವಳೇ! ನನ್ನ ಕ್ಷೇತ್ರದಲ್ಲಿ ಬೇರೆಯವರು ಗರ್ಭಾಧಾನ ಮಾಡಿಬಿಟ್ಟಿದ್ದಾರೆ. ಅದನ್ನು ನೀನೀಗಲೇ ಪರಿತ್ಯಜಿಸು. ನಿನ್ನಲ್ಲಿ ಕ್ಷಣಮಾತ್ರವೂ ಆ ಗರ್ಭವು ಇರಬಾರದು. ನಿನ್ನ ಈ ವ್ಯತಿಕ್ರಮಕ್ಕಾಗಿ ನಾನು ನಿನ್ನನ್ನು ದಹಿಸಹೋಗುವುದಿಲ್ಲ. ಏಕೆಂದರೆ : ನೀನು ಸ್ತ್ರೀಯಾಗಿರುವೆ. ಮೇಲಾಗಿ ನಿನ್ನಲ್ಲಿ ನನಗೆ ಸಂತಾನಪಡೆಯುವ ಆಶಯವೂ ಇದೆ."

ತಾರೆಯು ತನ್ನ ಪತಿಯ ಮಾತನ್ನು ಕೇಳಿ ನಾಚಿಕೆಗೊಂಡಳು. ಪತಿಯ ಮಾತಿನಂತೆ ಚಿನ್ನದ ಕಾಂತಿಯಿಂದ ಕೂಡಿದ್ದ ಶಿಶುವನ್ನು ಒಡನೆಯೇ

ವಿಸರ್ಜಿಸಿದಳು. ಶಿಶುವಿನ ದಿವ್ಯಕಾಂತಿಯನ್ನು ನೋಡಿ ಬೃಹಸ್ಪತಿ ಮತ್ತು ಸೋಮ ಇಬ್ಬರೂ ಆ ಶಿಶುವು ತಮಗೆ ಸೇರಿದವನಾಗಬೇಕೆಂದು ಆಶಿಸಿದರು. ಆಶಿಸಿದ್ದು ಮಾತ್ರವಲ್ಲ ; 'ಇದು ನನ್ನ ಮಗು' 'ನಿನ್ನ ಮಗುವಲ್ಲ ; ನನ್ನ ಮಗು'–ಎಂದು ಗಟ್ಟಿಯಾಗಿ ಕೂಗಾಡತೊಡಗಿದರು. ವಿವಾದವನ್ನು ಬಗೆಹರಿಸುವುದು ಅಷ್ಟು ಸುಲಭಸಾಧ್ಯವಾದ ಕಾರ್ಯವಾಗಿರಲಿಲ್ಲ. ದೇವತೆಗಳೂ ಮತ್ತು ಋಷಿ-ಮುನಿಗಳೂ ಸೇರಿ ಇದು ಯಾರಿಗೆ ಸೇರಿದ ಮಗುವೆಂದು ತಾರೆಯನ್ನೇ ಕೇಳಿದರು. ಲಜ್ಜೆಯ ಕಾರಣದಿಂದಾಗಿ ತಾರೆಯು ಉತ್ತರಿಸಲಿಲ್ಲ. ತನ್ನ ತಾಯಿಯ ತೋರಿಕೆಯ ಲಜ್ಜೆಯಿಂದ ಕುಪಿತನಾದ ಬಾಲಕನು ತಾಯಿಗೆ ಹೇಳಿದನು :

"ದುಷ್ಟಳೇ! ನೀನೇಕೆ ಮಾತನಾಡುತ್ತಿಲ್ಲ? ಕುತ್ಸಿತವಾದ ನಿನ್ನ ನಡವಳಿಕೆಯನ್ನು ಶೀಘ್ರವಾಗಿ ನನಗೆ ಹೇಳು. ಯಾರ ಮಗನೆಂಬುದನ್ನು ನಾನಾದರೂ ತಿಳಿಯಬೇಡವೇ?" ಕುಮಾರನ ಮಾತಿಗೂ ತಾರೆಯಿಂದ ಯಾವ ಉತ್ತರವೂ ಬರಲಿಲ್ಲ. ಆ ಸಮಯದಲ್ಲಿ ಬ್ರಹ್ಮನು ತಾರೆಯನ್ನು ಏಕಾಂತಸ್ಥಳಕ್ಕೆ ಕರೆದೊಯ್ದು ಅವಳನ್ನು ಸಾಂತ್ವನದ ಮಾತುಗಳಿಂದ ಸಮಾಧಾನಗೊಳಿಸುತ್ತಾ ಮಗುವು ಯಾರಿಗೆ ಸೇರಿದ್ದೆಂದು ಪ್ರಶ್ನಿಸಿದನು. ತಾರೆಯು ಮೆಲ್ಲನೆ ಹೇಳಿದಳು : 'ಸೋಮಸ್ಯ' 'ಈ ಮಗುವು ಚಂದ್ರನಿಗೆ ಸೇರಿದ್ದಾಗಿದೆ.' ಹಾಗೆ ತಾರೆಯು ಹೇಳುತ್ತಿದ್ದಂತೆಯೇ ಚಂದ್ರನು ಆ ಬಾಲಕನನ್ನು ಕರೆದುಕೊಂಡು ಹೊರಟುಹೋದನು.

ಪರೀಕ್ಷಿತ! ಬ್ರಹ್ಮನು ಆ ಬಾಲಕನಿಗೆ ಬುಧನೆಂದು ನಾಮಕರಣ ಮಾಡಿದನು. ಆ ಕುಮಾರನ ಬುದ್ಧಿಯು ಬಹಳ ಗಂಭೀರವಾಗಿದ್ದುದೇ ಬುಧನೆಂದು ಹೆಸರಿಡಲು ಕಾರಣವಾಯಿತು. ಅಂತಹ ಪರಮಬುದ್ಧಿಶಾಲಿಯಾದ ಪುತ್ರನನ್ನು ಪಡೆದು ಚಂದ್ರನು ಆನಂದತುಂದಿಲನಾದನು. ಬುಧನಿಗೆ ಇಲೆಯ ಗರ್ಭದಲ್ಲಿ ಪುರೂರವನು ಹುಟ್ಟಿದನು. ಈ ವಿಷಯವನ್ನು ನಾನು ಈ ಹಿಂದೆಯೇ ಹೇಳಿದ್ದೇನೆ. ಅಲ್ಲಿ ಹೇಳದಿರುವುದನ್ನು ಇಲ್ಲಿ ಮುಂದುವರಿಸಿ ಹೇಳುತ್ತೇನೆ.

ಹಿಂದೊಂದು ದಿನ ಇಂದ್ರನ ಸಭೆಯಲ್ಲಿ ನಾರದರು ಬುಧನ ಪುತ್ರನಾದ

ಪುರೂರವನ ಗುಣಗಳಾದ ಉದಾರತೆ-ಶೀಲ-ಸ್ವಭಾವ-ಧನ-ಸಂಪತ್ತು ಮತ್ತು ಪರಾಕ್ರಮಗಳನ್ನು ಹಾಡಿ-ಹೊಗಳುತ್ತಿದ್ದರು. ಆತನ ರೂಪ-ಲಾವಣ್ಯಗಳನ್ನು ಕೇಳಿದ ಅಪ್ಸರೆಯಾದ ಊರ್ವಶಿಯ ಮನಸ್ಸಿನಲ್ಲಿ ಅಂತಹ ಚೆಲುವನೊಡನೆ ನಲಿದಾಡಬೇಕೆಂಬ ಆಸೆಯುಂಟಾಯಿತು. ಮನ್ಮಥನ ಬಾಣಗಳಿಂದ ಪೀಡಿತಳಾಗಿದ್ದ ಅವಳು ಒಡನೆಯೇ ಭೂಲೋಕದಲ್ಲಿದ್ದ ಪುರೂರವನ ಬಳಿಗೆ ಹೋದಳು. ಮಿತ್ರಾವರುಣರು ಊರ್ವಶಿಗಿತ್ತಿದ್ದ ಶಾಪವು ಕೂಡ ಅವಳು ಭೂಲೋಕಕ್ಕೆ ಬರಲು ಒಂದು ಕಾರಣವಾಗಿತ್ತು. ಪುರುಷಶ್ರೇಷ್ಠನಾದ ಪುರೂರವನು ಮನ್ಮಥನಂತೆ ಕಡುಚೆಲುವನಾಗಿರುವನೆಂಬ ವಾರ್ತೆಯನ್ನು ನಾರದರಿಂದಲೇ ಅವಳು ಕೇಳಿದ್ದಳು. ಧೈರ್ಯವನ್ನು ತಂದುಕೊಂಡು ಊರ್ವಶಿಯು ತಾನಾಗಿಯೇ ಪುರೂರವನ ಬಳಿಗೆ ಹೋದಳು. ಕಡುಚೆಲುವೆಯಾದ ಆ ಅಪ್ಸರೆಯನ್ನು ನೋಡಿದೊಡನೆಯೇ ಪುರೂರವನ ಕಣ್ಣುಗಳು ವಿಕಸಿತವಾದುವು. ರೋಮಗಳು-ರೋಮಾಂಚನದಿಂದ ನಿಮಿರಿನಿಂತುವು. ಮೃದುವಾದ, ಸವಿಯಾದ ಮೆಲ್ಲನೆಯ ಮಾತುಗಳಿಂದ ಪುರೂರವನಿಂತೆಂದನು :

"ಚೆಲುವಿನ ರಾಣಿಯೇ! ನಾನು ನಿನ್ನನ್ನು ಸ್ವಾಗತಿಸುತ್ತೇನೆ. ಇಲ್ಲಿಯೇ ನನ್ನ ಬಳಿ ಕುಳಿತುಕೊ. ನಾನು ನಿನಗೆ ಯಾವ ಸೇವೆಯನ್ನು ಮಾಡಲಿ? ಒಲಿದು ಬಂದಿರುವ ಅರಗಿಣಿಯೇ! ನನ್ನೊಡನೆ ಕ್ರೀಡಿಸು. ನಮ್ಮ ಈ ಕ್ರೀಡೆಯು ಅನಂತಕಾಲದವರೆಗೂ ನಡೆಯುತ್ತಲೇ ಇರಲಿ."

"ಸುಂದರಾಂಗನೇ! ನೀನು ಸೌಂದರ್ಯಕ್ಕೆ ಮೂರ್ತಸ್ವರೂಪನಾಗಿ ರುವೆ. ದೃಷ್ಟಿ ಮತ್ತು ಮನಸ್ಸುಗಳನ್ನು ನಿನ್ನಂತಹ ಕಡುಚೆಲುವನಲ್ಲಿ ಲೀನಗೊಳಿಸದೇ ಇರುವ ಕಾಮಿನಿಯರು ಯಾರಿದ್ದಾರೆ? ನಿನ್ನ ಸಮೀಪಕ್ಕೆ ಸೆಳೆದು ತಂದಿರುವ ನನ್ನ ಮನಸ್ಸು ನಿನ್ನೊಡನೆ ಕ್ರೀಡಿಸಲು ತವಕಪಡುತ್ತಿದೆ. ಯಾವ ಪುರುಷನು ರೂಪದಿಂದಲೂ, ಗುಣದಿಂದಲೂ ಪ್ರಶಂಸನೀಯನಾಗಿ ರುವನೋ ಅಂತಹವನೇ ಸ್ತ್ರೀಯರಿಗೆ ಅಭೀಷ್ಟನಾಗುತ್ತಾನೆ. ಶ್ಲಾಘ್ಯಃ ಸ್ತ್ರೀಣಾಂ ವರಃ ಸ್ಮೃತಃ । ಆದುದರಿಂದ ನಾನು ಅವಶ್ಯವಾಗಿ ನಿನ್ನ ಅಭೀಷ್ಟವನ್ನು ಈಡೇರಿಸಿಕೊಡುತ್ತೇನೆ. ಆದರೆ ; ಪ್ರಿಯತಮನೇ! ನನ್ನದೊಂದು ಸಣ್ಣ ನಿಬಂಧನೆಯಿದೆ. ಅದನ್ನು ನೀನು ನಡೆಸಿಕೊಡಬೇಕಾಗು

ತ್ತದೆ. ನಿನ್ನಲ್ಲಿ ನಾನು ಅಡವಾಗಿ (ನ್ಯಾಸ) ಇಡಲಿರುವ ಈ ಎರಡು ಮೇಕೆಗಳನ್ನು ನೀನು ಜಾಗರೂಕತೆಯಿಂದ ರಕ್ಷಿಸಬೇಕು. ಕೇವಲ ತುಪ್ಪವು ನನಗೆ ಆಹಾರವಾಗಿರುತ್ತದೆ. ಮೈಥುನದ ಸಮಯದಲ್ಲಲ್ಲದೆ ಬೇರೆ ಯಾವಾಗಲೂ ನಾನು ನಿನ್ನನ್ನು ದಿಗಂಬರನಾಗಿ ನೋಡಲು ಅವಕಾಶವಿರಬಾರದು." ಕಾಮಿಯಾದವನು ಯಾವುದನ್ನು ತಾನೇ ಕೊಡದಿದ್ದಾನು? 'ತಥಾಸ್ತು'– ಎಂದು ಹೇಳುತ್ತಾ ಪುರೂರವನು ಅವಳ ನಿಬಂಧನೆಗಳೆಲ್ಲವನ್ನೂ ಒಪ್ಪಿ ಕೊಂಡನು. ಆನಂದತುಂದಿಲನಾದ ರಾಜನು ಉದ್ಗಾರಮಾಡಿದನು.

ಅಹೋ ರೂಪಮಹೋ ಭಾವೋ ನರಲೋಕವಿಮೋಹನಮ್ ।
ಕೋ ನ ಸೇವೇತ ಮನುಜೋ ದೇವೀಂ ತ್ವಾಂ ಸ್ವಯಮಾಗತಾಮ್ ॥

"ಆಹಾ! ಎಂತಹ ರೂಪ! ಭಲೇ! ಎಂತಹ ಭಾವ! ಎಂತಹ ಪ್ರೀತಿ! ಎಂತಹ ವಿಶ್ವಾಸ! ಅನಿರ್ವಚನೀಯ! ಅನಿರೀಕ್ಷಣೀಯ! ಈ ರೂಪ-ಭಾವಗಳು ಮನುಷ್ಯಲೋಕವನ್ನೇ ವಿಮೋಹಗೊಳಿಸುತ್ತವೆ. ನನ್ನೊಬ್ಬನ ವಿಷಯದಲ್ಲಿ ಹೇಳುವುದೇನಿದೆ? ತಾನಾಗಿಯೇ ಒಲಿದುಬಂದಿರುವ ದೇವೋಪಮಳಾದ ಕಡುಚೆಲುವೆಯಾದ ನಾರಿಯನ್ನು ಯಾವ ಮನುಷ್ಯನು ತಾನೇ ಸೇವಿಸುವುದಿಲ್ಲ?"

ಪರೀಕ್ಷಿತ! ಊರ್ವಶಿಯು ಕಾಮಶಾಸ್ತ್ರಾನುಸಾರವಾಗಿ ಪುರುಷಶ್ರೇಷ್ಠನಾದ ಪುರೂರವನೊಡನೆ ಕ್ರೀಡಿಸುತ್ತಿದ್ದಳು. ಪುರೂರವನೂ ದೇವತೆಗಳ ವಿಹಾರಸ್ಥಳವಾದ ಚೈತ್ರರಥ, ನಂದನವನ–ಇವೇ ಮುಂತಾದ ಸುಂದರವಾದ ಉದ್ಯಾನವನಗಳಲ್ಲಿ ಊರ್ವಶಿಯೊಡನೆ ಯಥೇಚ್ಛವಾಗಿ ಕ್ರೀಡಿಸುತ್ತಿದ್ದನು.

ಅಪ್ಸರೆಯ ಶರೀರದಿಂದ ಕಮಲದ ಕುಸುರಿನ ಗಂಧವು ಹೊರಸೂಸುತ್ತಿದ್ದಿತು. ಅಂತಹವಳೊಡನೆ ಪುರೂರವನು ಹಲವಾರು ವರ್ಷಗಳವರೆಗೆ ಆನಂದತುಂದಿಲನಾಗಿ ರತಿಕ್ರೀಡೆಯಾಡುತ್ತಿದ್ದನು. ಅವಳ ಮುಖದ ಸುಗಂಧವನ್ನು ಆಘ್ರಾಣಿಸುತ್ತಾ ರಾಜನು ಮರುಳಾಗಿಬಿಟ್ಟಿದ್ದನು.

ಸ್ವರ್ಗಲೋಕದಲ್ಲಿ ಇಂದ್ರನು ಬಹಳ ಕಾಲದಿಂದ ಊರ್ವಶಿಯನ್ನು ದೇವಸಭೆಯಲ್ಲಿ ಕಾಣದಿರಲು ಗಂಧರ್ವರಿಗೆ ಹೇಳಿದನು :

"ಗಂಧರ್ವರೇ! ಊರ್ವಶಿಯು ಎಲ್ಲಿಯೇ ಇದ್ದರೂ ಅವಳನ್ನೀಗಲೇ ಕರೆತನ್ನಿರಿ.

ಊರ್ವಶೀರಹಿತಂ ಮಹ್ಯಮಾಸ್ಥಾನಂ ನಾತಿಶೋಭತೇ ॥೨೬॥

ಊರ್ವಶಿಯಿಲ್ಲದ ನನ್ನ ಈ ಸಭಾಭವನವು ಸ್ವಲ್ಪವಾದರೂ ಶೋಭಾಯಮಾನವಾಗಿ ನನಗೆ ಕಾಣುತ್ತಿಲ್ಲ."

ಇಂದ್ರನ ಆಜ್ಞೆಯಂತೆ ಗಂಧರ್ವರು ಅರ್ಧರಾತ್ರಿಯ ಸಮಯದಲ್ಲಿ ಕಗ್ಗತ್ತಲೆಯು ಕವಿದಿದ್ದಾಗ ಊರ್ವಶಿಯಿದ್ದಲ್ಲಿಗೆ ಹೋದರು. ಊರ್ವಶಿಯು ರಾಜನಲ್ಲಿ ನ್ಯಾಸರೂಪವಾಗಿಟ್ಟಿದ್ದ ಎರಡು ಮೇಕೆಗಳನ್ನು ಅವರು ಅಪಹರಿಸಿದರು. ಗಂಧರ್ವರು ಸೆಳೆದೊಯ್ಯುತ್ತಿದ್ದಾಗ ಮೇಕೆಗಳು 'ಮೇ-ಮೇ'–ಎಂದು ಕಿರುಚಿಕೊಂಡುವು. ಆ ರೋದನಧ್ವನಿಯನ್ನು ಕೇಳಿ ಊರ್ವಶಿಯು ತನಗೆ ಮಕ್ಕಳಂತೆಯೇ ಇದ್ದ ಮೇಕೆಯ ಮರಿಗಳನ್ನು ಗಂಧರ್ವರು ಅಪಹರಿಸಿಕೊಂಡು ಹೋಗುತ್ತಿರುವುದನ್ನು ನೋಡಿದಳು. ಒಡನೆಯೇ ಆಕೆಯು ಬೊಬ್ಬೆಯಿಡಲು ಪ್ರಾರಂಭಿಸಿದಳು.

ಹತಾಸ್ಮ್ಯಹಂ ಕುನಾಥೇನ ನಪುಂಸಾ ವೀರಮಾನಿನಾ ॥೨೮॥
ಯದ್ವಿಶ್ರಮ್ಭಾದಹಂ ನಷ್ಟಾ ಹೃತಾಪತ್ಯಾ ಚ ದಸ್ಯುಭಿಃ ।
ಯಃ ಶೇತೇ ನಿಶಿ ಸಂತ್ರಸ್ತೋ ಯಥಾ ನಾರೀ ದಿವಾ ಪುಮಾನ್ ॥

"ಅಯ್ಯೋ! ಈ ಹೇಡಿಯನ್ನು ಪತಿಯನ್ನಾಗಿ ಮಾಡಿಕೊಂಡು ನಾನು ಸತ್ತೆ! ನಾನು ಕೆಟ್ಟೆ! ಮಹಾವೀರನೆಂದು ಭಾವಿಸಿಕೊಂಡಿರುವ ಇವನೊಬ್ಬ ನಪುಂಸಕನೇ ಸರಿ. ನಿಕ್ಷೇಪರೂಪವಾಗಿ ಇವನಲ್ಲಿರಿಸಿದ್ದ ನನ್ನೆರಡು ಮಕ್ಕಳನ್ನೂ ಈ ಹೇಡಿಯು ರಕ್ಷಿಸಲಾರದೇ ಹೋದನು. ಇವನಲ್ಲಿ ವಿಶ್ವಾಸವನ್ನಿಟ್ಟ ಕಾರಣ ನನ್ನ ಮಕ್ಕಳನ್ನು ಕಳ್ಳರು ಅಪಹರಿಸಿಕೊಂಡು ಹೋಗುತ್ತಿದ್ದಾರೆ. ಇವನಾದರೋ ಹಗಲಿನಲ್ಲಿ ಪುರುಷನಂತೆ ತೋರ್ಪಡಿಸಿಕೊಳ್ಳುತ್ತಾ ರಾತ್ರಿಯಲ್ಲಿ ಹೆಂಗಸಿನಂತೆ ಹೆದರಿಕೊಂಡು ಮಲಗಿದ್ದಾನೆ. ಇಂತಹ ಹೇಡಿಯನ್ನು ಕಟ್ಟಿಕೊಂಡಿರುವ ನಾನು ಈಗೇನು ಮಾಡಲಿ?"

ಪರೀಕ್ಷಿತನೇ! ಹೀಗೆ–ಆನೆಯನ್ನು ಅಂಕುಶದಲ್ಲಿ ತಿವಿಯುವಂತೆ ಊರ್ವಶಿಯು ತನ್ನ ಗಂಡನನ್ನು ಚುಚ್ಚುಮಾತುಗಳ ರೂಪವಾದ ಅಂಕುಶ

ದಿಂದ ಪುನಃ ಪುನಃ ತಿವಿಯುತ್ತಿದ್ದಳು. ತನ್ನ ಪ್ರೇಯಸಿಯು ಹೀಗೆ ಹೇಳುತ್ತಿದ್ದುದನ್ನು ಕೇಳಿ ರಾಜನಿಗೆ ತುಂಬಾ ಕೋಪ ಬಂದಿತು. ಹಿಂದು-ಮುಂದು ನೋಡದೆ ಆತನು ನಗ್ನನಾಗಿಯೇ ಕತ್ತಿಯನ್ನು ಹಿಡಿದು ಮೇಕೆಮರಿಗಳನ್ನು ಹಿಡಿದುಕೊಂಡು ಹೋಗುತ್ತಿದ್ದ ಗಂಧರ್ವರ ಕಡೆಗೆ ಧಾವಿಸಿದನು. ಒಡನೆಯೇ ಗಂಧರ್ವರು ಮೇಕೆಮರಿಗಳನ್ನು ಬಿಟ್ಟು ಮಿಂಚಿನಂತೆ ಪ್ರಕಾಶಿಸಿದರು. ಪುರೂರವನು ಮೇಕೆಮರಿಗಳನ್ನು ಹಿಡಿದುಕೊಂಡು ಹಿಂದಿರುಗಿದಾಗ ದಿಗಂಬರನಾಗಿದ್ದ ರಾಜನನ್ನು ಊರ್ವಶಿಯು ನೋಡಿದಳು. ಆ ಕ್ಷಣದಲ್ಲಿಯೇ ಆಕೆಯು ಪುರೂರವನನ್ನು ಬಿಟ್ಟು ಹೊರಟುಹೋದಳು.

ಶಯನಾಗಾರದಲ್ಲಿ ರಾಜನು ಪ್ರಿಯತಮೆಯಾದ ಊರ್ವಶಿಯನ್ನು ಕಾಣದೆ ಬುದ್ಧಿಗೆಟ್ಟನು. ಅವನ ಮನಸ್ಸು ಅಪ್ಸರೆಯಲ್ಲಿಯೇ ಲೀನವಾಗಿ ಹೋಗಿದ್ದಿತು. ಅವಳಿಗಾಗಿ ಶೋಕಿಸುತ್ತಾ ಆತಂಕಗೊಂಡು ಹುಚ್ಚನಂತೆ ಆತನು ಭೂಮಂಡಲದಲ್ಲಿ ಅಲೆದಾಡತೊಡಗಿದನು. ಹೀಗೆಯೇ ಅಲೆದಾಡುತ್ತಿದ್ದಾಗ ಒಮ್ಮೆ ಕುರುಕ್ಷೇತ್ರದಲ್ಲಿ ಸರಸ್ವತೀನದಿಯ ತೀರದಲ್ಲಿ ಊರ್ವಶಿಯನ್ನೂ ಮತ್ತು ಪ್ರಸನ್ನಮುಖಿಯರಾದ ಆಕೆಯ ಐವರು ಸಖಿಯರನ್ನೂ ರಾಜನು ನೋಡಿದನು. ಆಗ ಆತನ ಮುಖವರಳಿತು. ಆನಂದತುಂದಿಲನಾಗಿ ಸುಮಧುರವಾದ ಮಾತಿನಿಂದ ಆತನು ಆಕೆಯನ್ನು ಬೇಡಿಕೊಂಡನು :

(ಶ್ಲೋಕ 30-33)

ಅಹೋ ಜಾಯೇ ತಿಷ್ಠ ತಿಷ್ಠ ಘೋರೇ ನ ತ್ಯಕ್ತುಮರ್ಹಸಿ ।
ಮಾಂ ತ್ವಮದ್ಯಾಪ್ಯನಿರ್ವೃತ್ಯ ವಚಾಂಸಿ ಕೃಣವಾವಹೈ ॥೩೪॥

"ಪ್ರೇಯಸಿಯೇ! ಸ್ವಲ್ಪಹೊತ್ತು ನಿಲ್ಲು. ನನ್ನದೊಂದು ಮಾತನ್ನು ಕೇಳು. ಕಠೋರವಾದ ಮನಸ್ಸನ್ನು ಹೊಂದಿರುವವಳೇ! ಇಂದು ನೀನು ನನ್ನನ್ನು ಸುಖಿಯನ್ನಾಗಿ ಮಾಡದೆ ಖಂಡಿತವಾಗಿಯೂ ಹೋಗಬಾರದು. ಕ್ಷಣಕಾಲವಾದರೂ ನಿಲ್ಲು. ನಾವಿಬ್ಬರೂ ಕಲೆತು ಸ್ವಲ್ಪ ಹೊತ್ತಾದರೂ ಮಾತನಾಡೋಣ.

ದೇವಿ! ನೀನು ಅನುಗ್ರಹಿಸದಿದ್ದಲ್ಲಿ ನಿನ್ನಿಂದಲೇ ಇಷ್ಟುದೂರದವರೆಗೆ ಸೆಳೆಯಲ್ಪಟ್ಟಿರುವ ಈ ಸುಂದರವಾದ ದೇಹವು ಇಷ್ಟರಲ್ಲಿಯೇ ಬಿದ್ದುಹೋಗುತ್ತದೆ. ನಿನ್ನ ಕಣ್ಣೆದುರಿಗೇ ಬಿದ್ದುಹೋದ ಈ ದೇಹವನ್ನು ತೋಳಗಳೂ

ಹದ್ದುಗಳೂ ತಿಂದುಹಾಕುತ್ತವೆ. ಅನಂತರ ನೀನು ಅನುಗ್ರಹಿಸಿದರೂ ಪ್ರಯೋಜನವಾಗುವುದಿಲ್ಲ. ಈಗಲೇ ನನ್ನನ್ನು ಅನುಗ್ರಹಿಸು. ನನ್ನ ಮೇಲೆ ದಯೆತೋರು. ನನ್ನೊಡನೆ ಮಾತನಾಡು."

"ಮಹಾರಾಜ! ನೀನು ಪುರುಷನಾಗಿರುವೆ. ಹೆಂಗಸಿನ ಸಲುವಾಗಿ ಸಾಯುವುದು ಉಚಿತವಲ್ಲ. ನೀನು ಸಾಯುವುದು ಬೇಡ. ಸತ್ತನಂತರ ತೋಳಗಳೂ ನಿನ್ನನ್ನು ತಿನ್ನುವುದು ಬೇಡ. ಹೆಂಗಸರ ಹೃದಯವೂ ತೋಳ ಗಳ ಹೃದಯವೂ ಒಂದೇ ಆಗಿರುತ್ತದೆ.

ಸ್ತ್ರಿಯೋ ಹ್ಯಕರುಣಾಃ ಕ್ರೂರಾ ದುರ್ಮರ್ಷಾಃ ಪ್ರಿಯಸಾಹಸಾಃ ।
ಘ್ನನ್ತ್ಯಲ್ಪಾರ್ಥೇಽಪಿ ವಿಶ್ರಬ್ಧಂ ಪತಿಂ ಭ್ರಾತರಮಪ್ಯುತ ॥೩೭॥

ವಿಧಾಯಾಲೀಕವಿಶ್ರಮ್ಭಮಜ್ಞೇಷು ತ್ಯಕ್ತಸೌಹೃದಾಃ ।
ನವಂ ನವಮಭೀಪ್ಸನ್ತ್ಯಃ ಪುಂಶ್ಚಲ್ಯಃ ಸ್ವೈರವೃತ್ತಯಃ ॥೩೮॥

ಮಹಾರಾಜ! ನನ್ನಂತಹ ಹೆಂಗಸರು ಯಾವಾಗಲೂ ದಯಾ ಹೀನರು. ಕ್ರೌರ್ಯವು ಅವರ ಸ್ವಾಭಾವಿಕವಾದ ಗುಣವೇ ಆಗಿರುತ್ತದೆ. ತಾಳ್ಮೆ ಯಿಲ್ಲದವರು. ಪ್ರಿಯವಾದುದನ್ನು ಪಡೆಯುವ ಸಲುವಾಗಿ ಅಸಾಧ್ಯವಾದ ಕಾರ್ಯವನ್ನು ಮಾಡಲು ಹೋಗುತ್ತಾರೆ. ವಿಶ್ವಾಸವನ್ನಿಟ್ಟಿರುವ ಪತಿಯ ನ್ನಾಗಲೀ ಸಹೋದರನನ್ನಾಗಲೀ ಅತ್ಯಲ್ಪವಾದ ಪ್ರಯೋಜನಕ್ಕಾಗಿ ಕೊಂದೇ ಹಾಕುತ್ತಾರೆ. ಅವರ ಹೃದಯದಲ್ಲಿ ಸೌಹಾರ್ದವೆಂಬುದು ಎಳ್ಳಷ್ಟಾದರೂ ಇರುವುದಿಲ್ಲ. ಪುಂಶ್ಚಲಿ (ಬಜಾರಿ) ಯರಾದ ಈ ಸ್ತ್ರೀಯರು ಅರಿಯದವರಿಗೆ ತೋರಿಕೆಯ ವಿಶ್ವಾಸವನ್ನು ತೋರಿಸುತ್ತಾ ಸ್ವಲ್ಪವಾದರೂ ಮರುಕವಿಲ್ಲದೆ ಹೊಸಹೊಸ ಗಂಡಸರನ್ನು ಹುಡುಕುತ್ತಾ ಸ್ವೇಚ್ಛೆಯಿಂದ ತಿರುಗುತ್ತಿರುತ್ತಾರೆ.

ಮಹಾರಾಜ! ನಾನು ಹೀಗೆ ಹೇಳಿದುದರಿಂದ ನೀನು ನಿರಾಶನಾಗ ಬೇಕಾಗಿಲ್ಲ. ವರ್ಷಕ್ಕೊಮ್ಮೆ ಒಂದು ರಾತ್ರಿ ನೀನು ನನ್ನೊಡನೆ ಇರಬಹು ದಾಗಿದೆ. ನನ್ನಿಂದ ನಿನಗೆ ಬೇರೆಯ ಸಂತಾನವೂ ಆಗುತ್ತದೆ."

ರಾಜನ ಮನಸ್ಸಿಗೆ ಸ್ವಲ್ಪ ಸಮಾಧಾನವಾಯಿತು. ಊರ್ವಶಿಯು ಗರ್ಭವತಿಯಾಗಿರುವುದನ್ನೂ ರಾಜನು ಗಮನಿಸಿದನು. ಇದರಿಂದ ಸಂತುಷ್ಟ

ನಾದ ರಾಜನು ಊರ್ವಶಿಗಾಗಿ ಭೂಮಂಡಲದಲ್ಲಿ ಅಲೆದಾಡುವುದನ್ನು ಬಿಟ್ಟು ರಾಜಧಾನಿಗೆ ಹಿಂದಿರುಗಿದನು. ಒಂದು ವರ್ಷವು ಕಳೆದನಂತರ ಪುರೂರವನು ಊರ್ವಶಿಯು ಹೇಳಿದ ಸ್ಥಳಕ್ಕೆ ಆಗಮಿಸಿದನು. ಊರ್ವಶಿಯು ವೀರಪುತ್ರನ ತಾಯಿಯಾಗಿದ್ದಳು. ಊರ್ವಶಿಯ ಸಮಾಗಮದಿಂದ ರಾಜನಿಗೆ ಮಹಾನಂದವಾಯಿತು. ಅವಳೊಡನೆ ಆತನು ರಾತ್ರಿಯನ್ನು ಸುಖವಾಗಿ ಕಳೆದನು. ಪ್ರಾತಃಕಾಲವಾಗುತ್ತಲೇ ಒಬ್ಬರನ್ನೊಬ್ಬರು ಬಿಟ್ಟು ಹೋಗಬೇಕಾದ ಸಮಯವು ಹತ್ತಿರವಾಗಲು ರಾಜನು ವಿರಹವೇದನೆ ಯಿಂದ ಬಹಳವಾಗಿ ದುಃಖಿಸತೊಡಗಿದನು. ವಿರಹದ ದುಃಖದಿಂದ ಅತ್ಯಂತ ದೀನನಾಗಿದ್ದ ರಾಜನನ್ನು ಕುರಿತು ಊರ್ವಶಿಯು ಹೇಳಿದಳು :

"ಮಹಾರಾಜ! ನೀನು ಗಂಧರ್ವರನ್ನು ಸ್ತೋತ್ರಮಾಡು. ಪ್ರಸನ್ನರಾದ ಅವರೇನಾದರೂ ಇಷ್ಟಪಟ್ಟರೆ ನನ್ನನ್ನು ನಿನಗೆ ಒಪ್ಪಿಸಿಕೊಡಬಹುದು."

ಪರೀಕ್ಷಿತನೇ! ಊರ್ವಶಿಯ ಸಲಹೆಯಂತೆ ಪುರೂರವನು ಗಂಧರ್ವರನ್ನು ಸ್ತೋತ್ರಮಾಡಿದನು. ಪುರೂರವನ ಸ್ತೋತ್ರದಿಂದ ಸುಪ್ರೀತರಾದ ಗಂಧರ್ವರು ಆತನಿಗೆ ಒಂದು ಅಗ್ನಿಸ್ಥಾಲಿಯನ್ನು ಕೊಟ್ಟರು. ರಾಜನು ಆ ಅಗ್ನಿಸ್ಥಾಲಿಯನ್ನೇ ಊರ್ವಶಿಯೆಂದು ಭಾವಿಸಿ ಅದನ್ನು ತಬ್ಬಿಕೊಂಡು ಓಡಾಡುತ್ತಿದ್ದನು. ಸ್ವಲ್ಪ ದಿವಸಗಳು ಕಳೆದನಂತರ ರಾಜನಿಗೆ–ಗಂಧರ್ವರು ನಿಜವಾದ ಅಗ್ನಿಸ್ಥಾಲಿಯನ್ನೇ ಕೊಟ್ಟಿರುವ, ಅಗ್ನಿಸ್ಥಾಲಿಯ ರೂಪದಲ್ಲಿ ಊರ್ವಶಿಯಿಲ್ಲವೆಂಬುದರ ಅರಿವಾಯಿತು. ಅನಂತರ ರಾಜನು ಅಗ್ನಿಸ್ಥಾಲಿಯನ್ನು ಅರಣ್ಯದಲ್ಲಿಯೇ ಬಿಟ್ಟು ಅರಮನೆಗೆ ಹಿಂದಿರುಗಿದನು. ರಾತ್ರಿಯ ವೇಳೆಯಲ್ಲಿ ರಾಜನು ಸದಾ ಊರ್ವಶಿಯನ್ನೇ ಧ್ಯಾನಿಸುತ್ತಿದ್ದನು. ಆ ವೇಳೆಗೆ ಕೃತಯುಗವು ಕಳೆದು ತ್ರೇತಾಯುಗವು ಪ್ರಾರಂಭವಾಯಿತು. ಪುರೂರವನ ಹೃದಯದಲ್ಲಿ ಋಗ್ಯಜುಸ್ಸಾಮವೇದಗಳು ಪ್ರಕಟವಾದುವು. ಮೂರು ವೇದಗಳನ್ನೂ ಹೃದಯದಲ್ಲಿ ಕಂಡುಕೊಂಡ ರಾಜನು ಅಗ್ನಿಸ್ಥಾಲಿಯಿದ್ದ ಅರಣ್ಯಕ್ಕೆ ಧಾವಿಸಿದನು. ಅಲ್ಲಿ ಬನ್ನಿಮರದ ಮಧ್ಯದಲ್ಲಿ ಒಂದು ಅರಳೀಮರವು ಹುಟ್ಟಿಕೊಂಡಿದ್ದಿತು. ಅದನ್ನು ಕಂಡ ರಾಜನು ಅವುಗಳಿಂದ ಅಗ್ನಿಯನ್ನು ಕಡೆಯುವ ಎರಡು ದಾರುಗಳನ್ನು ಸಿದ್ಧಪಡಿಸಿದನು.

ಊರ್ವಶೀಲೋಕಕ್ಕೆ ಹೋಗಬೇಕೆಂಬ ಕಾಮನೆಯಿಂದ ಪುರೂರವನು ಕೆಳಗಿನ ಅರಣಿಯನ್ನು ಊರ್ವಶಿಯನ್ನಾಗಿಯೂ ಮೇಲಿನ ಅರಣಿಯನ್ನು ಪುರೂರವನನ್ನಾಗಿಯೂ ಮಧ್ಯದ ಅರಣಿಯನ್ನು ಪುತ್ರನ ರೂಪದಲ್ಲಿಯೂ ಭಾವಿಸಿಕೊಂಡು ಅಗ್ನಿಯನ್ನು ಪ್ರಜ್ಜ್ವಲಿಸುವ ಮಂತ್ರಗಳಿಂದ ಅವುಗಳನ್ನು ಕಡೆದನು. ಅರಣಿಗಳನ್ನು ಕಡೆದುದರ ಪರಿಣಾಮವಾಗಿ ಜಾತವೇದಸನೆಂಬ ಅಗ್ನಿಯು ಪ್ರಾದುರ್ಭವಿಸಿದನು. ಪುರೂರವನು ಅಗ್ನಿಯನ್ನು ತ್ರಯೀವಿದ್ಯೆಗಳ (ಮೂರು ವೇದಗಳ) ಮೂಲಕವಾಗಿ ಆಹವನೀಯ-ಗಾರ್ಹಪತ್ಯ-ದಕ್ಷಿಣಾಗ್ನಿಗಳೆಂಬ ಮೂರು ವಿಭಾಗಗಳನ್ನಾಗಿ ಮಾಡಿದನು. ಪುತ್ರರ ರೂಪ ದಲ್ಲಿ ಆ ಮೂವರು ಅಗ್ನಿಗಳನ್ನೂ ರಾಜನು ಪ್ರತಿಗ್ರಹಿಸಿದನು. ಪುನಃ ರಾಜನು ಊರ್ವಶಿಯಲೋಕವನ್ನು ಸೇರಬೇಕೆಂಬ ಇಚ್ಛೆಯಿಂದ ಆ ಮೂರು ಅಗ್ನಿಗಳ ಮೂಲಕವಾಗಿ ಸರ್ವದೇವತಾಸ್ವರೂಪನಾದ, ಇಂದ್ರಿಯಾತೀತನಾದ ಯಜ್ಞಪತಿಯಾದ ಶ್ರೀಹರಿಯನ್ನು ಆರಾಧಿಸಿದನು.

ಪರೀಕ್ಷಿತನೇ! ತ್ರೇತಾಯುಗಕ್ಕೆ ಹಿಂದಿನದಾದ ಸತ್ಯಯುಗದಲ್ಲಿ ಓಂಕಾರವು ಮಾತ್ರವೇ ಇದ್ದಿತು. ಅದೇ ಸರ್ವವೇದಮಯವಾಗಿದ್ದಿತು. ಸಮಸ್ತ ವೇದಶಾಸ್ತ್ರಗಳು ಓಂಕಾರದಲ್ಲಿಯೇ ಅಂತರ್ಭೂತವಾಗಿದ್ದುವು. ನಾರಾಯಣನೊಬ್ಬನನ್ನು ಬಿಟ್ಟು ಬೇರೆ ಯಾವ ದೇವತೆಯೂ ಇರಲಿಲ್ಲ. ಅಗ್ನಿತ್ರಯಗಳೂ ಇರಲಿಲ್ಲ. ಏಕಮಾತ್ರ ಅಗ್ನಿಯಿದ್ದಿತು. ವರ್ಣಗಳೂ ಯಾವುವೂ ಇರಲಿಲ್ಲ. ಕೇವಲ ಹಂಸವೆಂಬ ವರ್ಣವು ಮಾತ್ರವೇ ಇದ್ದಿತು. ತ್ರೇತಾಯುಗದ ಪ್ರಾರಂಭದಲ್ಲಿ ಪುರೂರವನಿಂದಲೇ ವೇದತ್ರಯಗಳೂ ಅಗ್ನಿತ್ರಯಗಳೂ ಪ್ರಾದುರ್ಭವಿಸಿದುವು. ಪುರೂರವನು ಅಗ್ನಿಯನ್ನು ಸಂತಾನರೂಪದಲ್ಲಿ ಪ್ರತಿಗ್ರಹಿಸಿ ತಾನು ಕಾಮಿಸಿದ್ದ ಊರ್ವಶಿಯ ಲೋಕವನ್ನು ಸೇರಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧೪ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೫ನೆಯ ಅಧ್ಯಾಯ

ಋಚೀಕ-ಜಮದಗ್ನಿ ಮತ್ತು ಪರಶುರಾಮರ ಚರಿತ್ರೆ

ಶ್ರೀಶುಕರು ಹೇಳುತ್ತಾರೆ :

ಐಲಸ್ಯ ಚೋರ್ವಶೀಗರ್ಭಾತ್ ಷಡಾಸನ್ನಾತ್ಮಜಾ ನೃಪ ।
ಆಯುಃ ಶ್ರುತಾಯುಃ ಸತ್ಯಾಯೂ ರಯೋಽಥ ವಿಜಯೋ ಜಯಃ ॥

ಪರೀಕ್ಷಿತಮಹಾರಾಜ! ಊರ್ವಶಿಯ ಗರ್ಭದಿಂದ ಪುರೂರವನಿಗೆ ಆಯು, ಶ್ರುತಾಯು, ಸತ್ಯಾಯು, ರಯ, ವಿಜಯ ಮತ್ತು ಜಯರೆಂಬ ಆರು ಮಕ್ಕಳು ಹುಟ್ಟಿದರು.

ಶ್ರುತಾಯುವಿಗೆ ವಸುಮಂತನೆಂಬ ಮಗನು ಹುಟ್ಟಿದನು. ಸತ್ಯಾಯು ವಿಗೆ ಶ್ರುತಂಜಯನೆಂಬ ಮಗನೂ, ರಯನಿಗೆ ಏಕ–ಎಂಬ ಮಗನೂ, ಜಯನಿಗೆ ಅಮಿತನೆಂಬ ಮಗನೂ, ವಿಜಯನಿಗೆ ಭೀಮನೆಂಬ ಮಗನೂ ಹುಟ್ಟಿದರು. ಭೀಮನ ಮಗ ಕಾಂಚನ. ಕಾಂಚನನ ಮಗ ಹೋತ್ರನೆಂಬು ವನು. ಹೋತ್ರನ ಮಗ ಜಹ್ನು. ಮಹಾಮಹಿಮನಾದ ಈ ಜಹ್ನುವೇ ಗಂಗಾ ನದಿಯನ್ನು ಕೈತುಂಬ ತುಂಬಿಕೊಂಡು ಪ್ರಾಶನ ಮಾಡಿಬಿಟ್ಟನು. ಜಹ್ನುವಿನ ಮಗ ಪುರು. ಪುರುವಿನ ಮಗ ಬಲಾಕ. ಬಲಾಕನ ಮಗ ಅಜಕ. ಅಜಕನ ಮಗ ಕುಶ. ಈ ಕುಶನಿಗೆ ಕುಶಾಂಬು, ತನಯ, ವಸು ಮತ್ತು ಕುಶನಾಭ ರೆಂಬ ನಾಲ್ವರು ಮಕ್ಕಳಿದ್ದರು. ಕುಶಾಂಬುವಿನ ಮಗ ಗಾಧಿ. ಗಾಧಿಗೆ ಸತ್ಯವತಿಯೆಂಬ ಮಗಳಿದ್ದಳು. ಋಚೀಕನು ಸತ್ಯವತಿಯನ್ನು ಮದುವೆ ಮಾಡಿಕೊಡುವಂತೆ ಗಾಧಿಯನ್ನು ಪ್ರಾರ್ಥಿಸಿದನು. ಆದರೆ ಗಾಧಿಯು ತನ್ನ ಮಗಳಾದ ಸತ್ಯವತಿಗೆ ಋಚೀಕನು ಅನುರೂಪನಾದ ವರನೆಂದು ಭಾವಿಸಲಿಲ್ಲ. ಮಹರ್ಷಿಯಾದ ಋಚೀಕನಿಗೆ ಕನ್ಯೆಯನ್ನು ಕೊಡೆನೆಂದು ಹೇಳಲೂ ಗಾಧಿಗೆ ಸಾಧ್ಯವಾಗಲಿಲ್ಲ. ಒಂದು ನಿಬಂಧನೆಯೊಡನೆ ಗಾಧಿಯು ತನ್ನ ಮಗಳನ್ನು ಋಚೀಕನಿಗೆ ಮದುವೆಮಾಡಿಕೊಡಲು ಒಪ್ಪಿದನು.

"ಮುನಿಶ್ರೇಷ್ಠನೇ! ನಾವು ಕುಶಿಕನ ವಂಶೀಯರು. ನಮ್ಮ ವಂಶ ದಿಂದ ಕನ್ಯೆಯನ್ನು ಪಡೆಯುವುದು ಸ್ವಲ್ಪ ದುಸ್ತರವೇ ಆಗುತ್ತದೆ. ಕನ್ಯಾ

ಶುಲ್ಕವನ್ನು ಕೊಟ್ಟು ಮದುವೆಯಾಗಬೇಕಾಗುತ್ತದೆ. ನೀನು ಒಂದು ಸಾವಿರ ಕುದುರೆಗಳನ್ನು ನನಗೆ ಕನ್ಯಾಶುಲ್ಕವಾಗಿ ಕೊಡಬೇಕು. ಆ ಕುದುರೆಗಳ ಶರೀರವೆಲ್ಲವೂ ಬಿಳುಪಾಗಿರಬೇಕು. ಆದರೆ ಅವುಗಳ ಒಂದು ಕಿವಿಯು ಮಾತ್ರ ಕಪ್ಪಾಗಿರಬೇಕು. ಇಂತಹ ಲಕ್ಷಣಗಳುಳ್ಳ ಒಂದು ಸಾವಿರ ಕುದುರೆ ಗಳನ್ನು ಕನ್ಯಾಶುಲ್ಕವಾಗಿ ಕೊಡಬೇಕು.''

ಹೀಗೆ ಹೇಳಿದ ಗಾಧಿಯ ಅಭಿಪ್ರಾಯವೇನೆಂಬುದು ಋಚೀಕನಿಗೆ ತಿಳಿದುಹೋಯಿತು. ಆದರೂ ಅವನು ಅಧೀರನಾಗಲಿಲ್ಲ. ವರುಣನ ಬಳಿಗೆ ಹೋಗಿ ಅಂತಹುದೇ ಒಂದು ಸಾವಿರ ಕುದುರೆಗಳನ್ನು ಪಡೆದುಕೊಂಡು ಗಾಧಿಗೆ ತಂದೊಪ್ಪಿಸಿದನು. ಋಚೀಕನೊಡನೆ ಸತ್ಯವತಿಯ ವಿವಾಹವಾಯಿತು.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಸತ್ಯವತಿ ಮತ್ತು ಅವಳ ತಾಯಿ-ಇಬ್ಬರೂ ಸಂತಾನಾರ್ಥವಾಗಿ ಋಚೀಕನನ್ನು ಪ್ರಾರ್ಥಿಸಿದರು. ಋಚೀಕನು ಪತ್ನೀ ಮತ್ತು ಅತ್ತೆಯ ಪ್ರಾರ್ಥನೆಗಳನ್ನು ಅಂಗೀಕರಿಸಿ ಇಬ್ಬರಿಗೂ ಪ್ರತ್ಯೇಕ-ಪ್ರತ್ಯೇಕವಾದ ಎರಡು ಮಂತ್ರಗಳಿಂದ ಚರುವನ್ನು ಬೇಯಿಸಿಟ್ಟು ಸ್ನಾನಮಾಡಲು ಹೋದನು. ಇತ್ತಲಾಗಿ ಮಗಳಿಗೆ ಶ್ರೇಷ್ಠವಾದ ಚರುವನ್ನು ಅಳಿಯನು ಸಿದ್ಧಗೊಳಿಸಿರುವನೆಂದು ಸತ್ಯವತಿಯ ತಾಯಿಯು ಭಾವಿಸಿ ಮಗಳಿಗೆ ಹೇಳಿದಳು : 'ಸತ್ಯವತಿ! ನಿನಗೆ ಸಿದ್ಧಪಡಿಸಿರುವ ಚರುವನ್ನು ನನಗೆ ಕೊಡು'. ತಾಯಿಯ ಮಾತನ್ನು ಮೀರಲಾರದೆ ಸತ್ಯವತಿಯು ತನಗಾಗಿ ಋಚೀಕನು ಸಿದ್ಧಪಡಿಸಿದ್ದ ಚರುವನ್ನು ತಾಯಿಗೆ ಕೊಟ್ಟು ತಾಯಿಗೆ ಸಿದ್ಧಪಡಿಸಿದ್ದ ಚರುವನ್ನು ತಾನು ಭಕ್ಷಿಸಿದಳು. ಋಚೀಕನಿಗೆ ಈ ವಿಷಯವು ತಿಳಿದೊಡನೆಯೇ ಖಿನ್ನನಾದ ಆ ಮಹರ್ಷಿಯು ಸತ್ಯವತಿಗೆ ಹೇಳಿದನು :

ಘೋರೋ ದಣ್ಡಧರಃ ಪುತ್ರೋ ಭ್ರಾತಾ ತೇ ಬ್ರಹ್ಮವಿತ್ತಮಃ ॥೧೧॥

"ಸತ್ಯವತಿ! ಚರುವಿನ ಈ ವಿನಿಮಯದಿಂದಾಗಿ ನಿನ್ನ ಗರ್ಭದಲ್ಲಿ ಘೋರಪ್ರಕೃತಿಯವನಾದ, ದಂಡಧರನಾದ ಕ್ಷಾತ್ರಸ್ವಭಾವವುಳ್ಳವನು ನಿನ್ನ ಮಗನಾಗಿ ಹುಟ್ಟುತ್ತಾನೆ. ನಿನ್ನ ತಾಯಿಯಲ್ಲಿ ಹುಟ್ಟಲಿರುವ ನಿನ್ನ ತಮ್ಮನು ಬ್ರಹ್ಮವಿದರಲ್ಲಿ ಶ್ರೇಷ್ಠನಾಗುತ್ತಾನೆ.''

ಹಾಗಾಗಬಾರದೆಂದು ಸತ್ಯವತಿಯು ಬಹಳವಾಗಿ ಪತಿಯನ್ನು ಬೇಡಿಕೊಂಡಳು. * ಮಗನಲ್ಲದಿದ್ದರೂ ಮೊಮ್ಮಗನಾದರೂ ಅಂತಹ ಸ್ವಭಾವದವನಾಗಿ ಹುಟ್ಟುವನೆಂದು ಋಚೀಕನು ಹೇಳಿ ಪತ್ನಿಯನ್ನು ಸಮಾಧಾನಗೊಳಿಸಿದನು.

ಋಚೀಕನ ಅನುಗ್ರಹದಂತೆ ಜಮದಗ್ನಿಯು ಸತ್ಯವತಿಯ ಗರ್ಭದಲ್ಲಿ ಜನಿಸಿದನು. ಬಳಿಕ ಋಚೀಕನ ಪತ್ನಿಯಾದ ಸತ್ಯವತೀದೇವಿಯು ಸಮಸ್ತ ಲೋಕಗಳನ್ನೂ ಪಾವನಗೊಳಿಸುವ ಪುಣ್ಯವತಿಯಾದ ಕೌಶಿಕೀನದಿಯಾಗಿ ಪರಿವರ್ತನೆಹೊಂದಿದಳು. ರೇಣು–ಎಂಬ ಋಷಿಗೆ ರೇಣುಕಾ ಎಂಬ ಹೆಸರಿನ ಕನ್ಯೆಯಿದ್ದಳು. ಋಚೀಕನ ಮಗನಾದ ಜಮದಗ್ನಿಯು ಆ ರೇಣುಕೆ ಯನ್ನು ವಿವಾಹವಾದನು. ರೇಣುಕೆಯ ಗರ್ಭದಲ್ಲಿ ಜಮದಗ್ನಿಗೆ ವಸುಮಂತನೇ ಮೊದಲಾದ ಮಕ್ಕಳು ಹುಟ್ಟಿದರು. ಅವರಲ್ಲಿ ಕಿರಿಯನೇ ಸುಪ್ರಸಿದ್ಧನಾದ ಪರಶುರಾಮನು. ಪರಶುರಾಮನನ್ನು ಹೈಹಯರ ಕುಲಾಂತಕನೆಂದೂ ವಾಸುದೇವನ ಅಂಶಭೂತನೆಂದೂ ಹೇಳುತ್ತಾರೆ. ಪರಶುರಾಮನು ಈ ಭೂಮಂಡಲವನ್ನು ಇಪ್ಪತ್ತೊಂದು ಬಾರಿ ಕ್ಷತ್ರಿಯ ರಹಿತವನ್ನಾಗಿ ಮಾಡಿಬಿಟ್ಟನು. ಪರಶುರಾಮನ ವಿಷಯದಲ್ಲಿ ಕ್ಷತ್ರಿಯರು ಅಥವಾ ಹೈಹಯರು ಮಾಡಿದ ಅಪರಾಧವು ಸ್ವಲ್ಪವೇ ಆಗಿದ್ದರೂ ಆ ಸಮಯದಲ್ಲಿ ಕ್ಷತ್ರಿಯರು ಬಹಳ ದುಷ್ಟರಾಗಿದ್ದರು. ಬ್ರಾಹ್ಮಣರನ್ನು ದ್ವೇಷಿಸುತ್ತಿದ್ದರು. ರಜಸ್ತಮೋಗುಣಗಳಿಂದ ಅಭಿಭೂತರಾಗಿದ್ದರು. ಇಂತಹ ದುಷ್ಟರಿಂದಾಗಿ ಭೂಭಾರವು ಹೆಚ್ಚಿದ್ದಿತು. ಇಪ್ಪತ್ತೊಂದು ಬಾರಿ ದುಷ್ಟ ಕ್ಷತ್ರಿಯರೆಲ್ಲರನ್ನೂ ನಿಗ್ರಹಿಸಿ ಪರಶುರಾಮನು ಭೂಭಾರವನ್ನಿಳಿಸಿದನು.”

ಪರೀಕ್ಷಿತನು ಪ್ರಶ್ನಿಸುತ್ತಾನೆ :

ಕಿಂ ತದಂಹೋ ಭಗವತೋ ರಾಜನ್ಯೈರಜಿತಾತ್ಮಭಿಃ ।
ಕೃತಂ ಯೇನ ಕುಲಂ ನಷ್ಟಂ ಕ್ಷತ್ರಿಯಾಣಾಮಭೀಕ್ಷ್ಣಶಃ ॥೧೬॥

---

* ಪತ್ನಿಗಾಗಿ ಸಿದ್ಧಪಡಿಸಿದ್ದ ಚರುವನ್ನು ಬ್ರಾಹ್ಮಮಂತ್ರದಿಂದಲೂ ಅತ್ತೆಗಾಗಿ ಸಿದ್ಧಪಡಿಸಿದ್ದ ಚರುವನ್ನು ಕ್ಷಾತ್ರಮಂತ್ರದಿಂದಲೂ ಋಚೀಕನು ಅಭಿಮಂತ್ರಿಸಿದ್ದ

"ಪೂಜ್ಯರೇ! ನೀವು ಹೇಳಿದಂತೆ ಆ ಸಮಯದಲ್ಲಿ ಕ್ಷತ್ರಿಯರು ದುಷ್ಟರಾಗಿದ್ದರು ; ತಾಮಸಿಗಳಾಗಿದ್ದರು. ವಿಷಯಲೋಲುಪರಾಗಿದ್ದರು. ತನಗೆ ಯಾವ ಅಪರಾಧವನ್ನು ಮಾಡಿದ್ದಕ್ಕಾಗಿ ಭಗವಂತನಾದ ಪರಶುರಾಮನು ಪದೇ-ಪದೇ ಕ್ಷತ್ರಿಯರ ವಂಶವನ್ನೇ ನಿರ್ಮೂಲಗೊಳಿಸಿದನು? ಇದನ್ನು ದಯಮಾಡಿ ಹೇಳಿರಿ."

ಶ್ರೀಶುಕರು ಹೇಳುತ್ತಾರೆ :

"ಪರೀಕ್ಷಿತನೇ! ಆ ಸಮಯದಲ್ಲಿ ಕ್ಷತ್ರಿಯಶ್ರೇಷ್ಠನಾದ ಅರ್ಜುನನು ಹೈಹಯರಿಗೆ ಅಧಿಪತಿಯಾಗಿದ್ದನು. ಅವನು ಅನೇಕ ಪ್ರಕಾರವಾದ ಪೂಜೆಗಳಿಂದಲೂ, ಸೇವೆಯಿಂದಲೂ ಜಪ-ತಪಾದಿಗಳಿಂದಲೂ ನಾರಾಯಣನ ಅಂಶಾವತಾರವಾದ ದತ್ತಾತ್ರೇಯಪ್ರಭುವನ್ನು ಒಲಿಸಿಕೊಂಡಿದ್ದನು. ದತ್ತಾತ್ರೇಯನ ಅನುಗ್ರಹದಿಂದಲೇ ಅರ್ಜುನನು ಸಹಸ್ರಬಾಹುವಾದನು. ಶತ್ರುಗಳಿಗೆ ಅವನನ್ನು ಪರಾಜಯಗೊಳಿಸಲು ಸಾಧ್ಯವಾಗುತ್ತಿರಲಿಲ್ಲ. ಯಾರಿಗೂ ಲಭಿಸದಿದ್ದ ಇಂದ್ರಿಯಶಕ್ತಿಯನ್ನೂ, ಅತುಲವಾದ ಸಂಪತ್ತನ್ನೂ, ತೇಜಸ್ಸನ್ನೂ, ವೀರ್ಯವನ್ನೂ, ಅಪಾರವಾದ ಕೀರ್ತಿಯನ್ನೂ, ಶಾರೀರಕ ಬಲವನ್ನೂ ಅರ್ಜುನನು ದತ್ತಾತ್ರೇಯನ ಅನುಗ್ರಹದಿಂದಲೇ ಪಡೆದುಕೊಂಡಿದ್ದನು. ಅಣಿಮಾದಿ ಅಷ್ಟಸಿದ್ಧಿಗಳನ್ನೂ ಪಡೆದು ಅಣೋರಣೀಯನೂ ಮಹತೋಮಹೀಯನೂ ಆಗುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದನು. ವಾಯುವಿನಂತೆ ಯಾವ ತಡೆ-ಬಡೆಯೂ ಇಲ್ಲದೆ ಪ್ರಪಂಚದಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದನು. ಒಮ್ಮೆ ಮದೋದ್ಧತನಾಗಿದ್ದ ಆ ಸಾವಿರ ತೋಳಿನ ಅರ್ಜುನನು ವೈಜಯಂತೀಮಾಲೆಯನ್ನು ಧರಿಸಿ, ಹಲ ವಾರು ಸುಂದರಿಯರಾದ ಸ್ತ್ರೀಯರಿಂದ ಪರಿವೃತನಾಗಿ ನರ್ಮದಾನದಿಯಲ್ಲಿ ಜಲಕ್ರೀಡೆಯಾಡುತ್ತಿದ್ದಾಗ ತನ್ನ ಸಾವಿರ ತೋಳುಗಳಿಂದ ನದಿಯ ಪ್ರವಾಹವನ್ನೇ ತಡೆದುಬಿಟ್ಟನು. ದಶಕಂಠನಾದ ರಾವಣನ ಶಿಬಿರವು ಅಲ್ಲಿಯೇ ನರ್ಮದಾನದಿಯ ಮೇಲ್ದಂಡೆಯಲ್ಲಿದ್ದಿತು. ಅರ್ಜುನನು ತಡೆಯುತ್ತಲೇ

ನೆಂದು ವ್ಯಾಖ್ಯಾನಕಾರರು ಹೇಳಿದ್ದಾರೆ. ಗಾಧಿ ಕ್ಷತ್ರಿಯ. ಋಚೀಕನು ಬ್ರಾಹ್ಮಣ. (ಭಾರ್ಗವವಂಶದವನು)

ನದಿಯು ಮೇಲ್ಮುಖವಾಗಿ ಹರಿದು ರಾವಣೇಶ್ವರನ ಶಿಬಿರವನ್ನು ಕೊಚ್ಚಿಸಿ ಬಿಟ್ಟಿತು. ವೀರಮಾನಿಯಾದ ದಶಕಂಠನು ಅರ್ಜುನನ ಇಂತಹ ಅನುಪಮ ವಾದ ಪರಾಕ್ರಮವನ್ನು ಸಹಿಸಿಕೊಳ್ಳಲಿಲ್ಲ. ರಾವಣನು ಸಾವಿರ ತೋಳಿನ ಅರ್ಜುನನ ಬಳಿಗೆ ಹೋಗಿ ತನ್ನ ಶಿಬಿರವನ್ನು ಕೊಚ್ಚಿಸಿದುದಕ್ಕಾಗಿ ಅವನನ್ನು ನಿಂದಿಸಲು–ತನ್ನ ಸುತ್ತಲೂ ಇದ್ದ ನಾರಿಯರ ಸಮಕ್ಷದಲ್ಲಿಯೇ ಅರ್ಜುನನು, ರಾವಣನನ್ನು ಲೀಲಾಜಾಲವಾಗಿ ಹಿಡಿದೆತ್ತಿ ಮಾಹಿಷ್ಮತೀ ನಗರಕ್ಕೆ ಕೊಂಡೊಯ್ದು ಕಪಿಯನ್ನು ಬೋನಿನಲ್ಲಿಡುವಂತೆ ರಾವಣನನ್ನು ಸೆರೆಯಲ್ಲಿಟ್ಟನು. ಬಳಿಕ ಅವನು ಪುಲಸ್ತ್ಯಮಹರ್ಷಿಗಳ ನಿರ್ದೇಶನದಂತೆ ರಾವಣನನ್ನು ಬಿಡುಗಡೆಮಾಡಿದನು.

ಇಂತಹ ಅತುಲಪರಾಕ್ರಮಿಯಾದ ಸಾವಿರತೋಳಿನ ಅರ್ಜುನ ನೊಮ್ಮೆ ಬೇಟೆಯಾಡಲು ನಿರ್ಜನವಾಗಿದ್ದ ಘೋರಾರಣ್ಯವನ್ನು ಪ್ರವೇಶಿಸಿ ದನು. ದೈವವಶದಿಂದ ಅವನು ಜಮದಗ್ನಿಮಹರ್ಷಿಯ ಆಶ್ರಮಭೂಮಿ ಯನ್ನು ಪ್ರವೇಶಿಸಿದನು. ಮಹಾತಪಸ್ವಿಯಾದ ಜಮದಗ್ನಿಮಹರ್ಷಿಯ ಆಶ್ರಮದಲ್ಲಿ ಕಾಮಧೇನುವಿದ್ದಿತು. ಅದರ ಪ್ರಭಾವದಿಂದ ಮಹರ್ಷಿಯು ಆಶ್ರಮಕ್ಕೆ ಆಗಮಿಸಿದ ಸಹಸ್ರಬಾಹುವಾದ ಅರ್ಜುನನಿಗೂ, ಅವನ ಅಮಾತ್ಯರಿಗೂ, ಸೈನಿಕರಿಗೂ, ವಾಹನಗಳಿಗೂ ಅದ್ದೂರಿಯಾಗಿ ಸ್ವಾಗತ-ಸತ್ಕಾರಗಳನ್ನು ಮಾಡಿದನು. ಇಂತಹ ಸತ್ಕಾರದಿಂದ ರಾಜನು ತೃಪ್ತನಾಗಲಿಲ್ಲ. ಅವನ ಮನಸ್ಸಿನಲ್ಲಿ ಅಸೂಯೆಯು ಅಂಕುರಿಸಿತು. ತನ್ನಲ್ಲಿರುವ ಐಶ್ವರ್ಯಕ್ಕಿಂತಲೂ ಮಿಗಿಲಾದ ಐಶ್ವರ್ಯವು ಜಮದಗ್ನಿಯಲ್ಲಿರುವುದೆಂದು ಅರ್ಜುನನು ಬಗೆದನು. ವೈಭವದಿಂದ ಸತ್ಕರಿಸಿದ್ದರಿಂದ ರಾಜನಿಗೆ ಸಂತೋಷ ವೇನೂ ಆಗಲಿಲ್ಲ. ಕಾಮಧೇನುವನ್ನು ಅಪಹರಿಸಿಕೊಂಡು ಹೋಗಬೇಕೆಂದು ಆತನು ನಿಶ್ಚಯಿಸಿದನು. ಮದದಿಂದ ಕೊಬ್ಬಿಹೋಗಿದ್ದ ಅವನು ಜಮದಗ್ನಿಯನ್ನು ಕೇಳದೆಯೇ ಕಾಮಧೇನುವನ್ನು ಹೊಡೆದುಕೊಂಡು ಹೋಗುವಂತೆ ಸೇವಕರಿಗೆ ಆಜ್ಞಾಪಿಸಿದನು. ಕಾಮಧೇನುವು 'ಅಂಬಾ-ಅಂಬಾ'–ಎಂದು ಅರಚಿಕೊಳ್ಳುತ್ತಿದ್ದರೂ ಲೆಕ್ಕಿಸದೆ ಆ ಕಾಮಧೇನುವನ್ನು ಕರುವಿನೊಡನೆ ಮಾಹಿಷ್ಮತೀಪಟ್ಟಣಕ್ಕೆ ಸೇವಕರು ಬಲಾತ್ಕಾರದಿಂದ ಸೆಳೆದುಕೊಂಡು ಹೋದರು. ರಾಜನು ಮತ್ತು ಅವನ ಪರಿವಾರದವರು ಆಶ್ರಮಭೂಮಿ

ಯನ್ನು ಬಿಟ್ಟು ಹೋದನಂತರ ಪರಶುರಾಮನು ಆಶ್ರಮಕ್ಕೆ ಬಂದನು. ಅರ್ಜುನರಾಜನೆಸಗಿದ ದೌಷ್ಟ್ಯದ ವೃತ್ತಾಂತವನ್ನು ಕೇಳಿ ಪರಶುರಾಮನು ಪೆಟ್ಟುತಿಂದ ಸರ್ಪದಂತೆ ಕೋಪದಿಂದ ಕಿಡಿ-ಕಿಡಿಯಾದನು. ಒಡನೆಯೇ ಪರಶುರಾಮನು ತನ್ನ ಭಯಂಕರವಾದ ಗಂಡುಗೊಡಲಿಯನ್ನೂ, ಕತ್ತಿ-ಗುರಾಣಿಗಳನ್ನೂ, ಧನುರ್ಬಾಣಗಳನ್ನೂ ತೆಗೆದುಕೊಂಡು ಅರ್ಜುನನನ್ನು ಹಿಂಬಾಲಿಸಿದನು. ಸ್ವಲ್ಪ ಹೊತ್ತಿನಲ್ಲಿಯೇ ಸಿಂಹವು ಆನೆಯನ್ನು ಆಕ್ರಮಿಸುವಂತೆ ಅರ್ಜುನನನ್ನು ಆಕ್ರಮಿಸಿದನು. ಆಗತಾನೇ ತನ್ನ ಪಟ್ಟಣವನ್ನು ಪ್ರವೇಶಿಸುವುದರಲ್ಲಿದ್ದ ಸಾವಿರತೋಳಿನ ಅರ್ಜುನನು ಪರಶುರಾಮನು ವೇಗವಾಗಿ ತನ್ನ ಮೇಲೆ ಬೀಳಲು ಬರುತ್ತಿದ್ದುದನ್ನು ನೋಡಿದನು. ಆ ಸಮಯದಲ್ಲಿ ಪರಶುರಾಮನು ಜಿಂಕೆಯ ಚರ್ಮವನ್ನು ಹೊದೆದಿದ್ದನು. ಸೂರ್ಯನಂತೆ ಬೆಳಗುವ ಜಟಾಕಲಾಪದಿಂದ ಸಂಪನ್ನನಾಗಿದ್ದನು. ಕೈಯಲ್ಲಿ ಧನುರ್ಬಾಣಗಳನ್ನೂ ಹೆಗಲಲ್ಲಿ ಗಂಡುಗೊಡಲಿಯನ್ನೂ ಧರಿಸಿದ್ದನು. ಆಯುಧಪಾಣಿಯಾದ ಪರಶುರಾಮನನ್ನು ನೋಡುತ್ತಲೇ ಅರ್ಜುನನು, ಗದಾ-ಖಡ್ಗ-ಬಾಣ-ಋಷ್ಟಿ-ಶತಘ್ನೀ—ಶಕ್ತಿ ಇವೇ ಮೊದಲಾದ ಆಯುಧಗಳಿಂದ ಸುಸಜ್ಜಿತವಾದ ರಥಾಶ್ವ-ಹಸ್ತಿ-ಪದಾತಿಗಳೆಂಬ ಚತುರಂಗಬಲಗಳಿಂದ ಕೂಡಿದ ಅತಿಭಯಂಕರವಾದ ಹದಿನೇಳು ಅಕ್ಷೌಹಿಣೀ ಸಂಖ್ಯೆಯ ಸೈನ್ಯವನ್ನು ಪರಶುರಾಮನ ಮೇಲೆ ಯುದ್ಧಮಾಡಲು ಕಳುಹಿಸಿದನು. ಅಷ್ಟೊಂದು ಅಪಾರವಾದ ಸೈನ್ಯವನ್ನೂ ಏಕಾಕಿಯಾದ ಭಗವಾನ್ ಪರಶುರಾಮನೊಬ್ಬನೇ ಕ್ಷಣಮಾತ್ರದಲ್ಲಿ ಧ್ವಂಸಮಾಡಿದನು. ಪರಶುರಾಮನು ಸೈನ್ಯವನ್ನು ಗಂಡುಗೊಡಲಿಯಿಂದ ಸಂಹರಿಸುತ್ತಾ ಮುನ್ನಡೆಯುತ್ತಿದ್ದನು. ಅವನ ಗಂಡುಗೊಡಲಿಯ ಪ್ರಹಾರದಿಂದಾಗಿ ರಥಸೈನಿಕರು ಸಾರಥಿಯನ್ನೂ ಕುದುರೆಗಳನ್ನೂ ಕಳೆದುಕೊಂಡು ಕೈ-ಕಾಲು-ತಲೆಗಳು ಕತ್ತರಿಸಲ್ಪಟ್ಟು ರಥಗಳಿಂದ ಕೆಳಕ್ಕೆ ತೊಪ-ತೊಪನೆ ಬೀಳುತ್ತಿದ್ದರು. ರಣಾಂಗಣದಲ್ಲಿ ರಕ್ತದ ಕೋಡಿಯು ಹರಿಯುತ್ತಿದ್ದಿತು. ಪರಶುರಾಮನ ಗಂಡುಗೊಡಲಿಯಿಂದಲೂ, ಖಡ್ಗದಿಂದಲೂ, ಬಾಣಗಳಿಂದಲೂ ತುಂಡು-ತುಂಡಾಗಿ ಕತ್ತರಿಸಲ್ಪಟ್ಟು ರಣರಂಗದ ಸುತ್ತಲೂ ರಕ್ತದ ಮಡುವಿನಲ್ಲಿ ಬಿದ್ದಿದ್ದ ತನ್ನ ಸೈನಿಕರನ್ನು ಅರ್ಜುನನು ನೋಡಿದನು. ಸೈನಿಕರ ಧನುಸ್ಸು-ಕತ್ತಿ-ಗುರಾಣಿಗಳು, ಆನೆ-ಕುದುರೆಗಳು, ರಥಗಳು, ಧ್ವಜಗಳು—ಎಲ್ಲವೂ

ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ದಾರುಣವಾದ ಆ ಸಂಹಾರಕಾರ್ಯವನ್ನು ನೋಡಿದ ಅರ್ಜುನನಿಗೆ ಕೋಪವನ್ನು ತಡೆಯಲು ಸಾಧ್ಯವಾಗಲಿಲ್ಲ. ಧನುಷ್ಪಾಣಿಯಾಗಿ ಆತನು ಪರಶುರಾಮನನ್ನು ಆಕ್ರಮಿಸಿದನು. ಅರ್ಜುನನು ತನ್ನ ಐದುನೂರು ಎಡತೋಳುಗಳಿಂದ ಐದುನೂರು ಧನುಸ್ಸುಗಳನ್ನು ಹಿಡಿದಿದ್ದನು. ಏಕಕಾಲದಲ್ಲಿ ಐದುನೂರು ಬಲ ತೋಳುಗಳಿಂದ ಶರಗಳನ್ನು ಸಂಧಾನಮಾಡಿ ಪರಶುರಾಮನ ಮೇಲೆ ಪ್ರಯೋಗಿಸಿದನು. ಸಮಸ್ತ ಶಸ್ತ್ರಧಾರಿಗಳಿಗೂ ಶಿರೋಮಣಿಯಾದ ಪರಶುರಾಮನು ಅರ್ಜುನನು ಬಿಟ್ಟ ಐದುನೂರು ಬಾಣಗಳನ್ನೂ ಒಂದೇ ಧನುಸ್ಸಿನ ಮೂಲಕವಾಗಿ ಪ್ರಯೋಗಿಸಿದ ಒಂದೇ ಬಾಣದಿಂದ ಕತ್ತರಿಸಿ ಹಾಕಿದನು. ಅನಂತರ ಅರ್ಜುನನು ತನ್ನ ಸಾವಿರಕೈಗಳಿಂದ ಪರ್ವತಗಳನ್ನೂ ವೃಕ್ಷಗಳನ್ನೂ ಕಿತ್ತು ಪರಶುರಾಮನ ಮೇಲೆ ರಭಸದಿಂದೆಸೆದನು. ಒಡನೆಯೇ ಪರಶುರಾಮನು ತೀಕ್ಷ್ಣವಾದ ಅಲುಗಿನಿಂದ ಕೂಡಿದ್ದ ತನ್ನ ಗಂಡುಗೊಡಲಿಯಿಂದ ಕ್ಷಣಮಾತ್ರದಲ್ಲಿ ಅರ್ಜುನನ–ಸರ್ಪಗಳ ಹೆಡೆಗಳಂತಿದ್ದ ಸಾವಿರತೋಳುಗಳನ್ನೂ ಕತ್ತರಿಸಿ ಹಾಕಿದನು. ತೋಳುಗಳನ್ನು ಕತ್ತರಿಸಿದನಂತರ–ಪರ್ವತದ ಶಿಖರವನ್ನು ಕತ್ತರಿಸುವಂತೆ ಪರಶುರಾಮನು ಹೈಹಯರಾಜನ ಶಿರಸ್ಸನ್ನು ಕತ್ತರಿಸಿದನು. ತಂದೆಯು ಸತ್ತುದನ್ನು ಕಂಡೊಡನೆಯೇ ಅವನ ಹತ್ತುಸಾವಿರ ಮಕ್ಕಳೂ ಭಯದಿಂದ ಪಲಾಯನಮಾಡಿದರು. ಶತ್ರುವೀರಹಂತಕನಾದ ಪರಶು ರಾಮನು ಶತ್ರುಗಳು ಅಪಹರಿಸಿಕೊಂಡು ಹೋಗಿದ್ದ, ಕರುವಿನಿಂದ ಕೂಡಿದ್ದ, ಸೈನಿಕರ ಎಳೆದಾಟದಿಂದ ಹೆಚ್ಚು ತೊಂದರೆಯನ್ನು ಅನುಭವಿಸಿದ್ದ ಕಾಮಧೇನುವನ್ನು ಹಿಂದಿರುಗಿ ಹೊಡೆದುಕೊಂಡು ಬಂದು ತಂದೆಗೊಪ್ಪಿ ಸಿದನು. ಪರಶುರಾಮನು ಮಾಹಿಷ್ಮತೀಪಟ್ಟಣದಲ್ಲಿ ತಾನು ಮಾಡಿದ ವಿಧ್ವಂಸನಕ್ರಿಯೆಯನ್ನು ತನ್ನ ತಂದೆಗೂ ಮತ್ತು ಸಹೋದರರಿಗೂ ವಿವರಿಸಿ ಹೇಳಿದನು. ಮಹಾಪರಾಕ್ರಮಿಯಾದ ಸಹಸ್ರಬಾಹುವಾದ ಅರ್ಜುನನನ್ನು ಸಂಹರಿಸಿದ ವಿಷಯವನ್ನೂ ಹೇಳಿದನು. ಪರಶುರಾಮನು ಹೇಳಿದ ಸಮಾಚಾರವನ್ನು ಕೇಳಿ ಜಮದಗ್ನಿಯು ನಿಟ್ಟುಸಿರುಬಿಡುತ್ತಾ ಮಗನಿಗೆ ಹೇಳಿದನು :

ರಾಮ ರಾಮ ಮಹಾಬಾಹೋ ಭವಾನ್ಪಾಪಮಕಾರಷೀತ್ ।
ಅವಧೀನ್ನರದೇವಂ ಯತ್ಸರ್ವದೇವಮಯಂ ವೃಥಾ ॥೩೮॥

"ರಾಮ! ಪರಶುರಾಮ! ನೀನು ತುಂಬಾ ಪಾಪವನ್ನು ಮಾಡಿಬಿಟ್ಟೆ. ಮಹಾಬಾಹುವೇ! ನೀನು ಮಹಾವೀರನೇ ಹೌದು. ಆದರೂ ಸರ್ವ ದೇವಮಯನಾದ ರಾಜನನ್ನು ವೃಥಾ ಸಂಹರಿಸಿದೆ.

ವಯಂ ಹಿ ಬ್ರಾಹ್ಮಣಾಸ್ತಾತ ಕ್ಷಮಯಾರ್ಹಣತಾಂ ಗತಾಃ ।
ಯಯಾ ಲೋಕಗುರುರ್ದೇವಃ ಪಾರಮೇಷ್ಠ್ಯಮಗಾತ್ಪದಮ್ ॥೩೯॥

ಮಗು! ನಾವು ಬ್ರಾಹ್ಮಣರಾಗಿದ್ದೇವೆ. ನಮ್ಮಲ್ಲಿ ಕ್ಷಮಾಗುಣವಿರು ವುದರಿಂದಲೇ ಲೋಕದಲ್ಲಿ ಪೂಜ್ಯರೆನಿಸಿಕೊಂಡಿರುತ್ತೇವೆ. ಲೋಕಗುರು ವಾದ ದೇವನಾದ ಚತುರ್ಮುಖನು ಕ್ಷಮಾವಂತನಾಗಿರುವ ಕಾರಣದಿಂದಲೇ ತನ್ನ ಆ ಪರಮಪದವನ್ನು ಅಲಂಕರಿಸಿದ್ದಾನೆ.

ಕ್ಷಮಯಾ ರೋಚತೇ ಲಕ್ಷ್ಮೀರ್ಬ್ರಾಹ್ಮೀ ಸೌರೀ ಯಥಾ ಪ್ರಭಾ ।
ಕ್ಷಮಿಣಾಮಾಶು ಭಗವಾಂಸ್ತುಷ್ಯತೇ ಹರಿರೀಶ್ವರಃ ॥೪೦॥

ಬ್ರಾಹ್ಮಣರ ಶೋಭೆಯು ಕ್ಷಮಾಗುಣದ ಮೂಲಕವಾಗಿಯೇ ಸೂರ್ಯನ ಪ್ರಭೆಯಂತೆ ಕಂಗೊಳಿಸುತ್ತದೆ. ಸರ್ವಶಕ್ತನಾದ ಭಗವಾನ್ ಶ್ರೀಹರಿಯು ಕೂಡ ಕ್ಷಮಾವಂತರ ವಿಷಯದಲ್ಲಿ ಬೇಗ ಪ್ರಸನ್ನನಾಗುತ್ತಾನೆ.

ರಾಜ್ಞೋ ಮೂರ್ಧಾಭಿಷಿಕ್ತಸ್ಯ ವಧೋ ಬ್ರಹ್ಮವಧಾದ್ಗುರುಃ ।
ತೀರ್ಥಸಂಸೇವಯಾ ಚಾಂಹೋ ಜಹ್ಯಙ್ಗಾಚ್ಯುತಚೇತನಃ ॥೪೧॥

ವತ್ಸ! ಪಟ್ಟಾಭಿಷಿಕ್ತನಾದ ರಾಜನ ವಧೆಯು ಬ್ರಹ್ಮಹತ್ಯೆಗಿಂತ ಹೆಚ್ಚು ಪಾಪಕರವಾದುದು. ಭಗವಂತನ ಸ್ಮರಣೆಮಾಡುತ್ತಾ ತೀರ್ಥಯಾತ್ರೆಯನ್ನು ಕೈಗೊಂಡು ಪುಣ್ಯತೀರ್ಥಗಳ ಸೇವೆಯನ್ನು ಮಾಡಿ ನಿನ್ನ ಪಾಪವನ್ನು ಕಳೆದುಕೋ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧೫ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೬ನೆಯ ಅಧ್ಯಾಯ

ಪರಶುರಾಮನಿಂದ ಸಮಸ್ತಕ್ಷತ್ರಿಯರ ಸಂಹಾರ : ವಿಶ್ವಾಮಿತ್ರನ ವಂಶದ ವರ್ಣನೆ

ಶ್ರೀಶುಕದೇವರು ಹೇಳುತ್ತಾರೆ :

ಪಿತ್ರೋಪಶಿಕ್ಷಿತೋ ರಾಮಸ್ತಥೇತಿ ಕುರುನನ್ದನ ।
ಸಂವತ್ಸರಂ ತೀರ್ಥಯಾತ್ರಾಂ ಚರಿತ್ವಾಶ್ರಮಮಾವ್ರಜತ್ ॥೧॥

ಪರೀಕ್ಷಿತಮಹಾರಾಜ! ಹೀಗೆ ತಂದೆಯಿಂದ ಆಜ್ಞಪ್ತನಾದ ಪರಶುರಾಮನು ಹಾಗೆಯೇ ಆಗಲೆಂದು ಹೇಳಿ ಒಡನೆಯೇ ಆಶ್ರಮದಿಂದ ಹೊರಟು ಒಂದು ವರ್ಷ ಪರ್ಯಂತವಾಗಿ ತೀರ್ಥಯಾತ್ರೆಯನ್ನು ಮಾಡಿ ಪುಣ್ಯತೀರ್ಥಗಳಲ್ಲಿ ಮಿಂದು ಆಶ್ರಮಕ್ಕೆ ಹಿಂದಿರುಗಿದನು.

ಒಮ್ಮೆ ಪರಶುರಾಮನ ತಾಯಿಯಾದ ರೇಣುಕೆಯು ಪತಿಯ ನಿತ್ಯಕರ್ಮಾನುಷ್ಠಾನಕ್ಕಾಗಿ ಶುದ್ಧೋದಕವನ್ನು ತರಲು ಗಂಗಾನದಿಯ ತೀರಕ್ಕೆ ಹೋಗಿದ್ದಳು. ಆ ಸಮಯಕ್ಕೆ ಸರಿಯಾಗಿ ಗಂಧರ್ವರಾಜನಾದ ಚಿತ್ರರಥನು ಕಮಲದ ಮಾಲೆಯನ್ನು ಧರಿಸಿ ಅಪ್ಸರೆಯರೊಡನೆ ಜಲಕ್ರೀಡೆಯಾಡುತ್ತಿದ್ದುದನ್ನು ರೇಣುಕೆಯು ನೋಡಿದಳು. ಹೋಮದ ವಿಧಿಗಾಗಿ ಶುದ್ಧೋದಕವನ್ನು ತೆಗೆದುಕೊಂಡು ಹೋಗಲು ಬಂದ ರೇಣುಕೆಯು ಚಿತ್ರರಥನ ಜಲಕ್ರೀಡೆಯನ್ನೇ ನೋಡುತ್ತಾ ನಿಂತಳು. ಹೋಮದ ಕಾಲವು ಅತೀತವಾಯಿತು. ತಾನು ಏತಕ್ಕಾಗಿ ಬಂದಿರುವೆನೆಂಬ ಸ್ಮರಣೆಯೂ ರೇಣುಕೆಗೆ ಇರಲಿಲ್ಲ. ಅವಳ ಮನಸ್ಸು ಸ್ವಲ್ಪಕಾಲದವರೆಗೆ ಚಿತ್ರರಥನಲ್ಲೇ ನೆಟ್ಟುಹೋಗಿದ್ದಿತು. ಸ್ವಲ್ಪಕಾಲಾನಂತರ ತಾನು ಬಂದ ಕಾರ್ಯದ ನೆನಪಾಯಿತು. ಆದರೆ ಆ ವೇಳೆಗೆ ಹೋಮದ ಕಾಲವು ಕಳೆದುಹೋಗಿದ್ದಿತು. ಜಮದಗ್ನಿಯು ಶಾಪಕೊಟ್ಟಾನೆಂಬ ಭಯದಿಂದ ತತ್ತರಿಸಿದ ರೇಣುಕೆಯು ಶೀಘ್ರವಾಗಿಯೇ ಗಂಗಾತೀರದಿಂದ ಆಶ್ರಮಕ್ಕೆ ಹೋದಳು. ನೀರಿನ ಕಲಶವನ್ನು ಜಮದಗ್ನಿಯ ಮುಂದಿಟ್ಟು ಕೈಜೋಡಿಸಿಕೊಂಡು ನಿಂತಳು. ಜಮದಗ್ನಿಯು ತನ್ನ ಪತ್ನಿಯೆಸಗಿದ ಮಾನಸಿಕವ್ಯಭಿಚಾರವನ್ನು ಅರಿತು ಕೊಂಡನು. ಕೋಪದಿಂದ ಕಿಡಿ-ಕಿಡಿಯಾಗಿ ಆತನು ತನ್ನ ಪುತ್ರರನ್ನು ಕರೆದು ಹೇಳಿದನು :

"ಘ್ನತೈನಾಂ ಪುತ್ರಕಾಃ ಪಾಪಾಂ—ಮಕ್ಕಳೇ! ಈ ಪಾಪಿಷ್ಠಳನ್ನು ಈಗಲೇ ಸಂಹರಿಸಿರಿ."

ಆದರೆ ಮಹರ್ಷಿಯ ಆಜ್ಞೆಯಂತೆ ಯಾವನೊಬ್ಬನೂ ತಾಯಿಯನ್ನು ಕೊಲ್ಲಲು ಮುಂದಾಗಲಿಲ್ಲ. ಆದರೆ ಕಡೆಯವನಾದ ಪರಶುರಾಮನು ಮಾತ್ರ ತಂದೆಯ ಆಜ್ಞೆಯನ್ನು ಪರಿಪಾಲಿಸಲು ಸಿದ್ಧನಾದನು. ತಂದೆಯ ಆಜ್ಞೆಯಂತೆ ತಾಯಿಯನ್ನೂ ಮತ್ತು ಸಹೋದರರನ್ನೂ ಪರಶುರಾಮನು ಸಂಹರಿಸಿಬಿಟ್ಟನು. ಪರಶುರಾಮನಿಗೆ ತನ್ನ ತಂದೆಯ ಯೋಗಶಕ್ತಿಯೂ ಮತ್ತು ತಪಸ್ಸಿನ ಪ್ರಭಾವವೂ ಚೆನ್ನಾಗಿ ತಿಳಿದಿದ್ದಿತು. ಪರಶುರಾಮನು ತನ್ನ ಆಜ್ಞೆಯನ್ನು ವಿಚಾರಮಾಡದೆಯೇ ಪರಿಪಾಲಿಸಿದುದಕ್ಕಾಗಿ ಸತ್ಯವತಿಯ ಮಗನಾದ ಜಮದಗ್ನಿಗೆ ಬಹಳ ಸಂತೋಷವಾಯಿತು. ಬೇಕಾದ ವರವನ್ನು ಕೇಳಿಕೊಳ್ಳುವಂತೆ ಆತನಿಗೆ ಅನುಗ್ರಹಿಸಿದನು. ಒಡನೆಯೇ ಪರಶುರಾಮನು ತನ್ನ ತಾಯಿ ಮತ್ತು ಅಣ್ಣಂದಿರು ಬದುಕಬೇಕೆಂತಲೂ ಮತ್ತು ತಾನು ಸಂಹರಿಸಿದ ಸ್ಮರಣೆಯು ಅವರಿಗೆ ಇರಬಾರದೆಂತಲೂ ವರವನ್ನು ಬೇಡಿ ದನು. ಪರಶುರಾಮನು ಅಮೋಘವಾದ ಈ ವರವನ್ನು ಕೇಳುತ್ತಿದ್ದಂತೆಯೇ ಅವನ ತಾಯಿ ಮತ್ತು ಸಹೋದರರು ನಿದ್ರೆಯಿಂದ ಎಚ್ಚೆತ್ತವರಂತೆ ಯಾವ ಆಯಾಸವೂ ಇಲ್ಲದೆ ಸಕುಶಲರಾಗಿ ಎದ್ದು ಕುಳಿತರು. ಪರಶುರಾಮನು ತನ್ನ ತಂದೆಯ ತಪೋಬಲವೆಷ್ಟೆಂಬುದನ್ನು ತಿಳಿದಿದ್ದುದರಿಂದಲೇ ಹಿಂದೆ-ಮುಂದೆ ನೋಡದೆ ತಂದೆಯ ಆಜ್ಞಾನುಸಾರವಾಗಿ ತನ್ನ ತಾಯಿಯನ್ನೂ ಮತ್ತು ಸಹೋದರರನ್ನೂ ಸಂಹರಿಸಿದನು.

ಪರಶುರಾಮನೊಡನೆ ಮಾಡಿದ ಯುದ್ಧದಲ್ಲಿ ಪರಾಜಿತರಾಗಿ ಓಡಿ ಹೋಗಿದ್ದ ಸಹಸ್ರಬಾಹುವಾದ ಅರ್ಜುನನ ಮಕ್ಕಳು ತಮ್ಮ ತಂದೆಯು ಪರಶುರಾಮನಿಂದ ಹತನಾದುದನ್ನು ಸ್ಮರಿಸುತ್ತಲೇ ಇದ್ದರು. ಹೀಗೆ ಸ್ಮರಿಸು ತ್ತಿದ್ದುದರಿಂದ ಅವರ ಮನಸ್ಸಿನಲ್ಲಿ ಅಶಾಂತಿಯು ತುಂಬಿಕೊಂಡಿತು.

ಒಂದು ದಿನ ಪರಶುರಾಮನು ತನ್ನ ಸಹೋದರರೊಡನೆ ನಿತ್ಯಾನುಷ್ಠಾ ನಕ್ಕೆ ಬೇಕಾಗುವ ದರ್ಭೆ-ಸಮಿತ್ತು ಮುಂತಾದುವುಗಳನ್ನು ತರುವ ಸಲು ವಾಗಿ ಅರಣ್ಯಕ್ಕೆ ಹೋಗಿದ್ದನು. ವೈರವನ್ನೇ ಸಾಧಿಸುತ್ತಿದ್ದ ಅರ್ಜುನನ ಮಕ್ಕಳು

ಪ್ರತೀಕಾರಮಾಡಲು ಇದೇ ಸರಿಯಾದ ಸಮಯವೆಂದು ಭಾವಿಸಿ ಜಮದಗ್ನಿಯ ಆಶ್ರಮಕ್ಕೆ ಆಗಮಿಸಿದರು. ಆ ಸಮಯದಲ್ಲಿ ಜಮದಗ್ನಿಯು ಅಗ್ನಿಶಾಲೆಯಲ್ಲಿ ಕುಳಿತು ಉತ್ತಮಶ್ಲೋಕನಾದ ಭಗವಂತನಲ್ಲಿಯೇ ನೆಟ್ಟ ಮನಸ್ಕನಾಗಿ ಅವನನ್ನೇ ಧ್ಯಾನಮಾಡುತ್ತಿದ್ದನು. ಅವನಿಗೆ ಬಾಹ್ಯಪ್ರಪಂಚದ ಜ್ಞಾನವೇ ಇರಲಿಲ್ಲ. ಆತನು ಸಮಾಧಿಸ್ಥಿತಿಯಲ್ಲಿದ್ದನು. ಪಾಪಪೂರ್ಣವಾದ ನಿರ್ಧಾರವನ್ನು ಕೈಗೊಂಡಿದ್ದ ಹೈಹಯನ ಮಕ್ಕಳು ಧ್ಯಾನಾಸಕ್ತನಾಗಿದ್ದ ಆ ಜಮದಗ್ನಿಯನ್ನು ಕೊಂದುಹಾಕಿದರು. ಪರಶುರಾಮನ ತಾಯಿಯಾದ ರೇಣುಕೆಯು ತನ್ನ ಪತಿಯನ್ನು ಕೊಲ್ಲಬಾರದೆಂದು ಅಂಗಲಾಚಿ ದೈನ್ಯದಿಂದ ಬೇಡಿಕೊಳ್ಳುತ್ತಿದ್ದಳು. ಆದರೆ ಯಾರೂ ಕೂಡ ಅವಳ ಆರ್ತನಾದವನ್ನು ಕೇಳಲೇ ಇಲ್ಲ. ಬಲಾತ್ಕಾರವಾಗಿ ಮಹರ್ಷಿಯ ತಲೆಯನ್ನು ಕತ್ತರಿಸಿ ಕೊಂಡೊಯ್ದರು. ವಾಸ್ತವವಾಗಿ ಆ ಕ್ಷತ್ರಿಯರು ನೀಚರೂ ಕ್ರೂರಿಗಳೂ ಆಗಿದ್ದರು. ದುಃಖ-ಶೋಕಪೀಡಿತಳಾಗಿದ್ದ ರೇಣುಕೆಯು ತನ್ನ ಕೈಗಳಿಂದ ತಲೆಯನ್ನೂ ಎದೆಯನ್ನೂ ಬಡಿದುಕೊಳ್ಳುತ್ತಾ ಗಟ್ಟಿಯಾಗಿ ಗೋಳಾಡು ತ್ತಿದ್ದಳು. 'ಮಗು! ಪರಶುರಾಮ! ಬೇಗ ಬಾ! ಓಡಿ ಬಾ! ಎಲ್ಲವೂ ನಾಶವಾಗಿ ಹೋಯಿತು'–ಎಂದು ಕೂಗಿಕೊಂಡಳು. ಆಶ್ರಮಕ್ಕೆ ಹಿಂದಿರುಗಿ ಬರುತ್ತಿದ್ದ ಪರಶುರಾಮನಿಗೆ ತಾಯಿಯು ಆರ್ತಳಾಗಿ ಕೂಗುತ್ತಿದ್ದ–'ಹಾ ರಾಮ!' ಎಂಬ ಕರುಣಕ್ರಂದನಶಬ್ದವು ದೂರದಿಂದಲೇ ಕೇಳಿಸಿತು. ಪರಶುರಾಮನು ಓಡಿಯೋಡಿ ಆಶ್ರಮಕ್ಕೆ ಬಂದನು. ತಂದೆಯ ಕೊಲೆಯಾಗಿದ್ದುದನ್ನು ನೋಡಿದನು. ಆ ಸಮಯದಲ್ಲಿ ಪರಶುರಾಮನಿಗೆ ಅತ್ಯಂತದುಃಖವಾಯಿತು. ಜೊತೆಯಲ್ಲಿಯೇ ಕ್ರೋಧ-ಅಸಹಿಷ್ಣುತೆ-ಮಾನಸಿಕಪೀಡೆ ಇವುಗಳುಂಟಾ ದುವು. ಶೋಕದ ಆಧಿಕ್ಯದಿಂದಾಗಿ ರಾಮನು ವಿಮೋಹಗೊಂಡನು. ತಂದೆಯನ್ನು ನೆನೆದು ಬಹಳವಾಗಿ ವಿಲಪಿಸಿದನು :

"ಹಾ ತಾತ! ನೀನು ಮಹಾಧರ್ಮಾತ್ಮನು. ಸತ್ಪುರುಷನು. ನಮ್ಮೆಲ್ಲರನ್ನೂ ಬಿಟ್ಟು ಸ್ವರ್ಗಕ್ಕೆ ಹೋಗಿಬಿಟ್ಟೆಯಲ್ಲವೇ!" ಹೀಗೆ ಬಹಳ ಹೊತ್ತಿನವರೆಗೂ ವಿಲಪಿಸುತ್ತಿದ್ದ ಪರಶುರಾಮನು ತಂದೆಯ ಶರೀರವನ್ನು ಅಣ್ಣಂದಿರಿಗೊಪ್ಪಿಸಿ, ಗಂಡುಗೊಡಲಿಯನ್ನು ಹೆಗಲಮೇಲಿಟ್ಟುಕೊಂಡು ಕ್ಷತ್ರಿಯರೆಲ್ಲರನ್ನೂ ಸಂಹರಿಸಲು ನಿಶ್ಚಯಿಸಿ ಹೊರಟೇಬಿಟ್ಟನು. ಬ್ರಹ್ಮಘ್ನ

ರಿಂದಲೇ ತುಂಬಿಹೋಗಿದ್ದು, ತನ್ನ ತೇಜಸ್ಸನ್ನು ಕಳೆದುಕೊಂಡಿದ್ದ ಮಾಹಿಷ್ಮತೀಪಟ್ಟಣಕ್ಕೆ ಪರಶುರಾಮನು ಹೋಗಿ ಅರ್ಜುನನ ಮಕ್ಕಳ ಶಿರಸ್ಸುಗಳಿಂದ ಆ ಪಟ್ಟಣದ ಮಧ್ಯದಲ್ಲಿ ಒಂದು ಪರ್ವತವನ್ನೇ ನಿರ್ಮಿಸಿ ಬಿಟ್ಟನು. ಅವರ ರಕ್ತದಿಂದ ಮಾಹಿಷ್ಮತೀಪಟ್ಟಣದಲ್ಲಿ ಒಂದು ನದಿಯೇ ಹರಿಯತೊಡಗಿತು. ಅದನ್ನು ನೋಡಿದ ಬ್ರಾಹ್ಮಣದ್ರೋಹಿಗಳಾದ ಕ್ಷತ್ರಿಯ ರಿಗೆ ಭಯದಿಂದ ಹೃದಯವು ನಡುಗತೊಡಗಿತು. ಎಲ್ಲ ಕ್ಷತ್ರಿಯರೂ ಮದೋನ್ಮತ್ತರಾಗಿ ಅತ್ಯಾಚಾರಿಗಳಾಗಿರುವರೆಂದು ಭಗವಾನ್ ಪರಶು ರಾಮನು ಭಾವಿಸಿದನು. ತಂದೆಯ ವಧೆಯನ್ನೇ ನೆಪವನ್ನಾಗಿಸಿಕೊಂಡು ಪರಶುರಾಮನು ಇಪ್ಪತ್ತೊಂದು ಬಾರಿ ಕ್ಷತ್ರಿಯರೆಲ್ಲರನ್ನೂ ನಾಶಗೊಳಿಸಿ ದನು. ಕ್ಷತ್ರಿಯರ ಆ ರಕ್ತದಿಂದ ಸಮಂತಪಂಚಕಸರೋವರಗಳನ್ನು ತುಂಬಿಸಿಬಿಟ್ಟನು. ಬಳಿಕ ಪರಶುರಾಮನು ಅರ್ಜುನನ ಮಕ್ಕಳು ಎತ್ತಿ ಕೊಂಡು ಹೋಗಿದ್ದ ಜಮದಗ್ನಿಯ ತಲೆಯನ್ನು ತಂದು ಮುಂಡದೊಡನೆ ಜೋಡಿಸಿ ಸರ್ವದೇವಮಯನಾದ ಆತ್ಮಸ್ವರೂಪನಾದ ಪರಮಾತ್ಮನನ್ನು ಯಜ್ಞದ ಮೂಲಕವಾಗಿ ಆರಾಧಿಸಿದನು. ಹಾಗೆ ಮಾಡಿದ ಯಜ್ಞದಲ್ಲವನು ಪೂರ್ವದಿಕ್ಕನ್ನು ಹೋತೃವಿಗೂ, ದಕ್ಷಿಣದಿಕ್ಕನ್ನು ಬ್ರಹ್ಮನಿಗೂ, ಪಶ್ಚಿಮದಿಕ್ಕನ್ನು ಅಧ್ವರ್ಯುವಿಗೂ, ಉತ್ತರದಿಕ್ಕನ್ನು ಸಾಮಗಾನಮಾಡುವ ಉದ್ಗಾತೃವಿಗೂ ದಕ್ಷಿಣೆಯಾಗಿಕೊಟ್ಟನು. ಇದೇ ರೀತಿಯಲ್ಲಿ ಆಗ್ನೇಯವೇ ಮೊದಲಾದ ಉಪದಿಕ್ಕುಗಳ ಭೂಭಾಗವನ್ನು ಇತರ ಋತ್ವಿಜರಿಗೂ, ಭೂಮಂಡಲದ ಮಧ್ಯಭಾಗವನ್ನು ಕಶ್ಯಪನಿಗೂ ದಕ್ಷಿಣೆಯಾಗಿ ಕೊಟ್ಟನು. ನ್ಯೂನಾತಿರಿಕ್ತ ಕರ್ಮಗಳಿಗೆ ಸಾಕ್ಷಿಯಾಗಿದ್ದ ಉಪದ್ರಷ್ಟಾರನಿಗೆ ವಿಂಧ್ಯ-ಹಿಮಾದ್ರಿಗಳ ಮಧ್ಯದಲ್ಲಿರುವ ಆರ್ಯಾವರ್ತವನ್ನೂ ಇತರ ಸದಸ್ಯರುಗಳಿಗೆ ಇತರ ಪ್ರಾಂತಗಳನ್ನೂ ದಕ್ಷಿಣೆಯಾಗಿ ಕೊಟ್ಟನು. ಬಳಿಕ ಪರಶುರಾಮನು ಬ್ರಹ್ಮನದಿಯಾದ ಸರಸ್ವತೀನದಿಯಲ್ಲಿ ಯಜ್ಞಾಂಗವಾದ ಅವಭೃಥಸ್ನಾನವನ್ನು ಮಾಡಿ ಕ್ಷತ್ರಿಯರ ಹತ್ಯೆಯಿಂದುಂಟಾಗಿದ್ದ ಸಮಸ್ತ ಪಾಪಗಳಿಂದಲೂ ಮುಕ್ತನಾಗಿ–ಮೇಘಗಳಿಂದ ರಹಿತನಾದ ಸೂರ್ಯದೇವನಂತೆಯೇ ಪ್ರಕಾಶಿಸಿದನು. ಪರಶುರಾಮನು ಮಾಡಿದ ಯಜ್ಞದ ಪ್ರಭಾವದಿಂದಾಗಿ ಜಮದಗ್ನಿಯು ಸ್ಮೃತಿರೂಪವಾದ ಸಂಕಲ್ಪಮಯಶರೀರವನ್ನು ಹೊಂದಿ

ಪರಶುರಾಮನಿಂದ ಸಮ್ಮಾನಿತನಾಗಿ ಸಪ್ತರ್ಷಿಮಂಡಲದಲ್ಲಿ ಏಳನೆಯ ಋಷಿಯಾಗಿ ನೆಲೆಸಿದನು.

ಪರೀಕ್ಷಿತನೇ! ಜಮದಗ್ನಿಯ ಮಗನಾದ ಕಮಲಲೋಚನನಾದ ಭಗವಾನ್ ಪರಶುರಾಮನು ಕೂಡ ಮುಂದಿನ ಮನ್ವಂತರದಲ್ಲಿ ಸಪ್ತರ್ಷಿಗಳಲ್ಲೊಬ್ಬನಾಗಿ ವೇದವನ್ನು ಪ್ರಚಾರಪಡಿಸುವನು. ಪರಶುರಾಮನು ಈಗಲೂ ಕೂಡ ಕ್ಷತ್ರಿಯೋಚಿತವಾದ ದಂಡವನ್ನು ಪೂರ್ಣವಾಗಿ ಪರಿತ್ಯಜಿಸಿ ಶಾಂತನಾಗಿ ಗಂಧರ್ವ-ಸಿದ್ಧ-ಚಾರಣರಿಂದ ಸ್ತುತಿಸಲ್ಪಡುತ್ತಾ ಮಹೇಂದ್ರಪರ್ವತದಲ್ಲಿ ವಾಸಮಾಡುತ್ತಿದ್ದಾನೆ. ಹೀಗೆ ಸರ್ವಶಕ್ತಿವಂತನಾದ, ಸರ್ವಾತ್ಮನಾದ, ವಿಶ್ವಾತ್ಮನಾದ ಶ್ರೀಹರಿಯು ಭೃಗುವಂಶದಲ್ಲಿ ಅವತರಿಸಿ ಭೂಮಿಗೆ ಭಾರಭೂತರಾಗಿದ್ದ ದುಷ್ಟಕ್ಷತ್ರಿಯರನ್ನು ಅನೇಕ ಬಾರಿ ಸಂಹರಿಸಿದನು.

ಪರೀಕ್ಷಿತ! ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ ವಿಶ್ವಾಮಿತ್ರನು ಗಾಧಿಮಹಾರಾಜನ ಮಗನು. ಅವನು ತನ್ನ ತಪೋಬಲದಿಂದ ಕ್ಷಾತ್ರತೇಜಸ್ಸನ್ನು ಪರಿತ್ಯಜಿಸಿ ಬ್ರಹ್ಮತೇಜಸ್ಸನ್ನು ಹೊಂದಿದನು. ವಿಶ್ವಾಮಿತ್ರನಿಗೆ ನೂರು ಮಂದಿ ಮಕ್ಕಳಿದ್ದರು. ಅವರಲ್ಲಿ ಮಧ್ಯಮನು ಮಧುಚ್ಛಂದನು. ಉಳಿದ ಮಕ್ಕಳೆಲ್ಲರೂ ಮಧುಚ್ಛಂದರೆಂಬ ಹೆಸರಿನಿಂದಲೇ ಪ್ರಖ್ಯಾತರಾಗಿದ್ದರು. ಭೃಗುವಂಶೀಯನಾದ ಅಜೀಗರ್ತನ ಮಗ ಶುನಃಶೇಪನು ವಿಶ್ವಾಮಿತ್ರನಿಗೆ ಸೋದರಳಿಯನಾಗಿದ್ದನು. ಅವನಿಗೆ ದೇವರಾತನೆಂಬ ಹೆಸರೂ ಇದ್ದಿತು. ಅವನನ್ನು ವಿಶ್ವಾಮಿತ್ರನು ಪುತ್ರನನ್ನಾಗಿ ಸ್ವೀಕರಿಸಿ ತನ್ನ ಇತರ ಮಕ್ಕಳಿಗೆ ದೇವರಾತನನ್ನು ಹಿರಿಯಣ್ಣನನ್ನಾಗಿ ಭಾವಿಸುವಂತೆ ನಿರ್ದೇಶಿಸಿದನು. ಶುನಃಶೇಪನಾರೆಂಬುದನ್ನು ಈ ಹಿಂದೆಯೇ ಸಂಕ್ಷೇಪವಾಗಿ ಹೇಳಿಯಾಗಿದೆ. ಹರಿಶ್ಚಂದ್ರನು ವರುಣನ ಪ್ರೀತ್ಯರ್ಥವಾಗಿ ಮಾಡಬೇಕಾಗಿದ್ದ ಯಜ್ಞಕ್ಕಾಗಿ ಅವನ ಮಗ ರೋಹಿತನು ಅಜೀಗರ್ತನಿಗೆ ಮೂಲ್ಯವನ್ನು ಕೊಟ್ಟು ಶುನಃಶೇಪನನ್ನು ಯಜ್ಞದ ಪಶುವಾಗಿ ತಂದಿದ್ದನು. ಯಾಗದ ಸಮಯದಲ್ಲಿ ಶುನಃಶೇಪನು ವಿಶ್ವಾಮಿತ್ರರ ಉಪದೇಶದಂತೆ ಪ್ರಜಾಪತಿಯೇ ಮೊದಲಾದ ದೇವತೆಗಳನ್ನು ಸ್ತುತಿಸಿ ತನ್ನನ್ನು ಯಜ್ಞದ ಬಲಿಸ್ತಂಭಕ್ಕೆ ಕಟ್ಟಿಹಾಕಿದ್ದ ಪಶುಬಂಧನದಿಂದ ಮುಕ್ತಿಯನ್ನು ಹೊಂದಿದ್ದನು. ದೇವಯಜನದಲ್ಲಿ ದೇವತೆಗಳಿಂದ

ವಿಶ್ವಾಮಿತ್ರನಿಗೆ ಕೊಡಲ್ಪಟ್ಟವನಾದುದರಿಂದ ಶುನಃಶೇಪನಿಗೆ ದೇವರಾತ ನೆಂದು ಹೆಸರಾಯಿತು. ಗಾಧಿಯ ವಂಶದಲ್ಲಿ ಈ ಶುನಃಶೇಪನು ದೇವರಾತ ನೆಂಬ ಹೆಸರಿನಿಂದ ವಿಖ್ಯಾತನಾದನು. ವಿಶ್ವಾಮಿತ್ರನ ಹಿರಿಯ ಮಕ್ಕಳು ಶುನಃಶೇಪನನ್ನು ತಮಗಿಂತಲೂ ಜ್ಯೇಷ್ಠನೆಂಬುದನ್ನು ಅಂಗೀಕರಿಸಲು ನಿರಾಕರಿಸಿದರು. ವಯಸ್ಸಿನಿಂದಲೂ ಹಿರಿಯರಾಗಿದ್ದ ಅವರಿಗೆ ವಿಶ್ವಾಮಿತ್ರನ ಮಾತು ಸಮಂಜಸವಾಗಿ ಕಾಣಲಿಲ್ಲ. ಇದರಿಂದ ಕ್ರುದ್ಧನಾದ ವಿಶ್ವಾಮಿತ್ರನು ತನ್ನ ಮಕ್ಕಳಿಗೆ ಮ್ಲೇಚ್ಛರಾಗಿರೆಂದು ಶಾಪಕೊಟ್ಟನು. ವಿಶ್ವಾಮಿತ್ರನ ಶಾಪದಿಂದ ಮಧುಚ್ಛಂದನವರೆಗಿನ ಐವತ್ತು ಮಂದಿ ಮಕ್ಕಳೂ ಮ್ಲೇಚ್ಛ ರಾಗಲು, ಮಧುಚ್ಛಂದನು ತನಗಿಂತ ಕಿರಿಯ ಐವತ್ತು ಸಹೋದರರೊಡನೆ ವಿಶ್ವಾಮಿತ್ರನ ಬಳಿಗೆ ಹೋಗಿ ಹೇಳಿದನು :

"ತಂದೆಯೇ! ನಿನ್ನ ಆಜ್ಞೆಯಂತೆ ನಾವು ನಡೆದುಕೊಳ್ಳಲು ಸಿದ್ಧರಾಗಿದ್ದೇವೆ. ಶುನಃಶೇಪನನ್ನು ನಮ್ಮೆಲ್ಲರಿಗೂ ಹಿರಿಯಣ್ಣನೆಂದು ಭಾವಿಸುತ್ತೇವೆ."

ತಂದೆಗೆ ಹೀಗೆ ಹೇಳಿ ಮಧುಚ್ಛಂದನು ಮಂತ್ರದ್ರಷ್ಟಾರನಾದ* ಶುನಃಶೇಪನನ್ನು ಜ್ಯೇಷ್ಠಭ್ರಾತೃವನ್ನಾಗಿ ಅಂಗೀಕರಿಸಿದನು ಮತ್ತು ಶುನಃಶೇಪ ನಿಗೆ ಹೇಳಿದನು :

"ಅಣ್ಣ! ನಾವೆಲ್ಲರೂ ನಿನ್ನ ತಮ್ಮಂದಿರಾಗಿದ್ದೇವೆ. ನಿನ್ನನ್ನೇ ಅನುಸರಿಸಿ ಕೊಂಡಿರುತ್ತೇವೆ."

ಆಗ ವಿಶ್ವಾಮಿತ್ರನು ತನ್ನ ಆಜ್ಞೆಯಂತೆ ನಡೆದುಕೊಂಡ ಮಧುಚ್ಛಂದಾದಿಗಳನ್ನು ಕುರಿತು ಹೇಳಿದನು :

"ಪುತ್ರರೇ! ನೀವು ನನ್ನ ಆಜ್ಞೆಯನ್ನು ನಡೆಸಿಕೊಟ್ಟು ನನ್ನ ಮಾನ ವನ್ನು ರಕ್ಷಿಸಿದಿರಿ. ನನ್ನನ್ನು ವೀರವಂತನನ್ನಾಗಿ (ಪುತ್ರವಂತನನ್ನಾಗಿ) ಮಾಡಿರುವಿರಿ. ನಿಮ್ಮಂತಹ ವಿನಯಶೀಲರನ್ನು ಪಡೆದಿರುವ ನಾನೇ ಧನ್ಯನು. ನೀವೂ ಕೂಡ ವೀರವಂತರಾಗಿರಿ. (ಸತ್ಪುತ್ರರನ್ನು ಪಡೆಯಿರಿ.)

ಪ್ರೀತಿಯ ಮಕ್ಕಳೇ! ಈ ದೇವರಾತನೂ ನಿಮ್ಮ ಗೋತ್ರದವನೇ

---

* 'ತಸ್ಯ ನೂನಂ ಕತಮಸ್ಯಾಮೃತಾನಾಂ' ಇತ್ಯಾದಿ ಮಂತ್ರಗಳ ದ್ರಷ್ಟಾರ ಶುನಃ ಶೇಪನೆಂದು ವ್ಯಾಖ್ಯಾನಕಾರರು ಹೇಳಿರುತ್ತಾರೆ.

ಆಗಿದ್ದಾನೆ. ನೀವೆಲ್ಲರೂ ಹಿರಿಯಣ್ಣನಾದ ಇವನನ್ನು ಅನುಸರಿಸಿಕೊಂಡಿರಬೇಕು.” ವಿಶ್ವಾಮಿತ್ರನ ಮಾತನ್ನು ಎಲ್ಲರೂ ಅಂಗೀಕರಿಸಿದರು.

ವಿಶ್ವಾಮಿತ್ರನಿಗೆ ಅಷ್ಟಕ, ಹಾರೀತ, ಜಯ, ಕ್ರತುಮಂತ–ಇವರೇ ಮೊದಲಾದ ಇತರ ಮಕ್ಕಳೂ ಇದ್ದರು.

ಹೀಗೆ ವಿಶ್ವಾಮಿತ್ರನು ಕೆಲವು ಮಕ್ಕಳನ್ನು ಶಪಿಸಿದನು. ಕೆಲವು ಮಕ್ಕಳನ್ನು ಅನುಗ್ರಹಿಸಿದನು. ಬೇರೆ ಗೋತ್ರದವರನ್ನೂ ತನ್ನ ಗೋತ್ರಕ್ಕೆ ಸೇರಿಸಿಕೊಂಡನು. ಇದರಿಂದಾಗಿ ಕೌಶಿಕಗೋತ್ರದಲ್ಲಿ ಹಲವಾರು ಪ್ರಭೇದ ಗಳಾದುವು. ದೇವರಾತನನ್ನು ಹಿರಿಯಣ್ಣನನ್ನಾಗಿ ಅಂಗೀಕರಿಸಿದುದರಿಂದ ಅವರ ಪ್ರವರಗಳೂ ಬೇರೆಯಾದುವು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧೬ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೭ನೆಯ ಅಧ್ಯಾಯ

ಕ್ಷತ್ರವೃದ್ಧ-ರಜೀ ಇವರೇ ಮೊದಲಾದ ರಾಜರ ವಂಶವರ್ಣನೆ

ಶ್ರೀಶುಕರು ಹೇಳುತ್ತಾರೆ :

ಯಃ ಪುರೂರವಸಃ ಪುತ್ರ ಆಯುಸ್ತಸ್ಯಾಭವನ್ಸುತಾಃ ।
ನಹುಷಃ ಕ್ಷತ್ರವೃದ್ಧಶ್ಚ ರಜೀ ರಮ್ಭಶ್ಚ ವೀರ್ಯವಾನ್ ॥೧॥

ಪರೀಕ್ಷಿತನೇ! ಪುರೂರವನಿಗೆ ಆಯುವೆಂಬ ಮಗನಿದ್ದನು. ಆಯು

---

* ಆಶ್ವಲಾಯನ, ಬೋಧಾಯನ ಮೊದಲಾದವರು ದೇವರಾತನನ್ನು ಕೌಶಿಕ ಗೋತ್ರದವರಿಗೆ ಪ್ರವರಪುತ್ರನೆಂದು ಹೇಳಿರುವುದರಿಂದ ವಿಶ್ವಾಮಿತ್ರನು ದೇವರಾತನನ್ನೇ ಹಿರಿಯಮಗನನ್ನಾಗಿ ಮಾಡಿಕೊಂಡನೆಂಬುದು ಸ್ಪಷ್ಟವಾಗಿದೆ. ಒಂದು ಗೋತ್ರದಲ್ಲಿರುವ ಒಳಭೇದಕ್ಕೆ ಪ್ರವರ–ಎಂದು ಹೆಸರು.

ಏಕ ಏವ ಋಷಿರ್ಯಾವತ್ಪ್ರವರೇಷು ಪ್ರವರ್ತತೇ । ತಾವತ್ಸಮಾನಗೋತ್ರತ್ವಂ ವಿನಾಭೃಗ್ವಂಗಿರೋಗಣಾತ್ ॥ ಒಬ್ಬನೇ ಋಷಿಯು ಎಲ್ಲಿಯವರೆಗೆ ಪ್ರವರದಲ್ಲಿ ಸೇರುವನೋ ಅಲ್ಲಿಯವರೆಗೂ ಅವುಗಳನ್ನು ಒಂದೇ ಗೋತ್ರವೆಂದು ತಿಳಿಯಬೇಕು. ಆದರೆ ಭೃಗು, ಅಂಗಿರಸ್ಸು ಇವರ ಗಣಗಳಲ್ಲಿ ಮಾತ್ರ ಈ ನಿಯಮವಿಲ್ಲ.

ವಿಗೆ ನಹುಷ, ಕ್ಷತ್ರವೃದ್ಧ, ರಜೀ, ಶಕ್ತಿಶಾಲಿಯಾದ ರಂಭ ಮತ್ತು ಅನೇನಸ–ಎಂಬ ಐವರು ಮಕ್ಕಳಿದ್ದರು. ಈಗ ನಾನು ನಿನಗೆ ಮೊದಲು ಕ್ಷತ್ರವೃದ್ಧನ ವಂಶವನ್ನು ವಿವರಿಸುತ್ತೇನೆ. ಕ್ಷತ್ರವೃದ್ಧನ ಮಗ ಸುಹೋತ್ರನಿಗೆ ಕಾಶ್ಯ, ಕುಶ ಮತ್ತು ಗೃತ್ಸಮದರೆಂಬ ಮೂವರು ಮಕ್ಕಳಿದ್ದರು.

ಮೂರನೆಯವನಾದ ಗೃತ್ಸಮದನ ಮಗ ಶುನಕ. ಋಗ್ವೇದಿಗಳಲ್ಲಿ ಶ್ರೇಷ್ಠಮುನಿಯಾದ ಶೌನಕನೆಂಬುವನು ಶುನಕನ ಮಗನು. ಸುಹೋತ್ರನ ಹಿರಿಯ ಮಗನಾದ ಕಾಶ್ಯನ ಮಗ ಕಾಶಿ. ಕಾಶಿಯ ಮಗ ರಾಷ್ಟ್ರ. ರಾಷ್ಟ್ರನ ಮಗ ದೀರ್ಘತಮಸ. ದೀರ್ಘತಮಸನ ಮಗ ಧನ್ವಂತರಿ. ದೀರ್ಘತಮಸನ ಮಗನಾದ ಈ ಧನ್ವಂತರಿಯೇ ಆಯುರ್ವೇದಪ್ರವರ್ತಕನು. ಯಜ್ಞಭಾಗದ ಭೋಕ್ತೃವಾದ ಇವನು ವಾಸುದೇವನ ಅಂಶದಿಂದ ಹುಟ್ಟಿದವನು. ಧನ್ವಂತರಿಯನ್ನು ಸ್ಮರಿಸಿದ ಮಾತ್ರದಿಂದಲೇ ಸಮಸ್ತವಾದ ರೋಗಗಳೂ ಪರಿಹಾರವಾಗುತ್ತವೆ. ಕೇತುಮಂತನೆಂಬುವನು ಧನ್ವಂತರಿಯ ಮಗನು. ಕೇತುಮಂತನ ಮಗ ಭೀಮರಥ. ಭೀಮರಥನ ಮಗ ದಿವೋದಾಸ. ದಿವೋದಾಸನಿಗೆ ದ್ಯುಮಂತ–ಎಂಬ ಹೆಸರೂ ಇದ್ದಿತು. ದ್ಯುಮಂತನ ಮಗ ಪ್ರತರ್ದನ. ಪ್ರತರ್ದನನು ಶತ್ರುಜಿತ, ವತ್ಸ, ಋತಧ್ವಜ, ಕುವಲಯಾಶ್ವ–ಎಂಬ ಶುಭನಾಮಗಳಿಂದಲೂ ಪ್ರಸಿದ್ಧನಾಗಿದ್ದನು.* ಅಲರ್ಕನೇ ಮೊದಲಾದವರು ಪ್ರತರ್ದನನ ಮಕ್ಕಳು. ಅಲರ್ಕನು ಅರುವತ್ತಾರು ಸಾವಿರ ವರ್ಷಗಳ ಕಾಲ ಯುವಕನಾಗಿದ್ದುಕೊಂಡು, ಭೂಮಿಯನ್ನು ಆಳಿದನು. ಅಲರ್ಕನನ್ನು ಬಿಟ್ಟು ಬೇರೆ ಯಾರೂ ಅಷ್ಟುವರ್ಷಗಳಕಾಲ ರಾಜ್ಯವಾಳಿರಲಿಲ್ಲ. ಸಂತತಿ ಎಂಬುವವನು ಅಲರ್ಕನ ಮಗನು. ಸಂತತಿಯ ಮಗ ಸುನೀಥ. ಸುನೀಥನ ಮಗ ಸುಕೇತನ. ಸುಕೇತನನ ಮಗ ಧರ್ಮಕೇತು. ಧರ್ಮಕೇತುವಿನ ಮಗ ಸತ್ಯಕೇತು. ಸತ್ಯಕೇತುವಿನ ಸುಪುತ್ರ ರಾಜಾ ಸುಕುಮಾರ. ಸುಕುಮಾರನ ಮಗ ವೀತಿಹೋತ್ರ. ವೀತಿಹೋತ್ರನ ಸುಪುತ್ರ ಭರ್ಗ. ಭರ್ಗನ ಮಗ ರಾಜಾ ಭಾರ್ಗಭೂಮಿ. ಇವರೆಲ್ಲರೂ ಕ್ಷತ್ರವೃದ್ಧನ ವಂಶದಲ್ಲಿ ಹುಟ್ಟಿದ

---

* ಮತ್ತೊಬ್ಬರ ವ್ಯಾಖ್ಯಾನದಂತೆ : ದಿವೋದಾಸನ ಮಗ ದ್ಯುಮಂತ. ದ್ಯುಮಂತನಿಗೆ ಪ್ರತರ್ದನನೆಂಬ ಹೆಸರೂ ಇದ್ದಿತು. ಅದೇ ದ್ಯುಮಂತನಿಗೆ ಅಥವಾ ಪ್ರತರ್ದನನಿಗೆ ಶತ್ರುಜಿತ, ವತ್ಸ, ಋತಧ್ವಜ, ಕುವಲಯಾಶ್ವ–ಎಂಬ ಶುಭನಾಮಗಳೂ ಇದ್ದುವು.

ಕಾರ್ಶ್ಯಸಂತತಿಯವರು. ಈಗ ನಾನು ನಿನಗೆ ಆಯುವಿನ ಐವರು ಮಕ್ಕಳಲ್ಲೊಬ್ಬನಾದ ರಂಭನ ವಂಶಾವಳಿಯನ್ನು ಹೇಳುತ್ತೇನೆ.

ರಂಭನ ಮಗ ರಭಸ. ರಭಸನ ಮಗ ಗಂಭೀರ. ಗಂಭೀರನ ಮಗ ಅಕ್ರಿಯ. ಅಕ್ರಿಯನ ಪತ್ನಿಯಿಂದ ಬ್ರಾಹ್ಮಣವಂಶವು ಪ್ರಾರಂಭವಾಯಿತು.*

ಪರೀಕ್ಷಿತ! ಈಗ ನಾನು ಆಯುವಿನ ಕಿರಿಯ ಮಗನಾದ ಅನೇನಸನ ವಂಶಾವಳಿಯನ್ನು ಹೇಳುತ್ತೇನೆ. ಶುದ್ಧನೆಂಬುವನು ಅನೇನಸನ ಮಗ. ಶುದ್ಧನ ಮಗ ಶುಚಿ. ಶುಚಿಯ ಮಗ ತ್ರಿಕಕುದ. ತ್ರಿಕಕುದನ ಮಗ ಧರ್ಮಸಾರಥಿ. ಧರ್ಮಸಾರಥಿಯ ಮಗ ಶಾಂತರಯಸ. ಶಾಂತರಯಸನು ಆತ್ಮಜ್ಞಾನಿಯಾಗಿದ್ದುದರಿಂದ ಕೃತಕೃತ್ಯನಾದನು. ಅವನಿಗೆ ಸಂತಾನದ ಅವಶ್ಯಕತೆ ಇರಲಿಲ್ಲ.

ಪರೀಕ್ಷಿತ! ಈಗ ನಾನು ನಿನಗೆ ಆಯುವಿನ ಮತ್ತೊಬ್ಬ ಮಗನಾದ ರಜಿಯ ವಂಶಾವಳಿಯನ್ನು ಹೇಳುತ್ತೇನೆ. ರಜಿಗೆ ಮಹಾತೇಜಸ್ವಿಗಳಾದ ಐದುನೂರು ಮಕ್ಕಳಿದ್ದರು. ದೇವತೆಗಳ ಪ್ರಾರ್ಥನೆಯಂತೆ ರಜಿಯು ದೈತ್ಯರನ್ನು ಸಂಹರಿಸಿ ಇಂದ್ರನಿಗೆ ಸ್ವರ್ಗದ ಆಧಿಪತ್ಯವನ್ನು ವಹಿಸಿಕೊಟ್ಟನು. ಆದರೆ ಇಂದ್ರನು ಪ್ರಹ್ಲಾದನೇ ಮೊದಲಾದ ದೈತ್ಯರ ವಿಷಯದಲ್ಲಿ ಬಹಳ ವಾಗಿ ಭಯಗೊಂಡಿದ್ದನು. ಅದೇ ಕಾರಣದಿಂದ ಇಂದ್ರನು ಸ್ವರ್ಗಾಧಿಪತ್ಯ ವನ್ನು ರಜಿಗೇ ಕೊಟ್ಟುಬಿಟ್ಟನು ಮತ್ತು ರಜಿಯ ಚರಣಕಮಲಗಳನ್ನು ಹಿಡಿದುಕೊಂಡು ತನ್ನ ರಕ್ಷಣೆಯ ಭಾರವನ್ನು ರಜಿಗೇ ವಹಿಸಿಕೊಟ್ಟನು. ರಜಿಯು ಮರಣಹೊಂದಲಾಗಿ ಸ್ವರ್ಗದ ಆಧಿಪತ್ಯವನ್ನು ತನಗೆ ವಹಿಸಿ ಕೊಡಬೇಕೆಂದು ಇಂದ್ರನು ರಜಿಯ ಮಕ್ಕಳನ್ನು ಪ್ರಾರ್ಥಿಸಿದನು. ಆದರೆ ರಜಿಯ ಮಕ್ಕಳು ಸ್ವರ್ಗದ ಆಧಿಪತ್ಯವನ್ನು ಇಂದ್ರನಿಗೆ ಹಿಂದಿರುಗಿಸಿಕೊಡಲು ನಿರಾಕರಿಸಿದರು. ತಾವೇ ಇಂದ್ರರಾಗಿ ಯಜ್ಞದ ಹವಿರ್ಭಾಗಗಳನ್ನು ಪಡೆದುಕೊಳ್ಳಲು ಪ್ರಾರಂಭಿಸಿದರು. ಆಗ ದೇವಗುರುವಾದ ಬೃಹಸ್ಪತಿಯು ಇಂದ್ರನ ಪ್ರಾರ್ಥನೆಯಂತೆ ಆಭಿಚಾರಿಕವಿಧಿಯಿಂದ ಹೋಮಮಾಡಿದನು.

---

* ರಂಭನ ಮಗನು ರಭಸನು. ಅವನಿಗೆ ಗಭೀರ-ಕ್ರತು–ಎಂಬ ಇಬ್ಬರು ಮಕ್ಕಳು. **ರಮ್ಭಸ್ಯ ರಭಸಃ ಪುತ್ರೋ ಗಮ್ಭೀರಶ್ಚ ಕ್ರತುಸ್ತತಃ**–ಎಂಬ ಪಾಠವನ್ನು ಇಟ್ಟುಕೊಂಡು ಒಬ್ಬ ವ್ಯಾಖ್ಯಾನಕಾರರು ಮೇಲಿನಂತೆ ಅರ್ಥಮಾಡಿರುತ್ತಾರೆ.

ಇದರ ಪ್ರಭಾವದಿಂದಾಗಿ ರಜಿಯ ಮಕ್ಕಳು ಧರ್ಮಮಾರ್ಗದಿಂದ ಭ್ರಷ್ಟರಾಗಿ ಹೋದರು. ಆಗ ಇಂದ್ರನು ಅನಾಯಾಸವಾಗಿ ರಜಿಯ ಐವರು ಮಕ್ಕಳನ್ನೂ ಸಂಹರಿಸಿಬಿಟ್ಟನು. ಅವರಲ್ಲಿ ಯಾವೊಬ್ಬನೂ ಉಳಿಯಲಿಲ್ಲ.

ಕ್ಷತ್ರವೃದ್ಧನ ಮೊಮ್ಮಗನಾದ ಕುಶನಿಗೆ ಪ್ರತಿ–ಎಂಬ ಮಗನು ಹುಟ್ಟಿದನು. ಪ್ರತಿಯ ಮಗ ಸಂಜಯ. ಸಂಜಯನ ಮಗ ಜಯ. ಜಯನ ಮಗ ಕೃತ. ಕೃತನ ಮಗ ರಾಜನಾದ ಹರ್ಯವನ. ಹರ್ಯವನನ ಮಗ ಸಹದೇವ. ಸಹದೇವನ ಮಗ ಹೀನ. ಹೀನನ ಮಗ ಜಯಸೇನ. ಜಯಸೇನನ ಮಗ ಸಂಕೃತಿ. ಮಹಾರಥಿಯಾದ, ವೀರಶಿರೋಮಣಿಯಾದ ಜಯನು ಸಂಕೃತಿಯ ಮಗನು. ಪರೀಕ್ಷಿತ! ಇವರೆಲ್ಲರೂ ಕ್ಷತ್ರವೃದ್ಧನ ವಂಶದ ನರಪತಿಗಳು. ಇನ್ನು ಮುಂದೆ ನಾನು ಹೇಳಲಿರುವ ನಹುಷನ ವಂಶದ ವರ್ಣನೆಯನ್ನು ಕೇಳು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧೭ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೮ನೆಯ ಅಧ್ಯಾಯ

ಯಯಾತಿಯ ಚರಿತ್ರೆ

ಶ್ರೀಶುಕರು ಹೇಳುತ್ತಾರೆ :

ಯತಿರ್ಯಯಾತಿಃ ಸಂಯಾತಿರಾಯತಿರ್ವಿಯತಿಃ ಕೃತಿಃ ।
ಷಡಿಮೇ ನಹುಷಸ್ಯಾಸನ್ನಿಂದ್ರಿಯಾಣೀವ ದೇಹಿನಃ ॥೧॥

ಪರೀಕ್ಷಿತನೇ! ದೇಹಧಾರಿಗಳಿಗೆ ಆರು ಇಂದ್ರಿಯಗಳಿರುವಂತೆ ನಹುಷನಿಗೆ ಯತಿ, ಯಯಾತಿ, ಸಂಯಾತಿ, ಆಯತಿ, ವಿಯತಿ ಮತ್ತು ಕೃತಿಗಳೆಂಬ ಆರು ಮಂದಿ ಮಕ್ಕಳಿದ್ದರು.

ನಹುಷನಿಗೆ ತನ್ನ ಹಿರಿಯ ಮಗನಾದ ಯತಿಗೆ ರಾಜ್ಯವನ್ನು ವಹಿಸಿಕೊಡಬೇಕೆಂಬ ಆಶಯವಿದ್ದಿತು. ಆದರೆ ಯತಿಯು ರಾಜ್ಯವನ್ನು ಪರಿಗ್ರಹಿಸಲಿಲ್ಲ. ಏಕೆಂದರೆ : ಯತಿಯು ರಾಜ್ಯವನ್ನು ವಹಿಸಿಕೊಂಡರೆ ಅದರಿಂದ ಆಗುವ ಪರಿಣಾಮವನ್ನು ಚೆನ್ನಾಗಿ ತಿಳಿದುಕೊಂಡಿದ್ದನು. ರಾಜ್ಯಭಾರದಲ್ಲಿ

ತೊಡಗಿದ ಮನುಷ್ಯನು ಆತ್ಮಜ್ಞಾನದ ಕಡೆಗೆ ಬುದ್ಧಿಯನ್ನು ತಿರುಗಿಸಲಾರ ನೆಂಬುದನ್ನು ಯತಿಯು ಚೆನ್ನಾಗಿ ತಿಳಿದಿದ್ದನು. ಇಂದ್ರನ ಪತ್ನಿಯಾದ ಶಚೀದೇವಿಯ ಸಹವಾಸವನ್ನು ಬಯಸಿದ ನಹುಷನನ್ನು ಬ್ರಾಹ್ಮಣರು ಸ್ವರ್ಗದಿಂದ ಅಟ್ಟಿಬಿಟ್ಟರು. ಮಹರ್ಷಿಗಳ ಶಾಪದಂತೆ ಭೂಲೋಕದಲ್ಲವನು ಸರ್ಪವಾದನು. ಆ ಸಮಯದಲ್ಲಿ ಯಯಾತಿಯು ರಾಜನಾಗಿ ರಾಜ್ಯಭಾರ ವನ್ನು ವಹಿಸಿಕೊಂಡನು. ಯಯಾತಿಯು ತನ್ನ ನಾಲ್ವರು ತಮ್ಮಂದಿರನ್ನು ನಾಲ್ಕು ದಿಕ್ಕುಗಳಿಗೂ ಅಧಿಪತಿಗಳನ್ನಾಗಿ ಮಾಡಿದನು. ಯಯಾತಿಯು ಶುಕ್ರಾಚಾರ್ಯರ ಪುತ್ರಿಯಾದ ದೇವಯಾನಿಯನ್ನೂ ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನೂ ಪತ್ನಿಯರನ್ನಾಗಿ ಸ್ವೀಕರಿಸಿ ಭೂಮಂಡಲವನ್ನು ಆಳುತ್ತಿದ್ದನು."

ಪರೀಕ್ಷಿತನು ಪ್ರಶ್ನಿಸುತ್ತಾನೆ :

ಬ್ರಹ್ಮರ್ಷಿರ್ಭಗವಾನ್ಕಾವ್ಯಃ ಕ್ಷತ್ರಬನ್ಧುಶ್ಚ ನಾಹುಷಃ ।
ರಾಜನ್ಯವಿಪ್ರಯೋಃ ಕಸ್ಮಾದ್ವಿವಾಹಃ ಪ್ರತಿಲೋಮಕಃ ॥೫॥

"ಪೂಜ್ಯರೇ! ಪೂಜ್ಯರಾದ ಶುಕ್ರಾಚಾರ್ಯರು ಬ್ರಾಹ್ಮಣರು. ಯಯಾತಿಯು ಕ್ಷತ್ರಿಯ. ಹೀಗಿದ್ದರೂ ಬ್ರಾಹ್ಮಣಕನ್ಯೆಗೂ ಕ್ಷತ್ರಿಯವರನಿಗೂ ಪ್ರತಿಲೋಮದ ವಿವಾಹವು ಹೇಗೆ ನಡೆಯಿತು? ದಯಮಾಡಿ ಹೇಳಿರಿ."

ಶ್ರೀಶುಕರು ಹೇಳುತ್ತಾರೆ :

"ಪರೀಕ್ಷಿತ! ದಾನವರಾಜನಾದ ವೃಷಪರ್ವನಿಗೆ ಮಾನಿಷ್ಠೆಯಾದ ಶರ್ಮಿಷ್ಠೆಯೆಂಬ ಮಗಳಿದ್ದಳು. ಒಮ್ಮೆ ಅವಳು ತನ್ನ ಸಾವಿರಾರು ಸಖಿಯ ರಿಂದಲೂ ಶುಕ್ರಾಚಾರ್ಯರ ಮಗಳಾದ ದೇವಯಾನಿಯಿಂದಲೂ ಕೂಡಿ ಕೊಂಡು ರಾಜಧಾನಿಯ ಶ್ರೇಷ್ಠವಾದ ಮತ್ತು ಸುಂದರವಾದ ಉದ್ಯಾನವನ ದಲ್ಲಿ ಕ್ರೀಡೆಯಾಡುತ್ತಿದ್ದಳು. ಆ ಉದ್ಯಾನವನದಲ್ಲಿ ವಿಕಸಿತವಾದ ಮತ್ತು ಸುಂದರವಾದ ಪುಷ್ಪಗಳಿಂದ ಕೂಡಿದ ಅನೇಕ ವೃಕ್ಷಗಳಿದ್ದುವು. ಅಲ್ಲಿ ಒಂದು ಸುಂದರವಾದ ಸರೋವರವೂ ಇದ್ದಿತು. ಆ ಸರೋವರದಲ್ಲಿ ಅರಳಿದ ಸುಕೋಮಲವಾದ ಕಮಲಪುಷ್ಪಗಳಿದ್ದುವು. ಆ ಕಮಲಪುಷ್ಪಗಳ ಮೇಲೆ

ದುಂಬಿಗಳು ಕುಳಿತು ಸುಮಧುರವಾಗಿ ಗಾನಮಾಡುತ್ತಿದ್ದುವು. ದುಂಬಿಗಳ ಇಂಚರದಿಂದ ಪ್ರತಿಧ್ವನಿತವಾದ, ಸರೋವರದ ತೀರಪ್ರದೇಶ ಗಳಲ್ಲಿದ್ದ ಮರಳುದಿಣ್ಣೆಗಳ ಮೇಲೆ ಅಬಲೆಯಾದ ಶರ್ಮಿಷ್ಠೆಯು ತನ್ನ ಗೆಳತಿಯರೊಡನೆ ಸಂಚರಿಸುತ್ತಿದ್ದಳು.

ಸರೋವರದ ಸಮೀಪಕ್ಕೆ ಹೋದನಂತರ ತಮ್ಮ ವಸ್ತ್ರಗಳನ್ನು ಸರೋವರದ ತೀರದಲ್ಲಿ ಬಿಚ್ಚಿಟ್ಟು ನೀರಿಗಿಳಿದು ಒಬ್ಬರು ಮತ್ತೊಬ್ಬರ ಮೇಲೆ ನೀರೆರೆಚುತ್ತಾ ಜಲಕ್ರೀಡೆಯಾಡತೊಡಗಿದರು. ಆ ಸಮಯಕ್ಕೆ ಸರಿಯಾಗಿ ಪತ್ನಿಯಾದ ಪಾರ್ವತಿಯೊಡನೆ ಶಂಕರನು ಬಸವನ ಮೇಲೆ ಕುಳಿತು ಹೋಗುತ್ತಿರುವುದನ್ನು ಕನ್ಯೆಯರೆಲ್ಲರೂ ನೋಡಿದರು. ಬಹಳವಾಗಿ ನಾಚಿಕೆಗೊಂಡ ವಿವಸ್ತ್ರೆಯರಾಗಿದ್ದ ಆ ಕನ್ಯೆಯರು ಒಡನೆಯೇ ಸರೋವರದ ತೀರಕ್ಕೆ ಬಂದು ತಮ್ಮ-ತಮ್ಮ ವಸ್ತ್ರಗಳನ್ನುಟ್ಟುಕೊಂಡರು. ಇಂತಹ ಅವಸರದ ಪರಿಸ್ಥಿತಿಯಲ್ಲಿ ರಾಜಪುತ್ರಿಯಾದ ಶರ್ಮಿಷ್ಠೆಯು ತಿಳಿಯದೆಯೇ ದೇವಯಾನಿಯ ವಸ್ತ್ರವನ್ನು ತನ್ನದೆಂದೇ ಭಾವಿಸಿ ಉಟ್ಟುಕೊಂಡುಬಿಟ್ಟಳು. ಇದರಿಂದ ಕೋಪಗೊಂಡ ದೇವಯಾನಿಯು ಶರ್ಮಿಷ್ಠೆಯನ್ನು ಮೂದಲಿಸುತ್ತಾ ಹೇಳಿದಳು : (ಶ್ಲೋಕ 6-10)

ಅಹೋ ನಿರೀಕ್ಷ್ಯತಾಮಸ್ಯಾ ದಾಸ್ಯಾಃ ಕರ್ಮ ಹ್ಯಸಾಮ್ಪ್ರತಮ್ ।
ಅಸ್ಮದ್ಧಾರ್ಯಂ ಧೃತವತೀ ಶುನೀವ ಹವಿರಧ್ವರೇ ॥೧೧॥

"ಸಖಿಯರೇ! ಈ ದಾಸಿಯು ಎಷ್ಟು ಅನುಚಿತವಾದ ಕಾರ್ಯ ಮಾಡಿರುವಳೆಂಬುದನ್ನು ನೀವೇ ನೋಡಿರಿ. ನಾಯಿಯು ಯಜ್ಞದ ಹವಿಸ್ಸನ್ನು ತಿಂದುಹಾಕುವಂತೆ ನಾವು ಧರಿಸಬೇಕಾಗಿದ್ದ ವಸ್ತ್ರವನ್ನು ಈ ದಾಸಿಯು ಧರಿಸಿದ್ದಾಳೆ.

ಯಾವ ಬ್ರಾಹ್ಮಣರು ತಮ್ಮ ತಪೋಬಲದಿಂದ ಈ ಪ್ರಪಂಚವನ್ನೇ ಸೃಷ್ಟಿಸಿರುವರೋ, ಯಾರು ಪರಮಪುರುಷನಾದ ಪರಮಾತ್ಮನಿಗೆ ಮುಖ ರೂಪವಾಗಿರುವರೋ, ಯಾರು ತಮ್ಮ ಹೃದಯದಲ್ಲಿ ನಿರಂತರವಾಗಿ ಜ್ಯೋತಿರ್ಮಯನಾದ ಪರಮಾತ್ಮನನ್ನು ಧರಿಸಿರುವರೋ, ಯಾರು ಸಮಸ್ತ ಪ್ರಾಣಿಗಳ ಕಲ್ಯಾಣಕ್ಕಾಗಿ ವೈದಿಕಮಾರ್ಗವನ್ನು ನಿರ್ದೇಶಿಸಿರುವರೋ, ಯಾರ ಪಾದಕಮಲಗಳಿಗೆ ಸಮಸ್ತಲೋಕಪಾಲರೂ ಬ್ರಹ್ಮೇಂದ್ರರೇ ಮೊದಲಾದ

ದೇವತೆಗಳೂ ವಂದಿಸುತ್ತಾ ಅವರ ಸೇವೆಯಲ್ಲಿ ನಿರತರಾಗಿರುವರೋ, ಲಕ್ಷ್ಮೀದೇವಿಗೆ ಏಕಮಾತ್ರಆಶ್ರಯನಾಗಿರುವ ವಿಶ್ವಾತ್ಮನಾದ ಶ್ರೀಮನ್ನಾರಾಯಣನೂ ಕೂಡ ಯಾರಿಗೆ ನಮಸ್ಕರಿಸುತ್ತಾ ಯಾರನ್ನು ಸ್ತೋತ್ರ ಮಾಡುವನೋ–ಅಂತಹ ಬ್ರಾಹ್ಮಣರಲ್ಲಿ ನಾವೂ ಒಬ್ಬರಾಗಿದ್ದೇವೆ. ಬ್ರಾಹ್ಮಣರಲ್ಲಿಯೇ ಶ್ರೇಷ್ಠರೆನಿಸಿದ ಭೃಗುವಂಶೀಯಬ್ರಾಹ್ಮಣರಾಗಿದ್ದೇವೆ. ಹೀಗಿರುವಾಗ ಈ ದುಷ್ಟೆಯು–ಶೂದ್ರನು ವೇದಾಧ್ಯಯನ ಮಾಡುವಂತೆ–ನಾವು ಉಡುವ ವಸ್ತ್ರವನ್ನುಟ್ಟುಬಿಟ್ಟಿದ್ದಾಳೆ."

ಹೀಗೆ ಹೀನಾಮಾನವಾಗಿ ಬಯ್ಯುತ್ತಾ ಬಡಬಡಿಸುತ್ತಿದ್ದ ದೇವ ಯಾನಿಗೆ ಶರ್ಮಿಷ್ಠೆಯು ಯಥಾಯೋಗ್ಯವಾಗಿಯೇ ಉತ್ತರವನ್ನಿತ್ತಳು. ಆ ಸಮಯದಲ್ಲಿ ದಾನವರಾಜಪುತ್ರಿಯು ಕೋಪದಿಂದ ಕಿಡಿ-ಕಿಡಿಯಾಗಿದ್ದಳು. ಕಾಲಿನಿಂದ ತುಳಿದ ಸರ್ಪವು ಬುಸುಗುಟ್ಟುವಂತೆ ನಿಟ್ಟುಸಿರುಬಿಡುತ್ತಿದ್ದಳು. ತುಟಿಯನ್ನು ಕಡಿಯುತ್ತಾ ಹೇಳಿದಳು :

"ಭಿಕ್ಷುಕಿಯೇ! ಮೊದಲು ನಿನ್ನ ಯೋಗ್ಯತೆಯೇನೆಂಬುದನ್ನೇ ಅರಿತುಕೊಳ್ಳದೆ ಬಡಬಡಿಸುತ್ತಿರುವೆಯಲ್ಲವೇ? ಕಾಗೆಗಳೂ ನಾಯಿಗಳೂ ರೊಟ್ಟಿಯ ಚೂರಿಗಾಗಿ ನಮ್ಮ ಅರಮನೆಯ ಬಾಗಿಲ ಬಳಿಗೆ ಬಂದು ಕಾಯುವಂತೆ ನೀವೂ ಕೂಡ ನಿಮ್ಮ ಜೀವಿಕೆಗಾಗಿ ನಮ್ಮ ಅರಮನೆಯ ಬಾಗಿಲಿಗೆ ಬಂದು ಕಾಯುತ್ತಿರುವಿರಲ್ಲವೇ?"

ಇಂತಹ ಅನೇಕ ಪ್ರಕಾರವಾದ ಕಟುನುಡಿಗಳಿಂದ ಶರ್ಮಿಷ್ಠೆಯು ಆಚಾರ್ಯಪುತ್ರಿಯಾದ ದೇವಯಾನಿಯನ್ನು ನಿಂದಿಸಿದ್ದೂ ಅಲ್ಲದೆ ಅತ್ಯಂತ ಕೋಪಾವಿಷ್ಟಳಾಗಿದ್ದ ಆ ದಾನವಿಯು ಅವಳ ಮೈಮೇಲಿನ ವಸ್ತ್ರವನ್ನೂ ಕಿತ್ತುಕೊಂಡು ಅವಳನ್ನು ಬಾವಿಯಲ್ಲಿ ತಳ್ಳಿಬಿಟ್ಟಳು. (ಶ್ಲೋಕ 12-17)

ಶರ್ಮಿಷ್ಠೆಯು ತನ್ನ ಸಖಿಯರೊಡನೆ ಅರಮನೆಗೆ ಹೊರಟುಹೋದ ನಂತರ ಕಾಲ-ಕರ್ಮಸಂಯೋಗದಿಂದ ಅದೇ ಸ್ಥಳಕ್ಕೆ ಯಯಾತಿಯು ಬೇಟೆಯಾಡಲು ಬಂದನು. ನೀರನ್ನು ಅಪೇಕ್ಷಿಸಿದ್ದ ರಾಜನು ನೀರಿಗಾಗಿ ಬಾವಿಯಲ್ಲಿ ಇಣುಕಲು ಅಲ್ಲವನು ವಿವಸ್ತ್ರಳಾಗಿದ್ದ ದೇವಯಾನಿಯನ್ನು ನೋಡಿದನು. ತನ್ನ ಉತ್ತರೀಯವನ್ನೇ ಉಡಲು ಕೊಟ್ಟ ರಾಜನು ಕೆಳಕ್ಕೆ ಬಗ್ಗಿ ತನ್ನ ಕೈಯಿಂದ ದೇವಯಾನಿಯ ಕೈಹಿಡಿದು ಮೆಲ್ಲ-ಮೆಲ್ಲಗೆ ಮೇಲಕ್ಕೆ

ಆಕೆಯನ್ನು ಎಳೆದುಕೊಂಡನು. ಅದರಿಂದಲೇ ದೇವಯಾನಿಯ ಮನಸ್ಸಿನಲ್ಲಿ ಆತನಲ್ಲಿ ಪ್ರೇಮವಂಕುರಿಸಿತು. ಪ್ರೇಮಪೂರ್ಣವಾದ, ಸುಮಧುರವಾದ ಮಾತಿನಿಂದ ಆಕೆಯು ಯಯಾತಿಗೆ ಹೇಳಿದಳು :

"ವೀರಶಿರೋಮಣಿಯೇ! ಮಹಾರಾಜ! ನೀನಿಂದು ನನ್ನ ಪಾಣಿ ಗ್ರಹಣಮಾಡಿರುವೆ. ನೀನು ಪಾಣಿಗ್ರಹಣಮಾಡಿರುವಾಗ ಬೇರೆ ಯಾರೂ ನನ್ನ ಪಾಣಿಗ್ರಹಣಮಾಡಲಾರರು. ಬಾವಿಯಲ್ಲಿ ಬಿದ್ದಿದ್ದ ನನಗೆ ನಿನ್ನ ದರ್ಶನವಾದುದು ಮತ್ತು ನೀನು ನನ್ನನ್ನೆತ್ತಲು ನನ್ನ ಪಾಣಿಗ್ರಹಣಮಾಡಿ ದುದು–ಇವೆಲ್ಲವೂ ದೇವಕೃತವಾದುವೇ ಸರಿ. ನಮ್ಮಿಬ್ಬರ ಸಂಬಂಧವು ದೈವಕೃತವಾಗಿದೆ. ಮನುಷ್ಯಕೃತವಾದುದಲ್ಲ. ವೀರಶ್ರೇಷ್ಠನೇ! ಹಿಂದೆ ನಾನು ಬೃಹಸ್ಪತಿಯ ಪುತ್ರನಿಗೆ ಶಾಪವನ್ನಿತ್ತಿದ್ದೆನು. ನಾನು ಕೊಟ್ಟ ಶಾಪಕ್ಕೆ ಬದಲಾಗಿ ಅವನೂ ನನಗೆ ಶಾಪವನ್ನಿತ್ತಿದ್ದನು. ಅವನ ಶಾಪದ ಕಾರಣದಿಂದಾಗಿ ಯಾವ ಬ್ರಾಹ್ಮಣನೂ ನನ್ನ ಪಾಣಿಗ್ರಹಣಮಾಡಲಾರನು."*

ಪ್ರತಿಲೋಮವಿವಾಹವು ಶಾಸ್ತ್ರಕ್ಕೆ ವಿರುದ್ಧವಾದುದರಿಂದ ಯಯಾತಿಗೆ ಈ ಸಂಬಂಧವು ಅಂದರೆ ಬ್ರಾಹ್ಮಣಕನ್ಯೆಯನ್ನು ಮದುವೆಯಾಗುವುದು ಇಷ್ಟವಿರಲಿಲ್ಲ. ಆದರೂ ಯಯಾತಿಯು ಹೀಗೆ ಯೋಚಿಸಿದನು. 'ಪ್ರಾರಬ್ಧವೇ ನನಗೆ ಈ ಸಂಬಂಧವನ್ನು ಒದಗಿಸಿಕೊಟ್ಟಿದೆ. ಮೇಲಾಗಿ ನನ್ನ ಮನಸ್ಸೂ ಇವಳಲ್ಲಿ ಅನುರಕ್ತವಾಗಿದೆ.'–ಹೀಗೆ ಯೋಚಿಸಿ ಯಯಾತಿಯು ದೇವಯಾನಿಯನ್ನು ಪರಿಗ್ರಹಿಸಲು ಒಪ್ಪಿದನು.

ಯಯಾತಿಯು ಹೊರಟುಹೋದನಂತರ ದೇವಯಾನಿಯು ಅಳುತ್ತಾ ಕರೆಯುತ್ತಾ ತನ್ನ ತಂದೆಯಾದ ಶುಕ್ರಾಚಾರ್ಯರ ಬಳಿಗೆ ಹೋದಳು.

---

* ಬೃಹಸ್ಪತಿಯ ಮಗನಾದ ಕಚನು ಶುಕ್ರಾಚಾರ್ಯರ ಬಳಿಗೆ ಮೃತಸಂಜೀವಿನೀ ವಿದ್ಯೆಯನ್ನು ಕಲಿಯಲು ಬಂದಿದ್ದನು. ವಿದ್ಯೆಯನ್ನು ಕಲಿತು ಕಚನು ಹೊರಡುವುದ ರಲ್ಲಿದ್ದಾಗ ಶುಕ್ರಾಚಾರ್ಯರ ಮಗಳಾದ ದೇವಯಾನಿಯು ಕಚನನ್ನು ಮದುವೆಯಾಗ ಬಯಸಿದಳು. ಗುರುಪುತ್ರಿಯೆಂಬ ಕಾರಣದಿಂದ ಕಚನು ದೇವಯಾನಿಯ ಪ್ರಾರ್ಥನೆಯನ್ನು ನಿರಾಕರಿಸಲಾಗಿ ಕುಪಿತಳಾದ ದೇವಯಾನಿಯು–'ನೀನು ನನ್ನ ತಂದೆಯಿಂದ ಕಲಿತಿರುವ ವಿದ್ಯೆಯು ನಿಷ್ಫಲವಾಗಲಿ'–ಎಂದು ಶಾಪವನ್ನಿತ್ತಳು. ಈ ಶಾಪಕ್ಕೆ ಪ್ರತಿಯಾಗಿ ಕಚನು 'ಬ್ರಾಹ್ಮಣರಾರೂ ನಿನ್ನನ್ನು ಮದುವೆಯಾಗದಿರಲಿ'–ಎಂದು ಶಾಪವನ್ನಿತ್ತನು. ಇದರಿಂದ ದೇವಯಾನಿಗೆ ಬ್ರಾಹ್ಮಣವರನು ಸಿಕ್ಕುವುದು ಅಶಕ್ಯವಾಗಿತ್ತು.

ಶರ್ಮಿಷ್ಠೆಯು ಅಂದದ್ದು, ಮಾಡಿದ್ದು ಎಲ್ಲವನ್ನೂ ವಿಶದವಾಗಿ ಹೇಳಿದಳು. ದಾನವಿಯಾದ ಶರ್ಮಿಷ್ಠೆಯ ವರ್ತನೆಯು ಭಗವಾನ್ ಶುಕ್ರಾಚಾರ್ಯರ ಮನಸ್ಸಿಗೂ ಬೇಸರವನ್ನುಂಟುಮಾಡಿತು. ಅವರು ಪರಾವಲಂಬನೆಯಿಂದ ಬಾಳಬೇಕಾದ ಪೌರೋಹಿತ್ಯವೃತ್ತಿಯನ್ನೇ ನಿಂದಿಸಿದರು. ಕಾಪೋತವೃತ್ತಿಯನ್ನೇ* ಶ್ಲಾಘಿಸುತ್ತಾ ಮಗಳೊಡನೆ ವೃಷಪರ್ವನ ಪಟ್ಟಣವನ್ನೇ ಬಿಟ್ಟು ಹೊರಟುಬಿಟ್ಟರು. ತನ್ನ ಗುರುಗಳು ತನ್ನ ಶತ್ರುಗಳೊಡನೆ ಸ್ನೇಹದಿಂದ ಮಾತನಾಡಲು ಇಚ್ಛಿಸಿರುವರೆಂದು ಭಾವಿಸಿ ವೃಷಪರ್ವನು ಶುಕ್ರಾಚಾರ್ಯರ ಹಿಂದೆಯೇ ಹೊರಟನು ಮತ್ತು ಹಾದಿಯಲ್ಲಿಯೇ ಅವರಿಗೆ ದೀರ್ಘದಂಡ ನಮಸ್ಕಾರಮಾಡಿದನು. ಸಾಮಾನ್ಯವಾಗಿ ಬ್ರಾಹ್ಮಣರ ಕೋಪವು ಕ್ಷಣಾರ್ಧ ಮಾತ್ರವಿರುತ್ತದೆ. ಅಂತೆಯೇ ಶುಕ್ರಾಚಾರ್ಯರಿಗೂ ವೃಷಪರ್ವನ ಮೇಲೆ ಅಥವಾ ಶರ್ಮಿಷ್ಠೆಯ ಮೇಲಿನ ಕೋಪವು ಅರ್ಧಕ್ಷಣಮಾತ್ರವೇ ಇದ್ದಿತು. ಅಂತೆಯೇ ಶಿಷ್ಯನಿಗೆ ಹೇಳಿದರು :

ಕಾಮೋಽಸ್ಯಾಃ ಕ್ರಿಯತಾಂ ರಾಜನ್ನೈನಾಂ ತ್ಯಕ್ತುಮಿಹೋತ್ಸಹೇ ।

"ರಾಕ್ಷಸರಾಜನೇ! ನನ್ನ ಮಗಳು ಏನು ಹೇಳುವಳೋ ಅದರಂತೆ ನೀನು ನಡೆದುಕೊಳ್ಳಬೇಕು. ನಾನಿವಳನ್ನು ಪರಿತ್ಯಜಿಸಲಾರೆನು."

ದಾನವಪತಿಯು ಹಾಗೆಯೇ ಆಗಲೆಂದನು. ದೇವಯಾನಿಯು ತನ್ನ ಇಷ್ಟಾರ್ಥವನ್ನು ವೃಷಪರ್ವನಿಗೆ ಬೆಸಗಿದಳು :

ಪಿತ್ರಾ ದತ್ತಾ ಯತೋ ಯಾಸ್ಯೇ ಸಾನುಗಾ ಯಾತು ಮಾಮನು ॥

"ನನ್ನ ತಂದೆಯು ಕನ್ಯಾದಾನಮಾಡಿ ನನ್ನನ್ನು ಯಾವನಿಗೆ ವಿವಾಹ ಮಾಡಿಕೊಡುತ್ತಾನೆಯೋ ನಾನು ಅಲ್ಲಿಗೆ ಹೋಗುತ್ತೇನೆ. ನಾನು ಎಲ್ಲಿಗೆ ಹೋಗುವೆನೋ ಅಲ್ಲಿಗೆ ನಿನ್ನ ಮಗಳು ತನ್ನ ಸಖಿಯರೊಡಗೂಡಿ ಬಂದು ನನ್ನ ಸೇವೆಯನ್ನು ಮಾಡಬೇಕು."

ತನ್ನ ಸಲುವಾಗಿ ತನ್ನ ಬಂಧುವರ್ಗಕ್ಕೆ ಸಂಕಟವು ಒದಗಿಬಂದಿರುವುದೆಂಬುದನ್ನು ಶರ್ಮಿಷ್ಠೆಯೂ ಮನಗಂಡಳು. ತನ್ನ ತಂದೆಗೆ ಶುಕ್ರಾಚಾರ್ಯ

---

* ಕಾಪೋತ=ಕಪೋತದ ವೃತ್ತಿ : ಉಂಛವೃತ್ತಿ. ಕಪೋತಗಳು ಹೊಲ-ಗದ್ದೆಗಳಲ್ಲಿ ಬಿದ್ದಿರುವ ಕಾಳನ್ನು ಆರಿಸಿ ತಿನ್ನುವುವು ಮತ್ತು ಸ್ವಲ್ಪ ಮಾತ್ರ ಕೂಡಿಸಿ ಇಟ್ಟುಕೊಳ್ಳುವುವು. ಇದರಂತೆ ಮನುಷ್ಯನೂ ನಡೆದರೆ ಅದು ಕಾಪೋತವೃತ್ತಿ ಎನಿಸುವುದು.

ರಿಂದ ಆಗಬೇಕಾದ ಪ್ರಯೋಜನವನ್ನೂ ಗೌರವಿಸಿ, ದಾನವಿಯು ದೇವಯಾನಿಯ ಆಜ್ಞೆಯನ್ನು ಶಿರಸಾವಹಿಸಿದಳು. ಶರ್ಮಿಷ್ಠೆಯು ತನ್ನ ಒಂದು ಸಾವಿರ ಮಂದಿ ಸಖಿಯರೊಂದಿಗೆ ದೇವಯಾನಿಯ ಸೇವೆಮಾಡತೊಡಗಿದಳು.

ಶುಕ್ರಾಚಾರ್ಯರು ದೇವಯಾನಿಯ ಅಪೇಕ್ಷೆಯಂತೆಯೇ ಅವಳನ್ನು ಯಯಾತಿಗೆ ವಿವಾಹಮಾಡಿಕೊಟ್ಟರು. ಶರ್ಮಿಷ್ಠೆಯನ್ನೂ ಮತ್ತು ಅವಳ ಸಖಿಯರನ್ನೂ ದೇವಯಾನಿಯ ಸೇವೆಗಾಗಿ ಕಳುಹಿಸಿಕೊಟ್ಟರು. ಹಾಗೆ ಕಳುಹಿಸುವಾಗ ಶುಕ್ರಾಚಾರ್ಯರು ಯಯಾತಿಗೆ ಒಂದು ಎಚ್ಚರಿಕೆಯ ಮಾತನ್ನೂ ಹೇಳಿದರು. "**ಶರ್ಮಿಷ್ಠಾಮಾಧಾಸ್ತಲ್ಪೇ ನ ಕರ್ಹಿಂಚಿತ್ ।** ಶರ್ಮಿಷ್ಠೆಯನ್ನು ಯಾವಾಗಲೂ ಯಾವುದೇ ಕಾರಣದಿಂದಲೂ ನಿನ್ನ ಹಾಸಿಗೆಗೆ ಸೆಳೆದುಕೊಳ್ಳಕೂಡದು." (ಶ್ಲೋಕ 18-29)

ಸ್ವಲ್ಪ ದಿವಸಗಳು ಕಳೆದನಂತರ ದೇವಯಾನಿಯು ಪುತ್ರವತಿಯಾದಳು. ಅವಳು ಪುತ್ರವತಿಯಾದುದನ್ನು ಕಂಡು ಶರ್ಮಿಷ್ಠೆಯು ಕೂಡ ತನ್ನ ಋತುಕಾಲದಲ್ಲಿ ದೇವಯಾನಿಯ ಪತಿಯಾದ ಯಯಾತಿಯನ್ನೇ ಸಮಾಗಮಕ್ಕಾಗಿ ಯಾಚಿಸಿದಳು. ಧರ್ಮವಿದನಾದ ಯಯಾತಿಯು ಶರ್ಮಿಷ್ಠೆಯ ಯಾಚನೆಯನ್ನು ಧಾರ್ಮಿಕವಾದುದೆಂದೇ ಭಾವಿಸಿದನು. ಆದರೆ ಶುಕ್ರಾಚಾರ್ಯರ ಮಾತೂ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದ್ದಿತು. ಗುರುವಾಕ್ಯವು ಸ್ಮರಣೆಯಲ್ಲಿದ್ದರೂ ದೈವೇಚ್ಛೆಯಿದ್ದಂತಾಗಲೆಂಬ ಧೋರಣೆ ಯಿಂದ ತಾತ್ಕಾಲಿಕವಾಗಿ ಯಾವುದು ಧರ್ಮವೆನಿಸಿತೋ ಅದನ್ನೇ ಯಯಾತಿಯು ಮಾಡಿದನು. ಶರ್ಮಿಷ್ಠೆಯ ಕೋರಿಕೆಗೆ ಸಮ್ಮತಿಸಿದನು.

ಯಯಾತಿಗೆ ದೇವಯಾನಿಯಲ್ಲಿ ಯದು, ತುರ್ವಸು—ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಶರ್ಮಿಷ್ಠೆಯಲ್ಲಿ ದ್ರುಹ್ಯು, ಅನು ಮತ್ತು ಪೂರು— ಎಂಬ ಮೂವರು ಮಕ್ಕಳು ಹುಟ್ಟಿದರು. ಮಾನಿಷ್ಠೆಯಾದ ದೇವಯಾನಿಗೆ ತನ್ನಂತೆಯೇ ಶರ್ಮಿಷ್ಠೆಗೂ ತನ್ನ ಪತಿಯ ಸಮಾಗಮದಿಂದ ಮಕ್ಕಳಾಗುತ್ತಿವೆ ಯೆಂಬುದು ತಿಳಿದೊಡನೆಯೇ ಕ್ರೋಧಮೂರ್ಛಿತಳಾಗಿ ತಂದೆಯ ಮನೆಗೆ ಹೊರಟುಹೋದಳು. ಕಾಮಿಯಾದ ಯಯಾತಿಯು ದೇವಯಾನಿಯ ನ್ನೊಲಿಸಿಕೊಳ್ಳಲು ಸುಮಧುರವಾದ ಮತ್ತು ನಯವಿನಯಗಳಿಂದ ಯುಕ್ತ ವಾದ ಮಾತುಗಳನ್ನಾಡಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಅವಳ

ಕಾಲುಗಳನ್ನೊತ್ತಿ ಸೇವೆಮಾಡಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಅವಳ ಹಿಂದೆ-ಹಿಂದೆಯೇ ಹೋದರೂ ದೇವಯಾನಿಯು ಯಯಾತಿಯನ್ನು ಕಣ್ಣೆತ್ತಿಯೂ ನೋಡಲಿಲ್ಲ. ಯಾವುದೇ ರೀತಿಯಲ್ಲಿಯೂ ಅವಳನ್ನು ಪ್ರಸನ್ನ ಗೊಳಿಸಲು ಸಾಧ್ಯವಾಗಲೇ ಇಲ್ಲ. ಅವಳ ಕೋಪವು ಅಷ್ಟು ತೀಕ್ಷ್ಣವಾಗಿದ್ದಿತು. ದೇವಯಾನಿಯಿಂದ ಯಯಾತಿಯ ವೃತ್ತಾಂತವನ್ನು ತಿಳಿದು ಶುಕ್ರಾಚಾರ್ಯರೂ ಅತ್ಯಂತ ಕುಪಿತರಾಗಿ ಯಯಾತಿಗೆ ಹೇಳಿದರು :

"ಸ್ತ್ರೀಲಂಪಟನೇ! ಮಂದಬುದ್ಧಿಯವನೇ! ಸುಳ್ಳನೇ! ಮನುಷ್ಯರಿಗೆ ವಿರೂಪವನ್ನುಂಟುಮಾಡುವ ವೃದ್ಧಾಪ್ಯವು ನಿನಗೆ ಈಗಲೇ ಪ್ರಾಪ್ತವಾಗಲಿ."

ಶುಕ್ರಾಚಾರ್ಯರ ಶಾಸನವನ್ನು ಕೇಳಿದ ಯಯಾತಿಯು ಹೇಳಿದನು :

"ಬ್ರಾಹ್ಮಣಶ್ರೇಷ್ಠರೇ! ನಿಮ್ಮ ಮಗಳೊಡನೆ ವಿಷಯಭೋಗಗಳನ್ನು ಅನುಭವಿಸುತ್ತಿರುವ ನನಗೆ ಇನ್ನೂ ತೃಪ್ತಿಯೇ ಆಗಿಲ್ಲ. ಈ ನಿಮ್ಮ ಶಾಪವು ನಿಮ್ಮ ಮಗಳಿಗೂ ಅನಿಷ್ಟವಾಗಿಯೇ ಪರಿಣಮಿಸುತ್ತದೆ."

ಶುಕ್ರಾಚಾರ್ಯರಿಗೂ ಯಯಾತಿಯ ಮಾತು ಸರಿ ಎನಿಸಿತು. ಆದರೂ ಶಾಪವನ್ನು ಹಿಂತೆಗೆದುಕೊಳ್ಳುವಂತಿಲ್ಲ. ಶಾಪದಲ್ಲಿ ಸ್ವಲ್ಪ ತಿದ್ದುಪಡಿ ಮಾಡಿ ಹೇಳಿದರು : (ಶ್ಲೋಕ 30-36)

ವ್ಯತ್ಯಸ್ಯತಾಂ ಯಥಾಕಾಮಂ ವಯಸಾ ಯೋಽಭಿಧಾಸ್ಯತಿ ॥೩೭॥

"ನನ್ನ ಶಾಪದಿಂದ ನಿನಗೆ ಪ್ರಾಪ್ತವಾಗುವ ವೃದ್ಧಾಪ್ಯವನ್ನು ತರುಣ ನೊಬ್ಬನ ಯೌವನದೊಡನೆ ಯಥೇಚ್ಛವಾಗಿ ವಿನಿಮಯಮಾಡಿಕೊಳ್ಳ ಬಹುದು."

ಶುಕ್ರಾಚಾರ್ಯರಿತ್ತ ಶಾಪದಲ್ಲಿ ಈ ವಿಧವಾದ ತಿದ್ದುಪಡಿಯನ್ನು ಮಾಡಿಸಿಕೊಂಡು ಯಯಾತಿಯು ರಾಜಧಾನಿಗೆ ಬಂದು ತನ್ನ ಜ್ಯೇಷ್ಠಪುತ್ರ ನಾದ ಯದುವನ್ನು ಕರೆಯಿಸಿ ಅವನೊಡನೆ ಹೇಳಿದನು :

"ಯದುವೇ! ನಿನ್ನ ಮಾತಾಮಹನಿಂದ ನನಗೆ ಪ್ರಾಪ್ತವಾಗಿರುವ ಈ ಮುಪ್ಪನ್ನು ನೀನು ತೆಗೆದುಕೊಂಡು ನಿನ್ನ ಯೌವನವನ್ನು ನನಗೆ ಕೊಡು. ವಿಷಯಸುಖಗಳಲ್ಲಿ ನನಗಿನ್ನೂ ತೃಪ್ತಿಯುಂಟಾಗಿಲ್ಲ. ಕೆಲವು ವರ್ಷಗಳ ಕಾಲ ನಿನ್ನ ಯೌವನದಿಂದ ನಾನು ವಿಷಯಸುಖಗಳನ್ನು ಅನು

ಭವಿಸುವೆನು. ಅನಂತರ ನಾನು ನಿನಗೆ ನಿನ್ನ ಯೌವನವನ್ನು ಕೊಟ್ಟು ನಿನ್ನಿಂದ ಮುಪ್ಪನ್ನು ಪಡೆದುಕೊಳ್ಳುವೆನು.”

“ತಂದೆಯೇ! ನಿನಗೆ ಬಂದಿರುವ ಮುದಿತನವನ್ನು ಅಕಾಲದಲ್ಲಿ ಪಡೆದುಕೊಂಡು ಜೀವಿಸುವ ಇಚ್ಛೆ ನನಗಿಲ್ಲ.

ಅವಿದಿತ್ವಾ ಸುಖಂ ಗ್ರಾಮ್ಯಂ ವೈತೃಷ್ಣ್ಯಂ ನೈತಿ ಪೂರುಷಃ ॥೪೦॥

ವಿಷಯಸುಖಗಳನ್ನು ಅನುಭವಿಸದೆ ಯಾವ ಮನುಷ್ಯನೂ ಕೂಡ ವೈರಾಗ್ಯವನ್ನು ಹೊಂದಲಾರನು. ಆದುದರಿಂದ ನಿನ್ನ ವೃದ್ಧಾಪ್ಯವನ್ನು ವಿನಿಮಯವಾಗಿ ನಾನು ಹೊಂದಲು ಇಚ್ಛಿಪಡುವುದಿಲ್ಲ.”

ಪರೀಕ್ಷಿತನೆ! ಯದುವಿನಂತೆಯೇ ತುರ್ವಸು, ದ್ರುಹ್ಯು ಮತ್ತು ಅನು ಇವರೂ ಕೂಡ ತಂದೆಯ ಆಜ್ಞೆಯನ್ನು ತಿರಸ್ಕರಿಸಿದರು. ಅವರೆಲ್ಲರೂ ಧರ್ಮವನ್ನು ತಿಳಿದವರಾಗಿರಲಿಲ್ಲ ಮತ್ತು ಅನಿತ್ಯವಾದ ಶರೀರವನ್ನೇ ಶಾಶ್ವತವಾದುದೆಂಬುದಾಗಿ ತಿಳಿದಿದ್ದರು.

ಬಳಿಕ ಯಯಾತಿಯು, ವಯಸ್ಸಿನಲ್ಲಿ ಕಿರಿಯನಾದ ಮತ್ತು ಗುಣದಲ್ಲಿ ಅಧಿಕನಾದ ಪೂರುವನ್ನು ಕರೆಯಿಸಿ ಹೇಳಿದನು :

“ವತ್ಸನೇ! ನಿನ್ನ ಅಗ್ರಜರಂತೆ ನೀನೂ ಕೂಡ ನನ್ನ ಮಾತನ್ನು ತಿರಸ್ಕರಿಸಬೇಡ. ನನ್ನ ಮುದಿತನವನ್ನು ಸ್ವಲ್ಪ ಕಾಲದವರೆಗೆ ನಿನ್ನ ಯೌವನದೊಡನೆ ವಿನಿಮಯಮಾಡಿಕೋ.”

ತಂದೆಯ ಮಾತಿಗೆ ಉತ್ತರವಾಗಿ ಪೂರುವು ಹೇಳುತ್ತಾನೆ :

ಕೋ ನು ಲೋಕೇ ಮನುಷ್ಯೇಂದ್ರ ಪಿತುರಾತ್ಮಕೃತಃ ಪುಮಾನ್ ।
ಪ್ರತಿಕರ್ತುಂ ಕ್ಷಮೋ ಯಸ್ಯ ಪ್ರಸಾದಾದ್ವಿಂದತೇ ಪರಮ್ ॥೪೩॥

“ತಂದೆಯೇ! ಪಿತೃವಿನ ಕೃಪೆಯಿಂದಲೇ ಮನುಷ್ಯನಿಗೆ ಪರಮಪದವು ಲಭಿಸುತ್ತದೆ. ವಾಸ್ತವವಾಗಿ ಪುತ್ರನ ಶರೀರವು ತಂದೆಯೇ ಕೊಟ್ಟುದು. ಶರೀರವನ್ನೇ ಅನುಗ್ರಹಿಸಿಕೊಟ್ಟಿರುವ ತಂದೆಗೆ ಪ್ರತ್ಯುಪಕಾರಮಾಡಲು ಯಾವನು ತಾನೇ ಸಮರ್ಥನು?

ಉತ್ತಮಶ್ಚಿಂತಿತಂ ಕುರ್ಯಾತ್ಪ್ರೋಕ್ತಕಾರೀ ತು ಮಧ್ಯಮಃ ।
ಅಧಮೋಽಶ್ರದ್ಧಯಾ ಕುರ್ಯಾದಕರ್ತೋಚ್ಚರಿತಂ ಪಿತುಃ ॥೪೪॥

ತಂದೆಯ ಮನಸ್ಸಿನಲ್ಲೇನಿರುವುದೆಂಬುದನ್ನು ತಿಳಿದು ಅವನಿಂದ ಹೇಳಿಸಿಕೊಳ್ಳದೆಯೇ ಅವನ ಅಭೀಷ್ಟವನ್ನು ನೆರವೇರಿಸಿಕೊಡುವುದು ಉತ್ತಮಪುತ್ರನ ಲಕ್ಷಣವಾಗಿದೆ. ತಂದೆಯು ಹೇಳಿದ ಮೇಲೆ ಅವನು ಹೇಳಿದ ಕಾರ್ಯವನ್ನು ಶ್ರದ್ಧೆಯಿಂದ ಮಾಡುವುದು ಮಧ್ಯಮಪುತ್ರನ ಲಕ್ಷಣವಾಗಿದೆ. ತಂದೆಯು ಕಾರ್ಯವನ್ನು ಹೇಳಿದನಂತರವೂ ಅಶ್ರದ್ಧೆಯಿಂದಿದ್ದು ಬೇಕಾ-ಬಿಟ್ಟಿಯಾಗಿ ಕಾರ್ಯಮಾಡುವವನು ಅಧಮನೆನಿಸಿಕೊಳ್ಳುತ್ತಾನೆ. ಅಂತಹವನನ್ನು ಮಗನೆಂದು ಕರೆಯುವುದೂ ತಪ್ಪಾಗುತ್ತದೆ. ಅಂತಹವನು ತಂದೆಗೆ ಮಲ-ಮೂತ್ರಪ್ರಾಯನು."

ಪರೀಕ್ಷಿತ! ಪೂರುವು ತಂದೆಗೆ ಹೀಗೆ ಹೇಳಿ ಅತ್ಯಾನಂದದಿಂದಲೇ ತಂದೆಯ ಮುಪ್ಪನ್ನು ಸ್ವೀಕರಿಸಿದನು. ಯಯಾತಿರಾಜನು ಪೂರುವಿನ ಯೌವನವನ್ನು ಪಡೆದು ಹಿಂದಿನಂತೆಯೇ ವಿಷಯೋಪಭೋಗಗಳನ್ನು ಅನುಭವಿಸುತ್ತಿದ್ದನು. ಆತನು ಜಂಬೂದ್ವೀಪವೇ ಮೊದಲಾದ ಏಳು ದ್ವೀಪಗಳಿಗೂ ಸಾಮ್ರಾಟನಾಗಿದ್ದನು. ತಂದೆಯಾದ ನಹುಷನಂತೆಯೇ ಪ್ರಜೆಗಳನ್ನು ಪರಿಪಾಲಿಸುತ್ತಿದ್ದನು. ದೃಢವಾದ ಇಂದ್ರಿಯಗಳನ್ನು ಹೊಂದಿದ್ದ ಯಯಾತಿಯು ಸಮಯಾನುಸಾರವಾಗಿ ಪ್ರಾಪ್ತವಾದ ವಿಷಯಸುಖಗಳನ್ನು ಯಥೇಚ್ಛವಾಗಿ ಅನುಭವಿಸುತ್ತಿದ್ದನು. ದೇವಯಾನಿಯು ಅವನಿಗೆ ಪ್ರೇಮದ ಪುತ್ಥಳಿಯಾಗಿದ್ದಳು. ಅವಳು ತನ್ನ ಪ್ರಿಯತಮನನ್ನು ಮನಸ್ಸು, ಮಾತು, ಶರೀರ ಮತ್ತು ವಸ್ತುಗಳ ಮೂಲಕವಾಗಿ ಪ್ರತಿನಿತ್ಯವೂ ಪ್ರಸನ್ನಗೊಳಿಸುತ್ತಿದ್ದಳು. ಏಕಾಂತದಲ್ಲಿಯೂ ಸುಖವನ್ನುಂಟುಮಾಡುತ್ತಿದ್ದಳು.

ಯಯಾತಿರಾಜನು ಸಮಸ್ತವೇದಗಳ ಪ್ರತಿಪಾದ್ಯನಾದ, ಸರ್ವದೇವ ಸ್ವರೂಪನಾದ, ಯಜ್ಞಪುರುಷನಾದ ಶ್ರೀಹರಿಯನ್ನು ಬಹುದಕ್ಷಿಣಾಕವಾದ ಯಜ್ಞಗಳ ಮೂಲಕವಾಗಿ ಆರಾಧಿಸಿದನು. ಆಕಾಶದಲ್ಲಿ ಕಲ್ಪಿತವಾದ ಮೇಘದ ಸಾಲುಗಳಂತೆ ಪರಮಾತ್ಮನಲ್ಲಿ ಈ ಜಗತ್ತೆಂಬುದು ಸ್ವಪ್ನ-ಮಾಯೆ ಗಳಿಂದ ಯುಕ್ತವಾದ ಮನೋರಥಗಳಿಂದ ಕಲ್ಪಿತವಾಗಿ, ಇಂದ್ರಿಯಗಳು ಸುಳಿದಾಡುತ್ತಿರುವವರೆಗೂ ಅನೇಕ ರೂಪವಾಗಿ ಕಾಣುತ್ತಾ ಇಂದ್ರಿಯಗಳ ಹಾರಾಟವು ನಿಂತೊಡನೆಯೇ ಮಾಯವಾಗಿಬಿಡುವುದು.

ಅಂತಹ ಜಗತ್ಸೃಷ್ಟವಾದ, ಗುಹಾಶಯನಾದ, ಸೂಕ್ಷ್ಮಕ್ಕೂ ಸೂಕ್ಷ್ಮ

ಸ್ವರೂಪನಾದ, ಸರ್ವವ್ಯಾಪಿಯಾದ ವಾಸುದೇವನನ್ನು ಯಯಾತಿಯು ಹೃತ್ಕಮಲದಲ್ಲಿಟ್ಟು ಧ್ಯಾನಿಸುತ್ತಾ ನಿಷ್ಕಾಮಭಾವದಿಂದ ಆರಾಧಿಸಿದನು. ಹೀಗೆ ಯಯಾತಿಯು ಒಂದು ಸಾವಿರ ವರ್ಷಗಳವರೆಗೆ ತನ್ನ ಸ್ವೇಚ್ಛಾಚಾರಿಗಳಾದ ಇಂದ್ರಿಯಗಳೊಡನೆ ಮನಸ್ಸನ್ನು ಜೋಡಿಸಿ ಆ ಇಂದ್ರಿಯಗಳಿಗೆ ಪ್ರಿಯವಾದುದನ್ನು ಉಪಭೋಗಿಸಿದನು. ಆದರೆ ವಿಷಯಸುಖಗಳಲ್ಲಿಯೇ ಮುಳುಗಿ ಮಗ್ನನಾಗಿಹೋಗಿದ್ದರೂ ಸಾಮ್ರಾಟನಾದ ಆತನಿಗೆ ಅದರಿಂದ ತೃಪ್ತಿಯುಂಟಾಗಲೇ ಇಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೧೮ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೧೯ನೆಯ ಅಧ್ಯಾಯ

ಯಯಾತಿಯ ಗೃಹತ್ಯಾಗ

ಶ್ರೀಶುಕಮುನಿಗಳು ಹೇಳುತ್ತಾರೆ :

ಸ ಇತ್ಥಮಾಚರನ್ಕಾಮಾನ್ ಸ್ತ್ರೈಣೋಽಪಹ್ನವಮಾತ್ಮನಃ ।
ಬುದ್ಧ್ವಾ ಪ್ರಿಯಾಯೈ ನಿರ್ವಿಣ್ಣೋ ಗಾಥಾಮೇತಾಮಗಾಯತ ॥೧॥

ಪರೀಕ್ಷಿತನೇ! ಹೀಗೆ ಯಯಾತಿಯು ಸ್ತ್ರೀವಶನಾಗಿ ವಿಷಯಗಳನ್ನು ಉಪಭೋಗಿಸುತ್ತಿದ್ದನು. ಒಂದು ದಿನ ಇದ್ದಕ್ಕಿದ್ದಂತೆಯೇ ಅನುಕ್ರಮವಾಗಿ ತನ್ನ ಅಧಃಪತನವಾಗುತ್ತಿದೆಯೆಂಬುದು ಅವನಿಗೆ ತಿಳಿದುಹೋಯಿತು. ದುಃಖಿತನಾದ ಅವನು ತನ್ನ ಪ್ರೇಯಸಿಯಾದ ದೇವಯಾನಿಗೆ ಈ ಕಥೆಯನ್ನು ಹೇಳಿದನು :

"ಭಾರ್ಗವಿ! ಈ ಕಥೆಯನ್ನು ಕೇಳು. ಭೂಮಿಯಲ್ಲಿ ನನ್ನಂತೆಯೇ ಇರುವ ವಿಷಯಸುಖಾಪೇಕ್ಷಿಗಳಿಗೆ ಇದು ಸತ್ಯವಾದ ಇತಿಹಾಸವಾಗಿದೆ. ನನ್ನಂತಹ ವಿಷಯಸುಖಾಪೇಕ್ಷಿಗಳಾದ ಗ್ರಾಮವಾಸಿಗಳ ವಿಷಯದಲ್ಲಿ, ಅರಣ್ಯದಲ್ಲಿರುವ ಜಿತೇಂದ್ರಿಯರಾದ ಧೀರಪುರುಷರು–'ವಿಷಯಸುಖಿಗಳು ಹೇಗೆ ದುಃಖದಿಂದ ಪಾರಾಗುತ್ತಾರೆ ಮತ್ತು ಅವರಿಗೆ ಹೇಗೆ ಕಲ್ಯಾಣವಾಗುತ್ತದೆ?'–ಎಂಬುದನ್ನು ಕುರಿತು ದುಃಖದಿಂದ ಯೋಚಿಸುತ್ತಿರುತ್ತಾರೆ.

ಪ್ರೇಯಸಿಯೇ! ಕಾಡಿನಲ್ಲಿ ಒಂದು ಹೋತವು ತನಗೆ ಪ್ರಿಯವಾದು

ದನ್ನು ಹುಡುಕುತ್ತಾ ಸಂಚರಿಸುತ್ತಿದ್ದಿತು. ಹೀಗೆಯೇ ಸಂಚರಿಸುತ್ತಿದ್ದಾಗ ತನ್ನ ಕರ್ಮಫಲದಿಂದಲೇ ಬಾವಿಯಲ್ಲಿ ಬಿದ್ದಿದ್ದ ಒಂದು ಮೇಕೆಯನ್ನು ಅದು ನೋಡಿತು. ಆ ಹೋತವು ಕಾಮಾತುರವಾಗಿದ್ದಿತು. ಕಾಮಲಾಲಸೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಆ ಹೋತವು ಮೇಕೆಯನ್ನು ಮೇಲಕ್ಕೆತ್ತುವ ಉಪಾಯವನ್ನು ಯೋಚಿಸಿತು. ತನ್ನ ಕೋಡುಗಳಿಂದಲೇ ಆ ಹೋತವು ಬಾವಿಯ ದಂಡೆಯನ್ನಗೆದು ಬಾವಿಗೆ ಒಂದು ಸೋಪಾನವನ್ನು ಕಲ್ಪಿಸಿತು. ಹೋತನ ಸಹಾಯದಿಂದ ಬಾವಿಯ ಮೇಲೆ ಬಂದ ಮೇಕೆಯು ಆ ಹೋತವನ್ನೇ ಮೋಹಿಸಿತು. ಮೀಸೆ-ದಾಡಿಗಳನ್ನು ಹೊಂದಿದ್ದ ಆ ಹೋತವು ನಿಶ್ಚಯವಾಗಿಯೂ ಬಹುಸುಂದರವಾಗಿದ್ದಿತು. ದಷ್ಟ-ಪುಷ್ಟವಾಗಿದ್ದಿತು. ಯುವಕನಾಗಿದ್ದಿತು. ಮೈಥುನಕ್ರಿಯೆಯನ್ನು ಚೆನ್ನಾಗಿ ತಿಳಿದಿದ್ದಿತು. ಬಾವಿಯಲ್ಲಿ ಬಿದ್ದಿದ್ದ ಮೇಕೆಯು ಇಂತಹ ಹೋತದೊಡನೆ ಸೇರಿಕೊಂಡುದನ್ನು ಕಂಡು ಉಳಿದ ಮೇಕೆಗಳೂ ಆ ಹೋತವನ್ನೇ ಪ್ರೀತಿಸತೊಡಗಿದುವು. ಒಂದೇ ಹೋತವು ಹಲವಾರು ಮೇಕೆಗಳಿಗೆ ರತಿಸುಖವನ್ನು ಕೊಡುತ್ತಿದ್ದಿತು. ಆ ಹೋತವು ಹಲವಾರು ಮೇಕೆಗಳೊಡನೆ ಮದನಪಿಶಾಚಗ್ರಸ್ತವಾಗಿ ವಿಹರಿಸುತ್ತಾ ತನ್ನನ್ನೇ ತಾನು ಮರೆತುಬಿಟ್ಟಿತು. ಬಾವಿಯಲ್ಲಿ ಬಿದ್ದಿದ್ದ ಮೇಕೆಗೆ ತನ್ನ ಇನಿಯನು ಹಲವಾರು ಮೇಕೆಗಳೊಡನೆ ರಮಿಸುತ್ತಿದೆಯೆಂಬ ವಿಷಯವು ತಿಳಿದುಹೋಯಿತು. ತನ್ನನ್ನು ವರಿಸಿರುವ ಆ ಹೋತವು ಮಹಾಕಾಮಿಯೆಂದೂ, ಅದಕ್ಕೆ ಹೃದಯವೇ ಇಲ್ಲವೆಂದೂ, ಅದಕ್ಕೆ ಪ್ರೇಮದ ಮೇಲೆ ವಿಶ್ವಾಸವೇ ಇಲ್ಲವೆಂದೂ, ಮಿತ್ರನ ರೂಪದಲ್ಲಿದ್ದು ಶತ್ರುವಿನ ಕಾರ್ಯವನ್ನು ಮಾಡುತ್ತಿರುವುದೆಂದೂ ಭಾವಿಸಿ ಇಂದ್ರಿಯ ಲೋಲುಪತೆಯಿಂದಿದ್ದ ಆ ಹೋತವನ್ನು ಪರಿತ್ಯಜಿಸಿ ಅತ್ಯಂತದುಃಖದಿಂದ ತನ್ನ ಸ್ವಾಮಿಯ ಬಳಿಗೆ ಹೊರಟುಹೋಯಿತು. ಸ್ತ್ರೀವಶವಾಗಿದ್ದ ಮತ್ತು ಭಯಗೊಂಡು ದೀನವಾಗಿದ್ದ ಆ ಹೋತವು ನಲ್ಲೆಯನ್ನು ಓಲೈಸುವ ಸಲುವಾಗಿ ಅದರ ಹಿಂದೆಯೇ ಮ್ಯೇ-ಮ್ಯೇ ಎಂದುಕೊಂಡು ಹೋಯಿತು. ಆದರೂ ಹಾದಿಯಲ್ಲಿ ತನ್ನ ನಲ್ಲೆಯನ್ನು ಸಂತೈಸಲು ಹೋತಕ್ಕೆ ಸಾಧ್ಯ ವಾಗಲಿಲ್ಲ. ಬಾವಿಯಲ್ಲಿ ಸಿಕ್ಕಿದ ಮೇಕೆಯ ಸ್ವಾಮಿಯು ಒಬ್ಬ ಬ್ರಾಹ್ಮಣ ನಾಗಿದ್ದನು. ಅವನು ಮೇಕೆಗಾದ ಅನ್ಯಾಯದಿಂದ ಕುಪಿತನಾಗಿ ಹೋತದ

ಜೋಲಾಡುತ್ತಿದ್ದ ವೃಷಣಗಳನ್ನೇ ಕತ್ತರಿಸಿಬಿಟ್ಟನು. ಆದರೆ ಮೇಕೆಗೆ ಒಳ್ಳೆಯದನ್ನು ಮಾಡುವ ಸಲುವಾಗಿ ಹೋತದ ಪ್ರಾರ್ಥನೆಯಂತೆ ಪುನಃ ವೃಷಣಗಳನ್ನು ಹೋತಕ್ಕೆ ಜೋಡಿಸಿಕೊಟ್ಟನು. ಇಂತಹ ಉಪಾಯಗಳು ಆ ಬ್ರಾಹ್ಮಣನಿಗೆ ಬಹಳವಾಗಿ ತಿಳಿದಿದ್ದುವು. ಪ್ರೇಯಸಿಯೇ! ಹೀಗೆ ವೃಷಣಗಳನ್ನು ಪುನಃ ಪಡೆದುಕೊಂಡನಂತರ ಆ ಹೋತವು ಬಾವಿಯಲ್ಲಿ ಸಿಕ್ಕಿದ ಬ್ರಾಹ್ಮಣನ ಮೇಕೆಯೊಡನೆ ಹಲವಾರು ವರ್ಷಗಳ ಕಾಲ ವಿಷಯೋಪಭೋಗಗಳನ್ನು ಅನುಭವಿಸಿತು. ಆದರೂ ಅದಕ್ಕೆ ಇದುವರೆಗೂ ಅನುಭವಿಸಿದ ವಿಷಯೋಪಭೋಗಗಳಿಂದ ತೃಪ್ತಿಯೇ ಉಂಟಾಗಲಿಲ್ಲ.

ಸುಭ್ರುವೇ! ನನ್ನ ದೆಸೆಯೂ ಹಾಗೆಯೇ ಆಗಿದೆ. ನಿನ್ನ ಪ್ರೇಮಪಾಶಗಳಿಂದ ಬಂಧಿಸಲ್ಪಟ್ಟಿರುವ ನಾನು ಅತ್ಯಂತದೀನನಾಗಿ ಬಿಟ್ಟಿದ್ದೇನೆ. ನಿನ್ನ ಮಾಯೆಯಿಂದ ವಿಮೋಹಿತನಾಗಿರುವ ನಾನು ನನ್ನನ್ನೇ ತಿಳಿದುಕೊಂಡಿಲ್ಲ.

(ಶ್ಲೋಕ 2-12)

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನ ದುಹ್ಯನ್ತಿ ಮನಃಪ್ರೀತಿಂ ಪುಂಸಃ ಕಾಮಹತಸ್ಯ ತೇ ॥೧೩॥

ಪ್ರೇಯಸಿಯೇ! ಭೂಮಂಡಲದಲ್ಲಿ ಎಷ್ಟು ಧಾನ್ಯಗಳಿವೆಯೋ, ಸುವರ್ಣದ ರಾಶಿಗಳಿವೆಯೋ, ಪಶುಗಳಿವೆಯೋ, ಸ್ತ್ರೀಯರಿರುವರೋ–ಇವೆಲ್ಲವೂ ಜೊತೆಗೂಡಿ ಬಂದರೂ ಕಾಮಹತನಾದ ಮನುಷ್ಯನಿಗೆ ಇವುಗಳು ಸಂತುಷ್ಟಿಯನ್ನುಂಟುಮಾಡುವುದಿಲ್ಲ.

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥೧೪॥

ವಿಷಯಗಳನ್ನು ಉಪಭೋಗಿಸುವುದರಿಂದ ಭೋಗವಾಸನೆಯು ಯಾವಾಗಲೂ ಶಾಂತವಾಗುವುದಿಲ್ಲ. ತುಪ್ಪದ ಆಹುತಿಗಳಿಂದ ಯಜ್ಞೇಶ್ವ ರನು ಮತ್ತೆ ವೃದ್ಧಿಹೊಂದುತ್ತಿರುವಂತೆ ಭೋಗವಾಸನೆಗಳು ಕಾಮೋಪ ಭೋಗಗಳಿಂದ ಮತ್ತೂ ಪ್ರಬಲವಾಗುತ್ತವೆ.

ಯದಾ ನ ಕುರುತೇ ಭಾವಂ ಸರ್ವಭೂತೇಷ್ವಮಙ್ಗಲಮ್ ।
ಸಮದೃಷ್ಟೇಸ್ತದಾ ಪುಂಸಃ ಸರ್ವಾಃ ಸುಖಮಯಾ ದಿಶಃ ॥೧೫॥

ಯಾವಾಗ ಮನುಷ್ಯನು ಯಾವುದೇ ಪ್ರಾಣಿಯ ವಿಷಯದಲ್ಲಾಗಲೀ

ಯಾವುದೇ ವಸ್ತುವಿನ ವಿಷಯದಲ್ಲಾಗಲೀ ರಾಗ-ದ್ವೇಷಭಾವಗಳನ್ನು ಇಟ್ಟುಕೊಳ್ಳುವುದಿಲ್ಲವೋ ಆಗ ಅವನು ಸಮದರ್ಶಿಯಾಗುತ್ತಾನೆ. ಸಮಸ್ತ ದಿಕ್ಕುಗಳೂ ಅಂತಹವನಿಗೆ ಸುಖಮಯವೇ ಆಗುತ್ತವೆ.

ಯಾ ದುಸ್ತ್ಯಜಾ ದುರ್ಮತಿಭಿರ್ಜೀರ್ಯತೋ ಯಾ ನ ಜೀರ್ಯತೇ ।
ತಾಂ ತೃಷ್ಣಾಂ ದುಃಖನಿವಹಾಂ ಶರ್ಮಕಾಮೋ ದ್ರುತಂ ತ್ಯಜೇತ್ ॥

ವಿಷಯಗಳ ಮೇಲಿನ ಆಸೆಯೇ ದುಃಖಕ್ಕೆ ಉಗಮಸ್ಥಾನವಾಗಿದೆ. ಮಂದಬುದ್ಧಿಯವರಾದ ಮನುಷ್ಯರು ಅಂತಹ ತೃಷ್ಣೆಯನ್ನು ಬಹಳ ಕಷ್ಟದಿಂದಲೂ ತ್ಯಾಗಮಾಡಲು ಸಾಧ್ಯವಾಗುವುದಿಲ್ಲ. ಮುದಿತನವು ಬರುತ್ತಿದ್ದರೂ ತೃಷ್ಣೆಯು ನಿತ್ಯನವೀನವಾಗುತ್ತಿರುತ್ತದೆ. ಅದಕ್ಕೆ ಮುಪ್ಪೆಂಬುದೇ ಇಲ್ಲ. ದುಃಖಸಮೂಹಪ್ರಾಯವಾಗಿರುವ ಅಂತಹ ತೃಷ್ಣೆಯನ್ನು ತನ್ನ ಕಲ್ಯಾಣವನ್ನು ಬಯಸುವ ಮನುಷ್ಯನು ಶೀಘ್ರಾತಿಶೀಘ್ರವಾಗಿ ಪರಿತ್ಯಜಿಸಬೇಕು.

ಮಾತ್ರಾ ಸ್ವಸ್ರಾ ದುಹಿತ್ರಾ ವಾ ನಾವಿವಿಕ್ತಾಸನೋ ಭವೇತ್ ।
ಬಲವಾನಿನ್ದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ॥೧೭॥

ತನ್ನ ತಾಯಿಯೊಡನೆ ಅಥವಾ ತಂಗಿಯೊಡನೆ ಅಥವಾ ಮಗಳೊಡನೆಯೂ ಕೂಡ ನಿರ್ಜನಪ್ರದೇಶದಲ್ಲಿ ಒಂದೇ ಆಸನದಲ್ಲಿ ಕುಳಿತುಕೊಳ್ಳಬಾರದು. ಏಕೆಂದರೆ : ಇಂದ್ರಿಯಸಮೂಹಗಳು ಅತಿಬಲಿಷ್ಠವಾದುವುಗಳು. ವಿದ್ವಾಂಸನನ್ನಾದರೂ ಅವು ವಿಚಲಿತನನ್ನಾಗಿ ಮಾಡಿಬಿಡುತ್ತವೆ.

ವಿಷಯಸುಖಗಳನ್ನು ಪುನಃ ಪುನಃ ಸೇವಿಸುತ್ತಾ ನಾನು ಒಂದು ಸಾವಿರ ವರ್ಷಗಳನ್ನು ಕಳೆದೆನು. ಆದರೂ ಆಯಾ ಕಾಲಗಳಲ್ಲಿ ವಿಷಯಗಳ ಭೋಗಲಾಲಸೆಯು ಹುಟ್ಟಿಕೊಂಡೇ ಹುಟ್ಟಿಕೊಳ್ಳುತ್ತದೆ.

ಆದುದರಿಂದ ಈ ಭೋಗಗಳ ತೃಷ್ಣೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಮನಸ್ಸನ್ನು ಪರಬ್ರಹ್ಮಪರಮಾತ್ಮನಲ್ಲಿ ಲೀನಗೊಳಿಸಿ, ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿ, ಅಹಂಕಾರದಿಂದಲೂ ಮುಕ್ತನಾಗಿ ಜಿಂಕೆಗಳೊಡನೆ ಅರಣ್ಯದಲ್ಲಿ ಸಂಚರಿಸುತ್ತೇನೆ. ಇಹ-ಪರಲೋಕಗಳೆರಡೂ ಅಸತ್ತುಗಳು–ಎಂದು ಭಾವಿಸಿ ಐಹಿಕಾಮುಷ್ಮಿಕ ಭೋಗಗಳ ವಿಷಯವಾಗಿ ಚಿಂತಿಸದೆ ಅಥವಾ ಐಹಿಕಾಮುಷ್ಮಿಕಭೋಗ-

ಗಳನ್ನು ಉಪಭೋಗಿಸದೆ ಅವುಗಳನ್ನು ಚಿಂತಿಸುವುದರಿಂದ ಜನ್ಮ-ಮೃತ್ಯು ರೂಪವಾದ ಸಂಸಾರವು ಪ್ರಾಪ್ತವಾಗುವುದೆಂದೂ ಅವುಗಳನ್ನು ಉಪಭೋಗಿಸಿದರೆ ಆತ್ಮನಾಶವಾಗುವುದೆಂದೂ ಯಾವನು ತಿಳಿಯುತ್ತಾನೆಯೋ ಅವನೇ ಆತ್ಮಜ್ಞಾನಿಯು."

ಪರೀಕ್ಷಿತನೇ! ಯಯಾತಿಯು ತನ್ನ ಪತ್ನಿಯಾದ ದೇವಯಾನಿಗೆ ಹೀಗೆಂದು ಹೇಳಿ ಪೂರುವಿಗೆ ಯೌವನವನ್ನು ಕೊಟ್ಟು ಅವನಿಂದ ಮುದಿತನವನ್ನು ಪಡೆದುಕೊಂಡು ನಿಃಸ್ಪೃಹನಾಗಿದ್ದನು. ಅವನಿಗೆ ವಿಷಯಸುಖಗಳಲ್ಲಿ ಆಸಕ್ತಿಯು ತೊಲಗಿಹೋಯಿತು. ಬಳಿಕ ಅವನು ಭೂಮಂಡಲದಲ್ಲಿ ಆಗ್ನೇಯದಿಕ್ಕಿನ ರಾಜ್ಯಗಳಿಗೆ ದ್ರುಹ್ಯುವನ್ನೂ, ದಕ್ಷಿಣದಿಕ್ಕಿನ ರಾಜ್ಯಗಳಿಗೆ ಯದುವನ್ನೂ, ಪಶ್ಚಿಮದಿಕ್ಕಿನ ರಾಜ್ಯಗಳಿಗೆ ತುರ್ವಸುವನ್ನೂ, ಉತ್ತರ ದಿಕ್ಕಿನ ರಾಜ್ಯಗಳಿಗೆ ಅನುವನ್ನೂ ರಾಜರನ್ನಾಗಿ ಮಾಡಿದನು. ಭೂಮಂಡಲದಲ್ಲಿರುವ ಸಮಸ್ತವಾದ ಸಂಪತ್ತನ್ನೂ ಹೊಂದಲು ಯೋಗ್ಯನಾದ ಪೂರುವನ್ನು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿ ಪೂರುವಿನ ಅಗ್ರಜರೆಲ್ಲರನ್ನೂ ಅವನ ವಶಕ್ಕೇ ಒಪ್ಪಿಸಿ ಯಯಾತಿಯು ಅರಣ್ಯಕ್ಕೆ ಹೊರಟುಹೋದನು. ಯಯಾತಿಯು ಸಾವಿರಾರು ವರ್ಷಗಳ ಕಾಲ ಎಲ್ಲ ಇಂದ್ರಿಯಗಳನ್ನೂ ವಿಷಯಸುಖಗಳಲ್ಲಿ ಮುಳುಗಿಸಿಬಿಟ್ಟಿದ್ದರೂ–ರೆಕ್ಕೆಗಳು ಬಂದೊಡನೆಯೇ ಪುಟ್ಟ ಪಕ್ಷಿಯು ಗೂಡನ್ನು ಬಿಟ್ಟು ಹೊರಟುಹೋಗುವಂತೆ–ಕ್ಷಣಮಾತ್ರದಲ್ಲಿ ಸರ್ವಸ್ವವನ್ನೂ ಪರಿತ್ಯಾಗಮಾಡಿಬಿಟ್ಟನು.

ಅರಣ್ಯಕ್ಕೆ ಹೋದನಂತರ ಯಯಾತಿಯು ಸಮಸ್ತವಾದ ಸಹವಾಸಗಳಿಂದಲೂ ಮುಕ್ತನಾಗಿಬಿಟ್ಟನು. ಆತ್ಮಸಾಕ್ಷಾತ್ಕಾರದ ಸಾಧನೆಯಿಂದ ಅವನ ತ್ರಿಗುಣಮಯವಾದ ಲಿಂಗಶರೀರವು ನಷ್ಟವಾಗಿ ಹೋಯಿತು. ಮಾಯಾತೀತನಾದ ಪರಬ್ರಹ್ಮವಾಸುದೇವನಲ್ಲಿ ಸೇರಿಹೋಗಿ ಭಗವತ್ಪ್ರೇಮಿಗಳಾದ ಸಂತರಿಗೆ ಲಭ್ಯವಾಗುವ ಭಾಗವತೀಗತಿಯನ್ನು ಸೇರಿದನು.

ದೇವಯಾನಿಯು, ಯಯಾತಿಯು ಹೇಳಿದ ಕಥೆಯನ್ನು ಕೇಳಿದ ನಂತರ ಪರಸ್ಪರ ಪ್ರೀತಿಯಿಂದಿರುವ ಸ್ತ್ರೀ-ಪುರುಷರಲ್ಲಿ ವೈಮನಸ್ಯವುಂಟಾದರೆ ಪರಿಹಾಸಮಾಡುವಂತೆ–ರಾಜನು ತನ್ನ ಕಥೆಯನ್ನೇ ಪರ್ಯಾಯವಾಗಿ ಹೇಳುತ್ತಿರುವನೆಂದು ಭಾವಿಸಿದಳು. ಈಶ್ವರನಿಗೆ ಅಧೀನರಾಗಿರುವ ಬಂಧುಗಳು–

ಅರವಟ್ಟಿಗೆಯಲ್ಲಿ ದಾರಿಹೋಕರು ಸೇರುವಂತೆ ಒಂದೆಡೆಯಲ್ಲಿ ಸೇರುವರೆಂದೂ ಕಾಲವು ಸನ್ನಿಹಿತವಾದೊಡನೆಯೇ ಅಗಲಿಹೋಗುವರೆಂದೂ ಭಾವಿಸಿದಳು. ಸಂಸಾರ-ಸಂಬಂಧ-ಬಂಧುಗಳು ಇವೆಲ್ಲವೂ ಪ್ರಭುವಾದ ಶ್ರೀಹರಿಯ ಮಾಯಾಕಲ್ಪಿತವೆಂದು ದೃಢಪಡಿಸಿಕೊಂಡಳು. ಸ್ವಪ್ನದೋಪಾದಿಯಲ್ಲಿರುವ ಸಮಸ್ತವಾದ ಸಹವಾಸಗಳನ್ನೂ ಭಾರ್ಗವಿಯು ಪರಿತ್ಯಜಿಸಿ ಮಹಾಪ್ರಭುವಾದ ಶ್ರೀಕೃಷ್ಣನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ ಲಿಂಗಶರೀರವನ್ನು ಪರಿತ್ಯಾಗಮಾಡಿ ಪರಮಾತ್ಮನಲ್ಲಿ ಸೇರಿಹೋದಳು.

ಲಿಂಗಮಯಶರೀರವನ್ನು ಬಿಟ್ಟು ಪರಮಾತ್ಮನನ್ನು ಸೇರುವ ಸಮಯದಲ್ಲಿ ಸಾಧ್ವಿಯಾದ ದೇವಯಾನಿಯು ದೇವದೇವನ ಸ್ತೋತ್ರವನ್ನು ಮಾಡಿದಳು: (ಶ್ಲೋಕ 18-28)

ನಮಸ್ತುಭ್ಯಂ ಭಗವತೇ ವಾಸುದೇವಾಯ ವೇಧಸೇ ।
ಸರ್ವಭೂತಾಧಿವಾಸಾಯ ಶಾನ್ತಾಯ ಬೃಹತೇ ನಮಃ ॥೨೯॥

"ಸಮಸ್ತಪ್ರಾಣಿಗಳಿಗೂ ನೆಲೆಯಾಗಿರುವ, ಷಾಡ್ಗುಣ್ಯಪರಿಪೂರ್ಣನಾದ, ಶಾಂತನಾದ, ವ್ಯಾಪಕನಾದ, ಪರಬ್ರಹ್ಮಸ್ವರೂಪನಾದ ವಾಸುದೇವನಾದ ನಿನಗೆ ನಮಸ್ಕಾರಮಾಡುತ್ತೇನೆ."*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ನವಮಸ್ಕಂಧದ ೧೯ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೨೦ನೆಯ ಅಧ್ಯಾಯ

ಪೂರುವಿನ ವಂಶವರ್ಣನೆ: ದುಷ್ಯಂತ ಮತ್ತು ಭರತರ ಚರಿತ್ರೆ

ಶ್ರೀಶುಕರು ಹೇಳುತ್ತಾರೆ :

ಪೂರೋರ್ವಂಶಂ ಪ್ರವಕ್ಷ್ಯಾಮಿ ಯತ್ರ ಜಾತೋಽಸಿ ಭಾರತ ।
ಯತ್ರ ರಾಜರ್ಷಯೋ ವಂಶ್ಯಾ ಬ್ರಹ್ಮವಂಶ್ಯಾಶ್ಚ ಜಜ್ಞಿರೇ ॥೧॥

ಪರೀಕ್ಷಿತನೇ! ಈಗ ನಾನು ಪೂರುವಿನ ವಂಶದ ವರ್ಣನೆಯನ್ನು ಮಾಡುತ್ತೇನೆ. ಈ ಶ್ರೇಷ್ಠವಾದ ವಂಶದಲ್ಲಿಯೇ ನೀನು ಜನ್ಮತಾಳಿರುವೆ. ಈ ವಂಶದಲ್ಲಿಯೇ ಹಲವಾರು ರಾಜರ್ಷಿಗಳೂ, ಬ್ರಹ್ಮರ್ಷಿಗಳೂ ಹುಟ್ಟಿದ್ದಾರೆ.

* ದೇವಯಾನೀ ಮೋಕ್ಷಮಂತ್ರವೆಂದು ಈ ಶ್ಲೋಕವು ಪ್ರಸಿದ್ಧವಾಗಿದೆ.

ಯಯಾತಿಯ ಕಿರಿಯ ಮಗನಾದ ಪೂರುವಿನ ಮಗ ಜನಮೇಜಯ. ಜನಮೇಜಯನ ಮಗ ಪ್ರಾಚಿನ್ವಂತ. ಪ್ರಾಚಿನ್ವಂತನ ಮಗ ಪ್ರವೀರ. ಪ್ರವೀರನ ಮಗ ನಮಸ್ಯು. ನಮಸ್ಯುವಿನ ಮಗ ಚಾರುಪಾದ. ಚಾರುಪಾದನ ಮಗ ಸುದ್ಯು. ಸುದ್ಯುವಿನ ಮಗ ಬಹುಗವ. ಬಹುಗವನ ಪುತ್ರ ಸಂಯಾತಿ. ಸಂಯಾತಿಯ ಸುಪುತ್ರ ಅಹಂಯಾತಿ. ಅಹಂಯಾತಿಯ ಮಗ ರೌದ್ರಾಶ್ವ. ಜಗತ್ತಿಗೆ ಆಧಾರವೆನಿಸಿದ ಮುಖ್ಯಪ್ರಾಣದಿಂದ ಹತ್ತು ಇಂದ್ರಿಯಗಳು ಹುಟ್ಟಿರುವಂತೆ ರೌದ್ರಾಶ್ವನಿಗೆ ಘೃತಾಚೀ ಎಂಬ ಅಪ್ಸರೆಯಲ್ಲಿ ಋತೇಯು, ಕುಕ್ಷೇಯು, ಸ್ಥಂಡಿಲೇಯು, ಕೃತೇಯು, ಜಲೇಯು, ಸಂತತೇಯು, ಧರ್ಮೇಯು, ಸತ್ಯೇಯು, ವ್ರತೇಯು, ವನೇಯು–ಎಂಬ ಹತ್ತು ಮಂದಿ ಮಕ್ಕಳು ಹುಟ್ಟಿದರು. ಇವರಲ್ಲಿ ಹಿರಿಯನಾದ ಋತೇಯುವಿನ ಮಗ ರಂತಿಭಾರನು. ರಂತಿಭಾರನಿಗೆ ಸುಮತಿ, ಧ್ರುವ ಮತ್ತು ಅಪ್ರತಿರಥರೆಂಬ ಮೂವರು ಮಕ್ಕಳು ಹುಟ್ಟಿದರು. ಅಪ್ರತಿರಥನ ಮಗ ಕಣ್ವ. ಕಣ್ವನ ಮಗ ಮೇಧಾತಿಥಿ. ಮೇಧಾತಿಥಿಗೆ ಪ್ರಸ್ಕಣ್ವನೇ ಮೊದಲಾದ ಬ್ರಾಹ್ಮಣರು ಹುಟ್ಟಿದರು. ರಂತಿಭಾರನ ಹಿರಿಯ ಮಗನಾದ ಸುಮತಿಗೆ ರೈಭ್ಯನೆಂಬ ಮಗನು ಹುಟ್ಟಿದನು. ರೈಭ್ಯನ ಮಗ ದುಷ್ಯಂತ. (ಶ್ಲೋಕ -)

ಒಮ್ಮೆ ದುಷ್ಯಂತನು ತನ್ನ ಕೆಲವು ಸೈನಿಕರೊಡನೆ ಬೇಟೆಯಾಡಲು ಅರಣ್ಯಕ್ಕೆ ಹೋದನು. ಹಾಗೆಯೇ ಅವನು ಕೆಲವು ಸೈನಿಕರೊಡನೆ ಆ ಅರಣ್ಯದಲ್ಲೇ ಇದ್ದ ಕಣ್ವರ ಆಶ್ರಮಕ್ಕೂ ಹೋದನು. ಆ ಆಶ್ರಮದಲ್ಲಿಯೇ ದೇವಮಾಯೆಯಿಂದಲೇ ಕಲ್ಪಿತಳಾದಂತೆ ಕಡುಚೆಲುವೆಯಾಗಿದ್ದ ಯುವತಿ ಯೊಬ್ಬಳು ಕುಳಿತಿದ್ದಳು. ಶ್ರೀಲಕ್ಷ್ಮಿಯ ದೇಹಕಾಂತಿಗೆ ಸಮಾನವಾದ ದೇಹಕಾಂತಿಯಿಂದ ಕಂಗೊಳಿಸುತ್ತಿದ್ದ ಅವಳಿಂದ ಆಶ್ರಮವೇ ಜಗ-ಜಗಿಸು ತ್ತಿದ್ದಿತು. ಆ ಚೆಷ್ನೆಯನ್ನು ನೋಡಿದೊಡನೆಯೇ ದುಷ್ಯಂತನು ವಿಮೋಹಿತ ನಾಗಿ ಅವಳೊಡನೆ ಮಾತನಾಡಿದನು. ಅವಳನ್ನು ನೋಡುತ್ತಲೇ ಅವನಿಗೆ ಪರಮಾನಂದವಾಗಿ ಹೋಯಿತು. ಅವಳ ದರ್ಶನಮಾತ್ರದಿಂದಲೇ ಆಯಾಸವೂ ಪರಿಹಾರವಾಯಿತು. ಕಾಮಾಗ್ನಿಯೂ ಭುಗಿಲೆದ್ದಿತು. ಮುಗುಳ್ನಗುತ್ತಾ ಮೆಲುನುಡಿಯಿಂದ ಸುಮಧುರವಾದ ಈ ಮಾತುಗಳನ್ನು ಆಕೆಗೆ ಹೇಳಿದನು :

"ಕಮಲಾಕ್ಷಿಯೇ ನೀನು ಯಾರು? ಯಾರ ಮಗಳು? ನನ್ನ ಮನಸ್ಸನ್ನು ಸೆಳೆದುಕೊಂಡಿರುವ ಚೆಲುವಿನ ರಾಣಿಯೇ! ನೀನು ಈ ನಿರ್ಜನ ವಾದ ಅರಣ್ಯದಲ್ಲಿದ್ದುಕೊಂಡು ಏನು ಮಾಡಬೇಕೆಂದಿರುವೆ? ಸುಂದರವಾದ ನಡುವಿನಿಂದ ಕೂಡಿರುವವಳೇ! ನೀನು ರಾಜಪುತ್ರಿಯಾಗಿರಬಹುದೆಂದು ನಾನು ಸ್ಪಷ್ಟವಾಗಿ ತಿಳಿಯುತ್ತಿದ್ದೇನೆ. ಏಕೆಂದರೆ :

ನ ಹಿ ಚೇತಃ ಪೌರವಾಣಾಮಧರ್ಮೇ ರಮತೇ ಕ್ವಚಿತ್ ॥೧೨॥

ಪುರುವಂಶೀಯರ ಮನಸ್ಸು ಯಾವಾಗಲೂ ಅಧರ್ಮದ ಕಡೆಗೆ ವಾಲುವುದಿಲ್ಲ. ನೀನು ಕ್ಷತ್ರಿಯಳಲ್ಲದೇ ಬೇರೆಯ ವರ್ಣದವಳೇ ಆಗಿದ್ದಿದ್ದರೆ ನನ್ನ ಮನಸ್ಸು ನಿನ್ನನ್ನು ಆಶಿಸುತ್ತಿರಲಿಲ್ಲ."

ದುಷ್ಯಂತನ ಈ ಸುಮಧುರವಾದ ಮಾತುಗಳನ್ನು ಕೇಳಿ ಶಕುಂತಲೆಯು ಉತ್ತರಿಸುತ್ತಾಳೆ :

"ಮಹಾರಾಜ! ನೀನು ಹೇಳಿದ್ದು ನಿಜ. ನಾನು ಕ್ಷತ್ರಿಯರ್ಷಭನಾದ ವಿಶ್ವಾಮಿತ್ರನ ಮಗಳು. ನನ್ನನ್ನು ಹಡೆದ ಮೇನಕೆಯು ಈ ಅರಣ್ಯದಲ್ಲಿಯೇ ನನ್ನನ್ನು ಪರಿತ್ಯಜಿಸಿ ಹೊರಟುಹೋದಳು. ಈ ವಿಷಯದಲ್ಲಿ ನನ್ನನ್ನು ಪಾಲಿಸಿ-ಪೋಷಿಸುತ್ತಿರುವ ಪೂಜ್ಯರಾದ ಕಣ್ವರೇ ಸಾಕ್ಷೀಭೂತರಾಗಿದ್ದಾರೆ. ವೀರಶಿರೋಮಣಿಯೇ! ನಾನು ನಿನಗೆ ಯಾವ ಸೇವೆಯನ್ನು ಮಾಡಲಿ?

ಕಮಲಾಕ್ಷನೇ! ಇಲ್ಲಿಯೇ ಕುಳಿತುಕೊ. ನಾವು ಮಾಡಲಿರುವ ಯತ್ಕಿಂಚಿತ್ ಸತ್ಕಾರವನ್ನು ಸ್ವೀಕರಿಸು. ತೃಣಧಾನ್ಯದಿಂದ ಸಿದ್ಧವಾದ ಅನ್ನವಿದೆ. ಭೋಜನ ಮಾಡು. ನಿನಗೆ ಉಚಿತವೆನಿಸಿದರೆ ಇಲ್ಲಿಯೇ ನೀನು ಉಳಿದುಕೊಳ್ಳಬಹುದು."

"ಸುಂದರವಾದ ಹುಬ್ಬುಗಳುಳ್ಳವಳೇ! ನೀನು ಕುಶಿಕವಂಶದಲ್ಲಿ ಹುಟ್ಟಿರುವೆ. ನಿನ್ನಂತಹವರಿಗೆ ಆಗಮಿಸಿದ ಅತಿಥಿಯನ್ನು ಯಥಾಯೋಗ್ಯ ವಾಗಿ ಸತ್ಕರಿಸುವುದು ಅನುರೂಪವಾಗಿಯೇ ಇದೆ. ನಿನಗಾಗಿ ನಾನೇನು ಮಾಡಬೇಕೆಂದು ಪ್ರಶ್ನಿಸಿದೆಯಲ್ಲವೇ? ರಾಜಕನ್ಯೆಯರು ತಮಗೆ ಯೋಗ್ಯ

ನಾದ ಅನುರೂಪನಾದ ಪತಿಯನ್ನು ತಾವೇ ಆರಿಸಿಕೊಳ್ಳುತ್ತಾರೆ. ಕ್ಷತ್ರಿಯಾಣಿಯಾದ ನೀನೂ ಹಾಗೆಯೇ ಮಾಡಬಹುದಲ್ಲವೇ?"

ಪ್ರೌಢೆಯಾಗಿದ್ದ ಶಕುಂತಲೆಯು ಪ್ರಣವೋಚ್ಚಾರಣೆಯ ಮೂಲಕ ವಾಗಿ ದುಷ್ಯಂತನ ಮಾತಿಗೆ ಒಪ್ಪಿಗೆಯನ್ನಿತ್ತಳು. ದೇಶ-ಕಾಲಗಳನ್ನೂ ಶಾಸ್ತ್ರದ ವಿಧಿ-ವಿಧಾನಗಳನ್ನೂ ಅರಿತಿದ್ದ ದುಷ್ಯಂತನು ಗಾಂಧರ್ವಪದ್ಧತಿಗೆ ಅನುಸಾರವಾಗಿ ಶಕುಂತಲೆಯನ್ನು ಮದುವೆಯಾದನು. ಅಮೋಘವೀರ್ಯ ನಾದ ದುಷ್ಯಂತನು ಅಂದು ರಾತ್ರಿ ಅಲ್ಲಿಯೇ ಇದ್ದು ಗರ್ಭಾಧಾನಸಂಸ್ಕಾರವನ್ನು ಮುಗಿಸಿ ಬೆಳಗಾಗುತ್ತಲೇ ತನ್ನ ಸೇವಕರೊಡನೆ ರಾಜಧಾನಿಗೆ ತೆರಳಿದನು. ಒಂಬತ್ತು ಮಾಸಗಳು ತುಂಬುತ್ತಲೇ ಶಕುಂತಲೆಯು ಗಂಡುಶಿಶುವನ್ನು ಹಡೆದಳು. ಮಹರ್ಷಿಗಳಾದ ಕಣ್ವರು ಅರಣ್ಯದಲ್ಲಿದ್ದ ಆಶ್ರಮದಲ್ಲಿಯೇ ಶಕುಂತಲಾಕುಮಾರನಿಗೆ ವಿಧಿವತ್ತಾಗಿ ಜಾತಕರ್ಮ-ನಾಮಕರಣಾದಿ ಸಂಸ್ಕಾರಗಳನ್ನು ನೆರವೇರಿಸಿದರು. ಶಕುಂತಲಾಪುತ್ರನು ಇನ್ನೂ ಬಾಲಕನಾಗಿದ್ದಾಗಲೇ ದೊಡ್ಡ ದೊಡ್ಡ ಸಿಂಹಗಳನ್ನು ಹಿಡಿದು ಕಟ್ಟಿಹಾಕಿ ಅವುಗಳೊಡನೆ ಆಟವಾಡುತ್ತಿದ್ದನು. ಆ ಬಾಲಕನು ಶ್ರೀಹರಿಯ ಅಂಶದಿಂದ ಹುಟ್ಟಿದ್ದನು. ಅವನ ಬಲ-ಪರಾಕ್ರಮಗಳು ಅಪರಿಮಿತವಾಗಿದ್ದುವು. ಪ್ರಮದೆಯರಲ್ಲಿ ಶ್ರೇಷ್ಠಳಾದ ಶಕುಂತಲೆಯು ತನ್ನ ಮಗನನ್ನು ಕರೆದುಕೊಂಡು ಪತಿಯ ಬಳಿಗೆ ಹೋದಳು. ನಿರ್ದೋಷಿಗಳಾದ ಭಾರ್ಯಾ-ಪುತ್ರರನ್ನು ರಾಜನು ಸ್ವೀಕಾರಮಾಡಲಿಲ್ಲ. ಅವರ ವಿಷಯವಾಗಿ ತಾನು ಏನನ್ನೂ ಅರಿಯೆನೆಂದೇ ಹೇಳಿಬಿಟ್ಟನು. ಆ ಸಮಯದಲ್ಲಿ ಸಮಸ್ತಪ್ರಾಣಿಗಳಿಗೂ ಕೇಳಿಸುವಂತೆ ಆಕಾಶದಲ್ಲಿ ಅಶರೀರವಾಣಿಯಾಯಿತು.

ಮಾತಾ ಭಸ್ತ್ರಾ ಪಿತುಃ ಪುತ್ರೋ ಯೇನ ಜಾತಃ ಸ ಏವ ಸಃ ।
ಭರಸ್ವ ಪುತ್ರಂ ದುಷ್ಯನ್ತ ಮಾವಮಂಸ್ಥಾಃ ಶಕುನ್ತಲಾಮ್ ॥೨೧॥

"ಮಕ್ಕಳ ಉತ್ಪತ್ತಿಯಲ್ಲಿ ತಾಯಿಯು ಕೇವಲ ಚರ್ಮದಚೀಲಕ್ಕೆ ಸಮಾನಳಾಗಿರುತ್ತಾಳೆ. ವಾಸ್ತವವಾಗಿ ಪುತ್ರನು ತಂದೆಗೆ ಸೇರಿದವನೇ ಆಗಿರುತ್ತಾನೆ. ಏಕೆಂದರೆ ತಂದೆಯೇ ಸಾಕ್ಷಾತ್ತಾಗಿ ಮಗನ ರೂಪದಲ್ಲಿ ಹುಟ್ಟುತ್ತಾನೆ. ಆದುದರಿಂದ ಮಹಾರಾಜ! ಶಕುಂತಲೆಯನ್ನು ತಿರಸ್ಕರಿಸಬೇಡ. ನಿನ್ನ ಮಗನ ಭರಣ-ಪೋಷಣೆಗಳನ್ನು ಮಾಡು.

ರೇತೋಧಾಃ ಪುತ್ರೋ ನಯತಿ ನರದೇವ ಯಮಕ್ಷಯಾತ್ ।
ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುನ್ತಲಾ ॥೨೨॥

ವಂಶೋದ್ಧಾರಕನಾದ ಪುತ್ರನು ತನ್ನ ತಂದೆಯನ್ನು ಪುತ್ ಎಂಬ ಹೆಸರಿನ ನರಕದಿಂದ ಪಾರುಮಾಡುತ್ತಾನೆ. ಆದುದರಿಂದ ನಿನ್ನ ಮಗನನ್ನು ತಿರಸ್ಕರಿಸಬೇಡ. ಈ ಶಕುಂತಲೆಯಲ್ಲಿ ಗರ್ಭವನ್ನು ಇಟ್ಟವನು ನೀನೇ ಆಗಿರುವೆ. ಶಕುಂತಲೆಯು ಹೇಳಿರುವುದು ಸತ್ಯವಾಗಿದೆ."

ಆಕಾಶವಾಣಿಯು ಹೇಳಿದಂತೆ ದುಷ್ಯಂತನು, ಶಕುಂತಲೆಯು ತನ್ನ ಪತ್ನಿಯೆಂಬುದನ್ನೂ ಅವಳು ಕರೆತಂದಿರುವ ಮಗನು ತನ್ನ ಮಗನೇ ಎಂಬುದನ್ನೂ ಒಪ್ಪಿ ಯಥಾಯೋಗ್ಯವಾಗಿ ಆ ಪತ್ನೀ-ಪುತ್ರರನ್ನು ಸ್ವೀಕರಿಸಿದನು.

ತಂದೆಯಾದ ದುಷ್ಯಂತನು ಗತಿಸಿದನಂತರ ಮಹಾಯಶೋವಂತನಾದ, ಶ್ರೀಹರಿಯ ಅಂಶಸಂಭೂತನಾದ ಭರತನು ಚಕ್ರವರ್ತಿಯಾದನು. ಈಗಲೂ ಅವನ ಮಹಿಮೆಯು ಭೂಮಂಡಲದಲ್ಲಿ ಗಾನಮಾಡಲ್ಪಡುತ್ತಿದೆ.

ಶಕುಂತಲಾಪುತ್ರನ ಬಲದ ಕೈಯಲ್ಲಿ ಚಕ್ರದ ಚಿಹ್ನೆಯಿದ್ದಿತು. ಪಾದಗಳಲ್ಲಿ ಕಮಲಕೋಶದ ಚಿಹ್ನೆಗಳಿದ್ದುವು. ಮಹಾಭಿಷೇಕದ ವಿಧಿಯಿಂದ ಪುರೋಹಿತರು ದುಷ್ಯಂತನ ಪುತ್ರನನ್ನು ರಾಜಾಧಿರಾಜನಾದ ಚಕ್ರವರ್ತಿಯ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದರು. ಶಕುಂತಲಾಪುತ್ರನಾದ ಭರತನು ಮಹಾಶಕ್ತಿಶಾಲೀ ರಾಜನಾಗಿದ್ದನು. ಮಮತಾ ಎಂಬುವಳ ಪುತ್ರನಾದ ದೀರ್ಘತಮಸಮುನಿಯನ್ನು ಪುರೋಹಿತನನ್ನಾಗಿ ಮಾಡಿಕೊಂಡು ಗಂಗೋತ್ರಿಯಿಂದ ಹಿಡಿದು ಗಂಗಾಸಾಗರದವರೆಗಿನ ಗಂಗಾನದಿಯ ತೀರದಲ್ಲಿ ಐವತ್ತೈದು ಯೂಪಗಳನ್ನು ನೆಟ್ಟು ಅಶ್ವಮೇಧಯಾಗಗಳನ್ನು ಮಾಡಿದನು. ಹಾಗೆಯೇ ಭರತನು ಯಮುನಾನದಿಯ ತೀರದಲ್ಲಿ ಯಮುನೋತ್ರಿಯಿಂದ ಹಿಡಿದು ಪ್ರಯಾಗದವರೆವಿಗೂ ಎಪ್ಪತ್ತೆಂಟು ಯೂಪಗಳನ್ನು ಸ್ಥಾಪಿಸಿ ಅಶ್ವಮೇಧಯಾಗಗಳನ್ನು ಮಾಡಿದನು. ಈ ಎಲ್ಲ ಯಜ್ಞಗಳಲ್ಲಿಯೂ ಭರತಚಕ್ರವರ್ತಿಯು ಅಪಾರವಾದ ಧನರಾಶಿಯನ್ನು ಬ್ರಾಹ್ಮಣರಿಗೆ ದಾನಮಾಡಿದನು.

ಭರತನು ಪ್ರಕೃಷ್ಟವಾದ ಗುಣಗಳಿಂದ ಕೂಡಿದ ಪ್ರದೇಶದಲ್ಲಿ ಅಗ್ನಿ

ಚಯನಮಾಡಿದನು. ಆ ಅಗ್ನಿಚಯನಮಾಡಿದ ಪ್ರದೇಶದಲ್ಲಿ ಒಂದು ಸಾವಿರ ಬ್ರಾಹ್ಮಣರು ಭರತನಿಂದ ದಕ್ಷಿಣೆಯ ರೂಪದಲ್ಲಿ ಕೊಡಲ್ಪಟ್ಟ ಗೋವು ಗಳನ್ನು ಬದ್ಧ-ಬದ್ಧ* ಸಂಖ್ಯೆಯಲ್ಲಿ ಹಂಚಿಕೊಂಡರು.

ಹೀಗೆ ಭರತಚಕ್ರವರ್ತಿಯು ನೂರುಮೂವತ್ತುಮೂರು ಕುದುರೆಗಳನ್ನು ನೂರುಮೂವತ್ತುಮೂರು ಯೂಪಸ್ತಂಭಗಳಿಗೆ ಕಟ್ಟಿ ನೂರು ಮೂವತ್ತುಮೂರು ಅಶ್ವಮೇಧಯಜ್ಞಗಳನ್ನು ಮಾಡಿ ಭೂಮಂಡಲದ ಸಮಸ್ತರಾಜರನ್ನೂ ಅಚ್ಚರಿಗೊಳಿಸಿದನು. ಈ ಯಜ್ಞಗಳ ಮೂಲಕವಾಗಿ ಭರತಚಕ್ರವರ್ತಿಯು ಈ ಲೋಕದಲ್ಲಿ ಶ್ರೇಷ್ಠವಾದ ಯಶಸ್ಸನ್ನು ಗಳಿಸಿದನು. ಕಡೆಯಲ್ಲಿ ಅವನು ಮಾಯೆಯ ಮೇಲೂ ವಿಜಯವನ್ನು ಸಾಧಿಸಿ ದೇವತೆಗಳ ಪರಮಗುರುವಾದ ಶ್ರೀಹರಿಯನ್ನು ಸೇರಿದನು.

ಪುಷ್ಕರವೆಂಬ ಕ್ಷೇತ್ರದಲ್ಲಿ ಭರತನು ಸುವರ್ಣವಿಭೂಷಿತವಾದ, ಬಿಳಿಯ ದಂತಗಳಿಂದ ಕೂಡಿದ್ದ, ಕಪ್ಪಾಗಿದ್ದ ಹದಿನಾಲ್ಕು ಲಕ್ಷ ಆನೆಗಳನ್ನು ದಾನವಾಗಿ ಕೊಟ್ಟನು. ಭರತನು ಮಾಡಿದ ಮಹತ್ಕರ್ಮವನ್ನು ಹಿಂದೆ ಯಾರೂ ಮಾಡಿರಲಿಲ್ಲ. ಈಗ ಯಾರೂ ಮಾಡುವುದಿಲ್ಲ. ಮುಂದೆಯೂ ಯಾರೂ ಮಾಡಲಾರರು. ತೋಳುಗಳಿಂದ ಸ್ವರ್ಗವನ್ನು ಬಾಚಿಕೊಳ್ಳಲು ಸಾಧ್ಯವಾಗದಂತೆ ಭರತನು ಮಾಡಿದಂತಹ ಅಸಂಖ್ಯಾತವಾದ ಯಜ್ಞಕ್ರಿಯೆ ಗಳನ್ನು ಯಾರೂ ಮಾಡಲಾರರು. ಭರತನು ದಿಗ್ವಿಜಯದ ಸಮಯದಲ್ಲಿ ಕಿರಾತ, ಹೂಣ, ಯವನ, ಆಂಧ್ರ, ಕಂಕ, ಖಳ, ಶಕ ಮತ್ತು ಮ್ಲೇಚ್ಛ– ಇವರೇ ಮೊದಲಾದ, ಬ್ರಾಹ್ಮಣದ್ರೋಹಿಗಳಾದ ರಾಜರನ್ನು ಸಂಹರಿಸಿದನು.

ಹಿಂದೆ ಬಲಿಷ್ಠರಾದ ರಾಕ್ಷಸರು ದೇವತೆಗಳನ್ನು ಗೆದ್ದು ದೇವಸ್ತ್ರೀಯರನ್ನು ಅಪಹರಿಸಿಕೊಂಡು ರಸಾತಲಕ್ಕೆ ಹೋಗಿ ಅಲ್ಲಿ ವಾಸಮಾಡುತ್ತಿದ್ದರು. ಭರತಚಕ್ರವರ್ತಿಯು ದೇವತೆಗಳ ಪ್ರಾರ್ಥನೆಯಂತೆ ರಸಾತಲಕ್ಕೆ ಹೋಗಿ ದಾನವರನ್ನು ಗೆದ್ದು ದೇವಸ್ತ್ರೀಯರನ್ನು ಬಂಧನದಿಂದ ಬಿಡಿಸಿಕೊಂಡು ಬಂದನು. ಭರತಚಕ್ರವರ್ತಿಯು ರಾಜ್ಯಭಾರಮಾಡುತ್ತಿದ್ದಾಗ ಭೂಮ್ಯಂತ ರಿಕ್ಷಗಳು ಪ್ರಜೆಗಳ ಸಕಲವಿಧವಾದ ಕಾಮನೆಗಳನ್ನೂ ಈಡೇರಿಸಿಕೊಡು

---

* ಬದ್ಧಂ ಚತುರಶೀತ್ಯಗ್ರ ಸಹಸ್ರಾಣಿ ತ್ರಯೋದಶ । ಹದಿಮೂರು ಸಾವಿರದ ಎಂಬತ್ತುನಾಲ್ಕು (೧೩,೦೮೪) ಸಂಖ್ಯೆಗೆ ಒಂದು ಬದ್ಧವೆಂದು ಹೆಸರು.

ತ್ತಿದ್ದುವು. ಹೀಗೆ ಸಾರ್ವಭೌಮನಾದ ಭರತಚಕ್ರವರ್ತಿಯು ಇಪ್ಪತ್ತೇಳು ಸಾವಿರ ವರ್ಷಗಳ ಕಾಲ ರಾಜ್ಯಭಾರಮಾಡಿದನು. ಕಟ್ಟಕಡೆಗೆ ಭರತನು ಸಾರ್ವಭೌಮತ್ವವನ್ನೂ, ಮಡದಿ-ಮಕ್ಕಳನ್ನೂ, ಅಖಂಡಚಕ್ರಾಧಿಪತ್ಯವನ್ನೂ ಮತ್ತು ಜೀವನವನ್ನೂ ಅನಿತ್ಯವೆಂದು ನಿರ್ಧರಿಸಿ ಸಂಸಾರದಲ್ಲಿ ವಿರಕ್ತನಾದನು.

ಪರೀಕ್ಷಿತನೇ! ವಿದರ್ಭರಾಜನ ಮೂವರು ಪ್ರಿಯರೆನಿಸಿದ ಕನ್ಯೆಯರು ಭರತಚಕ್ರವರ್ತಿಯ ಪತ್ನಿಯರಾಗಿದ್ದರು. ಅವರು ಪತಿಯನ್ನು ಬಹಳವಾಗಿ ಸಮಾದರಿಸುತ್ತಿದ್ದರು. ಅವರಲ್ಲಿ ಹುಟ್ಟಿದ ಮಕ್ಕಳನ್ನು ಭರತಚಕ್ರವರ್ತಿಯು ತನಗೆ ಅನುರೂಪರಾದ ಮಕ್ಕಳಲ್ಲವೆಂದು ಹೇಳಿಬಿಟ್ಟನು. ಇದೇ ಕಾರಣಕ್ಕಾಗಿ ಪತಿಯು ತಮ್ಮನ್ನು ಪರಿತ್ಯಾಗಮಾಡಿಯಾನೆಂಬ ಭಯದಿಂದ ಆ ರಾಜ ಮಹಿಷಿಯರು ತಮ್ಮ ಮಕ್ಕಳನ್ನೇ ಕೊಂದುಹಾಕಿದರು. ಈ ಕಾರಣದಿಂದ ಭರತಚಕ್ರವರ್ತಿಯ ವಂಶದಲ್ಲಿ ವಿಚ್ಛಿತ್ತಿಯುಂಟಾಯಿತು. ಆಗ ಭರತನು ಸಂತಾನಪ್ರಾಪ್ತಿಗಾಗಿ ಮರುತ್ಸ್ತೋಮ ಎಂಬ ಯಜ್ಞವನ್ನು ಮಾಡಿದನು. ಆ ಯಜ್ಞದಿಂದ ಸುಪ್ರೀತರಾದ ಮರುತ್ತುಗಳು ಭರತಚಕ್ರವರ್ತಿಗೆ ಭರದ್ವಾಜ ನೆಂಬ ಪುತ್ರನನ್ನು ದಯಪಾಲಿಸಿದರು.

ಒಮ್ಮೆ ದೇವಗುರುವಾದ ಬೃಹಸ್ಪತಿಯು ತನ್ನ ತಮ್ಮನಾದ ಉತಥ್ಯನ ಪತ್ನಿಯೊಡನೆ ಸಮಾಗಮವನ್ನು ಬಯಸಿದನು. ಆ ಸಮಯದಲ್ಲಿ ಅವಳು ಗರ್ಭವತಿಯಾಗಿದ್ದಳು. ಗರ್ಭದಲ್ಲಿದ್ದ ಬಾಲಕನು ಸಮಾಗಮವನ್ನು ತಡೆ ಹಿಡಿದನು. ಬೃಹಸ್ಪತಿಯು ಅವನ ಮಾತನ್ನು ಲೆಕ್ಕಿಸದೆ ತನ್ನ ಕಾಮನೆಗೆ ಅಡ್ಡಬಂದುದಕ್ಕಾಗಿ ಅವನಿಗೆ ಕುರುಡನಾಗೆಂದು ಶಾಪವನ್ನು ಕೊಟ್ಟು ಬಲಾತ್ಕಾರಪೂರ್ವಕವಾಗಿ ಉತಥ್ಯನ ಪತ್ನಿಯೊಡನೆ ಸಮಾಗಮಮಾಡಿ ದನು. ಉತಥ್ಯನ ಪತ್ನಿಯಾದ ಮಮತೆಗೆ–ಬೃಹಸ್ಪತಿಯ ಸಮಾಗಮ ದಿಂದಾಗಿ ತನ್ನ ಪತಿಯು ತನ್ನನ್ನೆಲ್ಲಿ ಪರಿತ್ಯಾಗ ಮಾಡಿಬಿಡುವನೋ–ಎಂಬ ಭಯವಾಯಿತು. ಈ ಕಾರಣದಿಂದಲೇ ಅವಳು ಬೃಹಸ್ಪತಿಯು ಇರಿಸಿದ್ದ ಗರ್ಭವನ್ನು ತ್ಯಾಗಮಾಡಲು ಇಚ್ಛಿಸಿದಳು. ಆ ಸಮಯದಲ್ಲಿ ಬೃಹಸ್ಪತಿಯ ಸಂಬಂಧದಿಂದ ಗರ್ಭಸ್ಥವಾಗಿದ್ದ ಶಿಶುವಿಗೆ ದೇವತೆಗಳು ನಾಮನಿರ್ವಚನ ಮಾಡುತ್ತಾ ಈ ಶ್ಲೋಕವನ್ನು ಹೇಳಿದರು :

ಮೂಢೇ ಭರ ದ್ವಾಜಮಿಮಂ ಭರ ದ್ವಾಜಂ ಬೃಹಸ್ಪತೇ ।
ಯಾತೌ ಯದುಕ್ತ್ವಾ ಪಿತರೌ ಭರದ್ವಾಜಸ್ತತಸ್ತ್ವಯಮ್ ॥೩೮॥

"ಮೂಢೆ! ನಿನ್ನ ಪತಿಗೂ ಮತ್ತು ಬೃಹಸ್ಪತಿಗೂ ಮಗನಾಗಿರುವ ಈ ದ್ವಾಜನನ್ನು ನೀನೇ ಭರಿಸು." ಮಮತೆಯು ಒಲ್ಲೆನೆಂದಳು.

"ಬೃಹಸ್ಪತಿಯೇ! ನಿನಗೂ ಮತ್ತು ನಿನ್ನ ತಮ್ಮನಿಗೂ ಪುತ್ರರೂಪ ದಲ್ಲಿರುವ ಈ ದ್ವಾಜನನ್ನು ನೀನೇ ಭರಿಸು."

ದೇವತೆಗಳ ಈ ಮಾತಿಗೆ ಬೃಹಸ್ಪತಿಯೂ ಒಲ್ಲೆನೆಂದನು. ಇಬ್ಬರೂ ಮಗುವನ್ನು ಪರಿತ್ಯಜಿಸಿ ಹೊರಟುಹೋದರು. ಈ ಕಾರಣದಿಂದಲೇ ಮಗು ವಿಗೆ ಭರದ್ವಾಜನೆಂದು ಹೆಸರಾಯಿತು.

ದೇವತೆಗಳು ಮಗುವನ್ನು ಭರಿಸುವಂತೆ ಹೇಳಿದರೂ ಮಮತಾ-ಬೃಹಸ್ಪತಿಗಳು ಮಗುವಿನಿಂದ ತಮಗೆ ಪ್ರಯೋಜನವಿಲ್ಲವೆಂದು ಭಾವಿಸಿ ಆ ಮಗುವನ್ನು ಅಲ್ಲಿಯೇ ಬಿಟ್ಟು ಹೊರಟುಹೋದರು. ಆಗ ಮರುದ್ಗಣಗಳೇ ಆ ಶಿಶುವನ್ನು ಪಾಲಿಸತೊಡಗಿದರು. ಭರತಚಕ್ರವರ್ತಿಯ ವಂಶವು ನಷ್ಟವಾಗುವುದರಲ್ಲಿರಲಾಗಿ ಮರುತ್ತರು ಅದೇ ಶಿಶುವನ್ನು ತಂದು, ಸಂತಾನದ ಸಲುವಾಗಿ ಯಾಗಮಾಡಿದ ಭರತಚಕ್ರವರ್ತಿಗೆ ಅನುಗ್ರಹಿಸಿಕೊಟ್ಟರು. ಹೀಗೆ ವಿತಥನು ಅಥವಾ ಭರದ್ವಾಜನು ಭರತನಿಗೆ ದತ್ತಕ ಪುತ್ರನಾದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೨೦ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ — ೨೧ನೆಯ ಅಧ್ಯಾಯ

ಭರತವಂಶದ ವರ್ಣನೆ: ರಂತಿದೇವನ ಕಥೆ

ಶ್ರೀಶುಕರು ಹೇಳುತ್ತಾರೆ :

ವಿತಥಸ್ಯ ಸುತೋ ಮನ್ಯುರ್ಬೃಹತ್ಕ್ಷತ್ರೋ ಜಯಸ್ತತಃ ।
ಮಹಾವೀರ್ಯೋ ನರೋ ಗರ್ಗಃ ಸಙ್ಕೃತಿಸ್ತು ನರಾತ್ಮಜಃ ॥೧॥

ಪರೀಕ್ಷಿತ! ವಿತಥನ ಅಥವಾ ಭರದ್ವಾಜನ ಮಗ ಮನ್ಯು–ಎಂಬು ವನು. ಮನ್ಯುವಿಗೆ ಬೃಹತ್ಕ್ಷತ್ರ, ಜಯ, ಮಹಾವೀರ್ಯ, ನರ ಮತ್ತು

ಗರ್ಗ–ಎಂಬ ಐವರು ಮಕ್ಕಳಿದ್ದರು. ಸಂಕೃತಿ ಎಂಬುವನು ನರನ ಮಗನು. ಸಂಕೃತಿಗೆ ಗುರು ಮತ್ತು ರಂತಿದೇವ–ಎಂಬ ಇಬ್ಬರು ಮಕ್ಕಳಿದ್ದರು. ರಂತಿದೇವನ ಶುಭ್ರವಾದ ಯಶಸ್ಸು ಇಹಲೋಕ-ಪರಲೋಕಗಳೆರಡರಲ್ಲೂ ಈಗಲೂ ಗಾನಮಾಡಲ್ಪಡುತ್ತಿದೆ. ರಂತಿದೇವನಿಗೆ ಆಕಾಶವೇ ಸಂಪತ್ತಾಗಿದ್ದಿತು. ಆತನು ಸಂಪತ್ತಿನಿಂದ ವಿಹೀನನಾಗಿದ್ದನು. ಪ್ರಯತ್ನವಿಲ್ಲದೆ ದೊರೆತುದನ್ನು ಹೊಟ್ಟೆಗಿಲ್ಲದೆ ಬಂದವರಿಗೆ ಕೊಟ್ಟುಬಿಡುತ್ತಿದ್ದನು. ನಿಷ್ಕಿಂಚನನಾಗಿದ್ದರೂ ರಂತಿದೇವನು ಸಂಗ್ರಹ, ಪರಿಗ್ರಹ ಮತ್ತು ಮಮತ್ವಗಳಿಂದ ವಿಹೀನನಾಗಿದ್ದು ಧೀರನಾಗಿದ್ದನು. ತನ್ನ ಕುಟುಂಬದವರೊಡನೆ ಬಹಳವಾಗಿ ಕಷ್ಟ ಪಡುತ್ತಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ರಂತಿದೇವನಿಗೂ ಮತ್ತು ಅವನ ಕುಟುಂಬದವರಿಗೂ ನಲವತ್ತೆಂಟು ದಿವಸಗಳು ಕುಡಿಯಲು ನೀರು ಕೂಡ ಸಿಗಲಿಲ್ಲ. ನಲವತ್ತೊಂಬತ್ತನೆಯ ದಿವಸ ದೈವವಶಾತ್ ಸ್ವಲ್ಪ ತುಪ್ಪ, ಪಾಯಸ, ಗೋಧಿಯ ಅನ್ನ, ನೀರು ಇವು ದೊರೆತುವು. ಅವನ ಕುಟುಂಬದವರು ಹಸಿವು, ಬಾಯಾರಿಕೆಗಳಿಂದ ಬಹಳವಾಗಿ ಸಂಕಟಪಡುತ್ತಿದ್ದರು. ಪ್ರಾಣಗಳು ಗಂಟಲಿಗೇರಿ ಗಡ-ಗಡನೆ ನಡುಗುತ್ತಿದ್ದರು. ರಂತಿದೇವನೂ ಮತ್ತು ಅವನ ಕುಟುಂಬದವರೂ ದೈವದತ್ತವಾದ ಅನ್ನವನ್ನು ಭೋಜನ ಮಾಡಬೇಕೆಂದಿದ್ದಾಗ ಬ್ರಾಹ್ಮಣನೊಬ್ಬನು ಅತಿಥಿರೂಪದಲ್ಲಿ ಆಗಮಿಸಿದನು. ರಂತಿದೇವನು ಶ್ರೀಹರಿಯನ್ನೇ ಎಲ್ಲರಲ್ಲೂ ಕಾಣುತ್ತಿದ್ದನು. ಆದುದರಿಂದ ಬಂದ ಅತಿಥಿಯನ್ನು ಶ್ರೀಹರಿಯೆಂದೇ ಭಾವಿಸಿ ಅತ್ಯಂತ ಶ್ರದ್ಧೆಯಿಂದ ಆದರಪೂರ್ವಕವಾಗಿ ದೈವದತ್ತವಾಗಿದ್ದ ಅನ್ನವನ್ನು ವಿಭಾಗಿಸಿ ಬ್ರಾಹ್ಮಣನಿಗೆ ಭೋಜನವನ್ನು ಮಾಡಿಸಿದನು. ಬ್ರಾಹ್ಮಣನು ಭೋಜನಮಾಡಿ ತೃಪ್ತನಾಗಿ ಹೊರಟುಹೋದನು. ಬ್ರಾಹ್ಮಣನು ಹೊರಟುಹೋದನಂತರ ಉಳಿದ ಅನ್ನವನ್ನು ತಮ್ಮಲ್ಲಿಯೇ ಹಂಚಿಕೊಂಡು ತಿನ್ನಲು ಅನುವಾದರು. ಆ ಸಮಯಕ್ಕೆ ಸರಿಯಾಗಿ ಶೂದ್ರನಾದ ಅತಿಥಿಯೊಬ್ಬನು ಆಗಮಿಸಿದನು. ರಂತಿದೇವನು ಶಾಂತಮನಸ್ಕನಾಗಿ ಶ್ರೀಹರಿಯನ್ನು ಸ್ಮರಿಸುತ್ತಾ ಉಳಿದಿದ್ದ ಅನ್ನದಲ್ಲಿಯೇ ವಿಭಾಗಮಾಡಿ ಶೂದ್ರನ ರೂಪದಲ್ಲಿ ಬಂದಿದ್ದ ಅತಿಥಿಗೆ ಬಡಿಸಿಬಿಟ್ಟನು. ಶೂದ್ರಅತಿಥಿಯೂ ಭೋಜನಮಾಡಿ ತೃಪ್ತ ನಾಗಿ ಹೊರಟುಹೋದನು.ರಂತಿದೇವನು ಉಳಿದ ಅನ್ನವನ್ನಾದರೂ ಕುಟುಂಬದವರೊಡನೆ ಹಂಚಿಕೊಂಡು

ತಿನ್ನಬೇಕೆನ್ನುವುದರಲ್ಲಿದ್ದಾಗ ನಾಯಿಗಳಿಂದ ಪರಿವೃತನಾದ ಅತಿಥಿಯೊಬ್ಬನು ಆಗಮಿಸಿ ಹೇಳಿದನು :

"ಮಹಾರಾಜ! ನಾನು ಮತ್ತು ನನ್ನ ಈ ನಾಯಿಗಳು ಬಹಳವಾಗಿ ಹಸಿದಿದ್ದೇವೆ. ಏನಾದರೂ ಸ್ವಲ್ಪ ತಿನ್ನಲು ಕೊಡು."

ರಂತಿದೇವನು ಅತಿಥಿಯ ಈ ಮಾತನ್ನು ಕೇಳಿದೊಡನೆಯೇ ಆದರ ಪೂರ್ವಕವಾಗಿ ಶೂದ್ರಅತಿಥಿಗೆ ಕೊಟ್ಟು ಉಳಿದಿದ್ದ ಅನ್ನವೆಲ್ಲವನ್ನೂ ಕೊಟ್ಟು ನಾಯಿಗಳನ್ನೂ ಮತ್ತು ನಾಯಿಗಳ ಸ್ವಾಮಿಯನ್ನೂ ಪರಮಾತ್ಮಸ್ವರೂಪರೆಂದೇ ಭಾವಿಸಿ ನಮಸ್ಕರಿಸಿ ಬೀಳ್ಕೊಟ್ಟನು. ಆಗ ರಂತಿದೇವನ ಬಳಿಯಲ್ಲಿ ನೀರು ಮಾತ್ರವೇ ಉಳಿದಿದ್ದಿತು. ಅದೂ ಒಬ್ಬರಿಗೆ ಸಾಕಾಗುವಷ್ಟು ಮಾತ್ರವೇ ಇದ್ದಿತು. ಆ ನೀರನ್ನಾದರೂ ಕುಟುಂಬದವರೊಡನೆ ಹಂಚಿಕೊಂಡು ಕುಡಿಯ ಬೇಕೆನ್ನುವುದರಲ್ಲಿದ್ದಾಗ ಚಂಡಾಲನೊಬ್ಬನು ಆಗಮಿಸಿ ಹೇಳಿದನು :

"ಸ್ವಾಮಿಯೇ! ನಾನು ಅತ್ಯಂತ ನೀಚನಾಗಿದ್ದೇನೆ. ಬಹಳ ಬಾಯಾರಿ ದ್ದೇನೆ. ನಿನ್ನಲ್ಲಿರುವ ನೀರನ್ನಾದರೂ ಕುಡಿಯಲು ಕೊಟ್ಟು ಕಾಪಾಡು."

ಹೀಗೆ ಹೇಳುವುದೂ ಕೂಡ ಚಂಡಾಲನಿಗೆ ಬಹಳ ಕಷ್ಟವಾಗಿದ್ದಿತು. ಅವನು ಅಷ್ಟು ಬಳಲಿದ್ದನು. ದಯನೀಯನಾದ ಚಂಡಾಲನ ಮಾತನ್ನು ಕೇಳಿ ಕರುಣಾಶಾಲಿಯಾದ ರಂತಿದೇವನು ಚಂಡಾಲನು ಕಷ್ಟಪಡುತ್ತಿರುವುದನ್ನು ನೋಡಿ ತಾನೂ ಸಂಕಟಪಡುತ್ತಾ ಅಮೃತಮಯವಾದ ಈ ಮಾತನ್ನು ಹೇಳಿದನು :

ನ ಕಾಮಯೇಽಹಂ ಗತಿಮೀಶ್ವರಾತ್ಪರಾ-
ಮಷ್ಟರ್ಧಿಯುಕ್ತಾಮಪುನರ್ಭವಂ ವಾ ।
ಆರ್ತಿಂ ಪ್ರಪದ್ಯೇಽಖಿಲದೇಹಭಾಜಾ-
ಮನ್ತಃ ಸ್ಥಿತೋ ಯೇನ ಭವನ್ತ್ಯದುಃಖಾಃ ॥೧೨॥

"ನಾನು ಭಗವಂತನಿಂದ ಅಣಿಮಾದಿ ಅಷ್ಟಸಿದ್ಧಿಗಳಿಂದ ಯುಕ್ತವಾದ ಪರಮಪದವನ್ನು ಕೇಳುವುದಿಲ್ಲ. ಹುಟ್ಟು-ಸಾವುಗಳಿಲ್ಲದ ಮೋಕ್ಷಪದವಿಯು ಬೇಕೆಂದೂ ನಾನು ಬಯಸುವುದಿಲ್ಲ. ಸಮಸ್ತಪ್ರಾಣಿಗಳ ಹೃದಯಗಳಲ್ಲೂ ಇರಲು ನಾನು ಬಯಸುತ್ತೇನೆ ಮತ್ತು ಅವುಗಳ ಹೃದಯದಲ್ಲಿದ್ದು ಅವು

ಗಳ ಎಲ್ಲ ಕಷ್ಟಗಳನ್ನೂ ಭರಿಸಲು ಅಪೇಕ್ಷಿಸುತ್ತೇನೆ. ಹೀಗೆ ಮಾಡುವುದರಿಂದ ಯಾವ ಪ್ರಾಣಿಯೂ ದುಃಖದಲ್ಲಿರಬಾರದೆಂಬುದೇ ನನ್ನ ಅಪೇಕ್ಷೆಯಾಗಿದೆ.

ದೀನನಾದ ಈ ಪುಲಸ್ಕನು ನೀರನ್ನಾದರೂ ಕುಡಿದು ಬದುಕುವ ಆಸೆಯುಳ್ಳವನಾಗಿದ್ದಾನೆ. ನೀರನ್ನು ಕೊಟ್ಟುದರಿಂದ ಇವನ ಜೀವನದ ರಕ್ಷಣೆಯಾಗುತ್ತದೆ. ಇದರ ಪರಿಣಾಮವಾಗಿ ನನಗೆ ಹಸಿವು-ಬಾಯಾರಿಕೆ ಗಳಾಗಲೀ, ಸಂಕಟವಾಗಲೀ, ಶರೀರದ ಶೈಥಿಲ್ಯವಾಗಲೀ, ದೀನತೆಯಾಗಲೀ, ಗ್ಲಾನಿಯಾಗಲೀ, ಶೋಕವಾಗಲೀ, ವಿಷಾದವಾಗಲೀ, ಮೋಹವಾಗಲೀ ಇರುವುದಿಲ್ಲ. ಎಲ್ಲವೂ ಕ್ಷಣಮಾತ್ರದಲ್ಲಿ ಹೊರಟುಹೋಗುತ್ತವೆ. ನಿಶ್ಚಯ ವಾಗಿಯೂ ಈಗ ನಾನೇ ಸುಖಿಯು."

ಹೀಗೆ ಹೇಳುತ್ತಾ ರಂತಿದೇವನು ನೀರಡಿಕೆಯಿಂದ ತಾನೂ ಮತ್ತು ತನ್ನ ಕುಟುಂಬವರ್ಗದವರೂ ಮರಣಾವಸ್ಥೆಯಲ್ಲಿದ್ದರೂ ಉಳಿದಿದ್ದ ಒಬ್ಬರಿಗಾಗುವಷ್ಟು ನೀರನ್ನೂ ಚಂಡಾಲನಿಗೆ ಕುಡಿಯಲು ಕೊಟ್ಟುಬಿಟ್ಟನು. ಸ್ವಾಭಾವಿಕವಾಗಿಯೇ ರಂತಿದೇವನು ದಯಾಮಯನಾಗಿದ್ದನು. ಕರುಣೆಯ ಸಾಕಾರಮೂರ್ತಿಯೇ ಆಗಿದ್ದನು. ಆದುದರಿಂದಲೇ ತನಗೂ ಮತ್ತು ತನ್ನ ಕುಟುಂಬದವರಿಗೂ ಜೀವನಾಧಾರವಾಗಿದ್ದ ನೀರನ್ನು ಇಟ್ಟುಕೊಳ್ಳಲು ಕೂಡ ಅವನಿಗೆ ಸಾಧ್ಯವಾಗಲಿಲ್ಲ. ಮೃತ್ಯುವನ್ನು ಎದುರಿಸುವಷ್ಟು ವೀರ್ಯವು ಅವನಲ್ಲಿದ್ದಿತು.

ಪರೀಕ್ಷಿತನೇ! ರಂತಿದೇವನ ಬಳಿಗೆ ಬಂದಿದ್ದ ಅತಿಥಿಗಳೆಲ್ಲರೂ ವಿಷ್ಣು ವಿನ ಮಾಯೆಯಿಂದ ಕಲ್ಪಿತವಾದ ಸ್ವರೂಪಗಳೇ ಆಗಿದ್ದುವು. ಪರೀಕ್ಷೆಯು ಮುಗಿದನಂತರ ತಮ್ಮ ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಲು ಸಮರ್ಥರಾದ, ಮೂರು ಲೋಕಗಳಿಗೂ ಒಡೆಯರಾದ ಬ್ರಹ್ಮಾ-ವಿಷ್ಣು-ಮಹೇಶ್ವರರು ರಂತಿದೇವನಿಗೆ ಪ್ರತ್ಯಕ್ಷರಾದರು. ರಂತಿದೇವನು ಅವರನ್ನು ನೋಡುತ್ತಲೇ ಭಕ್ತಿಭಾವದಿಂದ ಅವರ ಪಾದಗಳಿಗೆರಗಿದನು. ಭಗವಂತನ ಕೃಪೆಯಿಂದಾಗಿ ರಂತಿದೇವನು ನಿಸ್ಸಂಗನೂ (ನಿರಾಸಕ್ತನೂ) ನಿಃಸ್ಪೃಹನೂ ಆಗಿದ್ದನು. ಪ್ರೇಮಮಯವಾದ ಭಕ್ತಿಯಿಂದ ತನ್ನ ಮನಸ್ಸನ್ನು ರಂತಿ ದೇವನು ವಾಸುದೇವಮಯವನ್ನಾಗಿ ಮಾಡಿಬಿಟ್ಟಿದ್ದನು. ತ್ರಿಮೂರ್ತಿ

ಗಳಿಂದಲೂ ಅವನು ಯಾವ ವರವನ್ನೂ ಕೇಳಲಿಲ್ಲ. ಭಗವಂತನನ್ನು ಬಿಟ್ಟು ಅವನಿಗೆ ಬೇರಾವ ವರವೂ ಬೇಕಾಗಿರಲಿಲ್ಲ. ಅವನು ತನ್ನ ಮನಸ್ಸನ್ನು ಪೂರ್ಣವಾಗಿ ಭಗವಂತನಲ್ಲಿಯೇ ಲೀನಗೊಳಿಸಿಬಿಟ್ಟಿದ್ದನು. ಎಚ್ಚರ ಗೊಂಡೊಡನೆಯೇ ಕನಸು ಅಳಿಸಿಹೋಗುವಂತೆ ತ್ರಿಗುಣಾತ್ಮಿಕವಾದ ಮಾಯೆಯು ರಂತಿದೇವನ ವಿಷಯದಲ್ಲಿ ಅಡಗಿಹೋಯಿತು. ರಂತಿದೇವನ ಅನುಯಾಯಿಗಳು ಕೂಡ ಅವನ ಸಹವಾಸದ ಪ್ರಭಾವದಿಂದಾಗಿ ಶ್ರೀಮನ್ನಾರಾಯಣನನ್ನೇ ಪರಮಾಶ್ರಯನನ್ನಾಗಿ ಪಡೆದು ಯೋಗಿಗಳಾಗಿಬಿಟ್ಟರು.

ಪರೀಕ್ಷಿತ! ಇನ್ನು ಮುಂದೆ ನಾನು ಮನ್ಯುವಿನ ಕಿರಿಯ ಮಗನಾದ ಗರ್ಗನ ವಂಶಾವಳಿಯನ್ನು ಹೇಳುತ್ತೇನೆ. ಗರ್ಗನ ಮಗ ಶಿನಿ. ಶಿನಿಯ ಮಗ ಗಾರ್ಗ್ಯ. ಗಾರ್ಗ್ಯನು ಕ್ಷತ್ರಿಯನಾಗಿದ್ದರೂ ಅವನಿಂದ ಬ್ರಾಹ್ಮಣವಂಶವೂ ಹುಟ್ಟಿಕೊಂಡಿತು. ಮನ್ಯುವಿನ ಮೂರನೆಯ ಮಗನಾದ ಮಹಾವೀರ್ಯನ ಮಗ ದುರಿತಕ್ಷಯ. ದುರಿತಕ್ಷಯನಿಗೆ ತ್ರಯ್ಯಾರುಣಿ, ಕವಿ ಮತ್ತು ಪುಷ್ಕರಾರುಣಿ—ಎಂಬ ಮೂವರು ಮಕ್ಕಳಿದ್ದರು. ಈ ಮೂವರೂ ಬ್ರಾಹ್ಮಣರ ಮಾರ್ಗವನ್ನು ಹಿಡಿದರು. ಮನ್ಯುವಿನ ಹಿರಿಯ ಮಗನಾದ ಬೃಹತ್ಕ್ಷತ್ರನಿಗೆ ಹಸ್ತೀ ಎಂಬ ಮಗನು ಹುಟ್ಟಿದನು. ಹಸ್ತಿನಾಪುರವನ್ನು ಕಟ್ಟಿಸಿದವನು ಇವನೇ. ಹಸ್ತಿಗೆ ಅಜಮೀಢ, ದ್ವಿಮೀಢ ಮತ್ತು ಪುರುಮೀಢ ರೆಂಬ ಮೂವರು ಮಕ್ಕಳು. ಅಜಮೀಢನ ಮಕ್ಕಳಲ್ಲಿ ಪ್ರಿಯಮೇಧನೇ ಮೊದಲಾದವರು ಬ್ರಾಹ್ಮಣರ ಮಾರ್ಗವನ್ನು ಅನುಸರಿಸಿದರು. ಅಜಮೀಢನಿಗೆ ಬೃಹದಿಷು—ಎಂಬ ಮಗನೂ ಇದ್ದನು. ಬೃಹದಿಷುವಿನ ಮಗ ಬೃಹದ್ಧನು. ಬೃಹದ್ಧನುವಿನ ಮಗ ಬೃಹತ್ಕಾಯ. ಬೃಹತ್ಕಾಯನ ಮಗ ಜಯದ್ರಥ. ಜಯದ್ರಥನ ಸುಪುತ್ರ ವಿಶದನೆಂಬುವನು. ವಿಶದನ ಮಗ ಸೇನಜಿತ್. ಸೇನಜಿತನಿಗೆ ರುಚಿರಾಶ್ವ, ದೃಢಹನು, ಕಾಶ್ಯ ಮತ್ತು ವತ್ಸ-ಎಂಬ ನಾಲ್ವರು ಮಕ್ಕಳಿದ್ದರು. ರುಚಿರಾಶ್ವನ ಮಗ ಪಾರ. ಪಾರನ ಮಗ ಪೃಥುಸೇನ. ಪಾರನ ಮತ್ತೊಬ್ಬ ಮಗ ನೀಪ. ನೀಪನಿಗೆ ನೂರು ಮಕ್ಕಳಿದ್ದರು. ನೀಪನು ಶುಕಮುನಿಯ* ಮಗಳಾದ ಕೃತ್ವೀ—ಎಂಬುವಳನ್ನು ಮದುವೆಯಾಗಿ ಅವಳಿಂದ ಬ್ರಹ್ಮದತ್ತ ಎಂಬ ಹೆಸರಿನ ಮಗನನ್ನು ಪಡೆದನು.

---

* ಶುಕಮುನಿಯು ಯಾವಾಗಲೂ ಅಸಂಗನೇ ಆಗಿದ್ದನು. ಆದರೆ ಅವನು

ಬ್ರಹ್ಮದತ್ತನು ಮಹಾಯೋಗಿಯಾಗಿದ್ದನು. ಆತನು ತನ್ನ ಪತ್ನಿಯಾದ ಸರಸ್ವತಿಯ ಗರ್ಭದಲ್ಲಿ ವಿಷ್ವಕ್ಸೇನನೆಂಬ ಮಗನನ್ನು ಪಡೆದನು. ಉದತ್ಸ್ವನ–ಎಂಬುವನು ವಿಷ್ವಕ್ಸೇನನ ಪುತ್ರ. ಉದತ್ಸ್ವನನಿಗೆ ಭಲ್ಲಾದನೆಂಬ ಮಗನಿದ್ದನು. ಇವರೆಲ್ಲರೂ ಬೃಹದಿಷುವಿನ ವಂಶಜರು. ಹಸ್ತಿಯ ಎರಡನೆಯ ಮಗನಾದ ದ್ವಿಮೀಢನಿಗೆ ಯವೀನರನೆಂಬ ಮಗನಿದ್ದನು. ಯವೀನರನ ಮಗ ಕೃತಿಮಂತ. ಕೃತಿಮಂತನ ಮಗ ಸತ್ಯಧೃತಿ. ಸತ್ಯಧೃತಿಯ ಮಗ ದೃಢನೇಮಿ. ದೃಢನೇಮಿಯ ಮಗ ಸುಪಾರ್ಶ್ವ. ಸುಪಾರ್ಶ್ವನ ಮಗ ಸುಮತಿ. ಸುಮತಿಯ ಮಗ ಸನ್ನತಿಮಂತ. ಸನ್ನತಿಮಂತನ ಮಗ ಕೃತೀ. ಇವನು ಹಿರಣ್ಯನಾಭನಿಂದ ಯೋಗವಿದ್ಯೆಯನ್ನೂ, ಪ್ರಾಚ್ಯಸಾಮಗಳೆಂಬ ಆರು ಸಂಹಿತೆಗಳನ್ನೂ ಕಲಿತು ಅವುಗಳನ್ನು ವಿಂಗಡಿಸಿ ಇತರರಿಗೂ ಕಲಿಸಿಕೊಟ್ಟನು. ಕೃತಿಯ ಮಗ ನೀಪ. ನೀಪನ ಮಗ ಉಗ್ರಾಯುಧ. ಉಗ್ರಾಯುಧನ ಮಗ ಕ್ಷೇಮ್ಯ. ಕ್ಷೇಮ್ಯನ ಮಗ ಸುವೀರ. ಸುವೀರನ ಮಗ ರಿಪುಂಜಯ. ರಿಪುಂಜಯನ ಮಗ ಬಹುರಥ. ದ್ವಿಮೀಢನ ತಮ್ಮ ಪುರಮೀಢನಿಗೆ ಸಂತಾನವಿರಲಿಲ್ಲ. ಹಿರಿಯನಾದ ಅಜಮೀಢನಿಗೆ ನಲಿನೀ–ಎಂಬ ಮತ್ತೊಬ್ಬ ಪತ್ನಿಯೂ ಇದ್ದಳು. ಅಜಮೀಢನಿಗೆ ಅವಳ ಗರ್ಭದಲ್ಲಿ

ಅರಣ್ಯಕ್ಕೆ ಹೋಗುವ ಸಮಯದಲ್ಲಿ ಛಾಯಾಶುಕನನ್ನು ಕಲ್ಪಿಸಿ ಹೊರಟುಹೋಗಿ ದ್ದನು. ಆ ಛಾಯಾಶುಕನೇ ಗೃಹಸ್ಥಾಶ್ರಮೋಚಿತವಾದ ವ್ಯವಹಾರಗಳನ್ನು ಮಾಡುತ್ತಿದ್ದನು.

ವ್ಯಾಸಮುನಿಯಿಂದ ಅರಣಿಯಲ್ಲಿ ಹುಟ್ಟಿದ ಶುಕನು ಪೀರಿಣಿ ಎಂಬ ಕನ್ಯೆಯನ್ನು ಮದುವೆಯಾಗಿ ಆಕೆಯಲ್ಲಿ ಕೃಷ್ಣ, ಗೌರಪ್ರಭ, ಶಂಭು, ಭೂರಿಸುತ, ಜಯ–ಎಂಬ ಐವರು ಗಂಡುಮಕ್ಕಳನ್ನೂ, ಮಹಾಯೋಗಿನಿಯಾದ ಕೃತ್ವೀ ಎಂಬ ಹೆಣ್ಣುಮಗಳನ್ನೂ ಪಡೆದನು. ಇವಳೇ ಬ್ರಹ್ಮದತ್ತನ ತಾಯಿ. ಅರಣಿಯಲ್ಲಿ ಹುಟ್ಟಿದ ಶುಕಮುನಿಯೇ ತನ್ನನ್ನು ಹಿಂಬಾಲಿಸಿದ ತಂದೆಯನ್ನು ಕಂಡು ತನ್ನ ಛಾಯೆಯಿಂದ ಮತ್ತೊಬ್ಬ ಶುಕನನ್ನು ನಿರ್ಮಾಣಮಾಡಿ ಕಾಡಿಗೆ ಹೊರಟುಹೋದನು. ಮೇಲೆ ಹೇಳಿದಂತೆ ಆ ಛಾಯಾಶುಕನೇ ಗೃಹಸ್ಥನಾಗಿ ಮಕ್ಕಳನ್ನು ಪಡೆದನು. ಇಲ್ಲಿ ಹೇಳಿರುವುದು ಛಾಯಾಶುಕನ ವಿಷಯ. ಭಾಗವತವನ್ನು ಪರೀಕ್ಷಿತನಿಗೆ ಹೇಳುತ್ತಿರುವ ಶುಕರ ವಿಷಯವಲ್ಲ. ಛಾಯಾಶುಕನೂ ಸಪ್ತಾಹ ಶ್ರವಣಕ್ಕಾಗಿ ಬಂದಿದ್ದನೆಂದು ಭಾಗವತಮಾಹಾತ್ಮೆಯ ೩ನೆಯ ಅಧ್ಯಾಯದಲ್ಲಿದೆ.

ನೀಲನೆಂಬ ಮಗನು ಹುಟ್ಟಿದನು. ನೀಲನ ಮಗ ಶಾಂತಿ. ಶಾಂತಿಯ ಮಗ ಸುಶಾಂತಿ. ಸುಶಾಂತಿಯ ಮಗ ಪುರುಜ. ಪುರುಜನ ಮಗ ಅರ್ಕ. ಅರ್ಕನ ಮಗ ಭರ್ಮ್ಯಾಶ್ವ. ಭರ್ಮ್ಯಾಶ್ವನಿಗೆ ಮುದ್ಗಲ, ಯವೀನರ, ಬೃಹದಿಷು, ಕಾಂಪಿಲ್ಯ ಮತ್ತು ಸಂಜಯರೆಂಬ ಐವರು ಮಕ್ಕಳಿದ್ದರು. ಭರ್ಮ್ಯಾಶ್ವನು ತನ್ನ ಮಕ್ಕಳನ್ನು ಪ್ರಶಂಸೆಮಾಡುತ್ತಾ ಹೇಳಿದನು :

"ಈ ನನ್ನ ಐವರು ಮಕ್ಕಳು ಐದು ದೇಶಗಳನ್ನು ಪಾಲನೆಮಾಡಲು ಸಮರ್ಥರಾಗಿರುತ್ತಾರೆ. (ಪಞ್ಚ ಅಲಂ)" ಹೀಗೆ ಹೇಳಿದ ಕಾರಣದಿಂದ ಅವರೆಲ್ಲರೂ ಪಾಂಚಾಲರೆಂಬ ಹೆಸರಿನಿಂದಲೇ ಪ್ರಸಿದ್ಧರಾದರು. ಭರ್ಮ್ಯಾಶ್ವನ ಹಿರಿಯ ಮಗನಾದ ಮುದ್ಗಲನಿಂದ ಮೌದ್ಗಲ್ಯ–ಎಂಬ ಹೆಸರಿನ ಬ್ರಾಹ್ಮಣಗೋತ್ರವು ಪ್ರವೃತ್ತವಾಯಿತು. ಮುದ್ಗಲನಿಗೆ ಅವಳೀ ಮಕ್ಕಳು ಹುಟ್ಟಿದರು. ಅವರಿಬ್ಬರಲ್ಲಿ ಮಗನ ಹೆಸರು ದಿವೋದಾಸ. ಮಗಳ ಹೆಸರು ಅಹಲ್ಯಾ. ಮಹರ್ಷಿಯಾದ ಗೌತಮನೊಡನೆ ಅಹಲ್ಯೆಯ ವಿವಾಹವಾಯಿತು. ಗೌತಮನ ಮಗ ಶತಾನಂದ. ಶತಾನಂದನ ಮಗ ಸತ್ಯಧೃತಿ. ಇವನು ಧನುರ್ವಿದ್ಯೆಯಲ್ಲಿ ಪಾರಂಗತನಾಗಿದ್ದನು. ಸತ್ಯಧೃತಿಯ ಮಗ ಶರದ್ವಂತ. ಹಿಂದೊಮ್ಮೆ ಒಂದು ದಿನ ಶರದ್ವಂತನು ಆಕಸ್ಮಿಕವಾಗಿ ಅಪ್ಸರೆಯಾದ ಊರ್ವಶಿಯನ್ನು ನೋಡಿದೊಡನೆಯೇ ವೀರ್ಯಸ್ಖಲನವಾಗಿ ಆ ರೇತಸ್ಸು ನೊಜೆಹುಲ್ಲಿನ ಮಧ್ಯದಲ್ಲಿ ಬಿದ್ದಿತು. ಆ ನೊಜೆಹುಲ್ಲಿನಿಂದಲೇ ಶುಭಲಕ್ಷಣಸಂಪನ್ನನಾದ ಒಬ್ಬ ಪುತ್ರನೂ ಮತ್ತು ಒಬ್ಬ ಪುತ್ರಿಯೂ ಶರದ್ವಂತನಿಗೆ ಹುಟ್ಟಿದರು. ಅರಣ್ಯಕ್ಕೆ ಬೇಟೆಗಾಗಿ ಹೋಗಿದ್ದ ಶಂತನುವು ಆ ಇಬ್ಬರು ಮಕ್ಕಳನ್ನೂ ನೋಡಿದನು. ದಯಾಪರನಾದ ಶಂತನುವು ಆ ಇಬ್ಬರು ಮಕ್ಕಳನ್ನೂ ಅರಮನೆಗೆ ಕರೆತಂದು ಅವರ ಭರಣ-ಪೋಷಣೆಗಳನ್ನು ಮಾಡಿದನು. ಪುತ್ರನ ಹೆಸರು ಕೃಪಾಚಾರ್ಯನೆಂದೂ, ಪುತ್ರಿಯ ಹೆಸರು ಕೃಪೀ ಎಂದೂ ಪ್ರಸಿದ್ಧವಾಯಿತು. ಶರದ್ವಂತನ ಮಗಳಾದ ಈ ಕೃಪಿಯೇ ಮುಂದೆ ದ್ರೋಣಾಚಾರ್ಯರ ಪತ್ನಿಯಾದಳು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೨೧ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೨೨ನೆಯ ಅಧ್ಯಾಯ

ಪಾಂಚಾಲ-ಕೌರವ-ಮಗಧದೇಶೀಯ ರಾಜರ ವಂಶವರ್ಣನೆ

ಶ್ರೀಶುಕರು ಹೇಳುತ್ತಾರೆ :

ಮಿತ್ರೇಯುಶ್ಚ ದಿವೋದಾಸಾಚ್ಚ್ಯವನಸ್ತತ್ಸುತೋ ನೃಪ ।
ಸುದಾಸಃ ಸಹದೇವೋಽಥ ಸೋಮಕೋ ಜನ್ತುಜನ್ಮಕೃತ್ ॥೧॥

ಪರೀಕ್ಷಿತ! ಮುದ್ಗಲನ ಮಗನಾದ ದಿವೋದಾಸನ ವಂಶಾವಳಿಯನ್ನು ನಾನು ಇನ್ನು ಮುಂದೆ ಹೇಳುತ್ತೇನೆ. ದಿವೋದಾಸನ ಮಗ ಮಿತ್ರೇಯು. ಮಿತ್ರೇಯುವಿಗೆ ಚ್ಯವನ, ಸುದಾಸ, ಸಹದೇವ ಮತ್ತು ಸೋಮಕರೆಂಬ ನಾಲ್ವರು ಮಕ್ಕಳಿದ್ದರು.

ಕನಿಷ್ಠನಾದ ಸೋಮಕನಿಗೆ ನೂರು ಮಂದಿ ಮಕ್ಕಳಿದ್ದರು. ಆ ನೂರು ಮಕ್ಕಳಲ್ಲಿ ಜಂತು ಎಂಬುವನು ಹಿರಿಯ ಮಗನು. ಪೃಷತನೆಂಬುವನು ಕಿರಿಯ ಮಗ. ಪೃಷತನ ಮಗ ದ್ರುಪದ. ದ್ರುಪದನಿಗೆ ದ್ರೌಪದಿ–ಎಂಬ ಮಗಳೂ ಧೃಷ್ಟದ್ಯುಮ್ನನೆಂಬ ಮಗನೂ ಇದ್ದರು. ಧೃಷ್ಟದ್ಯುಮ್ನನ ಮಗ ಧೃಷ್ಟಕೇತು. ಭರ್ಮ್ಯಾಶ್ವನ ವಂಶದಲ್ಲಿ ಹುಟ್ಟಿದ ಇವರೆಲ್ಲರೂ ಪಾಂಚಾಲರೆಂದೇ ಕರೆಯಲ್ಪಡುತ್ತಾರೆ.

ಅಜಮೀಢನಿಗೆ ಋಕ್ಷನೆಂಬ ಮತ್ತೊಬ್ಬ ಮಗನಿದ್ದನು. ಋಕ್ಷನ ಮಗ ಸಂವರಣ. ಸೂರ್ಯನ ಮಗಳಾದ ತಪತೀ–ಎಂಬುವಳನ್ನು ಸಂವರಣನು ವರಿಸಿದನು. ಸಂವರಣನಿಗೆ ತಪತಿಯ ಗರ್ಭದಲ್ಲಿ ಕುರುಕ್ಷೇತ್ರಕ್ಕೆ ಅಧಿಪತಿ ಯಾದ ಕುರು–ಎಂಬುವನು ಹುಟ್ಟಿದನು. ಕುರುವಿಗೆ ಪರೀಕ್ಷಿತ, ಸುಧನ್ವಾ, ಜಹ್ನು ಮತ್ತು ನಿಷಧಾಶ್ವರೆಂಬ ನಾಲ್ವರು ಮಕ್ಕಳು ಹುಟ್ಟಿದರು. ಸುಧನ್ವನ ಮಗ ಸುಹೋತ್ರ. ಸುಹೋತ್ರನ ಮಗ ಚ್ಯವನ. ಚ್ಯವನನ ಮಗ ಕೃತೀ. ಕೃತಿಯ ಮಗ ಉಪರಿಚರವಸು. ಉಪರಿಚರವಸುವಿಗೆ ಬೃಹದ್ರಥನೇ ಮೊದ ಲಾದ ಹಲವಾರು ಮಕ್ಕಳು ಹುಟ್ಟಿದರು. ಇವರಲ್ಲಿ ಬೃಹದ್ರಥ, ಕುಶಾಂಬ, ಮತ್ಸ್ಯ, ಪ್ರತ್ಯಗ್ರ, ಚೇದಿಪ–ಇವರೇ ಮೊದಲಾದವರು ಚೇದಿದೇಶಗಳಿಗೆ ರಾಜರಾದರು. ಬೃಹದ್ರಥನ ಮಗ ಕುಶಾಗ್ರ. ಕುಶಾಗ್ರನ ಮಗ ಋಷಭ. ಋಷಭನ ಮಗ ಸತ್ಯಹಿತ. ಸತ್ಯಹಿತನ ಮಗ ಪುಷ್ಪವಂತ. ಪುಷ್ಪವಂತನ

ಮಗ ಜಹು. ಬೃಹದ್ರಥನ ಮತ್ತೊಬ್ಬ ಪತ್ನಿಯ ಗರ್ಭದಲ್ಲಿ ಒಂದೇ ಶರೀರದ ಎರಡು ಹೋಳುಗಳು ಹುಟ್ಟಿದುವು. ಆ ಎರಡು ಹೋಳುಗಳನ್ನೂ ತಾಯಿಯು ಹೊರಗೆಸೆದಳು. ಜರಾ ಎಂಬ ರಾಕ್ಷಸಿಯೊಬ್ಬಳು ಆ ಎರಡು ಹೋಳುಗಳನ್ನೂ ಹಿಡಿದುಕೊಂಡು–'ಜೀವ! ಜೀವ!' 'ಬದುಕು! ಬದುಕು!'–ಎಂದು ಹೇಳುತ್ತಾ ಕುಣಿಯುತ್ತಾ ಆ ಎರಡು ಹೋಳುಗಳನ್ನೂ ಜೋಡಿಸಿದಳು. ಎರಡು ಹೋಳುಗಳೂ ಸೇರಿಕೊಂಡು ಅದು ಜೀವಂತ ಶಿಶುವಾಯಿತು. ಜರೆಯು ಎರಡು ಹೋಳುಗಳನ್ನೂ 'ಸಂಧಾ' ಜೋಡಿ ಸಿದ್ದರಿಂದ ಆ ಶಿಶುವಿಗೆ ಜರಾಸಂಧನೆಂದೇ* ಹೆಸರಾಯಿತು.

ಜರಾಸಂಧನ ಮಗ ಸಹದೇವ. ಸಹದೇವನ ಮಗ ಸೋಮಾಪಿ. ಸೋಮಾಪಿಯ ಮಗ ಶ್ರುತಶ್ರವಸ.

ಕುರುವಿನ ಜ್ಯೇಷ್ಠಪುತ್ರನಾದ ಪರೀಕ್ಷಿತನಿಗೆ ಸಂತಾನವಿರಲಿಲ್ಲ. ಕುರುವಿನ ಮೂರನೆಯ ಮಗನಾದ ಜಹ್ನುವಿನ ಮಗ ಸುರಥ. ಸುರಥನ ಮಗ ವಿದೂರಥ. ವಿದೂರಥನ ಮಗ ಸಾರ್ವಭೌಮ. ಸಾರ್ವಭೌಮನ ಮಗ ಜಯಸೇನ. ಜಯಸೇನನ ಸುಪುತ್ರ ರಾಧಿಕ. ರಾಧಿಕನ ಮಗ ಆಯುತ. ಆಯುತನ ಮಗ ಕ್ರೋಧನ. ಕ್ರೋಧನನ ಮಗ ದೇವಾತಿಥಿ. ದೇವಾತಿಥಿಯ ಮಗ ಋಷ್ಯ. ಋಷ್ಯನ ಮಗ ದಿಲೀಪ. ದಿಲೀಪನ ಮಗ ಪ್ರತೀಪ. ಪ್ರತೀಪನಿಗೆ ದೇವಾಪಿ, ಶಂತನು ಮತ್ತು ಬಾಹ್ಲೀಕರೆಂಬ ಮೂವರು ಮಕ್ಕಳಿದ್ದರು. ದೇವಾಪಿಯು ಪಿತೃರಾಜ್ಯವನ್ನು ತ್ಯಾಗಮಾಡಿ ಅರಣ್ಯಕ್ಕೆ ಹೊರಟು ಹೋದನು. ಹಿರಿಯಮಗನು ಹೊರಟುಹೋದುದರಿಂದ ಎರಡನೆಯವ ನಾದ ಶಂತನುವೇ ರಾಜನಾದನು. ಪೂರ್ವಜನ್ಮದಲ್ಲಿ ಶಂತನುವಿನ ಹೆಸರು ಮಹಾಭಿಷ–ಎಂದಿದ್ದಿತು. ಶಂತನುವಿನಲ್ಲಿ ಅನಿರ್ವಚನೀಯವಾದ ಪ್ರಭಾವವಿದ್ದಿತು.

ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಯೌವನಮೇತಿ ಸಃ ।
ಶಾನ್ತಿಮಾಪ್ನೋತಿ ಚೈವಾಗ್ರ್ಯಾಂ ಕರ್ಮಣಾ ತೇನ ಶನ್ತನುಃ ॥೧೩॥

ಈ ಜನ್ಮದಲ್ಲಿ ಶಂತನುವೆಂಬ ಅನ್ವರ್ಥನಾಮದಿಂದ ಕರೆಯಲ್ಪಡುತ್ತಿದ್ದ ಅವನು ಯಾವನನ್ನೇ ಕೈಗಳಿಂದ ಮುಟ್ಟಿದರೂ ಅವನು ಒಡನೆಯೇ ನವ

---

* ಜರಯಾ ರಾಕ್ಷಸ್ಯಾ ಸನ್ಧಾ ಶರೀರಯೋಜನಂ ಆಸ್ಯ = ಜರಾಸನ್ಧಃ

ಯುವಕನಾಗಿಬಿಡುತ್ತಿದ್ದನು. ಅವನಿಗೆ ಪರಮಶಾಂತಿಯೂ ಲಭಿಸುತ್ತಿದ್ದಿತು. ಈ ಕಾರಣದಿಂದ ಅವನು 'ಶಂತನು'–ಎಂಬ ಹೆಸರಿನಿಂದಲೇ ಪ್ರಸಿದ್ಧನಾದನು.

ಒಮ್ಮೆ ಶಂತನುವಿನ ರಾಜ್ಯದಲ್ಲಿ ಇಂದ್ರನು ಹನ್ನೆರಡು ವರ್ಷಗಳವರೆಗೆ ಮಳೆಗರೆಯಲೇ ಇಲ್ಲ. ಇದಕ್ಕೆ ಕಾರಣವೇನಿರಬಹುದೆಂದು ಶಂತನುವು ಬ್ರಾಹ್ಮಣರನ್ನು ಕರೆಯಿಸಿ ಪ್ರಶ್ನಿಸಿದನು. ವಿದ್ವಾಂಸರಾದ ಬ್ರಾಹ್ಮಣರು ಶಾಸ್ತ್ರವಿಧಿಯನ್ನು ಪರಿಶೀಲಿಸಿ ರಾಜನಿಗೆ ಹೇಳಿದರು :

"ಮಹಾರಾಜ! ನೀನು ನಿಮ್ಮ ಅಣ್ಣನಾದ ದೇವಾಪಿಯು ವಿವಾಹ ವಾಗುವುದಕ್ಕಿಂತಲೂ ಮೊದಲೇ ವಿವಾಹವಾಗಿರುವೆ. ಅಗ್ನಿಹೋತ್ರವನ್ನು ಮಾಡುತ್ತಿರುವೆ. ರಾಜ್ಯವನ್ನೂ ಪಡೆದುಕೊಂಡಿರುವೆ. ಆದುದರಿಂದ ನೀನು ಪರಿವೇತ್ತೃವಾಗಿರುವೆ. ರಾಜನಾದ ನಿನಗೆ ಪರಿವೇತ್ತೃತ್ವದ* ದೋಷ ವಿರುವುದರಿಂದ ರಾಜ್ಯದಲ್ಲಿ ಮಳೆ-ಬೆಳೆಗಳಾಗಿಲ್ಲ. ನೀನು ರಾಜಧಾನಿಯ ಮತ್ತು ರಾಜ್ಯದ ಔನ್ನತ್ಯವನ್ನು ಬಯಸುವೆಯಾದರೆ ಶೀಘ್ರಾತಿಶೀಘ್ರವಾಗಿ ನಿಮ್ಮ ಅಣ್ಣನ ಬಳಿಗೆ ಹೋಗಿ ಅವನಿಗೆ ರಾಜ್ಯವನ್ನು ಒಪ್ಪಿಸಿಬಿಡು."

ಹೀಗೆ ವಿದ್ವಾಂಸರಾದ ಬ್ರಾಹ್ಮಣರು ಶಂತನುವಿಗೆ ಹೇಳುತ್ತಲೇ ಶಂತನುವು ಅರಣ್ಯಕ್ಕೆ ಹೋಗಿ ತನ್ನ ಅಣ್ಣನಾದ ದೇವಾಪಿಯನ್ನು ರಾಜ್ಯವನ್ನು ಪಡೆದುಕೊಳ್ಳುವಂತೆ ಪ್ರಾರ್ಥಿಸಿದನು. ಇಷ್ಟರೊಳಗಾಗಿ ಶಂತನುವಿನ ಮಂತ್ರಿಯಾದ ಅಶ್ಮರಾತನೆಂಬುವನು ದೇವಾಪಿಯ ಬಳಿಗೆ ಕೆಲವು ಬ್ರಾಹ್ಮಣ ರನ್ನು ಕಳುಹಿಸಿ ಪಾಷಂಡಮತವನ್ನು ಬೋಧಿಸುವ ನಾಸ್ತಿಕೋಕ್ತಿಗಳಿಂದ ದೇವಾಪಿಯ ಮನಸ್ಸನ್ನು ಕೆಡಿಸಿ ಅವನು ವೇದಮಾರ್ಗದಿಂದ ಭ್ರಷ್ಟನಾಗುವಂತೆ ಮಾಡಿಬಿಟ್ಟಿದ್ದನು. ಈ ಕಾರಣದಿಂದ ದೇವಾಪಿಯು ತಮ್ಮನ ಪ್ರಾರ್ಥನೆಯನ್ನು ಅಂಗೀಕರಿಸದೆ ಶಾಸ್ತ್ರಕ್ಕೆ ವಿರುದ್ಧವಾದ ರೀತಿಯಲ್ಲಿ ವೇದದೂಷಕವಾದ ನಾಸ್ತಿಕವಾದವನ್ನು ಬೋಧಿಸತೊಡಗಿದನು. ಅಣ್ಣನಿ

---

* ದಾರಾಗ್ನಿಹೋತ್ರ ಸಂಯೋಗಂ ಕುರುತೇ ಯೋऽಗ್ರಜೇ ಸ್ಥಿತೇ । ಪರಿವೇತ್ತಾ ಸ ವಿಜ್ಞೇಯಃ ಪರಿವಿತ್ತಿಸ್ತು ಪೂರ್ವಜಃ ॥ ಅಣ್ಣನಿಗಿಂತಲೂ ಮೊದಲು ಮದುವೆಯಾಗಿ ಅಗ್ನಿಹೋತ್ರವನ್ನು ಮಾಡುವ ತಮ್ಮನು ಪರಿವೇತ್ತೃವೆಂದೂ ಅಣ್ಣನು ಪರಿವಿತ್ತಿಯೆಂದೂ ಕರೆಯಲ್ಪಡುತ್ತಾರೆ.

ಗಿಂತಲೂ ಮೊದಲು ತಮ್ಮನು ಮದುವೆಯಾಗಬಾರದೆಂಬ, ಅಗ್ನಿಹೋತ್ರ ವನ್ನು ಮಾಡಕೂಡದೆಂಬ ವೇದನಿರ್ದಿಷ್ಟವಾದ ವಾದವನ್ನು ಅವನು ಒಪ್ಪಲಿಲ್ಲ. ವೇದದೂಷಣರೂಪವಾದ ಈ ಪಾಪದಿಂದಾಗಿ ದೇವಾಪಿಯು ರಾಜ್ಯವನ್ನು ಪುನಃ ಪಡೆದುಕೊಳ್ಳಲು ಅನರ್ಹನೂ ಆದನು. ಇದರಿಂದ ಶಂತನುವಿಗೆ ಪರಿವೇತ್ತೃವಿನ ದೋಷವು ಪರಿಹಾರವಾಗಿ ಇಂದ್ರನು ಮಳೆಗರೆ ಯಲು ಪ್ರಾರಂಭಿಸಿದನು. ದೇವಾಪಿಯು ಗೃಹಸ್ಥನಾಗಲು ಅಥವಾ ರಾಜ್ಯ ವನ್ನು ಸ್ವೀಕರಿಸಲು ಒಪ್ಪದಿದ್ದರೂ ಯೋಗಮಾರ್ಗದಿಂದ ವಿಚಲಿತನಾಗ ಲಿಲ್ಲ. ಅವನು ಈಗಲೂ ಯೋಗಸಾಧನೆ ಮಾಡುತ್ತಾ ಯೋಗಿಗಳಿಗೆ ನಿವಾಸಸ್ಥಾನವಾದ, ಸುಪ್ರಸಿದ್ಧವಾದ ಕಲಾಪಗ್ರಾಮದಲ್ಲಿ ವಾಸವಾಗಿದ್ದಾನೆ. ಸೋಮವಂಶವು ಕಲಿಯುಗದಲ್ಲಿ ನಷ್ಟವಾಗಿಹೋದನಂತರ ಸತ್ಯಯುಗದ ಪ್ರಾರಂಭದಲ್ಲಿ ದೇವಾಪಿಯು ಚಂದ್ರವಂಶದ ಉತ್ಪತ್ತಿಗೆ ಕಾರಣನಾಗುತ್ತಾನೆ. ಶಂತನುವಿನ ಕಿರಿಯ ತಮ್ಮನಾದ ಬಾಹ್ಲೀಕನಿಗೆ ಸೋಮದತ್ತನೆಂಬ ಮಗನಿದ್ದನು. ಸೋಮದತ್ತನಿಗೆ ಭೂರಿ, ಭೂರಿಶ್ರವಸ ಮತ್ತು ಶಲರೆಂಬ ಮೂವರು ಮಕ್ಕಳಿದ್ದರು. ಶಂತನುವಿಗೆ ಗಂಗಾದೇವಿಯ ಗರ್ಭದಲ್ಲಿ ನೈಷ್ಠಿಕಬ್ರಹ್ಮಚಾರಿಯಾದ ಭೀಷ್ಮನು ಹುಟ್ಟಿದನು. ಅವನು ಧರ್ಮವಿದರಲ್ಲಿ ಅಗ್ರಗಣ್ಯನೂ, ಮಹಾಜ್ಞಾನಿಯೂ, ವಿದ್ವಾಂಸನೂ, ಭಗವಂತನ ಪರಮ ಭಕ್ತನೂ, ಮಹಾಭಾಗವತನೂ ಆಗಿದ್ದನು. ಭೀಷ್ಮನು ಪ್ರಪಂಚದಲ್ಲಿರುವ ಸಮಸ್ತವೀರರಿಗೂ ಅಗ್ರಗಣ್ಯನಾಗಿದ್ದನು. ಅವನು ತನ್ನ ಗುರುವಾದ ಪರಶುರಾಮನನ್ನೇ ಯುದ್ಧದಲ್ಲಿ ಸಂತುಷ್ಟಿಗೊಳಿಸಿದ್ದನು. ಶಂತನುವಿಗೆ ದಾಶಕನ್ಯೆಯಾದ ಮತ್ಸ್ಯಗಂಧಿಯಲ್ಲಿ ಚಿತ್ರಾಂಗದ-ವಿಚಿತ್ರವೀರ್ಯರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಚಿತ್ರಾಂಗದನನ್ನು ಅದೇ ಹೆಸರಿನ ಗಂಧರ್ವನು ಯುದ್ಧದಲ್ಲಿ ಸಂಹರಿಸಿಬಿಟ್ಟನು. ಮಹರ್ಷಿಗಳಾದ ಮತ್ತು ನನ್ನ ಅಜ್ಜಂದಿರಾದ ಪರಾಶರರಿಗೆ ದಾಶಕನ್ಯೆಯಾದ ಈ ಸತ್ಯವತಿಯಿಂದಲೇ ನನ್ನ ತಂದೆಯವರಾದ ಕೃಷ್ಣದ್ವೈಪಾಯನ ವ್ಯಾಸರು ಹುಟ್ಟಿದರು. ಇವರು ಭಗವಂತನ ಅಂಶಸಂಭೂತರು. ಇವರು ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಅದನ್ನು ರಚಿಸಿದರು. ನಾನು ಅವರಿಂದಲೇ ಈ ಶ್ರೀಮದ್ಭಾಗವತ ಪುರಾಣವನ್ನು ಅಧ್ಯಯನಮಾಡಿದೆನು. ಈ ಪುರಾಣವು ಅತ್ಯಂತ ಗೋಪ

ನೀಯವೂ ರಹಸ್ಯಗಳಿಂದ ಕೂಡಿದುದೂ ಆಗಿದೆ. ಈ ಮಹಾಪುರಾಣವನ್ನು ನಮ್ಮ ತಂದೆಯವರು ತಮ್ಮ ಪ್ರಿಯಶಿಷ್ಯರಾದ ಪೈಲರೇ ಮೊದಲಾದವರಿಗೆ ಉಪದೇಶಿಸಲಿಲ್ಲ. ನನ್ನೊಬ್ಬನನ್ನೇ ಅವರು ಇದನ್ನು ಕಲಿಯಲು ಯೋಗ್ಯನಾದ ಅಧಿಕಾರಿಯೆಂದು ಭಾವಿಸಿದರು. ಇದಕ್ಕೆ ಕಾರಣ ನಾನು ಅವರಿಗೆ ಪುತ್ರನಾಗಿ ಹುಟ್ಟಿದ್ದು ; ಪುತ್ರಪ್ರೇಮ. ಎರಡನೆಯದಾಗಿ ಶಾಂತಿಯೇ ಮೊದಲಾದ ಸದ್ಗುಣಗಳು ನನ್ನಲ್ಲಿ ವಿಶೇಷವಾಗಿದ್ದುದು. ಈ ಕಾರಣಗಳಿಂದ ಈ ದಿವ್ಯವಾದ ಮಹಾಪುರಾಣವನ್ನು ಕೃಷ್ಣದ್ವೈಪಾಯನವ್ಯಾಸರು ನನಗೆ ಉಪದೇಶಿಸಿದರು. ಶಂತನುವಿನ ಮತ್ತೊಬ್ಬ ಮಗನಾದ ವಿಚಿತ್ರವೀರ್ಯನಿಗೆ ಕಾಶೀರಾಜನ ಮಕ್ಕಳಾದ ಅಂಬಿಕಾ-ಅಂಬಾಲಿಕೆಯರೊಡನೆ ವಿವಾಹವಾಯಿತು. ಈ ಇಬ್ಬರನ್ನೂ ಮಹಾಪರಾಕ್ರಮಿಯಾದ ಭೀಷ್ಮನು ಸ್ವಯಂವರ ಮಂಟಪದಿಂದ ಬಲಾತ್ಕಾರಪೂರ್ವಕವಾಗಿ ಕರೆತಂದಿದ್ದನು. ವಿಚಿತ್ರ ವೀರ್ಯನು ತನ್ನ ಪತ್ನಿಯರಲ್ಲಿ ಅತ್ಯಂತ ಆಸಕ್ತನಾಗಿದ್ದುದರಿಂದ ರಾಜಯಕ್ಷ್ಮರೋಗಕ್ಕೆ ತುತ್ತಾಗಿ ಅಸುನೀಗಿದನು. ತಾಯಿಯಾದ ಸತ್ಯವತಿಯ ನಿರ್ದೇಶನದಂತೆ ವ್ಯಾಸರು ಸಂತಾನಹೀನರಾಗಿದ್ದ ತಮ್ಮ ತಮ್ಮನ ಭಾರ್ಯೆಯರಿಗೆ ಧೃತರಾಷ್ಟ್ರ ಮತ್ತು ಪಾಂಡು ಎಂಬ ಇಬ್ಬರು ಮಕ್ಕಳನ್ನು ಅನುಗ್ರಹಿಸಿದರು. ಅವರ ದಾಸಿಯ ಗರ್ಭದಿಂದ ಮೂರನೆಯವನಾದ ವಿದುರನೂ ವ್ಯಾಸರ ಅನುಗ್ರಹದಿಂದ ಹುಟ್ಟಿದನು.

ಧೃತರಾಷ್ಟ್ರನಿಗೆ ಗಾಂಧಾರಿ—ಎಂಬ ಪತ್ನಿಯಿಂದ ನೂರು ಮಕ್ಕಳಾದರು. ದುರ್ಯೋಧನನೆಂಬುವನೇ ಇವರಲ್ಲಿ ಹಿರಿಯನು. ದುಃಶಲಾ ಎಂಬ ಪುತ್ರಿಯು ಕಿರಿಯಳು.

ಕುಂತಿ ಎಂಬುವಳು ಪಾಂಡುವಿನ ಪತ್ನಿಯಾಗಿದ್ದಳು. ಶಾಪದ ಕಾರಣ ದಿಂದಾಗಿ ಪಾಂಡುವು ಸ್ತ್ರೀಯರ ಸಮಾಗಮವನ್ನು ಮಾಡುವಂತಿರಲಿಲ್ಲ. ಆದುದರಿಂದ ಕುಂತಿಯ ಗರ್ಭದಲ್ಲಿ ಧರ್ಮ, ವಾಯು ಮತ್ತು ಇಂದ್ರರ ಅನುಗ್ರಹದಿಂದ ಕ್ರಮವಾಗಿ ಯುಧಿಷ್ಠಿರ, ಭೀಮ ಮತ್ತು ಅರ್ಜುನರೆಂಬ ಮೂವರು ಮಕ್ಕಳು ಹುಟ್ಟಿದರು. ಈ ಮೂವರೂ ಮಹಾರಥಿಗಳಾಗಿದ್ದರು. ಪಾಂಡುವಿಗೆ ಮಾದ್ರಿಯೆಂಬ ಮತ್ತೊಬ್ಬ ಮಡದಿಯೂ ಇದ್ದಳು. ಅವಳಿಗೆ

ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ-ಸಹದೇವರೆಂಬ ಅವಳೀ ಮಕ್ಕಳು ಹುಟ್ಟಿದರು. ಈ ಐವರು ಪಾಂಡವರಿಗೂ, ದ್ರೌಪದಿಯು ಏಕ ಮಾತ್ರ ಪತ್ನಿಯಾದಳು. ದ್ರೌಪದಿಯಲ್ಲಿ ಯುಧಿಷ್ಠಿರನಿಗೆ ಪ್ರತಿವಿಂಧ್ಯನೆಂಬು ವನೂ, ಭೀಮಸೇನನಿಗೆ ಶ್ರುತಸೋಮನೆಂಬುವನೂ, ಅರ್ಜುನನಿಗೆ ಶ್ರುತಕೀರ್ತಿ ಯೆಂಬುವನೂ, ನಕುಲನಿಗೆ ಶತಾನೀಕನೆಂಬುವನೂ, ಸಹದೇವನಿಗೆ ಶ್ರುತಕರ್ಮನೆಂಬುವನೂ ಮಕ್ಕಳಾಗಿ ಹುಟ್ಟಿದರು. ಯುಧಿಷ್ಠಿರನಿಗೆ ಪೌರವಿ ಎಂಬ ಮತ್ತೊಬ್ಬ ಪತ್ನಿಯಲ್ಲಿ ದೇವಕನೆಂಬ ಮಗನೂ, ಭೀಮಸೇನನಿಗೆ ಹಿಡಿಂಬಾ ಎಂಬ ಪತ್ನಿಯಲ್ಲಿ ಘಟೋತ್ಕಚನೆಂಬ ಮಗನೂ, ಕಾಲೀ ಎಂಬ ಪತ್ನಿಯಲ್ಲಿ ಸರ್ವಗತನೆಂಬ ಮಗನೂ, ಸಹದೇವನಿಗೆ ಪರ್ವತಕುಮಾರಿ ಯಾದ ವಿಜಯಾ ಎಂಬ ಭಾರ್ಯೆಯಲ್ಲಿ ಸುಹೋತ್ರನೆಂಬ ಮಗನೂ, ನಕುಲನಿಗೆ ಕರೇಣುಮತಿ–ಎಂಬ ಭಾರ್ಯೆಯಲ್ಲಿ ನರಮಿತ್ರನೆಂಬ ಮಗನೂ, ಅರ್ಜುನನಿಗೆ ನಾಗಕನ್ಯೆಯಾದ ಉಲೂಪಿಯಲ್ಲಿ ಇರಾವಂತನೆಂಬ ಮಗನೂ, ಮಣಿಪುರದ ನರೇಶನ ಮಗಳಾದ ಚಿತ್ರಾಂಗದಾ ಎಂಬ ಭಾರ್ಯೆಯಲ್ಲಿ ಬಭ್ರುವಾಹನನೆಂಬ ಮಗನೂ ಹುಟ್ಟಿದರು. ಆದರೆ ಹಿಂದೆ ಮಾಡಿಕೊಂಡಿದ್ದ ನಿರ್ಣಯದಂತೆ ಬಭ್ರುವಾಹನನು ಪುತ್ರಿಕಾಸುತ ನಾಗಿ* ಅವನ ಅಜ್ಜನಿಗೇ ಮಗನಾದನು.

ಪರೀಕ್ಷಿತನೇ! ಅರ್ಜುನನಿಗೆ ಸುಭದ್ರಾ ಎಂಬ ಪತ್ನಿಯಲ್ಲಿ ನಿನ್ನ ತಂದೆಯಾದ ಅಭಿಮನ್ಯುವು ಹುಟ್ಟಿದನು. ಈ ಹಿಂದೆ ನಡೆದ ಮಹಾಭಾರತ ಯುದ್ಧದಲ್ಲಿ ಮಹಾವೀರನಾದ ಅಭಿಮನ್ಯುವು ಸಮಸ್ತಅತಿರಥರನ್ನೂ ಜಯಿಸಿದನು. ಅಭಿಮನ್ಯುವಿಗೆ ಉತ್ತರಾ ಎಂಬ ಭಾರ್ಯೆಯಲ್ಲಿ ನೀನು ಹುಟ್ಟಿದೆ.

ಪರೀಕ್ಷಿತನೇ! ಆ ಸಮಯದಲ್ಲಿ ಕುರುವಂಶವು ಸಂತಾನವಿಲ್ಲದೆ ನಾಶ ಹೊಂದುವುದರಲ್ಲಿದ್ದಿತು. ಅಶ್ವತ್ಥಾಮನು ಬ್ರಹ್ಮಾಸ್ತ್ರದಿಂದ ಗರ್ಭಸ್ಥನಾಗಿದ್ದ

---

* ಪುತ್ರಿಕಾಸುತ-ಗಂಡುಮಕ್ಕಳಿಲ್ಲದ ತಂದೆಯು–'ಈಕೆಯಲ್ಲಿ ಹುಟ್ಟಿದ ಮಗನೇ ನನ್ನ ಮಗನು'–ಎಂದು ಸಂಕಲ್ಪಿಸಿ ಯಾವ ಹೆಣ್ಣನ್ನು ದಾನಮಾಡುವನೋ ಆಕೆಯಲ್ಲಿ ಹುಟ್ಟಿದ ಮಗನು ಮಾತಾಮಹನಿಗೆ ಪುತ್ರನೆನಿಸುವನು. ಅವನಿಗೆ ಪುತ್ರಿಕಾ ಪುತ್ರನೆಂದು ಹೆಸರು.

ಅಭ್ರಾತೃಕಮಿಮಾಂ ಕನ್ಯಾಂ ತುಭ್ಯಂ ದಾಸ್ಯಾಮ್ಯಲಂಕೃತಾಮ್ ।
ಅಸ್ಯಾಂ ಯೋ ಜಾಯತೇ ಪುತ್ರಃ ಸ ಮೇ ಪುತ್ರೋ ಭವಿಷ್ಯತಿ ॥

ನಿನ್ನನ್ನು ಸುಟ್ಟೇಬಿಟ್ಟಿದ್ದನು. ಆದರೆ ದಯಾಮಯನಾದ ಶ್ರೀಕೃಷ್ಣನು ತನ್ನ ಪ್ರಭಾವದಿಂದ ನಿನ್ನನ್ನು ಮೃತ್ಯುವಿನ ದವಡೆಯಿಂದ ಪಾರುಮಾಡಿದನು. ಅವನ ಪರಮಾನುಗ್ರಹದಿಂದ ಮೃತನಾಗಿದ್ದ ನೀನು ಜೀವಿಸಿದೆ.

ಪರೀಕ್ಷಿತನೇ! ನಿನ್ನ ಮಕ್ಕಳಾದ ಜನಮೇಜಯ, ಶ್ರುತಸೇನ, ಭೀಮಸೇನ ಮತ್ತು ಉಗ್ರಸೇನರು ನಿನ್ನ ಮುಂದೆಯೇ ಕುಳಿತಿದ್ದಾರೆ. ನಿನಗೆ ತಿಳಿದಿರುವಂತೆಯೇ ಇವರೆಲ್ಲರೂ ಮಹಾಪರಾಕ್ರಮಿಗಳಾಗಿದ್ದಾರೆ. ತಕ್ಷಕನು ಕಚ್ಚಿದೊಡನೆಯೇ ನಿನ್ನ ಅವಸಾನವಾಗುತ್ತದೆ. ತಕ್ಷಕನಿಂದ ನೀನು ಮರಣ ಹೊಂದಿದೆಯೆಂಬುದನ್ನು ತಿಳಿದು ನಿನ್ನ ಹಿರಿಯಮಗನಾದ ಜನಮೇಜಯನು ಕೋಪದಿಂದ ಕಡುಕೆರಳುತ್ತಾನೆ. ಸರ್ಪಯಾಗಮಾಡಿ ಎಲ್ಲ ಸರ್ಪಗಳನ್ನೂ ಯಜ್ಞೇಶ್ವರನಿಗೆ ಆಹುತಿಯನ್ನಾಗಿ ಮಾಡುತ್ತಾನೆ. ಕಾವಷೇಯನ ಮಗನಾದ ತುರನೆಂಬ ಬ್ರಾಹ್ಮಣನನ್ನು ಪುರೋಹಿತನನ್ನಾಗಿ ಮಾಡಿಕೊಂಡು ಜನಮೇಜಯನು ಅಶ್ವಮೇಧಯಾಗಮಾಡುತ್ತಾನೆ. ಎಲ್ಲ ದಿಕ್ಕುಗಳಲ್ಲಿಯೂ ಇರುವ ಅಖಂಡಭೂಮಂಡಲವನ್ನೂ ಗೆದ್ದು ಯಜ್ಞಗಳ ಮೂಲಕವಾಗಿ ಭಗವಂತನನ್ನು ಆರಾಧಿಸುತ್ತಾನೆ. ಜನಮೇಜಯನಿಗೆ ಶತಾನೀಕನೆಂಬುವನು ಮಗನಾಗಿ ಹುಟ್ಟುತ್ತಾನೆ. ಶತಾನೀಕನು ಯಾಜ್ಞವಲ್ಕ್ಯರಿಂದ ಮೂರು ವೇದಗಳನ್ನೂ ಕರ್ಮಕಾಂಡವನ್ನೂ ಕಲಿತುಕೊಳ್ಳುತ್ತಾನೆ. ಕೃಪಾಚಾರ್ಯರಿಂದ ಅಸ್ತ್ರವಿದ್ಯೆಯನ್ನು ತಿಳಿದುಕೊಳ್ಳುತ್ತಾನೆ. ಶೌನಕರಿಂದ ಆತ್ಮಜ್ಞಾನವನ್ನು ಪಡೆದುಕೊಂಡು ಪರಮಾತ್ಮನಲ್ಲಿ ಸೇರಿಕೊಳ್ಳುತ್ತಾನೆ. ಶತಾನೀಕನಿಗೆ ಸಹಸ್ರಾನೀಕನೆಂಬ ಮಗನು ಹುಟ್ಟುತ್ತಾನೆ. ಸಹಸ್ರಾನೀಕನಿಗೆ ಅಶ್ವಮೇಧಜನೆಂಬ ಮಗನು ಹುಟ್ಟುತ್ತಾನೆ. ಅಶ್ವಮೇಧಜನಿಗೆ ಅಸೀಮಕೃಷ್ಣನೆಂಬ ಮಗನು ಹುಟ್ಟುತ್ತಾನೆ. ನೇಮಿಚಕ್ರನು ಅಸೀಮಕೃಷ್ಣನಿಗೆ ಮಗನಾಗಿ ಹುಟ್ಟುತ್ತಾನೆ. ಹಸ್ತಿನಾಪುರವು ಗಂಗಾಪ್ರವಾಹದಲ್ಲಿ ಕೊಚ್ಚಿಹೋದನಂತರ ನೇಮಿಚಕ್ರನು ಕೌಶಾಂಬಿಪುರದಲ್ಲಿ ಸುಖವಾಗಿ ವಾಸಮಾಡಿಕೊಂಡಿರುತ್ತಾನೆ. ಚಿತ್ರರಥನೆಂಬುವನು ನೇಮಿಚಕ್ರನ ಮಗನಾಗಿ ಹುಟ್ಟುತ್ತಾನೆ. ಚಿತ್ರರಥನಿಗೆ ಕವಿರಥನೆಂಬುವನು ಮಗನಾಗಿ ಹುಟ್ಟುತ್ತಾನೆ. ಕವಿರಥನಿಗೆ ವೃಷ್ಟಿಮಂತನೆಂಬುವನು ಮಗನಾಗಿ ಹುಟ್ಟುತ್ತಾನೆ. ವೃಷ್ಟಿಮಂತನಿಗೆ ರಾಜಾಸುಷೇಣನು ಮಗನಾಗಿ ಹುಟ್ಟುತ್ತಾನೆ. ಸುಷೇಣನಿಗೆ ಸುನೀಥನೆಂಬು

ವನು ಮಗನಾಗಿ ಹುಟ್ಟುತ್ತಾನೆ. ಸುನೀಥನಿಗೆ ನೃಚಕ್ಷು ಎಂಬುವನು ಮಗನಾಗಿ ಹುಟ್ಟುತ್ತಾನೆ. ನೃಚಕ್ಷುವಿಗೆ ಸುಖೀನಲನೆಂಬುವನು ಮಗನಾಗಿ ಹುಟ್ಟುತ್ತಾನೆ. ಸುಖೀನಲನಿಗೆ ಪರಿಪ್ಲವನೆಂಬುವನು ಮಗನಾಗಿ ಹುಟ್ಟುತ್ತಾನೆ. ಪರಿಪ್ಲವನಿಗೆ ಸುನಯ–ಎಂಬುವನು ಮಗನಾಗಿ ಹುಟ್ಟುತ್ತಾನೆ. ಸುನಯನಿಗೆ ಮೇಧಾವೀ ಎಂಬುವನು ಮಗನಾಗಿ ಹುಟ್ಟುತ್ತಾನೆ. ಮೇಧಾವಿಗೆ ನೃಪಂಜಯನೆಂಬುವನು ಮಗನಾಗಿ ಹುಟ್ಟುತ್ತಾನೆ. ನೃಪಂಜಯನಿಗೆ ದೂರ್ವ ಎಂಬುವನು ಮಗನಾಗಿ ಹುಟ್ಟುತ್ತಾನೆ. ದೂರ್ವನಿಗೆ ತಿಮಿ ಎಂಬುವನು ಮಗನಾಗಿ ಹುಟ್ಟುತ್ತಾನೆ. ತಿಮಿಗೆ ಬೃಹದ್ರಥನೆಂಬುವನು ಮಗನಾಗಿ ಹುಟ್ಟುತ್ತಾನೆ. ಬೃಹದ್ರಥನಿಗೆ ಸುದಾಸನೆಂಬುವನು ಮಗನಾಗಿ ಹುಟ್ಟುತ್ತಾನೆ. ಸುದಾಸನಿಗೆ ಶತಾನೀಕನೆಂಬುವನು ಮಗನಾಗಿ ಹುಟ್ಟುತ್ತಾನೆ. ಶತಾನೀಕನಿಗೆ ದುರ್ದಮನನೆಂಬುವನು ಮಗನಾಗಿ ಹುಟ್ಟುತ್ತಾನೆ. ದುರ್ದಮನನಿಗೆ ವಹೀನರನೆಂಬುವನು ಮಗನಾಗಿ ಹುಟ್ಟುತ್ತಾನೆ. ವಹೀನರನಿಗೆ ದಂಡಪಾಣಿ ಎಂಬುವನು ಮಗನಾಗಿ ಹುಟ್ಟುತ್ತಾನೆ. ದಂಡಪಾಣಿಗೆ ನಿಮಿ ಎಂಬುವನು ಮಗನಾಗಿ ಹುಟ್ಟುತ್ತಾನೆ. ನಿಮಿಗೆ ಕ್ಷೇಮಕನೆಂಬುವನು ಮಗನಾಗಿ ಹುಟ್ಟುತ್ತಾನೆ.

ಪರೀಕ್ಷಿತ! ಹೀಗೆ ನಾನು ನಿನಗೆ ಬ್ರಾಹ್ಮಣ-ಕ್ಷತ್ರಿಯರಿಬ್ಬರಿಗೂ ಉತ್ಪತ್ತಿಸ್ಥಾನವಾದ ಸೋಮವಂಶದ ವರ್ಣನೆಯನ್ನು ಹೇಳಿರುತ್ತೇನೆ. ಈ ಸೋಮವಂಶವು ದೇವತೆಗಳ ಮತ್ತು ಮಹರ್ಷಿಗಳ ಗೌರವಕ್ಕೆ ಪಾತ್ರವಾಗಿದೆ. ಈ ವಂಶವು ಕಲಿಯುಗದಲ್ಲಿ ರಾಜಾ ಕ್ಷೇಮಕನೊಡನೆ ಪರಿಸಮಾಪ್ತವಾಗುತ್ತದೆ.

ಈಗ ನಾನು ನಿನಗೆ ಮಗಧದೇಶದಲ್ಲಿ ಮುಂದೆ ರಾಜರಾಗಲಿರುವ ರಾಜರ ಶುಭನಾಮಧೇಯಗಳನ್ನು ಹೇಳುತ್ತೇನೆ.

ಜರಾಸಂಧನ ಮಗನಾದ ಸಹದೇವನಿಗೆ ಮಾರ್ಜಾರಿ ಎಂಬ ಮಗನು ಹುಟ್ಟುತ್ತಾನೆ. ಮಾರ್ಜಾರಿಗೆ ಶ್ರುತಶ್ರವಸನೆಂಬ ಮಗನು ಹುಟ್ಟುತ್ತಾನೆ. ಶ್ರುತಶ್ರವಸನಿಗೆ ಅಯುತಾಯುಷನೆಂಬ ಮಗನು ಹುಟ್ಟುತ್ತಾನೆ. ಅಯುತಾಯುಷನಿಗೆ ನಿರಮಿತ್ರನೆಂಬ ಮಗನು ಹುಟ್ಟುತ್ತಾನೆ. ನಿರಮಿತ್ರನಿಗೆ ಸುನಕ್ಷತ್ರನೆಂಬ ಮಗನು ಹುಟ್ಟುತ್ತಾನೆ. ಸುನಕ್ಷತ್ರನಿಗೆ ಬೃಹತ್ಸೇನನೆಂಬ

ಮಗನು ಹುಟ್ಟುತ್ತಾನೆ. ಬೃಹತ್ಸೇನನಿಗೆ ಕರ್ಮಜಿತನೆಂಬ ಮಗನು ಹುಟ್ಟುತ್ತಾನೆ. ಕರ್ಮಜಿತನಿಗೆ ಸೃತಂಜಯನೆಂಬ ಮಗನು ಹುಟ್ಟುತ್ತಾನೆ. ಸೃತಂಜಯನಿಗೆ ವಿಪ್ರನೆಂಬ ಮಗನು ಹುಟ್ಟುತ್ತಾನೆ. ವಿಪ್ರನಿಗೆ ಶುಚಿ ಎಂಬ ಮಗನು ಹುಟ್ಟುತ್ತಾನೆ. ಶುಚಿಗೆ ಕ್ಷೇಮನೆಂಬ ಮಗನು ಹುಟ್ಟುತ್ತಾನೆ. ಕ್ಷೇಮನಿಗೆ ಸುವ್ರತನೆಂಬ ಮಗನು ಹುಟ್ಟುತ್ತಾನೆ. ಸುವ್ರತನಿಗೆ ಧರ್ಮಸೂತ್ರನೆಂಬ ಮಗನು ಹುಟ್ಟುತ್ತಾನೆ. ಧರ್ಮಸೂತ್ರನಿಗೆ ಶಮ ಎಂಬ ಮಗನು ಹುಟ್ಟುತ್ತಾನೆ. ಶಮನಿಗೆ ದ್ಯುಮತ್ಸೇನನೆಂಬ ಪುತ್ರನು ಹುಟ್ಟುತ್ತಾನೆ. ದ್ಯುಮತ್ಸೇನನಿಗೆ ಸುಮತಿ–ಎಂಬ ಮಗನು ಹುಟ್ಟುತ್ತಾನೆ. ಸುಮತಿಗೆ ಸುಬಲನೆಂಬ ಪುತ್ರನು ಜನಿಸುತ್ತಾನೆ. ಸುಬಲನಿಗೆ ಸುನೀಥನೆಂಬ ಮಗನು ಹುಟ್ಟುತ್ತಾನೆ. ಸುನೀಥನಿಗೆ ಸತ್ಯಜಿತನೆಂಬ ಮಗನು ಹುಟ್ಟುತ್ತಾನೆ. ಸತ್ಯಜಿತನಿಗೆ ವಿಶ್ವಜಿತನೆಂಬ ಮಗನು ಹುಟ್ಟುತ್ತಾನೆ. ವಿಶ್ವಜಿತನಿಗೆ ರಿಪುಂಜಯನೆಂಬ ಮಗನು ಹುಟ್ಟುತ್ತಾನೆ. ಇವರೆಲ್ಲರೂ ಬೃಹದ್ರಥನ ವಂಶದ ರಾಜರಾಗಿರುತ್ತಾರೆ. ಇವರು ಒಂದು ಸಾವಿರ ವರ್ಷಗಳವರೆಗೆ ಈ ಭೂಮಂಡಲವನ್ನಾಳುತ್ತಾರೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೨೨ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೨೩ನೆಯ ಅಧ್ಯಾಯ

ಅನು-ದ್ರುಹ್ಯು-ತುರ್ವಸು ಮತ್ತು ಯದು-ಇವರ ವಂಶವರ್ಣನೆ

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಅನೋಃ ಸಭಾನರಶ್ಚಕ್ಷುಃ ಪರೋಕ್ಷಶ್ಚ ತ್ರಯಃ ಸುತಾಃ ।
ಸಭಾನರಾತ್ಕಾಲನರಃ ಸೃಞ್ಜಯಸ್ತತ್ಸುತಸ್ತತಃ ॥೧॥

ಪರೀಕ್ಷಿತನೇ! ಯಯಾತಿಯ ಮತ್ತೊಬ್ಬ ಮಗನಾದ ಅನು–ಎಂಬುವನಿಗೆ ಸಭಾನರ, ಚಕ್ಷು ಮತ್ತು ಪರೋಕ್ಷರೆಂಬ ಮೂವರು ಮಕ್ಕಳಿದ್ದರು. ಜ್ಯೇಷ್ಠನಾದ ಸಭಾನರನಿಗೆ ಕಾಲನರನೆಂಬ ಮಗನಿದ್ದನು. ಕಾಲನರನ ಮಗ ಸೃಂಜಯ. ಸೃಂಜಯನ ಮಗ ಜನಮೇಜಯ. ಜನಮೇಜಯನ ಮಗ ಮಹಾಶೀಲ. ಮಹಾಶೀಲನ ಮಗ ಮಹಾಮನಸ. ಮಹಾಮನಸನಿಗೆ

ಉಶೀನರ ಮತ್ತು ತಿತಿಕ್ಷು-ಎಂಬ ಇಬ್ಬರು ಮಕ್ಕಳಿದ್ದರು. ಹಿರಿಯನಾದ ಉಶೀನರನಿಗೆ ಶಿಬಿ, ವನ, ಶಮೀ ಮತ್ತು ದಕ್ಷರೆಂಬ ನಾಲ್ವರು ಮಕ್ಕಳಿದ್ದರು. ಮೊದಲಿಗನಾದ ಶಿಬಿಗೆ ವೃಷಾದರ್ಭ, ಸುವೀರ, ಮದ್ರ ಮತ್ತು ಕೈಕೇಯರೆಂಬ ನಾಲ್ವರು ಮಕ್ಕಳಿದ್ದರು. ಉಶೀನರನ ತಮ್ಮನಾದ ತಿತಿಕ್ಷುವಿಗೆ ರುಶದ್ರಥನೆಂಬ ಮಗನಿದ್ದನು. ರುಶದ್ರಥನ ಮಗ ಹೇಮ. ಹೇಮನ ಮಗ ಸುತಪಸ. ಸುತಪಸನ ಪುತ್ರ ಬಲಿ. ಬಲಿಯು ತನ್ನ ಭಾರ್ಯೆಯಲ್ಲಿ ದೀರ್ಘತಮಸನ ಸಮಾಗಮದಿಂದ ಅಂಗ, ವಂಗ, ಕಲಿಂಗ, ಸುಹ್ಮ, ಪುಂಡ್ರ ಮತ್ತು ಆಂಧ್ರರೆಂಬ ಆರು ಮಕ್ಕಳನ್ನು ಪಡೆದುಕೊಂಡನು. ಈ ಆರು ರಾಜಕುಮಾರರು ಪೂರ್ವದಿಕ್ಕಿನಲ್ಲಿ ತಮ್ಮ-ತಮ್ಮ ಹೆಸರಿನಿಂದಲೇ ಆರು ದೇಶಗಳನ್ನು ಸ್ಥಾಪಿಸಿದರು.

ಇವರಲ್ಲಿ ಹಿರಿಯನಾದ ಅಂಗನ ಮಗ ಖನಪಾನ. ಖನಪಾನನ ಮಗ ದಿವಿರಥ. ದಿವಿರಥನ ಮಗ ಧರ್ಮರಥ. ಧರ್ಮರಥನ ಮಗ ಚಿತ್ರರಥ. ಈ ಚಿತ್ರರಥನು ರೋಮಪಾದ-ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದನು. ಅಯೋಧ್ಯಾಧಿಪತಿಯಾಗಿದ್ದ ದಶರಥನು ಇವನ ಮಿತ್ರನಾಗಿದ್ದನು. ರೋಮ ಪಾದನಿಗೆ ಸಂತಾನವಿರಲಿಲ್ಲ. ಆದುದರಿಂದ ದಶರಥನು ತನ್ನ ಮಗಳಾದ ಶಾಂತಾ ಎಂಬುವಳನ್ನು ಆತನಿಗೆ ದತ್ತುವಾಗಿ ಕೊಟ್ಟನು. ಋಷ್ಯಶೃಂಗನೊಡನೆ ಶಾಂತೆಯ ವಿವಾಹವಾಯಿತು. ಋಷ್ಯಶೃಂಗನು ವಿಭಾಂಡಕಮಹರ್ಷಿಗೆ ಹರಿಣದ ಗರ್ಭದಲ್ಲಿ ಹುಟ್ಟಿದ ಮಗನಾಗಿದ್ದನು. ಒಮ್ಮೆ ರೋಮಪಾದ ರಾಜನ ರಾಜ್ಯದಲ್ಲಿ ಹಲವಾರು ವರ್ಷಗಳವರೆಗೆ ಮಳೆಯೇ ಬೀಳಲಿಲ್ಲ. ಆಗ ವೇಶ್ಯೆಯರು ತಮ್ಮ ನೃತ್ಯ-ಸಂಗೀತಗಳಿಂದಲೂ, ವಾದ್ಯಗಳಿಂದಲೂ, ಹಾವ-ಭಾವಗಳಿಂದಲೂ, ಆಲಿಂಗನಗಳಿಂದಲೂ, ವಿಧ-ವಿಧವಾದ ಉಪಹಾರ ಗಳಿಂದಲೂ ಋಷ್ಯಶೃಂಗನನ್ನು ವಿಮೋಹಗೊಳಿಸಿ ರಾಜಧಾನಿಗೆ ಕರೆತಂದರು. ಅವನು ರೋಮಪಾದನ ದೇಶಕ್ಕೆ ಕಾಲಿಟ್ಟೊಡನೆಯೇ ಧಾರಾಕಾರವಾಗಿ ಮಳೆಗರೆಯಲು ಪ್ರಾರಂಭಿಸಿತು. ಅನಂತರ ಋಷ್ಯಶೃಂಗನೇ ರೋಮ ಪಾದನಿಂದ ಇಂದ್ರದೇವತಾಕವಾದ ಯಜ್ಞವನ್ನು ಮಾಡಿಸಿದನು. ಇದರ ಫಲ ವಾಗಿ ಸಂತಾನಹೀನನಾಗಿದ್ದ ರೋಮಪಾದನಿಗೆ ಸಂತಾನವಾಯಿತು. ಸಂತಾನ ಹೀನನಾಗಿದ್ದ ದಶರಥನಿಗೂ ಋಷ್ಯಶೃಂಗನು ಪುತ್ರಕಾಮೇಷ್ಟಿಯಾಗವನ್ನು

ಮಾಡಿಸಿದನು. ಇದರ ಫಲವಾಗಿ ದಶರಥನಿಗೂ ನಾಲ್ವರು ಮಕ್ಕಳು ಹುಟ್ಟಿದರು. ಹಿಂದೆಯೇ ಹೇಳಿದಂತೆ ರೋಮಪಾದನಿಗೆ ಚತುರಂಗನೆಂಬ ಮಗನು ಹುಟ್ಟಿದನು. ಚತುರಂಗನ ಮಗ ಪೃಥುಲಾಕ್ಷ. ಪೃಥುಲಾಕ್ಷನಿಗೆ ಬೃಹದ್ರಥ, ಬೃಹತ್ಕರ್ಮಾ ಮತ್ತು ಬೃಹದ್ಭಾನುಗಳೆಂಬ ಮೂವರು ಮಕ್ಕಳು ಹುಟ್ಟಿದರು. ಬೃಹನ್ಮನಸನು ಬೃಹದ್ರಥನ ಮಗನು. ಬೃಹನ್ಮನಸನ ಮಗ ಜಯದ್ರಥ. ಸಂಭೂತಿ ಎಂಬುವಳು ಜಯದ್ರಥನ ಪತ್ನಿಯು. ಜಯದ್ರಥನಿಗೆ ಸಂಭೂತಿಯಲ್ಲಿ ವಿಜಯನೆಂಬ ಮಗನು ಹುಟ್ಟಿದನು. ವಿಜಯನ ಮಗ ಧೃತಿ. ಧೃತಿಯ ಮಗ ಧೃತವ್ರತ. ಧೃತವ್ರತನ ಮಗ ಸತ್ಕರ್ಮಾ. ಸತ್ಕರ್ಮನ ಮಗ ಅಧಿರಥ. ಅಧಿರಥನಿಗೆ ಸಂತಾನವಿರಲಿಲ್ಲ. ಒಂದಾನೊಂದು ದಿನ ಅಧಿರಥನು ಗಂಗಾನದಿಯ ತೀರದಲ್ಲಿ ಓಡಾಡುತ್ತಿದ್ದಾಗ ಗಂಗಾನದಿಯಲ್ಲಿ ತೇಲಿ ಬರುತ್ತಿದ್ದ ಪೆಟ್ಟಿಗೆಯಲ್ಲಿ ಸುಂದರವಾದ ಶಿಶುವಿದ್ದುದನ್ನು ಕಂಡನು. ಕುಂತೀದೇವಿಯು ಕನ್ಯೆಯಾಗಿದ್ದಾಗಲೇ ಸೂರ್ಯನ ವರಪ್ರಸಾದದಿಂದ ಮಗುವನ್ನು ಹೆತ್ತದ್ದರಿಂದ ಲೋಕಾಪವಾದಕ್ಕೆ ಹೆದರಿ ಆಕೆಯು ಆ ಶಿಶುವನ್ನು ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ತೇಲಿ ಬಿಟ್ಟಿದ್ದಳು. ಸಂತಾನರಹಿತನಾಗಿದ್ದ ಅಧಿರಥನು ಆ ಶಿಶುವನ್ನು ಕರೆತಂದು ತನ್ನ ಮಗನನ್ನಾಗಿ ಮಾಡಿಕೊಂಡನು. ಅವನೇ ಮುಂದೆ ಕರ್ಣನೆಂಬ ಹೆಸರಿನಿಂದ ವಿಖ್ಯಾತನಾದನು. ಜಗತೀಪತಿಯಾದ ಕರ್ಣನ ಮಗ ವೃಷಸೇನ.

ಪರೀಕ್ಷಿತನೇ! ಯಯಾತಿಯ ಮತ್ತೊಬ್ಬ ಮಗನಾದ ದ್ರುಹ್ಯುವಿಗೆ ಬಭ್ರು ಎಂಬ ಮಗನು ಹುಟ್ಟಿದನು. ಬಭ್ರುವಿನ ಮಗ ಸೇತು. ಸೇತುವಿನ ಮಗ ಆರಬ್ಧ. ಆರಬ್ಧನ ಮಗ ಗಾಂಧಾರ. ಗಾಂಧಾರನ ಮಗ ಧರ್ಮ. ಧರ್ಮನ ಮಗ ಧೃತ. ಧೃತನ ಮಗ ದುರ್ಮನಸ. ದುರ್ಮನಸನ ಮಗ ಪ್ರಚೇತಸ. ಪ್ರಚೇತಸನಿಗೆ ನೂರು ಮಕ್ಕಳಿದ್ದರು. ಇವರೆಲ್ಲರೂ ಉತ್ತರ ದೇಶಗಳಲ್ಲಿ ಮ್ಲೇಚ್ಛರಿಗೆ ರಾಜರಾಗಿದ್ದರು. (ಶ್ಲೋಕ 2-16)

ಪರೀಕ್ಷಿತ! ಯಯಾತಿಯ ಮತ್ತೊಬ್ಬ ಮಗನಾದ ತುರ್ವಸುವಿಗೆ ವಹ್ನಿ ಎಂಬ ಮಗನಿದ್ದನು. ವಹ್ನಿಯ ಮಗ ಭರ್ಗ. ಭರ್ಗನ ಮಗ ಭಾನುಮಂತ. ಭಾನುಮಂತನ ಪುತ್ರನು ತ್ರಿಭಾನು. ತ್ರಿಭಾನುವಿನ ಮಗ ಉದಾರಬುದ್ಧಿಯವನಾದ ಕರಂಧಮ. ಕರಂಧಮನ ಮಗ ಮರುತ. ಮರುತ

ನಿಗೆ ಸಂತಾನವಿರಲಿಲ್ಲ. ಆದುದರಿಂದ ಮರುತನು ಪುರುವಂಶೀಯನಾದ ದುಷ್ಯಂತನನ್ನೇ ತನ್ನ ಮಗನನ್ನಾಗಿ ಮಾಡಿಕೊಂಡಿದ್ದನು. ಆದರೆ ದುಷ್ಯಂತನು ರಾಜ್ಯದ ಕಾಮನೆಯಿಂದ ತನ್ನ ವಂಶಕ್ಕೇ ಪುನಃ ಹೋಗಿ ಸೇರಿಕೊಂಡನು.

ಪರೀಕ್ಷಿತ! ಈಗ ನಾನು ಯಯಾತಿಯ ಮತ್ತೊಬ್ಬ ಮಗನಾದ ಯದುವಿನ ವಂಶವನ್ನು ವರ್ಣಿಸುತ್ತೇನೆ. ಯದುಮಹಾರಾಜನ ವಂಶವು ಪರಮಪವಿತ್ರವಾದುದು ಮತ್ತು ಮನುಷ್ಯರ ಸಮಸ್ತಪಾಪಗಳನ್ನೂ ಹೋಗಲಾಡಿಸತಕ್ಕುದು. ಯಾವ ಮನುಷ್ಯನು ಈ ಯದುವಂಶದ ವರ್ಣನೆಯನ್ನು ಕೇಳುವನೋ ಅವನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ. ಪವಿತ್ರವಾದ ಈ ಯದುವಂಶದಲ್ಲಿ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನೇ ಮನುಷ್ಯನಾಗಿ ಅವತರಿಸಿ ಶ್ರೀಕೃಷ್ಣನೆಂಬ ಹೆಸರಿನಿಂದ ವಿಖ್ಯಾತನಾದನು. ಪರಮಾತ್ಮನು ಅವತರಿಸಿದ್ದರಿಂದಲೇ ಯದುವಂಶವು ಪರಮಪವಿತ್ರವಾಯಿತು. ಯದುವಿಗೆ ಸಹಸ್ರಜಿತ್, ಕ್ರೋಷ್ಟಾ, ನಲ ಮತ್ತು ರಿಪು–ಎಂಬ ನಾಲ್ವರು ಮಕ್ಕಳಿದ್ದರು. ಸಹಸ್ರಜಿತನ ಮಗ ಶತಜಿತ. ಶತಜಿತನಿಗೆ ಮಹಾಹಯ, ವೇಣುಹಯ ಮತ್ತು ಹೈಹಯರೆಂಬ ಮೂವರು ಮಕ್ಕಳಿದ್ದರು. ಹೈಹಯನ ಮಗ ಧರ್ಮ. ಧರ್ಮನ ಮಗ ನೇತ್ರ. ನೇತ್ರನ ಪುತ್ರನು ಕುಂತಿ. ಕುಂತಿಯ ಮಗ ಸೋಹಂಜಿ. ಸೋಹಂಜಿಯ ಮಗ ಮಹಿಷ್ಮಂತ. ಮಹಿಷ್ಮಂತನ ಪುತ್ರ ಭದ್ರಸೇನ. ಭದ್ರಸೇನನಿಗೆ ದುರ್ಮದ ಮತ್ತು ಧನಕರೆಂಬ ಇಬ್ಬರು ಮಕ್ಕಳಿದ್ದರು. ಕಿರಿಯನಾದ ಧನಕನಿಗೆ ಕೃತವೀರ್ಯ, ಕೃತಾಗ್ನಿ, ಕೃತವರ್ಮಾ, ಕೃತೌಜಸರೆಂಬ ನಾಲ್ವರು ಮಕ್ಕಳಿ ದ್ದರು. ಕೃತವೀರ್ಯನ ಮಗ ಅರ್ಜುನ. ಅರ್ಜುನನು ಜಂಬೂದ್ವೀಪವೇ ಮೊದಲಾದ ಏಳು ದ್ವೀಪಗಳಿಗೂ ಏಕಚ್ಛತ್ರಾಧಿಪತಿಯಾಗಿದ್ದನು. ಅವನು ಭಗವಂತನ ಅಂಶಾವತಾರವಾದ ದತ್ತಾತ್ರೇಯಪ್ರಭುವಿನಿಂದ ಯೋಗವಿದ್ಯೆಯನ್ನೂ ಅಣಿಮಾದಿ ಅಷ್ಟಸಿದ್ಧಿಗಳನ್ನೂ ಪಡೆದುಕೊಂಡಿದ್ದನು. ಪ್ರಪಂಚದಲ್ಲಿ ಯಾವನೇ ಸಾರ್ವಭೌಮನೂ ಕೂಡ ಯಜ್ಞ, ದಾನ, ತಪಸ್ಸು, ಯೋಗ, ಶಾಸ್ತ್ರಜ್ಞಾನ, ಪರಾಕ್ರಮ, ವಿಜಯಗಳಿಸುವುದು–ಇತ್ಯಾದಿಗಳಲ್ಲಿ ಕಾರ್ತ ವೀರ್ಯಾರ್ಜುನನಿಗೆ ಸಮಾನನಾಗಿರಲಿಲ್ಲವೆಂಬುದರಲ್ಲಿ ಸಂದೇಹವೇ ಇಲ್ಲ. ಅಪ್ರತಿಹತವಾದ ಪರಾಕ್ರಮದಿಂದ ಕೂಡಿದ್ದ ಕಾರ್ತವೀರ್ಯಾರ್ಜುನನು

ಎಂಭತ್ತೈದು ಸಾವಿರವರ್ಷಗಳ ಪರ್ಯಂತವಾಗಿ ಷಡಿಂದ್ರಿಯಗಳ ಮೂಲಕವಾಗಿ ಅಕ್ಷಯವಾದ ವಿಷಯಸುಖಗಳನ್ನು ಅನುಭವಿಸಿದನು. ಈ ಮಧ್ಯ ದಲ್ಲಿ ಅವನ ಶರೀರದ ಬಲವು ಸ್ವಲ್ಪವಾದರೂ ಕ್ಷೀಣಿಸಿರಲಿಲ್ಲ. ಸಂಪತ್ತು ನಷ್ಟವಾಯಿತೆಂದು ಒಮ್ಮೆಯಾದರೂ ಅವನು ಸ್ಮರಿಸಿಕೊಂಡಿರಲಿಲ್ಲ. ಆತನಿಗೆ ಇಂದ್ರಿಯಗಳಾಗಲೀ, ಸಂಪತ್ತಾಗಲೀ, ದೇಹಶಕ್ತಿಯಾಗಲೀ, ಸ್ಮರಣೆಯಾಗಲೀ ನಷ್ಟವಾದ ಪ್ರಸಂಗವೇ ಇರಲಿಲ್ಲ. ಮತ್ತೂ ವಿಶೇಷವೇನೆಂದರೆ ಅವನ ಹೆಸರನ್ನು ಸ್ಮರಿಸಿದೊಡನೆಯೇ ಕಳೆದುಹೋದ ಇತರರ ವಸ್ತುಗಳೂ ಸಿಕ್ಕಿಬಿಡುತ್ತಿದ್ದುವು. ಕಾರ್ತವೀರ್ಯನು ಅಂತಹ ಪ್ರಭಾವಶಾಲಿಯಾಗಿದ್ದನು.* ಅವನಿಗಿದ್ದ ಸಾವಿರಾರು ಮಕ್ಕಳಲ್ಲಿ ಜಯಧ್ವಜ, ಶೂರಸೇನ, ವೃಷಭ, ಮಧು ಮತ್ತು ಊರ್ಜಿತ–ಎಂಬ ಐವರು ಮಕ್ಕಳು ಮಾತ್ರವೇ ಉಳಿದುಕೊಂಡಿದ್ದರು. ಉಳಿದವರೆಲ್ಲರೂ ಪರಶುರಾಮನ ಕ್ರೋಧಾಗ್ನಿಗೆ ಸಿಕ್ಕಿ ದಗ್ಧರಾಗಿಹೋದರು. (ಶ್ಲೋಕ 17-27)

ಜಯಧ್ವಜನ ಮಗನ ಹೆಸರು ತಾಲಜಂಘ. ತಾಲಜಂಘನಿಗೆ ನೂರು ಮಕ್ಕಳಿದ್ದರು. ಅವರು ತಾಲಜಂಘಕ್ಷತ್ರಿಯರೆಂದೇ ಪ್ರಸಿದ್ಧರಾಗಿದ್ದರು. ಔರ್ವ ಮಹರ್ಷಿಗಳ ತೇಜಸ್ಸಿನಿಂದ ಜೀವಂತನಾದ ಸಗರನು ಔರ್ವರ ನಿರ್ದೇಶದಂತೆ ಈ ತಾಲಜಂಘಕ್ಷತ್ರಿಯರ ಸೊಕ್ಕನ್ನಡಗಿಸಿದನು. ತಾಲಜಂಘನ ನೂರು ಮಕ್ಕಳಲ್ಲಿ ಹಿರಿಯನು ವೀತಿಹೋತ್ರನೆಂಬುವನು. ವೀತಿಹೋತ್ರನ ಮಗ ಮಧು. ಮಧುವಿಗೆ ನೂರು ಮಕ್ಕಳಿದ್ದರು. ಅವರಲ್ಲಿ ಹಿರಿಯನು ವೃಷ್ಣಿ. ಯದುವಂಶೀಯರಾದ ಮಧು, ವೃಷ್ಣಿ, ಯದು–ಇವರ ಕಾರಣದಿಂದಾಗಿ ಈ ವಂಶವು ಮಾಧವ, ವಾರ್ಷ್ಣೇಯ ಮತ್ತು ಯಾದವ–ಎಂಬ ಹೆಸರುಗಳಿಂದ ಪ್ರಸಿದ್ಧವಾಯಿತು. ಯದುವಿನ ಎರಡನೆಯ ಮಗನಾದ ಕ್ರೋಷ್ಟುವಿಗೆ

---

* ಕಳೆದುಹೋದ ವಸ್ತುಗಳನ್ನು ಪಡೆದುಕೊಳ್ಳಲು ಈಗಲೂ ಈ ಕೆಳಗೆ ಕಾಣಿಸಿರುವ ಕಾರ್ತವೀರ್ಯಾರ್ಜುನ ಮಂತ್ರವನ್ನು ಜಪಿಸುತ್ತಾರೆ.

೧) ಹೈಹಯಾನಾಂ ಮಹಾರಾಜಃ ಕಾರ್ತವೀರ್ಯೇತಿ ವಿಶ್ರುತಃ ।
ಯಸ್ಯ ಸ್ಮರಣಮಾತ್ರೇಣ ಹೃತಂ ನಷ್ಟಂ ಚ ಲಭ್ಯತೇ ॥

೨) ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹುಸಹಸ್ರವಾನ್ ।
ಯಸ್ಯ ಸ್ಮರಣಮಾತ್ರೇಣ ಗತಂ ನಷ್ಟಂ ಚ ಲಭ್ಯತೇ ॥

ವೃಜಿನವಂತನೆಂಬ ಮಗನಿದ್ದನು. ವೃಜಿನವಂತನ ಸುಪುತ್ರ ಶ್ವಾಹಿ. ಶ್ವಾಹಿಯ ಮಗ ರುಶೇಕು. ರುಶೇಕುವಿನ ಮಗ ಚಿತ್ರರಥ. ಚಿತ್ರರಥನ ಪುತ್ರನು ಶಶಬಿಂದು. ಶಶಬಿಂದುವು ಪರಮಯೋಗಿಯೂ, ಭೋಗೈಶ್ವರ್ಯ ಸಂಪನ್ನನೂ, ಅತ್ಯಂತಪರಾಕ್ರಮಿಯೂ ಆಗಿದ್ದನು. ಅವನು ಹದಿನಾಲ್ಕು ಬಗೆಯ ರತ್ನಗಳಿಗೂ[1] ಸ್ವಾಮಿಯಾಗಿದ್ದನು. ಚಕ್ರವರ್ತಿಯಾಗಿದ್ದನು. ಯುದ್ಧದಲ್ಲಿ ಅಜೇಯನಾಗಿದ್ದನು. ಶಶಬಿಂದುವಿಗೆ ಯಶೋವತಿಯರಾದ ಹತ್ತು ಸಾವಿರ ಪತ್ನಿಯರಿದ್ದರು. ಅವರಲ್ಲಿ ಒಬ್ಬೊಬ್ಬರಿಗೂ ಲಕ್ಷ-ಲಕ್ಷ ಮಕ್ಕಳಾದುವು. ಹೀಗೆ ಶಶಬಿಂದುವು ತನ್ನ ಭಾರ್ಯೆಯರಲ್ಲಿ ನೂರು ಕೋಟಿ ಮಕ್ಕಳನ್ನು ಪಡೆದುಕೊಂಡಿದ್ದನು. ಇವರಲ್ಲಿ ಪೃಥುಶ್ರವಸನೇ ಮೊದಲಾದ ಆರು ಮಕ್ಕಳು ಪ್ರಮುಖರಾಗಿದ್ದರು. ಪೃಥುಶ್ರವಸನ ಮಗನ ಹೆಸರು ಧರ್ಮ. ಧರ್ಮನ ಮಗ ಉಶಸನ. ಅವನು ನೂರು ಅಶ್ವಮೇಧಗಳನ್ನು ಮಾಡಿದ್ದನು. ಉಶಸನನ ಮಗ ರುಚಕ. ರುಚಕನಿಗೆ ಪುರುಜಿತ, ರುಕ್ಮ, ರುಕ್ಮೇಷು, ಮತ್ತು ಜ್ಯಾಮಘ–ಎಂಬ ಐವರು ಮಕ್ಕಳಿದ್ದರು. ಕಡೆಯವನಾದ ಜ್ಯಾಮಘನ ಪತ್ನಿಯ ಹೆಸರು ಶೈಬ್ಯಾ. ಅವನಿಗೆ ಬಹಳ ದಿವಸಗಳವರೆಗೆ ಸಂತಾನವಿರಲಿಲ್ಲ. ಆದರೆ ಅವನು ತನ್ನ ಪತ್ನಿಯಾದ ಶೈಬ್ಯೆಯ ಭಯ ದಿಂದಾಗಿ ಬೇರೊಬ್ಬಳನ್ನು ಮದುವೆಯಾಗಲಿಲ್ಲ. ಒಂದು ಬಾರಿ ಜ್ಯಾಮಘನು ತನ್ನ ಶತ್ರುವಿನ ಅರಮನೆಯಿಂದ ಭೋಜ್ಯಾ ಎಂಬ ಕನ್ಯೆಯನ್ನು ಅಪಹರಿಸಿ ತಂದನು. ಪತಿಯ ರಥದಲ್ಲಿ ಬೇರೊಬ್ಬ ಕನ್ಯೆಯಿದ್ದುದನ್ನು ನೋಡುತ್ತಲೇ ಶೈಬ್ಯೆಯು ಕುಪಿತಳಾಗಿ ಗಂಡನನ್ನು ಕೇಳಿದಳು :

"ಕಪಟಿಯೇ! ನಾನು ಕುಳಿತುಕೊಳ್ಳಬೇಕಾಗಿರುವ ಸ್ಥಾನದಲ್ಲಿ ಇಂದು ಬೇರೆ ಯಾರನ್ನು ಕೂರಿಸಿಕೊಂಡು ಕರೆತಂದಿರುವೆ?" ಜ್ಯಾಮಘನು ಸಮಾಧಾನದಿಂದಲೇ ಉತ್ತರಿಸಿದನು : 'ಇವಳು ನಿನ್ನ ಸೊಸೆಯಾಗಿದ್ದಾಳೆ.' ನಗುವನ್ನು ತಡೆಯಲಾರದೆ ಪಕ-ಪಕನೆ ನಗುತ್ತಾ ಶೈಬ್ಯೆಯು ಹೇಳಿದಳು :

---

[1] ಆನೆ, ಕುದುರೆ, ರಥ, ಸ್ತ್ರೀ, ಭಂಡಾರ, ಮಾಲೆ, ವಸ್ತ್ರ, ವೃಕ್ಷ, ಶಕ್ತಿ, ಪಾಶ, ಮಣಿ, ಛತ್ರ ಮತ್ತು ವಿಮಾನ–ಇವುಗಳನ್ನು ಹದಿನಾಲ್ಕು ರತ್ನಗಳೆಂದು ಹೇಳುತ್ತಾರೆ.

ಗಜವಾಜಿರಥಸ್ತ್ರೀಷು ನಿಧಿಮಾಲ್ಯಾಮ್ಬರದ್ರುಮಾಃ ।
ಶಕ್ತಿಪಾಶಮಣಿಚ್ಛತ್ರವಿಮಾನಾನಿ ಚತುರ್ದಶ ॥ (ಮಾರ್ಕಂಡೇಯ ಪುರಾಣ)

"ನಾನು ಬಂಜೆ. ನನಗೆ ಸವತಿಯರೂ ಇಲ್ಲ. ಹೀಗಿರುವಾಗ ಇವಳು ನನ್ನ ಮಗನ ಪತ್ನಿಯು ಹೇಗಾದಾಳು?" ಜ್ಯಾಮಘನೂ ಯಥೋಚಿತವಾಗಿಯೇ ಉತ್ತರಿಸಿದ : "ರಾಣಿ! ನಿನಗೆ ಹುಟ್ಟಲಿರುವ ಮಗನಿಗೆ ಇವಳು ಪತ್ನಿ ಯಾಗುತ್ತಾಳೆ."

ರಾಜನಾದ ಜ್ಯಾಮಘನು ಹೇಳಿದ ಮಾತಿಗೆ ವಿಶ್ವೇದೇವತೆಗಳು ಮತ್ತು ಪಿತೃದೇವತೆಗಳು '**ತಥಾಸ್ತು**' 'ಹಾಗೆಯೇ ಆಗಲಿ'–ಎಂದರು. ಪಿತೃದೇವತೆಗಳ ಅನುಗ್ರಹವಾದೊಡನೆಯೇ ಶೈಬ್ಯೆಯು ಗರ್ಭವತಿಯಾದಳು. ದಿನವು ತುಂಬುತ್ತಲೇ ಸುಂದರವಾದ ಗಂಡು ಶಿಶುವಿಗೆ ಜನ್ಮವನ್ನಿತ್ತಳು. ಬಾಲಕನು ವಿದರ್ಭನೆಂಬ ಹೆಸರಿನಿಂದ ಪ್ರಸಿದ್ಧನಾದನು. ಈ ಮೊದಲೇ ಸೊಸೆಯೆಂದು ನಿಶ್ಚಯಿಸಲ್ಪಟ್ಟಿದ್ದ ಭೋಜ್ಯೆಯೊಡನೆ ವಿದರ್ಭರಾಜಕುಮಾರನಿಗೆ ವಿವಾಹ ವಾಯಿತು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೨೩ನೆಯ ಅಧ್ಯಾಯವು ಮುಗಿಯಿತು.

ನವಮಸ್ಕಂಧ ೨೪ನೆಯ ಅಧ್ಯಾಯ

ವಿದರ್ಭವಂಶದ ವರ್ಣನೆ

ಶ್ರೀಶುಕಮುನಿಗಳು ಹೇಳುತ್ತಾರೆ :

ತಸ್ಯಾಂ ವಿದರ್ಭೋಽಜನಯತ್ಪುತ್ರೌ ನಾಮ್ನಾ ಕುಶಕ್ರಥೌ ।
ತೃತೀಯಂ ರೋಮಪಾದಂ ಚ ವಿದರ್ಭಕುಲನನ್ದನಮ್ ॥೧॥

ಪರೀಕ್ಷಿತ! ವಿದರ್ಭರಾಜನಿಗೆ ಭೋಜ್ಯಾ ಎಂಬ ಪತ್ನಿಯಲ್ಲಿ ಕುಶ, ಕ್ರಥ ಮತ್ತು ರೋಮಪಾದರೆಂಬ ಮೂವರು ಮಕ್ಕಳು ಹುಟ್ಟಿದರು. ಕಿರಿಯನಾದ ರೋಮಪಾದನು ವಿದರ್ಭನ ವಂಶಕ್ಕೆ ಆನಂದದಾಯಕನಾಗಿದ್ದನು. ರೋಮಪಾದನ ಮಗ ಬಭ್ರು. ಬಭ್ರುವಿನ ಮಗ ಕೃತಿ. ಕೃತಿಯ ಮಗ ಉಶಿಕ. ಉಶಿಕನ ಮಗ ಚೇದಿ. ಈ ಚೇದಿಯ ವಂಶದಲ್ಲಿಯೇ ದಮಘೋಷ, ಶಿಶುಪಾಲ–ಮುಂತಾದವರು ಹುಟ್ಟಿದರು.

ವಿದರ್ಭನ ಎರಡನೆಯ ಮಗನಾದ ಕ್ರಥನಿಗೆ ಕುಂತಿ ಎಂಬ ಮಗನಿದ್ದನು. ಕುಂತಿಯ ಮಗ ಧೃಷ್ಟಿ. ಧೃಷ್ಟಿಯ ಮಗ ನಿರ್ವೃತಿ. ನಿರ್ವೃತಿಯ

ಮಗ ದಶಾರ್ಹ. ದಶಾರ್ಹನ ಮಗ ವ್ಯೋಮ. ವ್ಯೋಮನ ಮಗ ಜೀಮೂತ. ಜೀಮೂತನ ಮಗ ವಿಕೃತಿ. ವಿಕೃತಿಯ ಮಗ ಭೀಮರಥ. ಭೀಮರಥನ ಮಗ ನವರಥ. ನವರಥನ ಮಗ ದಶರಥ. ದಶರಥನ ಮಗ ಶಕುನಿ. ಶಕುನಿಯ ಮಗ ಕರಂಭ. ಕರಂಭನ ಮಗ ದೇವರಾತ. ದೇವರಾತನ ಮಗ ದೇವಕ್ಷತ್ರ. ದೇವಕ್ಷತ್ರನ ಮಗ ಮಧು. ಮಧುವಿನ ಮಗ ಕುರುವಶ. ಕುರುವಶನ ಮಗ ಅನು. ಅನುವಿನ ಸುಪುತ್ರ ಪುರುಹೋತ್ರ. ಪುರು ಹೋತ್ರನ ಮಗ ಆಯು. ಆಯುವಿನ ಮಗ ಸಾತ್ವತ. ಸಾತ್ವತನಿಗೆ ಭಜಮಾನ, ಭಜಿ, ದಿವ್ಯ, ವೃಷ್ಣಿ, ದೇವಾವೃಧ, ಅಂಧಕ ಮತ್ತು ಮಹಾ ಭೋಜರೆಂಬ ಏಳು ಮಕ್ಕಳಿದ್ದರು. ಮೊದಲನೆಯವನಾದ ಭಜಮಾನನಿಗೆ ಇಬ್ಬರು ಪತ್ನಿಯರಿದ್ದರು. ಒಬ್ಬಳಲ್ಲಿ ನಿಮ್ಲೋಚಿ, ಕಿಂಕಿಣ ಮತ್ತು ಧೃಷ್ಟಿ ಎಂಬ ಮೂವರು ಮಕ್ಕಳು ಹುಟ್ಟಿದರು. ಭಜಮಾನನಿಗೆ ಮತ್ತೊಬ್ಬ ಪತ್ನಿಯಿಂದ ಶತಾಜಿತ, ಸಹಸ್ರಾಜಿತ ಮತ್ತು ಅಯುತಾಜಿತರೆಂಬ ಮೂವರು ಮಕ್ಕಳು ಹುಟ್ಟಿದರು. ಸಾತ್ವತನ ಐದನೆಯ ಮಗನಾದ ದೇವಾವೃಧನಿಗೆ ಬಭ್ರು ಎಂಬ ಮಗನು ಹುಟ್ಟಿದನು.
(ಶ್ಲೋಕ 2-8)

ದೇವಾವೃಧ ಮತ್ತು ಬಭ್ರುಗಳ ಸಂಬಂಧವಾಗಿ ಈ ಗಾಥೆಯು ಹೇಳಲ್ಪಡುತ್ತದೆ.

ಯಥೈವ ಶೃಣುಮೋ ದೂರಾತ್ಸಮ್ಪಶ್ಯಾಮಸ್ತಥಾನ್ತಿಕಾತ್ ॥೯॥

"ದೇವಾವೃಧ-ಬಭ್ರುಗಳ ಮಾಹಾತ್ಮ್ಯವು ಸಾಮಾನ್ಯವಾದುದಲ್ಲ ; ಅದ್ಭುತವಾದುದು. ಎಲ್ಲಿಯೋ ದೂರದಲ್ಲಿದ್ದ ಜನರ ಬಾಯಿಂದ ಇವರ ಸದ್ಗುಣಗಳನ್ನು ಹೇಗೆ ಕೇಳಿದ್ದೆವೋ ಪ್ರತ್ಯಕ್ಷದಲ್ಲಿಯೂ ಇಂತಹ ಅನುಪಮ ವಾದ ಗುಣಗಳನ್ನೇ ನಾವು ಇವರಲ್ಲಿ ಕಾಣುತ್ತೇವೆ."

ಬಭ್ರುವು ಮನುಷ್ಯಶ್ರೇಷ್ಠನಾಗಿದ್ದನು. ದೇವಾವೃಧನು ದೇವತೆಗಳಿಗೆ ಸಮಾನನಾಗಿದ್ದನು. ಬಭ್ರು ಮತ್ತು ದೇವಾವೃಧರ ತತ್ತ್ವೋಪದೇಶದಿಂದಾಗಿ ಹದಿನಾಲ್ಕು ಸಾವಿರದ ಅರುವತ್ತೈದು ಮಂದಿ ಪರಮಪದವನ್ನು ಹೊಂದಿದರು. ಸಾತ್ವತನ ಮಕ್ಕಳಲ್ಲಿ ಕಡೆಯವನಾದ ಮಹಾಭೋಜನೂ ಧರ್ಮಾತ್ಮ ನಾಗಿದ್ದನು. ಅವನ ವಂಶದವರು ಭೋಜವಂಶೀಯ ಯಾದವರೆಂದು ಪ್ರಸಿದ್ಧರಾದರು. ಸಾತ್ವತನ ನಾಲ್ಕನೆಯ ಮಗನಾದ ವೃಷ್ಣಿಗೆ ಸುಮಿತ್ರ ಮತ್ತು

ಯುಧಾಜಿತರೆಂಬ ಇಬ್ಬರು ಮಕ್ಕಳಿದ್ದರು. ಎರಡನೆಯವನಾದ ಯುಧಾಜಿತನಿಗೆ ಶಿನಿ ಮತ್ತು ಅನಮಿತ್ರರೆಂಬ ಇಬ್ಬರು ಮಕ್ಕಳಿದ್ದರು. ಯುಧಾಜಿತನ ಮಕ್ಕಳಲ್ಲಿ ಎರಡನೆಯವನಾದ ಅನಮಿತ್ರನಿಗೆ ನಿಮ್ನ ಎಂಬ ಮಗನು ಹುಟ್ಟಿದನು. ನಿಮ್ನನಿಗೆ ಸತ್ರಾಜಿತ ಮತ್ತು ಪ್ರಸೇನ ಎಂಬ ಇಬ್ಬರು ಮಕ್ಕಳಾದರು. ಅನಮಿತ್ರನಿಗೆ ಶಿನಿಯೆಂಬ ಮತ್ತೊಬ್ಬ ಮಗನೂ ಇದ್ದನು. ಶಿನಿಯ ಮಗ ಸತ್ಯಕ. ಸತ್ಯಕನ ಮಗ ಯುಯುಧಾನ. ಇವನು ಸಾತ್ಯಕಿ ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದನು. ಸಾತ್ಯಕಿಯ ಮಗ ಜಯ. ಜಯನ ಮಗ ಕುಣಿ. ಕುಣಿಯ ಮಗ ಯುಗಂಧರ. ಅನಮಿತ್ರನಿಗೆ ವೃಷ್ಣಿ ಎಂಬ ಮೂರನೆಯ ಮಗನೂ ಇದ್ದನು. ಆ ವೃಷ್ಣಿಗೆ ಶ್ವಫಲ್ಕ ಮತ್ತು ಚಿತ್ರರಥರೆಂಬ ಇಬ್ಬರು ಮಕ್ಕಳಿದ್ದರು. ಶ್ವಫಲ್ಕನ ಪತ್ನಿಯ ಹೆಸರು ಗಾಂದಿನೀ. ಶ್ವಫಲ್ಕನಿಗೆ ಗಾಂದಿನಿಯಲ್ಲಿ ಎಲ್ಲರಿಗಿಂತಲೂ ಹಿರಿಯನಾದ ಮತ್ತು ಗುಣವಂತನಾದ ಅಕ್ರೂರನಲ್ಲದೆ ಅಸಂಗ, ಸಾರಮೇಯ, ಮೃದುರ, ಮೃದುವಿದ, ಗಿರಿ, ಧರ್ಮವೃದ್ಧ, ಸುಕರ್ಮಾ, ಕ್ಷೇತ್ರೋಪೇಕ್ಷ, ಅರಿಮರ್ದನ, ಶತ್ರುಘ್ನ, ಗಂಧಮಾದನ ಮತ್ತು ಪ್ರತಿಬಾಹು–ಎಂಬ ಹನ್ನೆರಡು ಮಕ್ಕಳಿದ್ದರು. ಇವರಿಗೆ ಸುಚಿರಾ ಎಂಬ ಒಬ್ಬ ತಂಗಿಯೂ ಇದ್ದಳು.

ಹಿರಿಯನಾದ ಅಕ್ರೂರನಿಗೆ ದೇವವಂತ ಮತ್ತು ಉಪದೇವರೆಂಬ ಇಬ್ಬರು ಮಕ್ಕಳಿದ್ದರು. ವೃಷ್ಣಿಯ ಎರಡನೆಯ ಮಗನಾದ ಅಥವಾ ಶ್ವಫಲ್ಕನ ತಮ್ಮನಾದ ಚಿತ್ರರಥನಿಗೆ ಪೃಥು, ವಿದೂರಥ ಇವರೇ ಮೊದಲಾದ ಅನೇಕ ಮಕ್ಕಳಿದ್ದರು. ಇವರೆಲ್ಲರೂ ವೃಷ್ಣಿವಂಶದವರಿಗೆ ಆನಂದದಾಯಕರಾಗಿದ್ದರು. ಸಾತ್ವತನ ಆರನೆಯ ಮಗನಾದ ಅಂಧಕನಿಗೆ ಕುಕುರ, ಭಜಮಾನ, ಶುಚಿ ಮತ್ತು ಕಂಬಲಬರ್ಹಿ ಎಂಬ ನಾಲ್ವರು ಮಕ್ಕಳಿದ್ದರು. ಇವರಲ್ಲಿ ಹಿರಿಯನಾದ ಕುಕುರನಿಗೆ ವಹ್ನಿ ಎಂಬ ಮಗನಿದ್ದನು. ವಹ್ನಿಯ ಮಗ ವಿಲೋಮ. ವಿಲೋಮನ ಮಗ ಕಪೋತಲೋಮಾ. ಕಪೋತಲೋಮನ ಮಗ ಅನು. ಅನುವು ಗಂಧರ್ವಶ್ರೇಷ್ಠನಾದ ತುಂಬುರುವಿಗೆ ಪ್ರಿಯಮಿತ್ರನಾಗಿದ್ದನು. ಅನುವಿನ ಮಗ ಅಂಧಕ. ಅಂಧಕನ ಮಗ ದುಂದುಭಿ. ದುಂದುಭಿಯ ಮಗ ಅರಿದ್ಯೋತ. ಅರಿದ್ಯೋತನ ಮಗ ಪುನರ್ವಸು. ಪುನರ್ವಸುವಿನ ಮಗ ಆಹುಕ. ಪುನರ್ವಸುವಿಗೆ ಆಹುಕೀ

ಎಂಬ ಒಬ್ಬ ಮಗಳೂ ಇದ್ದಳು. ಆಹುಕನಿಗೆ ದೇವಕ ಮತ್ತು ಉಗ್ರಸೇನರೆಂಬ ಇಬ್ಬರು ಮಕ್ಕಳಿದ್ದರು. ಮೊದಲನೆಯವನಾದ ದೇವಕನಿಗೆ ದೇವವಂತ, ಉಪದೇವ, ಸುದೇವ ಮತ್ತು ದೇವವರ್ಧನರೆಂಬ ನಾಲ್ವರು ಗಂಡುಮಕ್ಕಳೂ ಧೃತದೇವಾ, ಶಾಂತಿದೇವಾ, ಉಪದೇವಾ, ಶ್ರೀದೇವಾ, ದೇವರಕ್ಷಿತಾ, ಸಹದೇವಾ ಮತ್ತು ದೇವಕೀ ಎಂಬ ಏಳು ಹೆಣ್ಣುಮಕ್ಕಳೂ ಇದ್ದರು. ವಸುದೇವನು ಇವರೆಲ್ಲರನ್ನೂ ಮದುವೆಯಾದನು. ಆಹುಕನ ಎರಡನೆಯ ಮಗನಾದ ಉಗ್ರಸೇನನಿಗೆ ಕಂಸ, ಸುನಾಮಾ, ನ್ಯಗ್ರೋಧ, ಕಂಕ, ಶಂಕು, ಸುಹೂ, ರಾಷ್ಟ್ರಪಾಲ, ಸೃಷ್ಟಿ ಮತ್ತು ತುಷ್ಟಿಮಂತರೆಂಬ ಒಂಬತ್ತು ಗಂಡು ಮಕ್ಕಳೂ, ಕಂಸಾ, ಕಂಸವತೀ, ಕಂಕಾ, ಶೂರಭೂ ಮತ್ತು ರಾಷ್ಟ್ರಪಾಲಿಕಾ ಎಂಬ ಐವರು ಹೆಣ್ಣುಮಕ್ಕಳೂ ಇದ್ದರು. ಇವರ ವಿವಾಹವು ದೇವಭಾಗ ಮೊದಲಾದ ವಸುದೇವನ ಅನುಜರೊಡನೆ ಆಯಿತು. ಹಿಂದೆಯೇ ಹೇಳಿದ್ದಂತೆ ಶ್ವಫಲ್ಕನ ತಮ್ಮನಾದ ಚಿತ್ರರಥನಿಗೆ ವಿದೂರಥನೆಂಬ ಮಗನಿದ್ದನು. ವಿದೂರಥನ ಮಗ ಶೂರ. ಶೂರನ ಮಗ ಭಜಮಾನ. ಭಜಮಾನನ ಮಗ ಶಿನಿ. ಶಿನಿಯ ಮಗ ಸ್ವಯಂಭೋಜ. ಸ್ವಯಂಭೋಜನ ಮಗ ಹೃದೀಕ. ಹೃದೀಕನಿಗೆ ದೇವಬಾಹು, ಶತಧನ್ವಾ ಮತ್ತು ಕೃತವರ್ಮರೆಂಬ ಮೂವರು ಮಕ್ಕಳಿದ್ದರು. ದೇವಬಾಹು ಅಥವಾ ದೇವಮೀಢನ ಮಗ ಶೂರ. ಶೂರನ ಪತ್ನಿಯ ಹೆಸರು ಮಾರಿಷಾ. ಶೂರನಿಗೆ ಮಾರಿಷೆಯ ಗರ್ಭದಲ್ಲಿ ವಸುದೇವ, ದೇವಭಾಗ, ದೇವಶ್ರವಸ, ಆನಕ, ಸೃಂಜಯ, ಶ್ಯಾಮಕ, ಕಂಕ, ಶಮೀಕ, ವತ್ಸಕ ಮತ್ತು ವೃಕರೆಂಬ ಹತ್ತು ಮಕ್ಕಳು ಹುಟ್ಟಿದರು. ನಿಷ್ಕಲ್ಮಷನಾದ, ಪುಣ್ಯಾತ್ಮನಾದ ವಸುದೇವನು ಹುಟ್ಟಿದ ಸಮಯದಲ್ಲಿ ದೇವದುಂದುಭಿಗಳು ತಾವೇ ತಾವಾಗಿ ಧ್ವನಿಸತೊಡಗಿದುವು. ಆದುದರಿಂದ ವಸುದೇವನನ್ನು ಆನಕದುಂದುಭಿ–ಎಂದೂ ಕರೆಯುತ್ತಿದ್ದರು. ಇವನೇ ಮುಂದೆ ಪರಾತ್ಪರನಾದ ಶ್ರೀಹರಿಗೆ ತಂದೆಯಾದನು. ಶೂರನಿಗೆ ವಸುದೇವನೇ ಮೊದಲಾದ ಹತ್ತು ಗಂಡುಮಕ್ಕಳಲ್ಲದೆ ಪೃಥಾ (ಕುಂತಿ), ಶ್ರುತದೇವಾ, ಶ್ರುತಕೀರ್ತಿ, ಶ್ರುತಶ್ರವಸಾ ಮತ್ತು ರಾಜಾಧಿದೇವೀ ಎಂಬ ಐವರು ಹೆಣ್ಣುಮಕ್ಕಳೂ ಇದ್ದರು. ವಸುದೇವನ ತಂದೆಯಾದ ಶೂರಸೇನನಿಗೆ (ಶೂರನಿಗೆ) ಕುಂತಿ ಭೋಜನೆಂಬ ಮಿತ್ರನಿದ್ದನು. ಅವನಿಗೆ ಸಂತಾನವಿರಲಿಲ್ಲ. ಆದುದರಿಂದ

ಶೂರಸೇನನು ತನ್ನ ಹಿರಿಯ ಮಗಳಾದ ಪೃಥೆಯನ್ನೇ (ಕುಂತಿಯನ್ನೇ) ಕುಂತಿಭೋಜನಿಗೆ ದತ್ತುವಾಗಿ ಕೊಟ್ಟುಬಿಟ್ಟನು. ಪೃಥಾದೇವಿಯು ಒಂದು ಸಮಯದಲ್ಲಿ ದುರ್ವಾಸಮಹರ್ಷಿಗಳನ್ನು ತನ್ನ ಸೇವೆಯಿಂದ ಪ್ರಸನ್ನಗೊಳಿಸಿ ಅವರ ಅನುಗ್ರಹದಿಂದ ದೇವತೆಗಳನ್ನೂ ಸಮಾಗಮಕ್ಕಾಗಿ ಕರೆಯಬಹುದಾದ ವಿದ್ಯೆಯನ್ನು ಕಲಿತಳು. ಒಂದು ದಿನ ಪೃಥೆಯು ದುರ್ವಾಸಮಹರ್ಷಿಗಳು ಉಪದೇಶಿಸಿದ್ದ ವಿದ್ಯೆಯ ಪ್ರಭಾವವನ್ನು ತಿಳಿಯಬೇಕೆಂಬ ಚಾಪಲ್ಯದಿಂದ ಪರಮಪವಿತ್ರನಾದ ಸೂರ್ಯಭಗವಂತನನ್ನು ಮಂತ್ರಪುನಶ್ಚರಣೆ ಮಾಡಿ ಆಹ್ವಾನಿಸಿದಳು. ಮಂತ್ರಪುನಶ್ಚರಣೆಮಾಡಿ ಆಹ್ವಾನಿಸಿದೊಡನೆಯೇ ಸೂರ್ಯದೇವನು ಅವಳ ಬಳಿಗೆ ಬಂದೇ ಬಿಟ್ಟನು. ಸೂರ್ಯನನ್ನು ನೋಡಿ ಅಚ್ಚರಿಗೊಂಡ ಪೃಥೆಯು ಸೂರ್ಯಭಗವಂತನಿಗೆ ಹೇಳಿದಳು :

ಪುತ್ರಯಾರ್ಥಂ ಪ್ರಯುಕ್ತಾ ಮೇ ಯಾಹಿ ದೇವ ಕ್ಷಮಸ್ವ ಮೇ ॥

"ಸೂರ್ಯಭಗವಂತ! ನನ್ನನ್ನು ಕ್ಷಮಿಸಿಬಿಡು. ಮುನಿಗಳ ಮಾತನ್ನು ಪರೀಕ್ಷಿಸುವ ಸಲುವಾಗಿ ನಾನು ಮಂತ್ರವನ್ನು ಪುನಶ್ಚರಣೆ ಮಾಡಿ ನಿನ್ನನ್ನು ಆಹ್ವಾನಿಸಿದೆನು. ನನಗೀಗ ಮಂತ್ರದ ಪ್ರಭಾವವೆಷ್ಟೆಂಬುದು ತಿಳಿದು ಹೋಯಿತು. ನೀನಿನ್ನು ಹೊರಡಬಹುದು."

ಸೂರ್ಯನು ಹೇಳುತ್ತಾನೆ :

"ದೇವಿ! ನನ್ನ ದರ್ಶನವು ನಿಷ್ಫಲವಾಗಲೇಬಾರದು. ಆದುದರಿಂದ ಈಗಲೇ ನಾನು ನಿನಗೆ ಒಬ್ಬ ಪುತ್ರನನ್ನು ಅನುಗ್ರಹಿಸುತ್ತೇನೆ. ನನ್ನ ಸಮಾಗಮದಿಂದಾಗಿ ನಿನ್ನ ಯೋನಿಯು ದೂಷಿತವಾಗುವುದಿಲ್ಲ. ಮಗುವು ಹುಟ್ಟಿದ ನಂತರ ಪುನಃ ನೀನು ಕನ್ಯೆಯಾಗಿಯೇ ಉಳಿಯುವೆ."

ಸೂರ್ಯನು ಹೀಗೆ ಹೇಳಿ ಕನ್ಯಾವಸ್ಥೆಯಲ್ಲಿದ್ದ ಪೃಥೆಗೆ ಗರ್ಭಾಧಾನ ಮಾಡಿ ಸ್ವರ್ಗಕ್ಕೆ ಹೊರಟುಹೋದನು. ಒಡನೆಯೇ ಕುಂತಿಗೆ ಎರಡನೆಯ ಸೂರ್ಯನಂತೆಯೇ ಕಂಗೊಳಿಸುತ್ತಿದ್ದ ಬಾಲಕನು ಹುಟ್ಟಿದನು. ಕುಂತಿಯು ಲೋಕಾಪವಾದಕ್ಕೆ ಹೆದರಿದಳು. ಆದುದರಿಂದ ಆಕೆಯು ಹುಟ್ಟಿದ ಬಾಲಕನನ್ನು ಬಹಳ ದುಃಖದಿಂದ ಒಂದು ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ತೇಲಿ ಬಿಟ್ಟಳು.

ಪರೀಕ್ಷಿತನೇ! ಈ ಪೃಥಾದೇವಿಯ ವಿವಾಹವೇ ಮುಂದೆ ನಿನ್ನ

ಮುತ್ತಾತನಾದ ಪಾಂಡುವಿನೊಡನೆ ಆಯಿತು. ಪಾಂಡುವು ಮಹಾ ಪರಾಕ್ರಮಿಯಾಗಿದ್ದನು. ಶೂರಸೇನನ ಮತ್ತೊಬ್ಬ ಮಗಳಾದ ಶ್ರುತ ದೇವಿಯು ಕರೂಷದೇಶದ ಅಧಿಪತಿಯಾದ ವೃದ್ಧಶರ್ಮನನ್ನು ಮದುವೆ ಯಾದಳು. ವೃದ್ಧಶರ್ಮನಿಗೆ ಶ್ರುತದೇವಿಯಲ್ಲಿ ದಂತವಕ್ತ್ರನೆಂಬ ಮಗನು ಹುಟ್ಟಿದನು. ಈ ದಂತವಕ್ತ್ರನೇ ಹಿಂದಿನ ಜನ್ಮದಲ್ಲಿ ಸನಕಸನಂದಾದಿ ಮಹರ್ಷಿಗಳ ಶಾಪದಿಂದ ಹಿರಣ್ಯಾಕ್ಷನಾಗಿ ಹುಟ್ಟಿದ್ದನು.

ಶೂರಸೇನನ ಮತ್ತೊಬ್ಬ ಮಗಳಾದ ಶ್ರುತಕೀರ್ತಿಯನ್ನು ಕೇಕಯ ದೇಶದ ರಾಜನಾದ ಧೃಷ್ಟಕೇತುವು ಮದುವೆಯಾದನು. ಧೃಷ್ಟಕೇತುವಿಗೆ ಶ್ರುತಕೀರ್ತಿಯಲ್ಲಿ ಸಂತರ್ದನನೇ ಮೊದಲಾದ ಐವರು ಮಕ್ಕಳು ಹುಟ್ಟಿ ದರು. ಶೂರಸೇನನ ಕಡೆಯ ಮಗಳಾದ ರಾಜಾಧಿದೇವಿಯನ್ನು ಜಯಸೇನ ನೆಂಬುವನು ಮದುವೆಯಾದನು. ಜಯಸೇನಿಗೆ ರಾಜಾಧಿದೇವಿಯಲ್ಲಿ ವಿಂದ ಮತ್ತು ಅನುವಿಂದರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಚೇದಿಯ ರಾಜನಾದ ದಮಘೋಷನು ಶೂರಸೇನನ ಮತ್ತೊಬ್ಬ ಮಗಳಾದ ಶ್ರುತಶ್ರವಸೆಯನ್ನು ಮದುವೆಯಾದನು. ದಮಘೋಷನಿಗೆ ಶ್ರುತಶ್ರವಸೆ ಯಲ್ಲಿ ಶಿಶುಪಾಲನೆಂಬ ಮಗನು ಹುಟ್ಟಿದನು. ಇವನ ವಿಷಯವಾಗಿ ಈ ಹಿಂದೆಯೇ ಹೇಳಿಯಾಗಿದೆ.*

ವಸುದೇವನ ತಮ್ಮನಾದ ದೇವಭಾಗನಿಗೆ ಕಂಸಾ ಎಂಬ ಪತ್ನಿಯಲ್ಲಿ ಚಿತ್ರಕೇತು ಮತ್ತು ಬೃಹದ್ಬಲರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಮತ್ತೊಬ್ಬ ತಮ್ಮನಾದ ದೇವಶ್ರವಸನಿಗೆ ಪತ್ನಿಯಾದ ಕಂಸವತಿಯಲ್ಲಿ ಸುವೀರ ಮತ್ತು ಇಷುಮಂತ–ಎಂಬ ಇಬ್ಬರು ಮಕ್ಕಳು ಹುಟ್ಟಿದರು. ವಸುದೇವನ ಮೂರನೆಯ ತಮ್ಮನಾದ ಆನಕನಿಗೆ ಅವನ ಪತ್ನಿಯಾದ ಕಂಕಾ ಎಂಬುವಳಲ್ಲಿ ಶತ್ರುಜಿತ ಮತ್ತು ಪುರುಜಿತರೆಂಬ ಇಬ್ಬರು ಮಕ್ಕಳು ಹುಟ್ಟಿದರು. ವಸುದೇವನ ನಾಲ್ಕನೆಯ ತಮ್ಮನಾದ ಸೃಂಜಯನಿಗೆ ಪತ್ನಿಯಾದ ರಾಷ್ಟ್ರಪಾಲಿಕಾ ಎಂಬುವಳಲ್ಲಿ ದುರ್ಮರ್ಷನೇ ಮೊದಲಾದ ಹಲವಾರು ಮಕ್ಕಳು ಜನಿಸಿದರು. ವಸುದೇವನ ಐದನೆಯ ತಮ್ಮನಾದ ಶ್ಯಾಮಾಕನಿಗೆ ಪತ್ನಿಯಾದ ಶರಭೂಮಿ (ಶರಭೂ) ಎಂಬುವಳಲ್ಲಿ ಹರಿಕೇಶ

---

* ಏಳನೆಯ ಸ್ಕಂಧ

ಮತ್ತು ಹಿರಣ್ಯಾಕ್ಷರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಶೂರಸೇನನ ಮತ್ತೊಬ್ಬ ಮಗನಾದ ವತ್ಸಕನೆಂಬುವನಿಗೆ ಮಿಶ್ರಕೇಶೀ ಎಂಬ ಅಪ್ಸರೆಯಲ್ಲಿ ವೃಕನೇ ಮೊದಲಾದ ಹಲವಾರು ಮಕ್ಕಳು ಹುಟ್ಟಿದರು. ವೃಕನಿಗೆ ದುರ್ವಾರ್ಕ್ಷೀ–ಎಂಬ ಪತ್ನಿಯಲ್ಲಿ ತಕ್ಷ, ಪುಷ್ಕರ, ಶಾಲ–ಇವರೇ ಮೊದಲಾದ ಮಕ್ಕಳು ಹುಟ್ಟಿದರು. ಶೂರಸೇನನ ಮತ್ತೊಬ್ಬ ಮಗನಾದ ಶಮೀಕನಿಗೆ ಅವನ ಪತ್ನಿಯಾದ ಸುದಾಮಿನಿಯಲ್ಲಿ ಸುಮಿತ್ರ, ಅರ್ಜುನಪಾಲ–ಇವರೇ ಮೊದಲಾದ ಮಕ್ಕಳು ಹುಟ್ಟಿದರು. ವಸುದೇವನ ಆರನೆಯ ತಮ್ಮನಾದ ಕಂಕನಿಗೆ ಅವನ ಪತ್ನಿಯಾದ ಕಣಿಕೆಯಲ್ಲಿ ಋತುಧಾಮ ಮತ್ತು ಜಯರೆಂಬ ಇಬ್ಬರು ಮಕ್ಕಳು ಹುಟ್ಟಿದರು.

ಆನಕದುಂದುಭಿಯಾದ ವಸುದೇವನಿಗೆ ಪೌರವೀ, ರೋಹಿಣೀ, ಭದ್ರಾ, ಮದಿರಾ, ರೋಚನಾ, ಇಲಾ, ದೇವಕೀ–ಇವರೇ ಮುಂತಾದ ಅನೇಕ ಭಾರ್ಯೆಯರಿದ್ದರು. ವಸುದೇವನಿಗೆ ರೋಹಿಣಿಯ ಗರ್ಭದಲ್ಲಿ ಬಲ, ಗದ, ಸಾರಣ, ದುರ್ಮದ, ವಿಪುಲ, ಧ್ರುವ, ಕೃತ–ಇವರೇ ಮೊದಲಾದ ಹಲವಾರು ಮಕ್ಕಳು ಹುಟ್ಟಿದರು. ಪೌರವಿಯ ಗರ್ಭದಲ್ಲಿ ಭೂತ, ಸುಭದ್ರ, ಭದ್ರವಾಹ, ದುರ್ಮದ, ಭದ್ರ–ಇವರೇ ಮೊದಲಾದ ಹನ್ನೆರಡು ಮಕ್ಕಳು ಹುಟ್ಟಿದರು. ಮದಿರಾ ಎಂಬ ಪತ್ನಿಯಲ್ಲಿ ನಂದ, ಉಪನಂದ, ಕೃತಕ, ಶೂರ–ಇವರೇ ಮೊದಲಾದ ಮಕ್ಕಳು ಹುಟ್ಟಿದರು. ವಸುದೇವನ ಮತ್ತೊಬ್ಬ ಪತ್ನಿಯಾದ ಕೌಸಲ್ಯಾ ಎಂಬುವಳು ಕುಲಕ್ಕೇ ಆನಂದದಾಯಕನಾದ ಕೇಶೀ ಎಂಬ ಒಬ್ಬನೇ ಮಗನನ್ನು ಹಡೆದಳು. ವಸುದೇವನಿಗೆ ರೋಚನಾ ಎಂಬ ಪತ್ನಿಯಲ್ಲಿ ಹಸ್ತ, ಹೇಮಾ, ಗದ ಇವರೇ ಮೊದಲಾದ ಮಕ್ಕಳು ಹುಟ್ಟಿದರು. ವಸುದೇವನು ತನ್ನ ಮತ್ತೊಬ್ಬ ಪತ್ನಿಯಾದ ಇಲಾದೇವಿಯಲ್ಲಿ ಉರುವಲ್ಕನೇ ಮೊದಲಾದ ಯದುವಂಶದಲ್ಲಿ ಪ್ರಧಾನಭೂತರಾದ ಮಕ್ಕಳನ್ನೂ ಧೃತದೇವಾ ಎಂಬುವಳ ಗರ್ಭದಲ್ಲಿ ವಿಪೃಷ್ಟ ಎಂಬ ಒಬ್ಬನೇ ಮಗನನ್ನೂ ಪಡೆದುಕೊಂಡನು. ವಸುದೇವನಿಗೆ ಶಾಂತಿದೇವಾ ಎಂಬ ಪತ್ನಿಯ ಗರ್ಭದಲ್ಲಿ ಶ್ರಮ, ಪ್ರತಿಶ್ರುತ ಇವರೇ ಮೊದಲಾದ ಹಲವಾರು ಮಕ್ಕಳೂ ಉಪದೇವಾ ಎಂಬುವಳ ಗರ್ಭದಲ್ಲಿ ಕಲ್ಪವರ್ಷನೇ ಮೊದಲಾದ ಹತ್ತುಮಕ್ಕಳೂ ಹುಟ್ಟಿ

ದರು. ವಸುದೇವನಿಗೆ ಶ್ರೀದೇವಾ ಎಂಬುವಳ ಗರ್ಭದಲ್ಲಿ ವಸು, ಹಂಸ, ಸುವಂಶ ಇವರೇ ಮೊದಲಾದ ಆರು ಮಕ್ಕಳೂ ದೇವರಕ್ಷಿತಾ ಎಂಬುವಳ ಗರ್ಭದಲ್ಲಿ ಗದನೇ ಮೊದಲಾದ ಒಂಬತ್ತು ಮಕ್ಕಳೂ ಹುಟ್ಟಿದರು. ಧರ್ಮ ರಾಜನು ಅಷ್ಟವಸುಗಳನ್ನು ಪಡೆದುಕೊಂಡಂತೆ ವಸುದೇವನು ಸಹದೇವಾ ಎಂಬ ಪತ್ನಿಯಲ್ಲಿ ಪುರುಮಿತ್ರನೇ ಮೊದಲಾದ ಎಂಟು ಮಕ್ಕಳನ್ನು ಪಡೆದು ಕೊಂಡನು. ವಸುದೇವನು ತನ್ನ ಭಾರ್ಯೆಯಾದ ದೇವಕಿಯ ಗರ್ಭದಲ್ಲಿ ಕೀರ್ತಿಮಂತ, ಸುಷೇಣ, ಭದ್ರಸೇನ, ಋಜು, ಸಂಮರ್ದನ, ಭದ್ರ ಮತ್ತು ಶೇಷಾವತಾರನಾದ ಸಂಕರ್ಷಣ ಎಂಬ ಏಳು ಮಕ್ಕಳನ್ನು ಪಡೆದುಕೊಂಡನು. ಸಾಕ್ಷಾತ್ ಶ್ರೀಹರಿಯೇ ವಸುದೇವ-ದೇವಕಿಯರ ಎಂಟನೆಯ ಮಗನಾಗಿ ಜನಿಸಿದನು. ಪರಮಭಾಗ್ಯಶಾಲಿನಿಯಾದ ನಿನ್ನ ಮಾತಾಮಹಿ ಸುಭದ್ರೆಯೂ ಕೂಡ ವಸುದೇವ-ದೇವಕಿಯರ ಮಗಳೇ ಆಗಿದ್ದಳು.

ಯದಾ ಯದೇಹ ಧರ್ಮಸ್ಯ ಕ್ಷಯೋ ವೃದ್ಧಿಶ್ಚ ಪಾಪ್ಮನಃ ।
ತದಾ ತು ಭಗವಾನೀಶ ಆತ್ಮಾನಂ ಸೃಜತೇ ಹರಿಃ ॥೫೬॥

ಯಾವಾಗ ಲೋಕದಲ್ಲಿ ಧರ್ಮವು ಕ್ಷಯಿಸುತ್ತದೆಯೋ ಪಾಪವು ಹೆಚ್ಚುತ್ತದೆಯೋ ಆಗ ಸರ್ವಶಕ್ತಿವಂತನಾದ ಭಗವಂತನಾದ ಶ್ರೀಹರಿಯು ಅವತರಿಸುತ್ತಾನೆ.

ಪ್ರಭುವಾದ ಪರಮೇಶ್ವರನು ಸಮಸ್ತಪ್ರಾಣಿಗಳ ಆತ್ಮನೂ ಆಗಿದ್ದು ಅಸಂಗನೂ, ಸಾಕ್ಷೀಭೂತನೂ, ಸರ್ವವ್ಯಾಪಕನೂ, ಮಾಯಾನಿಯಾ ಮಕನೂ ಆಗಿದ್ದಾನೆ. ಆದುದರಿಂದ ಆತನಿಗೆ ಅವತರಿಸುವುದಕ್ಕಾಗಲೀ, ಕರ್ಮಗಳನ್ನು ಮಾಡುವುದಕ್ಕಾಗಲೀ ಮಾಯಾವಿನೋದವನ್ನು ಬಿಟ್ಟು ಬೇರಾವ ಕಾರಣವೂ ಇಲ್ಲ. ಪ್ರಾಣಿಯ ಜನ್ಮ, ಜೀವನ ಮತ್ತು ಮೃತ್ಯುಗಳು ಭಗವಂತನ ಮಾಯಾವಿಲಾಸಗಳೇ ಆಗಿವೆ. ಅವನ ಅನುಗ್ರಹವೆಂಬುದು ಮಾಯೆಯನ್ನು ಬೇರ್ಪಡಿಸಿ ಆತ್ಮಸ್ವರೂಪವನ್ನು ತೋರಿಸಿಕೊಡುವುದೇ ಆಗಿದೆ. ಯಾವಾಗ ಅಸುರರು ರಾಜರ ವೇಷಗಳನ್ನು ಧರಿಸಿ ಅಕ್ಷೌಹಿಣೀ ಸೈನ್ಯಗಳನ್ನು ಸಂಗ್ರಹಿಸಿಕೊಂಡು ಭೂಮಂಡಲವನ್ನು ಆಕ್ರಮಿಸಲು ಪ್ರಾರಂಭಿಸಿದರೋ ಆಗ ಶ್ರೀಹರಿಯು ಭೂಭಾರವನ್ನು ಇಳಿಸುವ ಸಲುವಾಗಿ ಬಲರಾಮನೊಡನೆ ಭೂಮಿಯಲ್ಲಿ ಅವತರಿಸಿದನು. ಭಗವಂತನಾದ

ಮಧುಸೂದನನು ಸಂಕರ್ಷಣನೊಡನೆ ಸೇರಿಕೊಂಡು, ದೇವತೆಗಳಿಂದ ಮನಸ್ಸಿನಿಂದ ಕೂಡ ಸಾಧಿಸಲಾಗದಂತಹ ಪರಮಾದ್ಭುತವಾದ ಕಾರ್ಯ ಗಳನ್ನು ಮಾಡಿದನು. ದುಷ್ಟರನ್ನು ಸಂಹರಿಸಿ ಭೂಭಾರವನ್ನು ಇಳಿಸುವುದರ ಜೊತೆಗೆ ಕಲಿಯುಗದಲ್ಲಿ ಹುಟ್ಟಿದ ಮತ್ತು ಹುಟ್ಟುವ ಭಕ್ತಜನರ ಅನುಗ್ರಹಾರ್ಥವಾಗಿ, ಕೇವಲ ಶ್ರವಣದಿಂದ ಭಕ್ತರ ದುಃಖ-ಶೋಕಗಳನ್ನೂ ಮತ್ತು ಅಜ್ಞಾನವನ್ನೂ ತೊಲಗಿಸುವ ಪುಣ್ಯಕರವಾದ ತನ್ನ ಕೀರ್ತಿಯನ್ನು ಸರ್ವತ್ರ ಹರಡಿದನು.

ಶ್ರೀಕೃಷ್ಣಭಗವಂತನ ಯಶಸ್ಸು ಸಮಸ್ತಲೋಕಗಳನ್ನೂ ಪವಿತ್ರ ಗೊಳಿಸುವ ಶ್ರೇಷ್ಠವಾದ ತೀರ್ಥವಾಗಿದೆ. ಸಂತರ ಕಿವಿದೆರೆಗಳಿಗದು ಸಾಕ್ಷಾತ್ ಅಮೃತಪ್ರಾಯವಾಗಿದೆ. ಒಂದೇ ಒಂದು ಬಾರಿಯಾದರೂ ಅವನ ಕೀರ್ತಿ ಯೆಂಬ ಗೀತಾಮೃತವನ್ನು ಕರ್ಣಾಂಜಲಿಗಳ ಮೂಲಕವಾಗಿ ಪಾನ ಮಾಡಿದರೂ ಆ ಕೀರ್ತಿಗೀತಾಮೃತವು ಕರ್ಮವಾಸನೆಯನ್ನೇ ದೂರ ಗೊಳಿಸಿಬಿಡುತ್ತದೆ. ಪರೀಕ್ಷಿತನೇ! ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ, ಕುರು, ಸೃಂಜಯ, ಪಾಂಡವವೀರರು ಯಾವಾಗಲೂ ಶ್ರೀಕೃಷ್ಣಭಗವಂತನ ಲೀಲಾವಿನೋದಗಳನ್ನು ಪ್ರಶಂಸೆಮಾಡುತ್ತಿರುತ್ತಾರೆ. ಸ್ನೇಹದಿಂದಲೂ, ಕಿರುನಗೆಯಿಂದ ಕೂಡಿದ ಕಟಾಕ್ಷವೀಕ್ಷಣದಿಂದಲೂ, ಉದಾರವಾದ ಮತ್ತು ಮಧುರವಾದ ಮೆಲುನುಡಿಗಳಿಂದಲೂ, ಪರಾಕ್ರಮಪೂರ್ಣವಾದ ಲೀಲೆಗಳಿಂದಲೂ, ಸರ್ವಾಂಗಸುಂದರವಾದ ಸ್ವರೂಪದಿಂದಲೂ ಶ್ರೀಕೃಷ್ಣಪರಮಾತ್ಮನು ಮನುಷ್ಯಲೋಕವನ್ನು ಆನಂದಸಾಗರದಲ್ಲಿ ಮುಳುಗಿಸಿಬಿಟ್ಟನು. ಭಗವಂತನ ಮುಖಕಮಲದ ಶೋಭೆಯು ಅದ್ಭುತವಾಗಿದ್ದಿತು. ಮಕರಾಕೃತಿಯ ಕುಂಡಲಗಳಿಂದ ಕೂಡಿದ್ದ ಭಗವಂತನ ಕಿವಿಗಳು ಕಮನೀಯವಾಗಿದ್ದುವು. ಕುಂಡಲಗಳ ಕಾಂತಿಯಿಂದ ಅವನ ಕಪೋಲಗಳು ಝುಗ-ಝುಗಿಸುತ್ತಿದ್ದುವು. ಇಂತಹ ಸುಂದರವಾದ ಕುಂಡಲಗಳಿಂದಲೂ ಮತ್ತು ಆ ಕುಂಡಲಗಳಿಂದ ಪ್ರಕಾಶಮಾನವಾಗಿ ಕಾಣುತ್ತಿದ್ದ ಕಪೋಲಗಳಿಂದಲೂ ಮತ್ತು ಹುಸಿನಗುವಿನಿಂದಲೂ ಕೂಡಿದ್ದ, ಸರ್ವದಾ ಸಂತೋಷವನ್ನೇ ಉಂಟುಮಾಡುತ್ತಿದ್ದ ಶ್ರೀಕೃಷ್ಣನ ಮುಖಾರ ವಿಂದವನ್ನು ಸ್ತ್ರೀ-ಪುರುಷರಾದಿಯಾಗಿ ಸಮಸ್ತರೂ ಕಣ್ಣುಗಳೆಂಬ ದುಂಬಿ

ಗಳಿಂದ ನಿರಂತರವಾಗಿ ಪಾನಮಾಡುತ್ತಿದ್ದರು. ಅವರಿಗೆ ಎಷ್ಟು ನೋಡಿದರೂ ತೃಪ್ತಿಯೇ ಆಗುತ್ತಿರಲಿಲ್ಲ. ಕಣ್ಣುಗಳನ್ನು ಮುಚ್ಚಿ ತೆರೆಯುವುದಕ್ಕೆ ನಿಯಾಮಕನಾದ ನಿಮಿಯನ್ನೇ ಅವರು ನಿಂದಿಸುತ್ತಿದ್ದರು. ಶ್ರೀಕೃಷ್ಣಚಂದ್ರನ ಸುಂದರವಾದ ಮುಖವನ್ನು ಎವೆಯಿಕ್ಕದೇ ಅನವರತವಾಗಿ ನೋಡುತ್ತಲೇ ಇರಬೇಕೆಂಬುದು ಸ್ತ್ರೀ-ಪುರುಷರ ಬಯಕೆಯಾಗಿದ್ದಿತು.

ಇಂತಹ ಜಗದಾನಂದಕಂದನಾದ ಭಗವಂತನು ಮಥುರಾನಗರದಲ್ಲಿ ವಸುದೇವನ ಮನೆಯಲ್ಲಿ ಅವತರಿಸಿದನು. ಆದರೆ ಅಲ್ಲಿ ಅವನು ವಾಸ ವಾಗಿರಲಿಲ್ಲ. ಗೋಕುಲದಲ್ಲಿದ್ದ ನಂದಗೋಪನ ಮನೆಗೆ ಹೋದನು. ಅಲ್ಲಿ ಗೋಪರನ್ನೂ, ಗೋಪಿಯರನ್ನೂ, ಗೋವುಗಳನ್ನೂ ಸಂತೋಷಗೊಳಿಸುತ್ತಾ ಪೂತನಾ-ಶಕಟ–ಇವರೇ ಮೊದಲಾದ ಶತ್ರುಗಳನ್ನು ಸಂಹರಿಸಿದನು. ಸಾವಿರಾರು ಕನ್ಯೆಯರನ್ನು ಮದುವೆಯಾಗಿ ಅವರಲ್ಲಿ ಅಸಂಖ್ಯಾತರಾದ ಮಕ್ಕಳನ್ನು ಪಡೆದುಕೊಂಡನು. ವೇದಗಳು ತನ್ನ ಆಜ್ಞಾರೂಪವಾಗಿರುವು ದೆಂಬುದನ್ನು ಪ್ರಸಿದ್ಧಿಗೊಳಿಸುತ್ತಾ ಹಲವಾರು ಯಜ್ಞಗಳನ್ನು ಮಾಡಿ ತನ್ನನ್ನೇ ತಾನು ಆರಾಧಿಸಿಕೊಂಡನು.

ಕೌರವರಿಗೂ ಮತ್ತು ಪಾಂಡವರಿಗೂ ಹುಟ್ಟಿದ ಕಲಹವನ್ನೇ ವ್ಯಾಜ ವನ್ನಾಗಿಟ್ಟುಕೊಂಡು ಯುದ್ಧದಲ್ಲಿ ತನ್ನ ದೃಷ್ಟಿಯಿಂದಲೇ ಸಾವಿರಾರು ರಾಜರನ್ನೂ ಅಕ್ಷೌಹಿಣೀಸೈನ್ಯಗಳನ್ನೂ ಧ್ವಂಸಗೊಳಿಸುತ್ತಾ ಭೂಭಾರವನ್ನಿಳಿಸಿ ಯುದ್ಧದಲ್ಲಿ ಅರ್ಜುನನೇ ಜಯಶಾಲಿಯಾದನೆಂದು ಉದ್ಘೋಷಿಸಿದನು. ಬಳಿಕ ಉದ್ಧವನಿಗೆ ಆತ್ಮತತ್ತ್ವವನ್ನು ಉಪದೇಶಿಸಿ ತನ್ನ ಪರಮಧಾಮಕ್ಕೆ ಹೊರಟುಹೋದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ನವಮಸ್ಕಂಧದ ೨೪ನೆಯ ಅಧ್ಯಾಯವು ಮುಗಿಯಿತು.

೯ನೆಯ ಸ್ಕಂಧವು ಮುಗಿಯಿತು.

ಐದನೆಯ ಸಂಪುಟವು ಮುಗಿಯಿತು.

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಪರಿಶಿಷ್ಟ

ಏವಂ ಗಜೇನ್ದ್ರಮುಪವರ್ಣಿತನಿರ್ವಿಶೇಷಂ
ಬ್ರಹ್ಮಾದಯೋ ವಿವಿಧಲಿಙ್ಗಭಿದಾಭಿಮಾನಾಃ ।
ನೈತೇ ಯದೋಪಸಸೃಪುರ್ನಿಖಿಲಾತ್ಮಕತ್ವಾ-
ತ್ತತ್ರಾಖಿಲಾಮರಮಯೋ ಹರಿರಾವಿರಾಸೀತ್ ॥೩೦॥

ಸ್ಕಂಧ ೮ ಅಧ್ಯಾಯ ೩

ಈ ಶ್ಲೋಕಕ್ಕೆ ವೀರರಾಘವೀಯಾನುಸಾರ ಅಭಿಪ್ರಾಯ :

ಉಪವರ್ಣಿತನಿರ್ವಿಶೇಷಂ ಗಜೇಂದ್ರಂ – ಹೇಯಗುಣರಹಿತವಾದ ಭಗವತ್‌ಸ್ವರೂಪವನ್ನು ವರ್ಣನೆಮಾಡಿದ ಅಥವಾ ಬ್ರಹ್ಮಾದಿಗಳಲ್ಲಿ ಯಾರನ್ನೂ ಕುರಿತು ಅಸಾಧಾರಣಶಬ್ದವಿಶೇಷವು ಇಲ್ಲದೆ ಇರುವಂತೆ ವರ್ಣನೆ ಮಾಡಿದ ಗಜರಾಜನ ಬಳಿಗೆ. **ವಿವಿಧಲಿಂಗಭಿದಾಭಿಮಾನಾಃ** ನಾನಾವಿಧವಾದ ನಾಮರೂಪಗಳ ಅಭಿಮಾನಹೊಂದಿದವರಾದ ಅಥವಾ 'ತಮಗೆ ಹಂಸವಾಹನವೇ ಇರಬೇಕು. ಚತುರ್ಮುಖಗಳೇ ಇರಬೇಕು'– ಇತ್ಯಾದಿಯಾದ ತಮ್ಮ-ತಮ್ಮ ಲಿಂಗ, ಚಿಹ್ನೆಗಳ ಅಭಿಮಾನದಿಂದ ಕೂಡಿದ್ದ.

ಹೀಗೆ ಬ್ರಹ್ಮಾದಿಗಳಲ್ಲಿ ಯಾರನ್ನು ಕುರಿತೂ ಅಸಾಧಾರಣಶಬ್ದ ವಿಶೇಷಗಳನ್ನೂ ಹೇಳದೆ ಹೇಯಗುಣರಹಿತವಾದ ಭಗವತ್‌ಸ್ವರೂಪವನ್ನು ಮಾತ್ರ ವರ್ಣನೆ ಮಾಡಿದ ಗಜೇಂದ್ರನ ಬಳಿಗೆ ಬ್ರಹ್ಮನೇ ಮುಂತಾದವರು ಯಾರೂ ಹೋಗಲಿಲ್ಲ. ಏಕೆಂದರೆ : ಅವರಲ್ಲಿ ತಮ್ಮ ಬಗೆ-ಬಗೆಯ ನಾಮ-ರೂಪಗಳ ಅಭಿಮಾನವೂ ತಮ್ಮ-ತಮ್ಮದ್ದೇ ಆದ ಗುರುತುಗಳ ಅಭಿಮಾನವೂ ತುಂಬಿತ್ತು. ಆಗ ಅಖಿಲದೇವಪ್ರಚುರನಾಗಿ ಗಜೇಂದ್ರನು ಸ್ತೋತ್ರದಲ್ಲಿ ಹೇಳಿದ ಎಲ್ಲ ಗುಣಗಳಿಗೂ ಆಶ್ರಯನಾಗಿರುವ ಶ್ರೀಹರಿಯು ಪ್ರಕಟಗೊಂಡನು.

ವಿಜಯಧ್ವಜೀಯ ವ್ಯಾಖ್ಯಾನಕ್ಕೆ ತಕ್ಕಂತೆ ಅಭಿಪ್ರಾಯ :

ಹೀಗೆ ನಿರ್ವಿಶೇಷನಾದ ವಿಲಕ್ಷಣನಾದ ಅಥವಾ ಅವತಾರ ಮತ್ತು ಮೂಲರೂಪಗಳಿಗೆ ಯಾವ ವಿಶೇಷಗಳೂ ಇಲ್ಲದವನಾದ ಶ್ರೀಹರಿಯನ್ನು

ಕುರಿತು ವರ್ಣನೆ ಮಾಡಿದ ಗಜರಾಜನ ಬಳಿಗೆ ಬ್ರಹ್ಮಾದಿದೇವತೆಗಳು ಹೋಗಲಿಲ್ಲ. ಏಕೆಂದರೆ ಅವರು–'ನಾನು ಪದ್ಮಪಾಣಿಯು, ನಾನು ವಜ್ರಪಾಣಿಯು'–ಎಂಬ ಇವೇ ಮೊದಲಾದ ಅಭಿಮಾನದಿಂದ ತುಂಬಿದ್ದರು. ಆಗ ಸಕಲದೇವತಾನಾಥನಾದ ಶ್ರೀಹರಿಯು ಅಲ್ಲಿ ಆವಿರ್ಭವಿಸಿದನು. ದೂರ ದಿಂದ ಅಲ್ಲಿಗೆ ಬರಲಿಲ್ಲ. ಅಲ್ಲಿಯೇ ಇದ್ದವನು ಅಲ್ಲಿ ಪ್ರತ್ಯಕ್ಷಗೊಂಡನು. ಆತನು ಸರ್ವವ್ಯಾಪಕನಾಗಿ ಆ ಸ್ತೋತ್ರಕ್ಕೆ ವಿಷಯನಾಗಿದ್ದುದರಿಂದ ಅಲ್ಲಿ ಆತನು ಪ್ರಕಟಗೊಂಡನು. ಗುರುವಿನ ಆಣತಿಯಿಲ್ಲದೆ ಸತ್ಪುರುಷರು ಹೋಗುವುದಿಲ್ಲವಷ್ಟೇ! ಹಾಗೆಯೇ ಶ್ರೀಹರಿಯು ಸರ್ವಸ್ವಾಮಿಯಾಗಿರು ವುದರಿಂದ ಆತನಿಗಿಂತ ಮೊದಲು ಹೋದರೆ ಪ್ರಯೋಜನವು ಸಿದ್ಧಿಸುವು ದಿಲ್ಲ–ಎಂದು ತಿಳಿದ ದೇವತೆಗಳು ಒಡನೆಯೇ ಅಲ್ಲಿ ಆವಿರ್ಭಾವಗೊಳ್ಳಲಿಲ್ಲ.

'ತತ್ರಾಖಿಲಾಮರಮಯಃ' ಎಂಬ ಪಾಠದ ಬದಲಿಗೆ **'ತತ್ರಾ ಖಿಲಾಮರವರಃ'** ಎಂಬ ಪಾಠವು ವಿಜಯಧ್ವಜೀಯದಲ್ಲಿ ಆದರಿಸಲ್ಪಟ್ಟಿದೆ.

ನ ತೇ ಗಿರಿತ್ರಾಖಿಲಲೋಕಪಾಲ
ವಿರಿಞ್ಚ ವೈಕುಂಠಸುರೇನ್ದ್ರಗಮ್ಯಮ್ ।
ಜ್ಯೋತಿಃ ಪರಂ ಯತ್ರ ರಜಸ್ತಮಶ್ಚ
ಸತ್ತ್ವಂ ನ ಯದ್ಬ್ರಹ್ಮನಿರಸ್ತಭೇದಮ್ ॥೩೧॥

ಸ್ಕಂಧ ೮-ಅಧ್ಯಾಯ ೭

ವೀರರಾಘವೀಯ : ಸಮುದ್ರಮಥನಕಾಲದಲ್ಲಿ ಮೊದಲು ಆವಿರ್ಭ ವಿಸಿದ ಹಾಲಾಹಲದ ದೆಸೆಯಿಂದ ತಮ್ಮನ್ನು ಕಾಪಾಡಬೇಕೆಂದು ಪರಶಿವ ನನ್ನು ಪ್ರಾರ್ಥಿಸುವ ಸಂದರ್ಭದಲ್ಲಿ ದೇವತೆಗಳು ಮಾಡಿದ ಪರಶಿವಸ್ತುತಿ ಯಲ್ಲಿ ಬರುವ ಈ ಶ್ಲೋಕಕ್ಕೆ ವೀರರಾಘವೀಯ ವ್ಯಾಖ್ಯಾನವು ಹೀಗಿದೆ :

"ಎಲೈ ಗಿರೀಶನೇ! ಅಖಿಲಲೋಕಪಾಲಕನೇ! ನಿನ್ನ ಸ್ವಪ್ರಕಾಶವಾದ ಸ್ವರೂಪವನ್ನು ಬ್ರಹ್ಮದೇವರಾಗಲಿ, ಉಪೇಂದ್ರನಾಗಲಿ, ದೇವೇಂದ್ರನಾಗಲಿ ಹೊಂದಲಾರರು. [ಪಕ್ಕದಲ್ಲಿ ಸುರೇಂದ್ರ ಎಂಬ ಶಬ್ದವಿರುವುದರಿಂದ

ಇಲ್ಲಿರುವ 'ವೈಕುಂಠ' ಶಬ್ದಕ್ಕೆ ಉಪೇಂದ್ರ ಎಂಬುದಾಗಿಯೇ ಅರ್ಥ.](ಇದು ಪರಶಿವನನ್ನು ಕುರಿತು ಮಾಡಿರುವ ಅತಿಸ್ತುತಿ ಅಥವಾ ಈ ಪ್ರಕರಣವು ರುದ್ರಶರೀರಕನಾದ ಪರಮಾತ್ಮನ ಸ್ತುತಿಪರವಾಗಿರುವುದರಿಂದ– "ಪರಮಾತ್ಮಸ್ವರೂಪವು ಅಪರಿಚ್ಛಿನ್ನವಾದುದು. ಅದು ಇಷ್ಟೇ ಇದೆ ಎಂದು ತಿಳಿಯಲು ಆ ಪರಮಾತ್ಮನಿಗೂ ಅಶಕ್ಯ. ಅದರಿಂದ ಅದನ್ನು ವೈಕುಂಠನೂ ಹೊಂದಲಾರನು"–ಎಂದು ಅರ್ಥಮಾಡಬೇಕು.) ನಿನ್ನ ಆ ಪರಂಜ್ಯೋತಿಃ ಸ್ವರೂಪವು ರಜಸ್ಸು, ತಮಸ್ಸು, ಸತ್ತ್ವ ಎಂಬ ಪ್ರಾಕೃತಗುಣರಹಿತವಾದುದು. ದೇವ-ಮನುಷ್ಯಾದಿ ಸಕಲಭೇದಗಳಿಂದಲೂ ದೂರವಾಗಿರುವ ಬ್ರಹ್ಮವದು.


ಈ ಶ್ಲೋಕಕ್ಕೆ ವಿಜಯಧ್ವಜೀಯ ವ್ಯಾಖ್ಯಾನ : "ಎಲೈ ಗಿರಿತ್ರನೇ! ನಿನ್ನ ಈ ಪರಂಜ್ಯೋತೀರೂಪವು ಬ್ರಹ್ಮದೇವರೇ ಮುಂತಾದವರಿಗೂ ಹೊಂದಲು ಅಶಕ್ಯವಾದುದು ; ಸರ್ವಾತ್ಮನಾ ಅಶಕ್ಯವಾದುದು."

ಇಲ್ಲಿ '**ವಿರಿಂಚಿವೈಕುಂಠಸುರೇಂದ್ರಗಮ್ಯಂ**' ಎಂಬ ಪಾಠದ ಬದಲು '**ವಿರಿಂಚಿವೈರಿಂಚಸುರೇಂದ್ರಗಮ್ಯಂ**' ಎಂಬ ಪಾಠವು ವಿಜಯಧ್ವಜೀಯದಲ್ಲಿ ಕಂಡುಬರುತ್ತದೆ. 'ನಿನ್ನ ಆ ಪರಂಜ್ಯೋತಿರೂಪವು ಬ್ರಹ್ಮದೇವರು, ಬ್ರಹ್ಮಪುತ್ರರು, ದೇವೇಂದ್ರ ಇವರೇ ಮುಂತಾದವರಿಗೂ ಹೊಂದಲು ಅಶಕ್ಯವಾದುದು ಎಂದು ಅಭಿಪ್ರಾಯವಾಗುತ್ತದೆ. ವೈರಿಂಚ ಎಂಬ ಪದಕ್ಕೆ ವಿರಿಂಚನ ಪುತ್ರನಾದ ರುದ್ರನು–ಎಂದು ವಿಜಯಧ್ವಜೀಯದ ಗೂಢಾರ್ಥಚಾರಿಣೀ–ಎಂಬ ಟಿಪ್ಪಣಿಯಲ್ಲಿದೆ. ಆದುದರಿಂದ '**ವಿರಿಂಚ ವೈಕುಂಠ ಸುರೇಂದ್ರಗಮ್ಯಂ**' ಎಂಬುದೇ ವಿಜಯಧ್ವಜರಿಗೆ ಸಮ್ಮತವಾದ ಪಾಠವೆಂದು ಕಾಣುತ್ತದೆ. ಆದರೆ ಬಹಳ ಹೆಚ್ಚು ಕೋಶಗಳಲ್ಲಿ '**ವಿರಿಂಚ ವೈಕುಂಠ ಸುರೇಂದ್ರ ಗಮ್ಯಂ**' ಎಂಬ ಪಾಠವೇ ಕಂಡು ಬರುತ್ತಿದೆ. ಇದರ ಪ್ರಕಾರ ಶಿವನ ಮಹಿಮೆಯು ವಿಷ್ಣುವಿಗೂ ಅಗಮ್ಯವಾದುದು ಎಂದು ಅರ್ಥ ಬರುತ್ತದೆ. 'ಈ ಅಭಿಪ್ರಾಯವು ಭಾಗವತಕ್ಕೆ ವಿರುದ್ಧವಾದುದು. ಏಕೆಂದರೆ : ಶಿವನಿಗಿಂತಲೂ ವಿಷ್ಣುವಿನ ಮಹಿಮೆಯು ಅತ್ಯಧಿಕವೆಂದು ಇಲ್ಲಿಯೇ ನೂರಾರು ಕಡೆಗಳಲ್ಲಿ ಹೇಳಿದೆ'–ಎಂಬುದು ಅವರ ಅಭಿಪ್ರಾಯ.

"ಕ್ರಿಯನ್ತೇ ಸ್ತುತಯೋಽನ್ಯತ್ರ ತದನ್ತರ್ಯಾಮ್ಯಪೇಕ್ಷಯಾ । ನ ಜೀವೇಷು ಗುಣಃ ಪೂರ್ಣೇ ಯಥಾಯೋಗ್ಯಾ ಹಿ ತದ್ಗತಾಃ ॥" ಎಂದು ಶ್ರೀಮದಾಚಾರ್ಯರು ಹೇಳಿರುವಂತೆ ಇಲ್ಲಿ ರುದ್ರಾಂತರ್ಯಾಮಿಯಾದ ಶ್ರೀಹರಿಯನ್ನು ಸ್ತುತಿಸಿದೆ ಎಂದು ವ್ಯಾಖ್ಯಾನಿಸಬಹುದಲ್ಲಾ! ಎಂದರೆ ಅದೂ ಇಲ್ಲಿ ಸರಿಹೋಗುವುದಿಲ್ಲ. ಏಕೆಂದರೆ : ರುದ್ರಾಂತರ್ಯಾಮಿಯಾದ ವಿಷ್ಣುವಿಗೆ ತನ್ನ ಮಹಿಮೆಯೇ ಹೊಂದಲು ಅಸಾಧ್ಯವಾದುದು–ಎಂದು ಹೇಳಲಾಗುವುದಿಲ್ಲ. ಆದುದರಿಂದ ಎಲ್ಲರೂ ಇದಕ್ಕೆ ಕಷ್ಟಪಟ್ಟು ಅರ್ಥಮಾಡಿದ್ದಾರೆ. ಶ್ರೀಸತ್ಯಧರ್ಮತೀರ್ಥರು 'ವೈಕುಂಠ' ಶಬ್ದಕ್ಕೆ ಮುಕ್ತನು ಎಂಬ ಅರ್ಥಮಾಡಿ ಅದು ಕಾಕಾಕ್ಷಿನ್ಯಾಯದಿಂದ ವಿರಿಂಚಿ ಮತ್ತು ಸುರೇಂದ್ರ ಇವೆರಡಕ್ಕೂ ವಿಶೇಷಣವೆಂದು ತಿಳಿಸುತ್ತಾರೆ. ಲಿಂಗೇರಿ ಆಚಾರ್ಯರು ಇಲ್ಲಿ ವೈಕುಂಠ ಎಂದರೆ ಶುಭ್ರನೆಂಬ ಬ್ರಾಹ್ಮಣನಿಂದ ವಿಕುಂಠಾ ಎಂಬುವಳಲ್ಲಿ ಜನಿಸಿದ ಸುರೇಂದ್ರನು ಎಂದು ಅಭಿಪ್ರಾಯಪಡುತ್ತಾರೆ. ಛಲಾರೀ ಆಚಾರ್ಯರು 'ವೈಕುಂಠ' ಶಬ್ದಕ್ಕೆ ವೈಕುಂಠ ಲೋಕದಲ್ಲಿರುವ–ಎಂಬ ಲಾಕ್ಷಣಿಕವಾದ ಅರ್ಥವನ್ನು ಹೇಳುತ್ತಾರೆ. ವಿರಿಂಚ ವೈಕುಂಠ ಎಂಬುದು ಶಿವಾಂತರ್ಯಾಮಿಯಾಗಿರುವ ಭಗವಂತನನ್ನು ಸಂಬೋಧಿಸುತ್ತದೆ ಯೆಂದು ಶ್ರೀ ಸತ್ಯಾಭಿನವತೀರ್ಥರು ಹೇಳುತ್ತಾರೆ. ಆದುದರಿಂದ ಇಲ್ಲಿ 'ವೈಕುಂಠ' ಎಂಬ ಪದವು ಪ್ರಕ್ಷಿಪ್ತವೆಂದು ಕಾಣಿಸುತ್ತದೆ–ಎಂದು ಬಾಗಲಿಂಗಂಪಲ್ಲಿಯ ಶ್ರೀರಾಘವೇಂದ್ರಸ್ವಾಮಿ ಸೇವಾಸಮಿತಿಯು ಮುದ್ರಿಸಿ ರುವ ವಿಜಯಧ್ವಜೀಯಸಹಿತ ಶ್ರೀಮದ್ಭಾಗವತ ಸಂಸ್ಕರಣದ ಪಾದ ಟಿಪ್ಪಣಿಯಲ್ಲಿ ಉಲ್ಲೇಖಿಸಿದೆ.

1, 2ನೇ ಶ್ಲೋಕಗಳಿಗೆ ಮೂಲಭಾಗವತದ ಕನ್ನಡ ಅನುವಾದವು ಶ್ರೀಧರಾಚಾರ್ಯರ ವ್ಯಾಖ್ಯಾನಕ್ಕೆ ಅನುಗುಣವಾಗಿ ಕೊಡಲ್ಪಟ್ಟಿದೆ.

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.